KARNATAKA STATE ARCHIVES

KARNATAKA STATE ARCHIVES

Roll No. 140

Roll No. 140

ARS 34 APP 82

NAVAYUGA KANNADA WEEKLY

From:20:9:45 Contd from Roll No.139

ARS 34 APP 82

NAVAYUGA KANNADA WEEKLY

From: 20:9:45 Contd from Roll No. 139

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ರಾಷ್ಟ್ರಸಭೆಯ ಇತಿಹಾಸ ...	2	8	0
2	ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3	ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4	ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5.	ಭಾರತ ಗೀತಾಂಜಲಿ	0	2	0
6	ಪುರಂದರದಾಸರ ಕೀರ್ತನೆ ಭಾಗ 4ರ ಸ್ಪೆಷ್ ಬೈಂಡ್	1	4	0
7	ಶಾಂತಿಪುರಾಣ	3	0	0
8.	ಸಾಮುದ್ರಿಕ ಶಾಸ್ತ್ರ	0	8	0
9.	ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ಕೃಷ್ಣ ಸಂಧಾನ	....	1	0	0
ತುಳುವಾಲ ಬಲಿಯೇಂದ್ರ ..	....	0	4	0
ಅಳಿಯ ಸಂತಾನದ ಕಟ್ಟುದ ಗುಟ್ಟು	....	0	8	0
ಕಾನಿಗೆ	....	0	8	0
ತುಳು ವ್ಯಾಕರಣ	....	1	0	0
ಪುದ್‌ಮಾಳತ್ತ್ ಮದ್‌ಮಾಯೆ	...	0	4	0
ಜನಮರ್ಲ್ .	...	0	12	0
ತುಳು ಪದ್ಯಮಾಲಿಕೆ ...	.. .	0	2	0
ಬಂಗಾರ್ದಂಗಿದ ಕತೆ .	...	9	2	0
ಮಿತ್ಯ ನಾರಾಯಣ ಕತೆ	....	1	0	0
ನತೀ ಕಮಲೆ ...	...	0	12	0
ಬೊಬ್ಬರ್ಯೆ .	...	0	4	0
ತೊಡಕೆನಾರ್ ...	....	0	4	0
ಮುಂಡತ್ತಾಯೆ	..	0	4	0
ಕನ್ನಡಕೊ ...	....	0	1	0
ವಿಶ್ವರೂಪದರ್ಶನೊ	....	0	2	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: 2—8—0. ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.
ಬೆಲೆ: 3—0—0
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಶೆಣೈ ಬ್ರದರ್ಸ್, ,,
ಕೆ. ಭೋಜರಾವ್ & ಕೊ ,,
ಸಾವಂಜೆ ಗುರುರಾವ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ ಭವನ, ಉಡುಪಿ
ಪಿ. ಎ. ಪೈ ಬ್ರದರ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರಪತ್ರಿಕೆ

ವಾರ್ಷಿಕ ಚಂದಾ ರೂ 4—8—0

ಬಿಡಿ ಪ್ರತಿಗೆ ರೂ 0—1—6



ವರ್ಷ 25 ವಾರ 8] ಪ್ರತಿ ಗುರುವಾರ ಹೊರಡುವ ಗಾಣ್ಮೀಯ ವಾರಪತ್ರಿಕೆ. [Vol 25 No 3

Founder SRI A. B. SHETTY.

ಉಡುಪಿ • 20—9—1945 • ಮಂಗಳೂರು.

ವಾರ್ಷಿಕ ಚಂದಾ ರೂ 4—8—0, ಬಿಡಿ ಸಂಚಿಕೆ ರೂ.0—1—6

ಅಮೃತಾಂಜನ

ತಲೆನೋವಿಗೆ, ತಿರಿ, ವೇದನೆ, ಉಳುಕು ಉತ್ತಿಗೆ, ಭುದ, ಹಲ್ಲು ವೇದನೆಗಳಿಗೂ ಎದನೋವು, ಭಾಯಗಳು ಬಾತು ಕೊಳ್ಳುವದು, ಬೆಳು

ನಿಷ ಮುಂತಾದ ಬೇನ ಶಮನವಾಗ ನೊಡಿನೆ ನೊವಲಾರಂ ಎಲ್ಲಾ ರೋಗಗಳಗೂಸಿದ್ದೆ

REGD

ಶದ್ಧ,ಹುಲಕ್ಕಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,

Head Office - **UDIPI**, (S India)

UDIPI,

4th September, 1945.

New Appointments.

Applications from candidates of S S L C standard (only boys) are invited for clerical posts in the Company

Applicants should possess a good hand a good command of English a good moral character and should be quick at figures

All applications must be accompanied by two testimonials one from the Headmaster of their School and another from any local gentleman

T R A Pai,
Managing Director

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ, ಅದು 'ಜುಪಿಟರ್' (ದೇವತೆಗಳ ರಾಜ)ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ ಏಜಂಟರು ಮತ್ತು ಏಗರ್ನೈಝುರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ

ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910

ದಕ್ಷಿಣ ಭಾರತದ ಚೀಫ್ ಏಜಂಟರು

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಪಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ

1944ರಲ್ಲಿ, ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.

Central Office—UDIPI S. K

Mangalore ○ Calicut ○ Bangalore ○ Madras ○ Madura ○ Trivendrum ○ Bombay

ಪ್ರತಿಯೊಂದು ವಿಧದ ಬೇಂಕಿಂಗ್ ಸೇವೆಯೊಪ್ಪಿಸಲ್ಪಡುತ್ತದೆ.

ಶಾಖೆಗಳು:

ಕ್ಯಿಲನ್	ಮಂಗಳೂರು	ಚಿಕ್ಕಮಗಳೂರು
ಆಲ್ಲಪ್ಪಿ	ಬೆಳಗಾಂವಿ	ಬೆಂಗಳೂರು
ಕೊಚ್ಚಿ	ಧಾರವಾಡ	ಇರೋಡ್
ಕಲ್ಲಿಕೋಟಿ	ಹುಬ್ಬಳ್ಳಿ	ಮಧುರೆ
ಕಣ್ಣಾನೂರು	ದಾವಣಗೆರೆ	ಸೇಲಂ

ಕೊಯಮುತ್ತೂರು ಇತ್ಯಾದಿ.

ನಿಮ್ಮ ಸದಾಶ್ರಯವನ್ನು ಕೋರುವೆವು.
ನಿಮ್ಮ ಸದ್ಭಾವನೆಯನ್ನು ನಿರೀಕ್ಷಿಸುವೆವು.

ಮೂಲಧನ ರೂಪ್ಯಾ 26 ಲಕ್ಷ
ಕ್ಷೇಮನಿಧಿ ರೂಪ್ಯಾ 10 ಲಕ್ಷ

ಕೆನರಾ ಬೇಂಕ್ ಲಿಮಿಟೆಡ್.
(ESTD 1906 ಸ್ಥಾಪನೆ)

CANARA BANK LIMITED

(Incorporated in British India liability of Members Limited)

The Vijaya Bank Limited.

ANNOUNCEMENT

We have much pleasure to announce that the New shares issued by us have been easily oversubscribed We regret, however that we could not allot to the applicants all the shares applied for by them, though we have tried our best to satisfy them to the utmost extent possible

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಮಾರಾಟವಾಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ ತುಂಬಾ ಅರ್ಜಿಗಳು ಬಂದ ಕಾರಣ ಅರ್ಜಿ ಹಾಕಿದವರೆಲ್ಲ ಪಾಲುಗಳನ್ನು ಕೊಡಲು ಆಸ್ಥಾನ ಮಾಡಿದೆವು, ಆದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ

Head Office
MANGALORE

B MANJAYA HEGDE.
Chairman of the Board of Directors

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ ಇದಕ್ಕಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನಿಯುವರೆಂದು ನಿರೀಕ್ಷಿಸೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್

ಅಮೇರಿಕದ ಭಾಷಣೋದ್ಯಮ.

(ಡೇವಿಡ್ ಜೆ. ಜೋನ್ಸ್‌ನ್ ಲೇಖನದಿಂದ)

ಯುರೋಪು ಯುದ್ಧವು ಅಂತ್ಯವಾದೊಡನೆಯೇ ಅಮೇರಿಕವು ತನ್ನ ಪ್ರದ್ಧತಿಯ 'ಭಾಷಣ ಪರ್ವ'ಕ್ಕೆ ಸಿದ್ಧತೆ ಮಾಡಹತ್ತಿದೆ. ಈ ಬಾರಿಯ ಭಾಷಣೋತ್ಸವವು ಒಂದು ಹೊಸ ದಾಖಲೆಯೇ ಆಗುವ ದೆಂದು ನಂಬಲಾಗಿದೆ. ಹಲವು ವಿಖ್ಯಾತ ಬ್ರಿಟಿಷರು ಭಾಷಣಗಾರರಾಗಿ ಬರಲಿದ್ದಾರೆ. ಪ್ರತಿಯೊಂದು ಭಾಷಣ ಪರ್ಯಟನೆಯಲ್ಲಿ ಅಮೇರಿಕವು ಸುಮಾರು ಒಂದು ಮಿಲಿಯ ಪೌಂಡುಗಳನ್ನು ಉಪನ್ಯಾಸಕರಿಗೆ ರುಸುಮ್ ಆಗಿ ಸಲಾಯಿಸುತ್ತಿದೆ. ಸುಮಾರು ಮೂರು ಮಿಲಿಯ ಅಮೇರಿಕನರಿಂದ-ಸುದ್ದಿ, ಭಾವ ಪ್ರಚೋದಕ, ಆಧುನಿಕ ಸಂಸ್ಕೃತಿಯ ಸಂಬಂಧದ ವಾಗ್ಝರಿಯಲ್ಲಿ ತೇಲ ಡಲಿಚ್ಛಿಸುವವರಿಂದ—ಈ ಒಂದು ಮಿಲಿಯ ಪೌಂಡು ಸಂದಾಯವಾಗುತ್ತಿದೆ.

ಅಮೇರಿಕನ್ ನೈಪಿಷ್ಯ

ಅಮೇರಿಕನ್ ಸಾಂಘಿಕ ವ್ಯವಹಾರಗಳ ಸೈಕಿ ಅತ್ಯಂತ ವಿಶಿಷ್ಟತೆಯುಳ್ಳದ್ದೆಂದರೆ ಉಪನ್ಯಾಸ ಸಂಚದ ಬೇರಾವ ರಾಷ್ಟ್ರದಲ್ಲೂ ಭಾಷಣವು ಇಷ್ಟೊಂದು ಸುವ್ಯವಸ್ಥೆಯಿಂದ, ಇಷ್ಟು ದೊಡ್ಡ ಪರಿಮಾಣದಲ್ಲಿ, ಒಂದು ದೊಡ್ಡ ವ್ಯಾಪಾರವೇ ಆಗಿ ನಡೆಯುತ್ತಿಲ್ಲ ವಯಂಲೆಸ್ ಬಂದು ಈ ಭಾಷಣೋದ್ಯೋಗವನ್ನು ನಿರ್ನಾಮಮಾಡುವದೆಂದು ಕೆಲವು ಶಿಕ್ಷಾಶಾಸ್ತ್ರವಾದಿಗಳು ಭವಿಷ್ಯವಾಡಿದ್ದರು ಆದರೆ ಈ ರಂಜನೆ ಬೆರೆತ ವಿದ್ಯಾಭ್ಯಾಸ ಕ್ರಮವು ಕಾಲಕಾಲಕ್ಕೂ ಬೆಳೆಯುತ್ತಾ ಬಂದಿದೆ; ಯುದ್ಧ ಕಾಲದ ಕೆಲವು ಅನಾನುಕೂಲತೆಗಳಿಂದಾಗಿ ಅದು ತಾತ್ಕಾಲಿಕವಾಗಿ ಹಿಮ್ಮೆಟ್ಟಿರಬಹುದು, ಆದ್ದೆ ಆಕಾಶವಾಣಿಯ ಉಪನ್ಯಾಸ ಕಲೆಗೆ ಕೂಡಲಿಯಿಡಲಿಲ್ಲ ಇದಕ್ಕೆ ಕಾರಣವಿದೆ. ಹೆಚ್ಚಿನ ಸಂದರ್ಭಗಳಲ್ಲಿ ಒಬ್ಬ ಭಾಷಣಗಾರ ಅಥವಾ ಭಾಷಣಗಾತಿಯ ಮಾತನ್ನು ಜನ ಸಮೂಹವು ರೇಡಿಯೋದಲ್ಲಿ ಕೇಳಿದ್ದಿರಬಹುದಾದರೂ, ಆ ವ್ಯಕ್ತಿಯನ್ನಾದು ನೋಡಿರಲಿಲ್ಲವಾದ್ದರಿಂದ ಆಯಾ ಧನರ ಪ್ರತ್ಯಕ್ಷ ದರ್ಶನಕ್ಕಾಗಿ ಹಣ ತೆರಲು ಅವರು ಸಿದ್ಧರೇ. ನಿಜರೂಪದರ್ಶನದಿಂದ ಸಹಕಾರಿಗೆ ಮತ್ತೊಂದು ದೊಡ್ಡ ಲಾಭವು ಇದೆ-ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಬಹುದು. 'ಟೆಲಿವಿಶನ್'ನೊಡನೆ ಭಾಷಣೋದ್ಯೋಗವು ಸ್ಪರ್ಧಿಸಿ ಬಾಳುತ್ತಿರುವದಕ್ಕೆ ಇದೂ ಒಂದು ಕಾರಣ. ಬೇರೆ ಪ್ರಯೋಜನಗಳೂ ಇವೆ. ಮಿತ್ರರು ಮತ್ತು ಪರಿಚಿತರನ್ನು ಕೂಡಿಕೊಂಡು ಬಂದು ಭಾಷಣ ಕೇಳಿ ಹೋಗಬಹುದು;



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಖಾಯಂಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಆ ಮೇಲಿನದನ್ನು ತನ್ನೊಳಗೆ ಚರ್ಚಿಸಿ ಕೊಂಡು ಪರ್ಯಾಲೋಚಿಸಬಹುದು

ಸದುದ್ಯೋಗ

ಭಾಷಣದ ರುಸುಮಾಗಿ ಅಮೇರಿಕವು ಸುಮಾರು 1000000ಪೌಂಡನ್ನು ಸಲಾಯಿಸುತ್ತಿದೆಯಷ್ಟೆ; ಅದರಲ್ಲಿ ಅರಿವಾಸಿಯಷ್ಟು ಮಹಿಳಾ ಕ್ಲಬ್ಬುಗಳಿಂದಲೂ ಮಹಿ

ಈಗ ಅಮೆರಿಕಾನರ ದೃಷ್ಟಿ ನೆಹರುಗಳ ಮೇಲೆ ಬಿದ್ದಿದೆ ಸಮಯ ದೊರೆತೊಡನೆ ಸಂಪ್ರತಿಭೀ ಭಾಷಣ ದಿಗ್ವಿಜಯಕ್ಕೆ ತೊರಡಲಿದ್ದಾರೆ

ಳಾ ಸಂಘಸಂಸ್ಥೆಗಳಿಂದಲೂ ಬರುತ್ತಿದೆ ಉಪನ್ಯಾಸೋದ್ಯಮದ ಬೆಂಗೋಲೆಂದರೆ ಅವರೇ. ಅವರು ಉಪನ್ಯಾಸ ವೆಚ್ಚಕ್ಕಾಗಿ ಕಂತೆಮ್ಮ ಸಂಸ್ಥೆಗಳ ಆದಾಯದೊಂದು ಭಾಗವನ್ನು ಕಾದಿಡುತ್ತಾರೆ. ಆದರೆ ಉಪನ್ಯಾಸಕನಿಗೆ ವಿಸ್ತೃತ ರಂಗವನ್ನೊದಗಿಸಿಕೊಡುವದು ವ್ಯಾಪಾರೋದ್ಯಮಿ ಪುರುಷರ ಕ್ಲಬ್ಬುಗಳೇ. 20ಸಾವಿರ ಮತ್ತು ಮಿಕ್ಕಿ ಜನಸಂಖ್ಯೆ ಇರುವ ಪ್ರತಿಯೊಂದು ನಗರದಲ್ಲಿಯೂ ಇಂತಹ ಒಂದೊಂದು ಕ್ಲಬ್ಬು ಇದೆ. ಭಾಷಣದ ಏಜೆನ್ಸಿಗಳು 'ಪ್ರಸಿದ್ಧ ಚರ್ಚಾಕೂಟ' 'ಔತಣ ಕ್ಲಬ್ಬು' 'ಸಾಂಸ್ಕೃತಿಕ ಕಂಡ'ಗಳನ್ನು ಇದಕ್ಕಾಗಿ ವಿಶೇಷವಿಕೊಳ್ಳಲು ಅವಿಶ್ರಾಂತವಾಗಿ ದುಡಿಯುತ್ತಿವೆ. ಭಾಷಣಗಾರರನ್ನು ಆರಿಸಿಕೊಡುವದು, ಅವರನ್ನು ಕಂಟ್ರಾಕ್ಟಿಗೆ ಹಿಡಿಯುವದು, ಮತ್ತವರ ಆಮದು ರಫ್ತುಗಳ ವ್ಯವಸ್ಥೆ ನೋಡುವದು, ಏಜನ್ಸಿಗಳ ಹೊಣೆಗಾರಿಕೆ. ಪ್ರಚಾರ ಮೌಲ್ಯದ ಅಗಾಧ ಜ್ಞಾನವಿರಬೇಕಾದ ಈ ಉದ್ಯೋಗವನ್ನು ಹಲವು ವರುಷಗಳ ಅನುಭವವಿರುವ ಏಜನ್ಸಿಗಳು ಮಾಡುತ್ತವೆ. ಅಮೇರಿಕದ ಬೇರೆ ಬೇರೆ ಕಡೆಯ ಜನದ ವಿವಿಧ ಮನೋವೃತ್ತಿಯ 'ಪರಿಚಯವು ಈ ಏಜನ್ಸಿಗಳಿಗಿಂಬೇಕ; ರೈಲು, ರಸ್ತೆ, ಅಥವಾ ಆಕಾಶ ಮೂಲಕ ಪ್ರಯಾಣ ವ್ಯವಸ್ಥೆ ಮಾಡುವ ವ್ಯವಹಾರಜ್ಞತೆಯೂ ಬೇಕು.

ಆಯವ್ಯಯ

ಏಜೆನ್ಸಿಯು ತನ್ನೀ ವಿಶೇಷ ಕಾರ್ಯಗಳಿಗಾಗಿ 'ಕಮಿಶನ್' ಪಡೆಯುತ್ತದೆ; ಅದೂ ವಿಶೇಷವಾಗಿಯೇ. ಈ ಕಮಿಶನ್, ಜಾಹೀರಾತು ಮೆತ್ತು ಪ್ರಯಾಣ ವೆಚ್ಚ ಹೋಗಲಾಗಿ ಒಬ್ಬ ಭಾಷಣಗಾರನಿಗೆ ಅವನ ಉತ್ಪತ್ತಿಯ ಸೇಕಡಾ 45ರಷ್ಟು ಉಳಿಯಬಹುದು. ಅವನು ತನ್ನ ಊಟ, ಉಳಕೊಂಡ ವೆಚ್ಚವನ್ನು ಈ ಉಳಿದ ಆಂಶದಿಂದಲೇ ಸಲಾಯಿಸಬೇಕು. ಆದರೆ ಅವನಿಗೆ ದೊರೆಯುವ ವಿಶೇಷಾತಿಥ್ಯಗಳಿಂದಾಗಿ ಈ ಭಾಗದಲ್ಲಿ ವೆಚ್ಚ ಬೀಳುವದು ಕಡಿಮೆ. ಉಪನ್ಯಾಸಕನಾಗಿದ್ದರೆ ಸಫಿಕರನ್ನಾಕರ್ಷಿಸುವಂತೆ ಅವಳು ತೊಟ್ಟುಕೊಳ್ಳಬೇಕಾದವಿಶೇಷ ಉಡುಗೆಯ ಬಿಲ್ಲೂ ಆವಳ ಚೇಬಿನಿಂದಲೇ ಸಂದಾಯವಾಗಬೇಕು ಹೀಗಾಗಿ ಒಬ್ಬ ಉಪನ್ಯಾಸೋದ್ಯಮಿಯು ಜನರನ್ನಿರೀಕ್ಷೆಯಿರುವಷ್ಟುಉಳಿಸಲಾರ. ಸರ್ವ ಸಾಧಾರಣವಾಗಿ ಒಬ್ಬ ಭಾಷಣೋದ್ಯಮಿಗೆ ಒಂದು ಭಾಷಣಕ್ಕೆ30ರಿಂದ 50ಪೌಂಡು'ಗಳ ವರೆಗೆ ತಲಬಿದೆ.ಅತ ಭಾಷಣ ಋತುವಿನಲ್ಲಿ ಜುಮ್ಲಾ 2000 ಪೌಂಡು ಸಂಪಾದಿಸಬಹುದು. ಆದರೆ ಕಮಿಶನ್ ಮತ್ತು ವೆಚ್ಚಗಳೆಲ್ಲಾ ಕಳೆದು ಅವನ ಪಾಲಿಗುಳಿಯುವದೆಂದರೆ 800 ಪೌಂಡು ಮಾತ್ರ ಒಂದು ಹೊಟೆಲಿನಿಂದ ಇನ್ನೊಂದು ಹೊಟೆಲಿಗೆ ಬಿಡಾರ ಕೀಳುತ್ತಾ ಹಲವು ಬಾರಿ ರೈಲು ಪ್ರಯಾಣವನುಭವಿಸುವ ಆತನ ಪ್ರಯಾಸವನ್ನು ಗಣಿಸಿದರೆ ಅಮೇರಿಕದಲ್ಲಿ ಈ ಉಳಕಾಯವು ಒಂದು ದೊಡ್ಡ ಬಹುಮಾನವೇನೂ ಅಲ್ಲ.

ವಿಶೇಷೋಪನ್ಯಾಸಕರು

ಆದರೆ 'ಪ್ರಸಿದ್ಧ ಉಪನ್ಯಾಸಕ'ರ ಪರಿಸ್ಥಿತಿ ಬೇರೆ. ಅವರಿಗೆ ವಿಶೇಷ ಸಂಪಾದನೆಯೆದೆ ಈ ಅಧಿಕ ತಲಬು ಅತ ಅಥವಾ ಅಕೆ ಏನು ಹೇಳುತ್ತಾರೆಂಬುದನ್ನು ಆಧರಿಸಿರುವದಕ್ಕಿಂತ ಹೆಚ್ಚಾಗಿ ಅವರ ಹೆಸರು ಅಥವಾ ವ್ಯಕ್ತಿತ್ವವನ್ನು ಅವಲಂಬಿಸಿದೆ. ಇಂಧವರಿಗೆ ಒಂದು ಉಪನ್ಯಾಸಕ್ಕೆ 60ರಿಂದ 600 ಪೌಂಡುಗಳ ವರೆಗೂ ದೊರೆಯುತ್ತದೆ. 600 ಪೌಂಡಿನ ತಲಬು ಕೆಲವು ವರುಷಗಳ ಹಿಂದಲು ಎಚ್. ಜಿ. ವೆಲ್ಸರಿಗೆ ಮಾತ್ರ ದೊರೆತಿತ್ತಂತೆ ಮಿ. ಚರ್ಚಿಲ್ಲರು ಅಮೆರಿಕದಲ್ಲಿ ಕೈಗೊಂಡ ಭಾಷಣ ಸಂಚಾರದಲ್ಲಿ ಅವರ ಕೆಲವು ಉಪನ್ಯಾಸಗಳಲ್ಲಿ ಪ್ರತಿಯೊಂದಕ್ಕೂ 500 ಪೌಂಡುಗಳಂತೆ ದೊರೆತಿದ್ದಿತು. ಒಬ್ಬ ವಿದೇಶೀ ಅಥವಾ ಯುದ್ಧ ಬಾಧ್ಯೇದಾರನೆಂದಿಟ್ಟುಕೊಳ್ಳಿ ಅದರಲ್ಲೂ ಆತ ಜನಪ್ರೀತ ಗ್ರಂಥಗಳನ್ನು ಬರೆದವನಾಗಿದ್ದರೆ ಭಾಷಣವೊಂದಕ್ಕೆ 100 ಪೌಂಡುಗಳಂತೆ ಪಡೆಯಬಹುದು. ಮಿ. ವಿನ್ಸೆಂಟ್ ಶೀಯನ್ ಇತ್ತೀಚೆಗಿನ ಒಂದು ಭಾಷಣ ಪರ್ಯಟನೆಯಲ್ಲಿ 75ಭಾಷಣಗಳಿಗೆ 10000 ಪೌಂಡುಗಳ ಕಂಟ್ರಾಕ್ಟಿಗೊಪ್ಪಿದ್ದ, ಅದರಲ್ಲಿ ಅರಿವಾಸಿಗೂ ಮಿಕ್ಕಿ ಏಜೆನ್ಸಿ ಮತ್ತು ಇತರ ವೆಚ್ಚಗಳಿಗಾಗಿ ಹೋಗಿದ್ದಿತು.

ಆಧುನಿಕ ಅಭಿರುಚಿ

ಎಪ್ಪತ್ತೈದಭತ್ತು ವರುಷಗಳ ಹಿಂದಲಿನ ಚಾರ್ಲ್ಸ್ ಡಿಕ್ಕೆನ್ಸನನ್ನು ಹಿಂದಿಕ್ಕಲು ಯಾವ ಆಧುನಿಕ ಭಾಷಣಗಾರನಿಂದಲೂ ಆಗಿಲ್ಲವೆಂಬುದೊಂದು ವಿಲಕ್ಷಣವೇ ಸರಿ. ಅವನ ಭಾಷಣ ಸಂಚಾರದ ತಲಬು 50 ಸಾವಿರ ಪೌಂಡುಗಳನ್ನು ಮಿಕ್ಕಿದ್ದಿತು. ಮಾತ್ರವಲ್ಲ, ಅಂತಹ ಮತ್ತೊಂದು ದಿಗ್ವಿಜಯದ ಪೂರ್ವ ವ್ಯವಸ್ಥೆಯೂ ಆಗಲೇ ನಡೆಯುತು ನವಯುಗದಲ್ಲಿ ಒಬ್ಬನು

[ಉಳಿದ ಸುದ್ದಿ ಸೋದರಿ.]

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾಕೀಯಗಳ ತಯಾರಿಕೆಗಳು-ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಜಪಾನೀ ಪ್ರಮುಖರ 'ಹರಿಕಿರಿ'

ಟೋಜೋನ ಆತ್ಮಹತ್ಯಾ ಪ್ರಯತ್ನ

ಜಪಾನನ್ನು ಯುದ್ಧಕ್ಕಿಳಿಸಿದ್ದಲ್ಲದೆ ಪರ್ಲ್ ಹಾರ್ಬರ್ ಘಾತಕ್ಕೆ ಕಾರಣನಾಗಿದ್ದ ಜನರಲ್ ಟೋಜೋ ಮೈದಳೆದ ಕೈಗೆ ಸಿಕ್ಕುವ ಬದಲು ಆತ್ಮಹತ್ಯೆ ಮಾಡಿಕೊಳ್ಳುವದೇ ವಾಸಿಯೆಂದು ಎದೆಗೆ ಗುಂಡಿಟ್ಟುಕೊಂಡರೂ ಸಾಯದೆ ಉಳಿದಿದ್ದಾನೆ; ಈಗ ಅಮೇರಿಕಾನರ ಕೈಗೆ ಸಿಕ್ಕಿ ಚಿಕಿತ್ಸೆ ಪಡೆಯುತ್ತಿದ್ದಾನೆ ಆ ಘಟನೆ ಸ್ವಾರಸ್ಯದ್ದಾದೆ ಜಾಪಾನರ ಕೈಯಿಂದ ಮಿತ್ರರು ಅಸಹಕಿಸಿಕೊಂಡ ಅಧಿಕಾರಗಳಲ್ಲೆ ಜಪಾನರ ಜೀವತೆಗೆಯುವ ಕೃತ್ಯವೂ ಸೇರಿದೆ ಎಂಬಂತೆ ಕಾಣುತ್ತಿದೆ. ಇಲ್ಲವಾದರೆ ತಾವು ಮರಣದಂಡನೆ ವಿಧಿಸುವ ಟೋಜೋ ತಾವಾಗಿ ಸಾಯದಂತೆ ತಡೆಯೇಕೆ?

ಅಪರಾಧಿ ಯಾರು?

ಮಿತ್ರರ ಮೂಲ ಸೇನಾನಿ ಜನರಲ್ ಮೇಕಥರ್‌ರಿಂದ ಮಾಜೀ ಜಪಾನೀ ಪ್ರಧಾನಿ ಹಿಡಿಕೆ ಟೋಜೋನನ್ನು ದಸ್ತಗಿರಿ ಮಾಡುವ ಆಜ್ಞೆ ಹೊರಟಿದ್ದಿತು ಟೋಜೋ ಇತ್ತೀಚೆಗೆ ಜಪಾನೀ ರಾಜಕೀಯ ರಂಗದಿಂದ ಅದೃಶ್ಯನಾಗಿದ್ದ. ಆತ ಜೀವದಲ್ಲಿದ್ದಾನೆಂದೂ ಅಮೇರಿಕಾನರು ತನ್ನ ಮೇಲೆ ಹೊರಿಸಬಹುದಾದ ಆರೋಪಗಳನ್ನು ಪ್ರತಿಭಟಿಸಿ ಮಾದಿಸುವ ಸಿದ್ಧತೆಮಾಡುತ್ತಿದ್ದಾನೆಂದೂ ವಾರ್ತೆಬಂದ ಹತ್ತು ದಿನಗಳ ನಂತರ ಆತನನ್ನು ಕೈದುಮಾಡುವ ಆಜ್ಞೆ ಹೊರಟಿದ್ದಿತು. ಆದು ವರೆಗೂ ಟೋಕಿಯೋದ ಹೊರವಲಯದ ತನ್ನ ತನ್ನ ಕೃಷಿವಲಯದಲ್ಲಿ, ಒಂದು ಕಾಲದ ಅಸ್ಯಾದ ಕೇಸರಿ ಟೋಜೋ, ಎಂತ ಜೀವನ ನಡಿಸಿ ತಿದ್ದ ತನ್ನ ಭವಿಷ್ಯದ ಕುರಿತು ಕೇಳ್ವಲ್ಲಡುವ ಪ್ರಶ್ನೆಗಳಿಗೆ ಉತ್ತರಕೊಡಲೊಪ್ಪದೆ ನಗೆಚಾಟಿಕೆಯಲ್ಲೇ ಎಲ್ಲವನ್ನೂ ತೇಲಿಸಿಬಿಡುತಿದ್ದನಾದರೂ ಏನೋ ಒಂದು ಗಂಭೀರ ಯೋಚನೆಯ ಚಿನ್ಹೆ ಆವನ ಮುಖದಲ್ಲಿ ಕಂಡು ಬರುತಿತ್ತು. ಯುದ್ಧ ಪ್ರಾರಂಭಿಸಿದ ಜವಾಬ್ದಾರಿ ಯಾರದೆಂಬ ಪ್ರಶ್ನೆ ಒಂದಂಗ ಆತನಂದಿದ್ದ "ನೀವಿಗ ಗೆದ್ದಿದ್ದೀರಿ. ಆದ್ದರಿಂದ ಆ ಹೊಣೆಗಾರಿಕೆಯನ್ನು ಮನಬಂದವರ ತಲೆಯಮೇಲೆ ಹೇರಿ ಒಲ್ಲಿರಿ. ಆದರೆ ಇಂದಿನಿಂದ 500 ಆಥವಾ 1000 ವರುಷಗಳ ನಂತರದ ಚರಿತ್ರಕಾರರು ಬೇರೆ ತೀರ್ಮಾನವನ್ನೇ ಕೊಡಬಹುದು"

ಆವನ ದೃಢ ಬುದ್ಧಿ

ಜಪಾನ್ ಶರಣಾದ ಮೇಲೆ ಜನವರಿಗೂ ಜನರಲ್ ಟೋಜೊನ ಮೇಲೆ ಜಿಗುಪ್ಸೆ ಮೂಡಿದ್ದಿತು ರಾಷ್ಟ್ರವನ್ನು ಯುದ್ಧಕ್ಕೆಳಿಸಿದ ಹೊಣೆಗಾರನು, ತನ್ನ ಕೃತ್ಯದ ಪ್ರತಿಫಲವಾಗಿ ಆದಕ್ಕಾಗುವ ಅಪಮಾನವನ್ನು ಕಂಡೂ ಜೀವದಿಂದಿರುವದು ಜಪಾನೀ ಧರ್ಮದಂತೆ ಮಹಾ ಹೇಡಿತನ ಆದರೂ ಟೋಜೋ ನಿಶ್ಚಲ ಮನಸ್ಕನಾಗಿದ್ದ. 'ಆತ ಕೋರ್ಟಿಗೆ ಹಾಜರಾಗಿ ಅಧ್ಯಕ್ಷೆರುಸವೆಲ್ಟರೇ ಯುದ್ಧಪರಾಧಿಯೆಂದು ರುಜುಪಡಿಸಿ ಕೊನೆಗೆ 'ಹರಿಕಿರಿ' ಮಾಡಿಕೊಳ್ಳಲಿದ್ದಾನೆ ಎಂದು ಜಪಾನೀ ಅಧಿಕಾರಿಯೊಬ್ಬನಂದಿದ್ದ. ಆ ಕುರಿತು ಪ್ರಶ್ನೆ ಕೇಳಿದಾಗ ಟೋಜೋ ತೀಕ್ಷ್ಣಭಾವದಿಂದ ಉತ್ತರಕೊಡಲು ನಿರಾಕರಿಸಿಬಿಟ್ಟ "ನಿಜವಾದ ಯೋಧರು ರಣರಂಗದಲ್ಲಿ ಹೋರಾಡಿ ಸಾಯುತ್ತಾರೆ. ಶಾಂತಿ ಸ್ಥೋಪಣೆಯಾದಮೇಲೆ ಯುದ್ಧ ನಿಲ್ಲುತ್ತದೆ ಶಬ್ದ ಸಾಹಸದಿಂದ ಕಠಿಣವಾಗಿ ಹೋಂಡಿದ ವೈರಿಯನ್ನು ಯಾವ ಕಡೆಯವರಾದರೂ ಗೌರವಿಸುತ್ತಾರೆ ಆದ್ದರಿಂದ ಜನರಲ್ ಮೇಕರ್ಥರರಿಗೆ ಜಾಪಾನೀ ಜನತೆಯ ಮೇಲೂ ನನ್ನ ಮೇಲೂ ಗೌರವವಿದೆ' ಎಂದೇ ಆಗ ಟೋಜೋನ ಹೇಳಿಕೆ

ಆ ದಿನ

ಆದರೆ ಮೇಕರ್ಥರ್ ತಡೆಯಲಿಲ್ಲ. ಸೆಪ್ಟೆಂಬರ್ 11ರಲ್ಲಿ ಟೋಜೋನನ್ನು ಹಿಡಿಯಲು ಅಮೇರಿಕನ್ ಯೋಧರು ಆವನ ಮನೆಯತ್ತ ಧಾವಿಸಿದರು ಅವರೊಂದಿಗೆ ಕೆಲವು ಯುದ್ಧ ಬಾತ್ಮೀದಾರರೂ ಹೋಗಿದ್ದರು. ಇವರು ಮಾಜೀ ಜಪಾನ್ ಮಂತ್ರಿಯ ಮನೆಯ ಹೆಬ್ಬಾಗಲನ್ನು ಸಮೀಪಿಸಿದಾಗ ಪಕ್ಕದ ದೊಡ್ಡ ಕಿಟಿಕಿಯು ಎರಡು ಬಾರಿ ತೆರೆಯಲ್ಪಟ್ಟಿತು ಆ ಮೂಲಕ ಉಕ್ಕಿನಂತಹ ಕಠಿಣ ವದನವೊಂದು ಕಾಣಿಸಿಕೊಂಡು ಮೆಲುಧನಿಯಲ್ಲಿ 'ನಾನೇ ಟೋಜೋ' ಎಂದಿತು. ಅಷ್ಟು ಹೇಳಿ ಟೋಜೋ ಸಟಕ್ಕನೆ ಕಿಟಿಕಿಯ ಬಾಗಿಲು ಹಾಕಿಕೊಂಡ ಆದರೆ ಅಷ್ಟರೊಳಗೆ ಒಬ್ಬ ಫೋಟೋಗ್ರಾಫರನ ಕೆಮರದಲ್ಲಿ ಟೋಜೋ ವದನದ—ವಿಕಾಲ ಹಣೆಯಿಂದೆದ್ದು ಬಾಡದ ವರೆಗೂ ಕತ್ತರಿ ಬಿದ್ದಿದ ಕೂದಲಿನ, ಕೊಂಬಿನ ಚೌಕಟ್ಟಿನ ಕನ್ನಡಕದೊಳಗಿಂದ ಧಳಧಳಿಸುವ ಕಣ್ಣುಗಳ-ಭಾವಚಿತ್ರ ಬಿದ್ದಿತ್ತು. ಕಿಟಿಕಿಯ ಬಾಗಿಲು ಬಿದ್ದೊಡನೆಯೇ ಸೋಲ್ಜರರು ಮನೆಯೊಳಗೆ ನುಗ್ಗಲು ಹೆಚ್ಚೆ ಮುಂದಿಟ್ಟಾಗ ಒಳಗಡೆಯಿಂದ ಗುಂಡಿನ ಸದ್ದು ಕೇಳಿಸಿತು ಅವರು ಹೆಬ್ಬಾಗಲನ್ನೊದೆದು ಒಳನುಗ್ಗಿದರು; ಒಳಗೆ ಮತ್ತೊಂದು ಬಾಗಿಲನ್ನೂ ಒಡದೇ ಹೋಗಬೇಕಾಯಿತು

ಅದೃಶ್ಯ

ಕೋಣೆಯಲ್ಲಿ ತಗ್ಗಾದ ಕುರ್ಚಿಯೊಂದರಲ್ಲಿ ಟೋಜೋ ಅಸ್ವವ್ಯಸ್ತನಾಗಿ ಬಿದಿದ್ದಾನೆ. ಎದೆಯ ಕೆಳಭಾಗದೊಂದು ಗುಂಡಿನ ಘಾಯದಿಂದ ರಕ್ತವು ರಭಸದಿಂದ ಚಿಮ್ಮುತ್ತಿದೆ. ಆ ಗುಂಡು ನೇರವಾಗಿ ದೇಹದೊಳಗೆ ಪ್ರವೇಶಿಸಿದ್ದಿತು. ಪಕ್ಕದ ಮೇಜಿನ ಮೇಲೆ ಶುದ್ಧ ಬಿಳಿಯ 'ಹರಿಕಿರಿ' ವಸ್ತ್ರ ಸುತ್ತಿದ್ದ ಎರಡು ಹರಿತ ಚಾಕುಗಳಿದ್ದುವು; ಆದರವುಗಳಿಗೆರುಧಿ ಸೋಕಿರಲಿಲ್ಲ, ಟೋಜೋ ಆವುಗಳನ್ನು ಉಪಯೋಗಿಸಿರಲಿಲ್ಲ ಅಮೇರಿಕನ್ ಡಾಕ್ಟರನೊಬ್ಬನಿಗೆ ತಪಕರದ ಕರೆ ಹೋಯಿತು. ದೇಹಕ್ಕೆ ಹೊಸ ರಕ್ತವನ್ನು ಹೊಗಿಸಿ, ಘಾಯಕ್ಕೆ ಚಿಕಿತ್ಸೆ ಮಾಡಹತ್ತಿದ್ದಾಗ ಟೋಜೋ ತೀಕುತ್ಕ್ಷ ನರಳುತ್ತಾ, 'ನಾನು ಸಾಯಲಿಚ್ಚಿಸುತ್ತೇನೆ' ಎಂದ. ಬಳ್ಳಿ ಟೋಜೋನ ಬಾಯಿಯಂದ ಒಂದೆ ಮಾತುಗಳು: "ಮಹಾ ಪೂರ್ವ ಏಸ್ಯಾದ ಜನತೆಗಾಗಿ ನಾನು ಪರ್ಚಾತ್ತಾಪ ಪಡುತ್ತೇನೆ ಎಲ್ಲಾ ಹೊಣೆಗಾರಿಕೆಗೂ ನಾನೇ ತಲೆ ಕೊಡುತ್ತೇನೆ ಮಹಾ ಪೂರ್ವ ಏಸ್ಯಾದ ಯುದ್ಧ-ಅದೊಂದು ನ್ಯಾಯ ಪೂರ್ಣ ಯುದ್ಧ. ನಮ್ಮ ಎಲ್ಲಾ ಶಕ್ತಿಗಳು ಒರಿದಿದ ಮೇಲೆ ಕಾನೆಯಲ್ಲಿ ನಾವು ನೆಲಹಿಡಿದೆವು. ನೋವಿನ ನಂತರ ವಿಜಯಿಗಳಿರುವ ವಿಚಾರಣೆಗಾಗಿ ಕೈಕಟ್ಟಿ ನಿಲ್ಲುವ ಇಚ್ಛೆ ನನಗಿರಲಿಲ್ಲ ಒಂದೇ ಹೊಡೆತದಿಂದ ನನ್ನನ್ನೆ ನಾನೇ ತೀರಿಸಿಕೊಳ್ಳಲಿಚ್ಚಿಸಿದೆ. ನನ್ನ ಆಯೊಂಧನನ್ನ ಪ್ರಯೋಗಿಸಿಕೊಳ್ಳಲು ಪ್ರಭುವರ್ಯರಿಚ್ಚಿಸಿದೆನಾದರೂ, ಅದು ಸಲಿಸದಿರಬಹುದು, ನಾನು ಉಳಿಯುವಂತಾಗಬಹುದೆಂಬ ಹೆದರಿಕೆಯಿಂದ ರಿವಾಲ್ವರನ್ನೇ ಉಪಯೋಗಿಸಿಕೊಂಡೆ" ಆತ್ಮಹತ್ಯಾ ಪ್ರಯತ್ನದ ಮೊದಲು ಟೋಜೋ ಬರೆದಿಟ್ಟದ್ದ ಚೀಟಿಯೊಂದರಲ್ಲಿ 'ಜಾಪಾನೀ ಜನತೆಗೆ ನನ್ನ ಗೌರವಪೂರ್ವಕವಾಗಬೇಕೆ, ನಾನೀ ತ್ಯಾಗವಾಡಿದುದನ್ನು ಅವರು ತಿಳಿಯುವಂತಾಗಬೇಕು ಎಂಬುದಕ್ಕಾಗಿ ತಲೆಯ ಬದಲಿಗೆ ಎದೆಗೆ ಗುಂಡಿಕ್ಕಿಕೊಂಡೆ' ಎಂದು ಇತ್ಯಂತೆ ಚೀಟಿಯನ್ನು 'ಬಾಂಯೂಯಿ ಎಂಪರರ್' ಎಂಬ ರಾಜಭಕ್ತಿಗೆ ಪ್ರಮಾಣ ಪೊಡನೆ ಕೊನೆಗೊಳಿಸಲಾಗಿತ್ತಂತೆ.

ಕಟ್ಟುಗ್ರ ಮನುಷ್ಯ

ಟೋಕಿಯೋ ಒಳಿಯ ಯೂಕೊಹೊಮಾ ಆಸ್ಪತ್ರೆಯಲ್ಲಿ ಜೋಜೋನೀಗ ಗುಣಮುಖವಾಗುತಿದ್ದಾನೆಂದು ತಿಳಿದು ಒರುತ್ಯದೆ. 20 ಪಾವರ ಯುನಿಟ್ ಪೆನಿಸಿಲಿನ್‌ನ್ನು ಆವನ ದೇಹದೊಳಕ್ಕೆ 'ಇಂಟ್ರಾ' ಮಾಡಲಾಯಿತು ಆದರೂ ಘಾಯದೊಳಗೆ ಕೀವಾಗುವ ಸಂಭವವು ತಪ್ಪಿಸಿಲ್ಲವಾದ್ದರಿಂದ ಮುಂದಿನ ಯಾವುದೆ ಆನಾಹುತವನ್ನೆದುರಿಸಲು ಜನರಲ್ ಟೋಜೋ ಒಂದು ಕಾಲದಲ್ಲಿ ಜಪಾನಿನ ಕಟ್ಟುಗ್ರ ಸೇನೆಯಾಗಿದ್ದ ಕ್ವಾಂಟುಂಗಿನ ನಾಯಕನಾಗಿದ್ದ. 1941ನೇ ಒಕ್ಟೋಬರಿನಲ್ಲಿ ಸಾಮಾ ಪ್ರಭುತ್ವಿಯ ಮಂತ್ರಿ ಮಂಡಲ ರಾಜಕೀಯಬ್ಬಗ ಪ್ರಧಾನ ಮಂತ್ರಿಯಾಗಿ ಸರಕಾರ ಸ್ಥಾಪಿಸಿಕೊಂಡ. ಅಧಿಕಾರಕ್ಕೆ ಬಂದ ಏಳು ವರಗಳಲ್ಲಿ ಪರ್ಲ್‌ಹಾರ್ಬರ್ ಧಾಳಿ ನಡೆಯಿಸಿದ ಆನನು ಆದಿಯಿಂದಲೂ ಜರ್ಮನ್ ಪಕ್ಷಪಾತಿ ಬ್ರಿಟನ್ ಮತ್ತು ಅವೆರಿಕಗಳಿಂದರೆ ಆತನಿಗೆ ಸರಮಾವಧಿ ಜಿಗುಪ್ಸೆ 'ಕಠಿಣದೆ ಬರವವರು' ಎಂದು ಅಂಗ್ಲೋ ಅಮೆರಿಕಾನರಿಂಗೆ ಟೋಜೋದತ್ತ ಬಿರುದು ಜಪಾನಿನ ಅದೃಷ್ಟ ಹಿಮ್ಮುಖವಾಗಹತ್ತಿದ 1944ನೇ ಜುಲಯಿಯಲ್ಲಿ ಆವನು ಅಧಿಕಾರ ತ್ಯಾಗ ಮಾಡಬೇಕಾಯಿತು ಟೋಜೋ ಸಮಾನ್ಯ ಜಪಾನರಿಗಿಂತ ದೀರ್ಘದೇಹಿ ಮುಖವು ಬಿಗಿದು ಕಟ್ಟಿದಂತಿನ್ನು, ತೀಕ್ಷ್ಣ ಕರಿಕಣ್ಣುಗಳಿಂದ ಹೊಳೆಯುತ್ತಿದೆ ಅತ್ಯಂತ ಚುರುಕು ಸುತ್ತು ಆವೇಶ ಬದ್ಧಿಯ ಮನುಷ್ಯ ಆದ್ದರಿಂದಲೇ ಜಪಾನಿನಲ್ಲಿ ಆವನನ್ನು 'ಕಮಿಸರಿ' (ಕ್ಷುರದ ಬ್ಲೇಡು) ಎಂದೆ ಕರೆಯುವದಿದೆ

ಜಪಾನಿನಲ್ಲಿ ಹರಿಕಿರಿ

19ಮಂದಿ ಜಪಾನ್ ಯುದ್ಧ ಪ್ರಮುಖರು ಮೇಕರ್ಥರರ ಯುದ್ಧಾರೋಪಪಟ್ಟಿಯಲ್ಲಿದ್ದಾರೆ ಆ ಪೈಕಿ ಟೋಜೋನ ಮಂತ್ರಿಮಂಡಲದಲ್ಲಿದ್ದ 10ಮಂದಿಯನ್ನು ಕೂಡಲೇ ಕೃದುಮಾಡುವ ಹುಳುಮಾಡಿದೆ. ಜಪಾನಿನಲ್ಲಿ ಸರ್ವತ್ರ 'ಹರಿಕಿರಿ'ಹೆಸರೆ ಹೆಬ್ಬದೆ ಜಪಾನೀ ಸೇನೆಯ ಮೂಲನಾಯಕ ಮತ್ತು ಮಾಜೀ ಯುದ್ಧಮಂತ್ರಿ ಫೀಲ್ಡ್ ಮಾರ್ಶಲ್ ಶುಗಿಯಾಮಾ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಫಿಲಿಪ್ಪಾಯಿನುಗಳ ಮಾಜೀ ಸರ್ವಸೇನಾನಿ ಜನರಲ್ ಸೀಚಿಟನಾಕನೂ ಗುಂಡಿಕ್ಕಿಕೊಂಡು ಮಡಿದನೆಂದು ವಾರ್ತೆ. ಟೋಜೋ ಮಂಡಲದಲ್ಲಿ ನಾವೆಯ ಶಿರಸ್ಸಾಗಿದ್ದ ಎಡ್ಮಿರಲ್ ಶಿಮಡಾ ಆತ್ಮಹತ್ಯೆಯ ಯೋಚನೆ ಮಾಡಿದ್ದನಾದರೂ ಈಗ ಶರಣು ಶರ್ತಗಳ ಪಾಲನೆಗಾಗಿ ಜೀವನ್ಮೃತನಂತೆ ಬದುಕುತ್ತೇನೆನ್ನುತ್ತಾನೆ ಟೋಜೋ ಕಾಲದ ವಿದ್ಯಾಮಂತ್ರಿ ಕುನ್ಜಿ ಹಿಕೋ ಹಶಿಡಾ ನಿಷೆಂದು ಸತ್ತ; ವರ್ಲ್ ಸೇನಾನಿ ಹಿತಿ ನೋಟೋ ಗುಂಡಿಟ್ಟುಕೊಂಡು ಮಡಿದ, ಅಲ್ಲಲ್ಲಿದ್ದ ಇತರ ಹಲವು ಜಪಾನೀ ಅಧಿಕಾರಿಗಳೂ ಸೇನಾನಿಗಳೂ ಹರಿಕಿರಿ ಮಾಡಿಕೊಂಡಿದ್ದಾರೆ ಅಭಿಮಾನದಿದಿರು ಋಣವನ್ನು ತೃಣವಾಗಿ ಗಣಿಸಿ ಜಪಾನರು ಜೀವಬಿಡುತಿದ್ದಾರೆ. ಟೋಜೋ ಕಾಲದ ವಿದೇಶ ಮಂತ್ರಿಯಾಗಿದ್ದ ಶಿಗೆನೋರಿ ಟೋಗೋನನ್ನು ಹುಡುಕಲಾರಂಭಿಸಿದ್ದಾರೆ, ಉತ್ತ ವರ್ಲ್ ಹಾರ್ಬರ್ ಧಾಳಿ ನಡೆಯುವಾಗಲೇ ಇತ್ತ ಮಾತ್ರಕತೆಯು ಕಪಟ ನಾಟಕವಾಡಿದವನೆಂಬ ಕಾರಣದಿಂದ ಟೋಗೋನ ಮೇಲೆ ಅಮೇರಿಕಾನರಿಗೆ ಅತಿ ಹೆಚ್ಚಿನ ವೈಮನಸ್ಯವಿದೆ. ಟೋಜೋ

(ಉಳಿದ ಭಾಗ ಸಂ.೫ರಲ್ಲಿ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಆನೋಘವಾದ ಮಧುರದ್ರವ್ಯದ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೆಲ್ಲರಿಗೂ ಸುಲಭವಾಗಿ ದೊರೆಯುವುದು

ಈ ಔಷಧವನ್ನು ಉಪಯೋಗಿಸುವವರಿಗೆ ಯಾವುದೇ ಅಪಾಯಕರವಾದ ಪರಿಣಾಮಗಳಾಗಲಿ ಬರುವುದಿಲ್ಲವೆಂದು ಅಂದರೆ ಕೇವಲ ಈ ರಸಾಯನವೇ ಒಂದು ಬಾಣಂತಿತನಕ್ಕೆ ಸಾಕಾಗುವುದು. ವಿಶೇಷ ವಿವರಕ್ಕೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ಮಂಗಳೂರು

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

★ ಕಾಂಗ್ರೆಸ್ ಕಾರ್ಯಕಾರಿ ಸಮಿತಿ. ★

ಮಹತ್ವಪೂರ್ಣ ಪೂನಾ ನಿರ್ಧಾರಗಳು.

ಅಧ್ಯಕ್ಷ ಆಜಾದ್.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇದೇ ತಾ. 12ರಂದ ಪೂನೆಯಲ್ಲಿ ಕೂಡಿ ಬಂದು ಮಹತ್ವದ ನಿರ್ಧಾರಗಳನ್ನು ಮಾಡಿದೆ. ಪೂನೆಯ ಪ್ರಕೃತಿ ಚಿಕಿತ್ಸಾಲಯದಲ್ಲಿರುವ ಮಹಾತ್ಮಾ ಗಾಂಧಿಯವರ ಗುಡಿಸಲಿನ ಮುಂಭಾಗದಲ್ಲಿ ಸ್ವೆಟ್ಟರ್‌ಲಾಗಿ ಕಟ್ಟಿಲ್ಪಟ್ಟ ಸಭಾಮಂಟಪದಲ್ಲಿ ತಾ. 12ನೇ ಆಪರಾಹ್ನ 3-15ಕ್ಕೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸೇರಿಬರಲಾರಂಭ. ಅಂದಿನಿಂದ ತಾ. 15ನೆ ವರೆಗೆ ಐದು ದಿನಗಳ ಪರ್ಯಾಲೋಚನೆ ನಡಿಸಿ ಪ್ರಾಮುಖ್ಯ ವಿಷಯಗಳ ಕುರಿತು ನಾಲ್ಕು ಮಹತ್ವದ ನಿರ್ಧಾರಗಳನ್ನು ವರ್ಕಿಂಗ್ ಕಮಿಟಿ ಜಾಹೀರುಮಾಡಿದೆ.

೧. ರಾಷ್ಟ್ರಕ್ಕೆ ಧನ್ಯವಾದ

ಮೊದಲನೇ ನಿರಾವಿನಲ್ಲಿ-1942ರಿಂದ ಮೂರುವರ್ಷಗಳ ವರೆಗೆ ಸೇನೆ,ಪೋಲಿಸ್ ಮತ್ತು ಸಿವಿಲಿಯನ್ನ್ ಉದ್ಯೋಗಕ್ಕೆ ಕೂಟ್ಟು ನಿಂತ ಸೈನ್ಯ ಸ್ತ್ರೀಯರ್ ಸೈನ್ಯಗಳಿಗಾಗಿ ಕಾಂಗ್ರೆಸ್ ಕಮಿಟಿಯು ರಾಷ್ಟ್ರವನ್ನು ಸ್ತೋತ್ರ ಪೂರ್ವಕವಾಗಿ ಅಭಿನಂದಿಸಿದೆ. ಮೂರು ವರುಷಗಳ್ಲ ನಡೆಸಿದ ಭೀತಿದಾಯೀ ದಬ್ಬಾಳಿಕೆಗಾಗಿ ಸರಕಾರವನ್ನು ಖಂಡಿಸಿ, ಯುದ್ಧ ಮುಗಿದಾಗ ವಸಾಹತ. ಮತ್ತು ಪರಾಧೀನ ರಾಷ್ಟ್ರಗಳಿಗೆ ಸ್ವಾತಂತ್ರ್ಯ ದೊರೆಯುವುದನ್ನು ನಿರೀಕ್ಷಿಸಿದೆ 1942ನೇ ಆಗೋಸ್ತ ನಿರ್ಧಾರದಲ್ಲಿ ನಮೂದಿಸಲ್ಪಟ್ಟಿರುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಗೊತ್ತುಗುರಿಗಳನ್ನೇ ದೃಢೀಕರಿಸಿ ಲೋಕ ಶಾಂತಿಗೆ ಭಾರತವು ಸ್ವತಂತ್ರವಾಗುವದು ಅಗತ್ಯವೆಂಬುದನ್ನು ಒತ್ತಿ ಹೇಳಿದೆ.

2 ಚುನಾವಣೆಗಿಳಿಯುವೆವು

ಎರಡನೇ ನಿರಾವಿನಲ್ಲಿ-ಮುಂಬರುವ ಚುನಾವಣೆಯಲ್ಲಿ ಭಾಗ ವಹಿಸುವ ನಿರ್ಧಾರವನ್ನು ಘೋಷಿಸಿದೆ. ಸದ್ಯದ ಮತದಾನ ಪದ್ಧತಿ ಅತ್ಯಂತ ಸಂಕುಚಿತವಿದೆ. ಪ್ರಾಯಸ್ಥರೆಲ್ಲರಿಗೂ ಮತಾಧಿಕಾರವಿರಬೇಕೆಂಬುದೇ ಕಾಂಗ್ರೆಸಿನ ವಾದ. ಮತದಾರ ಪಟ್ಟಿಗಳು ಎಷ್ಟೋ ವರುಷಗಳಿಗೆ ಹಿಂದಿನವು. ಈ ಅವಧಿಯಲ್ಲಿ ಜನಗಣದಲ್ಲಿ ಹಲವು ಬದಲಾವಣೆಗಳಾಗಿವೆ. ಕೇಂದ್ರ ಎಸೆಂಬ್ಲಿಯ ಮತದಾರ ಸಂಖ್ಯೆ 100ಕ್ಕೂಹೆಚ್ಚಾಗಿಲ್ಲ ಆದಿನ್ನೂ 1919ನೇ ಏಕ್ಟಿನನ್ವಯ ಟೇಜವಾಬ್ದಾರಿ ಸಲಹೆಗಾರರನ್ನೊಳಗೊಂಡ ಸೀಮಿತ ಪ್ರಾಂತ್ಯಗಳಲ್ಲಿ ಇನ್ನೂ 93ನೇ ಕಲಮಿನಾಳ್ವಿಕೆಯಿರುವುದನ್ನೂ ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚನೆಯಾಗದುದನ್ನೂ ಖಂಡಿಸಿ, ಕೆರಳಿಸುವ ವಿದ್ಯಮಾನಗಳೆಲ್ಲವೇ ನಡೆದರೂ ಸಂಧಾನ, ಸಮಾಲೋಚನೆಗೆ ಈ ಶಾಂತದಾಯಿ ತೀರ್ಮಾನದ ಕೀಲಿಕೈಯೆಂಬ ತನ್ನ ಧೋರಣೆಯನ್ನು ಕಾಂಗ್ರೆಸು ಎಂದೂ ಬಿಡುವಂತಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಸಾಧ್ಯವಿದ್ದಲ್ಲಿ ಸಂಧಾನ ಮತ್ತು ತೀರ್ಮಾನ ಸಾಧನೆ-ಅಗತ್ಯ ಬಿದ್ದಲ್ಲಿ ಅಗಹಕಾರ ಮತ್ತು ಪ್ರತ್ಯಕ್ಷ ಕಾರ್ಯಾಚರಣೆ, ಎಂಬ ಕಾಂಗ್ರೆಸ್ ತತ್ವವು ಅಚಲವಿದೆ ಎಂದೂ ಆ ನಿರಾವು ಘೋಷಿಸಿದೆ

3. ತಾತ್ಕಾಲಿಕ ದುರವಸ್ಥೆಯ ನಿಷೇಧ

ಮೂರನೇ ನಿರಾವಿನಲ್ಲಿ-ತಾತ್ಕಾಲಿಕ ರಾಷ್ಟ್ರೀಯ ಸರಕಾರ ಸ್ಥಾಪಿಸದ ಸರಕಾರದ ವರ್ತನೆಯ ಖಂಡನೆಯಿದೆ. ಸಿಮ್ಲಾ ಸಮ್ಮೇಲನದ ಸಂಭವಕ್ಕೆ ಹೇತುವಾದ ಸರಕಾರೀ ಧೋರಣೆಯ ಖಂಡನೆ-ಆ ಸಮ್ಮೇಲನದಲ್ಲಿ ಕಾಂಗ್ರೆಸು ಪ್ರತಿನಿಧಿಗಳು ವಹಿಸಿದ ಧೋರಣೆಯ ಸಮರ್ಥನೆ-ರಾಜಕೀಯ ಕೈದಿಗಳ ಬಿಡುಗಡೆಯಲ್ಲಿಯೂ ಕಾಂಗ್ರೆಸು ಕಮಿಟಿಗಳ ವೈಲಿನ ನಿಷೇಧಗಳನ್ನು ಹಿಂತೆಗೆಯುವುದರಲ್ಲಿಯೂ ಸರಕಾರವು ವಹಿಸಿರುವ ಶಂಕೆಯ ತೀವ್ರ ನಿಷೇಧ-ನಾಗರಿಕ ಹಕ್ಕಿಗಿರುವ ಪ್ರತಿಬಂಧಗಳನ್ನು ತೆಗೆಯಲು ಆಳುಕುತ್ತಿರುವ ಅಧಿಕಾರೀ ವರ್ತನೆಯ ಖಂಡನೆ, ಮಾಡಲಾಗಿದೆ. ಕೆಲವು ಪ್ರಾಂತ್ಯಗಳಲ್ಲಿ ಇನ್ನೂ 93ನೇ ಕಲಮಿನಾಳ್ವಿಕೆಯಿರುವುದನ್ನೂ ತಾತ್ಕಾಲಿಕ ರಾಷ್ಟ್ರೀಯ ಸರಕಾರ ರಚನೆಯಾಗದುದನ್ನೂ ಖಂಡಿಸಿ, ಕೆರಳಿಸುವ ವಿದ್ಯಮಾನಗಳೆಲ್ಲವೇ ನಡೆದರೂ ಸಂಧಾನ, ಸಮಾಲೋಚನೆಗೆ ಈ ಶಾಂತದಾಯಿ ತೀರ್ಮಾನದ ಕೀಲಿಕೈಯೆಂಬ ತನ್ನ ಧೋರಣೆಯನ್ನು ಕಾಂಗ್ರೆಸು ಎಂದೂ ಬಿಡುವಂತಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಸಾಧ್ಯವಿದ್ದಲ್ಲಿ ಸಂಧಾನ ಮತ್ತು ತೀರ್ಮಾನ ಸಾಧನೆ-ಅಗತ್ಯ ಬಿದ್ದಲ್ಲಿ ಅಗಹಕಾರ ಮತ್ತು ಪ್ರತ್ಯಕ್ಷ ಕಾರ್ಯಾಚರಣೆ, ಎಂಬ ಕಾಂಗ್ರೆಸ್ ತತ್ವವು ಅಚಲವಿದೆ ಎಂದೂ ಆ ನಿರಾವು ಘೋಷಿಸಿದೆ

4 ಭಾರತದ ಏಕರೂಪನೇ ಮುಖ್ಯ

ನಾಲ್ಕನೇ ನಿರಾವಿನಲ್ಲಿ — ಕಾಂಗ್ರೆಸು ಸಂಯುಕ್ತ ಭಾರತದ ತನ್ನ ಗುರಿಯನ್ನು ಸ್ಪಷ್ಟಪಡಿಸಿದೆ ಕ್ರಿಪ್ಸ್ ಸಂಧಾನ ಭಂಗದ ವೇಳೆ ಭಾರತಕ್ಕೆ ಫೆಡರಲ್ ರೀತಿಯ ರಾಜ್ಯಭಾರಬೇಕೆಂದು ಕಾಂಗ್ರೆಸ್ ಅಭಿಪ್ರಾಯ ಪಟ್ಟಿದ್ದಿತು. 1942ರಲ್ಲಿ ಅಲಹಾಬಾದಿನಲ್ಲಿ ಸೇರಿದ ಅ. ಭಾ. ಕಾಂಗ್ರೆಸ್ ಸಮಿತಿ ಸಭೆಯು ರಾಷ್ಟ್ರದ ವಿಭಜನೆಯನ್ನು ಕಾಂಗ್ರೆಸ್ ಎಂದಿಗೂ ಒಪ್ಪುವಂತಿಲ್ಲವೆಂಬ ನಿರ್ಧಾರ ದೂಡಿದ್ದಿತು. ಆ ಮೇಲೆ



ಕಾರ್ಯದರ್ಶಿ ಕೃಪಾಲನಿ.

ಮೂರು ತಿಂಗಳ ನಂತರ ಬೊಂಬಾಯಿಯಲ್ಲಿ 1942ನೇ ಆಗೋಸ್ತು 8ರಲ್ಲಿ ಸೇರಿದ ಕಾಂಗ್ರೆಸ್ ಕಮಿಟಿ ಸಭೆಯು, ರಾಷ್ಟ್ರದ ಯಾವುದಾದರೊಂದು ವಿಭಾಗಿತ ಸ್ವದೇಶದ ಜನತೆಯ ಜಾಹೀರಾದ ಹಾಗೂ ದೃಢವಾದ ಅಭಿಪ್ರಾಯಕ್ಕೆ ವಿರುದ್ಧವಾಗಿ, ಆ ಭಾಗವು ಸಂಯುಕ್ತ ಭಾರತದ ಫೆಡರಲಿನಲ್ಲಿಯೇ ಸೇರಿರಬೇಕೆಂದು ಒತ್ತಾಯಿಸುವಂತಿಲ್ಲವೆಂಬ ನಿರ್ಧಾರವಾಗಿತ್ತು. ಮೇಲಿನ ಮೂರು ನಿರ್ಣಯಗಳನ್ನೂ ಇಂದಿನ ನಿರ್ಧಾರದಲ್ಲಿ ಗರ್ಭೀಕರಿಸಿಕೊಳ್ಳಲಾಗುತ್ತದೆ. ಕಮಿಟಿಯ ಅಭಿಪ್ರಾಯದಂತೆ ಅವು ಮೂರರಲ್ಲಿ ಭಿನ್ನತೆ ಅಥವಾ ಪರಸ್ಪರ ವಿರುದ್ಧಾಂಶವೇನೂ ಇಲ್ಲ. ಕಮಿಟಿಗೆ ಸಂಯುಕ್ತ ಭಾರತದಲ್ಲಿಯೇ ನಂಬಿಕೆಯಿದೆ ಎಂಬುದರ ದೃಢೀಕರಣವೇ ಅದರ ಸಾರ. ಅರ್ಥಾತ್ ಮುಸ್ಲಿಂ ಧುರೀಣರು ಕೇಳುತ್ತಿರುವ ಪಾಕಿಸ್ತಾನ್ ವಿಭಜನೆಯನ್ನು ಕಮಿಟಿಯು ತಿರಸ್ಕರಿಸುತ್ತದೆ. ಮತ್ತು ಈ ಮೂಲಕ ಆ ನಾಯಕರಾಡಿತ್ತಿರುವ ಭಾರತದ ವಿಭಜನೆಯ ಧುರವೀರ್ಯವನ್ನು ಈ ಕಮಿಟಿಯು ಅಂಗೀಕರಿಸುತ್ತದೆ

ಇತರ ನಿರ್ಧಾರಗಳು

ಮೇಲಿನ ನಾಲ್ಕು ನಿರ್ಧಾರಗಳು ಕಾಂಗ್ರೆಸಿನ ಆಧುನಿಕ ಚತುಸ್ಸೂತ್ರಗಳು-ಸದ್ಯದ ಕಾಂಗ್ರೆಸ್ ಭಾವನಾಲಯದಜಪತುರ್ಗಂಭಗಳು-ಎನ್ನಬಹುದು. ಈ ಮುಖ್ಯ ನಿರ್ಧಾರಗಳಲ್ಲದೆ ಇತರ ಹಲವು ನಿರ್ಣಯಗಳನ್ನೂ ಪೂನಾ ಸಭೆ ಮಾಡಿದೆ. ಇನ್ನು ಕೆಲವು ವಿಷಯಗಳು ಪರ್ಯಾಲೋಚನೆಯಲ್ಲಿವೆ. ಟೇಜವಾಬ್ದಾರೀ ವೈಸರಾಯೀ ಕೌನ್ಸಿಲ್, ಬ್ರಿಟ್ಟನ್‌ವುಡ್ ನಿರ್ಧಾರಗಳು, ಸೈರಿಂಗ್ ಸಾಲಗಳು, ಪ್ರಿಸ್ಕೋಪಮ್ಮೇಲನದ ನಿರ್ಧಾರಗಳು, ಮೊದಲಾದುವುಗಳ ಕುರಿತೂ ಕಾಂಗ್ರೆಸ್ ಧೋರಣೆಗನುಸಾರವಾದ ನಿರ್ಣಯಗಳಾದುವು. ಸುಭಾಷರ ನಾಯಕತ್ವದಲ್ಲಿದ್ದು. ಈಗ ಅಖಿಲ ಭಾರತದ ಅತುಂದ ಪ್ರಶ್ನೆಯಾಗಿರುವ 'ಭಾರತ ರಾಷ್ಟ್ರೀಯ ಸೇನೆ'ಯ ಸದಸ್ಯರ ಸಂಬಂಧದ ನಿರಾವೇ ಆ ಏಕೈಕ ಮುಖ್ಯವೆನ್ನೆ ಬಹುದು. ಆ ಸೇನೆಯ ಅಧಿಕಾರಿಗಳನ್ನೂ ಅನುಯಾಯಿಗಳನ್ನೂ ಬಿಡುಗಡೆ ಮಾಡಬೇಕು-ಯುದ್ಧ ಸಂಬಂಧವಾಗಿ ಮರಣದಂಡನೆ ವಿಧಿಸಲ್ಪಟ್ಟಿರುವ ಹಿಂದೀ ಸೈನಿಕರು ಆ

Announcing!

The Directors of the Syndicate have great pleasure in announcing the opening of Branches of the Bank shortly at

BEZWADA & GUNTUR.

Every type of Banking Business will be transacted.

Branches & Agencies all over India.

The Canara Industrial & Banking Syndicate Ltd.,

ESTD: 1925

Central Office HOMJI STREET, FORT, BOMBAY

ಮಹತ್ವಪೂರ್ಣ ಪೂನಾ ನಿರ್ಧಾರಗಳು.

ಥಳ ನಾಗರಿಕರ ಶಿಕ್ಷೆಯನ್ನು ಜ್ಯಾರಿ ಮಾಡಬಾರದೆಂದೂ ಕವಿ ಟಿಯು ಅಗ್ರಹ ಪೂರ್ವಕ ಸರಕಾರವನ್ನು ಕೇಳಿಕೊಂಡಿದೆ.

ಕಾಂಗ್ರೆಸಿನೊಳಗಿನ ಪಕ್ಷಗಳು

ಈಗ ತೀರಾ ತಕ್ಷಣದ ಪ್ರಶ್ನೆಯಾಗಿರುವ ಕಮ್ಯೂನಿಸ್ಟರೇ ಮೊದಲಾದ ಕಾಂಗ್ರೆಸಿನೊಳಗಿನ ಪಂಗಡಗಳ ಪ್ರಶ್ನೆಯನ್ನು ಪಂಡಿತ ನೆಹರು, ಬಾಬು ರಾಜೇಂದ್ರ ಪ್ರಸಾದ್, ಡಾ| ಪಟ್ಟಾಭಿ ಸೀತಾರಾಮಯ್ಯ

ಜೀವಾಳ ನೆಹರು.

ರುವ ಒಂದು ಉಪಸಮಿತಿಯ ತೀರ್ಮಾನಕ್ಕೆ ಒಪ್ಪಿಸಲಾಗಿದೆ. ಕಾಂಗ್ರೆಸಿನೊಳಗಿಂಗ ಹೆಲವು ಪಕ್ಷಗಳಿವೆ. ಫೋರ್ವರ್ಡ್ ಬ್ಲೋಕ್; ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷ, ಕಾಂಗ್ರೆಸ್ ಕಮ್ಯೂನಿಸ್ಟ್ ಪಕ್ಷ, ಕಿಸಾನ್ ಸಭಾ, ಕೂಲಿಗಾರ ಸಂಘಗಳ ಸದಸ್ಯರು ಕಾಂಗ್ರೆಸಿನೊಳಗಿದ್ದಾರೆ. ಇವರೆಲ್ಲಾ ಸ್ವಂತ ಸಂಘಗಳ ನಿಯಮಗಳಿಗೆ ಕಟ್ಟುಬಿದ್ದವರು. ಈ ಭಿನ್ನ ಪಕ್ಷಗಳ ನಿಯಮಗಳು ಹೆಲವು ವೇಳೆ ಕಾಂಗ್ರೆಸಿನೊಡನೆ ಘರ್ಷಣೆಹೊಂದುವದಿದೆ. ಆದ್ದರಿಂದ ಆ ಕುರಿತು ಕಾಂಗ್ರೆಸಿಗ ಸ್ಪಷ್ಟ ಧೋರಣೆ ವಹಿಸಬೇಕಾಗಿದೆ. ಮೇಲಾಗಿ ಪ್ರಕೃತ ಕಮ್ಯೂನಿಸ್ಟರ ಮೇಲೆ ಬಿದ್ದಿರುವ ತಿಸ್ತು ಭಂಗದ ಆರೋಪಗಳಿಗೆ ಒಂದು ತೀರ್ಮಾನವಾಗುವ ಅವಶ್ಯಕತೆಯೂ ಇದೆ. ಕಮ್ಯೂನಿಸ್ಟರ ಮೇಲೆ ಪ್ರಥಮ ಗದೆ ಬೀಸಿದ ಜೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ. ಎಸ್. ಕೆ. ಪಾಟೀಲರು ಕಾಂಗ್ರೆಸಿನೊಳಗಿರುವ ಎಲ್ಲಾ ಪಕ್ಷಗಳನ್ನೂ ಬರ್ಖಾಸ್ತುಪಡಿಸಬೇಕೆಂಬ ಠರಾವೊಂದನ್ನು ತರುವ ನೋಟೀಸು ಕೊಟ್ಟಿದ್ದಾರೆ. ಹೀಗಾಗಿ ಆ ಪ್ರಶ್ನೆಯು 'ಕಮ್ಯೂನಿಸ್ಟರ ಮೇಲೆ ಪ್ರಹಾರ' ಎಂಬ ಅಪವಾದ ಕೇಳುವ ಬದಲಿಗೆ 'ಕಾಂಗ್ರೆಸಿನ ಶುದ್ಧೀಕರಣ'ದ ರೂಪು ಹೊಂದಲಿದೆ. ಕೂನೂರು ಜೈಲಿನಿಂದ ಕಾ 14ರಲ್ಲಿ ಬಿಡುಗಡೆಗೊಂಡು ಎಲ್ಲೆಡೆಗಳಲ್ಲೂ ಸಂಭ್ರಮದ ಸ್ವಾಗತ ಪಡೆದು, ಅ. ಭಾ. ಕಾಂ. ಸಮಿತಿ ಸಭೆಗಾಗಿ ಬೊಂಬಾಯಿಗೆ ಹೊಂಟಿರುವ ಸುಭಾಷ್‌ಚಂದ್ರ ಬೋಸರ ಅಣ್ಣ ಶರತ್‌ಚಂದ್ರ ಬೋಸರೂ, ಅವರೊಂದಿಗೆ ಬಿಡಲ್ಪಟ್ಟ ಫೋರ್ವರ್ಡ್ ಬ್ಲೋಕಿನ ನಾಯಕ ಲಾಲಾ ಶಂಕರ ಲಾಲರೂ ಫೋರ್ವರ್ಡ್ ಬ್ಲೋಕನ್ನು ವಿಸರ್ಜಿಸಿ ಕಾಂಗ್ರೆಸಿನೊಡನೆ ವಿಲೀನಗೊಳ್ಳುವ ಬಯಕೆಯನ್ನು ಅಧ್ಯಕ್ಷರಿಗೆ ಬರೆದು ತಿಳಿಸಿದ್ದಾರೆಂದು ತಿಳಿದುಬರುತ್ತದೆ. ನೆಹರು, ಪ್ರಸಾದ್, ಪಟ್ಟಾಭಿಯವರ ಉಸ್ತ ಸಮಿತಿಯು ರಾಷ್ಟ್ರ ಸಭೆಯ ಮಹಾಧಿವೇಶನ ನೆರೆಯಿಸುವ ಸ್ಥಳ ಕಾಲಗಳನ್ನೂ ನಿರ್ಧರಿಸಲಿದೆ. ಕಳದ ಎದು ವರುಷಗಳಿಂದ ಕಾಂಗ್ರೆಸಿನ ವಾರ್ಷಿಕಾಧಿವೇಶನ ನಡೆದುದಿಲ್ಲ. ಅಧ್ಯಕ್ಷ ಆಜಾದರು ಅಮೆರಿಕಾಧ್ಯಕ್ಷರ ಅವಧಿಯನ್ನು ವಿಸ್ತರಿಸಿದ್ದಾರೆ. ಆದಷ್ಟು ಬೇಗನೇ ಕಾಂಗ್ರೆಸು ಮಹಾ ಸಭೆ ನೆರೆಯಿಸುವ ಆತುರವೆಲ್ಲಾ ಪ್ರಮುಖರಲ್ಲೂ ಇದೆ.

ಅ ಭಾ. ಕಾಂಗ್ರೆಸ್ ಸಮಿತಿ

ಇದೇ ತಾ. 21ರಿಂದ ಬೊಂಬಾಯಿಯಲ್ಲಿ ಸೇರಲಿದೆ. ಅದರ ಸ್ಥಿತಿಯೀಗ ಅಭೂತ ಪೂರ್ವ ಜಿತ್ವಾಹದಿಂದ ಪೂರ್ಣಗೊಂಡಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಧಾರಗಳೆಲ್ಲಾ ಈ ಅ. ಭಾ. ಸಮಿತಿಯ ಮುಂದೆ ಬರಲಿವೆ ಬೊಂಬಾಯಿಯಲ್ಲಿ 25 ಸಾವಿರ ಪ್ರೇಕ್ಷಕರಿಗೆ ಸಾಕಾಗುವಂತಹ ಭವ್ಯ ಸಭಾ ಭವನವು ಅದಕ್ಕಾಗಿ ರಚಿಸಲ್ಪಟ್ಟಿದೆ ಈ ಸಭಾ ವ್ಯವಸ್ಥೆಗೆ 1½ ಲಕ್ಷ ರೂ. ವ್ಯಯಮಾಡಿದ್ದು ಬಹುದೆಂದೂ ಸಭಾ ಪ್ರವೇಶದ ಟಿಕೇಟು ಹಣವು ... ೧½ ಲಕ್ಷಕ್ಕೂ ಮಿಕ್ಕ ಬಹುದೆಂದೂ ಅಂದಾಜು ಮಾಡಲಾಗಿದೆ. ದೇಶದ ಬೇರೆ ಬೇರೆ ಕಡೆಗಳಿಂದ ಪ್ರೇಕ್ಷಕರಾಗಿ ಪ್ರವೇಶಿಸಲಿಚ್ಛಿಸುವವರ ಸಂಖ್ಯೆಯು ಅಗಣಿತವಿದ್ದು, ಅನುಕೂಲತೆಯುರುತ್ತಿದ್ದರೆ ಒಂದು ಲಕ್ಷಕ್ಕೂ ಮಿಕ್ಕಿ ಪ್ರೇಕ್ಷಕರನ್ನೂ 10 ಲಕ್ಷಕ್ಕೂ ಮಿಕ್ಕಿ ಪ್ರವೇಶ ಹಣವನ್ನೂ ಸಂಗ್ರಹಿಸಬಹುದಿದ್ದಿತು. ಆದರೆ ಬೊಂಬಾಯಿಯ ಅಂತಹ ಸ್ಥಳಾವಕಾಶ ಕಡಿಮೆಯಿರುವ, ಕಟ್ಟುನಿಟ್ಟಿನ ಹಸುಗೇ ಪದ್ಧತಿಯಿರುವ ನಗರದಲ್ಲಿ ಅಂತಹ ವ್ಯವಸ್ಥೆ ಅಸಾಧ್ಯವಾದ್ದರಿಂದ ಎಲ್ಲರೂ ತಮ್ಮಾತುರವನ್ನು ದಮನಿಸಿಕೊಳ್ಳಬೇಕೆಂದು ಬೊಂಬಾಯಿ ಪ್ರಾಂ. ಕಾಂ. ಸಮಿತಿ ಕಾರ್ಯದರ್ಶಿ ವಿಜ್ಞಾಪಿಸಿದ್ದಾರೆ. ಘರೀಣರನ್ನೆಲ್ಲಾ ಕತ್ತಲೆಯಲ್ಲಿಡಗಿಸಿ ದೇಶವ್ಯಾಪಿ ಕ್ರಾಂತಿ ಬಿತ್ತಿಸಿದ್ದ 1942ನೇ ಆಗಸ್ಟಿನ್ನು ಕರೆ ಚರಿತ್ರಾರ್ಹ ಬೊಂಬಾಯಿ ಸಭೆಯ ನಂತರ ಅ. ಭಾ. ಕಾಂಗ್ರೆಸ್ ಸಮಿತಿಯು ಅದೇ ಸ್ಥಳದಲ್ಲಿ ಇದೀಗ ಮೊದಲ ಬಾರಿ ಸೇರಲಿದೆ. ಮುಂದಿನ ಚುನಾವಣೆಯಲ್ಲಿ ಭಾಗವಹಿಸುವಂತಹ ದೇಶ ವ್ಯಾಪೀ ಕಾರ್ಯಕ್ರಮ ಕೈಕೊಳ್ಳುವ ನಿರ್ಧಾರ ಮಾಡಲಿದೆ. ಆದ್ದರಿಂದ ಈ ಬಾರಿಯ ಸಭೆಯು ದೇಶವಿ

ಬಲಗೈ ಪಠೇಲ್.

ದೇಶಗಳವರನ್ನು ಆಕರ್ಷಿಸಿದೆ. ಕಾಂಗ್ರೆಸ್ ಪ್ರಮುಖರೆಲ್ಲಾ ಪೂನೆಯಿಂದ ಬೊಂಬಾಯಿಗೆ ಹೊರಟಿದ್ದಾರೆ.

ಜಾಪಾನೀ ಪ್ರಮುಖರ ಹರಿಕಿರಿ

(ನಮ್ಮ ಪ್ರತಿನಿಧಿಯ ಸಂಪಾದಕೀಯ)

ಮಂಡಲದಲ್ಲಿದ್ದ ನಾಲ್ವರು ಸಿಕ್ಕಿದ್ದರು; ಮತ್ತಿಬ್ಬರು ಆತ್ಮಹತ್ಯೆ ಮಾಡಿಕೊಂಡರು. ಅಪೇಕ್ಷಿತ ಸೇನಾನಿಗಳು ಕೆಲವರೂ, ಸೆರೆಸಿಕ್ಕಿದರು. ಹೀಗಾಗಿ ಜಾಪಾನೀ ಯುದ್ಧಾಪರಾಧಿಗಳೆಂದು ದಾಖಲೆ ಮಾಡಿಕೊಂಡವರೆಲ್ಲರೂ ಈಗ ಆತ್ಮಹತ್ಯೆ ಅಥವಾ ದಸ್ತಗಿರಿಗೊಳಗಾದಂತಿದೆ. ತಮ್ಮ ಪಸ್ತಕಾದ ಎಳು ಮಂದಿಯನ್ನು ಜಾಪಾನೀ ಸರಕಾರವು ಪ್ರೇಕ್ಷರಿಗೊಪ್ಪಿಸಿರುವದೆಂದೂ ಅವರಲ್ಲಿ ಹಿರಿಯ ಅರ್ಮಾನ್ ಸೇನೆಯ ಸ್ವತಂತ್ರ ಮಹೇಂದ್ರರೊಬ್ಬರೆಂದೂ ಅಧ್ಯಕ್ಷರು ತಿಳಿದುಬರುತ್ತದೆ.

ಲೋರ್ಡ್ ವೇವೆಲರ ಆಗಮನ

ಭಾರತದ ಭಾವೀ ವ್ಯವಸ್ಥೆಯ ಸರ್ಯಾಲೋಚನೆಗಾಗಿ ಲಂಡನ್ನಿನಿಂದಾಮಂತ್ರಿಸಲ್ಪಟ್ಟು ಸುಮಾರು ಒಂದು ತಿಂಗಳಲ್ಲಿ ಕೂಲಿಗಾರ ಮಂತ್ರಿಮಂಡಲ, ಪ್ರಧಾನ ಮಂತ್ರಿ ಮಿ. ಆಟ್ಲಿ, ಭಾರತ ಕಾರ್ಯದರ್ಶಿ ಲೋರ್ಡ್ ಫೆಥಿಕ್ ಲಾರೆನ್ಸ್ ಮುತ್ತಿತರ ಪ್ರಮುಖರೊಡನೆ ನಡೆಸಿದ ಸೂಕ್ಷ್ಮ ಸರ್ಯಾಲೋಚನೆಯ ಪ್ರತಿಫಲವಾದ ಒಂದು ಯೋಜನೆಯೊಡನೆ ವೈಸರಾಯ್ ಲೋರ್ಡ್ ವೇವೆಲರು ಇದೇ ತಾ. 16ರಲ್ಲಿ ಫ್ಲೈಯಲ್ಲಿಳಿದಿದ್ದಾರೆ; ಅಂದೇ ಪುಸಃ ವೈಸರಾಯ್ ಚಾರ್ಜ್ ವಹಿಸಿಕೊಂಡರು. ತಾ 17ಕ್ಕೇ ತನ್ನ ಕಾರ್ಯಕಾರೀ ಸಮಿತಿಯ ಅವಸರದ ಸಭೆಯನ್ನೂ ಕರೆದಿದ್ದಾರೆ; ಸದಸ್ಯರೆಲ್ಲಾ ಅದಕ್ಕಾಗಿ ನವಢಿಲ್ಲಿಗೆ ಧಾವಿಸಿದ್ದಾರೆ.

ಮುಹತ್ವದ ಘೋಷಣೆ?

ಸದ್ಯದಲ್ಲೇ ಲೋರ್ಡ್ ವೇವೆಲರೊಂದು ಮಹತ್ವಪೂರ್ಣ ಘೋಷಣೆ ಮಾಡಲಿರುವರೆಂಬ ಆತುರದ ನಿರೀಕ್ಷೆಯಿದೆ. ಆದರೆ ಇದುವರೆಗೂ ಎಲ್ಲಾ ವಿಷಯವೂ ಅತ್ಯಂತ ಗುಪ್ತವಾಗಿ ಇಡಲ್ಪಟ್ಟಿದೆ. ಲಂಡನ್ನಿನಲ್ಲಿರುವ ಇಂಡಿಯಾ ಲೀಗಿನ ಶ್ರೀ ಕೃಷ್ಣ ಮೆನನ್‌ರಿಂದ ಪೂನೆಯ ಕಾಂಗ್ರೆಸ್ ಸಮಿತಿಗೆ ಈ ನೊಡಲೇ ಗುಪ್ತ 'ಕೇಬ್ಲ್' ಬಂದಿತ್ತು. ದೇಶದಾದ್ಯಂತ ಚುನಾವಣೆ ಮುಗಿದು ಫಲಿತಾಂಶ ತಿಳಿಯುವ ಮೊದಲು ಯಾವುದೊಂದು ಬದಲಾವಣೆಯೂ ನಡೆಯದೆಂದು ಆ ಮೂಲಕ ತಿಳಿದು ಬಂದೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತನ್ನ ನಿರ್ಧಾರಗಳನ್ನು ಮಾಡಿದ್ದಿತು. ಇಂದು ನಾಳೆಯೊಳಗೆ ವೈಸರಾಯರು ಮಾಡಬಹುದಾದ ಘೋಷಣೆಯಲ್ಲಾದರೂ ತಾತ್ಕಾಲಿಕ ವ್ಯವಸ್ಥೆಯ ಪ್ರಸ್ತಾಪವಿರಲಾರದೆಂದೂ ತನ್ನ ಮಾತುಕತೆಯ ಪರಿಣಾಮವನ್ನಷ್ಟೇ ಅವರು ಬಹಿರಂಗಪಡಿಸಬಹುದೆಂದೂ ನಂಬಲಾಗಿದೆ ಕ್ರಿಪ್ಸ್ ಕೊಡುಗೆಯ ಅಧುನಿಕ ರೂಪ ಮಾತ್ರ ವೈಸರಾಯರೊಂದಿಗೆ ಭಾರತಕ್ಕೆ ಬಂದಿದೆ ಎಂದು ತಿಳಿದು ಬಂದಿದೆ.

1000's SAVED
Margaret's
FITS CURE
Stops childrens fits in 3 minutes
Ask for a box with your chemist.
Sole Agents:
BRIGHTSTAR AGENCIES,
Hospital Rd., Udipi, S. K.

ನವಯುಗದ ಹೊಸ ಸಂಪುಟ
ಚಂದಾದಾರರಲ್ಲಿ ವಿನಂತಿ.

ನವಯುಗದ 24ನೇ ಸಂಪುಟವು ಇದೇ ಕಳದ ಆಗೋಸ್ತು ತಿಂಗಳಾಂತ್ಯಕ್ಕೆ ಮುಗಿದು ಇದೇ ಸಪ್ಟಂಬರದಿಂದ 25ನೇ ಸಂಪುಟವು ಆರಂಭವಾಗಿರುವುದು. ಈ ನವಯುಗಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು (ಬಾಕಿ ಮತ್ತು ಮುಂಗಡ) ಆದಷ್ಟು ಬೇಗನೆ ದಯಮಾಡಿ ಕಳುಹಿಸಿಕೊಟ್ಟು ಎಂದಿನಂತೆ ಪ್ರೋತ್ಸಾಹಿಸುವಂತೆ ವಿನಂತಿ

ಮೆನೇಜರ್.

ಮುದ್ರಿ
ಪುಸ್ತಕಗಳು

ಮಕ್ಕಳ ಮತ್ತು ಉಪಾಧ್ಯಾಯರ ಪಾಠದ ರಿಜಿಸ್ಟ್ರಿಗಳು, ದಾಖಲು ಮತ್ತು ಕಾಂಪ್ಲಿಮೆಂಟ್ರಿ ಫಾರ್ಮುಗಳು, ರಿಕಾರ್ಡ್ ಶೀಟುಗಳು ದೊರೆಯುತ್ತವೆ

ಮುದ್ರಿ ಪುಸ್ತಕ 1ಕ್ಕೆ 0—1—0
" " 50ಕ್ಕೆ 2—9—0
" " 100ಕ್ಕೆ 5—0—0

Navabharat Book Depot,
UDIPI.

The Canara Banking Corporation Limited.
(Incorporated in British India, with limited Liability.)
Estd: 1906
Head Office: **UDIPI**, (S. K.)

Authorised Capital	Rs.	25,00,000
Issued & Subscribed Capital	Rs.	16,00,000
Paid up Capital	Rs.	15,17,000
Reserves	Rs.	4,44,000

ಉಡುಪಿ, ಗುರುವಾರ ೨೦-೯-೧೯೪೫

ಕಾಂಗ್ರೆಸ್ ನಿರ್ಧಾರ.

ಮುಂಬರುವ ಕೇಂದ್ರ ಮತ್ತು ಪ್ರಾಂತಿಕ ಮಂತ್ರಿಮಂಡಲಗಳಲ್ಲಿ ಭಾಗವಹಿಸುವ ನಿರ್ಧಾರವನ್ನು ಪೂನೆಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಾಗಿದೆ. ನಾಳೆ ಬೊಂಬಾಯಿಯಲ್ಲಿ ಸೇರಲಿರುವ ತ. ಭಾ. ರಾಷ್ಟ್ರಸಭಾ ಸಮಿತಿಯು ಅದನ್ನು ನಿಶ್ಚಯಿಸಬಹುದು. ಪ್ರಮುಖರು ಜೈಲಿನಿಂದ ಬಿಡುಗಡೆಯಾದ ಮೇಲೆ ಕಾಂಗ್ರೆಸಿನ ಚುನಾವಣಾ ಪ್ರಣಾಳಿಕೆ ಪ್ರಕಟವಾಗಬಹುದು.

ಈ ಸಂದರ್ಭದಲ್ಲಿ ಜನತೆಯು ತಿಳಿದುಕೊಳ್ಳಬೇಕಾದ ಮುಖ್ಯಾಂಶಗಳೆಂದರೆ, ಚುನಾವಣಾರಂಗಕ್ಕೆ ಧುಮುಕಿಬಿಟ್ಟಿರುವ ಕಾಂಗ್ರೆಸಿಗೂ, ಇಷ್ಟರಲ್ಲೇ ಅದಕ್ಕಣಿಯಾಗಿರುವ ಇತರ ಪಕ್ಷಗಳಿಗೂ ಅಜಗಜಾಂತರವಿದೆ ಎಂಬುದನ್ನು ಮರೆಯಬಾರದು ಮಿಕ್ಕ ಪಕ್ಷಗಳಿಗೆ ನ್ಯಾಯವಿಧಾಯಕ ಸಭೆಯ ಸ್ಥಾನಗಳೇ ಸರ್ವಸ್ವ; ಹೆಚ್ಚಿನ ಪಕ್ಷಗಳ ಜನನ ಮತ್ತು ಜೀವನದ ಗುರಿಯೇ ಅದು. ಕಾಂಗ್ರೆಸಿನ ಮಟ್ಟಿಗೆ ಹಾಗಲ್ಲ ಚುನಾವಣೆಯೆಂಬುದು ಅವರ ಸ್ವಾತಂತ್ರ್ಯ ಸಾಧನ ಹಾದಿಯಲ್ಲಿ ಬರಬಹುದಾದ ಕಡಿಮೆಯ ಮೆಟ್ಟಿಲು ಮಾತ್ರ. ಅವರ ಮುಂದಿರುವ ಉಗ್ರ ಕಾರ್ಯಕ್ರಮದ ಗಿಡ್ಡ ಹಾದಿಯನ್ನು ಪಿಡಿಯಬೇಕಾಗಿ ಬಂದಾಗ ಕಾಂಗ್ರೆಸು ಈ ಮೊದಲು ಬೇರೆ ದಿಕ್ಕನ್ನೇ ಹಿಡಿದು ಸಾಗಿದ ನಿದರ್ಶನಗಳಿವೆ. ಎಸಂಬ್ಲಿ ಸ್ಥಾನಗಳ ಸಂಪಾದನೆಯಿಂದ ಹಿಗ್ಗುವ ಅಲ್ಪತೃಪ್ತಿಯ ಸಂಸ್ಥೆ ಕಾಂಗ್ರೆಸ್ಸು; ದೇಶ ಸ್ವಾತಂತ್ರ್ಯ ಲಭಿಸುವ ವರೆಗೂ ಅದು ಅತೃಪ್ತ ಸಂಸ್ಥ. ಕಾಂಗ್ರೆಸು ಸಂದರ್ಭಾನುಸಾರವಾಗಿ ಚುನಾವಣೆಗಳನ್ನು ಕಡೆಗಣಿಸಿದುದೂ ಇದೆ; ಎಸೆಂಬ್ಲಿ ಸೀಟುಗಳಿಂದ ಇಳಿದು ಬಂದುದೂ ಇದೆ ಅದು ಬಿಟ್ಟು ಬಂದ ಸ್ಥಳಗಳೆಲ್ಲಾ ಬಂಜರುಬೀಳುತ್ತಿದ್ದುವು. ಅಧಿಕಾರ ಅಲ್ಲಿ ಕಳೆಗಳು ಮಾತ್ರ ಹುಟ್ಟುತ್ತಿದ್ದುವು ಪೂನಾ ನಿರ್ಧಾರವಾಗುವ ವರೆಗೆ ಮುಂಬರುವ ಚುನಾವಣೆಗಳಲ್ಲಾದರೂ ಕಾಂಗ್ರೆಸು ಭಾಗವಹಿಸುವದೆಂಬ ನಂಬಿಕೆಯಿರಲಿಲ್ಲ, ಅದರಲ್ಲೂ ಈ ರೀತಿ ಶರ್ತ ವಿಸಹ ಅದು ಮುಂದಾಗುವದೆಂಬ ನಿರೀಕ್ಷೆ ಹೆಚ್ಚಿನವರಿಗಿರಲಿಲ್ಲ ಸದ್ಯ ದೇಶದಲ್ಲಿರುವ ಪರಿಸ್ಥಿತಿಯಂತಹದು. ಸರಕಾರದ ಮಜೀ ಸಂದೇಹಕ್ಕಾಸ್ಪದವಿತ್ತಿದೆ; ಅದರ ಯಥಾರ್ಥತೆಯ ಮುಂದೆ ಪ್ರಶ್ನಾರ್ಥಕ ಚಿಹ್ನೆ ಬಿದ್ದಿದೆ. ಸರಕಾರದ ಘೋಷಣೆಯೇ ನೆಂಬುದೂ ಪ್ರಕಟವಾಗಿಲ್ಲ; ಯಾವ ಪ್ರಶ್ನೆಯನ್ನು ಮುಂದಿಟ್ಟು ಕೊಂಡು ಸ್ಪರ್ಧಿಸಲಿ ಎಂಬುದು ಸ್ಪಷ್ಟವಿಲ್ಲ. ಮುಂದಿನ ರಾಜ್ಯ ರಚನೆಯ ಮಸಿಕುಡಿಕೆಯನ್ನು ಹೊರತು ಯಾವುದೊಂದು ಚಿತ್ರವನ್ನೂ ಸರಕಾರವು ಹಿಂದೀಯರ ಮುಂದೆ ಹಿಡಿದಿಲ್ಲ. ಇಂದಿನ ಯುದ್ಧೋತ್ತರ ಜಗತ್ತಿಗೆ 1919ರ ನೈತಿಕ್ಯವನ್ನು ತೋರಿಸುತ್ತಾ ನಿಂತಿರುವ ಏಕ ಮಾತ್ರ ಶಿಲಾಸ್ತಂಭವೆಂಬಂತೆ ಭಾರತೀಯ ಕೇಂದ್ರ ಎಸೆಂಬ್ಲಿಯಿದೆ. ಪ್ರಾಂತಿಕ ಎಸೆಂಬ್ಲಿಗಳೂ 1935ರವೇ. ಇಪ್ಪೋದು ಹಳೆಯ ರಾಜ್ಯಭಾರ ಪದ್ಧತಿ ಈಗ ಇಡೀ ಪ್ರಸಂಚದಲ್ಲಿ ಬೇರೆಲ್ಲಿಯೂ ಕಾಣ ಸಿಗಲಾರದು ಇನ್ನು ಆ ಮತದಾರ ಪಟ್ಟಗಳೋ—ಹಲವು ವರುಷಗಳಿಗೆ ಹಿಂದಿನವು. ಜನಸಂಖ್ಯೆಯ ಸೇಕಡಾಂಶ 3 ಮತ್ತು 1ಕ್ಕಿಂತ ಕಡಿಮೆ ಮತದಾರರಿರುವ ಪದ್ಧತಿಯು ಮಾಕಂತಿರಲಿ, ಆ ಪಟ್ಟಗಳಲ್ಲಿರುವ ತಪ್ಪುಗಳು—ಕಾಣೆಯಾಗಿರುವ ಮತ್ತು ಸುಳ್ಳು ಸುಳ್ಳೇ ಸೇರಿರುವ ಹೆಸರುಗಳು—ಅಗಣಿತ. ಹತ್ತು ವರುಷಗಳಿಗೂ ಮೊದಲು ತಯಾರಾಗಿದ್ದ ಪಟ್ಟಗಳವು. ಈ ಅವಧಿಯಲ್ಲಿ ಮತಾಧಿಕಾರದ ಅರ್ಹತೆ ಗಳಿಸಿದವರನ್ನು ಕೇಳುವವರಿಲ್ಲವೆಂದಾಗಿದೆ. ಮತದಾರ ಪಟ್ಟಿಗಳನ್ನು ಇದ್ದ ರೂಪದಲ್ಲೇ ಸರಿಗೊಳಿಸುವ ಕೆಲಸ ಕೂಡಾ ಸುಗಮವಾಗಿ ನಡೆದಿಲ್ಲ. ಕಾಂಗ್ರೆಸಿನ ಮಟ್ಟಿಗೆ ಚುನಾವಣೆಗಳೆತ್ಯಾಗಿರುವ ಪ್ರಚಾರಾನುಕೂಲತೆಗೆ ಪ್ರತಿಬಂಧಗಳಾಗಿ ಸರಕಾರೀ ನಿರ್ಮಿತ ತಡೆ ತೊಡರುಗಳೆನ್ನೂ ಉಳಿಸಿವೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸು ಚುನಾವಣೆಯನ್ನು ಬಹಿಸ್ಕರಿಸುತ್ತಿದ್ದರೆ ಅದೊಂದು ಖಂಡನೀಯ ಮುಷ್ಕರವಾಗುತ್ತಿದ್ದಿಲ್ಲ. ಭಾವೀ ರಾಜ್ಯಾಂಗ ರಚನೆಯ ಹೊಣೆ ಹೊರಲಿರುವ ಪ್ರತಿನಿಧಿಗಳನ್ನಾರಿಸುವ ಹಕ್ಕು ಸ್ವಾಯತ್ತಶಾಸನ ಸಂಸ್ಥೆಗಳಿಗಿರದೆಂದಾಗಬೇಕು-ಆ ವಿಷಯ ಈ ಚುನಾವಣೆಯಲ್ಲಿ ಭಾಗವಹಿಸುವಂತಿಲ್ಲವೆಂಬ ಶರ್ತವನ್ನೊಡ್ಡುವದಂತೂ ಅಗತ್ಯವಿಶ್ಕೆಂದು ನಮ್ಮ ಅಭಿಪ್ರಾಯ. ಅದರೂ ಮೇಲಿನ ಕೊರತೆಗಳ ಬ್ಲ್ಯಾಪಕ, ಮತ್ತದರ ಖಂಡನೆ ಮಾಡುತ್ತಾ ಕಾಂಗ್ರೆಸು ಚುನಾವಣೆಗಿಳಿಯುವ ನಿರ್ಧಾರವನ್ನೇ ಮಾಡಿದೆ. ಈ ಎಡೆಗಾರಿಕೆಗೆ ಜನತೆಯ ಮೇಲಿರುವ ವಿಶ್ವಾಸವೇ ಆಧಾರ. ಕೂಡಲೇ ಸ್ವಾತಂತ್ರ್ಯವೆಂಬ ಮುಖ್ಯ ಪ್ರಶ್ನೆಯೊಂದನ್ನೇ ಮುಂದಿಟ್ಟು, ಸ್ವಾಸ್ಥಿಕಾರಕ್ಕಾಗಿ ಜನಮತ ವೆಕ್ಕು ಪ್ರಶ್ನುಟ್ಟಗೊಂಡಿದೆ ಎಂಬುದನ್ನು ಸರಕಾರೀ ನಿರ್ಮಿತಿ ಹಿಂದಿನ ಸಂಕುಚಿತ

ಮುಂದಿನ ಅಕ್ಕಿ ಭತ್ತ ಸಂಗ್ರಹ.

ದ. ಕ. ಜಿಲ್ಲೆಯಲ್ಲಿ ಈಗಿನ ಮೊದಲನೆ ಬೆಳೆಯ ಅಕ್ಕಿ ಭತ್ತವನ್ನು ಸ್ಟೋರುಗಳಿಗೆ ಗೊಪ್ಪಿಸುವ ವಾಯಿದೆಗಳು ಜಿಲ್ಲಾ ಕಲೆಕ್ಟರರಿಂದ ಪ್ರಕಟಿಸಲ್ಪಟ್ಟಿದ್ದು ಆವುಗಳನ್ನು ಕಳದ ಸಂಚಿಕೆಯಲ್ಲಿ ಕೂಡಲಾಗಿದೆ. ಹೊಸದುರ್ಗ ಮತ್ತು ಜೆನ್ನಾಲಗಳನ್ನು ಬಿಟ್ಟು(ಅವುಗಳ ವಾಯಿದೆ ಮತ್ತೂ ಸಮೀಪ) ಜಿಲ್ಲೆಯ ಇತರ ಕಡೆಗಳವರೆಲ್ಲಾ ಭತ್ತವಾಗಿದ್ದರೆ ಆರ್ಥಾಂಶವನ್ನು ತಾರೀಕು 31-10-45ರೊಳಗೆ; ಉಳಿದರ್ಧವನ್ನು ತಾ 15-11-45ರೊಳಗೆ; ಅಕ್ಕಿಯಾಗಿದ್ದರೆ ಕಾಲಂಶವನ್ನು ತಾ. 31-10 45 ರೊಳಗೆ, ಮತ್ತೆ ಕಾಲಂಶವನ್ನು ತಾ. 30-11-45ರೊಳಗೆ. ಆ ಮೇಲಿನ ಕಾಲಂಶವನ್ನು ತಾ. 31-12-45ರೊಳಗೂ ಉಳಿಯುವ ಕಾಲಂಶವನ್ನು ತಾ. 31-1-46ರೊಳಗೂ ಸೆಲಾಯಿಸಿ ಮುಗಿಸಬೇಕು.

ಈ ನಿರ್ಧಾರವನ್ನು ಮಾಡುವಾಗ ಹಸುಗೇ ಕ್ಷೇತ್ರಗಳಿಗೆ ಅಕ್ಕಿಯ ಅಭಾವವಿರುವದೊಂದೇ ಮುಖ್ಯವಾಗಿ ಅಧಿಕಾರಿಗಳ ದೃಷ್ಟಿಪಥದಲ್ಲಿರಬೇಕೆಂಬುದು ನಿಸ್ಸಂದೇಹ; ಎರಡನೆಯದಾಗಿ ಕಟಾವಿನ ದಿನಗಳ ಲೆಕ್ಕಾಚಾರವನ್ನೂ ಅವರು ನೋಡಿರಬಹುದೆಂದು ನಾವು ಒಪ್ಪಿಕ್ಕೇನೆ. ಆದರೆ ನಾಗುವಳ್ಳಿದಾರರ ಅನುಕೂಲತೆಯ ಕಡೆಗೆ ಲಕ್ಷ್ಯ ಹೋಗಿಲ್ಲ, ಅಥವಾ ಅದರ ಪರಿಜ್ಞಾನವಿಲ್ಲ ವೆಂಬುದಂತೂ ಖಂಡಿತ. ದೃಷ್ಟಾಂತಕ್ಕಾಗಿ —ಭತ್ತವಾಗಿದ್ದರೆ ಒಕ್ಟೋಬರ್ ಅಂತ್ಯದೊಳಗೆ (ತುಳು ತಿಂಗಳ ಜೊಂತೆಲ್ ಮಧ್ಯದಲ್ಲಿ) ಆರ್ಧಾಂಶವನ್ನು ರೈತರು ಕೊಡಬೇಕು. ಉಳಿದ ಆರ್ಧಾಂಶ ಮತ್ತೆ ಒಂದು ತಿಂಗಳೊಳಗೆ ಪೂರ್ಣ ನಿಂದಾಯವಾಗಬೇಕು. ಸ್ಟೋರುಗಳ ಸಂಗ್ರಹಾನುಕೂಲತೆಯನ್ನು ಗಮನಿಸಿಯೇ ಭತ್ತ ಸಂದಾಯಕ್ಕೆ ಎರಡು ವಾಯಿದೆಗಳನ್ನು ಕೊಟ್ಟುದಾಗಿರಬಹುದು. ನವಂಬರ್ ಅಂತ್ಯದ ವರೆಗೂ ಬೆಳೆ ಕಟಾವಿದೆಯೆಂಬ ಭಾವನೆಯಿಂದ ಅಧಿಕಾರಿಗಳು ಒಂದು ಕಂತನ್ನು ಕ್ಷೇತ್ರದಲ್ಲಾದರೂ ಪ್ರದರ್ಶಿಸಿಯೇ ತೀರಬೇಕೆಂಬುದಕ್ಕಾಗಿಯೇ ಈ ನಿರ್ಧಾರ. ಆದ್ದರಿಂದ ಕಾಂಗ್ರೆಸನ್ನು ಸಮರ್ಥಿಸಿದರೆ ಸ್ವಾತಂತ್ರ್ಯವನ್ನು ಕೇಳಿದಂತೆ, ಅದನ್ನೆಳೆದಂತೆ, ಎಂಬುದನ್ನು ಪ್ರತಿಯೊಬ್ಬರೂ ತಿಳಿದಿರಬೇಕು. ಪರಾಧೀನ ರಾಷ್ಟ್ರದಲ್ಲಿ ಇದಕ್ಕಿಂತ ಭಿನ್ನವಾದ ಗುರಿಯುಳ್ಳ ಪ್ರಜೆಯೊಂದು ಪಕ್ಷವೂ ಒಂದಲ್ಲೊಂದು ವಿಧದಿಂದ ಸರಕಾರೀ ಪಕ್ಷವೆಂದೇ ಭಾವಿಸಬೇಕು. ಜನತೆಯು ಇಂದಿನಿಂದಲೇ ಈ ಹೋರಾಟಕ್ಕೆ ತಯಾರಾಗಬೇಕು. ಮತದಾರ ಪಟ್ಟಿಗಳ ದುರಸ್ತಿಗಾಗಿ ಮದ್ರಾಸ್ ಸರಕಾರವು ಈಗತಾನೇ ಪ್ರಕಟಿಸಿರುವ ವಿಧಾನಗಳನ್ನು ಇನ್ನೊಂದೆಡೆಯಲ್ಲಿ ಕೊಟ್ಟಿದ್ದೇವೆ. ಅದನ್ನು ಗಮನಿಸಿ ಅರ್ಹತೆಯುಳ್ಳವರೆಲ್ಲಾ ಈ ತಿಂಗಳ ಅಂತ್ಯದೊಳಗೆ ಮತ್ತು ಒಕ್ಟೋಬರ 15ರಲ್ಲಿ ತಮ್ಮ ಹೆಸರು ಮತದಾರ ಪಟ್ಟಿಯಲ್ಲಿ ಸೇರಿಯಂತೆ ನೋಡುವುದು ಅತೀ ಅಗತ್ಯ. ಎಲ್ಲರಿಗೂ ಮತಾಧಿಕಾರ ಬೇಕಾಗಿರುವಾಗ, ಆ ಹಕ್ಕನ್ನು ಇದ್ದವರಾದರೂ ಪ್ರಮಾದವಶಾತ್ ಅದನ್ನು ಕಳಕೊಳ್ಳದಂತಾಗಲಿ.

ಆ ಕಾಲಕ್ಕೆಟ್ಟುದಲ್ಲ; ಯಾಕೆಂದರೆ ಒಕ್ಟೋಬರ್ ಅಂತ್ಯದೊಳಗೆ ಆರ್ಧಾಂಶ ಕೊಡಬೇಕೆಂದು ವಿಧಿಸುವಾಗ ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಬೆಳೆ ಕಟಾವು ಆ ಅವಧಿಯೊಳಗೆ ಪೂರ್ಣ ಮುಗಿಯುತ್ತೆಂದೇ ಅಧಿಕಾರಿಗಳ ಅಭಿಪ್ರಾಯವಿರಬೇಕು. ಅಥವಾ ಅತ್ಯ ಕಟಾವಾಗುತ್ತಾ ಹೋದಂತೆ ಇತ್ತ ಭತ್ತವು ಸ್ಟೋರುಗಳಿಗೆ ಸಾಗುತ್ತಿರಬೇಕೆಂಬ ಭಾವನೆಯಿರಬಹುದು ಇದು ಬೇಸಾಯ ಕ್ಷೇತ್ರದ ಅನುಭವವಿಲ್ಲದುದರಿಂದಾಗಿರುವ ಪ್ರಮಾದ. ಇಡೀ ಜಿಲ್ಲೆಯ ಭಾಗಗಳ ಪರಿಜ್ಞಾನದಿಂದ ಹೇಳುವದಾದರೆ ಒಕ್ಟೋಬರ್ ಅಂತ್ಯ ಅಥವಾ ಬೊಂತೆಲಿನ ಪ್ರಥಮ ಭಾಗವೆಂದರೆ ಭತ್ತವು ಗದ್ದೆಯಿಂದ ಅಂಗಳಕ್ಕೆ ಬರಬೇಕಾದ ಕಾಲ -ಕಣಜದಿಂದ ಸ್ಟೋರಿಗೆ ಬರುವಂತಹ ಸಮಯವಲ್ಲ ಸರ್ವ ಸಾಮಾನ್ಯವಾಗಿ ರೈತನೂ ಅವನ ಬಿಳೆಯೂ ಗದ್ದೆ—ಅಂಗಣಗಳ ಓಡಾಟದಲ್ಲಿರುವ ಪರಿಶ್ರಮದ ಕಾಲವದು. ಈ ಕಾಲದಲ್ಲೇ ಅವನ ಹೆಸಿ ಹೆಸಿ ಭತ್ತವನ್ನು ಸ್ಟೋರುಗಳಿಗೊಪ್ಪಿಸಬೇಕೆಂಬ ಆಪತ್ತನ್ನೊಡ್ಡಬಹುದೆ? ಹೆಸಗೇ ಕ್ಷೇತ್ರಗಳಲ್ಲಿ ಅಕ್ಕಿಯ ಅಭಾವ ಬಹಳವಿರುವುದರಿಂದ ವಿಶೇಷತಹ ಅವಸರದ ಆವಶ್ಯಕತೆಯಿದೆ; ಆದರೆ ಇತ್ತಲ್ಲ. ಇಡೀ ಜಿಲ್ಲೆಯ ಪ್ರಥಮ ಸಾಗುವಳ್ಳಿಯ ಆರ್ಧಾಂಶದಷ್ಟು ಉತ್ಪತ್ತಿಯೂ ಈಗಲೇ ಊಟಕ್ಕೆ ಬೇಕೆಂದಾದರೆ ಮುಂದಾರು ಗತಿ? ಆದ್ದರಿಂದ ಅಧಿಕಾರಿಗಳು ಈ ರೀತಿ ಸರ್ವತ್ರ ಅನ್ವಯಿಸುವ ಸ್ಥೂಲ ಯೋಜನೆಯನ್ನು ಜ್ಯಾರಿಗೊಳಿಸಿ ತಮ್ಮ ಕೆಲಸ ಸುಲಭ ಮಾಡಿಕೊಳ್ಳುವದಕ್ಕಿಂತ ತುಸು ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಉದ್ದೇಶ ಸಾಧನೆಯಾಗುವದರೊಂದಿಗೆ ರೈತರಿಗಾಗುವ ತೊಂದರೆಯೂ ತಪ್ಪಬಹುದು. ಸೆಪ್ಟೆಂಬರ ಅಂತ್ಯ ಅಥವಾ ಒಕ್ಟೋಬರ್ ಆದಿ ಭಾಗದಲ್ಲೇ ಕಟಾವಾಗಿ ಒಕ್ಟೋಬರ್ ಅಂತ್ಯದೊಳಗೆ ಒಣಗಿ ತಯಾರಾಗುವ ಭತ್ತವು ಜಿಲ್ಲೆಯಲ್ಲಿ ಅಲ್ಲಲ್ಲಿಂದ ದೊರೆಯಬಲ್ಲುದು. ಅದು ಸದ್ಯದ ಆವಶ್ಯಕತೆಗೆ ಸಾಕಾಗಬಲ್ಲುದು. ಆ ಕ್ಷೇತ್ರಗಳನ್ನೇ ಆರಿಸಿ ಅವುಗಳನ್ನಷ್ಟೇ ರಿಕ್ವಿಶಿಶನ್ ಮಾಡಿದರೆ ಆಗದೆ? ಅಕ್ಕೇ ಸಂಗ್ರಹದ ಕುರಿತೂ ಬೇರೆ ಮಾತಾಡಬೇಕೆಂದಿಲ್ಲ; ಒಕ್ಟೋಬರಿನೊಳಗೆ ಜಿಲ್ಲೆಯ ಸರ್ವ ಕಡೆಗಳಲ್ಲೂ ಹಸೀ ಭತ್ತವನ್ನು ಕುಟ್ಟಿಸಿ ಅನ್ನದಂತಹ ಅಕ್ಕಿಯನ್ನು ತಯಾರುಮಾಡಿಸಿ ಸ್ಟೋರುಗಳಿಗೆ ತುಂಬಿಸುವದರಿಂದ ರೈತಿಗಾಗುವ ನಷ್ಟ ಅಸಹನೀಯ. ಬಳಸುವವರಿಗೂ ಹಿತಕರವಲ್ಲ. ನಾವು ಸೂಚಿಸಿದ, ಬೇಗನೇ ಕಟಾವಾಗುವ ಆ ಕೆಲವು ಕ್ಷೇತ್ರಗಳ ಭತ್ತವನ್ನೇ ಅಕ್ಕಿ ಮಾಡಿಸಲಿ; ಸಾಗುವಳ್ಳಿದಾರರಿಗೆ ಉಪದ್ರವವಾಗದಂತೆ ತಮ್ಮ ಉದ್ದೇಶ ಸಾಧಿಸಿಕೊಳ್ಳಲಿ ಎಂದು ಸೂಚಿಸುತ್ತೇವೆ.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

ವೋಟಿನ ಅರ್ಹತೆಯುಳ್ಳವರ ಅವಗಾಹನಗಾಗಿ—

ಮತದಾರ ಪಟ್ಟಿಗಳ ತಿದ್ದುಪಡಿಗಾಗಿ ಮದ್ರಾಸ್ ಸರಕಾರದ ಪ್ರಕಟಣೆ.

ಮಾರ್ಚಿಯಲ್ಲಿ ಸಾರ್ವತ್ರಿಕ ಚುನಾವಣೆ.

ಇವೇ ಸೆಪ್ಟೆಂಬರ್ ತಾ. 17ರಲ್ಲಿ ಮದ್ರಾಸ್ ಸರ್ಕಾರವು ಈ ಕೆಳಗಣ ಸಾರಾಂಶದ ಪ್ರಕಟಣೆಯನ್ನಿತ್ತಿದೆ:—

ಸಾಧ್ಯವಿದ್ದಷ್ಟು ಬೇಗನೆ ಚುನಾವಣೆಗಳನ್ನು ನಡೆಸಬೇಕೆಂಬುದೇ ನಿಶ್ಚಿತಕೋದ್ದೇಶವೆಂಬುದನ್ನು ಸಾರ್ವಜನಿಕರು ತಿಳಿದಿರಬೇಕು. ಕೇಂದ್ರ ಎಸೆಂಬ್ಲಿಯ ಮತದಾರ ಪಟ್ಟಿಗಳ ಪರಿಷ್ಕರಣವು ಸದ್ಯದಲ್ಲೇ ಪೂರ್ಣಗೊಳ್ಳಲಿರುವದರಿಂದ ಆ ಸಂಬಂಧದಲ್ಲಿ ಕಷ್ಟವೇನೂ ಇಲ್ಲ. ಆದ್ದರಿಂದ ಹೊಸ ವರುಷದಾದಿ ಭಾಗದಲ್ಲಿ ಬಜೆಟ್ ಮಂಜೂರಾತಿಗೆ ಹೊಸ ಕೇಂದ್ರ ಎಸೆಂಬ್ಲಿಯೇ ಸೇರಲಾಗುವಂತೆ ಸಕಾಲದಲ್ಲಿ ಕೇಂದ್ರ ಚುನಾವಣೆಗಳು ನಡೆಯಬಲ್ಲವು. ಪ್ರಾಂತಿಕ ಎಸೆಂಬ್ಲಿಯ ಪಟ್ಟಿಗೆ, ಈ ಪ್ರಾಂತ್ಯದಲ್ಲಿ ಮತದಾರರ ಪಟ್ಟಿಗಳನ್ನು ಪೂರ್ಣ ಪರಿಷ್ಕಾರಗೊಳಿಸುವದಾದರೆ 1946ನೇ ಎಪ್ರಿಲಿನೊಳಗೆ ಅದು ಮುಗಿಯುವದು ಅಸಾಧ್ಯ. ಹಾಗೆ ಪಟ್ಟಿಗಳನ್ನು ತಿದ್ದಲು 1938ರಲ್ಲಿ ಸುಮಾರು 6 ತಿಂಗಳು, 1939ರಲ್ಲಿ ಸುಮಾರು 8 ತಿಂಗಳು, ಮತ್ತು 1941ರಲ್ಲಿ ಸುಮಾರು 11 ತಿಂಗಳುಗಳು ಹಿಡಿದಿದ್ದುವು. ಪ್ರಚಲಿತ ಪಟ್ಟಿಗಳನ್ನು ಪರಿಷ್ಕರಿಸುವ ಆಜ್ಞೆಯೇನೋ 1945ನೇ ಅಗೋಸ್ತು 21ರಲ್ಲಿ ಜ್ಯಾರಿಯಾಗಿದ್ದಿತು.

ಬೇರೆ ಬೇರೆ ಕಾರ್ಯರಂಗಗಳ ನಡುವೆ ತುಸು ದೀರ್ಘಾವಧಿಯ ವಿರಾಮವು ಬೇಕಾಗುತ್ತದೆ. ಯಾಕಂದರೆ ಈ ಕೆಲಸ ದೊಡ್ಡದಿದೆ; ಹಾಗೂ ಸದ್ಯದ ವಿಶೇಷ ಪರಿಷ್ಕಾರವೆಲ್ಲ ಅದನ್ನು ಜ್ಯಾರಿಗೆ ತರಲು ಕಷ್ಟವಿದೆ. ಆದ್ದರಿಂದ ಸಂಪೂರ್ಣ ತಿದ್ದಿದ ಮತದಾರ ಪಟ್ಟಿಯಿಂದ ಒಂದು ಚುನಾವಣೆ ನಡೆದು ಹೊಸ ಮಂತ್ರಿ ಮಂಡಲ ಅಧಿಕಾರ ಸ್ವೀಕರಿಸಲು ಮತ್ತೊಂದು ಬೇಸಿಗೆಯೊಳಗೆ ಸಾಧ್ಯವೇ ಇಲ್ಲ. ನುದ್ದಸಿನಲ್ಲಿ ಮೇ ಅಥವಾ ಜೂನಿನೊಳಗೆ ಚುನಾವಣೆ ನಡೆಸಬಹುದಾದರೂ ಇತರ ಪ್ರಾಂತ್ಯಗಳಲ್ಲಿ ಅಸಾಧ್ಯ ಎಲ್ಲಾ ಪ್ರಾಂತ್ಯಗಳಲ್ಲೂ ಏಕ ವಿಧಾನವಿರಬೇಕೆಂಬ ಮತ್ತು ಸಾಧ್ಯವಿದ್ದಷ್ಟು ಬೇಗನೇ ಸಾಮಾನ್ಯ ಪರಿಸ್ಥಿತಿಯನ್ನು ನಿರ್ಮಿಸಬೇಕೆಂಬ ಬಯಕೆಯಿರುವುದರಿಂದ, ಮತದಾರ ಪಟ್ಟಿಗಳು ಸಂಪೂರ್ಣ ದುರಸ್ತಿಯಾಗುವ ವರೆಗೆ ಚುನಾವಣೆಗಳನ್ನು ಹಿಂದೆ ಹಾಕಕೂಡದೆಂದು ನಿರ್ಧಾರವಾಗಿದೆ. ಆದರೆ ಸದ್ಯದ ಮತದಾರ ಪಟ್ಟಿಗಳಿಂದಲೇ ಚುನಾವಣೆಗಳನ್ನು ನಡೆಸುವದು ತೀರಾ ಅಸಮಾಧಾನಕರವೆಂಬುದು ಸ್ಪಷ್ಟ. ಆದ್ದರಿಂದ 1936ನೇ ಮದ್ರಾಸ್ ಲೆಜಿಸ್ಲೇಟಿವ್ ಸಿಯಮಗಳ ಪೀಠಿಕಾ ಭಾಗದ 8ನೇ ನಿಯಮ (a)ವನ್ನು ಆಧರಿಸಬೇಕೆಂದು ನಿರ್ಧರಿಸಲಾಗಿದೆ. ಈ ನಿಯಮಕ್ಕನುಸಾರವಾಗಿ ಮತದಾರ ಪಟ್ಟಿಯು ತಿದ್ದುಪಡಿಯಾಗಬೇಕೆಂದು ಯಾವನಾದರೊಬ್ಬನು ರಿಜಿಸ್ಟ್ರೇಶನ್ ಆಫೀಸರರಿಗೆ ಅರ್ಜಿಕೊಟ್ಟಲ್ಲಿ, ಸಂಬಂಧಪಟ್ಟ ಪಟ್ಟಿಗೆ ಅಂತಹ ತಿದ್ದುಪಡಿಗಳ ಒಂದು ಪಟ್ಟಿಯನ್ನು ತಯಾರಿಸಿ ಸೇರಿಸುವಂತೆ ಗವರ್ನರರು ಆಯಾಯ ರಿಜಿಸ್ಟ್ರೇಶನ್ ಆಫೀಸರರಿಗೆ ತಿಳಿಸುವರು. ಗವರ್ನರರ ಆಣತಿಯೊಂದು ಬಾಕಿ ದೊರೆತೊಡನೆ, ಸೊದಲೇ ಸಿದ್ಧ ನಿರುವ ಗಳನ್ನು ಇನ್ವಿವ್ ಟೇರ್ಸ್ ಮತ್ತು ರಿವಿನ್ಯೂ ಅಧಿಕಾರಿಗಳಿಂದ ತಿಳಿದು ರಿಜಿಸ್ಟ್ರೇರ್ ಆಫೀಸರರು ತನ್ನಿಚ್ಛೆಯಂತೆ ಕಾರ್ಯ ಮಾಡಬಹುದು.

ಕೆರಕಂದಾಯಗಳಿದ್ದವರಿಗೆ—

ಪೇಟೆಲಿನ ನಿಯಮದನ್ವಯ ಗವರ್ನರರು ಅರ್ಜಿಗಳನ್ನು ಆಮಂತ್ರಿಸುತ್ತಾರೆ. **ಸೆಪ್ಟೆಂಬರ್ 30ರೊಳಗೆ ರಿಜಿಸ್ಟ್ರೇಶನ್ ಆಫೀಸರರಿಗೆ ಕೈಸೇರುವ ಎಲ್ಲಾ ಅರ್ಜಿಗಳನ್ನೂ ಗಮನಿಸಲಾಗುವದು** 1936ನೇ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿ ನಿಯಮಗಳ ಸೆಕ್ಷನ್ 12ನೇ ನಿಯಮ ಮತ್ತು ಅದಕ್ಕೆ ಸಂಬಂಧಿಸಿದ ಇತರ ಸೆಕ್ಷನುಗಳ ಇತರ ನಿಯಮಗಳಿಗೆ ಸಂಬಂಧಿಸಿದ (ಆಕ್ಷೇಪಣೆ ಮಾತಾಧಿಕಾರವುಳ್ಳವಂ) ಕುರಿತು ರಿಜಿಸ್ಟ್ರೇಶನ್ ಆಫೀಸರರಿಗೆ ಗವರ್ನರರು ಆಣತಿ ಕಳುಹಿಸುವಂತಹ ಸಂದರ್ಭಗಳಲ್ಲಿ **ಈ ಅವಧಿಯು ಒಕ್ಟೋಬರ್ ತಾ.1** ರಿಜಿಸ್ಟ್ರೇಶನ್ ಆಫೀಸರರಿಂದ ತಿದ್ದಲ್ಪಟ್ಟ ಮತದಾರ ಪಟ್ಟಿಗಳು ಪ್ರಕಟಿಸಲ್ಪಡುವ ದಿನ ನವಂಬರ್ 21. ಆಕ್ಷೇಪಗಳನ್ನು ಅಂಗೀಕರಿಸುವದಿನ ದಶಂಬರ್ ತಾ. 4; ಮತ್ತವುಗಳ ಪ್ರಕಟಣೆ ದರಂಬರ್ ತಾ.8ಕ್ಕೆ ಪರಿಷ್ಕರಣಾಧಿಕಾರಿಗಳು ದಶಂಬರ್ ತಾ. 14ಕ್ಕೆ ಕೂಡಿಬಂದು, 8ನೇ ನಿಯಮದನ್ವಯ ತಿದ್ದುಪಡಿಗೊಂಡ ಪಟ್ಟಿಗಳು 1946ನೇ ಜನವರಿ 4ಕ್ಕೆ ಪ್ರಕಟಣೆಗೊಳ್ಳುವವು. ಪ್ರಾಥಮಿಕ ಚುನಾವಣೆಯು ಫೆಬ್ರವರಿಯ ಅದಿಭಾಗದಲ್ಲೇ ಮುಗಿದು **ಕೊನೆಯ ಸಾರ್ವತ್ರಿಕ ಚುನಾವಣೆಗಳನ್ನು ಮಾರ್ಚಿ ತಿಂಗಳ ಅಂತ್ಯಕ್ಕೆ ನಡಿಸಲು ಸಾಧ್ಯವಾಗುವದು.** ಹೀಗಾಗಿ ಹೊಸ ನ್ಯಾಯನಿಧಾಯಕ ಸಭೆಗಳು 1946ನೇ ಎಪ್ರಿಲಿನಲ್ಲಿ ಸೇರಬಲ್ಲವು.

ಅಕ್ಷರಸ್ಥರಿಗೆ—

ಕೇವಲ ಆರ್ಜಿಯ ಮೂಲಕ ಮತದಾರ ಪಟ್ಟಿಯಲ್ಲಿ ಸೇರತಕ್ಕವರಿಗೆ ಸರಿಯಾದ ಸಂದರ್ಭ ದೊರೆಯಲಾಗುವಂತೆ **ಒಕ್ಟೋಬರ್ 15ನೇ ತಾರೀಕನ್ನು 'ನಿಯೋಜಿತ ದಿನ'ವಾಗಿ ಗಣಿಸಲಾಗಿದೆ ಆರ್ಜಿ** ಮೂಲಕ ದಾಖಲಾಗುವವರಿಂದರೆ ತಮ್ಮ ಅರ್ಜಿಗಳನ್ನು ಬರೆಯುವಷ್ಟು ಅಕ್ಷರಜ್ಞಾನವಿದ್ದವರು. ಕಳದ ಅರ್ಧಿಕ ವರುಷವನ್ನು ಗಣಿಸಿಯೇ ತೆರಿಗೆ ಬ್ರಾಂಚ್ ಮನೆ ಬಾಡಿಗೆಯ ದೆಸೆಯ ಪೋಟಿಫ ಆಫೀಸ್ ಹುಟ್ಟುವಳಿಗೆ ಸಂಬಂಧಿಸಿದ ಪುರುಷಗಳಿಗೆ ಮತ್ತು ಗೆ ಕಳದ ಫಸ್ಲಿ ವರುಷವನ್ನೇ ಗಣಿಸಲಾಗುವದು. ಆದ್ದರಿಂದ ಇಂಥವರಿಗೆ ಒಕ್ಟೋಬರ್ 15, ಆದರೂ ಅದಕ್ಕಿಂತ ಮೊದಲೇ ಆದರೂ ಒಂದೇ ಸಿ.ಗಾಗಿ ಮತದಾರಪಟ್ಟಿಯ ತಿದ್ದುಪಡಿಗಾಗಿ ಬಂ.ವ ಇತರ ಅರ್ಜಿಗಳು ರಿಜಿಸ್ಟ್ರೇಶನ್ ಆಫೀಸರರ ಕೈಸೇರಬೇಕಾದ ಕೊನೆಯ ದಿನವಾಗಿ ಸೆಪ್ಟೆಂಬರ್ **30**ನ್ನು ನಿರ್ಧರಿಸಲಾಗಿದೆ. ಯಾಕಂದರೆ ಈ ಅರ್ಜಿಗಳನ್ನು ಗವರ್ನರರಿಗೆ ಕಳುಹಿಸಿ ಕೊಡಲಿಕ್ಕಿದೆ. ಮತ್ತು ಈ ತಿದ್ದುಪಡಿಗಳನ್ವಯ ಒಂದು ಪಟ್ಟಿಯನ್ನು ರಿಜಿಸ್ಟ್ರೇರನ್ ಆಫೀಸರರು ತಯಾರಿಸುವಂತೆ ಪೋರ್ಟ್‌ಸೈಂಟ್ ಜೋರ್ಜ್ ಗಝೆಟಿನಲ್ಲಿ ಪ್ರಕಟಣೆಕೊಡಬೇಕಾಗಿದೆ. ಹೆಚ್ಚಿನ ಸವಲತ್ತನ್ನು ಕೊಡಲು ಸಾಧ್ಯವಾಗದುದಕ್ಕಾಗಿ ಪಬ್ಲಿಕ್ಕಾಸವಿದೆ. ಆದರೆ ಸಾರ್ವಜನಿಕರು ಸಾಧ್ಯವಿದಷ್ಟು ಜಾಗನೇ ತನ್ನ ಅರ್ಜಿಗಳನ್ನು ಕಳುಹಿಸಿ ಸಹಕರಿಸುವರೆಂದು ಮದ್ರಾಸ್ ಸರಕಾರವು ಆಶಿಸುತ್ತದೆ

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. A 450/1945 ಆ 399/1937.

ಯಂ. ಸದಾಶಿವ ರಾವ್ ಸಬೀಲು, ಪುತ್ತೂರು-ರಿಸೀವರ ಅರ್ಜಿದಾರ.

ನಿ ಗೋಪಾಲಕೃಷ್ಣ ಕಡಬಬಳಿತ್ತಾಯ-ವಾದಿ-ಪ್ರತಿವಾದಿ, ಪಾರಿಪತ್ತರು ಸಬ್ಲಿಸೆಂಟಲ್ ಕಂಪನಿ ಎಡ್ರಿರು. ೨ ಅನಂತರಾಮ ಪಟ್ಟಿಲ್ಲಾಯ, ಸ್ಪಿಂಪ ಪಟ್ಟಿಲ್ಲಾಯರ ಪುಗ ಪುತ್ತೂರು ತಾಲ್ಲೂ ಮುಂಡೂರು ಗ್ರಾಮ. ೩ ಉಸ ಬಾಕ್ಕಿ, ಪುಟ್ಟಿಣ್ಣ ಬ್ಯಾರಿ ಯುಗ. ೪ ಬಾಲ ಪೂಜಾರಿ, ಮೊಮ್ಮಂಣ ಪೂಜಾರಿ ಯುಗ. ೫ ನಮ್ಮಾಲ ಗವುಡ, ಸಂಣಯ ಗೌಡ ಮಗ. ೬ ಕುಂಞಪ್ಪ ಗವುಡ, ಚ್ಯಾಪ ಗೌಡ್ರ ಮಗ. ೭ ಬೈತ ಗವುಡ, ಜತ್ತಂಣ ಗೌಡನ ಮಗ. ೮ ಮುಗ್ಗಪ್ಪ ಗೌಡ, ಅಲ್ಯಂಣ ಗೌಡನ ಮಗ ಸ್ವತ್ತುರು ತಾಲ್ಲೂ ರಾಮಕುಂಜ ಗ್ರಾಮ (ವಿರುದ್ಧ ಪಕ್ಷದವರೇ ಪ್ರತಿವಾದಿಗಳು) ಬಾಲಕೃಷ್ಣ. ೧೦ ಲಕ್ಷ್ಮೀನಾರಾಯಣ ಗೋಪಾಲಕೃಷ್ಣ ಕಡಬಬಳಿತ್ತಾಯರ ಪ್ಯಾಸಕುಕ್ಕಳು, ಕಾಸ್ತ್ರಗೋಡು ತಾಲ್ಲೂ ಜಿಲ್ಲೂರು ಗ್ರಾಮ. ಕೋರ್ಟು ಗಾರ್ಡಿಯನ್ ಶ್ರೀ ಭೀಮ ಭಟ್ ಎಸ್ಟೋಕೇಟ್, ಪುತ್ತೂರು

—ಎದ್ರಿರು.

ಸದ್ರಿ ವಿರುದ್ಧ ಅನೇ ನಂಬರಿನ ಎದ್ರಿರಿಗೆ ಈ ಸೂಲ್ಲ ತಿಳಿಯಪಡಿಸುವದೇನೆಂದರೆ

ನೀಲ್ಲಂಡ ವ್ಯಾಜ್ಯದಲ್ಲಿ R. E. A. 178/37ನೇ ಆರ್ಜಿ ಹ್ಮಂ ಪ್ರಕಾರವಾಗಿ ಅಸ್ತಿಗೆ ರಿಸೀವರನಾಗಿ ನೊಕ್ರರು ಮಾಡಲ್ಪಟ್ಟ ಅರ್ಜಿದಾರನು, ಸದ್ರಿ ರಿಸೀವರಿಕೆಯಿಂದ ತನ್ನನ್ನು ಡಿಚಾರ್ಜು ಮಾಡಬೇಕೆಂತ ನಗೈರೆ ಕೊಟ್ಟ ಮೇಲ್ಕಂಡ R. E. A. 450/45ನೇ ಆರ್ಜಿ ತಾ 27-9 45ಕ್ಕೆ ತನ್ನಿಗೆ ಇಟ್ಟುರುತ್ತ ಹೆಂತಲೂ, ಆ ಕುರಿತು ಆಕ್ಷೇಪಣೆಯುಳ್ಳವರು ಸದ್ರಿ ಹ್ಯಾದೆ ದಿನ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗಿ ಆಜಪರಿಶಕ್ಕದ್ದೆಂತಲೂ, ತಪ್ಪಿದ್ದೆ ಶಿಸ್ಯಾ ಪೂರ್ತಿಯುಕ್ತ ಕಂಡಂತೆ ತೀರ್ಮಾನಿಸಲಾದೀತೆಂತ ಸಹಾ ಕೋರ್ಟು ಹ್ಮಂ ಪ್ರಕಾರ ತಿಳಿಯಪಡಿಸಿಯದೆ.

Puttur 10-9-1945 — M. Sadashiva Rao. Receiver Petitioner

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ

ತಾರೀಕು **20—9—1945**ರಿಂದ

ಮಿನರ್ವದವರ ಚಿತ್ರ

ಸತ್ತರೊಂಕಾ ಸೌದಾಗರ್

ನಟರು:—

ಮಿನಾ & ಶೀಲಾ—ಪರೇಶ್ ಬ್ಯಾನರ್ಜಿ.

ಮುಖ್ಯ ಭೂಮಿಕೆಯಲ್ಲಿರುವ ಸಾಮಾಜಿಕ ಚಿತ್ರ.

ಸಂತರು:—

ಹುಡೀ ಪಿಕ್ಚರ್ಸ್‌ನವರು-

ಸಲ್ಮಾ - ಸಿತಾಲಾ, ಯಾಕುಬ್.

ಕಾಂಗ್ರೆಸಿನ ಚುನಾವಣಾ ಸಮಿತಿ

ಮುಂಬರುವ ಸಾರ್ವತ್ರಿಕ ಚುನಾವಣೆಯ ಕಾರ್ಯ ಕಲಾಪಗಳ ವ್ಯವಸ್ಥೆಗಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಈ ಕೆಳಗಿನ ಏಳು ಮಂದಿಯ ಉಸ ಸಮಿತಿಯೊಂದನ್ನು ರಚಿಸಿದೆ.

ತಾ. 30-9-45ರೊಳಗಾಗಿ ತಾಲೂಕು ತಹಸೀಲ್ದಾರರ ಮುಂದೆ ಸ್ವಂತ ಸಾಮಾನುಗಳಿಲ್ಲದ ಮತ್ತು ಅಲ್ಪ ಸಾಮಾನುಗಳಿಯಿದ್ದು ವಾರ್ಷಾವಧಿ ಖರ್ಚಿಗೆ ಸಾಕಾಗದಷ್ಟು ಹುಟ್ಟುವಳಿಯಿರುವ ವರ್ಗದವರು ಹಾಜರುಪಡಿಸತಕ್ಕ

ದೃಢ ಪತ್ರಿಕೆ

ಫಾರ್ಮುಗಳು ಮಾರಾಟಕ್ಕೆ ಸಿಗುತ್ತವೆ

ನವಭಾರತ ಪುಸ್ತಕ ಭಂಡಾರ,

ಉಡುಪಿ.

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O.S 141/45

ಡಿ. ವೀರಯ್ಯ ರಿಸೀವರ್ ಜಾಗಿ. ಹುಬ್ಬಳ್ಳಿ ಜ್ಯಾ ಕೂಡಾ ಪ್ರತಿವಾದಿರು. ಹುಬ್ಬಳ್ಳಿ ಜ್ಯಾರಿ ಎ ಕೂಪು ಜ್ಯಾರಿ ಕಾರ್ಪ್ರಿ ಜ್ಯಾರಿ. ಳ ಮೇಲೆ ಹೆಸರು ಸಿ ಜ್ಯ ಸಮ. ಸದಾವರ ಯಿನ್ನೆಜ್ಯಾರಿ ಸಂಕ್ಕಳು. ಸುಬ್ರಾಯರು ಗ್ರಾಮದ ಸದಾವರ, ಬಿ ರೋಪಣೆ

ಈ ಸೂಲಕ ತಿಳಿಯಪಡಿಸುವದೇನೆಂದರೆ

ನೀಲಿನ ಪಾದಿಯಲ್ಲಿ ಕಡೇಕ್ಕಾಲ್ಲ ಗ್ರಾಮದ ಅಸ್ತಿಯು ನೀಳ ಜಾಬ್ತು ನೀಲಿನ ಮಾಡಿ ಮಾಡಿಸಿ ಸಿರುತ್ತದೆ. ಸದ್ರಿ ವ್ಯವಹಾರದ ಯೇ ಸಾಖಾರ ಜೆನ್ನಿಯ ಸರ್ವಪಟ್ಟ ಎಂದೆ. ತೀರಿಕೆಗೆ ಮಿಟ್ಟುಯಿತ್ತದೆ ಆ ದಿನ್ನ ಸೀಪು ಗಂಟೆ ೧೦ಕ್ಕೆ ಸ್ವತಹವಾಗಲೀ ವಕೀಲರ ಮುಖಾಂತರವಾಗಿ ಹಾಜರಾಗಿ ಎದಿರುಪಡಿಸಿದರೆ ಸರ್ವ ಸೈರು ಹುಬಿಯಲ್ಲಿ ಸಿಕ ಪತ್ಯವಾಗಿ ತೀರ್ಮಾನಿಸಲಾದೀತು.

By order of the court
sd B. Chidananda Rao
Pleader for Plaintiff.

ಪುತ್ತೂರು ತಾ. ೧೭-೯-೪೫.

ಉಡುಪಿ

ಪೋಸ್ಟಾಫೀಸಿನ-ಟೆಲಿಗ್ರಾಫ್ ಕಾಪಿಯು ದಿನಾಲೂ ಬೇಗ್ಗೆ ಆರು ಗಂಟೆಯಿಂದ ರಾತ್ರಿ ಹತ್ತು ಗಂಟೆಯ ತನಕವೂ ಆದಿತ್ಯವಾರ ಬೆಳಿಗ್ಗೆ ಎಂಟು ಗಂಟೆಯಿಂದ ಹತ್ತು ಗಂಟೆಯ ತನಕವೂ ಸುಧ್ಯಾಸ್ತ್ರ ನಾಲ್ಕು ಗಂಟೆಯಿಂದ ಆರು ಗಂಟೆಯ ತನಕವೂ ತೆರೆದಿರುವುದೆಂದು ಸಬ್ ಪೋಸ್ಟ್‌ಮಾಸ್ತರ್ ಶ್ರೀ. ಸಿ. ಪಿ. ರಂಕರ್ ತಿಳಿಸುತ್ತಾರೆ.

ಶ್ರೀ. ಎಸ್. ಎನ್. ಹೊಳ್ಳರು—ಪಕ್ಷಣ ಕನ್ನಡ ಜಿಲ್ಲೆಯ ಮಜಾರ ಸುಂದಾಳಗಳಲ್ಲೊಬ್ಬರಾದ ಶ್ರೀ. ಎಸ್. ಎನ್. ಹೊಳ್ಳರು ತಾ. ೧೬ರಲ್ಲಿ ಉಡುಪಿಗೆ ಆಗಮಿಸಿದರು. ಸ್ವದೇಶೀಯ ಬೀಡಿ ಮತ್ತು ನೇಕಾರರ ಸಂಘಗಳ ಕಡೆಯಿಂದ ಅವರಿಗೆ ಸ್ವಾಗತವೀಯಲಾಯಿತು. ಜಯಕಾರಗಳಿಂದ ಶ್ರೀಯುತರು ನುರಿತವಣಿಗೆಯಿಂದ ರಹಭಟಿಗೆ ಬಂದು ಸಾರ್ವಜನಿಕ ಸಭೆಯಲ್ಲಿ ಭಾಷಣಮಿತ್ತರು. ಕುಲಿಗಾರರ ಸಂಘಗಳು ಹೆಚ್ಚಾಗಿ ಅವಶ್ಯವಾಗಿ ಸಂಘಟನಾಶಕ್ತಿ ಜಾಸ್ತಿಯಾಗಬೇಕೆಂಬ, ಹಿಂದೂಮುಸಲ್ಮಾನರಿಗಳಿಗೆ ಐಕ್ಯತೆಯುಂಟಾಗಬೇಕು. ಅಬಗ್ಗೆ ಕೆಲಸಗಾರರ ಸಂಘಗಳು ಚೆನ್ನಾಗಿ ಮಾಡಿಯಬೇಕೆಂ. ಹಿಂದೂಸ್ಥಾನದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಜಾರ ವರ್ಗವು ಪ್ರಧಾನ ಭಾಗವನ್ನು ಪಹಿಸಬೇಕು ಇತ್ಯಾದಿ ವಿಷಯಗಳನ್ನೆತ್ತಿ ಸ್ಫೂರ್ತಿಯುಕ್ತವಾದ ಭಾಷಣವಿತ್ತರು. ಅಧ್ಯಕ್ಷಸ್ಥಾನ ವಹಿಸಿದ್ದ ಶ್ರೀ. ಬಿ. ಸಿ. ಕಕ್ಕಿಲ್ಲಾಯರು, ಶ್ರೀ. ರಾಂತಾರಾಮ. ಸ್ಟೈಗಳವರೂ ಸಂದರ್ಭೋಚಿತ ಮಾತುಗಳನ್ನಾಡಿದ ಬಳಿಕ ಧನ್ಯವಾದ ಸಲ್ಲಿಸಲಾಯಿತು.

ಬೆಳತಿಗೆ ಅಕ್ಕಿ ಅವಶ್ಯಕತೆ-ಮುಖ್ಯ ಆಹಾರವು ನಿತ್ಯಕರ್ಮ ಕಾಲದಲ್ಲಿ ತರ್ಪಣಾಧಿಕಾರಿಗಳಿಗಾಗಿ ಬೆಳತಿಗೆ ಅಕ್ಕಿ ದೇವರ ಕಾರ್ಡಿನವರಿಗೆ ಕುಚ್ಚಿಗೆ ಅಕ್ಕಿ ಅಂದರೆ ಬೆಳತಿಗೆ ಅಕ್ಕಿ ರೂಪದಲ್ಲಿ ಸಿಗಬೇಕಾಗಿ ಸನಾತನ ಧರ್ಮಾಭಿಮಾನಿಗಳ ಬಯಕೆಯಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ನಿಗಾ ಕೊಡುವರೇ ಎಂಬ ನೋಡಿ ಕ್ಷೆ

ಉದ್ಯಾವರ—ಉಡುಪಿಯಲ್ಲಿ ಕಳೆದ ವಾಲ್ಕು ವರುಷಗಳಿಂದ ಯಶಸ್ವಿಯಾಗಿ ನೈಸರ್ಗಿಕ ಯೋಗವನ್ನು ನಡೆಸುತ್ತಿರುವ ಎಂ. ಕೊರಡ್ಡಿಲ್ ನೆಂಕಪ್ಪಾಪ್, ಎಲ್. ಎ. ಎಮ್. ಇವರು ಇಲ್ಲಿ ಸಮೀಪದಲ್ಲೇ ಬ್ರಾಂಚ್ ತೆರೆಸ್ಪವರಿಯನ್ನು ತೆರೆಯುವರು.

ಪ್ರತಿವರ್ಷದಂತೆ ಉದಿಯಾವರ ಶ್ರೀ. ಸದಿಯ ಸಾಹುಕಾರರು ಶ್ರೀ ಕೃಷ್ಣಾಷ್ಟಮಿ ಸಲುವಾಗಿ ಉದಿಯಾವರ ಗ್ರಾಮದ ಮೂರು ವೇದರ್ ಆಕ್ಟಿಫೋಗಳ ವೇದಸಾಕಾರ್ಯದಾರರಿಗೆ ಜಪತ್ತು ಮಾಡಿ ಆಕ್ಕಿಯನ್ನು ಧರ್ಮಾರ್ಥವಾಗಿ ಹಂಚಿಕೊಟ್ಟಿರುವುದು ವಿಶೇಷವೆಂಬ.

ನಿಂಜೂರು—ಶ್ರೀ. ವಿನೇಕಾನಂದ ಸೇವಾ ಸಂಘದ ಹತ್ತನೇ ವಾರ್ಷಿಕ ಸಮಾವೇಶವು ತಾ. ೧೬ ೯.೪೫ರಲ್ಲು ಶ್ರೀ. ಎಸ್. ಎಸ್. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷದ ಆಡಳಿತ ಮಂಡಳಿಗೆ ಈ ಕೆಳಗಿನವರನ್ನು ಆರಿಸಲಾಯಿತು. ಶ್ರೀ. ಎಸ್. ಎಸ್. ಶೆಟ್ಟಿ, B. A., B. Sc., (ಅಧ್ಯಕ್ಷ). ಶ್ರೀ. ಆರ್. ಎಸ್. ನಂಜೂರು (ಕಾರ್ಯಾಧ್ಯಕ್ಷ), ಶ್ರೀ. ಜೋಗಪ್ಪ ಶೆಟ್ಟಿ (ಉಪಾಧ್ಯಕ್ಷ), ಶ್ರೀ. ಎಸ್. ಎಸ್. ಶೆಟ್ಟಿ (ಜನರಲ್ ಸೆಕ್ರೆಟರಿ), ಶ್ರೀ. ಎಸ್. ಸದಾಶಿವ ಶೆಟ್ಟಿ (ಜತೆ ಕಾರ್ಯದರ್ಶಿ ಮತ್ತು ಕೋಶಾಧಿಕಾರಿ), ಶ್ರೀಗಳಾದ ಜಗನ್ನಾಥ ಶೆಟ್ಟಿ, ಅನಂತರಾಯ ಭಟ್ಟ ಮತ್ತು ತಿಮ್ಮಪ್ಪ ಶೆಟ್ಟಿ (ಕಾಯಿಟ ಮೆಂಬರರು). ಜೀನಗೇ ಸಂಘಕ್ಕೆ ಹೊಸ ಕಟ್ಟೋಣವನ್ನು ಒದಗಿಸುವ ಮತ್ತು ಸಂಸ್ಥಾನವನ್ನು ರಿಜಿಸ್ಟ್ರಿ ಮಾಡುವ-ಇವೇ ಮೊದಲಾದ ಸ್ಥಾಮುಖ್ಯ ವಿಷಯಗಳ ಕುರಿತು ಚರ್ಚಿಸಿ ಈ ಕುರಿತು ಯುಕ್ತ ಯೋಜನೆಯನ್ನು ನಿರ್ಧರಿಸಲಾಯಿತು.

ಮೈಸೂರು ಪತ್ರ-

ಕಸ್ತೂರಿ ಬಾ ಶಿಕ್ಷಣ ಶಿಬಿರದ ಪ್ರಾರಂಭೋತ್ಸವ

ಕರ್ನಾಟಕ ಮತ್ತು ಮೈಸೂರು ಸಂಸ್ಥಾನ ಕಸ್ತೂರ್‌ಬಾಸ್ಮಾರಕ ನಿಧಿಯಾಶ್ರಯದಲ್ಲಿ ತೆರೆಯಲಾದ ಕಸ್ತೂರ್‌ಬಾ ಶಿಕ್ಷಣ ಶಿಬಿರ ಪ್ರಾರಂಭೋತ್ಸವವು ೯-೪೫ನೇ ದಿನ ಶಿಬಿರದ ಆವರಣದಲ್ಲಿ ನೈಭವದಿಂದ ನಡೆಯಿತು. ಸರಾ ಸಿ. ಪಿ ರಾಮಸ್ವಾಮಯರವರ ಪತ್ನಿ ಶ್ರೀಮತಿ ಲೋಕಸುಂದರಿ ರಾಮಸ್ವಾಮಯರು ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ಆವರಣವನ್ನು ತೋರಣಗಳಿಂದ ಆಲಂಕೃತಗಾಗಿತ್ತು. ಸಮಾರಂಭದಲ್ಲಿ ಪಟ್ಟಣ, ಸ್ಥಳ ಮತ್ತು ನಗರದಿಂದ ಸಾವಿರಾರು ಮಂದಿ ಸ್ತ್ರೀಪುರುಷರು ಬಂದಿದ್ದರು.

ಉತ್ಸವದ ಅಂಗವಾಗಿ ಶಿಬಿರದಲ್ಲಿ ಕೊಡಲಾಗುವ ಶಿಕ್ಷಣಕ್ಕೆ ಸಮ್ಮಂಧಪಟ್ಟ ಪ್ರದರ್ಶನವು ಶ್ರೋತ್ಸಕರನ್ನು ಆನಂದಗೊಳಿಸುತಿತ್ತು.

ಧ್ವಜಾರೋಹಣದ ನಂತರ ಪ್ರಾರ್ಥನೆಯೊಡನೆ ಸಭಾಕಾರ್ಯಕಲಾಪಗಳು ಪ್ರಾರಂಭವಾದುವು. ಶ್ರೀ ಸಿದ್ಧನ್ನನಹಳ್ಳಿ ಕೃಷ್ಣರವರು ಜರಪರಿ ಸೂಕ್ಷ್ಮ ಪರಿಚಯ ಧಿಕೇಬರನೆ, ಆವರ ಉದ್ದೇಶ, ಶಿಬಿರದ ಅವಶ್ಯಕತೆಯನ್ನು ನಿವರಿಸಿದರು.

ಮೈಸೂರು ಸಮಿತಿ ಅಧ್ಯಕ್ಷರಾದ ಧರ್ಮಪ್ರಕಾಶ ಎಲ್. ಎಸ್. ವೆಂಕಟಜಗಾಯರು ಸ್ವಾಗತ ಭಾಷಣ ಮಾಡಿ, ಶ್ರೀಮತಿ ಲೋಕಸುಂದರಿಯವರನ್ನು ಸಭಿಕರಿಗೆ ಪರಿಚಯ ಮಾಡಿ ಕೊಟ್ಟು ಆವರನ್ನು ಅಧ್ಯಕ್ಷತೆ ವಹಿಸುವಂತೆ ಕೋರಿದರು. ಸಂದೇಶಗಳನ್ನು ಓದಿ ಹೇಳಿದರು.

ಬಳಿಕ ಮಹಿಳಾ ಕಾರ್ಯದರ್ಶಿ ಶ್ರೀಮತಿ ಯಶೋಧರಾ ದಾಸಪ್ಪನವರು ಶಿಬಿರದ ಹರದಿಯನ್ನು ಓದಿ ಶಿಬಿರದಲ್ಲಿ ಕೊಡಲಾಗುವ ಶಿಕ್ಷಣದ ವ್ಯವಸ್ಥೆಯನ್ನು ನಿವರಿಸಿದರು. ಪಕ್ಕದ ಪಳ್ಳಿಗೆ ಹೋಗಿ ಹಳ್ಳಿಯ ಜನರೊಡನೆ ಬೆರೆತು ಕೆಲಸ ನೂಡುವುದರಿಂದ ಉಂಟಾಗುವ ಪರಿಣಾಮದ ಅನುಭವವನ್ನು ತಿಳಿಸಿ ಮುಂದೆ ನಡೆಸಬೇಕಾಗಿರುವ ಕಾರ್ಯಕ್ರಮ, ತಾನು ವಾರ್ಧಾದಲ್ಲಿದ್ದಾಗ ಗಾಂಧೀಜಿಯವರೊಡನೆ ಚರ್ಚಿಸಿ ಪಡೆದ ಸಲಹೆ ಇತ್ಯಾದಿಗಳನ್ನು ನಿವರಿಸಿದರು.

ನಂತರ ಅಧ್ಯಕ್ಷರು ಸ್ವಾರಸ್ಯಕರವಾಗಿ ತಮ್ಮ ಭಾಷೆ ಕನ್ನಡವಲ್ಲದಿದ್ದರೂ ಕನ್ನಡದಲ್ಲೇ ಸಂಭಾಷಣೆ ನಡಿಸಿದರು. ಶಿಬಿರವನ್ನೂ ಶಿಬಿರದಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳನ್ನೂ ನೋಡಿ ತನ್ನ ಸಂತೋಷವನ್ನು ವ್ಯಕ್ತಪಡಿಸಿದರು ಅಲಲೆಯರು ಮತ್ತು ಅನಾಥೆಯರಿಗೆ ಇಂತಹ ಶಿಬಿರಗಳಿಂದ ಪ್ರಯೋಜನವಾಗುವುದೆಂದೂ, ಇಲ್ಲಿ ಶಿಕ್ಷಣ ಹೊಂದಿ ಹೋದ ನುಬಿಳೆಯರು ಗ್ರಾಮಾಂತರಗಳಲ್ಲಿ ಮಹಿಳೆಯರ ಉದ್ಧಾರಕ್ಕಾಗಿ ಉಪಯೋಗಿಸಲ್ಪಡಬಹುದೆಂದೂ ಸೂಚಿಸಿದರು.

ನಂತರ ಶಿಬಿರದಸರಿಂದ ಜಾಗ್ರತಿನೆ, ಸೇವಾ ಗ್ರಾನುವ ರೀತಿಯ ಪ್ರಾರ್ಥನೆಯಾದ ನಂತರ ಉಪಾಧ್ಯಕ್ಷರಾದ ಶ್ರೀ. ಹೆಚ್. ಸಿ. ದಾಸಪ್ಪನವರು ಎಲ್ಲರಿಗೂ ಹಂದನೆಗಳನ್ನು ಸಮರ್ಪಿಸಿದರು. ರಾಷ್ಟ್ರಗೀತೆಯೊಡನೆ ಸಭೆ ಮುಗಿಯಿತು.

ಆಸ್ಥಾನ ವಿದ್ವಾನ್ ಕೀರ್ತನ ಕೇ

ಸರಿವೇ ಬಿ. ಶಿವಮೂರ್ತಿ ಶಾಸ್ತ್ರಿ

ಚಿಕ್ಕನಾಯಕನಹಳ್ಳಿ-ಮೈಸೂರಿನ ಶ್ರೀನುಸ್ಥಾಕಾರಾಜರವರು ಈ ವರ್ಷ ತಮ್ಮ ವರ್ಧಂತಿಯ ಶುಭ ಸಮಯದಲ್ಲಿ ಕನ್ನಡಿಗರಿಗೆಲ್ಲ ಚಿರವರಿಚಿತರಾದ ರಂಗ ಸಾಹಿತ್ಯದ ಸಂಪಾದಕರೂ, ಸುಪ್ರಸಿದ್ಧ ಇತಿಹಾಸ ಸಂಶೋಧಕರೂ, ಕರ್ನಾಟಕ ನುಡಿಗಳ ಏಳಿಗೆಗಾಗಿ ಅವಿಶ್ರಾಂತವಾಗಿ ಮಿಡಿಯುತ್ತಿರುವ ನೇ. ಬಿ. ನರಸಿಂಹಯ್ಯಂಗಾರಿ ಶಾಸ್ತ್ರಿಗಳಿಗೆ ಅವರ ಸೇವೆಯನ್ನು ಮತ್ತು ವಿದ್ವತ್ತುಗಳಿಗೆ ಮೆಚ್ಚಿ ಆಸ್ಥಾನ ವಿದ್ವಾನ್ ಪದವಿಯನ್ನು ಅನುಗ್ರಹಿಸಿರುವರು.

ಶ್ರೀ. ಶಾಸ್ತ್ರಿಗಳು ಕಳೆದ ೩೦ ವರ್ಷಗಳಿಂದ ಅನೇಕ ರೀತಿಯಿಂದ ಸಾರ್ವಜನಿಕ ಸೇವೆಯನ್ನು ಸಲ್ಲಿಸಿ ತನ್ಮೂಲಕ ಸಾರ್ವಜನಿಕ ಮತ್ತು ಗುರುಪೀಠಗಳ ಮನ್ನಣೆಗಳಿಗೆ ಪಾತ್ರರಾಗಿ, ಕೀರ್ತನ ಕೇಸರಿ, ಶಿವಕೀರ್ತನ ಕವಿರಾಜ, ಕೀರ್ತನ ನಿಜಕ್ಷೀಣ, ಕೀರ್ತನ ಶಿರೋಮಣಿ ಇತ್ಯಾದಿ ಬಿರುದುಗಳನ್ನೂ, ಅನೇಕ ಮಾನಪತ್ರಗಳನ್ನೂ, ಪದಕಗಳನ್ನೂ ಪಡೆದಿರುತ್ತಾರೆ.

ಅಖಿಲ ಮೈಸೂರು ಹರಿಜನ ದೇವಾಲಯ ಪ್ರವೇಶ ಪ್ರಚಾರ ಸಮಿತಿ

ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ಸಾಯಂಕಾಲ ಶ್ರೀ. ಪಿ.ಆರ್. ರಾಮಯ್ಯನವರ ಅಧ್ಯಕ್ಷತೆಯಲ್ಲಿ ಕಸ್ತೂರ್ ಬಾ ಶಿಕ್ಷಣ ಶಿಬಿರದ ಆವರಣದಲ್ಲಿ ನಡೆಯಿತು. ಶ್ರೀಮತಿ ಯಶೋಧರಾ ದಾಸಪ್ಪ, ಶ್ರೀಗಳಾದ ಸಿ ಸುಬ್ಬರಾಮು ಶೆಟ್ಟಿ, ಹೆಚ್. ಸಿ. ದಾಸಪ್ಪ, ವಿಶ್ವಾನಂದಜಿ ಮತ್ತು ಕೆ. ಪಟ್ಟಾಭಿರಾಮನ್ ಇವರುಗಳುಹಾಗನಸಿದ್ದರು.

ಕಾರ್ಯದರ್ಶಿ ಕೆ. ಪಟ್ಟಾಭಿರಾಮನ್‌ರವರು ಈ ಹಿಂದೆಯೇ ಕೊಟ್ಟಿದ್ದ ಹೇಳಿಕೆಯಂತೆ ಗಾಂಧಿ ಜಯಂತಿ ಆಕ್ಟೋಬರ್ ೨ನೆಡ ೨೦ನೇ ಸೋಮವಾರ ಈ ಸಮಸಮಯವನ್ನು ಸಮಪಯೋಗಪಡಿಸಿಕೊಂಡು ಹರಿಜನರಿಗೆ ದೇವಾಲಯ ಪ್ರವೇಶಾಧಿಕಾರವನ್ನು ಉಂಟು ಮಾಡುವ ಸಲುವಾಗಿ ಪ್ರಚಾರಕಾರ್ಯ ಯತಸ್ಸಿಯಾಗಿ ನಡೆಸಲು ಮಹಾಜನರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ನಿರ್ಧರಿಸಲಾಯಿತು. ಅದುದರಿಂದ ಸಂಸ್ಥಾನಾದ್ಯಂತವೂ ಸ್ಥಳ ವಿಷ್ಯನೂನಗಳಿಗನುಗುಣವಾಗಿ ಮಹಾಜನರು ಸಭೆಗಳನ್ನೂ, ಇನ್ನಿತರ ಕಾರ್ಯಕ್ರಮಗಳನ್ನೂ ಇಟ್ಟುಕೊಂಡು ಹರಿಜನರಿಗೆ ದೇವಾಲಯದ ಪ್ರವೇಶಾಧಿಕಾರವನ್ನು ಕೊಡುವುದರಲ್ಲಿ ತಮ್ಮ ನಿಶ್ಚಾಸನಿಯೆಯಿಂದು ವ್ಯಕ್ತಪಡಿಸುವುದು ಉಚಿತವೂ ಫಲಪ್ರದವೂ ಆಗಿದೆ. ಈ ಬಗ್ಗೆ ನಿರ್ಧಾರವೊಂದಿಸನ್ನು ಮಾಡಿ ಅಧಿಕಾರಿಗಳ ಗಮನಕ್ಕೆ ತರಬಹುದೆಂ. ಇಂತಹ ಕಾರ್ಯಕ್ರಮವನ್ನು ಜಾರಿಕೊಂಡು ಮಹಾಜನರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಸಮಿತಿಯ ಸ್ವಾರ್ಥನೆಯನ್ನು ನಮ್ಮನ್ನಸಬೇಕೆಂದು ಕೋರಲಾಗಿದೆ.

(ಸಹಿ) **ಕೆ. ಪಟ್ಟಾಭಿರಾಮನ್,**
ಕಾರ್ಯದರ್ಶಿ.

ಸ್ವೀಕಾರ-ನಿಮರ್ಶೆ.

ಮೂಲ್ಕಿ ಕೇಂದ್ರದ ರೈತಾಭಿವೃದ್ಧಿ ಸಂಘ-ವ ಅಶ್ರಯದಲ್ಲಿ ತಾ. ೨೯ ೪೫ರಲ್ಲಿ ಜರಗಿದ ೧೪ನೆ ನೆಡುವ ದಿನಾಚರಣೆಯ ಸಂದರ್ಭದ ವರದಿ ನಮ್ಮ ಕೈಸೇರಿದೆ. ಹಳ್ಳಿಗಾಡಿನ ನಲಿಗೆ ಅಧುನಿಕ ರೀತಿಯ ವ್ಯವಸಾಯಕ್ರಮಗಳನ್ನು ಕಲಿಸುವದು-ರೈತರಲ್ಲಿ ಐಕ್ಯಟ್ಟು, ಜಾಗ್ರತಿಗಳನ್ನು ನಿರ್ಮಿಸುವದೇ ಮೊದಲಾದ ಗ್ರಾಮ ಸಂಘಟನಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಕೈಕೊಂಡಿರುವ ಈ ಕೇಂದ್ರದ ಮಾಡಿಯಂಯನ್ನು ಬೇರೆ ಗ್ರಾಮ ಕೇಂದ್ರಗಳೂ ಅನುಕರಿಸಲಿ ಎನ್ನುತ್ತೇವೆ.

ಮುಟ್ಟಾಗುವಿಕೆ

ಹಲವಿಂಗಳಿಂದ ಕಟ್ಟಾಗಿದ್ದರೂ, ಕಪ್ಪದ ಗರ್ಭಧಾರಣೆ ಆಥವಾ ಇನ್ನಾವಕಾರಣವಿದ್ದರೂ— 'ಋತುಮತಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಯಿರಿಪ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|-. (ವಿ. ಪಿ. 12 ಆಣೆ ಆಲಾಯಿದ.)

Mrs. P. DEVEE,
P. O. S. (A. E.) Tollygunge, Calcutta,
ಸ್ವಾಕಿಸ್ಟ್: ಪಾ ಕೆಂಪ್ಸ್ ಮಂಗಳೂರು.

ನವೋಹ್ಲಾದಗೊಳಿಸುವ ನವೀನ ನಗೆ ಪತ್ರಿಕೆ

ಅಂತರಂಗ

ಮಾಸ ಪತ್ರಿಕೆಯಂತೆ ಸಂಗ್ರಹಿಸಿಡಲು ಯೋಗ್ಯವಾದ
'ನವಯುಗ'ದ ಅರ್ಧ ಸೈಜಿನಲ್ಲಿ ಪುಸ್ತಕರೂಪದಲ್ಲಿ
ಹೊರಡುವ ಹೊಸ ಮಾದರಿಯ ಸಚಿತ್ರ ವಾರ ಪತ್ರಿಕೆ.

ಅಂತರಂಗ

ವಾರ ವಾರವೂ ಮನಸೆಳವ
ಬೇರೆ ಬೇರೆ ಮುಖಪತ್ರ.

ವಿಚಾರದ ಕಡಿಗಳಿಗಾಗಿ— ವಿನೋದ ಹರಟೆಗಳಿಗಾಗಿ—
ಮನನೋಹಕ ಕತೆಗಳಿಗಾಗಿ- ಚುಟುಕು ಸುದ್ದಿಗಳಿಗಾಗಿ-
ಅಂತರಂಗವು ಅಖಿಲ ಕರ್ನಾಟಕದಲ್ಲಿ ಜೆಸರಾಗಿದೆ.

ವಾರ ಭವಿಷ್ಯವೂ
ಬಡದೆ ಪ್ರಕಟವಾಗುತ್ತಿದೆ.

ವಾರ್ಷಿಕ ಚಂದಾ (ಮುಂಗಡ) ಅಂಚೆ ವೆಚ್ಚ ಸೇರಿ 4-8-0.
ಬಿಡಿ ಸಂಚಿಕೆಗೆ ... ... 0-1-6.

ಜಾಹೀರಾತು ದರಗಳಿಗೂ ಮಾದರಿ ಸಂಚಿಕೆಗಳಿಗೂ ಬರೆಯಿರಿ—
ಮೆನೇಜರ್, ಅಂತರಂಗ, ಉಡುಪಿ.

CHAMPAE'S
Snow & Lastrex
Sole Distributers for (India.)
Sukhananda Stores
Santhekatte, UDIPI, S. K.

ದಕ್ಷಿಣ ಕನ್ನಡ.

ಮಂಗಳೂರು

ದ. ಕ ಜಿಲ್ಲಾ ಕಡ್ಡಾಯ ಶಿಕ್ಷಣ ಶಾ. 13ರಲ್ಲು ಬೆಳಗ್ಗೆ ವೆ. ಕ. ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಜರಗಿ ಜಿಲ್ಲಾ ವಿದ್ಯಾಧಿಕಾರಿಗಳು ಸೂಚಿಸಿದ 23 ಗ್ರಾಮಗಳಲ್ಲಿನ 10 ಸೆಂಟರುಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರಬೇಕಾಗಿ ನಿರ್ಧಾರವಾಯಿತು. ಆದರೆ ಈ ಯೋಜನೆಗೆ ಬೇಕಾಗುವ ಸಂಪೂರ್ಣ ಖರ್ಚನ್ನು ಸರಕಾರ ವೇ ಗ್ರಾಂಟು ಕೊಡಬೇಕೆಂಬ ಷರತ್ತಿನ ಮೇಲೆ ಸಭೆಯು ಈ ನಿರ್ಣಯವನ್ನು ಕೈಗೊಂಡಿತು. ಈ ಸಭೆಯಲ್ಲಿ ಶ್ರೀ ಶಾಂತಾರಾಮ ಪೈ, ಬಿ. ವಿ. ಕಕ್ಕಿಲ್ಲಾಯ, ಎನ್ ಸುಬ್ಬರಾವ್ ಮೊದಲಾದ ಸದಸ್ಯರು ಹಾಜರಿದ್ದರು.

ಕಾರ್ಮಿಕ ಸಂಘಗಳ ಪರವಾನಿಗೆ ಕಾರ್ಮಿಕ ಸಂಘಗಳ ಪರವಾನಿಗೆಯ ಅರ್ಜಿಗಳನ್ನು ಪರಿಶೀಲಿಸಲು ಮಂಗಳೂರಿನಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಮೊದಲ ಸಭೆಯು ಶುಕ್ರವಾರ ಸಂಜೆ ಜರಗಿತು. ಸಭೆಯಲ್ಲಿ ಶ್ರೀ ಕೆ. ಕೆ ಬಟ್ಟರು, ಸ್ಥಳೀಯ ಕಮ್ಯೂನಿಸ್ಟ್ ಮುಂದಾಳುಗಳಾದ ಶ್ರೀ. ಶಾಂತಾರಾಮ ಪೈ, ಬಿ. ವಿ. ಕಕ್ಕಿಲ್ಲಾಯ, ಎನ್ ಸುಬ್ಬರಾವ್ ಮೊದಲಾದ ಇತರ ಹಲವರು ಪ್ರಮುಖ ಕಾರ್ಮಿಕ ಸಂಘಗಳ ಪರವಾಗಿ ಹಾರಗಳನ್ನು ಸಲ್ಲಿಸಿದರು. ಆನಂತರ ನಗರದ ಪ್ರಥಾನ ಬೀದಿಗಳಲ್ಲಿ ಮೆರವಣಿಗೆ ಬಂದು, ಪೈದಾಸಿನಲ್ಲಿ ಶ್ರೀ. ಶಾಂತಾರಾಂ ಪೈ ಅವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಹೊಳ್ಳಪ್ಪಿ ಸ್ವಾಗತ ಬೀಡಲಾಯಿತು. ಹೊಳ್ಳರು ತುಳು ಭಾಷೆಯಲ್ಲಿ ತೂತನಾಡುತ್ತ ದೇಶದಲ್ಲಿಂದು ಏಕ್ಯ ಇಲ್ಲದಿರುವುದರಿಂದಲೇ, ನಾವಿಷ್ಟು ಕಸ್ಟಪಡುತ್ತಿದ್ದೇವೆ ಸಮ್ಮೇಳನಕ್ಕೆ ಬಗ್ಗುಬ್ಬಿಸಿದ್ದರೆ ನಮಗೇ ಕೇಡು ಆಳುವ ಪರೀಕ್ಷೀ ಸರಕಾರಕ್ಕೆ ಇದರಿಂದ ಸಂತೋಷವೆ ನಿಮ್ಮಾ ಸಮ್ಮೇಳನ ಕಾಲದಲ್ಲಿ ನಮ್ಮ ಮುಂಬಂಡರುಗಳು ಪರಸ್ಪರ ತಮ್ಮೊಳಗೆ ಕಚ್ಚಾಡಿಕೊಂಡು ಪರಿಂದಲೇ ಈ ಪರಿಸ್ಥಿತಿ ಒದಗಿದೆ ಕಾಂಗ್ರೆಸ್ ಲೀಗ್ ಏಕ್ಯವಾಗಬೇಕು ಕಾಂಗ್ರೆಸ್ ಕಮ್ಯೂನಿಸ್ಟ್ ಪಕ್ಷಗಳು ಒಂದಾಗಬೇಕೆಂದರು

ಆರಂಭದಲ್ಲಿ ಶ್ರೀಗಳಾದ ಕೆ ಕೆ ಶೆಟ್ಟಿ, ಬಿ ವಿ ಕಕ್ಕಿಲ್ಲಾಯ ಮತ್ತು ಕೃಷ್ಣ ಶೆಟ್ಟರು ಮಾತನಾಡಿ, ಹೊಳ್ಳರಿಗೆ ಸ್ವಾಗತ ಬರೆಸಿದರು

ತಿರುವಾಂಕೂರು ಸರಕಾರವು ಪ್ರಾಥಮಿಕ ಶಾಲೆ—ಗಳನ್ನು ಪರೀಕ್ಷಿಸಲು ಮಾಡಿದ ತೀರ್ಮಾನಕ್ಕೆ ಎದುರಾಗಿ ನಿಷೇಧವನ್ನು ಸಾರಲು ಇದೇ ಕಾರಣಕ್ಕಾಗಿ ತಿರುವಲ್ಲಿಯಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಮಹಾಸಭೆಯೊಂದು ನಡೆಯಿತು. ಅಧ್ಯಕ್ಷತೆ ಶ್ರೀ ಪಿ. ಜೋಸೆಫ್ ಎ. ಎ [illegible] ಅವರು ತಿರುವಾಂಕೂರಿನ ವಿದ್ಯಾ ಪರಿಸ್ಥಿತಿಯನ್ನು ಕುರಿತು ಪ್ರಾರಂಭಿಕ ಭಾಷಣವನ್ನು ಮಾಡಿದರೆ ಬಳಿಕ ಇಕೊನೊಮಿಕ್ಸ್ ಪ್ರೊಫೆಸರರಾದ ಶ್ರೀ. ಎಸ್. ಸಿ. ಜೋಸೆಫ್ ಬಿ ಎ ಆನರ್ಸ್ ಅವರು ಪ್ರಜೆಗಳ ವಿದ್ಯಾ ಭ್ಯಾಸದಲ್ಲಿ ಸರಕಾರಕ್ಕೆ ಹಕ್ಕುಬಾಧ್ಯತೆಯಿರುವುದನ್ನು ತರ್ಕಿಸಿ ತಿರುವಾಂಕೂರಿನ ಸರಕಾರದ ತೀರ್ಮಾನವು ನ್ಯಾಯವಲ್ಲವೆಂಬುದನ್ನು ಸ್ಪಷ್ಟಪಡಿಸಿದರು. ಎಲ್ಲಾ ಪ್ರಾಥಮಿಕ ಶಾಲೆಗಳನ್ನು ಸರಕಾರವು ವಶಪಡಿಸುವುದರಿಂದ ಪ್ರಜೆಗಳಿಗುಂಟಾಗುವ ಹಾನಿಯ ಕುರಿತೂ ತಿರುವಾಂಕೂರು ಪ್ರಾಂತ್ಯದೊಳಗಣ ಅನೇಕ ಕಾಮಿಕ ಸಂಸ್ಥೆಗಳ ಶಾಲೆಗಳನ್ನುಮಾಡುವ ನಷ್ಟದ ಕುರಿತೂ ಶ್ರೀ ಪಟ್ಟೇತರು ಮಾತಾಡಿದರು ನೆರೆದಿದ್ದರಲ್ಲಿ ಅನೇಕರು ಭಾಷಣಗಳಾದ ಬಳಿಕ ತಿರುವಾಂಕೂರು ಸರಕಾರವು ಪ್ರಾಥಮಿಕ ಶಾಲೆಗಳ ಕುರಿತು ಮಾಡಿದ ತೀರ್ಮಾನಕ್ಕೆ ಎಮರಾಗಿ ದೃತ ನಿಷೇಧವಚನವನ್ನು ತರಾವು ಸರಕಾರಸಮಿತಿಯಿಂದ ಮುಂಬರಾಗಲು ಸಭೆಯು ಕೊನೆಗೊಂಡಿತು

[ತಿರುವಾಂಕೂರಿನ ಪ್ರಾಥಮಿಕ ವಿದ್ಯಾಭ್ಯಾಸದ ಜವಾಬ್ದಾರಿಯನ್ನೆಲ್ಲ ಸರಕಾರವೇ ನಿರ್ವಹಿಸಲು ಬಯ್ಸುವ ಪಾಸನ ಒಂದು ಸ್ಥಳೀಯ ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸಲ್ಪಟ್ಟಿದ್ದು [illegible] ಈ ಪಾಸನವನ್ನು ವಿರೋಧಿಸಲಾಗುವುದು. ಆ ಬಳಿಕ ಪಾಸಗಿ ಶಾಲೆಗಳುಪ್ರದಕ್ಕೂ ಸರಕಾರಿ ಗ್ರೇಂಟು ಹೊರಿಯಲಾರದು. ಸ್ಥಾಯಿವಿಧಾಯಕ ಸಭೆಯ ಕಛೇರಿಕ ಸದಸ್ಯರು ಈ ಪಾಸನಕ್ಕೆ ವಿರೋಧ ಪತ್ರವಿತ್ತಿದ್ದರೂ ಅಧಿಕ ಬಹುಮತದಿಂದ ಅದು ಮಂಜೂರಾಗಿದೆ. ಮೇಲಿನ ಸಭೆಯು ಈ ಹೊಸ ಪಾಸನವನ್ನು ವಿರೋಧಿಸಿ ನಡೆದುಬಂದಿರುತ್ತದೆ.]

ಆದರೆ ಕೇವಲ ಮನುಷ್ಯರಾದ ಸಾರ್ವಜನಿಕರಿಗೆ ಈ ಅವಧಿಯಲ್ಲಿ ಮತದಾರರಾಗಲು ಸಾಧ್ಯ ಹೇಗೋ ನಮಗರಿಯದು. ಮದ್ರಾಸ್ ಸರಕಾರದ ಪ್ರಕಟಣೆ ಹೊರಟುದು ಸೆಪ್ಟೆಂಬರ್ ತಾ 17ರಲ್ಲಿ. ಅದು ಪತ್ರಿಕೆಗಳಲ್ಲಿ ಪ್ರಕಟಣೆಗೊಂಡು ವ್ಯಾಪ್ತಿಯ ಎಲ್ಲಾ ಕಡೆಗಳಿಗೂ ತಿಳಿಯುವಾಗ 21ನೇ ತಾರೀಕು ಬಂದಿರಬೇಕು. ಆಗ ಕೂಡಾ ತಿಳಿದು ಬಂದುದೆಂದರೆ 'ರಿಜಿಸ್ಟ್ರೇಶನ್ ಆಫೀಸರರಿಗೆ ಅರ್ಜಿ ಕೊಡಬೇಕು' ಎಂಬುದು ಮಾತ್ರ. ರಿಜಿಸ್ಟ್ರೇಶನ್ ಆಫೀಸರರಾರು? ಅರ್ಜಿ ಹೇಗಿರಬೇಕು? ಎಂಬುದು ಇಂದಿನ ವರೆಗೂ ಜನತೆಗೆ ಸ್ಪಷ್ಟವಾಗಿಲ್ಲ. ಇದನ್ನು ಒರೆಯುವ ವರೆಗೂ ಅಂತ ಹದೊಂದು ಪ್ರಕಟಣೆಯನ್ನು ನಾವು ಓದಿಲ್ಲ. ಮೊದಲ ಪ್ರಕಟಣೆ ಹೊಟ್ ಎರಡು ದಿನಗಳ ನಂತರ 'ರಿಜಿಸ್ಟ್ರೇಶನ್ ಆಫೀಸರ ರಿಗುವ ರೆವಿನ್ಯೂ ಅಧಿಕಾರಿಗಳ ಯಾದಿಯನ್ನು ಸರಕಾರವು ಪ್ರಕಟಿಸುವದು; ಆರ್ಜಿ ಫೋರ್ಮಗಳನ್ನು ಆವರೆ ಹಂಚುವರು' ಎಂದು ಹೊರಬಿತ್ತು. 'ನಾವೆಲ್ಲವನ್ನೂ ತಿಳಿಸಿದೆವು' ಎಂದು ಸರಕಾರವೂ 'ನಮಗೆ ಅಲ್ಲಾ ತಿಳಿಯಿತು' ಎಂದು ಜನತೆಯೂ ಹೇಳುವಂತಾಗುವದು ಬಹುಶಃ ಒಕ್ಟೋಬರ್ ಮೊದಲ ವಾರದಲ್ಲೇ! ಒಂದು ವರ್ಗದವರ ವಾಯಿದೆ-ಸೆಪ್ಟೆಂಬರ್ 30-ಆದರೊಳಗೆ ಒಂದು ಹೋಗುವದು; ಮತ್ತೊಂದು ವರ್ಗದವರ ವಾಯಿದೆ-ಒಕ್ಟೋಬರ್ ತಾ 15-ಕಣ್ಣು ಮುಂದಿನಿಂದ ಹಾದು ಹೋಗುವದು! ಇದೀಗ ಮತದಾರ ಪಟ್ಟಿಗಳ ತಿದ್ದುಪಡಿಗಾಗಿ ಮದ್ರಾಸ್ ಸರಕಾರವನುಸರಿಸಿರುವ ವಿಧಾನ! 'ಪ್ರಚಲಿತ ಮತದಾರ ಪಟ್ಟಿಗಳನ್ನು ಸಾಧ್ಯವಿದ್ದಷ್ಟು ಪರಿಣಾಮಕಾರಿ ರೀತಿಯಿಂದ ತಿದ್ದಲಾಗುವದು' ಎಂದು ಲಂಡನ್ನಿನಿಂದ ಮರಳಿದ ಲೋರ್ಡ್ ವೇವೆಲ್ ಮಹಾ ಸಂಭ್ರಮದಿಂದಾಡಿದ ಮಾತು ಕೃತಿಯಲ್ಲಿ ಮೂಡಿ ಬಂದ ನಮೂನೆ! ಅಥವಾ ಬ್ರಿಟಿಷ್ ಸರಕಾರವು ಭಂಡೀಯರಿಗೆ ಅಧಿಕಾರ ದಾನ ಮಾಡುವ ರೀತಿಯ ಒಂದು ಪೂರ್ವದರಿ!

ನಿಜಕ್ಕೂ ಮತದಾರ ಪಟ್ಟಿಗಳ ತಿದ್ದುಪಡಿಯಾಗಬೇಕೆಂದಿದ್ದರೆ ಸರಕಾರವು ಈ ವಾಯಿದೆಗಳನ್ನು ಕೊನೆಯ ಪಕ್ಷ ಎರಡೆರಡು ವಾರಗಳಿಗಾದರೂ ಮುಂದುವರಿಸಬೇಕು. ಡಂಗುರ ಯಾನೆ ಕರಪತ್ರಗಳ ಮೂಲಕ ಪ್ರತಿಯೊಂದು ಹಳ್ಳಿಯವರಿಗೂ ತಿಳಿಸಿ, ಅರ್ಜಿ ಫೋರ್ಮುಗಳು ಅನಾಯಾಸವಾಗಿ ದೊರೆಯುವ ವ್ಯವಸ್ಥೆ ಮಾಡಿ, ರಿಜಿಸ್ಟ್ರೇಶನ್ ಆಫೀಸರರು ಆಯಾಯಾ ಕೇಂದ್ರ ಸ್ಥಳಗಳಲ್ಲಿ 'ಕೇಂಸ್' ಮಾಡಿಯೇ ಅರ್ಜಿಗಳನ್ನು ಪಡೆಯುವ ಶುವ್ಯವಸ್ಥೆಯಾಗಬೇಕು ಆದರಿದು ಸರಕಾರದ ಹೊಣೆಯಾಗಿದೆ ಹೊರತು ಜನತೆಯ ನಿರೀಕ್ಷೆಯಾಗಿರಬಾರದು; ಸದ್ಯದ ಸರಕಾರದ ಉದ್ದೇಶ ಮತ್ತು ಸ್ವಭಾವ ಗೊತ್ತಿದ್ದದ್ದೇ. ಆದ್ದರಿಂದ ಮತದಾರ ಪಟ್ಟಿಗೆ ಹೆಸರು ಸೇರಿಸುವ ವಾಯಿದೆ ಸೆಪ್ಟೆಂಬರ್ ೨೦, ಮತ್ತು ಒಕ್ಟೋಬರ್ 15 ಖಂಡಿತವೆಂದೇ ಜನರು ನಿರ್ಧರಿಸಿಕೊಂಡು ಅವಸರದಿಂದ ಕಾರ್ಯಕ್ಕೆ ಕೈಯಬೇಕು ವನಿಸಿಸಲ್ ಗಡಿಯೊಳಗೆ ಕಮಿಶನರ್, ತಾಲೂಕಿನ ಮಟ್ಟಿಗೆ ತಹಶೀಲ್ದಾರ್ ಅರ್ಜಿಪಡೆಯುವ ಅಧಿಕಾರಿಗಳಾಗಿರೇಮಕೊಂದಿದ್ದಾರೆಂದೂ, ಅರ್ಜಿಫೋರ್ಮುಗಳು ಅವರ ವತದಲ್ಲಿವೆಯೆಂದೂ ವಾರ್ತೆಬಂದಿದೆ. ಜನರು ತಾವೇ ಮುಂದೆಬಂದು ಫೋರ್ಮುಗಳನ್ನು ಪಡೆದು ಅರ್ಜಿಕೊಟ್ಟು ಹೋಗಲಿ; ಹಸುಗೇ ಅಕ್ಕಿ ಪಡೆಯುವಷ್ಟೇ ಆಕ್ಕಾದಿಂದ ಈ ಹಕ್ಕನ್ನೂ ಪಡೆಯಲಿ ಸೆಪ್ಟೆಂಬರ್ ೨೦ನುಸುಳಿಹೋದರೂ ಒಕ್ಟೋಬರ್ 15ರ ವಾಯಿದೆಯೊಂದಿಷ್ಟೆ; ಕರಕಂದಾಯಗಳ ಸಂಬಂಧದ ವಾಯಿದೆ ಮೀರಿದರೂ ಅವ್ವರಜ್ಞರ ವಾಯಿದೆಯೊಳಗಿದೆ. ಆ ವರ್ಗದವರಲ್ಲಿ ಹೆಚ್ಚಿನವರು ಈ ವರ್ಗದವರೂ ಹೌದು ಆದ್ದರಿಂದ ಕೊನೆಯ ವಾಯಿದೆಯ ಉಪಯೋಗವನ್ನು ವರ್ಗಬೇಧವಿಲ್ಲದೆ ಎಲ್ಲರೂ ಪಡೆಯಬಹುದು ಇದೇ ಒಕ್ಟೋಬರ್ ತಾ 2ರಿಂದ 9ರ ವರೆಗೆ ನಡೆಯುವ ಗಾಂಧೀ ಸಪ್ತಾಹದಲ್ಲಿ ಈ ಕಾರ್ಯಕ್ರಮವನ್ನೇ ಪ್ರಾಮುಖ್ಯವಾಗಿಟ್ಟುಕೊಂಡು, ಅರ್ಹತೆಯುಳ್ಳ ಒಬ್ಬನೇ ಒಬ್ಬನಾಕೆಯುಳಿಯದಂತೆ ಮತದಾರಪಟ್ಟಿಗಳನ್ನು ತುಂಬಿಸಲಿ ಎಂದು ವಿಜ್ಞಾಪಿಸುತ್ತೇವೆ.

'ಕಾಯಿದೆ ಭಂಗ' ನಾಟಕ.

ಉಡುಪಿ ಮುನ್ಸಿಪಾಲಿಟಿಯ ಸಾತ್ ಗರ್ಲ್ಸ್ ಶಾಲೆಯ ಕಟ್ಟಡದ ಸಹಾಯಾರ್ಥವಾಗಿ ತಾ 19ನೇ ರಾತ್ರಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜಯತೀರ್ಥವಾಗಿ ಅಭಿನಯಿಸಲ್ಪಟ್ಟ ನಾಟಕವಿದು. ಶ್ರೀ ಆರೂರಂದಂತೆ ದಕ್ಷಿಣಕನ್ನಡದ ಪಲ್ಲಿ ನುನೆಮಾತಾಗಿರುವ 'ರಾವಸಾಹೇಬ್' ಜಿಲ್ಲಾ ಕಲೆಕ್ಟರ್ ರಾವ್ ಬಹದೂರ್ ಶ್ರೀ. ರಾವಸಾಹೇಬ್, ಬಿ. ಎ., ಅದುವರೆಗೂ ಉಡುಪಿಯ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಸಂದರ್ಭ ಮೊರೆಯದಿದ್ದ ಜನಪ್ರೀತ ಅಧಿಕಾರಿ ಅಧ್ಯಕ್ಷತೆ ವಹಿಸಿದ್ದಾರೆ; ಉಡುಪಿಯ ಗಣ್ಯ ಸಾಗರಿಕರು ರಂಗಭೂಮಿಯಲ್ಲಿ ಕಾಣಿಸಿಕೊಳ್ಳಲಿದ್ದಾರೆ, ಎಂಬುದರಿಂದ ಈ ನಾಟಕವು ಎಲ್ಲರನ್ನೂ ಆಕರ್ಷಿಸಿದ್ದು ಸಹಾಯಸಂಗ್ರಹಕ್ಕೆ ಈ ಆಕರ್ಷಣೆಯೊಂದೇ ಸಾಕು; ಆದ್ದರಿಂದ ಟೀಕೇಟುಗಳ ದರ ಸಾಮಾನ್ಯ ಥಾರೆಗಿಂತ ಮಿಕ್ಕಿದ್ದರೂ ಪ್ರೇಕ್ಷಕ ಸ್ತೋಮವು ಸರಸ್ವತಿಯ ತುಂಬಲು ಥಿಯೇಟರಿನಲ್ಲಿ ಸ್ಥಳ ಸಾಕಾಗದೆ ಹೋದುದು ಸೋಜಿಗವಲ್ಲ. ಆದರೆ ಇಂತಹ ಆಕರ್ಷಣೆಯಿದ್ದಲ್ಲಿ ಜನಮಾನಸಕ್ಷೋಭೆಯಾಗುವದು ಅಪರೂಪ. ಪ್ರೇಕ್ಷಕರಲ್ಲಿ ಹೆಚ್ಚಿನವರು 'ಗಣ್ಯರ ವೇಷ' ನೋಡುವದಕ್ಕಾಗಿ ಪದ ತೆತ್ತು ಬಂದಿದ್ದರು; ಜನರಂಜಕತೆಗಾಗಿ ಬಂದಿದ್ದರು. ಹೋಗುವಾಗ ಸೂತ್ರಧಾರಿಯಾಗಿ ಅರ್ಥಾತ್ ನಟಿಸಿದ ಚಾತುರ್ಯವನ್ನು ಕಂಡ ಅನುಭವ ಹೊಡಿಸಿ, ಮನರಂಜನೆಯೊಡನೆ ಹೋದರು. ಇದು ಪ್ರೇಕ್ಷಕರಿಗೂ ಅನಿರೀಕ್ಷಿತ ಲಾಭ ಪೀಗಾಗಿ ನಾಟಕ ಪೂರ್ವ ಪ್ರಚಾರವು ಜನರನ್ನಾಕರ್ಷಿಸಿದಂತೆ, ನಾಟಕದ ಪ್ರದರ್ಶನವು ಆಕರ್ಷಣೀಯವಿದ್ದಿತು. ನಾಟಕ ಜಯಶೀಲವಾಯಿತು.

ಆಧ್ಯಕ್ಷತೆ ವಹಿಸುವಂತೆ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳುವಾಗ ಜಿಲ್ಲಾಜೋರ್ಡ್ ಮತ್ತು ಉಡ್ಡಿ ಮುನಿಸಿಪಾಲಿಟಿ ಅಧ್ಯಕ್ಷ ಶ್ರೀ. ಆರೂರು ಲಕ್ಷ್ಮೀನಾರಾಯಣರಾಯರಾಡಿದ ಮಾತುಗಳು ಜಿಲ್ಲೆಯ ಜನಸಾಮಾನ್ಯರ ಅಂತರ್ಯದ ಧ್ವನಿಯೇ ಆಗಿತ್ತು. "ಶ್ರೀ ರಾಮಮಂದಿರವಲ್ಲವಾಗಿದ್ದರೆ, ಜಿಲ್ಲೆಯು ಅಹಾರಾಭಾವನವನ್ನಿರಿಸುವದು ಆಸಾಧ್ಯವೆಂದು ಜನರಲ್ಲಾ ಕೃತಜ್ಞತೆಯೊಡನೆ ಈ ಕೆಲಸಕ್ಕೆ ರಸನ್ನು ಚ್ಞಾಪಿಸಿಕೊಳ್ಳುತಿದ್ದಾರೆ. 'ರಾಮದಾಸ್' ಸಾಮ ಬೆಲ್ಲದಲ್ಲಿ ಮುನಿಮಾತಾ ಗಿದೆ" ಎಂದು ಶ್ರೀ. ಆರೂರರಂದರು ಇದು 'ಸತ್ಯ ಸತ್ಯ' ಅನ್ನಿಸಿತು ಹೊರತು ಬ್ಲಾಘನೆಯನ್ನು ಸಲಿಲ್ಲ. 'ಗೋಪಿಯಾ' ಹಾಕಂತ್ತಾ ಯೋಗುವವರಿಗೂ ಒಪ್ಪೊನ್ನೆ ಗೋಪಾಲ ವೇಷಾಲಂಕಾರವೇ ಸೊತೆಯಾಗಿದೆ!

ನಾಟಕ ಸಕಾಲದಲ್ಲಾರಂಭವಾಯಿತು. ರಂಗಸ್ಥಸ್ಥಳೆಯಲ್ಲಿ ಕೊಸೆಯ ವರೆಗೂ ಕೊರತ ಕಾಣಲಿಲ್ಲ. ನಾಟಕ ಕರ್ತರು ಶ್ರೀ. ಎ. ಸೀನ ಸಟ್ಟಿಯ ಈ ನಾಟಕದಲ್ಲಿ ನೇತ್ಯ ಯೆಬ್ಬಳು ಬುದ್ಧಿ ಬಲವಾಗಿ ತ್ಯಾಗದ ಕೆಟ್ಟ ಬಿಟಿನ ಮಕ್ಕಳನ್ನು ತನ್ನ ಮಕ್ಕಳಂತೆ ಕಂಡು ಅವನ ಸುಗತಿಗೆ ಸುಮನಸೆ ಪೂಡಿಸಿ ತಾನೂ ಸುಮನಸೆಯಾಗುತ್ತಾಳೆ. ದುರ್ಬುದ್ಧಿಯ ತನ್ನ ಪುಂಡಲಿಗೆ ತಕ್ಕ ಶಿಕ್ಷೆ ಕೊಡಿಸುತ್ತಾಳೆ.

'ಗಾಂಧೀ ಗಂದ ಗಣೇಶ ಭಟ್ಟ'ನಾಗಿ ಶ್ರೀ. ಅರ್. ಆರ್. ಕುಂಜಾರರು ಪ್ರೇಕ್ಷಕರನ್ನು ನಗೆಗಡಲಲ್ಲಿ ಆದ್ದಿದ್ದಾರೆ. ತಿಳಿಯಾದ ಹಾಸ್ಯ, ಆದೂ ಸರಾಗವಾಗಿ. ಇನ್ನಾದರೂ ಕುಂಜಾರರನ್ನು ಫಕ್ಕನೊಮ್ಮೆ 'ಗಣೇಶ ಭಟ್ಟರೇ' ಎಂದು ಕರೆಯಲಾಗುವಂತಹ ಒಂದು ವೈಶಿಷ್ಟ್ಯವು ಆವರ ನಟನೆಯಲ್ಲಿತ್ತು. ನೇತ್ಯೆ ಗೌರಿಯ ಪಾತ್ರಧಾರಿಗಳು (ಶ್ರೀ. ಎ. ಜೆ. ಅಲ್ಸೆ) ಪ್ರಥಮ ಮದೊಂದು ಪೈಕಿಯಲ್ಲಿ ವಿಲಾಸ ಪ್ರದರ್ಶನ ಬೇಕಿತ್ತು -ನಿಜಾರಮಗ್ಯರಾಗಿದ್ದಂತೆ ತೋರಿತು. ಆ ನೋಟ ಕೊನೆಯ ವರೆಗೂ ಒಳ್ಳೇ ಅಭಿನಯ ತೋರಿದ್ದಾರೆ. ಸುಧಾವಿತ ಗೌರಿಯ ಪಾತ್ರ ಅವರಿಗೆ ಸಹಜವಾಗಿ ಒಪ್ಪುತಿತ್ತು. ಪಲ್ಲಾಲಿ ಕಿಲಾಡಿ ಸರೂ (ಶ್ರೀ. ಪಿ. ಎಸ್. ಸಟ್ಟಿ), ಸುಶಿಕ್ಷಿತ ಸಜ್ಜನ ಕೇರವ ರಾವ್ (ಶ್ರೀ. ಎಸ್. ವಿ. ಕಾಮತ್), ಬಿ. ಎ. ಬಿ. ಎಲ್., ಆದ್ಯಹಾಡಿ ಪಿಡುಪು ಕೊರಗ ನುಡಿವ ವಿಜರಾವ್ (ಶ್ರೀ. ಪದ್ಮನಾಭ ಶೇಟ್ ರಾಬ್ಯಾಕರ್), ವಿವರಾಯನ ಮಗನ ಪಾತ್ರ (ಜನಾರ್ದನಮಾಸ್ ಸಾಹೇಬ್), ಡಾಕ್ಟರ್ ಕುತ್ತು ಆರೋಸಿಯ ಕವಿ ವಕೀಲ್ (ಡಾ. ಕೆ. ಎಲ್. ಶಾನ್ಭಾಗ್, M-B, & B.S.), ಸರಕಾರೀ ವಕೀಲ್ (ಶ್ರೀ. ಯು. ಬಿ. ಕೃಷ್ಣರಾವ್, B A. B L.) ನ್ಯಾಯಾಧೀಶ (ಶ್ರೀ. ಎಚ್. ವಿ. ಸೈ, ಎಲ್.ಎಲ್. ಬಿ.), ಪೋಲೀಸ್ ಇನ್ಸ್ಪೆಕ್ಟರ್ (ಶ್ರೀ ಎಸ್. ಎಸ್. ಕಾಮತ) ಇವೇ ಮುಂತಾದ ಪಾತ್ರಗಳು ರಕ್ತ ಮಟ್ಟಿಗೆ ಜೀವ ತುಂಬಿದ್ದುವು. ವಿವರಾಯನ ಕುನರಿಯ ಪಾತ್ರಧಾರಿ ಶ್ರೀ. ಸಾಗೇತ ಭಟ್ಟ ಅಭಿನಯ ಮತ್ತು ಕಂಠಸಾಧುರ್ಯಗಳೆರಡೂ ಉತ್ಕೃಷ್ಟವಾಗಿದ್ದವು. ವಿವರಾಯನ ಗಾಯನವನ್ನು ಸುಸ್ವರಸಜ್ಜಿತವಾಗಿ ಮಾಡಿದ್ದಿದ್ದರೆ ಸುಮಧುರವಾಗಿರುತ್ತಿತ್ತು. ಅವೂ ನಾಟಕದಲ್ಲಿ ಸಾಮಾನ್ಯ ಎನ್ನುವ ಮತ್ತು ಬಹುಭಾಗ್ ಎನ್ನುವ ಪದ್ಯಗಳ ಜೊರತು ಬೇಸರವುಂಟುಮಾಡದಿರಲಿಲ್ಲ ಬದಲಿಗೆ ಸ್ವರಿಸಿಕೊಳ್ಳುವ ಕೆಲವು ಸನ್ನಿವೇಶಗಳಿದ್ದುವು. ಗಾಂಧೀ ಗಣೇಶ ಭಟ್ಟರೊಳಗಿನ ಪ್ರಮಾಸಂಗೀತವು ಆಕರ್ಷಣೀಯವಿದ್ದಿತು; ಕೆಲವು ಸಿನಮಗಳ ಜತೆಸಟಿನೆಯನ್ನು ಅದು ಮಿಗಿಸುತಿತ್ತು. ಇಂತೆಯೇ ವಿವರಾಯ ಮತ್ತವನ ಪ್ರತಿಯ ಜತೆಗಾನ. ಡಾಕ್ಟರ್-ಸರೂ ಇವರೊಳಗಿನ ಸಹಘರ್ಷಣೆಯು ಹೌದನ್ನಿಸುವಂತಹದು. ಸ್ಯಾಯಾಧೀಶನು ತೀಕ ಹತ್ತುವಾಗ ಪ್ರೇಕ್ಷಕರಿಗೂ ಕೋರ್ಟಿನಲ್ಲಿದ್ದವರಾಗಿರಬೇಕೆಂಬ ಪೋಲೀಸ್ ಅಧಿಕಾರಿ ಬಂದಾಗ ಆಧ್ಯಕ್ಷಬಲ ಅತಿರೇಕವಿದ್ದ ಪೋಲಿಸರವನಾ ಸೆಲ್ಯೂಟ್ ಕೊಡಬೇಕು. ಒಂದು ಸುವ್ಯವಸ್ಥಿತ ಪರಿಶ್ರಮ ಮಂಡಲಿಗೆ ಸಂತ್ರಪ್ತಿಯ ನಗವನು ಆಭಿನಾ ಪಾತ್ರಗಳೇ ನಮೂನಾ-ಹೊರತಿದ್ದರು. ಒಂದೆರಡು ಪಾತ್ರಗಳನ್ನು ಬಿಟ್ಟರೆ ಮಿಕ್ಕವ ಕೆಲ್ಲಾ ಸ್ವಭಾವತಃ ಆಭಿನಾ ಕಾಯಲು ತಂತಮ್ಮ ಪಾತ್ರವೊಂದನ್ನೆ ಸಿಲಸಗೊಂಡಿದ್ದವು.

ಆಧ್ಯಕ್ಷ ಕರ್ತೃವರು ಈ ನಾಟಕ ಪ್ರದರ್ಶನಕ್ಕೆ ಸೆಜ್ಜುಗೆ ಸೂಚಿಸಿ ನಟರನ್ನು ಬ್ಲಾಘಿಸಿದರು ಪ್ರದರ್ಶನದ ಸಲವ ವೈಶಿಷ್ಟ್ಯಗಳನ್ನೆತ್ತಿ ಕೊಂದು ಸಿನೋದಪೂರ್ಣ ಬ್ಲಾಘನೆ ಸಲ್ಲಿಸಿದರು. ನಾಟಕದ ಹಾಸ್ಯರಸವನ್ನು ಕಂಡ ಕಲಿಕ್ಟರರಿಗೆ ಇ. ಕ. ಜಿಲ್ಲೆಯವರ ನಿನೋದ ಬುದ್ಧಿ, ಮನರಂಜಕ ಗುಣಗ್ರಾಹಕತೆಗಳೆರಡೂ ಸ್ಫುಟವಾಗಿ ಬ್ಲಾಘನೆಗೆ ಬಂದುವು. ಆಸಾರಾಭಾವ ಸಿನಾರಕೆಯ ಕನ್ನ ಪಡೆಯೆಂಟು ತಿಂಗಳ ಪ್ರಯತ್ನಗಳಿಗೆ ಬೆಂಬಲವಿತ್ತ ಜಿಲ್ಲೆಯ ಜನತೆಯನ್ನು ಅಭಿನಂದಿಸಿ, ಹೊಸ ಬೆಳೆಯ ಸ್ಥಿತಿಯನ್ನು ಕಾಣುವಾಗ ಆಹಾರಾಭಾವದ ಸಂಕಷ್ಟ ಮುಂದಿರಲಾರದೆಂದು ತನ್ನ ಭರವಸೆ ವ್ಯಕ್ತಪಡಿಸಿದರು. ಮಂಗಳೂರಿಗೆಡಸೆಯುವಾಗ ಉಡುಪಿಯು ಅರ್ಥಿಕ, ವಿದ್ಯೋಗಿಕ ಮತ್ತು ವಿದ್ಯೆ, ಕಲಾಕ್ಷೇತ್ರಗಳಲ್ಲಿ ಮುಂದಿರುವ ವೆನ್ನು ಎತ್ತಿ ಹೇಳಿ ತನ್ನ ಕೃತಜ್ಞತೆ ಸೂಚಿಸಿದರು. ಕೊನೆಯಲ್ಲಿ ಶ್ರೀ. ಕುಂಜಾರರು ಸಂಸೋತ್ಕಿಯ ಧನ್ಯವಾದಗಳನ್ನರ್ಪಿಸಿದರು.

ಇದೇ ನಾಟಕವು ಮಹಾಜನರ ಅಪೇಕ್ಷೆಯ ಮೇರೆಗೆ ತಾ. 3-10-45ರಲ್ಲಿ ಪುನಃ ಅಭಿನಯಿಸಲ್ಪಡಲಿದೆ. —ವಿ.

'ಬ್ರಿಟಿಷ್' ಸೂಚನೆ ಅಸ್ಪಷ್ಟ, ಅಪೂರ್ಣ, ಅತೃಪ್ತಿಕರ!'

ಕಾಂಗ್ರೆಸ್ ಸಮಿತಿಯ ಸ್ಪಾಮುಂಲ್ಯ ನಿರ್ಧಾರಗಳು.

(ಸನೇ ಪ್ರಟಿಂದ ಮುಂದುವರಿದುದು)

ಅಧಿವೇಶನದ ನೆನಪನ್ನದು ತರುತಿತ್ತು; ಆದರೂ-ಪ್ರಥಮ ದಿನದಷ್ಟಜ್ಞವಾದರೂ-ಪ್ರೇಕ್ಷಕರ ಮತ್ತು ಸದಸ್ಯರ ಸಂಖ್ಯೆ ಹಾಗೂ ಉತ್ಸಾಹ ಅಧಿಕ ಪರಿಮಾಣದಲ್ಲೇ ಇದ್ದಿತಾದ್ದರಿಂದ ಕೆಸರುಲೇಪಿತ ಪಾದರಕ್ಷೆ, ಕುಡುಗೆ ತೊಡುಗೆಗಳ ಜನ ಸಮುದ್ರದಿಂದ ಸಭಾ ಮಂಟಪ ರಾಜಿಸುತಿತ್ತು. ಆ ದಿನ 6 ಘಂಟೆ ಅಧಿವೇಶನ ನಡೆಯಿತು. ನಡುವಿನ ಅರ್ಧ ಘಂಟೆ ಚರಾಕ್ಕೆ ಹೋಗಿ ಉಳಿದ ೫½ ಘಂಟೆಯಲ್ಲಿ ಎರಡು ಪ್ರಾಮುಖ್ಯ ರಂವುಗಳಾದುವು; 21 ಮಂದಿಯ ಭಾಷಣಗಳಾದುವು. ಇಂದಿನ ಸಭೆಯಲ್ಲಿ ಜೀವಕಳೆ ತುಂಬಿ ತುಳುಕಾಡುತಿತ್ತು.

'1942ರ ಹೋರಾಟ ಮತ್ತು ನಂತರ'

ಎಂಬ ಐರೋನಾಮೆಯ ಜಿಜ್ಞಾಸೆಯ ಠರಾವನ್ನು ಪಂಡಿತ ನೆಹರುಗಳು ಮುಂತಾದರು. ಆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣವನ್ನರ್ಪಿಸಿದವರನ್ನು ಉಕ್ಕಿ ಬರುವ ಹೃದಯದಿಂದ ಸ್ಮರಿಸಿದರು. ೧೦ ನಿಮಿಟುಗಳ ತನ್ನ ಭಾಷಣದಲ್ಲಿ "ಸರಕಾರವು ಘರ್ಷಣೆಗೆ ಮುಂದಿ ಬಂತು., ಜನತೆ ಸ್ಥೈರ್ಯದಿಂದ ಆ ಧುರವಿಳ್ಳಕ್ಕೆ ಕೈ ಕೊಟ್ಟತು. ಜನರ ಈ ಸ್ಥೈರ್ಯ ಸ್ಥೈರ್ಯಗಳಿಂದ ರಾಷ್ಟ್ರದ ಸ್ಥಾನ ಮತ್ತು ಶ್ರೀವರ್ಣ ಧ್ವಜ ಮೇಲಕ್ಕೇರಿದುವು" ಎಂದರು. ಮಹಾ ಯುದ್ಧವನ್ನು 'ಜನತಾ ಯುದ್ಧ' ಎಂದವರನ್ನು ಕಟು ವಾಣಿಯಲ್ಲಿ ಖಂಡಿಸಿದರು. ನೆಹರುಗಳ ಭಾಷಣವು ಸಭಿಕರ ರಕ್ತ ಕುದಿಸಿತು ಸರ್ದಾರ್ ವಲ್ಲಭಾಯಿಗಳದನ್ನು ಅನುಮೋದಿಸುತ್ತಾ 'ಕಾಂಗ್ರೆಸ್ ದಂಗೆ' ಎಬ್ಬಿಸಿ ಸರಕಾರವು ಆ ಚಳವಳಿಯನ್ನು ಕರೆದುದೇ ಸರಿಯೆಂದು ಸ್ವಾಭಿಮಾನಪೂರ್ವಕ ಹೇಳುತ್ತಾ ಆ 'ಕ್ವಿಟ್ ಇಂಡಿಯಾ' ಘೋಷಣೆಯಲ್ಲಿ ಒಂದು ಕೊಮವನ್ನೂ ಬದಲಾಯಿಸಲಾರೆವು. ಬದಲಿಗೆ ಸದ್ಯದಲ್ಲೇ ಕಾಂಗ್ರೆಸ್ 'ಕ್ವಿಟ್ ಏಸ್ಯಾ' ಎಂದು ಹೇಳಲಿಕ್ಕಿದೆ" ಎಂದು ಘೋಷಿಸಿ ಸಭೆಯಲ್ಲಿ ಪ್ರಚಂಡ ಉತ್ಸಾಹವೆಬ್ಬಿಸಿದರು. ಆಚಾರ್ಯ ನರೇಂದ್ರ ದೇವ್‌ರವರು ಅದನ್ನು ಉದುರಿಸಿ ನೆಪ್ಲೆ ಸಮರ್ಥಿಸುತ್ತಾ ಇಡೀ ಸಭೆಯ ಮನಸ್ಸನ್ನು ಸೆರೆ ಹಿಡಿದರು ರಘುನಾಥ ರೆಡ್ಡಿ, ಎಸ್.ಸಿ ಜೆಟರ್ಜಿ, ದುಬೇಜಿ ಮತ್ತು ಪ್ರೊ. ರಂಗರಿಂದ ಆ ಠರಾವನ್ನು ಇನ್ನಷ್ಟು ತೀವ್ರಗೊಳಿಸುವ ತಿದ್ದುಪಡಿ ಸೂಚನೆಗಳು ಬಂದರೂ, ನೆಹರುಗಳು ಉತ್ತರವಿತ್ತ ಮೇಲೆ, ಆವುಗಳೆಲ್ಲ ಕೆಲವು ಒಂದೆಗೆಯಲ್ಪಟ್ಟು ಉಳಿದುವು ಬಿದ್ದು ಹೋದುವು.

ಕಾಂಗ್ರೆಸ್ ಧೋರಣೆ

'ಸಾಧ್ಯವಿದ್ದಾಗ ಸಂಧಾನ, ಅಗತ್ಯ ಬಿದ್ದಾಗ ಹೋರಾಟ'ವೆಂಬ ತಿರುಳುಳ್ಳ ಕಾಂಗ್ರೆಸ್ ಧೋರಣೆಯನ್ನು ನಮೂದಿಸುವ ಠರಾವನ್ನು ಆಚಾರ್ಯ ಕೃಪಾಲಿನಿಯವರು ಮುಂದಿಟ್ಟರು ಆ ದಿನದ ತರ್ಕ ಪ್ರವೀಣನೆಂಬ ಬಿರುದು ಕೃಷ್ಣಾನಿಯವರಿಗೇ ಸಿಗುವಂತಹ ಉಜ್ವಲ ಭಾಷಣ ಮತ್ತು ಉತ್ತರವನ್ನರು.. ಡಾ ರಾಜೇಂದ್ರ ಪ್ರಸಾದರು ತನ್ನ ಅಮೋಘವಾಣಿಗಳಿಂದ ಆದನ್ನು ಸಮರ್ಥಿಸಿ ಸಭೆಯ ಹೃದಯವನ್ನು ಸೂರೆಗೊಂಡ ಟಿ. ಪ್ರಕಾಶಮ್, ಸಂಪೂರ್ಣಾನಂದ್, ಅವನೀಶಲಿಂಗಮ್ ಚೆಟ್ಟಿಯಾರರೊಂದವರಿಂದ ತಿದ್ದುಪಡಿ ಸೂಚನೆಗಳು ಬಂದಿದ್ದರೂ ಕೃಷ್ಣಾನಿ ಉತ್ತರದ ಮಾರ್ಮಿಕ ದೂಡಾಟ ಅವನ್ನೆಲ್ಲಾ ಝಾಡಿಸಿ ಬಿಟ್ಟತು. ಇದನ್ನು ಸಮರ್ಥಿಸಿದ ಮೌಲಾನ ನುರುದ್ದೀನ ಬಿಹಾರಿಯವರು ಮುಸ್ಲಿಂ ಲೀಗಿನ ಅವ್ಯಾಗ ಎಕ ಧೋರಣೆಯನ್ನು ಕಟುವಾಣಿಯಲ್ಲಿ ಖಂಡಿಸಿದರು. ಠರಾವು ಜೈಜೈಕಾರಗಳೊಡನೆ ಮಂಜೂರಾಯಿತು.

ಮೂರನೇ ದಿನ

ತಾ 23ರಲ್ಲಿ-ಹಿಂದೂಸ್ಥಾನದ ಸ್ವರ್ಲಿಂಗ್ ಸಾಲಗಳ ಇತ್ಯರ್ಥವಾಗಬೇಕು-ಬರ್ಮಾ ಮತ್ತು ಮಲಯಗಳಲ್ಲಿ ಹಿಂದೀಯರ ಹಿತಸಂಬಂಧಗಳ ರಕ್ಷಣೆ- 'ಭಾರತೀಯ ರಾಷ್ಟ್ರೀಯ ಸೇನೆ'ಯವರನ್ನೆಲ್ಲಾ ಬಿಡುಗಡೆಮಾಡಬೇಕಲ್ಲದೆ ಅಂತಹ ಇತರ ಹಿಂದೀಯರಾರನ್ನೂ ಎಕ್ಷಸಿಬಾರದು-ಇತ್ಯಾದಿ ನಿರ್ಧಾರಗಳೂ ಚೀನಾ ಮತ್ತು ದಕ್ಷಿಣ ಪೂರ್ವ ಏಸ್ಯಾದ ಸ್ವಾತಂತ್ರ್ಯ ಬಲೂಚಿಸ್ಥಾನ, ಹಿಂದೀ ಆಶ್ರಿತ ರಾಜ್ಯಗಳ ಪ್ರಜೆಗಳು, ಮುಂದಿನ ಭಾರತೀಯ ಚುನಾವಣಾ ಸಮಿತಿ, ಚುನಾವಣಾ ಘೋಷಣೆ ಮೊದಲಾದುವುಗಳ ಸಂಬಂಧದ ನಿರ್ಣಯಗಳೂ ಮಂಜೂರಾದುವು.

ಬ್ರಿಟಿಷರ ಹೊಸ ನಿರೂಪಣೆ

'ಬ್ರಿಟಿಷ್ ಸರಕಾರದ ಹೊಸ ನಿರೂಪಣೆಗಳು ಅಪ್ಪಸ್ಪ, ಆಪೂರ್ಣ ಮತ್ತು ಅಸಮಾಧಾನಕರವಾಗಿವೆ ಪೂರ್ಣ ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದಿಟ್ಟುಕೊಂಡೇ ಚುನಾವಣೆಯಲ್ಲಿ ಹೋರಾಡಬೇಕು.' ಎಂಬ ಈ ಗಾರಿಯ ಅಗ್ರಗಣ್ಯ ಠರಾವನ್ನು ಸರ್ದಾರ್ ವಲ್ಲಭಾಯಿಗಳು ತಂದು ಅತ್ಯುಜ್ವಲ ಭಾಷಣವಿತ್ತರು. ಪಂಡಿತ ಗೋವಿಂ [illegible] ರ್ಘನೆಯು ಅದಕ್ಕು ಸಾಗರವಾಗಿಯೇ ಇದ್ದಿತು. 'ಉಗ್ರಗಾಮೀ ಪಾರ್ಲಿಮೆಂಟರೀ ವಿಚಕ್ಷಣರಾದ ಇವರು ಬ್ರಿಟಿಷರ ಅನೇಕ ವಾದದಿರು ತಿದ್ದುಪಡಿ ಸೂಚನೆಗಳಾವುದಕ್ಕೂ ಅಸ್ತಿತ್ವ ದೊರೆಯಲಿಲ್ಲ. ಮೂಲ ಠರಾವನ್ನು ಸಮರ್ಥಿಸಿದ ಪಂಡಿತ ನೆಹರುಗಳ ವಾಗ್ಝರಿಯಿಂದಂತೂ ಎಲ್ಲವೂ ಕೊಚ್ಚಿಹೋದುವು. ವೋಟಿಗೆ ಬಿದ್ದ ಎರಡು ಉಪ ಸೂಚನೆಗಳಿಗೆ 28೫ ಮಂದಿ ಸದಸ್ಯರಿದ್ದ ಸಭೆಯಲ್ಲಿ 7 ವೋಟುಗಳು ಮಾತ್ರ ದೊರೆತುವು. ಕಾಂಗ್ರೆಸು ಇನ್ನು ಮುಂದೆ ಮುಸ್ಲಿಂ ಲೀಗಿನೊಡನೆ ಎಂದಿಗೂ ಸಂಧಾನಕ್ಕೆ ಹೋಗದೆ ಮುಸ್ಲಿಂ ಜನತೆಯನ್ನೇ ಸಂಧಿಸುವದು ಎಂದು ಸರ್ದಾರರೂ ನೆಹರುಗಳೂ ಖಂಡತುಂಡವಾಗಿ ನುಡಿದಿದ್ದಾರೆ. "ಕಾಂಗ್ರೆಸು ಇನ್ನು ಮುಂದೆ ಒಂದೇ ಒಂದು ಮೈಲಿನಷ್ಟಾದರೂ ಮುಸ್ಲಿಂ ಲೀಗಿನೊಡನೆ ಹೋಗುವಂತಿಲ್ಲ; ನಾವು ಮುಸ್ಲಿಂ ಜನತೆಯ ಬೆಂಬಲಕ್ಕಾಗಿ ಧಾವಿಸುವೆವು" ಎಂದು ನೆಹರುಗಳು ಘೋಷಿಸಿದಾಗ ಸಭೆಯು ಪ್ರಚಂಡ ಜೈಕಾರಮಾಡಿತು. ಲೀಗಿನೊಡನೆ ಸಂಧಾನ ಮಾಡಿಕೊಳ್ಳಬೇಕೆಂಬ ಕಮ್ಯೂನಿಸ್ಟರ ಠರಾವನ್ನು ನುಂತೆಂದೆ ಡಾ! ಶರೀಫರ ಭಾಷಣವನ್ನು ನಿಯಮಾನುಸಾರವಾಗಿ ಅಧ್ಯಕ್ಷರು ಬಾರಿಬಾರಿಗಾತಂಕಿಸಬೇಕಾಯಿತು. ಸಭೆ ಗಂತೂ ಶರೀಫರ ಮಾತು ತೀರಾ ಅನಮ್ಯವಾಗಿ ನಿಷೇಧಸ್ಪೂಚನೆಗಳೇಳುತಿದ್ದುವು. ಕೊನೆಯಲ್ಲಿ 'ನಾವು ಕಾಂಗ್ರೆಸ್ ದ್ರೋಹಿಗಳ ಮಾತು ಕೊಡಲು ಸಿದ್ಧರಿಲ್ಲ' ಎಂಬ ನಿಷೇಧಘೋಷಣೆಯನ್ನು ಆಸನ ಹಿಡಿಸಿತು.

ಮುಕ್ತಾಯ

ಮೌಲಾನಾ ಆಜಾದರ ಹತ್ತೇ ನಿಮಿಟುಗಳ ಅಮೋಘ ಮುಕ್ತಾಯ ಭಾಷಣದೊಂದಿಗೆ ಮೂರು ದಿನಗಳ ಈ ಚರಿತ್ರಾರ್ಹ ಸಭೆಯು ತಾ 23ನೇ ರಾತ್ರಿ 8-30 ಕ್ಕೆ ಮುಗಿಯಿತು. 'ಭಾರತ ರಾಷ್ಟ್ರ ಎಚ್ಚತ್ತು ನಿಂತಿದೆ ತನ್ನ ಸ್ವಾತಂತ್ರ್ಯ ಗುರಿಯನ್ನು ಅದು ಸೇರದಂತೆ ತಡೆಯುವ ಶಕ್ತಿಯೊಂದು ಈ ಪ್ರಪಂಚದಲ್ಲೇ ಇಲ್ಲ' ಎಂಬುದೇ ಅಧ್ಯಕ್ಷರ ಕೊನೆಯ ನುಡಿ. ಅಧಿವೇಶನದಲ್ಲಿ ಅನ್ಯಾದೃಶ್ಯ ಶಿಸ್ತು ಕಂಡುಬಂದಿತ್ತು. ಅಧ್ಯಕ್ಷರು ಪ್ರತಿಯೊಬ್ಬ ಭಾಷಣಗಾರನಿಗೆ ಮೂಲತಃ 10ಪುರವಣಿಯಾಗಿ ೨ ನಿಮಿಟುಗಳ ಹೊರತು ಮತ್ತೊಂದೇ ಒಂದು ಸೆಕೆಂದ ಬಿಡುತಿದ್ದಿಲ್ಲ. ಅಲ್ಲಿ ವೀರ ವಾಣಿಗಳಂತ ನಿನೋದ ವಾಣಿಗಳಿಗೂ ಕೊರತೆಯಿರಲಿಲ್ಲ ಬಂಗಾಳದ ಭಾಷಣಕರ್ತರೊಬ್ಬರಿಗೆ ಅಧ್ಯಕ್ಷರು ಸಮಯದ ಎಚ್ಚರಿಕೆ ಕೊಟ್ಟಾಗ "ನಾನು ತಮ್ಮ ಸಮಯ ಹಾಳು ಮಾಡುವದಿಲ್ಲ; ಆದರೆ ತಾವು ಸಂಧಾನದಲ್ಲಿ ಸಮಯ ಹಾಳು ಮಾಡಬೇಡಿ" ಎನ್ನುತ್ತಾ ನಗೆಯ ಕೋಲಾಹಲದ ನಡುವೆ ಕೆಳಗಿಳಿದರು ರೂ.1000 ದಟೆಕೇಟು ಪಡೆದು ಪ್ರೇಕ್ಷಕನಾಗಿ ಬಂದಿದ್ದ ರಾಜರೊಬ್ಬರಿಗೆ ಕುಳಿತಲ್ಲಿಯೇ ಗಾಳಿ ಹಾಕುವವನೊಬ್ಬನಿದ್ದುದು ಸಭೆಗೊಂದು ವಿನೋದ ದೃಶ್ಯವಾಗಿತ್ತು. ಸರಕಾರೀ ವಿರುದ್ಧ ಉಗ್ರ ವೀರ ವಾಣಿಗಳಿಗೆ ದೊರೆತ ಪುರಸ್ಕಾರ ಚಿನ್ನಡಿಗಳಿಗಲಿಲ್ಲ.

NOTICE

Is hereby given that the transfer books and register of Members of Sri hamakrishna Theatre, Limited, Udipi, will remain closed from Sunday the 7th October, 1945 to Sunday the 28th October, 1945 both days inclusive.

Udipi, 25-9-'45. } —A Janardhan Hegde, Managing Director.

NOTICE

Is hereby given that the auction sale of 55 Dhupa trees standing in S No. 92/1 & 103/1 at No 76, Badagabettu village i.e. along Court road from the Canara Mutual office up to the Pangal Nayak Bank corner will be held by the undersigned at 10-30 A.M on Wednesday the 10th October 1945 The Sale is subject to confirmation of the competent authority. The trees will either be sold in one lot or in several lots of two or more trees each only.

The sale proceeds are to be paid immediately after the sale is knocked down. The trees have to be cut and removed within 7 days after the sale is knocked down. If they are not removed within the time specified above, they will be confiscated and resold at risk of the purchaser. No tree should be allowed to obstruct the roads beyond 24 hours

Any further information required may be obtained from the Municipal Office during office hours on working days.

(Sd) T. Harischandra Rao,
COMMISSIONER U. M
Municipal Office, Udipi.
Dated 24—9—1645

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಯಸ್ಥಿತಿಯನ್ನು ನಿರ್ಜೀವಿಸಿ ತಯಾರಿಸಲ್ಪಟ್ಟ ಅಮೋಘ ಮಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ)

ಈ ಔಷಧಿಯ ಉಪಯೋಗ. ಹೆಚ್ಚು ಕಮ್ಮಿ ಅಥವಾ ಅಧಿಕ ಪ್ರಮಾಣದಲ್ಲಿ ಬರುವ ಅಂದರೆ ಕೆಲವು ಔಷಧಿಗಳು ಒಂದು ಬಾಣಂತಿಗೆಷ್ಟೆ ಸಾಕಾಗುತ್ತವೆ. ವೀಳ್ಯ ಮಾಡಿ ಬಳ್ಳಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ ೨ ಕೊಡಿಯಾಲಬೈಲು, ಪ.ಕ

ಉಡುಪಿ.

ಉಡುಪಿ ಹಸುಗೆ ಆಫೀಸರರ ಪ್ರಕಟಣೆ

ಉಡುಪಿ ಹಸುಗೆ ಸರಹದ್ದಿನೊಳಗೆ ಭತ್ತ ಸಾ.ಸಪಳ್ಳಿ ಇರುವ ಭೂಮ್ಯಾಲಿಕರ ಮತ್ತು ಸಾಗುವಳಿದಾರರ ಅವಗಾಹನೆ ಬಗ್ಗೆ:—

1. ಉಡುಪಿ ಹಸುಗೆ ಸರಹದ್ದಿನೊಳಗಿರುವ ಭತ್ತದ ಪೈರನ್ನು ಉಡುಪಿ ಹಸುಗೆ ಆಫೀಸರರ ಬರಹ ಮೂಲಕ ಅನುಮತಿ ಇಲ್ಲದೆ ಕಟಾವು ಮಾಡಕೂಡದು. 2. ಹಾಗೆ ಗದ್ದೆಯಿಂದ ಪೈರನ್ನು ಕಟಾವು ಮಾಡಲು ಆಫೀಸ್ಸುವವರು ಉಡುಪಿ ಹಸುಗೆ ಆಫೀಸರರಿಗೆ ಸರ್ವೆ ನಂಬ್ರ, ವಿಸ್ತೀರ್ಣ, ಅಂದಾಜು ಭತ್ತದ ಪರಿಮಾಣ ಮತ್ತು ಕಟಾವು ಮಾಡುವ ತಾರೀಕು ನಮೂದಿಸಿ ಒಂದು ವಾರದ ಮೊದಲೇ ಅರ್ಜಿ ಬರಕೊಂಡು ಬರಹ ಮೂಲಕ ಹುಕುಂ ಪಡೆಯತಕ್ಕದ್ದು. ಅರ್ಜಿಯ ಮಾದರಿಯನ್ನು ಉಡುಪಿಯಲ್ಲಿರುವ ಹಸುಗೆ ಆಫೀಸಿನ ನೋಟೀಸು ಬೋರ್ಡಿನಲ್ಲಿ ಕಾಣಬಹುದು. 3. ಹಸುಗೆ ಸರಹದ್ದಿನ ಹೊರಗೆ ಸಾಸಿಸುವ ಭೂಮಾಲಕರಾಗಲೀ, ಸಾಗುವಳ್ಳಿದಾರರಾಗಲೀ ಪೈರನ್ನು ಒಯ್ಯಬೇಕಾದಲ್ಲಿ ಹಸುಗೆ ಆಫೀಸರರಿಗೆ ಅರ್ಜಿ ಬರಕೊಂಡು ಪರ್ಮಿಟು ಪಡಕೊಳ್ಳಬೇಕು. 4. ಒಂದೇ ಬೆಳೆಯು ಸಾಗುವಳ್ಳಿದಾರರಿಗೆ ಯಾ ಭೂಮ್ಯಾಲಿಕರಿಗೆ ಒಂದುವರ್ಷಕ್ಕೆ ಬೇಕಾದಷ್ಟಕ್ಕೆ ಬಿಟ್ಟುಕೊಡಲ್ಪಡುವುದು. ಎರಡು ಆಷಾಢ ಮೂರು ಬೆಳೆಯು ಸಾಗುವಳ್ಳಿದಾರರಿಗೆ ಮೊದಲನೆ ಬೆಳೆಯಿಂದ 8 ತಿಂಗಳಿಗೆ ಬೇಕಾದಷ್ಟು ಮಾತ್ರ ಬಿಟ್ಟುಕೊಡುವದು. ಉಳಿದ ನಾಲ್ಕು ತಿಂಗಳ ಭತ್ತ ಉಳಿವ ಬೆಳೆಯಿಂದ. 5. ಸಾಗುವಳ್ಳಿದಾರನು ಬೆಳೆಯನ್ನು ಕಟಾವು ಮಾಡಿದ ಕೂಡಲೇ ಆದರಿಂದ ಉತ್ಪತ್ತಿ ಬಂದ ಭತ್ತದ ಜುಮ್ಲಾ ಪ್ರಮಾಣವನ್ನು ಆಳತೆ ಮಾಡಿ ಮುಡಿ (೪೫ ಸೇರಿನ) ಲೆಕ್ಕದಲ್ಲಿ ಬರೆದಿಡತಕ್ಕದ್ದು. ಮತ್ತು ಅವನ್ನು ಹಸುಗೆ ಆಫೀಸರರಿಗೆ ತಿಳಿಸಬೇಕು. ಲೆಕ್ಕ ಬರೆದಿಡುವ ಫೋರ್ಮನ್ನು ಮತ್ತು ಆ ರ್ಜಿಯ ಮಾದರಿಯನ್ನು ಹಸುಗೆ ಆಫೀಸಿನ ನೋಟೀಸು ಬೋರ್ಡಿನಲ್ಲಿ ಕಾಣಬಹುದು. 6. ಹಸುಗೆ ಆಫೀಸರರ ಬರಹ ಮೂಲಕ ಹುಕುಂ ಇಲ್ಲದೆ ಸಾಗುವಳ್ಳಿದಾರನು ಭತ್ತವನ್ನು ಯಾವ ರೀತಿಯಲ್ಲಿಯೂ ಉಪಯೋಗಿಸಬಾರದು. ಆದರೆ ಭತ್ತವನ್ನು ಅಕ್ಕಿಯಾಗಿ ಮಾಡಬಹುದು. 7. ಉಡುಪಿ ಹಸುಗೆ ಸರಹದ್ದಿನೊಳಗಿರುವ ಸ್ಥಳಗಳ ಪಿಡುವಳಿದಾರರಿಗೆ ತಮ್ಮ ಮನೆ ಬಳಕೆಗೆ ಬೇಕಾಗುವ ಅಕ್ಕಿಯನ್ನು ತಮ್ಮ ಗೇಣಿಯಿಂದ ಪಡೆಯಬೇಕಾದಲ್ಲಿ, ಒಂದು ವರ್ಷದ ಬಳಕೆಗೆ ಬೇಕಾಗುವ ತಮ್ಮ ಅಕ್ಕಿಯನ್ನು ಯಾವಯಾವ ಸಾಗುವಳ್ಳಿದಾರರಿಂದ ತರುತ್ತೇನೆ ಎಂಬುದರ ಬಗ್ಗೆ ತಮಗೆ ಗೇಣಿರೂಪವಾಗಿ ಬರತಕ್ಕ ಎಲ್ಲಾ ವಿವರಗಳನ್ನೂ ಕಾಣಿಸಿ ಒಂದು ದೃಢಪತ್ರಿಕೆಯನ್ನು ಉಡುಪಿ ಹಸುಗೆ ಆಫೀಸರರಿಗೆ ಇದೇ ಸಪ್ಟೆಂಬರ ೩೦ಗಳ ಅತ್ಯದೊಳಗೆ ತಿಳಿಸತಕ್ಕದ್ದು. ದೃಢಪತ್ರಿಕೆಯ ಮಾದರಿಯನ್ನು ಹಸುಗೆ ಆಫೀಸಿನ ನೋಟೀಸು ಬೋರ್ಡಿನಲ್ಲಿ ಕಾಣಬಹುದು.

ನಗರ ಸಭೆಯು—ಮಂಗಳವಾರ ದಿನ ನಗರ ಸಭಾಧ್ಯಕ್ಷ ಶ್ರೀ ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಟೌನ್ ಪ್ಲಾನಿಂಗ ಯೋಜನೆಯು ಸಲುವಾಗಿ ಇತ್ತು ವರುಷದ ಕಂತುಗಳಿಂದ ಮರುಪಾವತಿ ಮಾಡುವ ಕರ್ತವ್ಯಲ್ಲಿ ರೂಪಾ ೨೫೦೦೦ ಸಾಲ ಪಡೆಯಬೇಕೆಂದಾಯಿತು. ಹೆಣ್ಣು ಮಕ್ಕಳ ಸಲುವಾಗಿಯೇ ಸರಕಾರದ ಕಡೆಯಿಂದ ಉಡುಪಿಯಲ್ಲೊಂದು ಹೈಸ್ಕೂಲ್ ಸ್ಥಾಪನೆಯಾಗಬೇಕು, ಸ್ಥಾಕರದಿಂದ ವಿದ್ಯುತ್ ಶಕ್ತಿ ಉಡುಪಿಗೆ ದೊರೆಯುವಂತಾಗಬೇಕು ಎಂಬ ಎರಡು ಠರಾವುಗಳನ್ನು ಶ್ರೀ ಕುಂಜೂರು ರಾಮಚಂದ್ರರಾಯರು ಮುಂದಿಸಿದರು. ಅವೆರಡೂ ಮಾನ್ಯವಾದುವು. ಯುದ್ಧ ಪೂರ್ವದ ಸಮಯದ ಗಂಟೆಯೇ ಜ್ಯಾರಿಗೆ ಬರುವಂತಾಗಬೇಕೆಂದು ಸರಕಾರವನ್ನು ವಿನಂತಿಸುವ ಮಿ। ಆರ್. ಎ. ಸ್ಯಾನುನ್ಸರ ನಿರ್ಣಯವು ಪಾಸಾಯಿತು.

ಕಲಾವ್ಯಂದ—ತಾ. ೧೪-೯-೪೫ನೇ ದಿನ ಕಲಾವ್ಯಂದದಲ್ಲಿ ಶ್ರೀ. ಕೆ. ಶಂಕರನಾರಾಯಣ ಉಪಾಧ್ಯಾಯರ ಆರಂಭ ಭಾಷಣದ ಬಳಿಕ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಚಾರಕರಾದ ಶ್ರೀ. ಆರ್. ಕೃಷ್ಣದೇವ್ ಬಿ. ಎ. ಅವರು ಗಂಡೂಂದೂ ಧರ್ಮದಲ್ಲಿ ವಿಶಾಲ ದೃಷ್ಟಿ" ಎಂಬೀ ವಿಷಯದ ಕುರಿತು ಉಪಾತ್ತ ಹಾಗೂ ಕ್ರಾಂತಿಕಾರಕ ಭಾಷಣ ಮಾಡಿದರು.

ಸಾಹಿತ್ಯೋತ್ಸವ—ಕರ್ನಾಟಕ ಸಂಘದ ಸಾಹಿತ್ಯೋತ್ಸವವು ಇದೇ ಬರುವ ತಾ. 12-10-'45ನೆಯ ಶುಕ್ರವಾರ ಮೊದಲ್ಗೊಂಡು ತಾ. 15-10-'45ನೆಯ ಸೋಮವಾರದ ವರೆಗೆ 4 ದಿನಗಳಲ್ಲಿ ಸ್ಥಳೀಯ ಬೋರ್ಡು ಹ್ಯಾಸ್ಕೂಲ ಪೀಪ್ಲ್ಸ್ ಹಾಲಿನಲ್ಲಿ ನಡೆಯಲಿರುವುದು. ಉತ್ಸವದ ಅಂಗವಾಗಿ, ತಾ. 12-10-45ರ ಬೆಳಿಗಿನ ಘಂಟೆ ೧೦.೩೦ಕ್ಕೆ ಸ್ಥಳೀಯ ಕಲಾಶಿಲ್ಪಗಳ ಮತ್ತು ಕೈಗಾರಿಕೆಗಳ ವಸ್ತುಪ್ರದರ್ಶನದ ಉದ್ಘಾಟನೆಯೂ, ತಾ. 13-10-'45ರ ಬೆಳಿಗಿನ ಘಂಟೆ ೧೦.೩೦ಕ್ಕೆ ಮುದ್ದಣ ಕವಿಯ ಭಾವಚಿತ್ರದ ಅನಾವರಣವೂ ಆಗಲಿವೆ. ತಾ. 12-10-'45ರಿಂದ ತಾ. 14-10-'45ರ ವರೆಗೆ ಪ್ರತಿದಿನ ಸಾಯಾಹ್ನ ಘಂಟೆ ೫.೩೦ರಿಂದಲೂ, ತಾ. 15-10-'45 ರಂದು ಬೆಳಿಗಿನ ಘಂಟೆ ೧೦-೩೦ರಿಂದಲೂ, ಸಾಹಿತ್ಯೋತ್ಸವದ ಅಧಿವೇಶನಗಳೂ, ಶರಂಗಿಗಳಾದ ಭಾಷಣ-ವಾಚನ-ನೃತ್ಯೋದಾಪಗಳೂ ನೆರವೇರುವುವು. ತಾ. 15-10-'45ರ ರಾತ್ರಿ 9ಕ್ಕೆ ನಡೆವ ಯಕ್ಷಗಾನದೊಂದಿಗೆ ಉತ್ಸವವು ಮುಗಿವುದು. ಉತ್ಸವದ ಅಂಗವಾಗಿ ೧ ಪ್ರಬಂಧ ಸ್ಪರ್ಧೆ, ೨ ಕವಿತಾವಾಚನ ಸ್ಪರ್ಧೆ, ೩ ಆಶುಭಾಷಣ ಸ್ಪರ್ಧೆಗಳು ನಡೆಯಲಿರುವವು.

ವಿಶೇಷ ಸಭೆ—ತ್ರಿವಾಂಕೂರು ಸರಕಾರದ ವಿದ್ಯಾಧೋರಣೆಯನ್ನು ವಿಶೇಷಿಸುವ ಸಲುವಾಗಿ ತಾ. 23ರಲ್ಲು ಉಡುಪಿ ಮತ್ತು ಮಲ್ಪೆಯ ಕಥೋಲಿಕ ಬಂಧುಗಳು ಉಡುಪಿ ಚರ್ಚ್ ಶಾಲೆಯಲ್ಲಿ ಸಭೆಗೂಡಿದರು. ಧಾರ್ಮಿಕ ಶಿಕ್ಷಣವೆ ಅತ್ಯಗತ್ಯವೆಂದು ಸಭೆಯು ಅಭಿಪ್ರಾಯಪಟ್ಟು ತ್ರಿವಾಂಕೂರು ಸರಕಾರವು ಕೈಕೊಂಡ ಧೋರಣೆಯನ್ನು ವಿಶೇಷಿಸಿ ಆ ಧೋರಣೆಯನ್ನು ಹಿಂತೆಗೆಯುವಂತಾಗಬೇಕೆಂದು ಮಹಾರಾಜರನ್ನು ಪ್ರಾರ್ಥಿಸಲಾಯಿತು.

ವಿದ್ಯಾರ್ಥಿ ಸಂಘ ಸ್ಥಾಪನೆ—ಮಂಗಳೂರು ವಿದ್ಯಾರ್ಥಿ ಸಂಘದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾರ್ಥಿ ಸಂಘಗಳನ್ನು ಸ್ಥಾಪಿಸುವ ಉದ್ದೇಶದಿಂದ ಉಡುಪಿಗೆ ಬಂದು ಬೋರ್ಡು ಹ್ಯಾಸ್ಕೂಲಿನಲ್ಲಿ ಆ ಶಾಲೆಯ ಹೆಡ್ಮಾಸ್ಟರ್ ಮಿ। ಆರ್. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಗಳ ಸಭೆಯನ್ನು ಜರಗಿಸಿದರು. ವಿದ್ಯಾರ್ಥಿ ಸಂಘಗಳ ಅವಶ್ಯಕತೆ, ಧ್ಯೇಯ ಇತ್ಯಾದಿ ವಿಷಯಗಳನ್ನಿತ್ತಿ ಶ್ರೀಗಳಾದ ಕೆ. ಕೆ. ಅಡಿಯೋಡಿ, ಬಿ. ಬಾಲಕೃಷ್ಣ ಶೆಟ್ಟಿ, ಎನ್. ಸೂರ್ಯನಾರಾಯಣ ರಾವ್ ಮೊದಲಾದವರು ಭಾಷಣಗಳನ್ನಿತ್ತರು. ತದನಂತರ ಒಂದು ಸ್ಥಾಯಿ ಸಮಿತಿಯ ಸ್ಥಾಪನೆಯಾಯಿತು.

ಕಲ್ಯಾಣಪುರ—ಇಲ್ಲಿಯ ಮಾಜೀ ಪರೇಲರೂ ಬಡ ಜನ ಪಕ್ಷಪಾತಿಗಳೂ ಆಗಿದ್ದ ತೋನ್ಸೆ ತೇಜಪ್ಪ ಪೈಗಳ್ಳಿಯವರು ತಾ 21ನೇ ರಾತ್ರಿ ದಿವಂಗತರಾದುದು ಕೋಚನೀಯವಿದೆ. ಶವವನ್ನು ಊರವರೆಲ್ಲಾ ಸೇರಿ ಬೇಂಡು ವಾಲಗದಿಂದ ಮೆರವಣಿಗೆಯಲ್ಲ್ಲೊಯ್ದು ತಮ್ಮ ಕೋಳಕ ಪ್ರದರ್ಶನದೊಂದಿಗೆ ಮೃತರಿಗೆ ಕೊನೆಯ ಗೌರವವನ್ನು ಸಲ್ಲಿಸಿದರು.

ಗಾಂಧಿ ಜಯಂತಿ

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಕಟಣೆ.

ತಾ. 2-10-45ರಿಂದ 9-10-45ರ ವರೆಗೆ ಇಡೀ ಜಿಲ್ಲೆಯಲ್ಲಿ ಗಾಂಧಿ ಜಯಂತಿಯನ್ನು ಉತ್ಸಾಹದಿಂದ ಆಚರಿಸುವ ವ್ಯವಸ್ಥೆಯನ್ನು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರೆಲ್ಲಾ ಮಾಡುವುದು ಅವಶ್ಯವಾಗಿ ವಿನಂತಿ. ನೂಲುವುದು, ಹರಿಜನ ಕೆಲಸವೇ ಮೊದಲಾದ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತವರೆ ಈ ಸಪ್ತಾಹವನ್ನು ಉಪಯೋಗಿಸಿಕೊಳ್ಳಬೇಕೆಂಬುದು ಎಲ್ಲರಿಗೂ ತಿಳಿದ ವಿಷಯ. ಗಾಂಧಿಟಿಯವರಿಗೆ ನೂಲನ್ನು ಒಪ್ಪಿಸುವ ಸೂತ್ರಯಜ್ಞದಲ್ಲಿ ಭಾಗವಹಿಸುವವರು ಈ ಮೊದಲೇ ಪ್ರಕಟಿಸಿದಂತೆ ಆ ಕಾರ್ಯಕ್ರಮವನ್ನು ಮಂಗಳೂರಿನ ಅಖಿಲ ಭಾರತ ಚರಕ ಸಂಘದಿಂದ ಅಧಿಕೃತ ಹೊಂದಿದ ಸ್ವದೇಶಿ ಸ್ಟೋರ್ಸಿಗೆ ಬೇಗನೆ ಕಳುಹಿಸತಕ್ಕದ್ದು.

ಹರಿಜನರಿಗೆ ಧಾರ್ಮಿಕ, ಸಾಮಾಜಿಕ, ಸಮಾನತೆ ದೊರೆಯುವುದಕ್ಕಾಗಿ ಗಾಂಧಿಜೀ ಇನ್ನೊಂದು ಉಪವಾಸ ಕೈಕೊಳ್ಳುವ ಸಂದರ್ಭವೂ ಇರುವುದು. ಆದುದರಿಂದ ಕಾಂಗ್ರೆಸ್ ಕಾರ್ಯಕರ್ತರು ಹರಿಜನರಿಗೆ ಹೋಟೆಲು ಭೋಜನಾಲಯಗಳಿಗೆ ಪ್ರವೇಶ ಕೊಡಿಸುವ, ದೇವಸ್ಥಾನ ಪ್ರವೇಶ ಸಿಗುವಂತೆ ಮಾಡುವ ಮಿತ್ರಭೋಜನ, ಕೂಟ ಇತ್ಯಾದಿಗಳನ್ನು ನಡೆಸಿ ಹರಿಜನರ ಸಮಾನ ಸ್ಥಾನವನ್ನು ಪ್ರತಿಪಾದಿಸುವ ಕಡೆಗೆ ವಿಶೇಷ ಗಮನವನ್ನು ಕೊಡುವುದು ಅವಶ್ಯವಷ್ಟೆ.

1942ನೇ ಆಗಸ್ಟು ಚಳವಳಿದಲ್ಲಿ ಕಾಂಗ್ರೆಸಿನ ಗೌರವವನ್ನು ಎತ್ತಿಹಿಡಿದ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿಯೂ ಆದರ ಅಗ್ರಗಾಮಿ ಸೇನೆಯಂತೆ ಅದಕ್ಕೆ ನೆರವಾಗುವ ಕೆಲಸ ನಂಬುತ್ತೇನೆ. ಗಾಂಧಿ ಜಯಂತಿಯ ಸಂದರ್ಭದಲ್ಲಿ ಅವರು ಕಾಂಗ್ರೆಸಿನ ಸಂದೇಶವನ್ನು ಪಟ್ಟಣಗಳಲ್ಲಿ ಮಾತ್ರವಲ್ಲದೆ ಹಳ್ಳಿಹಳ್ಳಿಗಳಿಗೂ ಬಯ್ದು ಸ್ವಚ್ಛಾರವಾಗಬೇಕೆಂದು ಸ್ವಾರ್ಥಿಸಿಕೊಳ್ಳುತ್ತೇನೆ.

ಜಿಲ್ಲೆಯ ಸರ್ಕಲು ಕಾಂಗ್ರೆಸ್ ಕಮಿಟಿಗಳು ವಿಸರ್ಜಿಸಲ್ಪಟ್ಟಿದ್ದರಿಂದ ಗಾಂಧೀ ಜಯಂತಿ ಆಚರಣೆಗಾಗಿ ಕೆಳಗೆ ಕಾಣಿಸಿದ ಮಹನೀಯರನ್ನು ಆಯಾಯ ಸರ್ಕಲುಗಳಿಗೆ ಯಶಸ್ವಿಯಾಗಿ ವ್ಯವಸ್ಥೆಗೊಳಿಸುವಂತೆ ನೇಮಕ ಮಾಡಿರುವೆನು. ಆ ಮಹನೀಯರುಗಳಿಗೆ ಎಲ್ಲಾ ಸರ್ಕಲುಗಳ ಮಹಾಜನರು ತಮ್ಮ ಸಹಕಾರವನ್ನೀಯಬೇಕೆಂದು ಕೋರುತ್ತೇನೆ.

ಕಾರ್ಕಳ ಸುಬ್ಬಣ್ಣ ಶೆಟ್ಟಿ (ಕಂದಾವರ ಸರ್ಕಲ್), ಕೆ. ಜೆ. ಕಾಮತ್ (ಬಾರ್ಕೂರು ಸರ್ಕಲ್), ಪಿ. ಮಂಜುನಾಥ ನಾಯ್ಕ (ಉಡುಪಿ ಸರ್ಕಲ್), ಪಿ. ಲಕ್ಷ್ಮೀನಾರಾಯಣ ನಾಯ್ಕ (ಕಟ್ಟಾಡಿ ಸರ್ಕಲ್), ಕೆ. ವೆಂಕಟೇಶ ಪ್ರಭು (ಕಾರ್ಕಳ ಸರ್ಕಲ್), ಕೆ. ಕೆ. ಶೆಟ್ಟಿ ಮತ್ತು ಕೆ. ಈಶ್ವರ (ಮಂಗಳೂರು ಸರ್ಕಲ್), ಎನ್. ಉಪೇಂದ್ರ ನಾಯ್ಕ (ಬಂಟ್ವಾಳ ಸರ್ಕಲ್), ಪಿ. ಮಾಧವ ಪಡಿಯಾರ (ಪಾಣೆಮಂಗಳೂರು ಸರ್ಕಲ್), ವೈ. ಸಂಜೀವ ಶೆಣೈ (ಪುತ್ತೂರು ಸರ್ಕಲ್), ಬಿ. ದೇವಪ್ಪ ಆಳ್ವ (ಮಂಜೇಶ್ವರ ಸರ್ಕಲ್), ಎಂ. ಉಮೇಶ ರಾವ್ (ಕಾಸರಗೋಡು ಸರ್ಕಲ್), ಅಚ್ಚುತ ಕೆಣ್ಣೆ (ಹೊಸದುರ್ಗ ಸರ್ಕಲ್).

ವಿ. ಸೂ.—ವಿಧಾಯಕ ಕಾರ್ಯಕ್ರಮವಲ್ಲದೆ ಈ ಸಪ್ತಾಹದ ಸಂದರ್ಭದಲ್ಲಿ ಕಾಂಗ್ರೆಸಿನ ಸಂಘಟನೆ ಮತ್ತು ಚುನಾವಣೆಯ ಪ್ರಚಾರ ಮಾದುಪುದು ಜರೂರಿನ ಕೆಲಸವಾಗಿ ಬಂದಿದೆ. ಆದ್ದರಿಂದ ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿಗಳಲ್ಲಿ ಅವಪ್ಪು ಹೆಚ್ಚಿನ ಸಭೆಗಳನ್ನು ನಡೆಸಿ ಕಾಂಗ್ರೆಸಿನ ನಿರ್ಣಯಗಳನ್ನು ಜನರಿಗೆ ವಿವರಿಸಿ ಚುನಾವಣೆಯಲ್ಲಿ ಅದು ಭಾಗವಹಿಸುವ ಉದ್ದೇಶವೇನೆಂಬುದನ್ನು ತಿಳಿಸಿ ಅದಪ್ಪು ಹೆಚ್ಚು ಮಂದಿ ಓಟರರಾಗಿ ಸೇರುವ ಪ್ರಯತ್ನ ಮಾಡತಕ್ಕದ್ದು.

ಎಂ. ಡಿ ಅಧಿಕಾರಿ,
ಅಧ್ಯಕ್ಷ,
ಜಿಲ್ಲಾ ಕಾಂಗ್ರೆಸ್ ಕಮಿಟಿ, ದ. ಕ.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ಸವಧಾರತ ಪುಸ್ತಕ ಭಂಡಾರ,
: ಉಡುಪಿ :

The Southern India Apex Bank Limited, Udipi

NOTICE.

Notice is hereby given that the Register of members and Transfer Books of the Bank will remain closed from 7th October, 1945 to 5th November, 1945, both days inclusive.

(By order of the Board)

KALSANK, UDIPI, 16-9-45

T. M. A. Pai
Managing Director

The Maharashtra Apex Bank, Ltd.,

(Incorporated in British India with limited Liability)

Head Office: **UDIPI,** *S. India.*

NOTICE.

The Register of Members and Transfer Books of the Bank will remain closed from the 7th October, 1945 to 5th November, 1945 (both days inclusive).

(BY ORDER)

"Ramanjaneya Building" UDIPI 9th Sept., 1945.

Upendra Ananth Pai,
Managing Director.

ದಕ್ಷಿಣ ಕನ್ನಡ.

ಮಂಗಳೂರು

ಹಡಗು ಚಲಾವಣೆ– ಬರುವ ೮ ಕ್ಕೋಬರ ೨ರಡನೆಯ ವಾರದಿಂದ, ಮಂಗಳೂರು–ಬೊಂಬಯಿಯ ಸಾಮಾನ್ಯ ಹಾಗೂ ಪ್ರಯಾಣಿಕರ ಹಡಗು ಚಲಾವಣೆಗೆ ಆರಂಭವಾಗುವುದೆಂದು ಸ್ಥಳೀಯ ಬೊಂಬೆ ಸ್ಟೀಮ್ ನೆವಿಗೇರ್ಸ್ ಕಂಪೆನಿಯ ಅಧಿಕಾರಿಗಳು ತಿಳಿಸುತ್ತಾರೆ.

ಅಖಿಲ ಭಾರತ ಆಯುರ್ವೇದಿಕ್ ಕೊಂಗ್ರೆಸ್–ಳಿನೆಯ ಅಧಿವೇಶನದ ಸ್ವಾಗತ ಸಮಿತಿಯ ಕಾರ್ಯಕಾರಿ ಮಂಡಲದ ೨ನೆಯ ಅಧಿವೇಶನವು ನುಂಗಳೂರು ಅತ್ತಾವರದಲ್ಲಿರುವ ರಂಕರ್ ಪಿಟ್ಟುಲ್ ಮೋಟರ್ಸ್ ಕಂಪೆನಿಯ ಆಫೀಸಿನಲ್ಲಿ ತಾ ೧೯-೯-೧೯೪೫ನೆಯ ರವಿವಾರ ಬೆಳಿಗ್ಗೆ ೧೦ ಘಂಟೆಗೆ ಜರಗಲಿರುವುದು.

ಸ್ಥಳೀಯ ನೇಕಾರರ ಸಂಘದ ಸಭೆಯೊಂದು ಶ್ರೀ ಸಿಂಪ್ಸನ್ ನೋನ್ಸರ ಅಧ್ಯಕ್ಷತೆಯಲ್ಲಿ ಜರಗಿದಾಗ, ಸಿಕ್ಕಿಮಪುರ ನಯೆಸ್ಸಿ ಕಾರ್ಖಾನೆಯಲ್ಲಿ ಮಜೂರರ ಸಂಘಟನಾ ಸಾಮರ್ಥ್ಯವನ್ನು ತಡೆಯುವ ಕಾಯಿದೆ ಮೋರೆಗೆ, ತೆಗೆದು ಹಾಕಲ್ಪಟ್ಟ ಮಜೂರರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂಬ ನಿರ್ಣಯವು ಮಾನ್ಯವಾಯಿತು

ಬೋನಸ್ ಸಿಗಬೇಕು– ಎನ್ನುತ್ತ ಸ್ಥಳೀಯ ವಿಡಿ ಕೆಲಸಗಾರರ ಸಾರ್ವಜನಿಕ ಸಭೆಯೊಂದು ಶ್ರೀ ಸಿಂಪ್ಸನ್ ನೋನ್ಸರ ಅಧ್ಯಕ್ಷತೆಯಲ್ಲಿ ಜರಗಿದಾಗ, ಮಜೂರರ ನ್ಯಾಯಬಾದೆ ಬೋನಸ್ಸಿನ ಕೇಳಿಕೆಯನ್ನು ಸಾರ್ವಜನಿಕ ಪ್ರತಿನಿಧಿಗಳು ಮಧ್ಯಸ್ಥಿಕೆ ವಹಿಸಿ ತೀರ್ಮಾನಿಸಬೇಕೆಂಬ ನಿರ್ಣಯವು ಮಾನ್ಯವಾಯಿತು

ದರ ನಿಯಂತ್ರಣ–ಸಲಹಾ ಸಮಿತಿಯವರು ತಾ ೧೫-೯-೧೯೪೫ರಂದು ನಿರ್ಧರಿಸಿ ಪ್ರಕಟಿಸಿರುವ ಕೆಲವು ಧಾರಣೆಗಳು (ನಗರದೊಳಗೆ) ೧ನೇ ಕ್ವಾಸ್ ಭತ್ತ ಸೇರಿಗೆ ರೂ 0 2 1. 2ನೇ ಕ್ವಾಸ್ ಸೇರಿಗೆ 2 ಆಣೆ. ಮಸ್ಕತಿ ಅಕ್ಕಿ ಸೇರಿಗೆ ರೂ 0 4 8 ಗುಮ್ಟು ಅಕ್ಕಿ ಸೇರಿಗೆ ರೂ. 0 4 5 ಸ್ಕೂ ಅ ರಿಗೆ ರೂ. 0-4 3. ಗೋದಿ ಸೇರಿಗೆ ರೂ 0-4-2. ಮೆಣಸು 1ನೇ ಕ್ವಾಸ್ ಸೇರಿಗೆ ರೂ 0-6 0 2ನೇ ಕ್ವಾಸ್ ಸೇರಿಗೆ ರೂ 0 5 6 ಉಪ್ಪು ಸೇರಿಗೆ 1 ಆಣೆ 6 ಪೈ. ಹುರುಳಿ ಸೇರಿಗೆ 4 ಆಣೆ ಉದ್ದು (ಹೊರಗಿನದು) ಸೇರಿಗೆ 7 ಆಣೆ. ಉದ್ದು (ಹೊರಗಿನದು) ಸೇರಿಗೆ 5 ಆಣೆ 6 ಪೈ ರಾಗಿ ಸೇರಿಗೆ 4 ಆಣೆ ಕಡ್ಲೆ 1ನೇ ಕ್ವಾಸ್ ಸೇರಿಗೆ 4 ಆ 11 ಪೈ 2ನೇ ಕ್ವಾಸ್ ಕಡ್ಲೆ ಸೇರಿಗೆ 4 ಆಣೆ 9 ಪೈ ಚಿಮಣಿ ಎಣ್ಣೆ ಬಾಟ್ಲಿಗೆ 3 ಆಣೆ 3 ಪೈ ಎಳ್ಳೆಣ್ಣ ಕುತ್ತಿಗೆ ರೂ. 2 ಆಣೆ 2. ತೆಂಗಿನೆಣ್ಣೆ ಕುತ್ತಿಗೆ ರೂ 1 ಆಣೆ 9. ತೆಂಗಿನ ಕಾಯಿ 100 ಕ್ಕೆ ರೂ 12 ಊರ ಬೆಲ್ಲ ರಾಶಿಗೆ 2 ಆಣೆ 10 ಪೈ ಮೈಸೂರು ಬೆಲ್ಲ ರಾಶಿಗೆ 3 ಆಣೆ 5 ಪೈ. ಕೆಟ್ಟಗೆ ಬುದಿಗೆ 8 ರೂ 11 ಆಣೆ ಕೆಟ್ಟ ಬೇತೆ ಸೇರಿಗೆ 5 ಆಣೆ 7 ಪೈ ಕಡ್ಲೆ ಬಟ್ಟೆ ರಾಶಿಗೆ 3 ಆಣೆ 1 ಪೈ ಕಾಫಿ ಬೇಳ ನುಣ ಕ್ಕೆ 31 ರೂ. ಫೀಬರಿ ಮಣಕ್ಕೆ 31 ರೂ 8 ಆಣೆ. ಸಕ್ಕರೆ ಸನರಮೊಳಗೆ ರಾಶಿಗೆ ಆಣೆ 1

ಸ್ವಾಥವಿಲ್ಲದ ವಿದ್ಯಾಭ್ಯಾಸದ–ಕಾರ್ತು ತಿರುವಾಂಕೂರು ಸರಕಾರದ ನೂತನ ಯೋಜನೆಗೆ ನಿಷೇಧ ಸೂಚಿಸುವುದಕ್ಕಾಗಿ ಸ್ಥಳೀಯ ಕೆಥೋಲಿಕ ಮಂಡಲಿಯು ಆಶ್ರಯದಲ್ಲಿ ತಾ ೨೩ರಂದು ಸಂಜೆ ಓಲ್ಡ್‌ಗೇಟ್ ಚರ್ಚ್ ಮೈದಾನದಲ್ಲಿ ಒಂದು ಸಭೆ ಜರಗಲಿದೆ

ಮಹಿಳಾ ಪರಿಷತ್ತು [illegible] ಇವರಿಗೆ ತಾ ೭, ೮ ೧೦ ಇಳಕ್ಕೆ ಒಂದು ಆಸನಸೂಕ್ಷಾಲಾಪಾರದ ಪ್ರಾಂತೀಯ ಕರ್ನಾಟಕ ಮಹಿಳಾ ಒಂಪತ್ತನ್ನು ತಾ ೨೦, ೨೧ ೧೦ ಇಳಕ್ಕೆ ನುಂಜೆಮಠದಲ್ಲಾಗಲಿರುವುದು ಸರಿಸನ್ನತ ಕಾರ್ಯದರ್ಶಿಗಳು ತಿಳಿಸುತ್ತಾರೆ

ಹಿಂದೂಗಳಿಗೆ ಸಕ್ಕರೆ–ಚ್ಚಿ ಪೊಡಿಲಾದ ಪಬ್ಬಗಳ ಏಪಿತ್ತ, ಮಂಗಳೂರು ರೇಶನ್ ಸರದಿನ್ಸಾಳಿಗಳ ಅಜ್ಜ ಹಿಂದೂಗಳಿಗೆ, ಈ ತಿಂಗಳಲ್ಲಿ ಸಕ್ಕರೆ ರೇಶನ್ನು ಎರಡು ಪಾವಿನಷ್ಟು ಹೆಚ್ಚಿಸಿರುವರು

ಜಿಲ್ಲೆಗೆ ಅಕ್ಕಿ ಸರಬರಾಯಿ–ಈ ವರ್ಷ ನಮ್ಮ ಜಿಲ್ಲೆಗೆ ಮಂಲಾರಿನಿಂದ ಸುಮಾರು ೪೦೦೦ ಟನ್ ಅಕ್ಕಿ, ಪಿಡಿಸಿ ೧೫೦೦ ಟನ್, ಬೆಲ್ಲದಿಂದ ೨೦೦೦ ಟನ್, ಬಾದಾಮಿಳಿಂದ ಸುಮಾರು ೨೦೦ ಟನ್ ಇಸ್ಪ ಅಕ್ಕಿ ಬಂದಿದೆಯೆಂದೂ ಇನ್ನೂ ಸುಮಾರು ೪೦೦೦ ಟನ್ ಅಕ್ಕಿ ಎಪ್ರಿಲ್‌ಗೆ ಮುಂಜಾರಾದರೆ ಬರಬೇಕಾಗಿದೆಯೆಂದೂ ಮಾ ಇಸ್ಪು ಬಂದರೂ ಜೊತೆಗೆ ಅಕ್ಕಿ ಆಗುವಷ್ಟಿಲ್ಲವೆಂದೂ ಇದಕ್ಕೆ ಸಮಗೆ ತಕ್ಕಿ ಸಾಲದು, ಇನ್ನೂ ಸುಮಾರು ೨೦೦೦ ಟನ್ ನ್ನಿನಷ್ಟು ಆಕ್ಕಿಯಾದರೂ ಹೆಚ್ಚಿಗೆ ಬಂದರೆ ಜನರ ಪರಿಸ್ಥಿತಿಯು ಸುಧಾರಿಸುವ ಸಾಧ್ಯತೆಯಿದೆಯೆಂದೂ ಮಾಡಬೇಕಾದ ಪ್ರಯತ್ನವನ್ನು ಮಾಡಬೇಕೆಂದೂ ತಿಳಿಬಂದಿದ

ವಿಚಾರಣೆ–ಮಂಡ್ಲಿ ಕಾಂಚಿಕಬ್ರಹ್ಮ ಪರಸ್ಪಾಂತರ ಕಳ್ಳಾರ್ತಿ ಪ್ರಸಿದ್ಧ ಮಾಸಾ ಮೊಕನೆಯೆ ನಮ್ಮ ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ಶ್ರೀ ಕೆ ಶ್ರೀನಿವಾಸಯ್ಯ ಐ ಸಿ ಎಸ್ ಅವರ ಮುಂದೆ ವಿಚಾರಣೆಗಾರಂಭವಾಗಿದೆ. ಇದರಲ್ಲಿ ಒಟ್ಟು ೩೦ ಮಂದಿ ಆರೋಪಿಗಳಿದ್ದಾರೆ ಅವರ ಪೈಕಿ ಈಗ ನಡೆಯುತ್ತಿದೆ ಈ ಪೈಕಿ ಒಬ್ಬರು ಇದೀಗ ನೆಸ್ಲೊಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು, ಜಿಲ್ಲಾ ಜಡ್ಜರು ಆಸ್ಪತ್ರೆಗೆ ಹೋಗಿ ಆತರ ಹೇಳಿಕೆಯನ್ನು ಪಡೆದಿರುವರು

ನಿಧನ–ತಾ ೧೫-೯-೪೫ಕ್ಕೆ ಅಂತ್ಯವಾಗುವ ಒಂದು ವಾರದಲ್ಲಿ, ಮಂಗಳೂರು ಮುನಿಸಿಪಾಲಿಟಿಯೊಳಗೆ ಮೂವರಿಗೆ ನಿಧನ ಬಂತಗಲಿದೆ. ಆದೇ ಕಾರಣದಿಂದ ಎರಡು ಮರಣಗಳಾಗಿವೆ

ಕೊಂಗ್ರೆಸ್ ಕಾರ್ಯಕರ್ತರ ಸಭೆ–ಕೆಲಕಾಲದ ಹಿಂದೆ ರಚಿತವಾದ ಇಲ್ಲಿಯ ಕೊಂಗ್ರೆಸ್ ಕಾರ್ಯಕರ್ತರ ಸಭೆಯು, ಸಮಿತಿಯ ಅಧ್ಯಕ್ಷರಾದ ಶ್ರೀ ಕೆ ಆರ್ ಕಾರಂತರವರ ಅಧ್ಯಕ್ಷತೆಯಲ್ಲಿ ತಾ ೧೯ರಲ್ಲಿ ಜರಗಿ, ಕೊಂಗ್ರೆಸ್ ಕಮಿಟಿಗಳನ್ನು ರಚಿಸುವುದು ಕೊಂಗ್ರೆಸ್ ಪ್ರಣಾಳಿಕೆಯ ಸ್ವೀಕಾರ ಮೂಲಕವಾಗಿ ಎಸೆಂಬ್ಲಿ ಮತ್ತು ಕೌನ್ಸಿಲುಗಳ ಓಟರರನ್ನು ಪಾಮಲು ಮಾಡಿಸಿ ಮುಂಬರುವ ಚುನಾವಣೆಯ ಸಂಬಂಧವಾಗಿ ಪ್ರಚಾರ ಮಾಡುವುದೇ ಮೊದಲಾದ ಕೊಂಗ್ರೆಸ್ ಕೆಲಸಗಳನ್ನು ಕುಂದಲೆ ಜಿಲ್ಲೆಯ ಜಿಲ್ಲಾ ಕೈಗಳಳ್ಳಿಯಲ್ಲಿ [illegible] ಲೂ, ಸ್ಥಿ [illegible] ಧಿಕಾರಿಗಳು ಮುಂದೆ ಕೈಕೊಳ್ಳಲಿರುವ ಕೊಂಗ್ರೆಸ್ ಕಾರ್ಯಕ್ರಮದ ಸಮಿತಿಯು ಒನರಿಗೆ ಪೂರ್ಣ ಸಹಕಾರ ನೀಡುವ ವರದಾವು ಸೂಡಿತು. (ಗಳಿಕರಲ್ಲಿ ದ ಕ ಜಿಲ್ಲಾ ಕೊಂಗ್ರೆಸ್ ಕಮಿಟಿಯನ್ನು ರಚಿಸುತ್ತ ಜಿಲ್ಲೆಯ ಇತರ ಕಮಿಟಿಗಳನ್ನು ವಿಸರ್ಜಿಸುವಾಗ ಆದರ ಅಧ್ಯಕ್ಷರಾದ ಶ್ರೀ ಅಧಿಕಾರಿಗಳವರಿಗೆ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಅಧಿಕಾರವನ್ನೆಲ್ಲ ಕೊಡಲಾಗಿತ್ತೆಂದು ಶ್ರೀ ಅಧಿಕಾರಿಗಳವರು ಮೇಲಿನ ಸಭೆಯಲ್ಲಿ ತಿಳಿಸಿದರು) ಈ ವರದಾವನ್ನು ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮಿಟಿಗೆ ಕಳಿಸಿ, ಕೊಂಗ್ರೆಸ್ ಪ್ರಾಥಮಿಕ ಸದಸ್ಯರ ಶುಲ್ಕಗಳನ್ನು ಕಳಿಸಿಕೊಡಲು ಪ್ರಾರಂಭಿಸಲು ಕಮಿಟಿಯವರು ಶ್ರೀ [illegible] ಧಿಕಾರಿಗಳವರಿಗೆ ಕೂರಲೇ ಕಳಿಸಬೇಕೆಂದು ಕೇಳಿಕೊಂಡು ರದ್ದಾಗಿದೆ

ಕಟಪಾಡಿ–ಸ್ಥಳೀಯ ಶ್ರೀ ವೆಂ ಸ್ವಾಹಾರ್ಯ ಎಲಿಸೆಂಟರಿ ಶಾಲೆ ನುತ್ತು ಹತ್ತಿ ಸ್ಕೂಲಿನ ವಿದ್ಯಾರ್ಥಿಗಳು ದಾಲಾ ಸ್ವಾತಂತ್ರ್ಯ ದಿನಾಚರಣೆಯನ್ನು ತಾ 21 9 45ರಲ್ಲಿ ಶ್ರೀ ಎಸ್ ಪಿ ಕಿಣಿಯರ್, ಬಿ ಎ, ಬಿ ಎಲ್ ಎಸ್ಕೈಕ್ಯೂಟಿವ್ ಆಫೀಸರ್ ಆಧ್ಯಕ್ಷತೆಯಲ್ಲಿ ಜರಗಿಸಿದರು. ಹಾಯರ್ ಎಲಿಮೆಂಟರಿ ಶಾಲಾ ಮುಖ್ಯ ಅಧ್ಯಾಪಕ ಶ್ರೀ ಕೆ ಪಾಂಡುರಂಗ ನುಳ್ಳರು ತಮ್ಮ ಶಾಲೆಯ ಸಂಕ್ಷಿಪ್ತ ಸರದಿಯಲ್ಲಿ ಶಾಲಾಸ್ಥಾಪಕರು ಶಾಲೆಗಾಗಿ ಸಲ್ಲಿಸಿದ ಸೇವೆಯನ್ನು ವಿವರಿಸಿದರು ಶ್ರೀ ಕೆ ರಾಮಚಂದ್ರ ಭಟ್, ವಿದ್ವಾನ್ ಇವರು ದಿನಂಗತ ಶ್ರೀ ಪಾಂಗಾಳ ಶ್ರೀನಿವಾಸ ನಾಯಕರ ಗುಣಕಥನವನ್ನು ಮಾಡಿದರು. ಶ್ರೀ ಕೆ ಪಾಸುದೇವ ಕಾಮತ್, ಕೆ ಸದಾನಂದ ಶೆಣೈ, ಮಾಸ್ಟರ್ ಆಲ್ಫ್ರಂಡ್ ಸಂದರ್ಭೋಚಿತ ಭಾಷಣಗಳಾದವು ಈ ಸಮಾರಂಭದ ಸಲುವಾಗಿ ಎರಡೂ ಶಾಲೆಗಳಲ್ಲಿ ನಡೆಸಿದ್ದ ಭಾಷಣ ಸ್ಪರ್ಧೆಯಲ್ಲಿ ಗದ್ದವರಿಗೆ ಬಹುಮಾನಗಳು ಹಂಚಲ್ಪಟ್ಟವು, ಆಧ್ಯಕ್ಷರ ಸೂರಕ ಭಾಷಣ, ಮಕ್ಕಳ ವಿವಿಧ ವಿನೋದಾವಕಗಳೊಂದಿಗೆ ಸಭೆಯು ಮುಕ್ತಾಯವಾಯಿತು

ಬೊಂಬಾಯಿ–ಲಲಿತಕಲಾ ಕರ್ನಾಟಕ ಸಂಗೀತ ಸಭಾ, ಗಾಯಮು ಇವರು ಶ್ರೀ ಪಿ ಆರ್ ಜೋಳಾರ್, ಬಿ ಎ ಇವರಿಂದ ಬರೆಯಲ್ಪಟ್ಟ ಏಕಾಕಿ ಸುಲೋಚನ ಎಂಬ ನವರಸಭರಿತವಾದ ಪೌರಾಣಿಕ ಕನ್ನಡ ನಾಟಕವನ್ನು ಇವೇ ಒಕ್ಕೂ ಒರ ತಿಂಗಳ ತಾ 5ನೇ ಶುಕ್ರವಾರ ರಾತ್ರಿ ಘಂಟೆ 8 30ಕ್ಕೆ ಕಲ್ಬಾದೇವಿ ರೋಡಿನಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸಲಿದೆಯಂತೆ

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea Stomachache, Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಸೀದೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಆತ್ಮತ್ರಪ ಔಷಧಿ

ದೊಡ್ಡವರಿಗೆ ೪೦೦ ೪ಟೊಟ್ಟು, ನಣ್ಣಮಕ್ಕಳಿಗೆ ೧೦೦ದ 2ಬೊಟ್ಟು ಲವಗ ಯಾ ಓವದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊದಕ್ಟ್ಸ್ ಲಿಮಿಟೆಡ್., ಕಟಪಾಡಿ, ಉಡುಪಿ ಕ

ಉಡುಪಿ ಸ್ವಾತಿಶ್ರೀ ಡಾ ನಾಯಕ್ ಕನ್ಸ್ಟ್ರಿಂಗ್ ಹೌಸ್ ಎಂಡ್ ಫಾರ್ಮೆಸಿ, ಶ್ರೀ ಆರ್ ಎಸ್ ಶೆಣೈ ರಘುವೀರ, ಡಾ ಎ ಕೆ ಕಾಮತ್ ಸಾರ್ಮೆಸಿ, ಡಾ ಕೆ ವೇಣು ಸುಬ್ಬಿ [illegible] ಕೆ ಕಡಿಯಾಳ್, ಕೊರಡ್ಕಲ್, ಸನಘಾರತ ಬುಕ್ ಡಿಪೊ

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಬಂಧವಾಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜಿ ನ್ಯಾಸಾಚಾರ್ಯ,

ಕಟಪಾಡಿ, ಉಡುಪಿ.

ದಕ್ಷಿಣ ಕನ್ನಡಾ ಜಿಲ್ಲಾ ಕೊಂಗ್ರೆಸ್ ಕಮಿಟಿ.

ಕರ್ಯುಲರ್ ನಂಬ್ರ ೧

ಜಿಲ್ಲಾ ಕೊಂಗ್ರೆಸ್ ಕಮಿಟಿಯನ್ನು [illegible] ನುಮಾಲಿಕ ತಿಳಿಸುವಂತೆ ಮಡೇನಂದ್ರೆ --ಕೊಂಗ್ರೆಸ್ಸು ಈಗ ಕ್ರಮಬದ್ಧವಾಗಿರುವದರಿಂದ ಮತ್ತು ಇದರ ಚಟುವಟಿಕೆಗಳನ್ನು ಸುಸಂಘಟಿತ ರೀತಿಯಿಂದ ಪುನಃ ಪ್ರಾರಂಭಿಸಬೇಕಾದುದರಿಂದ ಎಲ್ಲಾ ಸರ್ಕಲ್ ಕಮಿಟಿಗಳು ತಂತಮ್ಮ ಕ್ಷೇತ್ರಗಳಲ್ಲಿ ಪತ್ರಿಕೆಗಳಲ್ಲಿ ಪ್ರಕಟಿಸಿದ ಪ್ರಕಾರ ತಾರೀಕು [illegible] ರೊಳಗೆ ತಾ ೧೫ ೧೦ ಇಸವಿ ವರೆಗೆ "ಗಾಂಧೀ ಜಯಂತಿ" ಸಪ್ತಾಹವನ್ನು ಜರಗಿಸುವ ನೃವಸ್ಥೆಮಾಡುವುದಲ್ಲದೆ ಈ ತೆಳಗೆ ನಮೂದಿಸಿದಂತೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಕೊಳ್ಳಬೇಕಾಗಿ ಇದರಿಂದ ಆ ಪ್ರದೆ ಕೊಂಗ್ರೆಸ್ಸಿನ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕೆಲಸವು ಪ್ರಾರಂಭಗೊಳ್ಳುವುದು ಇದಕ್ಕೆ ಬೇಕಾಗುವ ಪುಸ್ತಕಗಳನ್ನು ಜಿಲ್ಲಾ ಕೊಂಗ್ರೆಸ್ ಆಫೀಸಿನಿಂದ ಪಡೆಯಬಹುದು

ನಿರ್ದೇಶಕ ಕಾರ್ಯಕ್ರಮಗಳು ೧ ರಾಷ್ಟ್ರೀಯ ಧ್ವಜಕ್ಕೆ ತಿ ಅಸ್ಪೃಶ್ಯತಾ ನಿವಾರಣೆ ೩ ಮದ್ಯಪಾನ ನಿರೋಧ ೪ ಖಾದಿ ಪ್ರಚಾರ ೫ ಗ್ರಾಮೋದ್ಯೋಗಗಳು ೬ ಸೂಲ ಶಿಕ್ಷಣ ೭ ಗ್ರಾಮೋದ್ಯೋಗ ಲಕ್ಷ್ಯ ಶಿಕ್ಷಣ, ೮ ಪ್ರೌಢ ಯುವ ಉಚ್ಚಾರ ಆರೋಗ್ಯ ಮತ್ತು ಸ್ವಚ್ಛತೆ ೧೦ ಸ್ವಾವಲಂಬನೆ ೧೧ ಹಿಂದೂ ಮುಸ್ಲಿಂ ಐಕ್ಯತೆ ೧೨ ಅಲ್ಪಸಂಖ್ಯಾತರ ಸಮಸ್ಯೆ ೧೩ ಸಂಘಟನೆ ಸಮರ್ಥನೆ ೧೪ ಸಂಘಟನೆ ಸಮರ್ಥನೆ ೧೫ ಸಂಘಟನೆ ಸಮರ್ಥನೆ

ಸಹಿ/- ಕೆ ಕೆ ಪಿ ರಾಮು ಪ್ರೌಕ್ಯಾಳ
ಪ್ರಚಾರ ಕಾರ್ಯದರ್ಶಿ

NOTICE

ಉಡ್ಡಿ ಡಿ ಮು ಕೋರ್ಟಿನಲ್ಲಿ

O P No 56 1945

I K ಸದಾಶಿವ ಹೆಗ್ಡೆ 2 K ಶಿವಮಂಗಳ ಹೆಗ್ಡೆ ೨೯೫ ಹೆಗ್ಡಾಣಿಳಿಯಾರು ಕುಂಜೂರು ಪಳ್ಳಿ ಗ್ರಾಮದ ವಜೆ—ಅರ್ಜಿದಾರರು.

ಈ ನೂಂಕ ತಿರ್ಮಾನಿಸುವಂತೇನಂದ್ರೆ

ಮೇಲ್ಕಂಡ O. P No 56 1945ನೇ ಅರ್ಜಿದಾರರ ಅಂತ್ಯ ಪೃತಕೆ ಸಂಬ್ಧ ಹೆಸ್ಕೆ ರಿಟ್ಟು New Guardian of India Life Assurance Co, Ltd.ನ ಕಂಪೆನಿಯ ನಂಬ್ರ 16666ನೇ ಪೊಲಿಸಿ ಜಾಬ್ತು ಬಾಕಿ ರೂ 750/- The Catholic Bank Ltd, Kallianpur ಈ ಬೆಂಕಿ ನ ಕರೆಂಟ್ ಅಕೌಂಟಿನಲ್ಲಿರುವ ರೂ 85/, Sri Narayan Guru Bank Ltd., ಉಡ್ಡಿ ಬ್ರಾಂಚಿನ ಕರೆಂಟ್ ಎಕೌಂಟಿನಲ್ಲಿರುವ ರೂ 19 ನ್ನು ಸಹಾ ಪತಿಯೆಂಬಂತೆ ಆ ಬ್ಯಾಂಕಾರರು ಪೃಕೆ 1ನೇ ಆರ್ಡಿನರಿ ಸೆಪ್ಟೆಂಬರ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ಮಾಡಿರುವಂತೆ ಮೇಲ್ಕಂಡ ಅರ್ಜಿಯು ತಾ 3 10 15ಕ್ಕೆ ಇಟ್ಟಿದೆ ಆಕ್ಷೇಪ ಮೇಳುವವರು ಸದರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಹೇಳಿ ಸಮೂಹಿಸಿದ ಕೋರ್ಟು ಸಾಂಗ್ಯ ಕೇಳಿಸ ಅರ್ಜಿಯಲ್ಲಿ ಹಾಜರಾಗಿ ಬ್ಯಾಪೀಸುಸಾಡಿಕೊಳ್ಳತಕ್ಕದ್ದು

Gratian C Rego,
Pleader for Petitioners

1000's SAVED

MARGARET'S

FITS CURE

Stops children's fits in 3 minutes.

Ask your chemist for a box.

Sole Agents

BRIGHTSTAR AGENCIES,

Hospital Rd., Udipi, S. K

ಅಖಿಲ ಕರ್ನಾಟಕ ಗ್ರಾಮೋದ್ಯೋಗಗಳ ಪ್ರದರ್ಶನ ೧೯೪೫.

ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ನಡೆಯಿಂದ

ಪ್ರದರ್ಶನಕ್ಕೆ ಕಳುಹಿಸಿಕೊಡಲಿಕ್ಕೆ ಯೋಗ್ಯವಾದ ವಸ್ತುಗಳ ವಿಸ್ತೃತ ವರ್ಣನೆಯನ್ನು ಇಲ್ಲಿ ಕೊಡಲು ಪ್ರಯತ್ನಿಸಲಾಗಿದೆ. ಇಲ್ಲಿ ಕೊಟ್ಟಿರುವ ಪಟ್ಟಿಯು ಸಂಪೂರ್ಣವಾದುದೆನ್ನಲು ಬರುವುದಿಲ್ಲ. ಇಲ್ಲಿ ಕೊಡಲು ಬಿಟ್ಟುಹೋದ ಯಾವುವಾದರೂ ವಸ್ತುವನ್ನು ಪ್ರದರ್ಶನಕ್ಕೆ ಕಳುಹಿಸಬಹುದು. ಆದರೆ ಅಂಥ ವಸ್ತುವು ಸ್ಪರ್ಧೆಗಳಲ್ಲಿ ಸಿದ್ಧವಾದದ್ದು ಇದ್ದು ಉಪಯುಕ್ತವಾಗಿಯೂ ಆಕರ್ಷಣೀಯವಾಗಿರಬೇಕು.

(೧) ನೂಲುವದು ಮತ್ತು ನೇಯುವದು (ಅ) ಹತ್ತಿ ಆರಿಸುವ ಬೇರೆ ಬೇರೆ ಉಪಕರಣಗಳು (ಬ) ಹತ್ತಿಯನ್ನು ಹಿಂಜುವ ಕೈಯಿಂದ ನಡಸುವ ಸಣ್ಣ ಯಂತ್ರಗಳು, ಪಿಲ್ಲುಗಳು, ಮತ್ತು ಇತರ ಉಪಕರಣಗಳು (ಕ) ರಾಟಿಗಳು (ಡ) ಹತ್ತಿಯ ನೂಲಿನ ನುಗ್ಗಗಳು, ಜಮಖಾನೆ ನುಗ್ಗಗಳು, ಕಂಬಳಿಯ ಮಗ್ಗಗಳು, ಇತರ ಸಣ್ಣ ದೊಡ್ಡ ನುಗ್ಗಗಳು, ಆವುಗಳಿಗೆ ಬೇಕಾಗುವ ಜಗಿಗೆ ಲಾಳಿ ಮೊದಲಾದುವು (ಇ) ಬಣ್ಣ ಮಾಡುವ ಉಪಕರಣಗಳು ನುತ್ತು ಕಚ್ಚಾಮಾಲು (ಫ) ಬಟ್ಟೆಗಳಿಗೆ ಆಚ್ಚುಹಾಕುವ ಉಪಕರಣಗಳು (ಗ) ಸಿದ್ಧವಾದ ಬೇರೆ ಬೇರೆ ತರದ ಅಂವೆಗಳು ಜಮಖಾನೆಗಳು, ಕಂಬಳಿಗಳು ಲಾಡಿಗಳು, ಪಟ್ಟಿಗಳು ಇತ್ಯಾದಿ (೨) ಲೋಹಗಳ ಸಾಮಾನುಗಳು:-(ಎ) ಚಾಕು, ಕತ್ತರಿ, ಕ್ಷೌರದ ಕತ್ತಿ ಇತ್ಯಾದಿ (ಬ) ಪೆಟ್ಟಿಗೆತ್ತಿ, ಹೆರೆಮಣಿ, ಸ್ಪಾಟ ಸಟ್ಟುಗ, ಮೊದಲಾದ ಮನೆತನಕ್ಕೆ ಉಪಯುಕ್ತವಾದ ವಸ್ತುಗಳು (ಕ) ಒಕ್ಕಲತನಕ್ಕೆ ಬೇಕಾಗುವ ಕುದುಗೋಲು, ಕೊಡಲಿ, ನೇಗಿಲು, ಕುಳ, ಸಲಿಕೆ, ಗುದ್ದಲಿ, ಪಂಪುಗಳು ಇತ್ಯಾದಿ (ಡ) ಇತರ ಉದ್ಯೋಗಗಳಿಗೆ ಬೇಕಾಗುವ ಉಳಿ, ಪಾಚಿ, ಕರಗಸ, ಆರ್ಸ ಇಸ್ತ್ರಿ, ರಂಪಿಗೆ ಮೊದಲಾದುವು (ಇ) ಪೆಟ್ಟಿಗೆ ಟ್ರಂಕು, ತಿಜೋರಿ, ಕೀಲಿ ಮೊದಲಾದವು (ಫ) ಕಂಚು, ಹಿತ್ತಾಳೆ, ತಾಮ್ರ ಇತ್ಯಾದಿ ಲೋಹಗಳಿಂದ ಮಾಡಿದ ಪಾತ್ರೆಗಳು ಮತ್ತು ಇತರ ಒಡವೆಗಳು (೩) ಕಟ್ಟಿಗೆಯ ಸಾಮಾನುಗಳು:-ಕುರ್ಚಿ, ಮೇಜು, ಒಕ್ಕಲತನಕ್ಕೆ ಬೇಕಾಗುವ ಸಾಮಾನುಗಳು, ಅರಗಿದ ಬಣ್ಣ ಮಾಡಿದ, ಮತ್ತು ಇತರ ಆಟಿಗೆಗಳು ಇತ್ಯಾದಿ. (೪) ಮಣ್ಣಿನಿಂದ ತಯಾರಿಸಿದ ಪಾತ್ರೆಗಳು, ಹಂಚು, ಗೊಂಬೆಗಳು, ಗಣಪತಿ, ಇತ್ಯಾದಿ. (೫) ಸಾಟಿ, ಪೆನ್ಸಿಲು, ಕಾಗದದ ಪೆಟ್ಟಿಲು, ಬಾಕ್ಸು, ಮಸಿ, ಮಸಿದವತಿ ಕೈಯಿಂದ ನೂಡಿದ ಕಾಗದ,ಪಾಕೀಟು,ಕಾರ್ಡು ಮೊದಲಾದವು (೬) ತಂತಿಪ್ಪಗಳಿಗೆ ಬೇಕಾದ ಉಪಕರಣಗಳು, ಕಚ್ಚಾ ಮಾಲು ಇತ್ಯಾದಿ. (೬) ಕಟ್ಟಿಗೆ, ಕೋಡು, ಪಸ್ತಿದಂತ, ಲೋಹಗಳ ಬರಡೆಗಳು, ಬಾಡಣಿಕೆಗಳು, ಕೆತ್ತಿಗೆಯ ಸಾಮಾನುಗಳು ಮೂರ್ತಿಗಳು ಇತ್ಯಾದಿ. (೭) ಒಳೆಗಳು, ಆವುಗಳನ್ನು ತಯಾರಿಸಲಿಕ್ಕೆ ಬೇಕಾದ ಉಪಕರಣಗಳು, ಕಚ್ಚಾಮಾಲು ಇತ್ಯಾದಿ. (೮) ಬಿದಿರು ಬೆತ್ತಗಳಿಂದ ಮಾಡಿದ ಸಾಮಾನುಗಳು. (೯) ಚೀನುಹುಳ, ರೇಶ್ಮೆ ಹುಳ, ಅರಗಿನ ಹುಳ ಇವುಗಳನ್ನು ಸಾಕುವದಕ್ಕೆ ಮತ್ತು ಆಯಾ ಉದ್ಯೋಗಗಳಿಗೆ ಬೇಕಾಗುವ ಬೇರೆ ಬೇರೆ ಉಪಕರಣಗಳು ಇತ್ಯಾದಿ. (೧೦) ಶಾಸ್ತ್ರೀಯ ರೀತಿಯಿಂದ ಹೈನ ಮಾಡುವದು, ಕೋಳಿ ಸಾಕುವದು, ಆವುಗಳಿಗೆ ಬೇಕಾಗುವ ಉಪಕರಣಗಳು. (೧೧) ಸುಧಾರಿಸಿದ ಪದ್ಧತಿಯಿಂದ ಎಣ್ಣೆ ತೆಗೆಯುವುದು. (೧೨) ಲಲಿತ ಕಲೆಯ ವಸ್ತುಗಳು:-ಹೆನಿಗೆ, ಕಸೂತಿ ಹಾಕಿದ ವಸ್ತುಗಳು, ಚಿತ್ರಗಳು ಇತ್ಯಾದಿ. (೧೩) ಹೊಸ ಮಾದರಿಯ ಅಂದರೆ ಕಡಿಮೆ ಕಟ್ಟಿಗೆ ಹಿಡಿಯುವ, ಹೊಗೆ ಆಗದಿರುವ ಒಲೆಗಳು, ಹೊಸ ನಮೂನೆಯ ದೀಪಿಗೆಗಳು, ಹಪ್ಪಳ, ಸೆಂಡಿಗೆ, ಶಾವಿಗೆ, ಉಪ್ಪಿನಕಾಯಿ ಮೊದಲಾದವು. (೧೪) ಕರ್ನಾಟಕದಲ್ಲಿ ಸಿಗುವ ಔಷಧೋಪಯೋಗಕ್ಕೆ ನಿಡುವ ಮೂಲಿಕೆಗಳು ಮತ್ತು ಕರ್ನಾಟಕದ ಕಾರಖಾನೆಗಳಲ್ಲಿ ಸಿದ್ಧವಾದ ಔಷಧಗಳು (೧೫) ಮೇಲಿನಿಂದ ಮೂಡದ ವಸ್ತುಗಳು:-ಕಾಲು ಜೋದುಗಳು, ಚೀಲಗಳು, ಪಟ್ಟಿಗಳು ಇತ್ಯಾದಿ (೧೬) ತೆಂಗಿನ ನಾರಿನಿಂದ ತಯಾರಿಸಿದ ವಸ್ತುಗಳು.

ಪ್ರದರ್ಶನಕ್ಕೆ ಇನ್ನು ಸ್ವಲ್ಪೇ ದಿನಗಳು ಉಳಿದಿರುವುದರಿಂದಲೂ ಯುದ್ಧದ ನೂಲಕ ದೈಲ್ಪ ನೋಟೂರು ಮೊದಲಾದುವುಗಳಿಂದ ಸಾಮಾನುಗಳು ಕಳುಹಿಸುವುದಕ್ಕೆ ಹೆಚ್ಚು ವೇಳೆಯು ಹತ್ತುವದರಿಂದಲೂ ಆಲ್ಲಲ್ಲಿಯ ಕೆಲಸಗಾರರು ಪ್ರದರ್ಶನಕ್ಕೆ ಕಳುಹಿಸತಕ್ಕ ವಸ್ತುಗಳನ್ನು ಆದಷ್ಟು ಬೇಗ ಒಟ್ಟುಗೂಡಿಸಿ ಕಳುಹಿಸಬೇಕೆಂದು ಬೇಡಿಕೊಳ್ಳುತ್ತೇವೆ. ಎಲ್ಲರೂ ತಮ್ಮ ಕೈಯಿಂದಾದಷ್ಟು ಪ್ರಯತ್ನ ಮಾಡಿ ಕೆಲಸಮಾಡಿದರೆ ಪ್ರದರ್ಶನವು ಯಶಸ್ವಿಯಾಗುವದು.

S. R. Patil, G. S. Huruli, } ಕಾರ್ಯದರ್ಶಿಗಳು.
ಜಿಲ್ಲಾ ಲೋಕಲ್ ಬೋರ್ಡು, ಧಾರವಾಡ,
೧೪-೪ ೧೯೪೫.

ಪ್ರಕಟಣೆ

ಕುಂದಾಪ್ರ ತಾಲೋಕು ಹಾರ್ನಳ್ಳಿ ಮಂಪಾಳ್ಳಿ ಗ್ರಾಮದ ಮಡಿಯಾರದ ವಿಶ್ವೇಶ್ವರ ಅಡಿಗರ ಮಗ ಬಡಗುಮನೆಯಲ್ಲಿರುವ ಮಡಿಯಾರದ ನರಸಿಂಹ ಅಡಿಗನು ಸರ್ವಜನರಿಗೂ ತಿಳಿಸುವುದೇನೆಂದರೆ:-ನಿನ್ನೆಯ ಸುಧ್ಯಾಹ್ನದಿಂದ ನನ್ನ ಎರಡು ಕೋಣಗಳು ಕಾಣೆಯಾಗಿವೆ. ಕಪ್ಪಿಯಾದ ದೊಡ್ಡ ರೂಪದ ಹೋರಿಗಳಾಗಿವೆ. ಹಾಸು ಕೊಕ್ಕು ಕೋಡಿನ ನೆಸಲು ಹುಡಿಯು ಇರುವ ಜಾಲ ಬೋಗಿರುವ ಬೆಳ್ಳಿ ಹೋರಿ ಒಂದು; ಜಾಜು ಕೋಡಿನ ದೊಡ್ಡ ರುಳಿಯ ಹಿಂದಿನ ಎರಡು ಕಾಲು ಗಳಲ್ಲಿ ಸ್ವಲ್ಪ ಶಿಡಿಯುಳ್ಳ, ತುಸು ಜಾಲ ಬೋಗಿರುವ ಕಾಳು ಹೋರಿ ಒಂದು, ಕೂಡಾ ಎರಡುಆರ್ಯ ಹೋ ೧೦ಗಳನ್ನು ಪತ್ತೆಮಾಡಿ ಕೊಟ್ಟವರಿಗೆ ಯಥಾಯೋಗ್ಯವಾದ ಇನಾಮನ್ನು ಕೊಡುವೆನು. ಪತ್ತೇದಾರರು ಮುಖತಃ ಮಾತನಾಡಬಹುದು ಅಥವಾ ಪತ್ರವ್ಯವಹಾರ ಮಾಡಬಹುದು.

Madiyar Narasimha Adiga,
Barlagunmane
Udkarnarayana Post.

28th August '45

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಜಿಲ್ಲಾ ಅಭಿವೃದ್ಧಿ ಸಂಘವು
District Advancement Association

ಇದೇ ಬರುವ ದಶಂಬರ ತಿಂಗಳಲ್ಲಿ ಮುಲ್ಕಿ ಗ್ರಾಮಾಭಿವೃದ್ಧಿ ಕ್ಷೇತ್ರದಲ್ಲಿ ಗುಡಿ, ಕೈಗಾರಿಕೆ, ಕೃಷಿ ನರ್ಸೆರಿ ಸಮ್ಮಂಧವಾದ ಪ್ರದರ್ಶನ ಏರ್ಪಡಿಸಲಿರುವುದು. ಗ್ರಾಮೋನ್ನತಿಗೆ ಅವಶ್ಯವಾದ ಈ ಕಾರ್ಯದಲ್ಲಿ ಎಲ್ಲವರ ಸಹಕಾರ ನಿರೀಕ್ಷಿಸಲಾಗಿದೆ.

ಎಮ್. ಆರ್, ಪೂಂಜ,
ಕಾರ್ಯದರ್ಶಿ.

— ನುಕ್ಕಳನ್ನು ಹಡೆಯುವುದು ಸಾಕು—

ಸಕಲ ಸ್ತ್ರೀಯರಿಗೆ ರೋಗಗ್ರಸ್ತ ಸಣ್ಣ ಮುಕ್ಕಳಿಗೆ

ಬರ್ಥ ಕಂಟ್ರೋಲ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮುಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಇಲ್ಲದೆ ಸ್ತ್ರೀಯರ ಬಿಳಿತೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಂಮತ್ತು:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಷ್ಟ ಚಾರ್ಜು ೧೫ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ವಿಜಂಟ — ಶ್ರೀ ಧಾರ್ಮಸ್ಯ—ಹುಬ್ಬಳ್ಳಿ, ಗದಗ್ ಬಾಗಲಕೋಟೆ ಧಾರವಾಡ, ವಿಜಾಪೂರ—
ದಾವಣ್ಣ ಸ್ಟ ಧಾರವಾಡಿಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್.
ಡಾನ್ಲ್ — ಡಾವಣಗೇರಿ ಪ್ರೆಸ್ಸ್. ಕರ್. ಎಲ್. ಕವಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಸ್ಥಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಡಿವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿವಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾವಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಪೊಂದುವಂತೆಯ್ಯಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮೂಲಬದ್ಧತೆ, ಬೆನ್ನುನೋವು, ವಾಯು ಉವದ್ರೆ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ನಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆಂಡರ್ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧ ವರ್ಣನೆಯು ಉಚಿತವಾಗಿ ದೊರೆಯುವದು.

(1) ಉಡುಪಿ ವಿಜಂಟರು — ನವಭಾರತ ಬುಕ್ ಡಿಪೊ,
(2) ಶ್ರೀ ಬಿ. ಬಿ. ಟೈಟರ್ ಕೋಸ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಸಿಟುಂಗಾ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮ ಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ. ಬೆಲೆ ೦—೮—೦.

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಲ್ಕು ಅದನ್ನು ಹೇಗೆ ಕೊರೆದು ತಿಂದು ಹಾಳುಮಾಡಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತನಂತೆ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕರಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮತದಾರ ಪಟ್ಟೀ ಮೊಳದ್ದಮೆ.

(೧೦ನೇ ಪುಟದಿಂದ ಮುಂದುವರಿದುದು)

ಪ್ರಭೋ, ನಾನು ಪ್ರತ್ಯಕ್ಷ ವಾದಂತ್ಯೇ ಎತ್ತಿಕೊಳ್ಳುತ್ತೇನೆ, ಮುದ್ದಯಿಯ ಆರೋಪದಂತೆ ಅಲೆಯ ಥೋರಣೆಯು..... .....ಆಯ್ತು ಪ್ರಭೋ, ಇನ್ನೊಂದೆರಡೇ ವಾದಗಳನ್ನು ಮಂಡಿಸಿ ನಾನು ಮುಗಿಸಲಿದ್ದೇನೆ. ಪ್ರಾಯಸ್ಥರಿಗೆಲ್ಲಾ ಪೋಟಿನ ಅಧಿಕಾರವಿರಬೇಕೆಂದು ಮುದ್ದಯಿಯಷ್ಟೇ ಅಲ್ಲಿಗೂ ಅತುರವಿದೆ, ಆದರೆ ಮುದ್ದಯಿಯ ಅಜ್ಞಾನ ಮಾತ್ರ ಅಲೆಗಿಲ್ಲವೆಂಬ ಈ ಸೂಕ್ಷ್ಮವಾದವನ್ನು— ತಮ್ಮ ಗೌರವ-ಗಮನಕ್ಕೆ ತರಲು ನಾನು ನಂಬುತ್ತೇನೆ ಕೋರ್ಟು ಪರಾಂಬರಿಸಬೇಕು ಈ ರೀತಿನ್ ಕಾರ್ಡನ್ನು. ಇದು ಒಂದು ಮನೆಯ ಎಲ್ಲಾ ಪ್ರಾಯಸ್ಥರಿಗೆ ಮಾತ್ರ ವಲ್ಲ, ಎಲ್ಲಾ ಅಪ್ರಾಯಸ್ಥರಿಗೂ ಸಂಬಂಧಿಸಿರುವ ಕಾರ್ಡ್‌ಂಬುದು ಜನಜನಿತ ವಿಷಯ. ನನ್ನ ಪ್ರಭೋ, ಈ ಕಾರ್ಡನ್ನು ನೋಡೋಣಾಗಬೇಕು --ಇವರಲ್ಲಿರುವದು ಅಕ್ಷರ ಮತ್ತು ಅಂಕೆಗಳೇ. ತಿಳಿದಿರಲಿ— ಪ್ರತಿಯೊಬ್ಬ ಪ್ರಾಯಸ್ಥರಿಗೂ ಒಂದೊಂದು ಹೊಟ್ಟೆಯಿದೆ ಎಂಬುದನ್ನು ಕೋರ್ಟು ಒಪ್ಪುತ್ತದಾದರೆ—ಪ್ರತಿಯೊಬ್ಬನೂ ಸಹಜವಾಗಿ ಈ ಕಾರ್ಡನ್ನು ಪ್ರತಿದಿನವೂ ನೋಡುತ್ತಾನೆ; ಆ ಮೂಲಕ ಅದರ ಅಕ್ಷರ ಅಂಕೆ, ಗುರುತಗಳನ್ನು ಪ್ರಯತ್ನ ವಿನಹ ಕಲಿಯುತ್ತಾನೆ. ಹೀಗಾಗಿ-ನನ್ನ ಸುಪ್ರಭೋ-ಇಂದು ಆಕ್ಷೆ ಆಗತ್ಯವೆನ್ನುವ ಪ್ರತಿಯೊಬ್ಬ ಪ್ರಾಯಸ್ಥನೂ ಅಕ್ಷರಸ್ಥ. ಕೇಂದ್ರ ಎಸೆಂಬ್ಲಿಯ ಮಾತು ಅಲಾಹಿದಾ ಇದ್ದು ಅಲ್ಲಿ ಮತಾಧಿಕಾರ ಮಾತ್ರವಲ್ಲ, ಪ್ರಜಾ ಜವಾಬ್ದಾರಿ ಅಧಿಕಾರ ಕೂಡಾ ಇಲ್ಲದಿರುವುದರಿಂದಲೂ ಅದು ಆ ಅಧಿಕಾರ ಬರುವಾಗಲೇ ಆಗಬೇಕಾದ ಕೆಲಸವಾಗಿರುವುದರಿಂದಲೂ, ಆ ವಿಷಯವು ಈ ಮೊಕದ್ದಮೆಯ ಮೂಲ ವಿಷಯದೊಡನೆ ಸಪ್ಲಿಮೆಂಟಾಗಿ ಮಾತ್ರ ಸೇರಿ ಬಂದಿರುವುದರಿಂದಲೂ ಅದನ್ನಷ್ಟು ಮರೆತುಬಿಟ್ಟರಿ, ನಾನು ರುಜುಪಡಿಸಿದಂತೆ ಪ್ರಾಯಸ್ಥರೆಲ್ಲಾ ಈಗ ಅಕ್ಷರಜ್ಞರಿಂತಲೂ ಅಕ್ಷರಸ್ಥರಿಗೆಲ್ಲಾ ಈಗಲೇ ಪೋಟಿನ ಅಧಿಕಾರವಿರುವುದರಿಂದ ಪ್ರಾಯಸ್ಥರಿಗೆಲ್ಲಾ ಪೋಟಿನ ಅಧಿಕಾರವಿದ್ದೇ ಇದೆಯೆಂತಲೂ ನಾನಿಲ್ಲಿ ಸರಿ ಒತ್ತಿ ಕೋರ್ಟು ಗಮನಕ್ಕೆ ತರುತ್ತೇನೆ ಈ ವಸ್ತುಸ್ಥಿತಿಯ ಪರಿಜ್ಞಾನ ಮದ್ದಯಿಯಲ್ಲಿ ಇಲ್ಲದೆ, ಅಲೆಯಲ್ಲಿ ಮಾತ್ರ ಇದ್ದುದೊಂದೇ ಈ ಮೊಕದ್ದಮೆಯ ಪ್ರಥಮಾರೋಪಕ್ಕೆ ಹೇತುವಲ್ಲದೆ ಅನ್ಯಥಾ ಇಲ್ಲ. ಮೇಲಾಗಿ ಕೋರ್ಟು ರೇಶನ್ ಕಾರ್ಡಿನ ಈ (×) ಗುರುತನ್ನೂ ಗಮನಿಸಬೇಕು. ಪ್ರಾಟಿನ ಪತ್ರದಲ್ಲಿ ತಾಕುವ ಗುರುತೂ ಇದೇ ಆಗಿರುವುದರಿಂದಲೂ ಅವರ ಉಪಯೋಗದ ತರಬೇತಿಯೇಗ ಪ್ರತಿಯೊಬ್ಬ ಪ್ರಾಯಸ್ಥನಿಗೂ ದೊರೆತಿರುವುದರಿಂದಲೂ ಈ ಬಾರಿ ಹೊಟ್ಟು ಅಥವಾ ಇನ್‌ವೇಲಿಡ್ ಪೋಟುಗಳೇ ಇಲ್ಲದಂತಾಗುವದು. ನನ್ನ ಪ್ರಭೋ, ಈ ರೀತಿ ಪ್ರಾಯಸ್ಥರಿಗೆಲ್ಲಾ ಪೋಟಿನ ಅಧಿಕಾರವೀಗಲೇ ಬಂದಿರುವದು ಮಾತ್ರ ವಲ್ಲ, ಅದು ನಿರುಪಯೋಗಿಯಾಗುವ ಆ ಮಾತು ಕೂಡಾ ಇಲ್ಲ. ಆಗರಿಂದ—ತಾವು ಮಾನ್ಯ ಮಜೀ-ಈ ವಿಚಾರವನ್ನು ಸಿಟಿ ಮಿಸ್ ಮಾಡಬೇಕೆಂದು ನಿವೇದಿಸಿಕೊಳ್ಳಲು ಪ್ಪನೆ ಬೇಡುತ್ತೇನೆ

ನಾದುರಸ್ತಿಯ ಆರೋಪ

ನನ್ನ ಪ್ರಭೋ-ಈಗ ಎರಡನೇ ಆರೋಪವಾದ 'ಪ್ರಚಲಿತ ಪದ್ಧತಿಯ ಮತದಾನ ಪಟ್ಟಗಳಲ್ಲೂ ಬ್ರಹ್ಮಾಂಡದಂತಹ ತಪ್ಪುಗಳಿವೆ' ಎಂಬುದನ್ನು ವಿಚಾರಣೆಗೆ ಎತ್ತಿಕೊಳ್ಳುತ್ತೇನೆಂದು ನಾನು ಕೋರ್ಟಿನ ಕ್ಷಮೆ ಬೇಡುತ್ತೇನೆ. ತಾವು ಮಾನ್ಯ ಮಜೀ—ಇತ್ತ ಗಮನ ಕೊಡಬೇಕು— ತಪ್ಪಾಗಿ ಹೆಸರುಗಳು ಬಿದ್ದಿರುವದು, ಕೆಲವರ ಹೆಸರು ಬಿಟ್ಟು ಹೋಗಿರುವದು ಮುಂತಾದ ಅಲ್ಪ ಪ್ರಮಾದಗಳನ್ನೇ ಫರ್ಯಾದಿಯಲ್ಲಿ ಬ್ರಹ್ಮಾಂಡದಂತಹ' ಎಂದು ಕಾಣಿಸಲಾಗಿದೆ ಪ್ರಭೋ, ಈ ವಿಷಯದಲ್ಲಿಯೂ ಪ್ರಥಮಾರೋಪಣೆಯಂತೆಯೇ ಮುದ್ದಯಿಯು ತಾನು ಫಿರ್ಯಾದಿಯಲ್ಲಿ ಕಾಣಿಸಿರುವ 'ಬ್ರಹ್ಮಾಂಡ'ದಂತಹ ಅಜ್ಞಾನಕ್ಕೆ ಬಲಿ ಬಿದ್ದಿರುವನೆಂದೂ, ಮುದ್ದಯಿ ಅಲಯು ಮಾತ್ರ ದೂರ ದೃಷ್ಟಿ ಮತ್ತು ದೇಶ ಭಕ್ತಿಯಿಂದಲೇ ಆ ಪಟ್ಟಗಳನ್ನು ಆ ರೀತಿ ರಚಿಸಿರುವನೆಂದೂ ಕೋರ್ಟಿಗೆ ನಿವೇದಿಸಿಕೊಳ್ಳುವ ಧೈರ್ಯ ವಹಿಸುತ್ತೇನೆ ಕೋರ್ಟು ಈ ಆರೋಪದ ಸ್ವರೂಪವನ್ನು ಪರಾಂಬರಿಸಬೇಕು ಒಂದೇ ಮೊಕದ್ದಮೆಯಲ್ಲಿ ಪರಸ್ಪರ ವಿರುದ್ಧವಾದ ಎರಡು ಆರೋಪಗಳು ಬಂದರೆ, ಆದರಲ್ಲಿ ಯಾವುದಾದರೊಂದು ಅಸಂಧುವಲ್ಲವೇ ಎಂಬುದರ ಪರ್ಯಾಲೋಚನೆಯನ್ನು ತಮ್ಮ [illegible] ಬಿಟ್ಟಿದ್ದೇನೆ. ವ್ಯಾದು ಸರಿಗಿಲ್ಲ ಮತ್ತ [illegible] ದಲನೇ ಆರೋಪವೇ ಬೇರೆ, ಈಗಿನ ಪಟ್ಟಯು ಪೂರ್ಣ ನಾದುರಸ್ತಿಯಲ್ಲಿದೆ ಎಂಬ ಎರಡನೇ ಆರೋಪದ ಸ್ವಭಾವವೇ ಬೇರೆ. ಮಾತ್ರವಲ್ಲದೆ, ನಾದುರಸ್ತಿಗೆ ಸಂಬಂಧವಿಲ್ಲದ ವಿಷಯಗಳನ್ನೂ ಫಿರ್ಯಾದಿಯಲ್ಲಿ ಕಾಣಿಸಲಾಗಿದೆ ದೃಷ್ಟಾಂತಕ್ಕಾಗಿ-ಪ್ರಭೋ—ಜಾತಿವಾರು ಪ್ರಾತಿನಿಧ್ಯವನ್ನಿತ್ತು ಹಿಂದೂ ಮುಸಲ್ಮಾನ್ ಇತ್ಯಾದಿಗಳೊಳಗಿನ ಜಾತಿ ಭೇದಗಳಿಗೆ ಆಸ್ಪದವಿಯು ಗಾಳಿ ಹಾಕಿದ್ದಾನೆ ಎಂಬ ದೂರು ಸೇರಿದೆ ನನ್ನ ಪ್ರಭೋ, ಇದು ವಸ್ತುಸ್ಥಿತಿಗೆ ಪೂರ್ತಿ ವಿರುದ್ಧವಿದ್ದು, ಅಲೆಯು ಹಿಂದೂ ಮುಸ್ಲಿಮ್ ಐಕ್ಯತೆಗಾಗಿಯೇ 'ನಾದುರಸ್ತಿ'ಯೆಂದು ಫರ್ಯಾದಿಯಲ್ಲಿ ಕಾಣಿಸಿರುವ ವಿಧಾನವನ್ನು ಅಂಗೀಕರಿಸಿದ್ದಾನೆಂದು ಒತ್ತಿ ನನ್ನ ಪ್ರಭುಗಳ ಗಮನಕ್ಕೆ ತರುತ್ತೇನೆ ಈ ವಿಧಾನದ ವಿನಹ ಪದ್ಯ ಸ್ಥಿತಿಯಲ್ಲಿ ಹಿಂದೂ ಮುಸ್ಲಿಮರನ್ನು ಒಂದುಗೂಡಿಸಲು ಸಾಧ್ಯವೇ ಇಲ್ಲವೆಂದೂ, ಮುದ್ದಯಿ ಅಲೆಯು ಜಾತೀಯ ಐಕ್ಯತೆಯ ಸಿದ್ಧಿಶದಿ ದಲೇ ಅಂತಹ ಮತದಾರ ಪಟ್ಟಿಯನ್ನು ತಯಾರಿಸಿರುವನೆಂದೂ ನಾನು ಕೋರ್ಟಿನ ಗಮನಕ್ಕೆ ತರುತ್ತೇನೆ ನನ್ನ ಪ್ರಭೋ-ಈ ಕಾರಿತು ಇಂದಲ್ಲಿಯೇ ಕೋರ್ಟಿನ ಸಮಯವನ್ನು ಪತಕೊಳ್ಳುವ ಇಚ್ಛೆ ನನಗಿಲ್ಲವಾದ್ದರಿಂದಲೂ ಪ್ರತ್ಯಕ್ಷ ದಾಖಲೆಯಾಗಿ ಮತದಾರ ಪಟ್ಟಗಳೇ ಇರುವುದರಿಂದಲೂ ಆವುಗಳನ್ನು ಕೋರ್ಟಿಗೆ ದಾಖಲುಪಡಿಸುತ್ತಾ, ಪ್ರಭು ಚಿತ್ತಾಪ [illegible] ಮಾದರಿಯನ್ನು ಸಲ್ಲಿಸುತ್ತೇನೆ.

ನುತದಾರ ಪಟ್ಟಿಯ ಮಾದರಿ

1110 ನರಸಿಂಹ ಬ್ರ ಪೈಯಿನ್ ಸಾಹೇಬನ ಮಗ

1007. ಎ ಪಾತ್ರೆವ್ಯ, ನಾರಾಯ ಣಾಯಣ ಹೆಂಡತಿ

2004 ಪಿಲಿನಾಯಿ ಪೆಂಕ ಟೇಶ ಕೆಯ ಮಗಳು

2129. ಕಮಲಿಬ್ಬ, ಕಾಪ್ರಿ ಸಿಂಪೆಂಬನ ವಿಧವೆ.

2276 ಪೆಂಡ್ರು ಪೆಂಡ್ರೋಸ್ ನಾರಿಯಂಣ ಪಟ್ಟೆಯ ಅಳಿಯ.

2601 ಇಸ್ಮಾಯಿಲ್ ಸಾಹೇಬ, ಕೆವಾಸುದೇವಯ್ಯನ ಮಗ.

3030, ಕುಟ್ಟಿಕುಂಞ, ಸುಬ್ರಹ್ಮಣ್ಯ ಮಧಾಯಿಸನ ಪತ್ನಿ.

11067. ಸಿತಾಬಾಯಿ, ಆಂತೋನಿ ಸೋಜನ ಹೆಂಡತಿ.

11206[illegible] ಆಂತೋನಿ ಸೋಜ, ರಾಮಚಂದ್ರ ಎಲ್.ನ ಮಗ.

13670[illegible] ರಾಮಚಂದ್ರ ಎಲ್., ಇವಿನೆಟ್ಟ ಸಾಹೇಬನ ಮಗ.

[illegible] ಇದಿನಬ್ಬ ಸಾಹೇಬ, ಪೆಕುಂಞ ಭಕ್ಕನ ಮಗ.

20004 ಸುಶೀಲಾ — ಶ್ರೀಧರ ಪಬ್ಬಾರಿಯ ಸೊಸೆ

25009. ಖತೀಜಾ-ಎಸ್ ಅಹಮದ ನ ಹೆಂಡತಿ

28804 ಬೀಫಾ ಕೆ ಅಹಮ್ಮದ್ ಸಾಹೇಬನ ಹೆಂಡತಿ

ನನ್ನ ಪ್ರಭೋ—ಮತದಾರ ಪಟ್ಟಿಯ ಮಾದರಿಯನ್ನು ಕೋರ್ಟಿನ ಚಿತ್ತಕ್ಕೆ ಮುಟ್ಟಿಸಿದ್ದೇನೆ ಮುದ್ದಯಿಯ ಆರೋಪದಂತೆ, ಜಾತಿ ಭೇದವನ್ನು ಬೆಳೆಸುವ ದುರುದ್ದೇಶದಿಂದ ಅಲೆಯು ಮತದಾರ ಪಟ್ಟಿಗಳನ್ನು ತಯಾರಿಸಿದ್ದಾನೋ, ಅಥವಾ ಜಾತೀ ಐಕ್ಯತೆಯ ಪರಮಾವಧಿಯನ್ನು ಸದುದ್ದೇಶ ಪೂರ್ವಕ ಸಾಧಿಸಿದ್ದಾನೋ ಎಂಬುದು ಕೋರ್ಟಿಗೆ ಇಷ್ಟರಿಂದಲೇ ವೇದ್ಯವಾಗಬಹುದು ಆದ್ದರಿಂದ ನನ್ನ ಪ್ರಭೋ—ಈ ಎರ್ಯಾದಿಯನ್ನು ಡಿಸ್‌ಮಿಸ್ ಮಾಡಿ ಅಲೆಯನ್ನು ನಿರ್ದೋಷಿಯಾಗಿ ಮಾಡಬೇಕೆಂದೂ, ದಾಖಲೆಗೆ ಮಂಗಳಕರ ತರ್ಕವಿದ್ದಲ್ಲಿಯೂ ರಜಾನಾಗಿರುವಂತೆ ಅಲೆಯ ಭಾಗ್ಯ ನೆಂಬ ಅಲೆಯನ್ನು ಗೆಲ್ಲಿಸಬೇಕೆಂದೂ ನಾನು ಕೋರ್ಟನ್ನು ವಿಜ್ಞಾಪಿಸುತ್ತೇನೆ

The Pangal Nayak Bank Limited.

(Incorporated in 1920)

Registered Office Court Road, UDIPI

Branches at— **Udipi, Mangalore, Katapadi, Kanhangad, Kinnigoli and Nileshwar, South Canara District**

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms

Please ascertain business particulars from any of our Offices at the above places.

Date 25th April 1945

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಪದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಿಯವಾಗಿದ್ದರೆ, ಚಟ್ಟೆ ಬದ್ದಿದ್ದರೆ, ಉಷ್ಣದಿಂದ ಜೀರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಕೋಗುತ್ತಿದ್ದರೆ, ಹೊಲಿ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮೆಣಸಾರ, ಕಂಬಳಕಾಯಿ, ಬೆಳ್ಳೈಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ್ ಚಾರ್ಜ್ ೮ ಆಣೆ

ಏಜೆಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ — ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ:ಡಾವಣಗೆರೆ ಪೈಸ್ ಪತ್ರವ್ಯವಹಾರ ಮಾಡತಕ್ಕೆ ವಿಳಾಸ

ರೇವಣಸಿದ್ಧಪ್ಪ ಪಾಲಪ್ಪ ಡಾವಣಗೆರೆ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG

CHAMPAE'S

Snow & Lastrex

(*Sole Distributers for (India*)

Sukhananda Stores

Santhekatte, UDIPI, S. K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ **1-8-0** ಮಾತ್ರ.

ಪ್ರೌಢ ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ 2/-

ಹೆಚ್ಚಿನ ವಿವರಕ್ಕೆ ಬರೆಯಿರಿ

ಬಾಲಚಂದ್ರ ಆಫೀಸು, ಉಡುಪಿ

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ರಾಷ್ಟ್ರಸಭೆಯ ಇತಿಹಾಸ	2	8	0
2	ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3	ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4	ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5	ಭಾರತ ಗೀತಾಂಜಲಿ	0	2	0
6	ಪುರಂದರದಾಸರ ಕೀರ್ತನೆ ಭಾಗ 4ರ ಸ್ಟಿಫ್ ಬೈಂಡ್	1	4	0
7	ಶಾಂತಿಪುರಾಣ	3	0	0
8	ಸಾಮುದ್ರಿಕ ಶಾಸ್ತ್ರ	0	8	0
9.	ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ಕೃಷ್ಣ ಸಂಧಾನ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್ಪದ ಗುಟ್ಟು ..	0	8	0
ಕಾಸಿಗೆ	0	8	0
ತುಳು ವ್ಯಾಕರಣ	1	0	0
ಮದ್‌ಮಾಳತ್ತ್ ಮದ್‌ಮಾಯೆ ...	0	4	0
ಜನಮರ್ಲ್ .	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	9	2	0
ಮಿತ್ಯ ನಾರಾಯಣ ಕತೆ . .	1	0	0
ಸತೀ ಕಮಲೆ	0	12	0
ಬೊಬ್ಬರ್ಯೆ	0	4	0
ತೊಡಕೆನಾರ್	0	4	0
ಮುಂಡತ್ತಾಯೆ	0	4	0
ಕನ್ನಡಕೊ	0	1	0
ನಿರ್ವಹಣೆಯರ್ಸನೊ	0	2	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: 2—8—0. ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.

ಬೆಲೆ: **3—0—0**
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪೈ ಬ್ರದರ್ಸ್, ,,
ಶ್ರೀ ಭೋಜರಾವ್ & ಕೊ ,,
ಪಾವಂಜೆ ಗುರುರಾವ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ
ಪಿ. ಎ. ಪೈ ಬ್ರದರ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಪ್ರತಿ ಪ್ರತಿಗೆ ರೂ. 0—1—6



ವರ್ಷ ೨೫] ಪ್ರತಿ ಗುರುವಾರ ಹೊರಡುವ ಗಾತ್ರೀಯ ವಾರಪತ್ರಿಕೆ. [Vol. 25

ವಾರ ೫] Founder: SRI A. B. SHETTY. [No. 5

ಉಡುಪಿ • 4—10—1945 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಚಿಕೆ ರೂ. 0—1—6.

ಅಮೃತಾಂಜನ

ತಲೆನೋವು, ತಿರಿ, ನೀರಡಿಕೆ, ಉಳುಕು ಶೀತಕ್ಕೆ, ಘುಜ, ಹುಣ್ಣು ನೋವುಗಳಿಗೂ ಎದನೋವು, ಭಾಯಿಗಳು ಬಾತು ಕೊಂಡಾಗ ಬೇಕು.

ಇದಲ್ಲದೆ ಬೆನೆ ಇವಾಕ್ಸ ನೆಂಪಿನೆ ಮೊದಲಾದ ಎಲ್ಲ ರೋಗಗಳಿಗೂ ಉಪಯೋಗಿಸಲ್ಪಡುತ್ತದೆ.

REGD.

ಪ್ರಪಂಚದ ಹಲವು ಭಾಗಗಳಲ್ಲಿ ಮಾರಲ್ಪಡುತ್ತಿದೆ.

ಅಮೃತಾಂಜನ ಲಿಮಿಟೆಡ್.

ಬೆಂಗಳೂರು.

ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,

Head Office:- **UDIPI**, (S. India.)

UDIPI,

4th September, 1945.

New Appointments.

Applications from candidates of S S. L C. standard (only boys) are invited for clerical posts in the Company.

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of their School and another from any local gentleman.

T. R. A. Poi,
Managing Director.

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ: ಆದು

'ಜುಪಿಟರ್' (ದೇವತೆಗಳ ರಾಜ)ನ ಅನುಗ್ರಹದಿಂದ ಸಾತ್ರ್ಯಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ

'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ, ವಿಜಂಟರು ಮತ್ತು ಏಗರ್ನೈಸುರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,

ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ

ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ

ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910

ದಕ್ಷಿಣ ಭಾರತದ ಚೀಫ್ ಏಜಂಟರು

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಪಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.

Central Office:—UDIPI S. K

Mangalore O Calicut O Bangalore O Madras O Madura O Trivandrum O Bombay

ANNOUNCEMENT.

We have the pleasure to announce that a branch of the Bank will shortly be opened at

317, Linghi Chetty Street,

MADRAS.

(ESTD 1906 ಸ್ಥಾಪನೆ.)

CANARA BANK LIMITED

(Incorporated in British India. liability of Members Limited)

The Vijaya Bank Limited.

ANNOUNCEMENT

We have much pleasure to announce that the New shares issued by us have been easily oversubscribed We regret, however that we could not allot to the applicants all the shares applied for by them, though we have tried our best to satisfy them to the utmost extent possible.

ಪ್ರಕಟಣೆ

ಬೇಂಕಿನ ಹೊಸ ಪಾಲುಗಳು ಬಹು ಸುಲಭವಾಗಿ ಮತ್ತು ಬಹು ಬೇಗನೆ ಸೂಂಟು ವಾಗಿವೆ ಎಂಬುದನ್ನು ತಿಳಿಸಲು ನಾವು ಸಂತೋಷಪಡುತ್ತೇವೆ ಕೆಲವು ಆರ್ಜಿಗಳು ಬಾಪ ಕಾರಣ ಆರ್ಜಿ ಹಾಕಿದಷ್ಟು ಪಾಲುಗಳನ್ನು ಕೊಡಲು ತಾಂತ್ಯಸಾಮದಂದ, ಅದಷ್ಟು ಸಮಾಧಾನಕರವಾದ ರೀತಿಯಲ್ಲಿ ಪಾಲುಗಳು ಹಂಚಲ್ಪಟ್ಟಿವೆ

Head Office: MANGALORE — B. MANJAYA HEGDE. Chairman of the Board of Directors

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 26—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕೆಂತಲೂ ದ್ವಿಗುಣಿತ ವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ನಾವಾ ಒನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

ಅಜಾದ್-ವೇವೆಲ್ ಪತ್ರವ್ಯವಹಾರ.

ಕಾಂಗ್ರೆಸ್ ಪ್ರಮುಖರಿಗೆ, ಸಿಮ್ಲಾದಲ್ಲಿ ತಾವಿತ್ತ ಸಹಕಾರವು ಅಪಾತ್ರದಾನವಾಯಿತು, ಅಪಪ್ಯಯವಾಯಿತೆಂಬ ಸಂತಾಪವನ್ನಿತ್ತಿದೆ-ಸರಕಾರಕ್ಕೆ ಪಂಡಿತ ನೆಹರುಗಳಂಥವರು ಆಗೋಸ್ತು ಗಲಭೆಯನ್ನು ಪ್ರಚಂಡಿಸುತ್ತಿರುವ ಕುರಿತು ಹೊಟ್ಟೆ ನೋವಿನ್ನಿದೆ— ದೇಶದಲ್ಲಿ ತಳಿ ಸಾತಾನರಣ ನಿರ್ಮಿಸಬು ಸರಕಾರವು ಎಸ್ಪರಮಬ್ಬಗೆ ಸಿದ್ಧವಿದೆ— ಮುಂತಾದ ಎಲ್ಲಾ ಗುಟ್ಟು ಈ ಪತ್ರವ್ಯವಹಾರಗಳಿಂದ ಬೆಳಕಿಗೆ ಬಂದಿದೆ:—

ಅಜಾದರ ಮೊದಲ ಪತ್ರ

ಅಮ್ಸ್ಟ್ರಾಜಿಲ್, ಜುಲಾಯಿ 7-'45

ಪ್ರಿಯ ಲೋರ್ಡ್ ವೇವೆಲ್,

ನಿಯೋಜಿತ ಕಾರ್ಯಕಾರೀ ಸಮಿತಿಗಾಗಿ ಸದಸ್ಯರ ಒಂದು ಪಟ್ಟಿಯನ್ನು ಕಾಂಗ್ರೆಸಿನ ಪರವಾಗಿ ನಾನು ನಿಮಗೀಗ ಕಳುಹಿಸುತ್ತಿದ್ದೇನೆ. ಸಿಖ್ಖ್ ನೇಮಕವೊಂದು ಆ ದರಲ್ಲಿ ಬಾಕಿಯಿದೆ. ಅದನ್ನು ಒಂದೆರಡು ದಿನಗಳೊಳಗೆ ಕಳುಹಿಸಿಕೊಡುತ್ತೇನೆಂಬ ಆಶೆಯಲ್ಲಿದ್ದೇನೆ.

ಈ ಪಟ್ಟಿಯಲ್ಲಿ ಕಾಂಗ್ರೆಸಿಗರೂ ಕಾಂಗ್ರೆಸೇತರರೂ ಸೇರಿದ್ದಾರೆ. ಮತ್ತು ಇಡೀ ಕಾರ್ಯಕಾರೀ ಸಮಿತಿಗೆ ಸಾಕಾಗುವ ಹೆಸರುಗಳನ್ನೊಳಗೊಂಡಿದೆ. ಈ ಪಟ್ಟಿಗನು ಗುಣವಾಗಿ ಕಾನ್ಸಿಲಿನಲ್ಲಿ ವೈಸರಾಯ ಮತ್ತು ಕಮಾಂಡರ್ ಇನ್ ಚೀಫರನ್ನು ಬಿಟ್ಟು 15 ಸದಸ್ಯರಿರುವಂತಾಗುವದು ಸಾಧ್ಯವಿದ್ದಷ್ಟಾದರೂ ಅಲ್ಪ ಸಂಖ್ಯಾಕ ಎಲ್ಲಾ ಸಮಾಜಗಳಿಗೂ ಸ್ಥಾನವೀಯುವದಕ್ಕಾಗಿ ಇಷ್ಟು ಸಂಖ್ಯೆ ಆಗತ್ಯವೆಂದು ನಮಗೆ ಮಂದಟ್ಟಾಗಿದೆ. ಅಲ್ಪಸಂಖ್ಯಾಕರ ಪ್ರಾತಿನಿಧ್ಯವನ್ನು ಕಾಂಗ್ರೆಸ್ ವಿಶೇಷತಃ ಗಣಿಸುತ್ತದೆ.

ನಾವು 15ನುಂದಿಯ ಹೆಸರನ್ನು ಕೊಟ್ಟಿದ್ದೇವಲ್ಲದೆ ಹೆಚ್ಚೇನೂ ಇಲ್ಲ. ನಿನ್ನ ಕಮಿಟಿಯು ಆ ಸ್ಥಾನದಿಂದೇಳುವ ಕೊರತೆ ಹೊರುವದಕ್ಕಾಗಿ ಈ ಜನರನ್ನಾರಿಸಿದೆ ಹೊರತು ಆ ಸ್ಥಾನ ಗೌರವಕ್ಕಾಗಿ ಅಲ್ಲ. ನಾವೀ ಜವಾಬ್ದಾರಿಗೆ ಹೆಗಲು ಕೊಟ್ಟರೆ ಭಾರತ ಸ್ವಾತಂತ್ರ್ಯ ಪಥದಲ್ಲಿ ಆದೊಂದು ಹೆಜ್ಜೆ ಯಾಗಬಲ್ಲುದು ಎಂಬ ಪ್ರಶ್ನೆಯನ್ನು ಪರಿಪೂರ್ಣವಾಗಿ ಪರ್ಯಾಲೋಚಿಸಿದ್ದೇನೆ. ಅದು ಇಂತಹ ಒಂದು ಹೆಜ್ಜೆಯೆಂದೇ ಬ್ರಿಟಿಷ್ ಸರಕಾರವು ಸಹ ನೆನೆಸುತ್ತಿದೆ ಎಂಬುದು ನಮ್ಮ ದೃಷ್ಟಿಪಥದಲ್ಲಿದೆ. ನಮ್ಮ ಮಟ್ಟಿಗೆ-ನಿಮ್ಮ ಮಟ್ಟಿಗೂ ಹಾಗೆಂದೇ ನಾನು ಅಪೇಕ್ಷಿಸುತ್ತೇನೆ-ಇದು ವರೆಗೆ ಪರಕೀಯರಾಳ್ವಿಕೆ ಮತ್ತು ಹೊರಿಗೊಳಗಾಗಿರುವ ಎಲ್ಲಾ ರಾಷ್ಟ್ರಗಳಿಗೂ ಭಾರತಸ್ವಾತಂತ್ರ್ಯವು ಬಿಡುಗಡೆಯನ್ನು ತರುವದೆನ್ನಿಸುತ್ತಿದೆ.

ನೇತವ್ಯಾಪೀ ಪರಿಸ್ಥಿತಿಗಳ ಕಡೆಗೆ ಗಮನಕೊಟ್ಟು ಪಟ್ಟಿಯನ್ನು ಸಾಧ್ಯವಿದ್ದಷ್ಟು ಪ್ರಾತಿನಿಧಿಕವನ್ನಾಗಿ ರೂಪಿಸಲಾಗಿದೆ. ಅ. ಭಾ. ಮುಸ್ಲಿಂ ಲೀಗ್ ಪ್ರಮುಖರ ಮೂರು ಹೆಸರುಗಳನ್ನೂ ನಾವು ಸೇರಿಸಿಕೊಟ್ಟಿದ್ದೇವೆ. ಆದರೆ ಈ ಹೆಸರುಗಳ ಮಟ್ಟಿಗೆ ಕೊನೆಯ ತೀರ್ಮಾನವು ಮುಸ್ಲಿಂ ಲೀಗನ್ನನಲಂಬಿಸಿದೆ ಎಂಬುದು ಗೊತ್ತಿದ್ದದ್ದೇ. ಮುಸ್ಲಿಂ ಲೀಗನ್ನು ಸಂಧಿಸಲು ನಮ್ಮಿಂದ ಸಾಧ್ಯವಿದ್ದ ಪ್ರಯತ್ನವನ್ನೆಲ್ಲ ನಾವು ಮಾಡಿದೆವು; ಆದರೆ ಪರಾಭವಗೊಂಡೆವು.

ಪ್ರತಿಯೊಂದು ಸ್ಥಾನದ ಸಂಬಂಧದಲ್ಲಿಯೂ ನಾವು ಗಣಿಸಿದ ಯೋಗ್ಯತೆಯೆಂದರೆ ವಿಶೇಷ ಶಕ್ತಿವಂತರಾರೆಂಬುದೇ. ಪಸ್ತು ತ. ಗಣಿಸಿಕೊಂಡುದು ಸ್ವಾತಂತ್ರ್ಯವನ್ನೆನ್ನೇ; ಜಾಸಾನ್ ಪರಾಭವದ ನಂತರ ಕೊಡಲೇ ನೇರತಕ್ಕ ಗುರಿಯಾಗಿ ಆ ಸ್ವಾತಂತ್ರ್ಯವನ್ನು. ಆ ಪಟ್ಟಿಯಲ್ಲಿ ಪದ್ಯದ ಕಾರ್ಯಕಾರೀ ಕೌನ್ಸಿಲಿನ ಒರ್ವ ಸದಸ್ಯನ ಹೆಸರೂ ಸೇರಿ ಬಂದಿದೆ. ಹೊಸತನ್ನೇ ಪ್ರಾರಂಭಿಸುವ ಉದ್ದೇಶದಿಂದ, ಹಳೇ ವೈಸರಾಯೀ ಕಾನ್ಸಿಲಿನ ಸದಸ್ಯರಿಂದಲೂ ಸೇರಿಸಿಕೊಳ್ಳಕೂಡದೆಂದು ನಮ್ಮಲ್ಲಿ ಏಂಬೀತಭಿಪ್ರಾಯವಿದ್ದಿ. ಇಲ್ಲಿ ಕೊಡಲ್ಪಟ್ಟಿರುವ ಹೆಸರು ಹಿಂದಿನ ಧೋರಣೆಯಲ್ಲಿ ಸಹಕರಿಸಿರದೆ ಒರ್ವ ಹೊಸ ಸದಸ್ಯನದು. ನನ್ನ ಹೆಸರೂ ಆ ಪಟ್ಟಿಯಲ್ಲಿ ಸೇರಿದೆ ಬಹಳ ಶಂಕೆಯಿಂದ ಹಾಗೂ ತಪ್ಪಿಸಿಕೊಳ್ಳುವ ಪ್ರಯತ್ನವೆಲ್ಲವನ್ನೂ ಮಾಡಿಯಾದ ಮೇಲೆ ನಾನು ಕೊನೆಯಲ್ಲಿ ಕಮಿಟಿಯ ಈ ಸೂಚನೆಗೊಪ್ಪಬೇಕಾಯಿತೆಂದು ನಾನು ತಿಳಿಸಲೆ ನಾನೀ ಜವಾಬ್ದಾರಿಯನ್ನು ಅಂಗೀಕರಿಸಿಕೊಳ್ಳಶಕ್ಯರೆಂದೆಂದೇ ನನ್ನ ಅನುವರ್ತಿಗಳ ನಿಶ್ಚಿತಾಭಿಮತವಿತ್ತು. ಆ ಸ್ಥಾನವು ನನ್ನ ಕರ್ತವ್ಯಗಳಲ್ಲೊಂದೆಂಬ ಕರ್ಮಜ್ಞಾನದ ತೊಕನೇ ಕೊನೆಗೆ ನನ್ನಲ್ಲಿ ಹೆಚ್ಚಾಯಿತು. ಹೆಸರು ಸೂಚಿಸಲ್ಪಟ್ಟ ಎಲ್ಲರೊಡನೆ ವಿಚಾರವಿನಿಮಯಕ್ಕೆಳ್ಳಲು ನಮಗೆ ಸಾಧ್ಯವಾಗಿಲ್ಲ. ಕಮ್ಮಿಂದ ಆ ಕೆಲಸಕ್ಕೈಕೊಳ್ಳಲು ಅಸಾಧ್ಯವೆಂದು ಆ ಪೈಕೆ ಯಾರಾದರೂ ತಿಳಿಸುವ ಸಂದರ್ಭದಲ್ಲಿ, ಬದಲುನಾಮಗಳನ್ನು ಸೂಚಿಸುವ ಅವಕಾಶವನ್ನು ನೀವು ನಮಗೊದಗಿಸುವಿರೆಂದು ನಾನು ನಂಬುತ್ತೇನೆ.

ಪ್ರತಿವಾದಿ -ಮುದ್ದಣ್ಣ ಶೆಟ್ಟಿ, ನಾಗಪ್ಪ ಶೆಟ್ಟಿ ಆಳಿಯ ಉಡುಪಿ ತಾಲೂಕು ಎಲ್ಲೂರು ಗ್ರಾಮದ ಕುತ್ಯಾರು ಗ್ರಾಮವು ಎಂಬಲ್ಲಿ ಯಿರುವಷ ಹಾಲಿ ಪ್ರತಿವಾದಿಯು ಎತ್ತಸ್ಸು K Muddanna Shetty. Nephw of Nagappa Shetty C/O, K S Shetty. Hava Rai. Mansion 2nd Floor, 14th old bustom House Road, Fort Bambay, ಯು ನೀನೇ ಯೂ ಮೂಲಕ ತಿಳಿಯಪಡಿಸುವ ಪೇಕಿದ್ದೆ —

ನಾ ದಿಗೆ ಪ್ರತಿವಾದಿಯು ತಾರೀಕು 20 8 39ನಲ್ಲಿ ಯೂ 109-0 0ಕ್ಕೆ ಬರಕೊಟ್ಟ ನೋಟಿನ ಆಸಲು ಬಡ್ಡಿ ಬಾಕಿ ಯೂ 89 11 5ನ್ನು ಬರ ಮಾಡಿಕೊಳ್ಳುವಲೆ ನಿಮಗೆ ಸದ್ರಿ ಪ್ರತಿವಾದಿಯ ವೆ ವಿರುದ್ಧ ಸದ್ರಿ O. S 168/45ನೇ ದಾವೆಯು ತಾ 24 10 1945ಕ್ಕೆ ತಪ್ಪಗೆ ಯಿ ಬೀಳುವದ್ದರಿಂದ ಆ ದಿವಸ ಬೆಳಿಗ್ಗೆ ಹಗಲು 10 ಗಂಟೆಗೆ ಪ್ರತಿವಾದಿಯೇ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉಡಪಿರಿಸತಕ್ಕದ್ದು. ಈ ಪ್ರಕಾರ ಹಾಜರಾಗುವಲೆ ತಪ್ಪಿದಲ್ಲಿ ಪ್ರತಿವಾದಿಯನ್ನು ಶಿಕ್ಷೆ ಮಾಡಿ ಶಿಕ್ಷೆ ಕೊಟ್ಟೆಸಿಕಾಗುವದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

M. S. Adhikari,
Pleader for the Plaintiff.

Karkala, Date 28-9-45.

ಕನ್ನಡ ನ್ಯೂಲಿಯನರ-ಸಮಾಜ ಸುಧಾರಕ ಸಂಸ್ಥೆಯ ವಾರ್ಷಿಕೋತ್ಸವವು ಇದೇ ತಾ ೭ರಂದು ಆಡಿಟೋರಿಯಂನಲ್ಲಿ ಶ್ರೀ. ಕೆ ಎಸ್ ಆರ್ ಇವರ ಆಧ್ಯಕ್ಷತೆಯಲ್ಲಿ ಜರಗುವುದು

ಇನ್ನೂ ಮೂರು ಸಾವಿರ ಟನ್--ಅಕ್ಕಿ ಹೊರಗಿನಿಂದ ಬಂದರೆ, ಈ ವರ್ಷ ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ಸಂಕಶ್ಟ ತೋರಲಾರದಂತೆ

ಪುತ್ತೂರು-ಯುದ್ಧ ಪ್ರಚಾರ ಬಂಡಿಯು ಕಳೆದ ತಾ. ೨೦ರಲ್ಲಿ ಇಲ್ಲಿಗೆ ಆಗಮಿಸಿ ಸ್ಥಳೀಯ ಪೇಟೆಯ ಬಳಿ ಬೀಡುಬಿಟ್ಟ ದೇಶಾಭಿಮಾನವನ್ನು ತೋರಿಸಿದ್ದರಲ್ಲದೆ ಇಲ್ಲಿಯ ಡಿಪ್ಯುಟಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ತಾಲೂಕು ಪ್ರಚಾರಕ ಶ್ರೀ. ಶೇಷಪ್ಪ ಗೌಡರೂ, ಶ್ರೀ. ಎಚ್ ಕೇಟ್ ಬಿ ಶಿವರಾಮ ಹೊಳ್ಳರೂ ಆಹಾರದ ವಿಷಯ ಭಾಷಣಗಳನ್ನಿತ್ತರು. ಆಹಾರದ ಅನುಭವ ಆತ್ಮಗತ್ಯವಿದ್ದರೂ ಇನ್ನೂ ಯುದ್ಧ ಪ್ರಚಾರವೇಕೆಂಬುದೇ ಅರ್ಥವಾಗುವದಿಲ್ಲ.

ಪುತ್ತೂರು ತಹಶಿಲ್ದಾರರ ಹುದ್ದೆ-ಇದರಲ್ಲಿ I ನೇ ಕ್ಲಾಸ್ ಬೈಲು ಗದ್ದೆಯ ಬೆಳೆಯನ್ನು ಎಕ್ಕರೆಗೆ 40 ಮುಡಿಯಂತೆಯೂ, II ನೇ ಕ್ಲಾಸ್ ಬೆಳೆಯನ್ನು 35-30 ರಂತೆಯೂ, III ನೇ ಕ್ಲಾಸ್ ಬೆಳೆಯನ್ನು 30 ರಂತೆಯೂ, ಬೆಟ್ಟು ಕನಿಷ್ಟ ಕೃಷಿಯನ್ನು ಎಕ್ಕೆ ಒಂದರ 18 20 ರಂತೆಯೂ ಜಮೆಸಿ, ನರ್ಗದಾನಿಸಿಗೆ ಬರುವ ನರ್ಜಾವಧಿ ಗೇಣಿಯಲ್ಲಿ 2/3 ಅಂಶವನ್ನು ಎಗೇಲು ಬೆಳೆಯೊಂದಕ್ಕೇ ಬರುವುವಾಗಿ ತಿಳಿದು ಆ ಪ್ರಕಾರ ರಿಜಿಸ್ಟರ್ ಮಾಡಬೇಕು ಎಂದಿದೆ

ಈ ಸರ್ಕಿಲಾರಿನಂತೆ ಉಳಿತಾಯ ನಿರ್ಧರಿಸಲ್ಪಡುವುದಾದರೆ ನಮ್ಮ ಹಳ್ಳಿಯ ಪೂರ್ವ ಬೆಳೆಯನ್ನು ಕೊಟ್ಟುಬಿಡಿ, ರಿಜಿಸ್ಟರ್ ನೋಟೀಸನ್ನು ನಿವೃತ್ತಿಪಡಿಸಲು ಸಾಧ್ಯವಿಲ್ಲ ಈ ಎಲ್ಲ ವಿಷಯಗಳನ್ನೂ ಸಂಬಂಧಪಟ್ಟ ಅಧಿಕಾರಿಗಳ, ಪ್ರಾಂತೀಯ ಹಾಗೂ ಕೇಂದ್ರ ಸರಕಾರದ ಅನುಗಾಹನೆಗೆ ತ. ೦ ನ್ಮು ಸಂಕಷ್ಟಗಳನ್ನು ಹೋಗಲಾಡಿಸಬೇಕೆಂದು ನೂರಾರು ಮಂದಿ ಗ್ರಾಮಸ್ಥರ ಸಹಿಯುಳ್ಳ ವಿನಂತಿ ಹೊರಟಿದೆ. ಈ ವಿನಂತಿಯಲ್ಲಿ ಸಂಬಂಧಪಟ್ಟ ನೂರಾರು ಮಂದಿ ಗ್ರಾಮಸ್ಥರ ಸಹಿಗಳಿವೆ

ಅಡಿಕೆ ವ್ಯೇಪಾರಿಗಾರರ ಸಭೆ-ಕಳೆದ ತಾ. 22 9-'45ರಂದು ಬೆಳ್ಳಾರೆಯಲ್ಲಿ ಶ್ರೀ. ಎನ್ ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿಗಳಾದ ಶ್ರೀ. ಜಿ. ಕೆ. ಗೋವಿಂದ ಭಟ್ಟರು ಅಡಿಕೆ ವ್ಯೇಪಾರಿಗಾರರ ಸಂಘಟನೆಯ ಅವಶ್ಯಕತೆಯ ಕುರಿತಾಗಿ ಮಾತನಾಡಿದರು.

ಕಾಂಗ್ರೆಸ್ ಕೆಲಸಗಾರರ ಸಭೆ-ತಾಲೂಕಿನಲ್ಲಿ ಕಾಂಗ್ರೆಸ್ ಕೆಲಸದ ಚಟುವಟಿಗಳನ್ನು ತೋರಿಸುವ ಬಗ್ಗೆ ಕಾಂಗ್ರೆಸು ಕೆಲಸಗಾರರ ಸಭೆಯೊಂದು ಇದೇ ಕಳೆದ ತಾ. ೨೦ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆ ಸಮಯಕ್ಕೆ ಸ್ಥಳೀಯ ಕಾಂಗ್ರೆಸು ಕಚೇರಿಯಲ್ಲಿ ಕೂಡಿ ವಿಚಾರವಿನಿಮಯ ನಡೆಯಿತು

ಸರ್ಕಿಲಾರು-ಪಿ ಕ ಜಿಲ್ಲಾ ಕಮರ್ಶಿಯಲ್ ಟೀಕ್ಸ್ ಆಫೀಸರ್ ಶ್ರೀ. ಎಸ್. ಕೃಷ್ಣರಾವ್ ಎಂ ಎ ಇವರಿಂದ ವನಸ್ಪತಿ ತೈಲ ವ್ಯೇಪಾರಿಗಳಿಗೆ—ವನಸ್ಪತಿ ತೈಲೋತ್ಪತ್ತಿಗಳ ರಪ್ತು ಹಾಗೂ ಚಿಲ್ಲರೆ ವ್ಯಾಪಾರಿಗಳು ಕೇವರು, ಸರಕಾರವು ಅಂಥವುಗಳಿಗೆ ಕೊಟ್ಟಿರುವ ವಿನಾಯಿತಿಯನ್ನು ನಿರ್ಧರಿಸುವ ಮೊದಲು ಜ್ಯಾರಿಯಲ್ಲಿದ್ದ 'ಸಿರ್ಮಾಸಕರಧ್ರುವಣಿ ಪಟ್ಟು'ಯನ್ನಾಧರಿಸಿ ವನಸ್ಪತಿ ತೈಲಗಳಿಗೆ ಸರಕಾರವು ನಿರ್ಧರಿಸಿರುವ ಕೊನೆಯ ನಿಶ್ಚಿತ ತುಸು ಹೆಚ್ಚಿನ ಧಾರಣೆಗೆ ಮಾರಾಟ ಮಾಡಲಾಗಿರುವಂದು ತಿಳಿದು ಬಂದಿದೆ. ಈ ಜಿಲ್ಲೆಯ ವನಸ್ಪತಿ ತೈಲ ವ್ಯಾಪಾರಿಗಳಿಗೂ ಆಂತಹ ವರ್ತನೆಗಳಿಗಾಗಿ ಈ ಮೂಲಕ ಎಚ್ಚರಿಕೆಯನ್ನೀಯಲಾಗುತ್ತದೆ. ಮತ್ತು ಅವರು ಸರಕಾರದಿಂದ ನಿರ್ಧರಿಸಲ್ಪಟ್ಟಿರುವ ಕೊನೆಯ ಸಮಿತಿಯಷ್ಟೇ ಧಾರಣೆ ಹಾಕತಕ್ಕ ದ್ದೆಂದು ಸೂಚಿಸಲಾಗುತ್ತದೆ.

'ಔಷಧಿಗಳ ನಿಯಂತ್ರಣಾಜ್ಞೆ, 1945'ಕ್ಕೆಂದು ತಿದ್ದುಪಡಿ-ತಾರೀಕು 1-9 45ರ ಇಂಡಿಯಾ ಗಸೆಟಿನಲ್ಲಿ ಪ್ರಕಟಿಸಲ್ಪಟ್ಟಂತೆ ಒಂದು ತಿದ್ದುಪಡಿಯ ಮೂಲಕ 1943ರ ಔಷಧಿಗಳ ನಿಯಂತ್ರಣಾಜ್ಞೆಯನ್ನು ಈಗ ತಿದ್ದಲಾಗಿದೆ. ಔಷಧಿಗಳ ಕ್ರಯಪಟ್ಟಿಯಲ್ಲಿ ಇದೀಗ ಮೊದಲಬಾರಿ ನಮೂದಿಸಲ್ಪಟ್ಟ ಮತ್ತು ಮೊಹರುನಿಕೆ (ceiling prices) ಧಾರಣೆಯೇ 1945ನೇ ಒಕ್ಟೋಬರ್ ಒಂದರಿಂದ ಅನ್ವಯಿಸಲ್ಪಡಲಿರುವದು—ಎಂದೂ ಜಿ. ಕ ಜಿಲ್ಲೆಯ ಕಮರ್ಶಿಯಲ್ ಟೀಕ್ಸ್ ಆಫೀಸರರು ಪ್ರಕಟಿಸುತ್ತಾರೆ

ಮೂಲ್ಕಿ-ಮಂಗಳೂರು ತಾಲೂಕಿಗೆ ಸಂಬಂಧಪಟ್ಟ ಎಲ್ಲಾ ಜೋರ್ಡು ಎಲಿಮೆಂಟರಿ ಶಾಲಾ ಮುಖ್ಯ ಉಪಾಧ್ಯಾಯ- ಉಪಾಧ್ಯಾಯಿನಿಯರಲ್ಲಿ ಸವಿನಯ ವಿನಂತಿ—

ನಮ್ಮ ತಾಲೂಕು ಯೂನಿಯನ್ ಇತ್ತೀಚೆಗೆ ಏನೂ ಕೆಲಸಮಾಡಿಲ್ಲಿ ಕಾರಣ ನಮ್ಮ ಉಪಾಧ್ಯಾಯ ಬಂಧುಭಗಿನಿಯರ ಸಹಕಾರ ಪ್ರೋತ್ಸಾಹಗಳ ಅಭಾವ ಯೂನಿಯನನ್ನು ಬಲಪಡಿಸುವದು ನಮ್ಮೆಲ್ಲರ ಉಚ್ಚ ಕರ್ತವ್ಯವಾಗಿದೆ. ಯೂನಿಯನ್ನಿನ ಆಸ್ತಿತ್ವವೂ ಜಗತ್ತಿಗೆ ಆವನ್ನು ಇನ್ನಷ್ಟು ಬಲಪಡಿಸುವುದು ಮತ್ತಷ್ಟು ಆಗತ್ಯವಾಗಿದೆ ಆದ್ದರಿಂದ ಎಲ್ಲಾ ತಾಲೆಗಳ ಸುಮಿಷ್ಠ ಉಪಾಧ್ಯಾಯ ಉಪಾಧ್ಯಾಯಿನಿಯರು ತಮ್ಮ ಪಾಗೂ ತನ್ನ ಸಹಾಯಕ-ಸಹಾಯಕಿಯರ ಚಂದಾ ಹಣ ರೂ 0 8 0 (1944 45 ನೇಸ್ಸು 1945 46 ನರ್ಷಗಳ ಬಾಬ್ತು) ಆಣೆ ಎಂಟು ಮಾತ್ರವನ್ನು ದೇಸಿಸಿ, ತಾ 29 12 45ನೇ ಶನಿವಾರ ಪೂರ್ವಾಹ್ನ ಸುಂಟಿ 11ಕ್ಕೆ ಮಂಗಳೂರು ಗಣಪತಿ ಹೈಸ್ಕೂಲಿನಲ್ಲಿ ಕೂಡಲಿರುವ ಸಮಾಸಭೆಯ ದಿನ, ಸಾಧ್ಯವಿದ್ದರೆ ಆದರ ಮೊದಲು ಈ ಕೆಳಗಿನವರಿಗೆ ಪಾವತಿ ಮಾಡಬೇಕಾಗಿ ಅಪೇಕ್ಷಿಸಿ ಸೋಕಾರಗುತ್ತದೆ

ಬಿ. ಭೋಜ ರಾವ್,
ಕಾರ್ಯದರ್ಶಿ,
ಮಂಗಳೂರು ತಾಲೂಕು ಜೋರ್ಡು ಎಲಿಮೆಂಟರಿ ತಾಲಾ ಉಪಾಧ್ಯಾಪಕರ ಯೂನಿಯನ್
ಮುಲ್ಕಿ.
ತಾ. 28-9 1945

ನೋಟೀಸು

ಕಾರ್ಕಳ ಡಿ. ಮು ಕೋರ್ಟಿನಲ್ಲಿ

R. I. A. 3178/1945
in O. S. No 641/1945

ಅಬೇದಿ ಸಹಾ —ವಾದೀರು
ಮತ್ತು
ತಿಮ್ಮಕ್ಕೆ ಸಹಾ ಪ್ರತಿವಾದೀರು.

3, 4ನೇ ಪ್ರತಿವಾದೀರು 1ನೇ ಪ್ರತಿವಾದೀರಿಗೆ ತಾರೀಕು 5 5 1945ರಲ್ಲು ರೂಪಾಯಿ 238 0 0ಕ್ಕೆ ಬರಕೊಟ್ಟ ಆರಜಾದ ಪತ್ರಕ್ಕೆ ವಮು ವಾದೀರ ವಪ್ರತಿವಾದೀರ ಕುಟುಂಬದ ಮೇಲೆ ಬಾಧಿಸತಕ್ಕಲ್ಲಿಸಿಲ್ಲದ ದಿಕ್ಕಲೇರನ್ ಆಪೇಕ್ಷಣಿ ಮೈಂದೆಪ್ಪು ಮತ್ತು ಶಂಕರನು ತಾರೀಕು 11 4 1870ರಲ್ಲು ಸುಬ್ರಾಯ ಭಟ್ಟರಿಗೆ ರೂಪಾಯಿ 160/-ಕ್ಕೆ ಬರಕೊಟ್ಟ ಯು ಇತ್ತಾದ ವಾರ ಪರಿಹಸ್ತ ಇಸ್ಟಿ ಸ್ವಾಧೀನತೆ ಬಗ್ಗೆ ಕುಟುಂಬದ ಪರವಾಗಿ ಸಾದೀರು ಮಾಡಿದ ಮೇಲ್ಕಂಡ ನ್ಯಾಜ್ಯವು ತಾ. 15 10-1945ಕ್ಕೆ ಯಿಟ್ಟುಗುತ್ತದೆ ಈ ನ್ಯಾಜ್ಯವಲ್ಲಿ ಕಕ್ಷಿಯಲ್ಲಿ ತೀರುವಳಿ ಮೆನಸ್ಸುಳ್ಳವರು ಆ ದಿನ್ನ ವ ಅಪ್ಪ ವಂಚಿತವಾಗಿ ಬಂದು ಅರ್ಜಿಕೊಟ್ಟು ಕಕ್ಷಿಯಲ್ಲಿ ತೀರಬಹುದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

K Sundar Rama Shetty,
Vakil for Plaintiffs'

Basaragod, 28-9 1945.

The Pangal Nayak Bank Limited.

(Incorporated in 1920)
Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar.** South Canara District

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕಾಯವಾಗಿದ್ದರೆ, .. ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಪು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೀಮಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ದಿಕ್ಕೆ ಕರೂ. ಪೋಸ್ಟ ಖರ್ಚಾ ೪ ಆಣೆ.

ವಿಜಿಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಹಾವಣಗೇರಿ:ಹಾವಣಗೇರಿವೈಸ್. ಕಚ್ಚಿವೈಹಾರ ಮಾಡತಕ್ಕೆ ವಮಳಕರ ನಿರಾಕ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

ಆಜಾದ್-ವೇವೆಲ್ ಪತ್ರವ್ಯವಹಾರ
(೩ನೇ ಪುಟದಿಂದ ಮುಂದುವರಿದುದು.)

ದಾಗ ನನ್ನ ವಿಷಯವನ್ನು ನಾನು ನಿಮಗೆ ಸ್ವಲ್ಪಪಡಿಸಿಲ್ಲವಾದರೆ ಅದಕ್ಕಾಗಿ ಬಹಳ ತ್ಯಾಪ ಪಡುತ್ತೇನೆ. ನಿಮಗೆ ಗೊತ್ತೇ ಇರುವಂತೆ ನಾಳೆ ಸಮ್ಮೇಲನ ಸೇರುವಾಗ ನಾನೊಂದು ಹೇಳಿಕೆಯೀಯಲಿದ್ದೇನೆ. ಮತ್ತದರಿಂದ ನನ್ನ ವಿಷಯವೆಲ್ಲಾ ನಿಮಗೆ ಸಂಪೂರ್ಣ ಸ್ಪಷ್ಟವಾಗುವೆದೆಂದು ಅಪೇಕ್ಷಿಸುತ್ತೇನೆ ಈ ನಡುವೆ ನಿಮ್ಮೊಡನೊಂದು ವಿಜ್ಞಾಪನೆಯಿದೆ. ಅದೆಂದರೆ ನಿಮ್ಮ ಪತ್ರದ ಕೊನೆಯಲ್ಲಿ ನೀವು ನಮೂದಿಸಿರುವ ಆ ಅಧಿಕೃತ ಸುದ್ದಿಗಳ ಕಡೆಗೆ ನೀವಾಗಲೀ ನಿಮ್ಮ ಅನುಯಾಯಿಗಳಾಗಲೀ ವ್ಯಾಮುಖ್ಯತೆ ಕೊಡಬಾರದು. ಈ ಸಂದರ್ಭದಲ್ಲಿ ಬೇಜವಾಬ್ದಾರಿ ಊಹಾಪೋಹಗಳ ವಿಶೇಷ ಸುಳದಾಟವಿರುವದು ಸ್ವಾಭಾವಿಕ. ಆದರೆ ನಾನು ಆರಿಸಿಕೊಂಡುದನ್ನು ಹೊರಗೆಡಹಿದುದೂ ಇಲ್ಲ, ಆ ಇಚ್ಛೆಯಲ್ಲೂ ಇಲ್ಲವಾದ್ದರಿಂದ,ಅದು ಸತ್ಯಕ್ಕೂ ಅಧಿಕೃತವಾಗಿರಲಾರದು.

ನಿಮ್ಮ ಯಥಾರ್ಥವಾದಿ
ವೇವೆಲ್.

(ನಿನ್ನೂ ಸಮ್ಮೇಲನವು ತಾ. 14ರಲ್ಲಿ ವೈಸರಾಯೀ ಹೇಳಿಕೆಯೊಂದರ ಮೂಲಕ ಮುಗಿದ ಮೇಲೆ ವರ್ಕಿಂಗ್ ಕಮಿಟಿಯು ಸರಣಾಗಿ ಮೌಲಾನರು ಬರೆದ ಪತ್ರ.)

ಆಜಾದರ ಮೂರನೇ ಪತ್ರ

ಅಹ್ಮದ್‌ನಗರ, ನಿನ್ನೂ.
ಜುಲಾಯಿ 15, 45

ಪ್ರಿಯ ಲೋರ್ಡ್ ವೆವೆಲ್,

ಸಮ್ಮೇಲನದ ಪರಾಭವವನ್ನು ಭೂಷಿಸಿದ ಮೇಲೆ ಶಾಂತವಾತಾವರಣ ನಿರ್ಮಿಸಲು ಸರ್ವಪಕ್ಷೀಯರೂ ಸಹಕರಿಸಬೇಕೆಂದು ನೀವು ಸದಾ ನದಿಂದ ಕೇಳಿಕೊಂಡಿರಿ. ಪರಾಭವ ಸಂಬಂಧದ ಕಾಂಗ್ರೆಸ್ ಅಭಿಪ್ರಾಯವನ್ನು ಇಲ್ಲಿ ಪುನರುಚ್ಚರಿಸಲು ನಾನಿಚ್ಛಿಸುವದಿಲ್ಲ ನಾನದನ್ನು ಸಮ್ಮೇಲನದಲ್ಲೇ ಸಾಕಷ್ಟು ತಿಳಿಸಿದ್ದೇನೆ ಆದರೆ ಸಹಕಾರವೆಂಬುದು ಅದಕ್ಕೆರುವ ಪ್ರತಿಬಂಧಕಗಳನ್ನು ತೆಗೆಯುವದೊಂದನ್ನೇ ಆಧರಿಸಿಕೊಂಡಿರೆಯೆಂಬುದನ್ನು ನಾನಿಲ್ಲಿ ಸೂಚಿಸುವದು ನಿಮಗೂ ಯೋಗ್ಯ, ನಮಗೂ ಯೋಗ್ಯ ಈ ಕಂಟಕಗಳಲ್ಲಿ ಕೆಲವು ಈ ವರೆಗೆ ನೆಡೆದು ಬಂದ ಭಾರತ ಮತ್ತು ಇಂಗ್ಲಂಡಿನೊಳಗಣ ಸಂಬಂಧದ ಮೂಲಕ ಆಳವಾಗಿ ಬೇರು ಬಿಟ್ಟಿವೆ, ಸ್ವಭಾವಜನ್ಯವಾಗಿ ಸೇರಿಕೊಂಡಿವೆ ಆ ಸಂಬಂಧದ ಬದಲಾವಣೆಯಾಗುವಾಗಲೇ ಇವು ತೊಲಗಬಲ್ಲವು. ಆದರೆ ನಮ್ಮ ಜನತೆಯನ್ನು ಎದೆನೋವಿನಂತೆ ಪೀಡಿಸುತ್ತಿರುವ, ನಮ್ಮ ಅನುದಿನದ ಜೀವನವನ್ನು ಬಾಧಿಸುತ್ತಿರುವ ಸಮಸ್ಯೆಯಾವ ಕಡೆಗೆ ಹರಿಸಲು ಇಂತಹ ಪೂರ್ವ ಸ್ಥಾಪಿತ ಅಡಚಣೆಗಳಿದ್ದರೂ, ನೀವೊಂದು ಸೂಕ್ಷ್ಮವಿದ್ಯಮಾನ ದೊಡನೆ ವ್ಯವಹರಿಸುತ್ತಿರುವಾಗ ಉನದ್ರವಿಷಬಾರದೆಂಬ ಕಾರಣದಿಂದ ನಿಮ್ಮ ಸಂಭಾಷಣೆಯ ನಡುವೆ ಈ ವಿಷಯವನ್ನು ತೀರಾ ಲಗುವಾಗಿ ಪ್ರಸ್ತಾಪಿಸಿದ್ದೇನೇ ಹೊರತು ಒತ್ತಿ ಹೇಳಿಲ್ಲ. ಆದರೆ ಈಗ ಆ ಧ್ಯಾಯ ಮುಗಿದಿದೆ.ಭಾರತ ಸ್ವಾತಂತ್ರ್ಯದ ಗುರಿ ಸೇರಲು ಸರ್ವರಿಗೂ ಮರ್ಯಾದಿತವಾಗುವ ಒಂದು ಭವಿಷ್ಯಪಥ ಹುಡುಕುವದರಲ್ಲಿ ನಾವೀಗ ನಿರತರಾಗಿದ್ದೇವೆ. ಆದ್ದರಿಂದ ಸಹಕಾರಕ್ಕೆ ತೊಡಕಾಗಿರುವ ಈ ಕಂಟಕಗಳನ್ನು ನೀವು ಕೂಡಲೆ ನಿವಾರಿಸುವಿರೆಂಬ ಆಕಾಂಕ್ಷೆಯಿಂದ ಆತ್ಯಗತ್ಯವಾಗಿರುವ ಈ ಕೆಳಗಿನ ಸೂಚನೆಗಳನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದು ನಿಮ್ಮನ್ನು ಒತ್ತಾಯಿಸುತ್ತೇನೆ (a) ಕಾಂಗ್ರೆಸು ಮತ್ತದರ ಸಹಕಾರೀ ಸಂಘಗಳ ಬಹಿಷ್ಕಾರವನ್ನು ಕೂಡಲೇ ತೆಗೆಯಬೇಕು (b) ಎಲ್ಲಾ ನಿರ್ಬಂಧಿತರೂ ಶರತ್ತಿನಿಕ ಬಿಡುಗಡೆ ಹೊಂದಬೇಕು (c) ಬಿಡುಗಡೆಹೊಂದಿದವರ ಮೇಲಿನ ಎಲ್ಲಾ ನಿರ್ಬಂಧಗಳನ್ನೂ ಹಿಂದೆಗೆಯಬೇಕು (d) ರಾಜಕೀಯಾಪರಾಧ ಆರೋಪಗಳಿಂದ ಶಿಕ್ಷೆಸಲ್ಪಟ್ಟವರೆಲ್ಲರ ಪುನರ್ವಿಚಾರಣೆ ಜನತಾ ಕೋರ್ಟ್‌ಗಳಿಂದರ ಮೂಲಕ ನಡೆದು ಅದರ ತೀರ್ಮಾನ ಕೊನೆಯ ದಾಗಬೇಕು (e) ಪತ್ರಿಕೆಗಳ ಮೇಲೆ, ಮತ್ತು ಚಳವಳಿ,ಅಥವಾ ಸಂಸ್ಥೆಗಳ ಮೇಲಿರುವ ವಿಶೇಷ ಶಾಸನಗಳನ್ನು ಹಿಂದೆಗೆಯಬೇಕು (f) ಆಗೋಸ್ತು ಗಲಭೆಯ ಸಂಬಂಧವಾಗಿ ವರಣ ಶಿಕ್ಷೆ ವಿಧಿಸಲ್ಪಟ್ಟಿರುವೆಲ್ಲವನ್ನೂ ಜೀವಾವಧಿ ಶಿಕ್ಷೆಯೂ ಸೇರಿದಂತೆ ಸಡಿಲಿಸಬೇಕು (g) ಕಾಣೆಯಾಗಿರುವವರ ಮೇಲಿರುವ ವಾರಂಟುಗಳನ್ನೆಲ್ಲಾ ರದ್ದುಪಡಿಸಬೇಕು (h) 14 ವರುಷ ಶಿಕ್ಷೆಯನುಭವಿಸಿದ ಎಲ್ಲಾ ಕೈದಿಗಳನ್ನೂ ನಿಶ್ಶರ್ತವಾಗಿ ಬಿಡುಗಡೆಮಾಡಬೇಕು. (i) ಮೇಲಿನ ಒತ್ತಾಯಗಳು ಸ್ವಾಹಾ ಆದ ಅಥವಾ ಜಡ್ತಿಯಾದ ಪ್ರತಿಯೊಂದು ಸ್ಥಿರಶರ ಸೊತ್ತುಗಳಿಗೂ ಅನ್ವಯಿಸುತ್ತವೆ.

ನಿಮ್ಮ ಯಥಾರ್ಥ ವಾದಿ,
ಎ. ಕೆ ಆಜಾದ್.

(ಮೇಲಿನ ಪತ್ರದ ಕೊನೆಯಲ್ಲಿ ಕಾಂಗ್ರೆಸು ಅಶ್ರಸುಣಗಾಳ ಜಾಪಾನಿಗೆ ಬದ್ಧ ವಿರೋಧವೆಂಬುದಾಗಲು, ಮೌಲಾನರು ಸಕಾರಣವಾಗಿ ಸ್ಪಷ್ಟಪಡಿಸಿದ್ದರು. ಮತ್ತದೇ ದಿನ ತಮ್ಮೊಳಗಿನ ಪತ್ರವ್ಯವಹಾರಗಳ ಪ್ರಕಟಣೆಗಾಗಿ ವೈಸರಾಯರ ಅನುಮತಿಯನ್ನೂ ಕೇಳಿದ್ದರು ಇದಕ್ಕೆ ೮ ದಿನವೇ ವೈಸರಾಯರೊಂದು ಉತ್ತರಕೊಟ್ಟು ಸಮ್ಮೇಲನದ ಕಾರ್ಯಕ್ರಮಗಳು ಗುಪ್ತವಾಗಿರಬೇಕೆಂಬುದೇ ಆದರ ಅಧ್ಯಕ್ಷನಾದ ನನ್ನ ಬಯಕೆ; ತಾನು ಹೇಳಿದುದು ಬೆಳಕಿಗೆ ಬೀಳುವದಿಲ್ಲವೆಂದಾದರೆ ಪ್ರತಿನಿಧಿಗಳು ನಿಶ್ಯಂಕೆಯಿಂದ ಮಾತಾಡುತ್ತಾರೆಂಬುದೇ ಇದಕ್ಕೆ ಕಾರಣ. ಪಕ್ಷಗಳ ಪರವಾಗಿ ನನಗೆ ಬರುವ ಹೆಸರು ಪಟ್ಟಿಗಳನ್ನು ಪ್ರಕಟಿಸಬಾರದೆಂಬುದು ಸಮ್ಮೇಲನದ ಖಂಡಿತಾಭಿಪ್ರಾಯವಿತ್ತೆಂಬುದನ್ನು ನೀವು ನೆನಪಿಸಿಕೊಳ್ಳಬೇಕು' ಎಂದು ಕೇಳಿಕೊಂಡಿದ್ದರು. ಮೌಲಾನರ ಸೂಚನೆಗಳಿಗೆ ಉತ್ತರವಾಗಿ ಆಗೋಸ್ತು ತಾ. 24ರಲ್ಲಿ ವೈಸರಾಯರು ಬರೆದ ಪತ್ರ:—)

ವೈಸರಾಯರ ಉತ್ತರ

ವೈಸರಾಯೀ ಭವನ, ನವಢಿಲ್ಲಿ
ಆಗೋಸ್ತು 24, 1945

ಪ್ರಿಯ ಮೌಲಾನಾ ಸಾಹಿಬ್,

ನಿಮ್ಮ ಜುಲಾಯಿ ತಾ. 15ರ ಪತ್ರಕ್ಕೆ ಉತ್ತರಿಸಲು ತಡವಾದುದಕ್ಕಾಗಿ ವಿಕಾದಿಸುತ್ತೇನೆ. ಈಗ ತಾನೇ ಆಗೋಸ್ತು 21 ರ ನಿಮ್ಮ ತಂತಿಯೂ ಕೈಸೇರಿದೆ. ನಿಮ್ಮ ಪತ್ರವಲ್ಲಿದ್ದ ಸೂಚನೆಗಳ ಸಂಬಂಧವಾಗಿ ನನ್ನ ಉತ್ತರ ಇಲ್ಲಿದೆ.— (a)ಯಿಂದ (i) ವರೆಗಿನದಕ್ಕೆ) ಅ ಭಾ ಕಾಂ. ಸಮಿತಿ ಮತ್ತು ಆಜಾರಬದ್ಧ ಕಾಂಗ್ರೆಸ್ ಸಂಸ್ಥೆಗಳ ಮೇಲಿನ ನಿಷೇಧಗಳು ತೆಗೆಯಲ್ಪಡುತ್ತಿವೆ ಅಥವಾ ಕೂಡಲೇ ತೆಗೆಯಲ್ಪಡಲಿವೆ ಫೋರ್ವರ್ಡ್ ಬ್ಲೋಕ್ ಮತ್ತು ಸನತಾನವಾದಿ ಪಕ್ಷಗಳ ಸಂಬಂಧದ ಆಜ್ಞೆಗಳ ಕುರಿತು ಕೇಂದ್ರ ಸರಕಾರವೂ ಸಂಯುಕ್ತ ಪ್ರಾಂತ್ಯ, ಪಂಜಾಬ್ ಮತ್ತು ಬಿಹಾರ್ ಪ್ರಾಂತಿಕ ಸರಕಾರಗಳೂ ಪರ್ಯಾಲೋಚಿಸುತ್ತಿವೆ. ಕೆಲವು ಆಜ್ಞಾಂಶಗಳ ಸ್ಥಳೀಯ ಸಂಘಗಳ ಕುರಿತು ಕೆಲವು ಪ್ರಾಂತಿಕ ಸರಕಾರಗಳೂ ಈ ಮಾದರಿಯನ್ನನುಸರಿಸುತ್ತಿವೆ.

(2) ಸ್ವಾಧೀನದಲ್ಲಿಟ್ಟುಕೊಂಡ ಸ್ಥಿರ ಸೊತ್ತುಗಳು ಮಾಲಿಕರಿಗೆ ಹಿಂದಿರುಗಿಸಲ್ಪಡುವವು ಕಾಯದೇಬದ್ಧವಾಗಿ ನಡೆದು ಮುಗಿದ ಚರಸೊತ್ತು ಸಂಬಂಧದ ಆಜ್ಞೆಗಳೂವುದನ್ನೂ ಹಿಂತೆಗೆಯಲಾಗುವದಿಲ್ಲ; ಮತ್ತವು[illegible] ಹಿಂತೆಗೆಯಲಾಗುವದಿಲ್ಲ. ಆದರೆ [illegible] ದ ನಷ್ಟದಲ್ಲಿರುವ ಸಾಮಾನುಗಳನ್ನು ಹಿಂದೆಕೊಡಲಾಗದು, (3) ಸ್ವಾಹಾ ಮಾಡಿದ ನಿಧಿಗಳನ್ನು ಹಿಂದೆ ಕೊಡಲಾಗುವದಿಲ್ಲ, ಆದರೆ ಆಪಹರಿಸಿಟ್ಟುಕೊಂಡವನ್ನು ಮರಳಿಸಲಾಗುವದು. (b ಮತ್ತು c) ವಿರೋಧಿಯೊಡನೆ ಸಂಬಂಧವಿದೆ, ಅಧವಾ ಹಿಂಸೆಯಲ್ಲಿ ಪ್ರವೃತ್ತರಾಗುತ್ತಾರೆ ಎಂಬುದರಿಂದಲೆ ಕೆಲವರಿಗೆ ವಿಚಾರಣೆಯಿಲ್ಲದೆ ಬಂಧನ ಮತ್ತು ಕೆಲವರ ಚಲನವಲನಕ್ಕೆ ಪ್ರತಿಬಂಧವಿದೆ. ಈಗ ಜಾಪಾನ್ ಯುದ್ಧ ಮುಗಿದಿರುವದರಿಂದ ಇಂಥವರ ಕುರಿತು ಪುನರಾಲೋಚಿಸಲಾಗುವದು. ಆದರೆ ಸದ್ಯ ಏಕದಂ ಎಲ್ಲರನ್ನೂ ಬಿಡುಗಡಮಾಡುವ ಪ್ರಶ್ನೆಯೇಳೆಂಬ ಭಯ ನನಗಾಗುತ್ತಿದೆ 1942ರ ಗೊಂದಲದ ಕುರಿತು ಕಾಂಗ್ರೆಸ್ ಪ್ರಮುಖರು ಇತ್ತೀಚೆಗೆ ಕೊಟ್ಟಿರುವ ಕೆಲವು ಹೇಳಿಕೆಗಳು ಕಾನೂನು ಮತ್ತು ವ್ಯವಸ್ಥೆ ರಕ್ಷಣೆಯ ಹೊಣೆ ಹೊತ್ತವರಿಗೆ ಪುನರಾಶ್ವಾಸನೆಯೀಯುವಂಥವುಗಳಲ್ಲ. (d) ಶಿಕ್ಷೆ ವಿಧಿಸಲ್ಪಟ್ಟ ರಾಜಕೀಯ ಕೈದಿಗಳ ಪುನರ್ವಿಚಾರಣೆಗಾಗಿ ಸ್ವತ್ಯೇಕ ವಿಚಾರಣಾಮಂಡಲಿ ರಚಿಸಲು ನಾನು ತಯಾರಿಲ್ಲ (e)ಪತ್ರಿಕೆ ಅಧವಾ ಸಂಸ್ಥೆಗಳಮೇಲೆ ಕಯದೇಮಿತಿಯ ಹೊರತು ಶಾಸನಾತೀತ ನಿರ್ಬಂಧಗಳಿರುವುದು ನನ್ನ ತಿಳುವಳಿಕೆಗೆ ಬಂದಿಲ್ಲ (f) ಚಿಮೂರ್-ಆಷ್ಟಿ, ಕುಲಶೇಖರ ಪಾಟ್ಟೂಮ್, ಫಾಟ್ಸ್ ಮತ್ತು ಚಾವುಲ್‌ಪುರ ಕೈದಿಗಳ ಮರಣದಂಡನೆಯನ್ನು ಜೀವಾವಧಿ ಸಜೆಯಾಗಿ ಪರಿವರ್ತಿಸಿದ್ದೇನೆ (g) ಕಾಣೆಯಾದವರೆಲ್ಲರ ವಿರುದ್ಧದ ವಾರಂಟನ್ನು ತೆಗೆದು ಹಾಕಲಾರೆನೆನ್ನಲು ವಿಷಾದಿಸುತ್ತೇನೆ ಇವರಲ್ಲಿ ಹಲವರು ಮಹಾಸಂಹಾರ ಮಾಡಿದ್ದಾರೆ (h) 14 ವರುಷಕ್ಕೆ ಮೇಲ್ಪಟ್ಟು ಶಿಕ್ಷೆಯನುಭವಿಸಿದವರೆಲ್ಲರ ಕುರಿತೂ ಹೇಗೆಂದು ವಿಚಾರಣೆ ಮಾಡಿಸುತ್ತೇನೆ.

ಜಾಪಾನ್ ಶರಣಾಗುವುದರಿಂದ ನಿಮ್ಮ ಸಿಕ್ಕ ಸೂಚನೆಗಳಿಗೀಗ ಉತ್ತರಬೇಕಾಗಿಲ್ಲ. ಚುನಾವಣೆ ನಡಿಸುವ ಮೊದಲು ಸಾಮಾನ್ಯ ವರಿಸ್ಥಿತಿಯನ್ನು ನಿರ್ಮಿಸಿಕೊಳ್ಳಬೇಕೆಂದು ಆಗೋಸ್ತು 22ರ ತಂತಿಯಲ್ಲಿ ಸೂಚಿಸಿದ್ದೀರಿ ಸುಮಾರು 6 ವರುಷಗಳ ಯುದ್ಧಾನಂತರ ಹಿಂದುಸ್ಥಾನವು ಕೂಡಲೇ ಸಾಮಾನ್ಯ ಸ್ಥಿತಿಗೆ ಬರುವದ ಸಾಧ್ಯ ಈಗ ಚುನಾವಣೆಯನ್ನು ಮುಂದುವರಿಸಿದರೆ ವತ್ತೊಂದು ವರುಷದ ನಂತರವೇ ಅದು ಸಾಧ್ಯ. ಆಜಾರಬದ್ಧ ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಬಹಿಷ್ಕಾರವೀಗ ತೆಗೆಯಲ್ಪಟ್ಟಿರುವುದರಿಂದ ಸರ್ವ ಸಾಮಾನ್ಯ ಕಾಂಗ್ರೆಸಿಗರೆಲ್ಲರ ಬಿಡುಗಡೆಯಾಗುತ್ತಿರುವುದರಿಂದಲೂ ಕಾಂಗ್ರೆಸ್ ಪಕ್ಷಕ್ಕೆ ಚುನಾವಣಾ ಸಂಬಂಧದಲ್ಲಿ ಗಣ್ಯತೊಡಕುಗಳು ಳಿದಿಲ್ಲವೆಂದು ನಾನು ನಂಬುತ್ತೇನೆ ಸಾಧ್ಯವಾದಷ್ಟು ಬೇಗನೇ ಸಾಮಾನ್ಯ ಪರಿಸ್ಥಿತಿಯನ್ನು ನಿರ್ಮಿಸಬೇಕೆಂದೇ ನನ್ನ ಬಯಕೆ. ಹಿಂಸಾಕೃತ್ಯಗಳನ್ನು ಬಹಿರಂಗವಾಗಿ ಸ್ಖಾಪಿಸುವದನ್ನು ಬಿಟ್ಟರೆ ಈ ಕೆಲಸದಲ್ಲಿ ಕಾಂಗ್ರೆಸ್ ಪಕ್ಷೀಯರು ಕಾರ್ಯತಃ ನನಗೆ ಸಹಕಾರವಿತ್ತಂತಾಗುವದು.

ನಿಮ್ಮ ಯಥಾರ್ಥವಾದಿ,
ವೇವೆಲ್.

The Aryan Champion Insurance Co. Ltd.,
BOMBAY.

ಜಾಹೀರು ಪ್ರಕಟಣೆ

ನಕ್ಷಿಣ ಕನ್ನಡ ಮತ್ತು ಕೊಡಗು ಜಲ್ಲೆಗಳ ಪ್ರಮುಖ್ಯ ಏಜಂಟರಾಗಿ ಶ್ರೀ ಐಕಳ ಸೀತಾರಾಮು ಶೆಟ್ಟಿ ಮಂಗಳೂರು, ಇವರನ್ನು ನೇಮಿಸಲಾಗಿದೆಯೆಂದು ಬೊಂಬಾಯಿ ಆರ್ಯನ್ ಚೆಂಪಿಯನ್ ಇನ್ಶೂರೆನ್ಸ್ ಕಂಪೆನಿಯ ಒಡೆಯರು ಮಹಾ ಜನರಿಗೆ ತಿಳಿಸಲು ತುಂಬಾ ಸಂತೋಷಪಡುತ್ತಾರೆ. ಕಂಪೆನಿಯ ಕಾರ್ಯಕ್ಷೇತ್ರವು ವಿಸ್ತರಿಸಲ್ಪಟ್ಟ ಕಾರಣ ವಿದ್ಯಾವಂತ ಹಾಗೂ ಸಮರ್ಥ ಯುವಕರಿಗೆ ಸ್ವತಂತ್ರ ಸಂಪಾದನೆ ಮಾಡಲು ಅನುಕೂಲವಾದ ಆಕರ್ಷಕ ಸವಲತ್ತುಗಳು ಕಂಪೆನಿಯಿಂದ ದೊರಕುವವು ಹೆಚ್ಚಿನ ಮಾಹಿತಿಗೆ ಇಂದೇ ಬರೆಯಿರಿ

ಎ ಸೀತಾರಾಮು ಶೆಟ್ಟಿ
ಬ್ಯೂಕಾಲೇಸ್, ಪಕ್ಕೀರು,
ಕಂಕನಾಡಿ ಪೋಸ್ಟ್
ಮಂಗಳೂರು

ಮೆನೇಜರ್,
ಆರ್ಯನ್ ಚಾಂಪಿಯನ್ ಇನ್ಶೂರೆನ್ಸ್
ಕೊ ಲಿಮಿಟೆಡ್
ಎಲ್ಲಿಸ್ಸನ್ ಸರ್ಕಲ್,
ಫೋರ್ಟ್, ಬೊಂಬಾಯಿ

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾಇಲಾಖೆಗೆ ಸಂಬಂಧಿಸಿದ ಸಕ್ಕರಿಯಾರುಗಳೂ ಪ್ರಕಟ ನಾಗುತ್ತವೆ

ವಾರ್ಷಿಕ ಚಂದಾ
ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,
UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ರಾಷ್ಟ್ರಸಭೆಯ ಇತಿಹಾಸ	2	8	0
2	ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3	ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4	ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5.	ಭಾರತ ಗೀತಾಂಜಲಿ	0	2	0
6	ಪುರಂದರದಾಸರ ಕೀರ್ತನೆ ಭಾಗ 4ರ–ಸ್ಪೆಷ್ ಬೈಂಡ್	1	4	0
7.	ಶಾಂತಿಪುರಾಣ	3	0	0
8.	ಸಾಮುದ್ರಿಕ ಶಾಸ್ತ್ರ	0	8	0
9.	ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ಕೃಷ್ಣ ಸಂಧಾನ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟುದ ಗುಟ್ಟು	0	8	0
ಕಾಸಿಗೆ	0	8	0
ತುಳು ವ್ಯಾಕರಣ	1	0	0
ಮದ್ವನಾಳತ್ತ್ ಮದ್ಮಾಯೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ .. .	9	2	0
ಮಿತ್ಯ ನಾರಾಯಣ ಕತೆ	1	0	0
ಸತೀ ಕಮಲೆ	0	12	0
ಬೊಬ್ಬರ್ಯೆ	0	4	0
ತೊಡಕಿನಾರ್	0	4	0
ಮುಂಡತ್ತಾಯೆ	0	4	0
ಕನ್ನಡಕೊ	0	1	0
ವಿಶ್ವರೂಪದರ್ಶನೊ	0	2	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ಮಿಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: 2–8–0. ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.
ಬೆಲೆ: 3–0–0
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಕೆನೆ ಬ್ರದರ್ಸ್, ,,
ಶ್ರೀ ಭೋಜರಾವ್ & ಕೊ ,,
ಪಾವಂಜೆ ಗುರುರಾವ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ ಭವನ, ಉಡುಪಿ.
ಪಿ. ಎ. ಪೈ ಬ್ರದರ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M 3618 SILVER JUBLEE YEAR ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0
ಪ್ರತಿ ಪ್ರತಿಗೆ ರೂ. 0—1—6



ವರ್ಷ 25 ವಾರ 6] ಪ್ರತಿ ಗುರುವಾರ ಹೊರಡುವ ನಾಡ್ಕೀಯ ವಾರಪತ್ರಿಕೆ. [Vol. 25 No. 6
Founder: SRI A. B. SHETTY.
ಉಡುಪಿ • 11—10—1945 • ಮಂಗಳೂರು.
ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಚಿಕೆ ರೂ. 0—1—6.

ಅಮೃತಾಂಜನ
ತಲೆನೋವಿಗೆ, ತಿರಿ,
ನೋವಿಗೆ, ಉಳುಕು
ಉತ್ತಿಗೆ, ಘುಜ,
ಹಲ್ಲು ನೋವಿಗೆ
ಗೂ ಎದನೋವಿ.
ಸಂಗಡ ಬಾತು
ಕೊಳ್ಳುವದು, ಬೇಗ
ವಿಷಮ ಲಕ್ಷಣ ಬೇಗ
ದಕ್ಷವಾಗಿ ನೋವಿನ
ಮಂಡಲಾಗಿ ಎಲ
ರೋಗಗಳಿಗೂ ಉಪ
ಯೋಗಿಸಲ್ಪಟ್ಟಿ
REGD.
ಹಲವು ಹುಳುಳಿಕ್ಕಿ ಮತ್ತು ಸಣ್ಣ ಸಣ್ಣ ಪಟ್ಟಿಗಳಲ್ಲಿ ಮಾರಲ್ಪಡುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಕೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,

Head Office:- **UDIPI, (S. India.)**

New Appointments.

Applications from candidates of S. S. L C. standard are invited for clerical posts in the Company.

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of their School and another from any local gentleman

UDIPI,
2nd October, 1945.

T. R. A. Pai,
Managing Director.

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಆದು
'ಜುಪಿಟರ್' (ದೇವತೆಗಳ ರಾಜ)ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ
'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಝರಾಗುವವರೂ
ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ
ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ
ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910

ದಕ್ಷಿಣ ಭಾರತದ ಚೀಫ್ ಏಜಂಟರು.

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು
ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ
ಸಮರ್ಥಾನತರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ
ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.
Central Office:—UDIPI. S. K
Mangalore ○ Calicut ○ Bangalore ○ Madras ○ Madura ○ Trivendrum ○ Bombay

ANNOUNCEMENT.

We have the pleasure to announce that a branch of the Bank will shortly be opened at

317, Linghi Chetty Street,
MADRAS.

(ESTD. 1906 ಸ್ಥಾಪನೆ.)

CANARA BANK LIMITED
(Incorporated in British India, liability of Members Limited)

ANNOUNCEMENT

We have much pleasure to announce that branches of the Bank will be opened shortly at

KANHANGAD & MERCARA.

Other Branches at- Udipi, Kaup, Coondapoor, Karkal, Brahmavar, City-Mangalore, Kasaragod, Puttur, Byndoor & Bombay.

The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ
ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ
ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ
ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತ
ವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾ
ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು
ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಗಾಂಧೀ ಜಾತಕ

1969—ಒಕ್ಟೋಬರ್ 2ರಲ್ಲಿ ಕಾಥಿಯಾವಾರಿನ ಪೋರ್ ಬಂದರದಲ್ಲಿ ಜನನ. ಜನನ ಬನಿಯಾ (ವೈಶ್ಯ) ಜಾತಿ. ಅನುಕ್ರಮವಾಗಿ ಪೋರ್ ಬಂದರ್, ರಾಜಕೋಟೆ ಮತ್ತು ವಂಕನೆರ್ ಸಂಸ್ಥಾನಗಳ ದಿವಾನರಾಗಿದ್ದ ಕರಮಚಂದ ಯಾನೆ ಕಾಬಾ ಗಾಂಧಿಯ ಮೂವರು ಮಕ್ಕಳಲ್ಲಿ ಕಿರಿಯವ. ಹೆತ್ತ ಪುತ್ಲೀ ಬಾಯಿ ಕರಮಚಂದ ಗಾಂಧಿಯ ನಾಲ್ಕನೇ ಹೆಂಡತಿ

1876—ತಂದೆ ತಾಯಿಗಳೊಂದಿಗೆ ರಾಜ ಕೋಟೆಗೆ ಪ್ರಯಾಣ. 12ನೇ ಪ್ರಾಯದ ವರೆಗೂ ಅಲ್ಲಿ ಪ್ರಾಥಮಿಕ ಶಿಕ್ಷಣ. ಸಾಹುಕಾರ್ ಗೋಕುಲದಾಸ್ ಮಕಂಜಿಯ ಪುತ್ರಿ ಕಸ್ತೂರಿ ಬಾನೊಂದಿಗೆ ಮದುವೇ ನಿಶ್ಚಯ.

1883—ಕಸ್ತೂರಿ ಬಾನೊಂದಿಗೆ ವಿವಾಹ.

1884—85—ಗುಟ್ಟಿನಲ್ಲಿ ಮಾಂಸಾಹಾರ. ಆದರೆ ಒಂದು ವರುಷದೊಳಗೆ ಹೆತ್ತವರನ್ನು ವಂಚಿಸಲು ಹೇಸಿ ಮಾಂಸಾಹಾರ ತ್ಯಾಗ.

1887—ಮೆಟ್ರಿಕ್ಯುಲೇಶನಿನಲ್ಲಿ ತೇರ್ಗಡೆ. ಕಾಥಿಯಾವಾರಿನ ಭಾವ ನಗರದ ಸಾಮಲ್ದಾಸ್ ಕಾಲೇಜು ಪ್ರವೇಶ. ಆದರೆ ಮೊದಲ ವರ್ಷಾಂತ್ಯದಲ್ಲೇ ಶಿಕ್ಷಣಾಭ್ಯಾಸ ತ್ಯಾಗ.

1888—ಇಂಗ್ಲ್ಯಾಂಡಿಗೆ ಪ್ರಯಾಣ. ತಾಯಿಗೆ ಕೊಟ್ಟ ಪ್ರತಿಜ್ಞೆಯಂತೆ ಸಸ್ಯಾಹಾರೀ ಜೀವನ. ನಾಗರಿಕನೆನ್ನಿಸುವ ಸಾಧನಗಳೆಂಬ ಕಾರಣದಿಂದ, ನವನಾಗರೀಕತೆಯ ಪ್ರೇಮದಿಂದ ನರ್ತನ ಮತ್ತು ಗಾಯನಾಭ್ಯಾಸ.

1889—90—ಸಾದಾ ಜೀವನ ಸಂಬಂಧದ ಪುಸ್ತಕಗಳನ್ನೋದಿ ನೆಚ್ಚಿದಲ್ಲಿ ಅಧ್ಯಯನ ಕಡಿತ. ಪ್ರಥಮ ಬಾರಿ ಗೀತೆಯ ಪಠನೆ ಮತ್ತದರ ಮೇಲೆ ಗಾಢ ಭಕ್ತಿಯ ಮೊಳೆತ.

1891—ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆ. ಭಾರತಕ್ಕಾಗಮನ.

1893—ಮುಸ್ಲಿಂ ಕಂಪೆನಿಯೊಂದರ ವಕಾಲತ್ ವಹಿಸಿ ದಕ್ಷಿಣಾಫ್ರಿಕಕ್ಕೆ ಪ್ರಯಾಣ.

1894—ನಾಟಾಲಿನ ಸುಪ್ರೀಮ್ ಕೋರ್ಟಿನ ಸರ್ವ ಪ್ರಥಮ ಭಾರತೀಯ ಎಡ್ವೊಕೇಟ್ ಆಗೋಣ—ಕುರಾನ್, ಬೈಬಲ್ ನೊದಲಾದ ಧಾರ್ಮಿಕ ಗ್ರಂಥಗಳ ಪಠನೆ.

1896—ಭಾರತಕ್ಕಾಗಮನ. ದಕ್ಷಿಣಾಫ್ರಿಕದ ಹಿಂದೀಯರ ವರವಾಗಿ ಭಾರತದಲ್ಲಿ ಚಳವಳನೆಬ್ಬಿಸಿ ಪುನಃ ಹೆಂಡತಿ ಮಕ್ಕಳೊಂದಿಗೆ ದ. ಆಫ್ರಿಕಕ್ಕೆ ಪ್ರಯಾಣ

1897—ದ. ಆಫ್ರಿಕದ ದರ್ಬಾನಿನಲ್ಲಿ ಇಳಿಯುಮೊಗಲೇ ಉದ್ರೇಕೀ ಯುರೋಪಿಯನ್ನರಿಂದ ಮುತ್ತಿಗೆ, ಮತ್ತು ಹೊಡೆತ.

1899—ಬೋಯರ್ ಯುದ್ಧ ಸಹಾಯಕವಾಗಿ ಹಿಂದೀ ಎಂಬ್ಯುಲೆನ್ಸ್ ದಳ ನಿರ್ಮಿಸಿ ಸಹಾಯವಿತ್ತು, ಯುದ್ಧ ಪದಕದ ಸಂಪಾದನೆ.

1901—ಭಾರತಕ್ಕೆ ಪುನರಾಗಮನ.

1902—ಟ್ರಾನ್ಸ್‌ವಾಲಿನ ನ್ಯಾಯ ವಿಧಾಯಕ ಸಭೆಯಲ್ಲಿ ಬಂದಿದ್ದ ಅಸ್ಯಾನರ ವಿರುದ್ಧ ಮಸೂದೆಯನ್ನಿರಿಸಿದ ಚಳವಳದ ನಾಯಕತ್ವ ವಹಿಸುವಂತೆ ದ. ಆಫ್ರಿಕದಿಂದ ಆಮಂತ್ರಣ.

1903—ಟ್ರಾನ್ಸ್‌ವಾಲಿನ ಸುಪ್ರೀಮ್ ಕೋರ್ಟಿನ ಆಟೋರ್ನಿಯಾದುದು ಟ್ರಾನ್ಸ್‌ವಾಲ್ ಬ್ರಿಟಿಷ್ ಹಿಂದೀಯರ ಸಂಘ ಸ್ಥಾಪನೆ.

1904—ರಸ್ಕಿನರ 'ಈ ಕೊನೆ ತನಕ'ಎಂಬ ಪುಸ್ತಕ ಮತ್ತು ಇತರ ಮಹಾ ಗ್ರಂಥಗಳ ಅಭ್ಯಾಸ. 'ಇಂಡಿಯನ್ ಒಪಿನಿಯನ್' ಎಂಬ ಪತ್ರಿಕೆಯ ಸ್ಥಾಪನೆ. ಜೊಹನ್ನೆಸ್‌ಬರ್ಗಿನಲ್ಲಿ ಪ್ಲೇಗು ಹಬ್ಬಿದಾಗ ಆಸ್ಪತ್ರೆಯ ರಚನೆ. ಆಹಾರಾರೋಗ್ಯ ಸಂಬಂಧದಲ್ಲಿ ಗುಜರಾತಿನಲ್ಲಿ ಹಲವು ಲೇಖನಗಳ ಪ್ರಕಟಣೆ.

1906—ಝುಲು ದಂಗೆಯಲ್ಲಿ ಹಿಂದೀಯ ಸುಶ್ರೂಷಾ ದಳದ ಸ್ಥಾಪನೆ. ಜೀವವಧಿ ಬ್ರಹ್ಮಚರ್ಯ ಪಾಲನೆಯ ಪ್ರತಿಜ್ಞಾಧಾರಣೆ ಹಿಂದೀ ವಿರುದ್ಧ ಟ್ರಾನ್ಸ್‌ವಾಲ್ ಓರ್ಡಿನೆನ್ಸಿನ ಇದಿರಾಗಿ ದೊಡ್ಡ ಸಾರ್ವಜನಿಕ ಸಭೆಯಿಂದ ವ್ಯವಹಾರ್ಯ ಅಸಹಕಾರ ಪ್ರತಿಜ್ಞೆಮಾಡಿಸುವಿಕೆ ಇಂಗ್ಲಾಂಡಿನ ವಸಾಹತು ಕಾರ್ಯದರ್ಶಿಯ ಮುಂದೆ ಹಿಂದೀ ಬೇಡಿಕೆಗಳನ್ನಿಡಲು ಲಂಡನಿಗೆ ಪ್ರಯಾಣ.

1907—ದ. ಆಫ್ರಿಕದಲ್ಲಿ ಪ್ರತಿರೋಧ ಚಳವಳದ ಸಂಘಟನೆ. ಸಾರ್ವಜನಿಕ ಸೇವೆಗಾಗಿ ವಕೀಲೀ ಉದ್ಯೋಗ ತ್ಯಾಗ.

1908—ಆಜ್ಞೆಯಂತೆ ಟ್ರಾನ್ಸ್‌ವಾಲನ್ನು ಬಿಡುದುದಕ್ಕಾಗಿ ಎರಡು ತಿಂಗಳ ಮೊದಲ ಸಜೆ. 20 ದಿನಗಳೊಳಗೆ ಜನರಲ್ ಸ್ಮಟ್ಸರ ಭೇಟಿಗಾಗಿ ಕರೆಯಲ್ಪಟ್ಟು ಸಂಧಾನ ಸಾಧಿಸಿ ಬಿಡುಗಡೆ. ಈ ಒಪ್ಪಂದವು ಹಿಂದೀಯ ಹಿತಕ್ಕೆ ಹಾನಿಕರವೆಂದು ಭಾವಿಸಿದ್ದ ಪಠಾಣರಿಂದ ಸಾವು ಸಮೀಪಿಸಿತೆನ್ನುವ ವರೆಗೂ ಹೊಡೆತ. ತನ್ನನ್ನು ಹೊಡೆದವನೆಮೇಲೆ ಕೇಸ್ ಮಾಡದೆ ಕ್ಷಮೆದಾನ. ಸ್ಮಟ್ಸರು ಸಂಧಾನ ಶರ್ತಗಳಂತೆ ನಡೆಯದುದಕ್ಕಾಗಿ ಪುನಃ ಚಳವಳ. ದಸ್ತಗಿರಿಯಾಗಿ 2 ತಿಂಗಳ ಕಠಿಣ ಸಜೆ.

1909—ಇಂಗ್ಲೆಂಡಿಗೆ ಡೆಪ್ಯುಟೇಶನ್. ಹೋಗಿ ಪುನಃ ದ. ಆಫ್ರಿಕಕ್ಕೆ ಹಿಂದಿರುಗಿದುದು. ಈ ಪ್ರಯಾಣದಲ್ಲೇ 'ಹಿಂದ್ ಸ್ವರಾಜ್ಯ' ಗ್ರಂಥದ ರಚನೆ.

1910—ಜೋಹನ್ನೆಸ್‌ಬರ್ಗಿನಲ್ಲಿ 'ಟೋಲ್ಸ್‌ಟಾಯಿ ಬೇಸಾಯ ಫ್ಲೇಕ್ಸ್'ದ ರಚನೆ.

1911—12—ಬೇಸಾಯಾ ಶ್ರಮದ ಇಬ್ಬರು ನಿವಾಸಿಗಳು ಅನೈತಿಕವಾಗಿ ವರ್ತಿಸಿದರೆಂದು ಅದೇ ಪ್ರಥಮವಾಗಿ ಒಂದು ವಾರ ಉಪವಾಸಾಚರಣೆ ನಾಲ್ಕು ತಿಂಗಳು ದಿನಕ್ಕೊಂದು ಊಟ. ಮತ್ತೊಂದು ಬಾರಿ 14 ದಿನಗಳ ಉಪವಾಸ. ಯುರೋಪಿಯನ್ ಪೋಷಾಕಿನ ತ್ಯಾಗ. ಹಾಲು ಬಿಟ್ಟು ಷುಗರ ಮತ್ತು ಕೇವಲ ಹಸಿ ಶಾಗೂ ಒಣ ಹಣ್ಣುಗಳ ಆಹಾರ ಪದ್ಧತಿಯ ಅಂಗೀಕಾರ. 'ಎಥಿಕಲ್ ರಿಲಿಜಿಯನ್' ಗ್ರಂಥ ರಚನೆ.

1913—3 ವೌಂಡಿನ ಪೋಲ್—ಟೀಕ್ಸನ್ನು ರದ್ದುಪಡಿಸುವ ಆಶ್ವಾಸನೆಯನ್ನು ದ. ಆಫ್ರಿಕದ ಸರಕಾರ ಮುರಿದುಕೊಂಡುದರಿಂದ ಇದೀಗ ಪ್ರಥಮ ಬಾರಿ 'ಸತ್ಯಾಗ್ರಹ' ಸಮರ ಪ್ರಾರಂಭ 2037 ಗಂಡಸರು, 127 ಹೆಂಗಸರು ಮತ್ತು 57 ಮಕ್ಕಳ ಸತ್ಯಾಗ್ರಹೀ ದಳವನ್ನು ಕೂಡಿಕೊಂಡು ಟ್ರಾನ್ಸ್‌ವಾಲಿಗೆ ಸತ್ಯಾಗ್ರಹ ದೌಡು. ದಸ್ತಗಿರಿಯಾಗಿ ಜಾಮೀನಿನಲ್ಲಿ ಬಿಡುಗಡೆ. ಮತ್ತೊಂದು ಆರೋಪದಿಂದ ಪುನಃ ದಸ್ತಗಿರಿ ಮತ್ತು ಪುನಃ ಜಾಮೀನಿನಿಂದ ಬಿಡುಗಡೆ. ಮತ್ತೊಮ್ಮೆ ಕೈದಾಗಿ 9 ತಿಂಗಳ ಕಠಿಣ ಸಜೆ. ಅದಾದ ನಾಲ್ಕೇ ದಿನಗಳ ನಂತರ ಮತ್ತೊಂದು ಆರೋಪದಿಂದ ಪುನಃ 4 ತಿಂಗಳ ಸಜೆ. ಒಂದು ತಿಂಗಳ ನಂತರ ನಿಶ್ಯರ್ತ ಬಿಡುಗಡೆ.

1914—ಜ. ಸ್ಮಟ್ಸರೊಡನೆ ಒಪ್ಪಂದವಾಗಿ ಸತ್ಯಾಗ್ರಹದ ಅಮಾನತು. ಇಂಗ್ಲಾಂಡು ಪ್ರಯಾಣ. ಪ್ರಥಮ ಜಾಗತಿಕ ಯುದ್ಧಾರಂಭವಾದೊಡನೆ ಲಂಡನಿನಲ್ಲೇ ಹಿಂದೀ ಎಂಬ್ಯುಲೆನ್ಸ್ ದಳದ ಸ್ಥಾಪನೆ.

1915—16—ಭಾರತಕ್ಕಾಗಮನ. ಕೈಸರೀ ಹಿಂದ್ ಭಂಗಾರದ ಮೆಡಲಿನ ಉಡುಗೊರೆ. ಅಹಮ್ಮದಾಬಾದಿನಲ್ಲಿ ಕೊನೆಗೆ ಸಬರ್ಮತಿ ಆಶ್ರಮವೆಂದು ಹೆಸರಾದ ಸತ್ಯಾಗ್ರಹ ಆಶ್ರಮದ ಸ್ಥಾಪನೆ. ಪ್ಲೇಗಿನ ಮೊರನೇ ಕ್ಲಾಸಿನಲ್ಲೇ ಹಿಂದು ಸ್ಥಾನ ಮತ್ತು ಬರ್ಮಾ ಸಂಚಾರ. ಹಿಂದೀಯರನ್ನು ಕರಾರುವಾಕಾಗಿ ಹೊರಗೆ ರವಾನಿಸಿದ ಕಾಯಿದೇ ವಿರುದ್ಧವಾಗಿ ಚಳವಳನೆಬ್ಬಿಸಿ ವಿಜಯ. ಚರಕ ಪ್ರಚಾರದ ಗಾಢ ಯೋಚನೆಗಾರಂಭ. ಬಿಹಾರಿನ ಚಂಪಾರಣ್ಯದ ತೋಟಗಳ ಕೆಲಸಗಾರರ ಸ್ಥಿತಿ ಪರ್ಯಾಲೋಚನೆಗಾಗಿ ಪ್ರಯಾಣ. ಅಲ್ಲಿ ಬಂಧನ ಮತ್ತು ಬಿಡುಗಡೆ. ರೈತರ ಸಂಕಷ್ಟಗಳ ಕುರಿತು ವಿಚಾರಿಸಲು ಬಿಹಾರ್ ಸರಕಾರದಿಂದ ನೇಮಕಗೊಂಡ ಸಮಿತಿಯ ಸದಸ್ಯನಾಗಿ ನೇಮಕ.

1918—ಅಹಮ್ಮದಾಬಾದ್ ಗಿರಣಿ ಕೆಲಸಗಾರರ ಹಿತ ಸಾಧನೆಗಾಗಿ ಯೋಗ್ಯ ತೀರ್ಮಾನವಾಗುವ ವರೆಗೆ ಉಪವಾಸವೆಂಬ ದೀಕ್ಷಾಧಾರಣೆ. ಬೆಳೆಯ ಅಭಾವಕ್ಕಾಗಿ ತೀರ್ವೆ ವಿನಾಯಿತಿ ಪಡಿಸಬೇಕೆಂದು ಕೈರಾ ಜಿಲ್ಲೆಯಲ್ಲಿ ಸತ್ಯಾಗ್ರಹ ಚಾಲನೆ ವೈಸರಾಯರ ಯುದ್ಧ ಸಮ್ಮೇಲನಕ್ಕೆ ಹಾಜರಾಗಿ ಅಲ್ಲಿ ಹಿಂದುಸ್ಥಾನಿಯಲ್ಲಿ ಭಾಷಣ. ಸೇನೆಗೆ ಜನ ಸೇರಿಸಲು ಕೈರಾ ಜಿಲ್ಲೆಯಲ್ಲಿ ಸಂಚಾರ.

1919—ರೌಲಟ್ಟ್ ಮಸೂದೆಯನ್ನು ಹಿಂದೆಗೆಯಿಸುವ ಸತ್ಯಾಗ್ರಹ ಪ್ರತಿಜ್ಞೆಗೆ ಸಹಿ. ಸತ್ಯಾಗ್ರಹ ಚಳವಳದ ಉದ್ಘಾಟನೆ. ದೇಶವ್ಯಾಪೀ ಹರತಾಳ. ಪಂಜಾಬ್ ಪ್ರವೇಶಿಸಬಾರದೆಂಬ ಆಜ್ಞೋಲ್ಲಂಘನೆ ಮಾಡಿ ದಿಲ್ಲಿಯ ಹಾದಿಯಲ್ಲಿ ಬಂಧಿಸಲ್ಪಟ್ಟು ಪೋಲೀಸು ಸಹರೆಯಲ್ಲಿ ಮರಳಿ ಬೊಂಬಾಯಿಗೆ. ಹಲವು ಪಟ್ಟಣಗಳಲ್ಲಿ ಹಿಂಸಾತ್ಮಕಗೊಂದಲ. ಅಮೃತಸರದಲ್ಲಿ ಜಾಲಿಯಾನ್ ವಾಲಾಬಾಗ್ ಅತ್ಯಾಚಾರ—ಸಶಸ್ತ್ರ ಪೋಲಿಸರ ಗುಂಡಿಗೆ 400 ಮಂದಿ ನಿರಪರಾಧಿಗಳ ಬಲಿ ಮೂರು ದಿನಗಳ ಉಪವಾಸವ್ರತ; ಸತ್ಯಾಗ್ರಹದ ಸಂಬಂಧದ ಹಿಮಾಲಯದಂತಹ ತನ್ನ ತಪ್ಪುಗಳನ್ನೊಪ್ಪಿ ಜಾಹೀರುನಾಮೆ. ಪಂಜಾಬಿನಲ್ಲಿ ಮಾರ್ಶಲ್ ಲಾ ಸತ್ಯಾಗ್ರಹದ ಅಮಾನತು. ಕೊನೆಗೆ ವಾರ ಪತ್ರಿಕೆಯೊಂದ 'ನವ ಜೀವನ್' ಎಂಬ ಗುಜರಾತಿ ಮಾಸಿಕದ ಸಂಪಾದಕತ್ವ, 'ಯಂಗ್ ಇಂಡಿಯಾ' ಎಂಬ ಇಂಗ್ಲಿಷ್ ವಾರಪತ್ರಿಕೆಯ ಸಂಪಾದಕತ್ವ. ಪಂಜಾಬ್ ಅತ್ಯಾಚಾರದ ಅನಧಿಕಾರೀ ವಿಚಾರಣಾ ಮಂಡಲಿಯೊಡನೆ ಸೇರಿ ಶೋಧನೆ. ದಿಲ್ಲಿಯ ಅ. ಭಾ. ಖಿಲಾಫತ್ ಸಮ್ಮೇಲನದ ಅಧ್ಯಕ್ಷತೆ. ಅಮೃತಸರ ಕಾಂಗ್ರೆಸಿನಲ್ಲಿ ಮೋಂಟೆಗ್ಯೂ—ಚೇಮ್ಸ್‌ಫರ್ಡ್ ಸುಧಾರಣೆಯನ್ನಂಗೀಕರಿಸಬೇಕೆಂದು ವಾದ.

1920—ಖಿಲಾಫತಿನ ಸಂಬಂಧವಾಗಿ ವೈಸರಾಯರೊಡನೆ ವಾದಿಸಲು ಶಿಷ್ಟ ಮಂಡಲಿಯೊಂದರ ನಾಯಕನಾಗಿ ಪಯಣ. ತನ್ನ ಕೈಸರೀ—ಹಿಂದ್ ಪದಕ, ಝುಲೂ ಯುದ್ಧ ಪದಕ ಮತ್ತು ಬೋವರ್ ಯುದ್ಧ ಪದಕಗಳನ್ನು ತ್ಯಾಗಮಾಡಿ ವೈಸರಾಯರಿಗೆ ನಿಷೇಧ ಪತ್ರ. ಕಾಂಗ್ರೆ

(೧೧ನೇ ಪುಟ ನೋಡಿರಿ.)

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಪಾರ್ಟಿ ನುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಕಮ್ಯೂನಿಸ್ಟರು ಕಾಂಗ್ರೆಸಿನಿಂದ ಕಾಲುಕಿತ್ತರು!

ಅ. ಭಾ. ಕಾಂಗ್ರೆಸ್ ಸಮಿತಿ ಸದಸ್ಯರ ವಿನಹ ಉಳಿದ ಎಲ್ಲ ಕಮ್ಯೂನಿಸ್ಟರೂ ಕಾಂಗ್ರೆಸಿಗೆ ರಾಜೀನಾಮೆ ಕೊಟ್ಟು ಹೊರಡಬೇಕೆಂದು ಅ. ಭಾ. ಕಮ್ಯೂನಿಸ್ಟ್ ಮೂಲ ಕೇಂದ್ರದಿಂದ ಸೂಚನೆ ಹೋಗಿದೆ. ಈ ಸಂಬಂಧವಾಗಿ ಅ. ಭಾ. ಕಮ್ಯೂನಿಸ್ಟ್ ಪಕ್ಷದ ಮುಖ್ಯ ಕಾರ್ಯದರ್ಶಿ ಶ್ರೀ. ಪಿ. ಸಿ. ಜೋಶಿಯವರಿತ್ತ ಸ್ಫೂರ್ತಿಯ ಹೇಳಿಕೆಯನ್ನು ಇಲ್ಲಿಕೊಡಲಾಗಿದೆ:—

ಆಶೆ ಬರಿದಾಯಿತು

"ನಮ್ಮ ಅತ್ಯುಚ್ಚ ದೇಶಭಿಮಾನೀ ಸಂಸ್ಥೆಯಾದ ಕಾಂಗ್ರೆಸಿನ ನಾಯಕರು ಅಖಿಲ ಜಗತ್ತಿನ ಪ್ರಗತಿ ಶೀಲಶಕ್ತಿಗಳ ಸಹಪಂಗ್ತಿ ಹಿಡಿದು ಭಾರತೀಯ ಸ್ವಾತಂತ್ರ್ಯಕ್ಕಾಗಿ ಇಡೀ ಲಾಸ್ಯವನ್ನು ಒಂದು ಪ್ರಜಾಸತ್ತಾತ್ಮಕ ಪಥದಲ್ಲಿ ನಡೆಸುವರೆಂದು ನಾವು–ಭಾರತೀಯ ಕಮ್ಯೂನಿಸ್ಟರು–ವಿಶೇಷ ಆಶೆಕಟ್ಟಿಕೊಂಡಿದ್ದೆವು. ಕಳದ ಮೂರು ವರುಷಗಳಲ್ಲಿ ಅವರ ಬಿಡುಗಡೆಯನ್ನೇ ನಮ್ಮ ಚಳವಳದ ಕೇಂದ್ರ ಗುರಿಯಾಗಿ ಮಾಡಿಕೊಂಡಿದ್ದೆವು ಅದರೆ ಬಿಡುಗಡೆಯ ನಂತರ ಕಾಂಗ್ರೆಸ್ ನಾಯಕತ್ವವು ಪರಿಸ್ಥಿತಿಯ ಗಂಭೀರ ಯೋಜನೆಗೆ ಹೋಗದ, ವರ್ಗಹೆಮ್ಮೆಯನ್ನು ಪ್ರದರ್ಶಿಸಹತ್ತಿದ. ಭಾರತ ಸ್ವಾತಂತ್ರ್ಯ ಸಾಧನೆಯ ಬಂದು ಯೋಜನೆ ತಯಾರಿಸಿ, ಭಾರತೀಯ ಪ್ರಜಾಪ್ರಭುತ್ವಕ್ಕೊಂದು ರೂಪು ಕೊಡುವ ಬದಲಿಗೆ, ಕಳದ ಏ ಐ. ಸಿ. ಸಿ. ಸಭೆಯು ಅಸಂಸ್ಥೆಯನ್ನು ಸ್ವಾತಂತ್ರ್ಯ ಸಾಧಕ ಶಕ್ತಿಗಳು ಛಿನ್ನಭಿನ್ನವಾಗಿ ಸಿಡಿದು ಹೋಗುವಂತಹ ದುಸ್ಥಿತಿ ಹಿಡಿಸಿದೆ.

ಲೀಗಿನ ಮೇಲೆ ದ್ವೇಷ

ಮುಸ್ಲಿಂ ಲೀಗಿನ ವಿರುದ್ಧ ಹೋರಾಡುವ ಅವರ ನಿರ್ಧಾರಪೂರ್ವಕ ಘೋಷಣೆಯು ಅಂತರ್ಯುದ್ಧದ ದುಶ್ಯಕ್ತಿಗಳನ್ನು ರಂಗಕ್ಕೆಳೆದಿದೆ ಹೊರತು ಭಾರತದ ಭಾವೀ ಒಕ್ಕಟ್ಟನ್ನು ಸಾಧಿಸುವಂತಿಲ್ಲ. ಕಾಂಗ್ರೆಸಿನ ಶಕ್ತಿಗಾಗಿ ಹೆಗ್ಗಳಿಕೆ ಪಡುವದು–ಲೀಗಿನ ಶಕ್ತಿಯನ್ನು ಅಲ್ಲಗಳೆಯುವುದೆಂದರೆ ಕೇವಲ ಕುರುಡುತನ; ಬ್ರಿಟಿಷರಿಂದ ಸ್ವಯಂ ನಿರ್ಣಯಾಧಿಕಾರ ಯಾಚಿಸುವದು–ಅದೇ ಅಧಿಕಾರವನ್ನು ನಮ್ಮ ಸ್ವದೇಶ ಬಂಧುಗಳ ಒಂದು ಭಾಗಕ್ಕೆ ಕೊಡಲು ನಿರಾಕರಿಸುವದೆಂದರೆ ಶುದ್ಧ ಅನ್ಯಾಯ. ನಮ್ಮ ಗೃಹ ಕಾರ್ಯಗಳಲ್ಲೂ ಬ್ರಿಟಿಷರ ಮಧ್ಯಸ್ಥಿಕೆಯನ್ನೇ ಸ್ವಾಗತಿಸಿಕೊಳ್ಳುವದು ಉತ್ತಮ ದೇಶಭಕ್ತಿಯ ಲಕ್ಷಣವೆಂದು ನಾವೆಣಿಸುವದಿಲ್ಲ. ಯಾಕಂದರೆ ಅದರಿಂದ ಭಾರತ ಸ್ವಾತಂತ್ರ್ಯ ದೂರ ಯದು; ಬದಲಿಗೆ ಬ್ರಿಟಿಷ್ ನಿರ್ಮಿತ ರಾಜ್ಯಭಾರ ಪದ್ಧತಿಯೊಂದು ಹೇರಲ್ಪಡುವದು.

ನಮ್ಮ ಮೇಲೆ ಗದೆ

ಕಾಂಗ್ರೆಸ್ ನಾಯಕತ್ವವೀಗ, ಪ್ರದೇಶ ಮತ್ತು ಪರದೇಶಗಳಲ್ಲಿ ಸಾಮ್ರಾಜ್ಯಶಾಹೀ ದೊಣ್ಣೆನಾಯಕರಿಂದಾಗಿ ತನ್ನನ್ನು ಸಮರ್ಥಿಸಿದ ನಮ್ಮ ಎಳೇಪಕ್ಷದ ಮೇಲೂ ತನ್ನ ತೋಳನ್ನೆತ್ತಿದೆ. ಬೈಲಿನಲ್ಲಿರುವಾಗ ಅವರು ಅಗೋಸ್ತು 'ಹೋರಾಟ'ವನ್ನು ಅಲ್ಲಗಳೆದರು; ಬಿಡುಗಡೆ ಹೊಂದಿದ ಮೇಲೆ ಅದರಲ್ಲಿ ಸೇರದುದಕ್ಕಾಗಿ ನಮ್ಮನ್ನು ಧಿಕ್ಕರಿಸಹತ್ತಿದರು. ಅವರು ಕಳದ ಮೂರು ವರುಷಗಳ ಸ್ಥಿತಿಗತಿಗಳ ಯಥಾರ್ಥ ತಿಳುವಳಿಕೆ ಸಂಪಾದಿಸಿಕೊಳ್ಳಲೊಪ್ಪಲಿಲ್ಲ. ಆ ಮೂಲಕ ರಾಷ್ಟ್ರೀಯ ಸರಕಾರದತ್ತ ಸಾಗದೆ ರಾಷ್ಟ್ರೀಯ ಅನಾಹುತದ ಕಡೆಗೆ ಕೊಂಡೊಯ್ದು, ತಮ್ಮದೇ ಆದ 1942ನೇ ಆಗೋಸ್ತಿನ ಸ್ವವಿಶೋಧೀ ನಾಯಕತ್ವವನ್ನಿರಿಸಿ ನಿಲ್ಲಲುತಯಾರಾಗಲಿಲ್ಲ. ಅವರು ತಮ್ಮ ಅಪರಾಧಗಳಿಗಾಗಿ ನಮ್ಮ ಪಕ್ಷವನ್ನು ಬಲಿ ಕೊಡಬೇಕೆಂದು ಬಯಸುತ್ತಾರೆ. ನಮ್ಮ ಮೇಲಿನ ಈ ಅಂಧ ಹಾಗೂ ದ್ವೇಷಾಸೂಯೆಯ ಘೋರಣೆಯು ಹೊರ ದೇಶಗಳಭಾರತೀಯ ಸ್ನೇಹಿತರಲ್ಲಿ ಜಿಗುಪ್ಸೆಯನ್ನು ನಿರ್ಮಿಸಿದೆ. ಬರೀರಂಗವಾಗಿ ಫೇಸಿಸ್ಟ್ ವಾದಿಯಾಗಿರುವ ಪ್ರತಿಕ್ರಿಯಾತ್ಮಕ ಹಾಗೂ ಸರ್ವಾಧಿಕಾರೀ ಪುನೋರ್ವೃತ್ತಿಯ ದುಶ್ಯಕ್ತಿಗಳು ಕೊಂಗ್ರೆಸಿನೊಳಗೆ ತಲೆಯೆತ್ತಲಾರಂಭಿಸಿವೆ. ಕಮ್ಯೂನಿಸಮ್ ವಿರೋಧಿ ಸರದಿ ಹಾಕಿಕೊಂಡು, ಕಾಂಗ್ರೆಸ್ ಯಂತ್ರವನ್ನು ತಮ್ಮ ಹಿತೋಪಯೋಗಕ್ಕೆ ತಂದುಕೊಳ್ಳಲು ಇವರೆಲ್ಲಾ ಸ್ವಾರ್ಥೀ ಹೊರಾಟ ನಡಿಸುತಿದ್ದಾರೆ

ನಮಗೆ ಅಡ್ಡಗಾಲು.

ಚುನಾವಣಾ ಸ್ಥಾನಗಳ ಹಕ್ಕನ್ನು ನಮ್ಮಿಂದ ಅಪಹರಿಸಿ, ಸಾಮಾನ್ಯ ಸದಸ್ಯರಾಗುವ ಅವಕಾಶವನ್ನಷ್ಟೇ ಒದಗಿಸಿ ನಮ್ಮ ಪಕ್ಷದ ಸದ್ದಡಗಿಸುವ ಪ್ರಯತ್ನ ನಡೆದಿದೆ. ಬ್ರಿಟಿಷ್ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಚುನಾಯಿತ ಸ್ಥಾನಗಳಿಗೆ ಕಮ್ಯೂನಿಸ್ಟರು ಬಾರದಂತೆ ತಡೆಗಟ್ಟುವ 'ಬ್ಲೋಕ್ ಸರ್ಕಿಲರ್' ಹೊರಡಿಸಿದ ಅ ನಾಗರಿಕ ಬ್ರಿಟಿಷ್ ಕೂಲಿಗಾರ ಪ್ರಮುಖರ ಅನುಕರಣೆಯಿದು. ಈ ರೀತಿ ರಾಷ್ಟ್ರೀಯ ಚಳವಳದ ಒಂದು ಭಾಗಕ್ಕೆನೇ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರಾಕರಿಸಲಾಗಿದೆ. ದೊಡ್ಡದೊಡ್ಡ ಲಾಭಕೋರರ ಜಾಹೀರು ವಿಜಂಟರಾಗಿದ್ದು, ಅಥವಾ ಸ್ಥಾನವನ್ನ ಕಳಕೊಂಡ ಬ್ರಿತ ಯಿನ ಕೆಲಸಗಾರರ ನಾಯಕರಾಗಿದ್ದು, ಈಗ ಕಾಂಗ್ರೆಸಿನ ಸಹಾಯದಿಂದ ಪುನ: ಮುಂಭಾಗಕ್ಕೆ ಬರಬೇಕೆಂದಿಚ್ಛಿಸುವವರ ಮೂಲಕ, ನಮಗೆ ವಿರುದ್ಧವಾಗಿ ಟ್ರೇಡ್ ಯೂನಿಯನ್, ಕಿಸಾನ್ ಸಭಾ ಮೊದಲಾದ ಪ್ರತಿ ಸಂಘಗಳನ್ನು ನಿರ್ಮಿಸಲು ಕಾಂಗ್ರೆಸ್ ನಾಯಕರು ಪ್ರತ್ಯಕ್ಷವಾಗಿ ಅಥವಾ ಆಪ್ರತ್ಯಕ್ಷವಾಗಿ ಬೆಂಬಲವೀಯುತಿದ್ದಾರೆ. ಕಾಂಗ್ರೆಸ್ ಹ್ಯಾಕಮಾಂಡಿನ ಈ ಲೀಗ್ ವಿರುದ್ಧ, ಕಮ್ಯೂನಿಸ್ಟ್ ವಿರುದ್ಧ ಘೋರಣೆಯು ಅಂತರ್ಯುದ್ಧ ಹೇತುಗಳಾದ ದುಶ್ಯಕ್ತಿಗಳಿಗೆ ದೊರಿತ ಪ್ರತ್ಯಕ್ಷ ಬೆಂಬಲವೆಂದು ನಾವು–ಭಾರತೀಯ ಕಮ್ಯೂನಿಸ್ಟರು ಭಾವಿಸುತ್ತೇವೆ. ಇಂತಹ ಸ್ಥಿತಿಯ ಮುಂದುವರಿಸಲು ನಾವು ಸಿದ್ಧರಿಲ್ಲ. ಸ್ವಾತಂತ್ರ್ಯ ಸಾಧಕ ಶಕ್ತಿಗಳ ಅನಾಹುತವನ್ನಲ್ಲದೆ ಸ್ವಾತಂತ್ರ್ಯವನ್ನೆಂದಿಗೂ ಸಾಧಿಸುವಂತಿಲ್ಲ. ಇಂತಹ ಘೋರಣೆಯಿಂದ ತೀವ್ರವಾಗಿ ದೂರ ಹೋಗುವದು ನಮ್ಮ ಪ್ರಾಮುಖ್ಯ ಕರ್ತವ್ಯವೆಂದು ನಾವು ಭಾವಿಸುತ್ತೇವೆ.

ಕಾಂಗ್ರೆಸಿಗೆ ರಾಜೀನಾಮೆ

ಆದ್ದರಿಂದ ಎ. ಐ. ಸಿ. ಸಿ. ಸದಸ್ಯರ ವಿನಹ ಉಳಿದ ನಮ್ಮ ಪಕ್ಷದ ಸದಸ್ಯರೆಲ್ಲಾ ಕಾಂಗ್ರೆಸಿಗೆ ರಾಜೀನಾಮೆ ಕೊಟ್ಟು ಹೊರಡಬೇಕೆಂದು ಸೂಚಿಸ ಕ್ತೇವೆ ತಪ್ಪು ನೇರಿನಲಿ ಆರೋಪಗಳನ್ನು ಉತ್ಪಾದಿಸಲಿಕ್ಕೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ತೀರ್ಮಾನವನ್ನು ಇದಿರಿಸಲಿಕ್ಕೂ ಎ. ಐ. ಸಿ. ಸಿ. ಸದಸ್ಯರು ಮಾತ್ರ ಅಲ್ಲೇ ಇರಬೇಕಾಗಿದೆ. ಯಾಕಂದರೆ ಆ ತೀರ್ಮಾನವು ಕೇವಲ ಗತ ವಿಷಯಗಳಿಗೆ ಸಂಬಂಧಿಸಿರದೆ, ನಮ್ಮೆಲ್ಲರದಾದ ಮುಂದಿನ ರಾಷ್ಟ್ರೀಯ ಚಳವಳಕ್ಕೂ ಲಗತ್ತಾಗ್ಯುವಂತಹದಿದೆ ಇನ್ನೇರಡೇ ವಾರಗಳೊಳಗೆ ಎಲ್ಲಾ ದಾಖಲೆಗಳೂ ಸಾರ್ವಜನಿಕರ ಇದಿರಿಗೆ ಬರಲಿವೆ. ಸದ್ಯಸ್ಥಿತಿಯಲ್ಲಿ ನಮ್ಮೀ ನಿರ್ಧಾರವು ಕಾಂಗ್ರೆಸ್ ಮತ್ತು ನಮ್ಮ ಪಕ್ಷ, ಇನ್ನೇರಡಕ್ಕೂ ಯೋಗ್ಯವಾದ ಹಾದಿಯೆಂಬುದನ್ನು ನ್ಯಾಯುದಾದಿ ಕಾಂಗ್ರೆಸಿಗರೆಲ್ಲಾ ಮನಗಾಣುವರೆಂದು ನಮ್ಮ ನಂಬಿಕೆ. ಆಗ ನಮ್ಮ ಘೋರಣೆಯನ್ನು ಕಾಂಗ್ರೆಸಿಗರು ಮುಂದಿಡಲು ನಾವು ಸಮರ್ಥರಾಗುತ್ತೇವೆ. ಕಾಂಗ್ರೆಸಿಗೂ ಇನ್ನಷ್ಟು ಸುಗಮವಾಗಿ ತನ್ನ ಹೆಜ್ಜೆಯಾಡಲಾಗುತ್ತದೆ. ಸರ್ವರ ಒಗ್ಗಟ್ಟಿನ ರಾಷ್ಟ್ರೀಯ ಮುಖವೊಂದರ ನಿರ್ಮಾಪಕನಾಗಿ ಕಾಂಗ್ರೆಸು ಬೆಳೆಯುವದೆಂಬ ಪ್ರಗತಿಶೀಲರೆಲ್ಲರ ಸುಖ ಸ್ವಪ್ನವನ್ನು ಕಾಂಗ್ರೆಸು ನಾಯಕತ್ವವು ತನ್ನೀ ಘೋರಣೆಯ ಮೂಲಕ ಭಂಗಿಸಿಬಿಟ್ಟಿತು. ನಮ್ಮೆಲ್ಲಾ ಶಕ್ತಿಗಳನ್ನು ಕೇಂದ್ರೀಕರಿಸಿ ರಾಷ್ಟ್ರೀಯ ಸಂಯುಕ್ತ ಮುಂಭಾಗವೊಂದನ್ನು ರೆಚಿಸಿಕೊಳ್ಳುವದೊಂದೇ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆರುವ ಹಾದಿಯೆಂಬುದು ನಮಗೆ ಮಂದಟ್ಟಾಗಿದೆ. ಹಿಂದೀ ಸ್ವಾತಂತ್ರ್ಯ ಸಾಧನೆಗಾಗಿ ಒಂದು ಕಾಂಗ್ರೆಸ್–ಲೀಗ್–ಕಮ್ಯೂನಿಸ್ಟ್ ಜತೆ ರಂಗವನ್ನು ನಿರ್ಮಿಸಲು ನಾವು ಅವಶ್ರಾಂತವಾಗಿ ದುಡಿಯಲಿದ್ದೇವೆ".

ಇದರ ಹಿನ್ನೆಲೆ

ದೀರ್ಘಾವಧಿಯ ಘರ್ಷಣೆಯೊಂದು ಈ ರೀತಿ ತೀರ್ಮಾನಗೊಂಡಿತು. ಅ. ಭಾ. ಕಾಂ. ಸಮಿತಿ ಸದಸ್ಯರಾಗಿರುವ ಕಮ್ಯೂನಿಸ್ಟರೂ, ಅಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳುವ ಕೆಲಸ ಮುಗಿದೊಡನೆ, ಅಥವಾ ಅವಕಾಶ ತಪ್ಪಿದೊಡನೆ ರಾಜೀನಾಮೆ ಕೊಟ್ಟು ಹೊರಡಬಹುದು. ಆದ್ದರಿಂದ ಕಮ್ಯೂನಿಸ್ಟರು ಕಾಂಗ್ರೆಸಿನಿಂದ ಪೂರ್ತಿ ಹೊರಬಿದ್ದಂತೆಯೇ ಎ.ಐ. ಆಗೋಸ್ತು ನಿರ್ಧಾರಕ್ಕೆ ಕಮ್ಯೂನಿಸ್ಟರು ವಿರುದ್ಧ ಹೋಗಿದ್ದಾರೆ, ಇವರು ಕಾಂಗ್ರೆಸ್ ಘೋರಣೆ ಮತ್ತು ಭಾವನೆಗೆ ಬದ್ಧ ವಿರೋಧಿಗಳೆಂಬ ದೂರು ಗಾಂಧೀಜೀ ಬಿಡುಗಡೆಗೊಂಡಂದಿನಿಂದ ದೇಶದೆಲ್ಲೂ ಕಡೆಗಳಿಂದಲೂ ಅವರಿಗೆ ಬಂದಿದ್ದುವು ಈ ಕುರಿತು

(ಈನೇ ಪುಟ ನೋಡಿರಿ.)

Announcing!

The Directors of the Syndicate have great pleasure in announcing the opening of Branches of the Bank shortly at

BEZWADA & GUNTUR.

Every type of Banking Business will be transacted.

Branches & Agencies all over India.

The Canara Industrial & Banking Syndicate Ltd.,

ESTD: 1925

Central Office. HOMJI STREET. FORT. BOMBAY.

ಸುಭಾಸರು ಜಾಪಾನರನ್ನು ವಂಚಿಸಿದ್ದರೆ?

ಕೆಲವು ಮನನಾರ್ಹ ಸುದ್ದಿಗಳು

'ಸುಭಾಸ್ ಬೋಸರು ಸತ್ತದ್ದು ಖಂಡಿತ, ಸೈಗಾನಿನ ಆಸ್ಪತ್ರೆಯೊಂದರಲ್ಲಿ ಅವರು ಶಾಂತವಾಗಿ ಕೊನೆಯುಸಿರನ್ನೆಳೆದರು. ವಿಮಾನಾವಘಡಗೊಂಡ ನಂತರ ಅವರಿಗೆ ಸ್ಮೃತಿ ಬಂದುದೇ ಇಲ್ಲ'–ಎಂದು ಪ್ರಧಾನಮಂತ್ರಿ ಯು. ಪಿ. ಕೋಯಲ್ ಸರ್ವಿಸಿನಲ್ಲಿದ್ದು ಆ ಮೇಲೆ ಸಿಂಗಾಪುರದಲ್ಲಿ ಜಾಪಾನೀ ಕೈದಿಯಾಗಿದ್ದ ಈಗತಾನೇ ಹಿಂದುಸ್ಥಾನಕ್ಕೆ ಮರಳಿರುವ ನಾರಾಯಣ ಘೋಸರಂದಿದ್ದಾರೆ. ಸೈಗಾನಿನ ಬ್ರಿಟಿಷ್ ಆಸ್ಪತ್ರೆಯ ಸರ್ಜನರಾದ ಕೆಪ್ಟನ್ ಮುಖರ್ಜಿಯವರೇ ಈ ವಾರ್ತೆಯನ್ನು ಘೋಸರಿಗೆ ತಿಳಿಸಿದ್ದರು ಹೋಂಗ್ ಕೋಂಗಿನಲ್ಲಿದ್ದು ಈಗ ತಾನೇ ಕೊಲೊಂಬೋ ಮಾರ್ಗವಾಗಿ ಬಂದಿರುವ ಹಿಂದೀ ವ್ಯಾಪಾರಿಗಳು ಸುಭಾಸರ ಕುರಿತು ನಂಬಲರ್ಹವಾದ ಗುಟ್ಟುಗಳನ್ನು ಬಹಿರಂಗಪಡಿಸಿದ್ದಾರೆ.

ಭಾರತದ ಆಕ್ರಮಣಕ್ಕೆ ತಡೆ.

ಬರ್ಮಾ ಪತನವಾಗುವಾಗ ಮಿತ್ರರಾಷ್ಟ್ರಗಳು ನಿಜಕ್ಕೂ ವಿಷಮಾವಸ್ಥೆಯಲ್ಲಿದ್ದುವು. ಆಗ ಜಾಪಾನರೇಕೆ ಹಿಂದುಸ್ಥಾನದೊಳಗೆ ನುಗ್ಗಲಿಲ್ಲವೆಂಬುದು ಇಂದಿಗೂ ಒಂದು ಸೋಜಿಗವಾಗಿಯೇ ಉಳಿದಿದೆ. ಜಾಪಾನರಿಂದ ಆ ಪ್ರಮಾದವನ್ನು ಮಾಡಿಸಿದವರು ನಿಜಕ್ಕೂ ಸುಭಾಸರೇ. ಹಿಂದುಸ್ಥಾನ ಮತ್ತು ಸಿಲೋನಿನ ಮೇಲೆ ದೊಡ್ಡ ಪರಿಮಾಣದಲ್ಲಿ ಧಾಳಿಯಿಡದಂತೆ ಸುಭಾಸರು ಹಲವು ವಿಧದಿಂದ ಜಾಪಾನರನ್ನು ಆಡ್ಡಗಟ್ಟಿದ್ದರು. ಬಾರತಬಲ್ಲ, ಅದರಲ್ಲೂ ತನ್ನ ಸ್ವೀತಿಯ ಬಂಗಾಳದಲ್ಲಿ ರಕ್ತಸಾತವಾಗುವದನ್ನು–ತನ್ನ ದೇಶೀಯ ಮಕ್ಕಳು ಮಹಿಳೆಯರ ಮೇಲೆ, ಅವರ ಮನೆಮರಗಳಿಗೆ, ಬೋಂಬು ಬೀಳುವ ದಶ್ನ—ಸಹಿಸಲು ಸುಭಾಸರಿಂದ ಸಾಧ್ಯವಿರಲಿಲ್ಲ. ಮಾತ್ರವಲ್ಲ, ಸುಭಾಸರ ಸ್ವತಂತ್ರ ಹಿಂದೀ ಸೇನೆಯುಂದಾಗಿ. ಬರ್ಮಾ ಮತ್ತು ಇತರ ಜಾಪಾನಾಕ್ರಮಿತ ಸ್ಥಳಗಳಲ್ಲಿದ್ದ ಹಿಂದೀಯರಿಗಾಗಿದ್ದ ಉಪಕಾರ ಅಗಣಿತ. ಸುಭಾಶ್ಚಂದ್ರರು ಜಾಪಾನರನ್ನು ಸೇರಿ ಅವರ ಆಕ್ರಮಣದಿಂದ ಹಿಂದುಸ್ಥಾನವನ್ನು ತಪ್ಪಿಸಿದರೇ ಹೊರತು, ಇಂದು ಸರ್ವರ ನಂಬಿಕೆಯಿರುವಂತೆ ಜಾಪಾನರ ಸಹಾಯ ದಿಂದ ಹಿಂದುಸ್ಥಾನದ ವೈರಿಗಳು ಬರಲು ಆ ಕಡೆಗೆ ಸೇರಿಂರಿಲ್ಲ.

ಬೋಸರ ಧ್ಯೇಯವೇನಿತ್ತು?

ಹೋಂಗ್‌ಕೋಂಗ್ ನಿವಾಸಿಗಳಾಗಿದ್ದ ಹಿಂದೀ ಸಾಹುಕಾರರು ಹೇಳುವಂತೆ, ಜಾಪಾನರ ಸ್ವಾರ್ಥ ಬುದ್ಧಿ, ಕ್ರೂರತ್ವ, ಕಪಟಾಚಾರಣೆಗಳ ಕುರಿತು ಸುಭಾಸರು ಅತ್ಯಂತ ಜಾಗರೂಕರಾಗಿದ್ದರು. ಹಿಂದುಸ್ಥಾನದ ನೆಲದಲ್ಲಿ ಜಾಪಾನಿಯನ್ನು ಕಾಲೂರಲು ಬಿಡಬಾರದೆಂದು ಅವರು ಭೀಷ್ಮ ಶಪಥ ತೊಟ್ಟಿದ್ದರು. ಆದರೆ ಈ ಪರಿವರ್ತನಾಯು ಗದಲ್ಲೂ ಭಾರತಕ್ಕೆ ಸ್ವಾತಂತ್ರ್ಯ ದೊರೆಯದಿರುವದೊಂದೇ ಅವರಿಗೆ ಅಸಹ್ಯ ವೇದನೆ ಕೊಡುತಿತ್ತು. ಅದನ್ನು ಕೊಟ್ಟುಬಿಡುವಂತೆ ಬ್ರಿಟಿಷರನ್ನು ಬೆದರಿಸುವದಕ್ಕಾಗಿ ಅವರು ಹಿಂದುಸ್ಥಾನದ ಆಕ್ರಮಣಕ್ಕೆ ಹೊರಡುವ ನಟನೆ ಮಾತ್ರವಿರಬಹುದು. ಈ ಒತ್ತಡದಿಂದ ಆಗ ದುರ್ಬಲಸ್ಥಿತಿಯಲ್ಲಿದ್ದ ಬ್ರಿಟಿಷ್ ಸರಕಾರವು ಜೆದರಿಯೇ ಸ್ವಾತಂತ್ರ್ಯದಾನ ಮಾಡುವದು; ಅಥವಾ ಅದನ್ನವರ ಕೈಯಿಂದ ಕಿತ್ತುಕೊಳ್ಳುವ ಪರಿಸ್ಥಿತಿಯು ದೇಶದೊಳಗಡೆ ನಿರ್ಮಾಣಗೊಳ್ಳುವದೆಂದೇ ಸುಭಾಸ್ ಬಾಬುಗಳ ನಿರೀಕ್ಷೆಯಿತ್ತು. ಇಷ್ಟಾದೊಡನೆಯೇ ಬರ್ಮದಲ್ಲಿ ಜಾಪಾನರ ಮೇಲೆ ತಿರುಗಿಬಿದ್ದು ಅವರನ್ನೋಡಿಸಿಬಿಡಬೇಕೆಂದೂ ಮಾಜೀ ರಾಷ್ಟ್ರಪತಿ ಸಂಕಲ್ಪಿಸಿದ್ದರು. ಇದಕ್ಕನುಗುಣವಾಗಿ ದೇಶಪ್ರೇಮಿ ಬರ್ಮೀಯರ ಬೆಂಬಲವು ಸುಭಾಸಬೋಸರಿಗಿದ್ದಿತು. ಬಂಗಾಳಿಗಳ ಮೇಲಿದ್ದಷ್ಟೇ ಸ.ಭಾಸ್ ಪ್ರಭಾವ ಬರ್ಮೀಯರ ಮೇಲೂ ಇದ್ದಿತು' ತನ್ನೀ ಯೋಜನೆಯನ್ನು ಜ್ಯಾರಿಗೆ ತರಲನುಕೂಲವಾಗಬೇಕೆಂದೇ ಸುಭಾಸರು ರಂಗೂನಿನಲ್ಲಿ ಠೇರೆಹೂಡಿದ್ದರು; ಭಾರತದ ಮೇಲೇರಬರುವದೇ ಅವರ ಗುರಿಯಾಗಿದ್ದರೆ, ಅಂದ ಮಾನಾ ಅಥವಾ ಸಿಲೋನಿನಲ್ಲಿ ತನ್ನ ಮುಖ್ಯ ಕಾರ್ಯಾಲಯ ಸ್ಥಾಪಿಸುವದೇ ಅನುಕೂಲವಿತ್ತು ಹೊರತು ರಂಗೂನಿನಲ್ಲಲ್ಲ.

ಹಂಚಿಕೆ ಫಲಿಸಲಿಲ್ಲ

ಆದರೆ ಬ್ರಿಟಿಷರು ಈ ಆಕ್ರಮಣ ಹಂಚಿಕೆಯ ಬಗ್ಗೆ ತಬ್ಬಿಬ್ಬಾಗಲಿಲ್ಲ; ಬೋಸರ ಮುಖ್ಯ ನಿರೀಕ್ಷೆಯಾಗಿದ್ದ ದೇಶದೊಳಗಿನ ಆಂದೋಲನವೂ ಸಾಕಷ್ಟು ಪ್ರಬಲವಿರಲಿಲ್ಲ. ತನ್ನ ಹೊಚಿಕೆ ಆಡಿಮೇಲಾಯಿತೆಂಬುದನ್ನು ತಿಳಿದೊಡನೆ ಹಿಂದುಸ್ಥಾನದೊಳಗೆ ನುಗ್ಗದಂತೆ ಜಾಪಾನರನ್ನು ತಡೆಯುವ ಜವಾಬ್ದಾರಿ ಬೋಸರ ಮೇಲೆ ಬಿತ್ತು. ಅವರು ಕುಹಕೋಪಾಯಗಳಿಂದ ಜಾಪಾನರಮ್ಮ ವಂಚಿಸುತ್ತಾ ಸಮಯ ತೆಗೆಯತೊಡಗಿದರು. ಆ ಕಾರ್ಯಕ್ಕಾಗಿ ವಿಶೇಷವಾಗಿ ತಮ್ಮ 'ಹಿಂದೀ ರಾಷ್ಟ್ರೀಯ ಸೇನೆ'ಗೆ ಇನ್ನಷ್ಟು ಶಸ್ತ್ರೋಪಕರಣಗಳು, ವಿಮಾನಗಳು ಬೇಕೆಂದು ಒಮ್ಮೆ ವಾದಿಸಿ ಸಮಯಪಡಕೊಂಡರು. ಮತ್ತೊಮ್ಮೆ ತನ್ನ ಸೇನೆಗೆ ವಿಶೇಷ ತರಬೇತಿಯೀಯುವ ಉಪಾಯ ಹೂಡಿ ಹಿಂದೆಸೆದರು. ಇಂತಹ ಹಂಚಿಕೆಗಳನ್ನು ಹೂಡಿ ಕೊನೆಯವರೆಗೂ ಸುಭಾಸರ ಸೇನೆ ಹಿಂದುಸ್ಥಾನದೊಳಗೆ ನುಗ್ಗದೆ ತಪ್ಪಿಸಿಕೊಂಡಿತು. ಈ ಅವಧಿಯಲ್ಲಿ ಜಾಪಾನೀ ಸೇನೆಗಳಿಂದ ಬರ್ಮಾ ಮೊದಲಾದ ಕಡೆಗಳಲ್ಲಷ್ಟು ಭಾರತೀಯರಿಗೆ ಅನ್ಯಾಯವಾಗದಂತೆ 'ಭಾರತ ರಾಷ್ಟ್ರೀಯ ಸೇನೆ' ಜಾಗರೂಕತೆಯಿಂದ ರಕ್ಷಣಾ ಕಾರ್ಯ ನಿರ್ವಹಿಸುತಿತ್ತು. ಹಿಂದೀಯರಿಗನ್ಯಾಯವಾಗುವ ಸಂದರ್ಭಗಳೆಲ್ಲಾ ಸುಭಾಸರ ರಾಷ್ಟ್ರಾಭಿಮಾನೀ ಕೈವಾಡದಿಂದಾಗಿ ತಪ್ಪಿಹೋಗಿದ್ದುವು ದೃಷ್ಟಾಂತಕ್ಕಾಗಿ ಹೋಂಗ್‌ಕೋಂಗಿನ ಕೆಲವು ಹಿಂದೀಸಾಹುಕಾರರಿಗೆ, ಜಾಪಾನಿನೊಡನೆ ಸಹಕರಿಸದ ಅರೋಪದಿಂದ ಜಾಪಾನ್ ವಿ.ಲಿಟರಿ ಕೋರ್ಟು ಮರಣ ಶಿಕ್ಷೆ ವಿಧಿಸಿದ್ದಿತು. ಜಾಪಾನಿನಲ್ಲಿ ಇಂತಹ ತೀರ್ಮಾನಗಳು ಎಂದಿಗೂ ಹುಸಿಯಾಗದೆಂಬ ತಿಲ್ಲ. ಆದರೆಯಾವ ಕಾರಣದಿಂದಲೋ–ನಿಶ್ಚಿತ ದಿನ ಈ ಹಿಂದೀಯರ ಕೊಲೆ ನಡೆಯದೆ ಅವಮಾನಕು ಬಿತ್ತು; ಕೊನೆಯವರೆಗೂ ಅದು ಜ್ಯಾರಿಗೆ ಬಂದುದಿಲ್ಲ. ಇದಕ್ಕೆ ಸುಭಾಶ್ಚಂದ್ರರ ಕೈವಾಡವೇ ಕಾರಣವೆಂದು ತಿಳಿದು ಬಂತು. ಕೊನೆಕೊನೆಗಂತೂ ಸುಭಾಸರು ಬಹಿರಂಗವಾಗಿ ಜಾಪಾನರನ್ನು ಧಿಕ್ಕರಿಸಿ ನಡೆದುದುಂಟು. ಒಂದು ಬಾರಿ ತನ್ನ ಆಕಾಶವಾಣಿ ಭಾಷಣದ ಪ್ರತಿಯೊಂದನ್ನು ಮುಂದಾಗಿ ಪರಿಶೀಲನೆಗೊಪ್ಪಿಸಬೇಕೆಂದು ಜಾಪಾನ್ ಅಧಿಕಾರಿಯು ಕೇಳಿದಾಗ ಕಂಠೀರ್ಕವಾಗಿ ಧಿಕ್ಕರಿಸಿ ಹೊರಟುಬಂದಿದ್ದರು. ಕೊನೆಯ ದಿನಗಳಲ್ಲಿ ರಶ್ಯವನ್ನೊಲಿಸಿ ಕಾರ್ಯ ಸಾಧಿಸುವ ಆಶೆಯೊಂದು ಸುಭಾಸರಲ್ಲಿತ್ತು. ಆದರೆ ಎಲ್ಲಾ ವಿಧದ ವಾರ್ತೆಗಳನ್ನು ವಂಶೀಲಿಸಿ ನೋಡಿದರೂ ಸುಭಾಸರು ಸತ್ತಿರುವದು ಖಂಡಿತವೆಂದೇ ಈ ಸಾಹುಕಾರರ ಅಭಿಪ್ರಾಯವಿದೆ.

(೭ನೇ ಪುಟದಿಂದ)

ಗಾಂಧಿ–ಜೋಶಿ ಪತ್ರವ್ಯವಹಾರಗಳು ನಡೆದು ಕಾ. ಜೋಶಿಯ ಅಭಿಪ್ರಾಯಾನುಸಾರವಾಗಿ ಗಾಂಧಿಜೀ ಈ ಅರೋಪಗಳತನಿಖೆ ಕೆಲಸವನ್ನು ಭುಲಾಭಾಯಿ ದೇಸಾಯಿಗೆ ಗೊಪ್ಪಿಸಿದ್ದರು. ವಿ.ಕೈಲ್ಲಾ ಆರೋಪಗಳು ಹುಸಿಗೊಂಡರೂ 'ಆಗೋಸ್ತು ನಿರ್ಧಾರ'ಕ್ಕೆ ವಿರುದ್ಧವಾಗಿ ಕಮ್ಯೂನಿಸ್ಟರು ವರ್ತಿಸಿದ್ದರೆಂದು ಭುಲಾಭಾಯಿ ತೀರ್ಮಾನವೂ ಹೇಳಿತು. ಈ ಅವಧಿಯಲ್ಲಿ ಕಾಂಗ್ರೆಸ್ ಬಹಿಷ್ಕಾರವಿದ್ದಾಗ ರಚಿಸಲ್ಪಟ್ಟ ತಾತ್ಕಾಲಿಕ ಕಾಂಗ್ರೆಸ್ ಕಮಿಟಿಗಳಿಂದಲೂ ಆ ಮೇಲಿನ ಕ್ರಮಬದ್ಧ ಕಾಂಗ್ರೆಸ್ ಸಂಸ್ಥೆಗಳಿಂದಲೂ ಕಮ್ಯೂನಿಸ್ಟರನ್ನು ದೂರವಿಡವ ಆಂತರಿಕ ಆಂದೋಲನ ಪ್ರಬಲಿಸಿತು. ದೇಶದ ಬೇರೆ ಪ್ರಾಂತಿಕ ಕಮಿಟಿಗಳು ತಂತಮ್ಮ ಕಮ್ಯೂನಿಸ್ಟ್ ಸದಸ್ಯರ ಮೇಲೆ ಶಿಸ್ತು ಕ್ರಮ ಕೈಗೊಂಡಿದ್ದುವು. ಭುಲಾಭಾಯಿ ತೀರ್ಮಾನಾನಂತರ ಪೂನೆಯಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇದಕ್ಕಾಗಿ ಒಂದು ಉಪಸಮಿತಿಯನ್ನು ನೇಮಿಸಿತು. ಈ ಸಮಿತಿಯು ಕಮ್ಯೂನಿಸ್ಟ್ ಎ. ಐ. ಸಿ. ಸಿ ಸದಸ್ಯರಿಂದ ಕೆಲವು ಅರೋಪಗಳ ಕುರಿತು ಉದಾಹರಣೆ ಕೇಳಿ ಈಗ ತನ್ನ ವರದಿಯನ್ನು ಕಾಂಗ್ರೆಸಿಗೊಪ್ಪಿಸಿದೆ. ಕಾಂಗ್ರೆಸ್ ತೀರ್ಮಾನಕೊರಬೀಳಲಿರುವ ಅವಧಿಯೊಳಗೆ ಕಮ್ಯೂನಿಸ್ಟರು ತಾವಾಗಿ ಕಾಂಗ್ರೆಸಿನಿಂದ ಹೊರಬೀಳುವ ನಿರ್ಧಾರವನ್ನು ಈಗ ತಾನೇ ಮಾಡಿದ್ದಾರೆ. ಅ. ಭಾ. ಕಾಂ. ಸಮಿತಿಯ ಕಮ್ಯೂನಿಸ್ಟ ಸದಸ್ಯರು ತನ್ನುವಾದವನ್ನು ಮಂಡಿಸಿಯಾದ ಮೇಲೆ ತಾವಾಗಿ ಹೊರಬೀಳಬಹುದು; ಅಥವಾ ಕಾಂಗ್ರೆಸ್ ಆವರ ಮೇಲೆ ಶಿಸ್ತು ಜ್ಯಾರಿಮಾಡಿ ಹೊರಗಟ್ಟಲೂಬಹುದು. ಅಂತೂ ಸಂಸ್ಥೆಯೊಳಗೆ ನಡೆಯುತ್ತಿದ್ದ ಕಾಂಗ್ರೆಸ್-ಕಮ್ಯೂನಿಸ್ಟ್ ಕಾಳಗವಿನ್ನು ಮುಗಿದಂತೆಯೇ. ಇನ್ನು ಜಗಳ ಮನೆಯೊಳಗಿನಿಂದ ಮೈದಾನಿಗೆ ಬಂದಂತಾಯಿತು!

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಸ್ಥಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲೆಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧಾದ ರೋಗಗಳಿಗೆ ದಿವ್ಯ ಔಷಧ ಶಾರೀರಿಕ ಸುತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುಸುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ಲು 1ರ 10-0-0, ¼ ರಾತ್ಲು 5-4-0, ½ ರಾತ್ಲು 2-12-0.

ಎಲ್ಲಾ ಸಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ಸಂಖ್ಯ, 10 ಮಂಗಳೂರು.

ಎಲ್ಲಾ ಸಮೂನೆಯ ಔಷಧಿಗಳೂ ದೊರೆಯುತ್ತವೆ. ಇಲ್ಲಿ ಕಾಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಷ್ಟಾದ ಔಷಧಿ ರವಾನಿಸಲಾಗುವುದು. (1) ಉಡುಪಿ ವಿಜಯಬ್ಯಾಂಕ್ ಲಿಮಿಟೆಡ್; (2) ಬೊಂಬಾಯಿ: ಏಜೆಂಟರು. ಪೊಪ್ಯುಲರ್ ಸ್ಟೋರ್ಸ್, ಕೆಲಸ್ಟ್ 183, ಸುರಾರಿಬಾಗ್ ರೋಡ್, ಪಿ. ಇ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಲಿಸ್ಟ್, ಜಿ. ಇ. ಪಿ. ಮಾಟುಂಗ.

CHAMPAE'S
Snow & Lastrex
Sole Distributers for (India.)
Sukhananda Stores
Santhekatte, UDIPI, S. K.

ನೆಹರು ಮಾತಿಗಾಗಿ ಸೋಲ್ಜರರ ಬಿಡುಗಡೆ

ಸದ್ಯಕ್ಕೆ ಬ್ರಿಟನು ನಾವೆಯು ಶಕ್ತಿಯಲ್ಲಿ ದ್ವಿತೀಯ ವರ್ಗದಲ್ಲಿದೆ ಎಂದು ಪಂಡಿತ ನೆಹರುಗಳತ್ತಿದ್ದ ಹೇಳಿಕೆಯಿಂದನ್ನು ಕರಾಚಿಯ 'ಡೈಲಿಗಝೇಟ್' ಪತ್ರಿಕೆ ಪ್ರಕಟಿಸಿದ್ದಿತು. ಈ ಹೇಳಿಕೆಯು ಬ್ರಿಟಿಷ್ ಸೋಲ್ಜರ್‌ರನ್ನು ರೇಗಿಸಿದುದರಿಂದ ಇದೇ ತಾ 5ನೇ ಮುಂಜಾನೆ ಒಬ್ಬ ಮೇಜರನ ಮುಂದಾಳತ್ವದಲ್ಲಿ ಬ್ರಿಟಿಷ್ ಸೇನಾ ತಂಡವೊಂದು 'ಡೈಲಿಗಝೇಟ್'ನ ಕಾರ್ಯಾಲಯದೊಳಗೆ ನುಗ್ಗಿತು. ಅಲ್ಲಿ ಉಪ ಸಂಪಾದಕರು ಕಾರ್ಯಾಸಕ್ತರಾಗಿದ್ದರು. ಸೋಲ್ಜರರು ನೆಹರುಗಳ ಆ ಹೇಳಿಕೆಯ ಕುರಿತು ಅವರಿದಿರು ನಿಷೇಧ ಸೂಚಿಸಿ, ಇನ್ನು ಮುಂದೆ ಸೈನಿಕರಿಗೆ ಸಮಾಧಾನಕರವಾದ ಮಾರ್ತೆಗಳನ್ನು ಮಾತ್ರ ಪ್ರಕಟಿಸತಕ್ಕದ್ದೆಂದು ಬೆದರಿಕೆ ಹಾಕಿದರಂತೆ. ಉಪ ಸಂಪಾದಕರು ಧೃತಿಗೆಡದೆ, ಪಂಡಿತ ನೆಹರುಗಳ ಅಭಿಪ್ರಾಯವನ್ನು ಪ್ರೊಫೆಸರ್ ಲಸ್ಕಿಯಂತಹ ಅಗ್ರಗಣ್ಯ ಬ್ರಿಟಿಷ್ ರಾಜಕಾರಣಿಗಳೂ ಸಮರ್ಥಿಸಿರುವದನ್ನು ವಿವರಿಸಿ ಹೇಳಿದರು. ಆದರದು ಆ ಮದಾಂಧರ ತಲೆಗೆ ಹೊಕ್ಕಂತೆ ಕಾಣಲಿಲ್ಲ ಅವರು ಶುದ್ಧ ಗುಂಡರಂತೆ ಹೊರಡಿ.ವಾಗ ಟೆಲಿಪ್ರಿಂಟರಿನಲ್ಲಾಗುತ್ತಿದ್ದ ಪ್ರತಿಗಳನ್ನೆಲ್ಲಾ ಕಿತ್ತುಕೊಂಡು ನಡೆದರು. ಕೂಡಲೇ ಮಿಲಿಟರಿ ಪೋಲೀಸರಿಗೆ ಕರೆ ಹೋಗಿ ಅವರು ಈ ಸೋಲ್ಜರ್‌ಕರೆಲ್ಲರ ಗುರುತೆ ಹಚ್ಚಿದರು. ಕೋರ್ಟ್ ಮಾರ್ಶಲ್ ಮುಂದೆ ಅವರ ವಿಚಾರಣೆ ನಡೆಯಲಿರುವದೆಂದು ತಿಳಿದುಬರುತ್ತದೆ. ಪಂಡಿತ ನೆಹರುಗಳಂತಹ ಸನ್ಮಾನ್ಯ ವ್ಯಕ್ತಿಗಳ ಕುರಿತು ಕೆಲವು ಸೇನೋದ್ಯೋಗಿಗಳು ಖಾಸಗಿಯಾಗಿ ಇಂತಹ ಅಪಮಾನಕರ ರೀತಿಯಲ್ಲಿ ವರ್ತಿಸಿದುದಕ್ಕಾಗಿ ಸಂಪಾದಕರು ಆ ಭಾಗದ ಸೇನಾನಿಗಳಿಗೆ ತನ್ನ ನಿಷೇಧ ಸೂಚಿಸಿದ್ದಾರೆ. ಸೇನಾನಿಗಳಿಂದ ನಿಯೋಜಿಸಲ್ಪಟ್ಟ ಮುಖ್ಯ ಸೇನಾಧಿಕಾರಿಯೊಬ್ಬರು ಸೇನೆಯಪರವಾಗಿ ಜೈಲಿ ಗಝೇಟಿನ ಸಂಪಾದಕರಿಗೆ ಪತ್ರ ಬರೆದು ತಾವು ಸೂಚಿಸಿರುವರೆಂದು ತಿಳಿದುಬರುತ್ತದೆ. ಸಂಪಾದಕ ಶ್ರೀ ಶರ್ಮರು ಈ ಘಟನೆಯ ಕುರಿತು ಹೇಳಿಕೊಡಲೊಪ್ಪಲಿಲ್ಲ.

ರಾಜಕೀಯ ಕೈದಿಗಳನ್ನು ನಾಯಿಗಳಂತೆ ಎಳೆದರು!

ಡನಗಂಗ್ ಥಕಾಯತಿಯ ಆದೋಪಿಗಳಾದ ಮೂವರು ರಾಜಕೀಯ ಕೈದಿಗಳು ವಿಚಾರಣೆ ಬಾಕಿಯಿದ್ದುದಿಂದ ಬನಾರಸ್ ಜಿಲ್ಲಾ ಜೈಲಿನಲ್ಲಿ ಬಂಧನದಲ್ಲಿದ್ದರು. ಅಲ್ಲಿಯ ಪೋಲಿಸ್ ಆಫೀಸರ್ ಟೇಸ್‌ಡಾಲೆ ಎಂಬವರು ವಿಚಾರಣೆಯ ದಿನ ಮೂವರಿಗೂ ಕೈಕೋಳ ಸಿಕ್ಕಿಸಿ ರಸ್ತೆಯಲ್ಲಿ ಸತ್ತ ನಾಯಿಗಳನ್ನೆಳೆವಂತೆ ಸುಮಾರು ಒಂದು ಮೈಲು ದೂರದ ಕೋರ್ಟಿನ ವರೆಗೂ ಪೋಲೀಸರಿಂದ ದರದರನೇ ಎಳೆಯಿಸಿದರಿಂದೂ ಹಾಗೆ ಎಳೆದುತಂದೇ ಕೋರ್ಟಿನ ಮುಂದೆ ನಿಲ್ಲಿಸಿದರೆಂದು ತಿಳಿದು ಬರುತ್ತದೆ. ಪಂಡಿತ ನೆಹರುಗಳು ಈ ವರ್ತನೆಯನ್ನು ತೀಕ್ಷ್ಣವಾಗಿ ಖಂಡಿಸಿ ಇಡೀ ರಾಷ್ಟ್ರದ ಲಕ್ಷ್ಯವನ್ನು ಪೋಲೀಸ್ ಅತ್ಯಾಚಾರಗಳ ಕಡೆಗೆಳೆದುದರಿಂದ ಅದೀಗ ವಿಚಾರಣೆಗೆ ಬಿದ್ದಿದೆ. ಬನಾರಸ್ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸದಸ್ಯರೂ ಅಲ್ಲಿಯ ವಕೀಲರಲ್ಲೊಬ್ಬರೂ ಆದ ಶ್ರೀ ಮೋಹನ್ ಪ್ಯಾರೆಯವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ಈ ಸಂಬಂಧವಾಗಿ ಇಂಡಿಯನ್ ಪೆನಲ್ ಕೋಡಿನ 149 ಜೊತೆಗೂ 166, 337, 338, 323 ಮತ್ತು 325 ನೇ ಸೆಕ್ಷನುಗಳನ್ವಯ ಆರ್ಜಿ ಹಾಕಿದ್ದಾರೆ. ಸಂಯುಕ್ತ ಪ್ರಾಂತಿಕ ಸರಕಾರವು ಟೇಸ್ ಡಾಲೆಯ ಮೇಲಿನ ಈ ಆರೋಪಗಳ ಕುರಿತು ಸರಿಯಾಗಿ ವಿಚಾರಣೆ ನಡೆಸುವಂತೆ ಪೋಲಿಸ್ ಇನ್ಸ್ಪೆಕ್ಟರ್ ಜನರಲರಿಗೆ ಸೂಚಿಸಿದೆ.

ಬ್ರಿಟಿಷ್ ಸೇನಾ ಹಡಗದಲ್ಲಿ ಹಿಂದೀವಿದ್ಯಾರ್ಥಿಗಳ ಗೋಳು!

ಉಚ್ಚ ಶಿಕ್ಷಣಕ್ಕಾಗಿ ಯುರೋಪ್ಯ ಪ್ರವಾಸಕ್ಕೆ ಹೊರಟಿದ್ದ 288 ಮಂದಿ ಹಿಂದೀ ವಿದ್ಯಾರ್ಥಿಗಳು ತಾ 5ರಲ್ಲಿ ಬೋರ್ಬೇ ಎಂಬ ಸೇನಾಹಡಗವನ್ನು ಜೊಂಬಾಯಿಯಲ್ಲಿ ಹತ್ತಬೇಕಾಯಿತು. ಆ ಹಡಗದಲ್ಲಿ ಸುಮಾರು 5000ಮಂದಿ ಸೈನಿಕರಿದ್ದು ಅವರಿಗೆ ಸರ್ವಾನುಕೂಲತೆಗಳದ್ದುವು, ಆದರೆ ವಿದ್ಯಾರ್ಥಿಗಳ ಪಾಡು ಮಾತ್ರ ಅಸಹನೀಯವಾಗಿತ್ತು. ಇವರೊಂದಿದ್ದ ಚೀನಾ ವಿದ್ಯಾರ್ಥಿಗಳ ಸಮೇತ ಸುಮಾರು 300 ಮಂದಿ ಈ ವಿದ್ಯಾರ್ಥಿಗಳು ಸೇನಾ ಹಡಗ. ದೊಳಗಿನ ಕಟ್ಟಳೆಯಂತೆ ಗುಡಿಸುವದು, ಅಡುಗೇ ಮನೆಗೆ ತಮ್ಮ ಪಾತ್ರೆಗಳನ್ನು ತಂದಿಡುವದು, ಪಾಯಿಖಾನೆ ಶುದ್ಧಮಾಡುವದೇ ಮೊದಲಾದ ಎಲ್ಲಾ ಸೇವೆಗಳನ್ನೂ ಸಲ್ಲಿಸಬೇಕೆಂದು ಸೇನಾ ಕೆಪ್ತನನ್ನು ವಿದ್ಯಾರ್ಥಿಗಳಿಗೆ ತಿಳಿಸಿದ. ಅದಲ್ಲವಾದರೆ ಹಡಗದಿಂದಿಳಿದುಹೋಗತಕ್ಕದ್ದೆಂಬ ಸ್ಪಷ್ಟ ಆಜ್ಞೆಯೂ ಆಯಿತು ವಿದ್ಯಾರ್ಥಿಗಳು ಸ್ವಯಂ ಪ್ರೇರಣೆಯಿಂದ ಪಾಯಿಖಾನೆ ಸ್ವಚ್ಛಮಾಡಿಕೊಳ್ಳತಕ್ಕದ್ದಂಬ ಒಪ್ಪಂದಕ್ಕೆ ಸಿದ್ಧರಾಗಿ ಎಲ್ಲದೆ ಒಪ್ಪಬೇಕಾಯಿತು. ಆದರೂ ಮರುದಿನ ಮುಂಜಾನೆ ಎಲ್ಲಾ ಹಿಂದೀ ಮತ್ತು ಚೀನೀ ವಿದ್ಯಾರ್ಥಿಗಳು ಹಡಗದಿಳಿದು ಹೋಗಬೇಕೆಂಬ ಆಜ್ಞೆಯಾಯಿತು. ಬೇರಾವ ಉಪಾಯಕ್ಕೂ ಅವಕಾಶ ದೊರೆಯಲಿಲ್ಲ. 15ನಿಮಿಷದೊಳಗೆ ಗಂಟುಮೂಟೆ ಕಟ್ಟಿಕೊಂಡು ವಿದ್ಯಾರ್ಥಿಗಳು ಹೊರ ಪ್ರದೇಶಕ್ಕೆ ಹೊಂಡುವ ಹೊತ್ತಿಗೆ ನೌಕಾಧಿಕಾರಿಯು ಪ್ರಯಾಣಕ್ಕೆ ಯಿದ್ದವರು ಬಂದು ಕರಾರಿಗೆ ಸಹಿಹಾಕಬಹುದೆಂದು ಸೂಚಿಸಿದ. ಈ ಕರಾರಿನಲ್ಲಿ ಯ ಹಡಗ ನಾಯಕನ ಬಜ್ಜೆಗಳೆಲ್ಲ ವನ್ನೂ ಪ್ರಯಾಣಿಕರು ಪಾಲಿಸಲೇಬೇಕು. ತಂತಮ್ಮ ಪಾಯಿಖಾನೆ, ಸ್ನಳ, ಪಾತ್ರೆಗಳನ್ನೆಲ್ಲಾ ತಾವು ತೊಳೆಯಲೇಬೇಕು, ಕಿರು ಪಾಯರಾದ ಹೆಚ್ಚಿನ ವಿದ್ಯಾರ್ಥಿಗಳು ಈ ಕರಾರಿಗೂ ಸಹಿಹಾಕಿದರು ಅವನ್ನು ಇನ್ನೊಂದು ಸೇನಾ ಹಡಗ ಬರಿಯಸಿಗೆ ಹತ್ತಿಸಲಾಯಿತು. ಆದರಲ್ಲಿನ ವ್ಯವಸ್ಥೆಯಂತೂ ಮತ್ತೂ ಕಳಪೆಯಿತ್ತು. ಕೆಲವು ವಿದ್ಯಾರ್ಥಿಗಳು ಆ ಕರಾರಿಗೊಪ್ಪಲಿಲ್ಲ ಅಂಥವರು ಕಷ್ಟಗಳಿಗೀಡಾಗಬೇಕಾಯಿತಲ್ಲದೆ ಟಿಕೇಟು ಕೂಡಾ ಪುರಳಿ ದೊರೆಯಲಿಲ್ಲ.

ಬೊಂಬಾಯಿ ಗಲಭೆ ಶಾಂತವಾಯಿತು—

ಕಳದತಿಂಗಳ ತಾ 26ನೇ ರಾತ್ರಿ ಬೊಂಬಾಯಿಯಲ್ಲಿ ಪ್ರಾರಂಭವಾಗಿದ್ದ ಹಿಂದೂ-ಮುಸ್ಲಿಮ್ ಗಲಭೆಯು ಪೂರ್ತಿ ಒಂದುವಾರ ನಡೆದು ಇದೇ ತಾ 4-5ರಲ್ಲಿ ಸಾಮಾನ್ಯಪರಿಸ್ಥಿತಿ ನಿರ್ಮಾಣಗೊಂಡಿತೆನ್ನಬಹುದು. ತಾ 1ರ ನಂತರ ಗಲಭೆಯು ಇಳಿಮುಖವಾಗುತ್ತಾ ಬಂದಿತ್ತು. ಎರಡು ಮೂರು ದಿನಗಳವರೆಗೆ ಅಲ್ಲಲ್ಲಿ ತಿವಿತ, ಕಲ್ಲೆಸೆತಗಳು ನಡೆದಿದ್ದುವು. ಕೆಲವು ಪೋಲಿಸರಿಗೂ ಹೊಡೆತಗಳು ಬಿದ್ದಿದ್ದುವು ರಸ್ತೇ ಬದಿಯ ಅಂಗಡಿಗಳೂ ಲೂಟಿಯಾಗಿದ್ದುವು ಆದರೆ ಬ್ರಿಟಿಷ ಸೈನಿಕಗಳನ್ನು ಗಲಭೆಯ ಕ್ಷೇತ್ರಜೊಳಗೆ ಹೊಗಿಸಿ ಪೋಲಿಸರಿಗೆ ಸಜಾಯಕವಾಗಿ ಉಪಯೋಗಿಸ ಹತ್ತಿದುದರಿಂದ ಸರ್ವರಿಗಾಮವಾದಂತೆ ಕಂಡುಬರುತ್ತದೆ. ಗವರ್ನರರು ಪೂನೆಯಿಂದಾಗಮಿಸಿ ಗೊಂದಲಸ್ಥಳಗಳಿಗೆ ಭೇಟಿಯಿತ್ತಿದ್ದಾರೆ. ತಾ. 1ನೇ ರಾತ್ರಿ ಫೆರ್ಗ್ಯೂಸನ್ ರಸ್ತೆಯಲ್ಲಿದ್ದ ಹಿಜೀರ್ ವಿಲ್ಲಿಗೆ ಬೆಂಕಿ ಹಿಡಿದಿತ್ತು. ಅಲ್ಲಿಗೆ ಬೆಂಕಿಯಂತ್ರಗಳು ಶತ ಪ್ರಯತ್ನದಿಂದ ಉರಿನಂದಿಸುವ ಮೊದಲೇ ಸಾವಿರಾರು ರೂ.ಗಳ ನಷ್ಟ ಸಂಭವಿಸಿದ್ದಿತು. ನಾಗರಿಕರ ಶಾಂತಿ ಸಮಿತಿಯು ಪರಸ್ಪರ ಸೌಹಾರ್ದತ್ಯಕ್ಕಾಗಿ ಹೃದ್ಭಾವಕ ವಿನಂತಿ ಮಾಡಿಕೊಂಡಿದೆ ಇಂತಹ ಗಲಭೆಗಳ ಸಂದರ್ಭದಲ್ಲಿ ಪೋಲಿಸ್ ಮತ್ತು ಸೇನೆಯನ್ನು ಅವಲಂಬಿಸಿರದಂತೆ ಎಲ್ಲಾ ಜಾತಿ ಮತಗಳ 5000ನಂದಿ ಪ್ರಮುಖ ನಾಗರಿಕರ ಶಾಶ್ವತ ಶಾಂತಿ ದಳವೊಂದನ್ನು ರಚಿಸಬೇಕೆಂದು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಎಸ್. ಕೆ. ಪಾಟೀಲರ ವಿನಂತಿಯಿದೆ. ಗಲಭೆಗಾರರಿಗೆ ಚಡೀಶಿಕ್ಷೆ ವಿಧಿಸುವ ನಿಯಮವೂ ಬಂದಿದೆ ವಿದೇಶಿಯರ ಅಪಪ್ರಚಾರಕ್ಕನುಕೂಲವಾಗುವಂಥ ಕಫ್ರ್ಯೂ ಆಜ್ಞೆಯನ್ನು ದೀರ್ಘಾವಧಿ ಜಾರಿಯಲ್ಲಿಟ್ಟ ಅಧಿಕಾರಿಗಳ ವರ್ತನೆಯನ್ನು ಈ ಪ್ರಮುಖರು ಖಂಡಿಸಿದ್ದಾರೆ. ತಾ. 1ರವರೆಗೆ ಲೆಕ್ಕ ದೊರೆತಂತೆ ಈ ಗಲಭೆಯಲ್ಲಿ ಮಡಿದವರ ಸಂಖ್ಯೆ 36, ಜಖಂಗೊಂಡವರು 175. ದಸ್ತಗಿರಿಯಾದವರ ಸಂಖ್ಯೆ 900 ಮಿಕ್ಕಿದೆ. ಇಂದಿನಿಂದ ವಿಶೇಷ ವಾರ್ತೆ ಕೇಳಬರುವದಿಲ್ಲ.

ಅನಗತ್ಯ : : ಅತಿರೇಕ



1000's SAVED
MARGARET'S
FITS CURE
Stops children's fits in 3 minutes.
Ask your chemist for a box.
Sole Agents -
BRIGHTSTAR AGENCIES,
Hospital Rd, Udipi, S. K.

The Canara Banking Corporation Limited.

((Incorporated in British India, with limited Liability)

Estd: 1906.

Head Office: **UDIPI**, South Kanara.

ANNOUNCEMENT.

A branch of the BANK will shortly be opened at "COCHIN".

ನವಯುಗ

ಉಡುಪಿ, ಗುರುವಾರ ೧೧-೧೦-'೪೫.

ಕಮ್ಯೂನಿಸ್ಟರಿಗೊಂದು ಹಿತವಾದ.

ಕಾಂಗ್ರೆಸಿಗೆ ಕಮ್ಯೂನಿಸ್ಟರನ್ನು ವಿಸರ್ಜಿಸಿಕೊಳ್ಳಬೇಕಾಗಿ ಬಂದಾಗಲೇ, ಕಮ್ಯೂನಿಸ್ಟರು ತಾವಾಗಿ ಕಾಂಗ್ರೆಸಿನಿಂದ ಹೊರಬೀಳುವ ನಿರ್ಧಾರ ಮಾಡಿದ್ದಾರೆ. ಹಿಂಗಾಗದೆ ನಿವಾರಹವಿರಲಿಲ್ಲ. ಕಾಂಗ್ರೆಸ್ ರಾಷ್ಟ್ರೀಯ ಸಂಸ್ಥೆ; 'ಶಾಂತವಾದ ಮತ್ತು ನ್ಯಾಯುವಾದ ರೀತಿಯಿಂದ ಭಾರತದ ಪೂರ್ಣ ಸ್ವಾತಂತ್ರ್ಯಸಾಧನೆಯನ್ನೆಪ್ಪುವೆ'ನೆನ್ನುವ ಪ್ರತಿಯೊಬ್ಬ ಭಾರತೀಯನೂ ನಾಲ್ಯಾಣೆ ತೆತ್ತು ಕಾಂಗ್ರೆಸಿನ ಪ್ರಾಥಮಿಕ ಸದಸ್ಯನಾಗಬಲ್ಲ. ಹಾಗೆ ಸದಸ್ಯನಾದವನು ಕಾಂಗ್ರೆಸ್ ಸಂಸ್ಥೆಗಳ ಕಾರ್ಯಕಾರೀ ಸದಸ್ಯನಾಗಬಹುದು—ತನ್ನ ಯೋಗ್ಯತೆ ನುಷ್ಪಿದ್ದರೆ ಒಂದು ಮಟ್ಟಿಗೆ ರಾಷ್ಟ್ರಪತಿಯೂ ಆಗಬಹುದು. ಭಾರತಕ್ಕೆ ಸ್ವಾತಂತ್ರ್ಯಬೇಕೆಂಬುದನ್ನು ಕಮ್ಯೂನಿಸ್ಟರು, ನೋಶಿಯಲಿಸ್ಟರು, ಮಜೂರರು, ಮೂಲ ಕರು, ಒಡವರು, ಶ್ರೀಮಂತರು—ಅಂತು ಭಾರತೀಯರೆಲ್ಲರೂ ಒಪ್ಪುತ್ತಾರೆ; ಈ ವಿಷಯದಲ್ಲಿ ಯಾವ ಪಕ್ಷಕ್ಕಿಂತಲೂ ಕಾಂಗ್ರೆಸಿನ ಪ್ರಾಧಮಿಕ ಸದಸ್ಯತನದ ಅರ್ಹತೆಯಾದ್ದರಿಂದ ಕಮ್ಯೂನಿಸ್ಟರೇ ಆದಿಯಾಗಿ ವಿವಿಧ ಪಕ್ಷೀಯರು ಕಾಂಗ್ರೆಸಿನೊಳಗೆ ಸೇರಿಹೋಗಿದ್ದರು. ಆದರೆ ಅಂಥವರಿಗೆ ಅವರದೇ ಆದ ಪಕ್ಷಗಳೋ ಸಂಘಗಳೋ ಪ್ರತಿಕವಿವೆ. ಕಾಂಗ್ರೆಸಿನೊಳಗಿದ್ದ ಕಮ್ಯೂನಿಸ್ಟರು ತಮ್ಮ ಕಮ್ಯೂನಿಸ್ಟ್ ಪಕ್ಷದ ಆಜ್ಞೆಯಂತೆ ವರ್ತಿಸಲು ಬದ್ಧರಿದ್ದರೆ. ಕಾಂಗ್ರೆಸಿನ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯಕ್ರಮಗಳು ಪರಸ್ಪರ ವಿರುದ್ಧವಾಗಿದ್ದರೆ ಕಾಂಗ್ರೆಸಿನೊಳಗಿನ ಕಮ್ಯೂನಿಸ್ಟರು ಕಾಂಗ್ರೆಸಿಗೆ ವಿರುದ್ಧವಾಗಿ ವರ್ತಿಸಬೇಕಾಗುತ್ತದೆ. ಆಗೋಸ್ತು ನಿರ್ಧಾರವು ಇಂತಹ ಒಂದು ಸಂದರ್ಭವನ್ನೊದಗಿಸಿದ್ದಿತು. ಸ್ವಸ್ಥೀಯ ಘೋರಣೆಗನುಸಾರವಾಗಿ ಈ ಬಾರಿಯ ಲೋಕಯುದ್ಧವನ್ನು ಜನತಾ ಯುದ್ಧವೆಂದು ಘೋಷಿಸುತ್ತಾ ಕಮ್ಯೂನಿಸ್ಟರು ಆಗೋಸ್ತು ನಿರ್ಧಾರಕ್ಕೆ ಬದ್ಧವಿರುದ್ಧವಾಗಿ ವರ್ತಿಸಿದ್ದರು. ಈ ಕುರಿತು ವಕೀಲೀವಾದ ಹೂಡುವದು ನಿರರ್ಥಕ. ಆಗೋಸ್ತು ಗೊಂಜಲಗಳು-ಹಿಂಸಾತ್ಮಕ ಕೃತ್ಯಗಳು-ಕಾಂಗ್ರೆಸಿನವೇ?' ಎಂಬ ಅಡ್ಡಸವಾಲು ಅರ್ಥಶೂನ್ಯ. ಈ ಕುರಿತು ಕಾಂಗ್ರೆಸಿನೊಡನೆ ಸರಕಾರವೇ ಸಾಕಷ್ಟು ವಾದಿಸಿ ಬಾಯಿಮುಚ್ಚಿದೆ. ಇನ್ನು ಆ ವಾದಿಸೂತ್ರವನ್ನು ಕಮ್ಯೂನಿಸ್ಟರೆತ್ತಿಕೊಂಡರೂ ಆಷ್ಟೇ! ನಿಜ; ತೋರುವಿಕೆಯ ಮಟ್ಟಿಗೆ ಸರಕಾರದ ಮತ್ತು ಕಮ್ಯೂನಿಸ್ಟರ ವಾದಗಳು ಸರಸ್ಪರ ವಿರುದ್ಧವಿವೆ. ಕಾಂಗ್ರೆಸನ್ನು ಹೊಡೆದುರು ನ್ಯಾಯ ವೆಂಬುದನ್ನು ತೋರಿಸಲು ಅಗೋಸ್ತು ಗಲಭೆ ಕಾಂಗ್ರೆಸಿನದೇ ಎಂದು ಸ್ಪಷ್ಟಪಡಿಸುವ ಆತುರ ಸರಕಾರಕ್ಕಿತ್ತು; ತನ್ನ 'ಜನತಾ ಯುದ್ಧ'ಕ್ಕೆ ಧಕ್ಕೆ ಬೀಳದಂತೆ ಕಾಂಗ್ರೆಸಿನ ಸ್ವಾತಂತ್ರ್ಯ ಹೋರಾಟವನ್ನು ಆ ತಂಕಸಿದ ಕೃತಘ್ನ ಕೃತ್ಯವನ್ನು ಸಮರ್ಥಿಸಿಕೊಳ್ಳುವದಕ್ಕಾಗಿ 'ಅಗೋಸ್ತು ಗೊಂದಲ' ಕಾಂಗ್ರೆಸಿನದಲ್ಲವೇ ಅಲ್ಲ ಎಂದು ಛಲ ಹಿಡಿಯುವ ಅಗತ್ಯ ಕಮ್ಯೂನಿಸ್ಟರಿಗಿತ್ತು. ಆ ಗೊಂದಲ ಜನತೆಯದು-ಆದರೆ-ಹೊಣೆಗಾರಿಕೆ ಸರಕಾರದ್ದೆಂಬುದೀಗ ಸ್ಪಷ್ಟವಾಗಿದೆ. ಆ ಕೆಲಸವನ್ನೆಲ್ಲವಾದರೂ ಆದರ ಅಂತರ್ಗತವಾಗಿದ್ದ ಜನತೆಯ ದೇಶಾಭಿಮಾನವನ್ನು ಕಾಂಗ್ರೆಸ್‌ಮುಕ್ತಕಂಠದಿಂದ ಶ್ಲಾಘಿಸಿದೆ. ಕಾಂಗ್ರೆಸು ಹೊಗಳದ ಅಂಶಗಳನ್ನೇ ಕಮ್ಯೂನಿಸ್ಟರು ಘಂಟಾಘೋಷವಾಗಿ ಖಂಡಿಸಿದ್ದಾರೆ. ಈಗ ವಾದಕ್ಕೆ ಬಿದ್ದಿರುವದು 'ಅಗೋಸ್ತು ಗೊಂದಲ'ವಲ್ಲ--'ಅಗೋಸ್ತು ನಿರ್ಧಾರ'. ಮೂರು ವರುಷ ಕುಲುಮೆಯಲ್ಲಿದ್ದು ಪುಟಗೊಂಡು ಬೊಂಬಾಯಿ ಅ. ಭಾ. ಕಾಂ. ಸಭೆಯಲ್ಲಿ ಇನ್ನಷ್ಟುಉಜ್ವಲತೆಯಿಂದಮಂಜೂರಾದ ಆ 'ಕ್ವಿಟ್ ಇಂಡಿಯಾ' ನಿರ್ಧಾರ. ಕಮ್ಯೂನಿಸ್ಟರು ಆ ಠರಾವಿನಲ್ಲಂತರ್ಗತವಾಗಿರುವ ಘೋರಣೆ ಮತ್ತು ಸ್ಫೂರ್ತಿಗೆ ವಿರುದ್ಧವಾಗಿ ವರ್ತಿಸಿಲ್ಲವೆ? ಭಾರತವು ಈ ಯುದ್ಧದಲ್ಲಿ ಸಹಕರಿಸುವಂತಹ ಸಂದರ್ಭವೊದಗಿಸಿಕೊಡಬೇಕು-ಇಲ್ಲವಾದರೆ ಅನಿರ್ವಹವಾಗಿ ತನ್ನ 'ಜನತಾ ಯುದ್ಧ'ವನ್ನು ರೂಪಿಸಿಕೊಳ್ಳುವೆನೆಂದು ಸರಕಾರಕ್ಕೆ ಶರ್ತಹಾಕಿದುದೇ ಕಾಂಗ್ರೆಸಿನ ಮಹಾನರಾಧವಾಗಿ ಅಸಹನೀಯ ದಬ್ಬಾಳಿಕೆಗೆದೆಕೊಡಬೇಕಾಯಿತು. ಆದರೆ ಕಮ್ಯೂನಿಸ್ಟರ ಪಾಲಿಗೆ ಯುದ್ಧದಲ್ಲಿ ಸಹಕರಿಸುವಂತಹ ಸಂದರ್ಭವೊದಗಿದ್ದಿತು; ಆ ಯುದ್ಧವೇ ಜನತಾ ಯುದ್ಧವಾಗಿತ್ತು. ಈ ಮಟ್ಟಿಗೆ ಕಮ್ಯೂನಿಸ್ಟರು ಸರಕಾರೀ ಪಕ್ಷದವರಾಗಿದ್ದರು ಹೊರತು ಕಾಂಗ್ರೆಸಿಗರಾಗಿರಲಿಲ್ಲ. ಕಾರಣ, ಕಮ್ಯೂನಿಸ್ಟರು ರಕ್ಷಣೆ ಕಡೆಗೆ ನೋಡಿಕೊಂಡಿದ್ದಾರೆ-ರಕ್ಷಣೆ ಇಂಗಾಲ್ಯಂಡನ್ನು ಕೂಡಿಕೊಂಡಿದೆ! ಆದರೆ ಕಾಂಗ್ರೆಸಿಗೆ ಭಾರತವನ್ನೇ ನೋಡಿಕೊಳ್ಳಬೇಕಾಯಿತು. ಕಾಂಗ್ರೆಸ್ ಘೋರಣೆಗೂ ಕಮ್ಯೂನಿಸ್ಟ್ ಘೋರಣೆಗೂ ಘರ್ಷಣೆ ಇಲ್ಲಿಯೇ. ಇದು ನಿಜಕ್ಕೂ ಸಂಧಾನಾತೀತ್ಕಶಿಕಾಯಿಟ್ಟ. ಯಾಕಂದರೆ ಒಂದು ಕಡೆಯ ಬುಡವು ಯುದ್ಧ ನಿರತ ಮಿತ್ರರಾಷ್ಟ್ರಗಳ ಪಾಳಯದಲ್ಲಿತ್ತು; ಮತ್ತೊಂದು ಕಡೆಯ ನೂಲವು ಭಾರತದ ಪರಿಸ್ಥಿತಿಯೊಳಗೆ ಹುಗಿದಿತ್ತು. ಇವೆರಡು ಒಂದುಗೂಡಬೇಕಾಗಿದ್ದರೆ ಒಂದೋ ರಶ್ಯವು ಬ್ರಿಟಿಷ್ ಪಾಳಯ ಬಿಡಬೇಕಿತ್ತು; ಇಲ್ಲವೇ ಭಾರತವು ಸ್ವತಂತ್ರವಾಗಬೇಕಿತ್ತು. ಎರಡರಲ್ಲಾವುದೂ ಆಗಲಿಲ್ಲವಾದ್ದರಿಂದ ಕಾಂಗ್ರೆಸಿನಿಂದಿಗೆ ಕಮ್ಯೂನಿಸ್ಟರು ಮಿಲನಗೊಳ್ಳುವದೂ ಅಸಾಧ್ಯವಾಯಿತು. ಇಂತಹ ವಿರುದ್ಧ ಘೋರಣೆಯವರು ಕಾಂಗ್ರೆಸಿನಿಂದಹೊರಬಿದ್ದುದು ಒಳ್ಳೆಯದೇ ಆಯಿತು. 'ಪರಿಸ್ಥಿತಿಯಲ್ಲನಿಮ್ಮನಿರ್ಧಾರವುಕಾಂಗ್ರೆಸ್ ಮತ್ತು ನಮ್ಮ ಸಪ್ಪೆ ಇವೆರಡಕ್ಕೂ ಯೋಗ್ಯ ಹಾಡಿಯೆಂಬುದನ್ನು ನ್ಯಾಯವಾದಿ ಕಾಂಗ್ರೆಸಿಗರೆಲ್ಲಾ ಮನಗಾಣುವರೆಂದು ನಮ್ಮ ನಂಬಿಕೆ' ಎಂದ ಕಾಮ್ರೇಡ್ ಜೋಶಿಯವರ ಮಾತು ಅಕ್ಷರಶಃ ನೂನ್ಯ.

ಕಮ್ಯೂನಿಸ್ಟರಾರೋಪಿಸುವಂತೆ ಕಾಂಗ್ರೆಸಿನೊಳಗೆ ಅವಾಸ್ತವಿಕರಿರಬಹುದು. ಸರಕಾರೀ ಬದಲಾವಣೆಯ ಹೊರತು ಸಾಮಾಜಿಕ, ಆರ್ಥಿಕ ಎದಲಾವಣೆಗಳನ್ನು ಬಯಸದ ಶ್ರೀಮಂತರ ಪಕ್ಷಪಾತಿಗಳು ಸೇರಿರಬಹುದು. ಕಮ್ಯೂನಿಸ್ಟರನ್ನು ಅವರು ಸ್ವಭಾವತಃ ದ್ವೇಷಿಸುತ್ತಿರಬಹುದು. ಆದರೆ ಅಂಥವರ ಆಟ ಈಗಲೂ ಕಾಂಗ್ರೆಸಿನೊಳಗೆ ನಡೆಯುತ್ತಿಲ್ಲ; ಮುಂದಕ್ಕೆಂತೂ ಸ್ವತಂತ್ರ ಭಾರತದ ರಚನೆಯ ಹೊಣೆಯು ಬಹು ಸಂಖ್ಯಾಕರಾಗಿರುವ ದೈತರು, ಕೆಲಸಗಾರರು, ಆರ್ಥಾರ್ತ ಜನ ಸಾಮಾನ್ಯರದೇ. ಆ ಕಾಲವು ಕಮ್ಯೂನಿಸ್ಟರನ್ನು ಅಥವಾ ಇತರ ಸಮಾಜಘಾತಿ ಪಕ್ಷಗಳನ್ನು ಕಾದಿದೆ. ಇಂದು ಎಲ್ಲಕ್ಕಿಂತ ಮೊದಲಾಗಿ ರಾಷ್ಟ್ರವು ಸ್ವತಂತ್ರವಾಗಬೇಕಾಗಿದೆ; ಸ್ವಾತಂತ್ರ್ಯ ವಿನಹಾ ಸಮಾಜವಾದವಿಲ್ಲ. ಪ್ರಕೃತ ಭಾರತೀಯ ಕಮ್ಯೂನಿಸ್ಟರು ರಶ್ಯದಿಂದ ಕಲಿಯಬೇಕಾದುದಿದನ್ನೇ. ಯ ದ್ವಾವಧಿಯಲ್ಲಿ ಸ್ವದೇಶದ ಹಿತ ಸಾಧನೆಯ ಸಲುವಾಗಿಯೇ ರಶ್ಯವು ತನ್ನ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯನ್ನು ಬರ್ಖಾಸ್ತುಪಡಿಸಿಕೊಂಡಿತು; ಅದೇ ಘೋರಣೆಯಿಂದ ಚೀನದ ಅಂತರಾಡಳಿತೆಯಲ್ಲಿ ಕೈ ಹಾಕಲಾರೆನೆಂದು ಚಿಯಾಂಗ್ ಕೈಶೇಕರಿಗೆ ಅಶ್ವಾಸನೆ ಕೊಟ್ಟು ಚೀನೀ ಕಮ್ಯೂನಿಸ್ಟರ ಕೈ ಬಿಟ್ಟಿತು. ರಶ್ಯದ ಘೋರಣೆಯೂ ಇದೇ:-ಎಲ್ಲಕ್ಕಿಂತ ಪ್ರಥಮವಾಗಿ ರಾಷ್ಟ್ರಹಿತ; ಸ್ವರಾಷ್ಟ್ರದ ಲಾಭ ಸಾಧನೆ. ಭಾರತಕ್ಕಿಂತೂ ಸ್ವಾತಂತ್ರ್ಯ ಸಾಧನೆಯೇ ಬಾಕಿಯಿನೆ. ಕಾಂಗ್ರೆಸ್ ಆ ಸ್ವಾತಂತ್ರ್ಯ ಸಾಧನೆಯನ್ನೇ ತನ್ನ ಮೊದಲ ಗುರಿಯಾಗಿ-ಅಥವಾ ಅದನ್ನೇ ಸರ್ವಸ್ವವಾಗಿ-ಗಣಿಸಿದೆ. ಭಾರತ ಸ್ವತಂತ್ರವಾದ ದಿನವೇ ಕಾಂಗ್ರೆಸಿನ ಅವತಾರ ವಿಜಯ ಪರ್ಯವಸಾನಗೊಳ್ಳುವ ದಿನ. ಸಿಮ್ಲಾ ಸಮ್ಮೇಲನ ಜಯಶೀಲಗೊಂಡಲ್ಲಿ ಕಾಂಗ್ರೆಸನ್ನು ವಿಸರ್ಜಿಸುವದು ಬೇಡವೇ-ಎಂಬ ಪ್ರಶ್ನೆ ಸಿಮ್ಲದಲ್ಲೇ ಕಾಂಗ್ರೆಸ್ ಕವಿ ಟಿಯು ಮುಂದೆಬಂದಿತ್ತು. ಸ್ವಾತಂತ್ರ್ಯಕ್ಕೆ ತನ್ನ ಸ್ಥಾನವನ್ನು ಬಿಟ್ಟುಕೊಟ್ಟು ಕಾಂಗ್ರೆಸು ಬರ್ಖಾಸ್ತಾಗಲಿದೆ. ಆ ಮುಹೂರ್ತದಿಂದ ರಾಜ್ಯ ಸೂತ್ರವು ಸಹಜವಾಗಿ ಜನತೆಯ ಕೈಗೆ-ಜನಸಾಮಾನ್ಯರ ಹಿತಾಭಿಲಾಷೀ ಸಮಾಜವಾದಿಗಳಕೈಗೆ-ಬರಲಿದೆ 'ನಾನೇ ಜನತೆ' ಯೆಂದು ಕಾಂಗ್ರೆಸುಮುಖ್ಯರ ಹಿಡಿದುನಾಳಿಯೂ ನಿಲ್ಲುವಂತಿಲ್ಲ. ಭಾರತಕ್ಕೊಗ್ಗದ ದುರ್ಬಲ ರಾಜಕೀಯ ನೀತಿಯ ಕಮ್ಯೂನಿಸ್ಟರು 'ನಾನೇ ಸ್ವಾತಂತ್ರ್ಯ ಸಾಧಕರು'ಎಂದು ಈ ದಿನ ಕಾಂಗ್ರೆಸನ್ನು ತಂಕಿಸಬಹುದು. ಸ್ವಾತಂತ್ರ್ಯ ವಿನಹಾ ಸಮಾಜವಾದವಿಲ್ಲ; ಸ್ವಾತಂತ್ರ್ಯಸಾಧನೆಗೆ ಭಂಗವೊಡ್ಡಿ, ಸಮಾಜದ್ರೋಹಿಗಳಾಗಿ, ಕಮ್ಯೂನಿಸ್ಟರು ತಮ್ಮ ತತ್ವಕ್ಕೆ ತಾವೇ ಬಿಸಿನೀರಿಕೆದುಹೊಳ್ಳುವದು ಅಪ್ಯಹಾತುಕವೆನ್ನುತ್ತೇವೆ.

ಅಖಿಲ ಭಾರತೀಯ ಆಯುರ್ವೇದ ಸಮ್ಮೇಲನದ 34ನೇ ಅಧಿವೇಶನ

ಅಖಿಲ ಭಾರತೀಯ ಆಯುರ್ವೇದ ಸಮ್ಮೇಲನದ 34ನೇ ಅಧಿವೇಶನದ ಸ್ವಾಗತ ಸಮಿತಿಯ ಕಾರ್ಯಕಾರೀ ಮಂಡಲದ ಸಭೆಯು ತಾ. 30-9-45ರಲ್ಲು ಮಂಗಳೂರಲ್ಲಿ ಶಂಕರ ವಿಲಾಸ ಮೋಟರ ಕಂಪೆನಿಯ ಆಫೀಸಿನಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ನಿರ್ಣಯಗಳನ್ನು ಮಾಡಲ್ಪಟ್ಟಿತು. ಜಿಲ್ಲಾ ಕಲೆಕ್ಟರರನ್ನು ಸಂದರ್ಶಿಸಿದಲ್ಲಿ ಅವರು ಕೊಟ್ಟ ಸೂಚನೆ ಪ್ರಕಾರ ಅಧಿವೇಶನವನ್ನು ಇದೇ ದಶಂಬರ ತಾ. 28, 29, 30 ಮತ್ತು 31ರಲ್ಲು ಉಡುಪಿಯ ಮಣಿಪಾಲದಲ್ಲಿ ಜರಗಿಸುವು ದೆಂದಾಯಿತು. ಪ್ರದರ್ಶನದ ಉದ್ಘಾಟನ ಸಮಾರಂಭವನ್ನು Capt. Srinivasa Murthy B. A., B. L., M B, C. M., ಇವರಿಂದ ನೆರವೇರಿಸಬೇಕಾಗಿ ನಿಶ್ಚೈಸಲಾಯಿತು. ಅವರನ್ನು ಕೇಳಿಕೊಂಡು ಆನುಮತಿ ಪಡಕೊಳ್ಳುವರೆ ಆಯುರ್ವೇದ ಭೂಷಣ M. V. Shastri ಗಳಿಗೆನೇ ಅಧಿಕಾರ ಕೊಡಲ್ಪಟ್ಟಿತು. ಯೋಗ ನ್ಯಾಯಮೀಮಾಂಸಾ ಸಂಭಾಷಾ ಪರಿಷತ್ತು-ಅಧ್ಯಕ್ಷ Dr. A. Laxmipathy, B.A.,M.B.,C.M., ಇವರನ್ನು ನಿಶ್ಚೈಸಲ್ಪಟ್ಟಿತು. ಇವರನ್ನು ಕೇಳಿಕೊಂಡು ಇವರ ಒಪ್ಪಿಗೆಯನ್ನು ಪಡಕೊಳ್ಳುವರೆ ಶ್ರೀ. M. V. ಶಾಸ್ತ್ರಿಗಳಿಗೆ ಅಧಿಕಾರವನ್ನು ಕೊಡಲಾಯಿತು. ಇದರ ವ್ಯವಸ್ಥಾಪಕತನ್ನಾಗಿ M. S. Sharma ಇವರನ್ನು ನೇಮಿಸಲ್ಪಟ್ಟಿತು. ಕಾಮಾರ ಭೃತ್ಯ ಸಂಭಾಷಾ ಪರಿಷತ್ತು-ಅಧ್ಯಕ್ಷ Dr. ಸುಬ್ರಾಯ ಜ್ಯಾ ತಾರಾನಾಥ B. A., ವೈದ್ಯ ಗುರು. ಕಾರ್ಯ ಚಿಕಿತ್ಸಾ ಸಂಭಾಷಾ ಪರಿಷತ್ತು-ಅಧ್ಯಕ್ಷ ವೈದ್ಯ ಗುರು R. K. Valvekar, ಶಲ್ಯ ತಂತ್ರ ಶಾಲಾಕ್ಯ ತಂತ್ರ ಸಂಭಾಷಾ ಪರಿಷತ್ತು-ಅಧ್ಯಕ್ಷ Dr. N. S. Subramanya Shastri, Ayurveda & L. M. P., Nysore. ಅಖಿಲ ಭಾರತೀಯ ವಿಸಿಧ ಶಾಲಾ ಸಂಚಾಲಕರ ಪರಿಷತ್ತು-ಅಧ್ಯಕ್ಷ Dr. Y. Lsxminarasimha Shastri. ಆಯುರ್ವೇದ ದರ್ಶನ ಸಂಭಾಷಾ ಪರಿಷತ್ತು-ಅಧ್ಯಕ್ಷ B. V. Nanjunda Swamy Sadvaidya Shala, Nanjangud ಇವರನ್ನು ನಿಶ್ಚೈಸಲ್ಪಟ್ಟಿತು. ಬಾಕಿ ಉಪಾಧಿಗಳ ಪರಿಷತ್ತುಗಳನ್ನು ಅಧ್ಯಕ್ಷರ ಚುನಾವಣೆ ಇತ್ಯಾದಿಗಳನ್ನು ಮಾಡುವ ಅಗತ್ಯವಿದ್ದಲ್ಲಿ, ಕಾರ್ಯದರ್ಶಿಯು ತ್ತು ಅಧ್ಯಕ್ಷರಿಗೆ ಅಧಿಕಾರವನ್ನು ಕೊಡಲ್ಪಟ್ಟಿತು. ಈ ಸ್ವಾಗತ ಸಮಿತಿಗೆ ಖರ್ಚಿಗೆ ಬೇಕಾದ ಹಣವನ್ನು ಜೊತೆ ಕಾರ್ಯದರ್ಶಿಗಳಾದ ಶ್ರೀ. ಯು. ಎ. ಪೈಗಳವರು ಬೇಂಕಿನಿಂದ ಕೋಶಾಧ್ಯಕ್ಷರ ನಮೂಲಕ ತಂದು ಕೃಮವಾಗಿ ಲೆಕ್ಕಪಟ್ಟು ಬರ್ಖಾಸ್ತು ಮಾಡುವರೆ ಪೂರ್ಣ ಅಧಿಕಾರ ಕೊಡಲ್ಪಟ್ಟಿತು. ಸ್ವಾಗತ ಸಮಿತಿಯ ಆಫೀಸನ್ನು ಮಂಗಳೂರಿನಿಂದ ಉಡುಪಿಯಲ್ಲಿರುವ ನುಹಾರಾಸ್ಪ ಎಜೆಕ್ಸ್ ಬೇಂಕಿನ ಮೆನೇಜಿಂಗ್ ಪೈರೆಕ್ಟರಾದ ಶ್ರೀ. ಯು. ಎ. ಪೈಗಳಲ್ಲಿ ಇದೇ ತಾ 1-10-45ರ ವಳಗೆ ವರ್ಗಾಯಿಸಕ್ಕಟ್ಟೆಂದು ನಿರ್ಣಯಿಸಲ್ಪಟ್ಟಿತು. ಈ ಸಮಿತಿಗೆ ಅಗತ್ಯವುಳ್ಳ ಆಯವ್ಯಯದಪತ್ರವನ್ನು ಇಡಲಿಕ್ಕೆ ನ್ಯಸ್ಥೆ ಮಾಡಲು ಶ್ರೀ. ಯು. ಎ. ಪೈ ಯವರಿಗೆ ಅಧಿಕಾರವನ್ನು ಕೊಡಲ್ಪಟ್ಟಿತು.

ಸೂಚನೆ:-ಇದರ ಸಲುವಾದ ಯಾವತ್ತೂ ಪತ್ರವ್ಯವಹಾರವನ್ನು ಶ್ರೀ. ಯು. ಎ. ಪೈ. ಜತೆ ಕಾರ್ಯದರ್ಶಿ, ಮಣಿಪಾಲ, ಉಡುಪಿ ಇವರಿಗೆ ಮಾಡತಕ್ಕದ್ದು.

ಅಂತರ್ರಾಷ್ಟ್ರೀಯ ಅತೃಪ್ತಿ, ಅಶಾಂತಿ!

ಜಾಪಾನ್ ಮಂತ್ರಿಮಂಡಲದ ರಾಜೀನಾಮೆ

'ನನ್ನ ಮಂತ್ರಿಮಂಡಲ ಮತ್ತು ನಾನು ನಮ್ಮ ಕೆಲಸವನ್ನು ಮಾಡಿ ಮುಗಿಸಿದಂತಾಯಿತೆಂದು ನೆನೆಸುತ್ತೇನೆ' ಎನ್ನುತ್ತಾ ಜಾಪಾನಿನ ಪ್ರಧಾನ ಮಂತ್ರಿ ಪ್ರಿನ್ಸ್ ಹಿಗಾಶಿ ಕುನಿಯವರು ತನ್ನ ಮಂಡಲ ಸಮೇತ ತಾ. ೪ರಲ್ಲಿ ಚಕ್ರವರ್ತಿಗಳಿಗೆ ರಾಜೀನಾಮೆಯಿತ್ತಿದ್ದಾರೆ. ಚಕ್ರವರ್ತಿಗಳಿಂದ ಬೇರೊನ್ನಾಕಿಡೆ ಹಂತಾರವರು ಪ್ರಧಾನಿಯಾಗಿ ನೇಮಕಗೊಂಡು ಹೊಸ ಮಂತ್ರಿಮಂಡಲ ರಚಿಸಿದ್ದಾರೆ. ಈ ರಾಜೀನಾಮೆಯಿಂದಾಗಿ ಜಾಪಾನಿನ ಜನತೆ ಕ್ಷೋಭೆಗೊಂಡಿದೆ. 'ಜನರಲ್ ಮೇಕರ್ಥರರು ನಮ್ಮ ಸರ್ವಾಧಿಕಾರಿಯಾಗಿದ್ದಾರೆ. ಪೋಟ್ಸ್‌ಡಾಮ್ ಶರ್ತಗಳಲ್ಲಿದ್ದ ಸಂಧಾನಾಂಶವೆಲ್ಲಾ ಮಾಯವಾಗಿದೆ ನಾವಿಂದು ಪೂರ್ಣ ಸೋತವರು; ಮೇಕರ್ಥರರ ಅಂಕೆಯೊಳಗಿರುವವರು' ಎಂದು ಜಾಪಾನು ತುಂಬಾ ಅವೇಗವೆದ್ದಿದೆ. ಹೊಸ ಪ್ರಧಾನ ಮಂತ್ರಿ 73 ವರುಷ ಪ್ರಾಯದವರು; ಮೊದಲಿನಿಂದಲೂ ಇಂಗ್ಲಾಂಡು, ಬ್ರಿಟನ್, ರಶ್ಯಾ, ಚೀನದೊಡನೆ ಮೈತ್ರಿಯಿಂದಿರಬೇಕೆಂದು ವಾದಿಸುತ್ತಿದ್ದವರು 'ಪ್ರಜಾಸತ್ತಾತ್ಮಕ ಕಾರ್ಯಕ್ರಮಗಳನ್ನು ಅನ ಸಂಸಿ, ಮಿತ್ರ ರಾಷ್ಟ್ರಗಳ ಪೂರ್ಣ ಸಹಕಾರ ಪಡೆದು ಜಾಪಾನಿನ ಅಭಿವೃದ್ಧಿ ಸಾಧಿಸುವದೇ ತಮ್ಮ 'ಧ್ಯೇಯ'ವೆಂದು ನೂತನ ಪ್ರಧಾನ ಮಂತ್ರಿಯಂದಿದ್ದಾರೆ.

ಮೇಕರ್ಥರರ ಸರ್ವಾಧಿಕಾರಿತ್ವ?

ಅಮೇರಿಕನರಿಂದ ಅಳುಕು ಹೃದಯ ಯೆಂಬ ದೂರು ಕೇಳುತಿದ್ದ ಮೇಕರ್ಥರರು ಜಾಪಾನಿನ ಆಡಳಿತೆಯೊಳಗೆ ನಿರಂಕುಶ ಅಧಿಕಾರ ಚಲನೆಗೆ ಹತ್ತಿದುದೇ ಹಿಗಾಶಿ ಮಂಡಲದ ರಾಜೀನಾಮೆಗೆ ಕಾರಣವೆಂದು ತಿಳಿದುಬರುತ್ತದೆ. ಜಾಪಾನಿನ ಎಲ್ಲಾ ಪೋಲೀಸ್ ಆಫೀಸರರನ್ನೂ ಮೇಕರ್ಥರರು ಸ್ವೇಚ್ಛೆಯಿಂದ ಡಿಸ್‌ಮಿಸ್ ಮಾಡಿದ್ದಾರೆ. ಜಾಪಾನಿನಲ್ಲಿದು ಬೆಳೆ ಕಟುವಿನ ಕಾಲ. ಧಾನ್ಯ ನಿತರಣೆಯ ಅಧಿಕಾರಿಗಳಾಗಿದ್ದ ಪೋಲಿಸ್ ಆಫೀಸರರನ್ನು ಈ ಕಾಲದಲ್ಲೇ ಮೇಕರ್ಥರರು ದುರುದ್ದೇಶದಿಂದ ರದ್ದು ಪಡಿಸಿದರೆಂದು ಜಾಪಾನ್ಲಿ ತಳಮಳವೆದ್ದಿದೆ. ಎಲ್ಲಕ್ಕಿಂತ ಮುಖ್ಯವಾಗಿ ಚಕ್ರವರ್ತಿಗಳನ್ನು ವಿಚಾರಿಸುವ ಅಧಿಕಾರ ಜಪಾನ್ ಜನತೆಗಿದೆ ಎಂಬ ಮೇಕರ್ಥರರ ಆಜ್ಞೆಯು ಎಲ್ಲರಲ್ಲೂ ಉದ್ವೇಗವನ್ನೆಬ್ಬಿಸಿದೆ. ರಾಜವಂಶಕ್ಕೆ ಸೇರಿದ ಹಿಗಾಶಿ ಕುನಿಯವರಿಗೆ ಇದು ತೀಣ ಅಸಹನೀಯವಾಗಿ ಅವರು ರಾಜೀನಾಮೆಯಿತ್ತರು. ಮತ್ತೊಂದು ಮುಖ್ಯ ಕಾರಣವೆಂದರೆ ಜಾಪಾನಿನ ಗೃಹಮಂತ್ರಿಯಾಗಿದ್ದ ಇವಾಪೋ ಯಮಮುರಾಕೆಯನ್ನು ಮೇಕರ್ಥರರು ತಳ್ಳಿಹಾಕಿದುದು. ಯಾಮಮುರಾಕೆಯವರು ಜಾಪಾನಿನಲ್ಲಿ ಪ್ರಚಲಿತವಾಗಿದ್ದ 'ಯೋಜನಾ ನಿಯಂತ್ರಣ'ವನ್ನು ಉಳಿಸಿಕೊಳ್ಳುವ ಹಾಗೂ ಕಮ್ಯೂನಿಸ್ಟರನ್ನು ದಸ್ತಗಿಮಾಡುವ ತನ್ನ ಧೋರಣೆಯನ್ನು ಘೋಷಿಸಿದುದರಿಂದಲೇ ಪದವಿಯಿಂದುರುಳಬೇಕಾಯಿತು.

ಜಾವಾ, ಇಂಡೋ ಚೈನಾದ ಸ್ವಾತಂತ್ರ್ಯ ಹೋರಾಟ

ಪರಕೀಯವಾದ ಡಚ್ ಆಳ್ವಿಕೆಯ ವಿರುದ್ಧವಾಗಿ ಜಾವಾದ ರಾಷ್ಟ್ರಭಿಮಾನಿಗಳು ಎಬ್ಬಿಸಿರುವ ಹೋರಾಟವು ಅತ್ಯುಗ್ರವಾಗಿ ಸಾಗಿದೆ. ಡಚ್ಚರಿಗೆ ಸಹಾಯವಾಗಿ ಬ್ರಿಟಿಷ್ ಸೇನೆಗಳು ರಾಷ್ಟ್ರಾಭಿಮಾನಿಗಳ ಮೇಲೇರಿ ಹೋಗುತ್ತಿವೆ. ಡಾಕ್ಟರ್ ಸೋಯಿಕರ್ನೋರವರ ನಾಯಕತ್ವದಲ್ಲಿ ರಾಷ್ಟ್ರೀಯ ಇಂಡೋನೇಸಿಯನ್ ಸರಕಾರ ಸ್ಥಾಪಿಸಲ್ಪಟ್ಟದ್ದು ಇಡೀ ಜಾವಾದಲ್ಲಿ ಅದರ ವರ್ಚಸ್ಸೇ ಬಿದ್ದಿದೆ ಸೋಯಿಕರ್ನೋರ ಚಳವಳವು ಮೂಲೆ ಮೂಲೆಗಳಲ್ಲೂ ಸುಸಂಘಟನೆ ಹೊಂದಿ ಸುರಬಾಯ ಮೊದಲಾದ ಪ್ರಾಮುಖ್ಯ ನಾವಿಕ ನಿಲ್ದಾಣಗಳನ್ನೂ ಇತರ ಪ್ರಾಮುಖ್ಯ ಸ್ಥಳಗಳನ್ನೂ ಅಕ್ರಮಿಸಿಕೊಂಡಿದೆ. ಈಗ ರಾಷ್ಟ್ರೀಯ ಇಂಡೋನೇಸಿಯಾದೊಂದಿಗೆ ಸಂಧಾನ ಮಾತುಕತೆ ಹೂಡಲು ಡಚ್ ರಾಯಭಾರಿಗಳು ಹೊಂಟಿದ್ದಾರೆ. ಇಂಡೋ ಚೈನಾದ ಸ್ವಾತಂತ್ರ್ಯಕ್ಕಾಗಿ ಫ್ರೆಂಚ್ ವಿರುದ್ಧ ಹೋರಾಟ ಹೂಡಿರುವ ದೇಶಾಭಿಮಾನಿ ಪಕ್ಷದೊಡನೆಯೂ ಸಂಧಾನ ಮಾತುಕತೆ ಗಾರಂಭವಾಗಿದೆ. ಅಲ್ಲಿಯ ರಾಜಧಾನಿ ಸೈಗಾನಿನಲ್ಲೀಗ ಮಾತುಕತೆ ನಡೆದಿದೆ. ಮಾತುಕತೆ ಜಯಶೀಲವಾಗದಿದ್ದಲ್ಲಿ ದೇಶಾಭಿಮಾನಿಗಳು ದೊಡಿಟ್ಟು ಸೈಗಾನಿನಲ್ಲಿರುವ 200000 ಯುರೋಪಿಯಾನರಿಗಪಾಯವುಂಟಾಗುವ ಸಂಭವವಿದೆ. ಜಾವಾ ಮತ್ತು ಇಂಡೋ ಚೀನಗಳಲ್ಲಿ, ಡಚ್ ಮತ್ತು ಫ್ರೆಂಚ್ ಸಾಮ್ರಾಜ್ಯನಾದಿಗಳಿಗೆ ಸಹಾಯಕವಾಗಿ ಬ್ರಿಟಿಷ್ ಸೇನೆಗಳು ಹೋಗಿರುವೆಯಲ್ಲದೆ ಬ್ರಿಟನರು ತಮ್ಮ ವಿರೋಧಿ ಜಾಪಾನೀ ಸೇನೆಗಳನ್ನೂ ಹೊಗಿಸಿ, ಅವರ ಸಾಹಸಗಳನ್ನು ಶ್ಲಾಘಿಸುತಿದ್ದಾರೆ. ಇಂಡೋ ಚೀನದ ಸ್ವತಂತ್ರ್ಯವಾದಿಗಳ ಕತೆಗಳಲ್ಲೂ ಜಾಪಾನರಿದ್ದಾರೆ.

ನೆಹರುಗಳಿಗೆ ಸೋಯಿಕರ್ನೋರ ಆಮಂತ್ರಣ.

ಜಾವಾದಲ್ಲಿ ಸ್ವಾತಂತ್ರ್ಯ ಹೋರಾಟ ನಿರತವಾಗಿರುವ ರಾಷ್ಟ್ರೀಯ ಸರಕಾರದ ನಾಯಕ ಸೋಯಿಕರ್ನೋರವರು ಜಾವಾದ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ಹೋಗಬೇಕೆಂದು ಪಂಡಿತ ನೆಹರು, ಮೇಡಮ್ ಚಿಯಾಂಗ್ ಕೈಶೇಕ್, ಆಸ್ಟ್ರೇಲಿಯದ ಹರ್ಬರ್ಟ್ ಎವಟ್ ಮತ್ತು ಪಿಲಿಪ್ಪೈನುಗಳ ಕಾರ್ಲೋಸ್ ರೋಮುಲೊರನ್ನು ಆಮಂತ್ರಿಸಿದ್ದಾರೆ. ಪಂಡಿತ ನೆಹರುಗಳ ವಿಷಯವಾಗಿ "ಅವರು ಹಿಂದುಸ್ಥಾನದ ಅತ್ಯುತ್ತಮ ಜಾಗೂ ಅತ್ಯುಜ್ವಲ ಪುತ್ರರಲ್ಲೊಬ್ಬರಷ್ಟೇ ಅಲ್ಲ–ಈ ತಲೆಮಾರಿನಲ್ಲಿ ಅನ್ಯ ಪಡೆದ ಮಹಾ ಪುತ್ರರಲ್ಲೊಬ್ಬರು–ಮಾತ್ರವೆಲ್ಲ––ಭಾವೀ ಜಗತ್ತಿನ ಸುಖಮಯ ಮಾದರಿಯನ್ನು ನಿರ್ಮಿಸಲ್ಲಿ [illegible] ಮತ್ತು ಶಾಂತಿಗಾಗಿ ಅಮೋಘ ಸೇವೆ ಸಲ್ಲಿಸಿರುವ ಓರ್ವ ಮಹಾವಿಭೂತಿಯೂ ಹೌದು" ಎಂದು ಸೋಯಿ ಕರ್ನೋ ನುಡಿದಿದ್ದಾರೆ. ಜಾವಾದ ದೇಶಾಭಿಮಾನಿಗಳ ವಿರುದ್ಧವಾಗಿ ಇಂದೀ ಸೋಲ್ಜರ್‌ರನ್ನು ಉಪಯೋಗಿಸದಂತೆ ನೆಹರುಗಳುಮಾಡಿಕೊಂಡ ವಿನಂತಿಯನ್ನು ಅಲ್ಲಿಯ ಭಾರತೀಯ ಸೇನೆಗಳ ನಡುವೆ ಹಂಚಲಾಗದೆ. ಪೆಲಸ್ತೈನಿನಲ್ಲಿ ಯೆಹೂದಿಯರನ್ನು ಹೊಗಿಸಿವ ಬ್ರಿಟಿಷ್ ಅಮೇರಿಕಗಳ ಯೋಜನೆಗೆ ಅಲ್ಲಿಯ ಅರಬರು ಬದ್ಧ ವಿರೋಧಿಗಳಾಗಿ ಇತ್ತರಲ್ಲೇ ಘರ್ಷಣೆಗಳು ನಡೆಯಲಾರಂಭಿಸಿವೆ ಗಡಿಯೊಂದೆಡೆ ನುಗ್ಗಿ ಬಂದ ಯೆಹೂದಿಗಳಿಗೂ ಪೋಲಿಸರಿಗೂ ಶಿಕ್ಕಾಟಗಳಾಗಿವೆ

ಪಂಚರಾಷ್ಟ್ರ ಸಮ್ಮೇಳನದ ಪರಾಭವ.

ಲಂಡನಿನಲ್ಲಿ ಸೇರಿದ ಪಂಚರಾಷ್ಟ್ರೀಯ ವಿದೇಶೀ ಸಮ್ಮೇಲನವು ಯಾವ ನಿರ್ಧಾರವನ್ನೂ ಮಾಡದೆ ಪೂರ್ಣ ಪರಾಭವಗೊಂಡು ಚದರಿದ ಮೇಲೆ, ಸಂಧಾನವು ಮುಂದುವರಿಯಲಿದೆ ಎಂಬ ಆಶ್ವಾಸನೆಗಳು ಬರುತಿದ್ದರೂ ಇಂಗ್ಲಾಂಡ್, ಅಮೇರಿಕ ಮತ್ತು ರಶ್ಯಗಳೊಳಗೆ ಮೂಲಭೂತ ಭಿನ್ನಾಭಿಪ್ರಾಯವಿದೆ ಶರಣು ಕಾರಿಗೆ ಸಹಾಯಕೆದ ರಾಷ್ಟ್ರಗಳೇ ಆಯಾಯಾ ರಾಷ್ಟ್ರಗಳ ಮೇಲ್ವಿನಪೇ ದಾಖಲೆ ತಯಾರಿಸಬೇಕೆಂದು ರಶ್ಯದ—ಮಿತ್ರ ಪಾಳಯದೊಳಗಿನ ಎಲ್ಲಾ ರಾಷ್ಟ್ರಗಳಿಗೂ ಆ ಹಕ್ಕಿರಬೇಕೆಂದು ಅಮೇರಿಕದ ದೃಢಾಭಿಪ್ರಾಯಗಳು! ಬಾಲ್ಕನ್ ರಾಷ್ಟ್ರ ಸಂಬಂಧದ ವ್ಯವಸ್ಥೆಗೆ ಚೀನಾ ಫ್ರಾನ್ಸುಗಳು ಸೇರುವದನ್ನು ರಶ್ಯವು ಕಂಠೋಕ್ತವಾಗಿ ವಿರೋಧಿಸಿತು. ಆಪಜಯದ ಹೊಣೆಗಾರಿಕೆಯನ್ನು ಒಬ್ಬರಿನ್ನೊಬ್ಬರ ಮೇಲೆ ಹೇರುತಿದ್ದಾರೆ. ವಿದೇಶೀ ಸಮ್ಮೇಲನದಲ್ಲಿ ಮೊಲಟೆವರ ಸೂಚನೆಯನ್ನು 'ಇದು ಹುಟ್ಟಾರವೆ' ಎಂದು ಬ್ರಿಟಿಷ್ ವಿದೇಶ ಮಂತ್ರಿ ಬೆವಿನರು ಟೀಕಿಸಿದ್ದರಿಂದ ಮೊಲಟವರು ರೇಗಿ, ಸಭಾತ್ಯಾಗ ಮಾಡಲೆದ್ದರೆಂದೂ, ಬೆವಿನರು ಕೊನೆಗಾ ಮಾತನ್ನು ಓಂದೆಗೆದುಕೊಳ್ಳಬೇಕಾಯಿತೆಂದೂ ತಿಳಿದುಬರುತ್ತದೆ. ಅಲ್ಲಿ ರಶ್ಯನ್ ಪ್ರತಿನಿಧಿಗಳು ಅಪ್ರಾಗತಿಕ ಬ್ರಿಟಿಷ್ ವಿದೇಶ ಮಂತ್ರಿ ಮಿ. ಈಡೆನರಬೇಕಿತ್ತೆಂದು ಬಯಸಿದುದು ಮಿ. ಬೆವಿನರಿಗೆ ಅಸಹ್ಯವಾಯತಂತೆ.

ಮುಂದೇನು?

ಆಕ್ಸಿಸ್ ವಿರುದ್ಧ ಯುದ್ಧಕ್ಕೆ ಸೇನಾ ಸಹಾಯ ಸಲ್ಲಿಸಿದ ಎಲ್ಲಾ ಯುರೋಪಿಯನ್ ಮತ್ತು ಇತರ ರಾಷ್ಟ್ರಗಳನ್ನೊಳಗೊಂಡ ಒಂದು ಯುರೋಪಿಯನ್ ಶಾಂತಿ ಸಮ್ಮೇಲನ ಜರಗಿಸಬೇಕೆಂದು ಅಮೇರಿಕದ ಸ್ಟೇಟ್ ಸೆಕ್ರೆಟರಿ ಮಿ. ಜೇಮ್ಸ್ ಬೈರ್ನೆಸರ ಹೊಸ ಸೂಚನೆ. ಇದಕ್ಕೆ ರಶ್ಯವೊಪ್ಪದೆ ಮರುಸೂಚನೆಯಿತ್ತಿದೆ. ಫ್ರಿಸ್ಕೋ ಸಮ್ಮೇಲನದಲ್ಲಾದ 'ರಕ್ಷಣಾ ಸಮಿತಿ'ಯ ಧೋರಣೆಗಳನ್ನು ನಿರೂಪಿಸಲು ಬ್ರಿಟನ್, ಅಮೇರಿಕ, ರಶ್ಯಗಳ ಮಿಲಿಟರಿ ದಳವನ್ನು ಜೋಡಿಸಿ ಆ ಮೂಲಕ ಜಾಗತಿಕ ವ್ಯವಸ್ಥೆಯನ್ನು ನೋಡತಕ್ಕದ್ದೆಂಬೀ ರಶ್ಯದ ಸೂಚನೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 8—10—1945ರಿಂದ

ಮಿನರ್ವಾ ಚಿತ್ರದವರ

ಪೃಥ್ವಿರಾಜ್, ವನಮಾಲಾ, ಕೋರಾಜ್ ಮೋಡಿ,

ಮೀನಾ, ಶೀಲಾ ಮೊದಲಾದವರು ನಟಿಸಿರುವ

ಸಿಕಂದರ್

ಆನಂತರ:—

ಬನ್ ಸಾರಿ.

'ಅಪಾಯಕ್ಕೊಂದು ಹೆಜ್ಜೆಲೆ' (Back Ground to Danger.) ಇತ್ಯಾದಿ.

ESTD. 1926

CROWN RUBBER STAMP Co

MFRS OF

RUBBER STAMPS & ENGRAVERS

BALMATTA ROAD MANGALORE S.K

Approved firm by the Govt of Mysore. Certified by the Agent of the Govt. of India in Ceylon.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅನೋಳೆ ವಾವ ಮಧುರದ್ರವ ರಸಾಯನ** ಉಲ್ಬಣತೆಯಿಂದ ಬಹಪರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವನಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೯ ದಿನ್ನಾನ ತಾಪಾಟ್ಟಗಳು ಹೆಚ್ಚು ಕಡಿಮೆ ಅವಿವೇಸಗಳಿಗೆ ಬರುವವು. ಅಂದರೆ ಕೆಲವು ೪ ದಿವಸಗಳಲ್ಲಿ ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ದಕ್ಷಿಣ ಕನ್ನಡ.

ಕುಂದಾಪುರ:—ತಾಲೂಕು ಕಾಂಗ್ರೆಸ್ ಕಮಿಟಿಯ ನೇತೃತ್ವದಲ್ಲಿ 2-10-45ನೇ ಬೆಳಿಗ್ಗೆ 6 ಘಂಟೆಗೆ ಕಾಂಗ್ರೆಸ್ ಕೆಲಸಗಾರರು ಪ್ರಭಾತ ಫೇರಿ ಮಾಡಿ ಪಂಚಾಯತ ಬೋರ್ಡ್ ಆಫೀಸಿನ ಮುಂದುಗಡೆ ಮೈದಾನದಲ್ಲಿ ಧ್ವಜ ಪ್ರತಿಷ್ಠೆಯಾದ ನಂತರ ತಾಲೂಕಿನ ಕೆಲವು ಕಾಂಗ್ರೆಸ್ ಕೆಲಸಗಾರರು ಹಿಂದೀ ಪ್ರೇಮಿ ಮುಂದಲ ಆಫೀಸಿನಲ್ಲಿ ನೂಲುವುದರಲ್ಲಿ ಭಾಗ ವಹಿಸಿ ಸ್ವತಃ ನೂತನೂಲಿನ ಅಡಿಗಳನ್ನು ಗಾಂಧೀಜಿಯವರಿಗೆ ಕಾಣಿಕೆಯಾಗಿ ಒಪ್ಪಿಸಿದರು. ಸಾಯಂಕಾಲ 4 ಘಂಟೆಗೆ ಗಾಂಧೀಜಿಯವರ ಭಾವ ಚಿತ್ರದೊಂದಿಗೆ ಧ್ವಜಗಳ ಸಮೇತ ಪಟ್ಟಣದ ಎಲ್ಲಾ ರಸ್ತೆಗಳಲ್ಲಿಯೂ ಸಾರ್ವಜನಿಕ ಮೆರವಣಿಗೆಯಾಯಿತು. ಮೆರವಣಿಗೆ ಸಮಯದಲ್ಲಿ ಕುಂದಾಪುರ ವಿಜಯ ಕೇಸರಿ ಎನ್. ಜಿ. ಹೊಳ್ಳರು ಚೇಂಡ್ ವಾದ್ಯ ಮಾಡಿಸಿದರು. ಸಂಜೆ 6ಕ್ಕೆ ಸಾರ್ವಜನಿಕ ಸಭೆ ಶ್ರೀ ಎ. ವಿ. ಎಸ್. ಪೈಬ್ಬಾರ್. ಬಿ. ಎ. ಬಿ ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ ರಾಮಂಣ ಸೆಟ್ಟು, ಶ್ರೀ. ಬಿ. ಸುಬ್ಬಣ್ಣ ಸೆಟ್ಟು ಅಧ್ಯಕ್ಷ ಕುಂದಾಪುರ ತಾಲೋಕು ಕೊಂಗ್ರೆಸ್ ಕಮಿಟಿ, ಶ್ರೀ. ಕೆ. ದೊಡ್ಡಯ್ಯ ಹೆಬ್ಬಾರ್, ಶ್ರೀ. ಕೆ. ಆರ್. ಭಂಡಾರ್‌ಕರವರು ಗಾಂಧಿಜೀಯವರ ಜೀವನ ಚರಿತ್ರೆಯ ಕುರಿತು ಭಾಷಣಗಳನ್ನು ನೂಡಿದರು. ಅಧ್ಯಕ್ಷರು ಗಾಂಧಿಜೀಯವರ ಸತ್ಯ ಅಹಿಂಸಾ ತತ್ವಗಳ ಕುರಿತು ಭಾಷಣ ಮಾಡಿದರು. ತದನಂತರ ಶ್ರೀ. ಕೆ. ಮಹಾಬಲ ಸೆಟ್ಟು ಕುಂದಾಪುರ ತಾಲೋಕು ಕಾಂಗ್ರೆಸ್ ಕಮಿಟಿಯ ಪರವಾಗಿ ಕಾರ್ಯದರ್ಶಿಗಳು ಸಭೆಕರಿಗೂ ಅಧ್ಯಕ್ಷರಿಗೂ ವಂದನೆಗಳನ್ನು ಅರ್ಪಿಸಿದ ನಂತರ ಸಭೆಯು ಜಯಕಾರದೊಂದಿಗೆ ಕೊನೆಗೊಂಡಿತು.

ತಾ 3, 4, 5ರಲ್ಲಿ ಯಿವೇರೀತಿ ನಡೆಯಿತು. ತಾ 6ರಲ್ಲಿ ಗಾಂಧಿ ಮೈದಾನದಲ್ಲಿ ಮಹಾ ಜನಸಭೆಯು ಶ್ರೀ ಬಿ. ಸುಬ್ಬಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಹರಿಜನ ಸೇವಾ ಸಂಘದ ಪ್ರಚಾರಕರಾದ ಶ್ರೀ ಎನ್. ಎಸ್. ಕಿಲ್ಲೆಯವರು ಸ್ಫೂರ್ತಿಯುಕ್ತವಾದ ಭಾಷಣ ಮಾಡಿದರು ಹಿಂದೀಭಾಷೆಯಲ್ಲಿ ಓದುವುದು ಬರೆಯುವುದು, ಭಾಷಣಮಾಡುವುದು ಇತ್ಯಾದಿ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಶ್ರೀ ಕಿಲ್ಲೆಯವರೇ ಪಂಚದರು 1942 ರಲ್ಲಿ ಜೈಲಲ್ಲಿ ನಶ್ವರ ಶರೀರವನ್ನು ತ್ಯಜಿಸಿದ ಶ್ರೀ ಮಹಾಲಿಂಗನ ಶಾಯಿಗೆ ಆತನು ದೇಶಕ್ಕೆ ಸಲ್ಲಿಸಿದ ಸೇವೆಯ ಸ್ಮರಣಾರ್ಥವಾಗಿ ಜೈಯಲ್ಲಿ ಉತ್ತೀರ್ಣರಾದ ಶ್ರೀ ಕೆ. ರಾಮು ಕೃಷ್ಣ ನಾನಡರಿಗೆ ರೂಪ್ಯಾ 5/ ನಗದು ಬಹುಮಾನವೀಯಲಾಯಿತು. ಶ್ರೀ-ಮತಿ ಸುಶೀಲಾ ಬಾಯಿ ಸೈಯವರ ಆಕಾಲ ನಿಧನದ ಕುರಿತು ಸಂತಾಪ ಸೂಚಕ ನಿರ್ಣಯವಾಯಿತು. ನುಂದಿನ ವಿಧಾಯಕ ಕಾರ್ಯಕ್ರಮದ ಕುರಿತು ಶ್ರೀ ಬಿ. ಎಸ್. ಸೂರಪ್ಪಸೆಟ್ಟರು ಮಾತನಾಡಿದರು. ಬೈಂದೂರು, ಗಂಗೊಳ್ಳಿ, ಬಸ್ರೂರು ಮೊದಲಾದ ಕುಂದಾಪುರ ತಾಲೂಕಿನ ಇತರ ಸ್ಥಳಗಳಲ್ಲೂ ಗಾಂಧಿಜಯಂತಿ ಸಪ್ತಾಹವು ಯಶಸ್ವಿಯಾಗಿ ಆಚರಿಸಲಾಯಿತು.

ಕಾರ್ಕಳ:—ಕಾರ್ಕಳ ಪೋಸ್ಟ್ ಮಾಸ್ಟರ್ ಶ್ರೀ ಜಿ. ಲಕ್ಷ್ಮಯ್ಯನವರು ಸರ್ವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಯಿದೇ ತಾ 8 10 45ರಂದ ಕಾರ್ಕಳ ಪೋಸ್ಟಾಫೀಸಿನ ಟೆಲಿಗ್ರಾಫ್ ಶಾಖೆಯ ಕೆಲಸವು ಈ ಕೆಳಗೆ ನಮೂದಿಸಿದ ಹಾಗೆ ಆಚರಿಸ್ಪದುವುದು. ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ, ಆದಿತ್ಯವಾರ ಮತ್ತು ರಜಾ ದಿನ್ಸಗಳಲ್ಲಿ, 8ರಿಂದ 10 ಮತ್ತು 4ರಿಂದ 6.

ಕಟಪಾಡಿ:—ಇಲ್ಲಿಯ ಎಸ್. ವಿ. ಎಸ್. ಹೈಸ್ಕೂಲು ವರಾಂಡದಲ್ಲಿ ಕಾಪು, ಕೈಪುಂಜಾಲು, ಗುಡ್ಡೆ ಐ. ಇ. ಎಮ್. ಪಾಂಗಾಳ ಹಿರಿಯಡ್ಕ, ಕಟಪಾಡಿ ಎಸ್. ವಿ. ಎಸ್. ಶಾಲೆಗಳ ಸ್ಕೌಟ್ ದಳದವರು ಸೇರಿ ಹಿಂದುಸ್ಥಾನ್ ಸ್ಕೌಟ್ ದಿನವನ್ನು ತಾ 7 10. 45ರಂದು ಡಾ। ಕೆ. ಜಿ. ಕಿಣಿಯರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಜಿಲ್ಲಾ ಸಂಘಟನೆರು ಹಾಕಿಕೊಟ್ಟ ಕಾರ್ಯಕ್ರಮವಾರವಳಿಕೆ ಸ್ಕೌಟ್ ದಳದವರ ವಿವಿಧ ವಿನೋದಾವಳಿ ಪ್ರದರ್ಶನವಾಯಿತು. ಈ ಸಮಾರಂಭದಲ್ಲಿ ಭಾಗವಹಿಸಿದ ಸಾಧಾರಣ 200ಮಂದಿ ಸ್ಕೌಟುಗಳಿಗೆ ಊಟೋಪಹಾರದ ವಿರ್ವಹಣೆಯನ್ನು ಕಟಪಾಡಿ ಹೈಸ್ಕೂಲಿನ ಅಧಿಕಾರಿಗಳು ನೂಡಿದ್ದರು

ಉಡುಪಿ.

ಉಡುಪಿಯಲ್ಲಿ ಸಕ್ಕರೆ ಅಭಾವವೇ?—ಕಾಫಿ ಹೊಟೆಲ್‌ಗಳಲ್ಲಿ ಸರ್ವ ಸಾಧಾರಣ ಸಿಹಿ ತಿಂಡಿಗಳು ಪಿತಕರ ಕಾಫಿ, ಚಹಾಗಳೂ ದರಬಸ್ತುಗಳು ಸರಾಗವಾಗಿ ಸಿಗುವುದಿಲ್ಲ. ಸಾಕಷ್ಟು ಸಕ್ಕರೆ ಸಿಗದೆ ಹೋದರೆ ಯೋಗ್ಯ ಸುತ್ತು ಹಿತಕರ ರೀತಿಯಲ್ಲಿ ಪಾಸೀಯಗಳನ್ನು ಮಾಡಿ ಕೊಡುವುದುದರೂ ಹೇಗೆ ಎಂದೇ ಗ್ರಾಹಕರಿಗೆ ದೊರೆಯುತ್ತಿರುವ ಪದೇಪದೇ ಉತ್ತರ. ಬೆಲ್ಲವೂ ಬೆಳಕಿಗೆ ಬಾರದ ಈ ಬವನಗಳಲ್ಲಿ ಸಕ್ಕರೆಯೂ ಮೊರೆಯದೆ ಹೋಗಿ ಸರ್ಕಾರ ಹೊಂದಿಕೊಂಡಿರುವ ಮಹಾ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಜಿಲ್ಲಾಧಿಕಾರಿಗಳು ಗಮನಕೊಟ್ಟರೆ ಪರಿಸ್ಥಿತಿ ಸುಧಾರಿಸಲು ಶಕ್ಯವಿದೆಯೆನ್ನೆ.

ಅಕ್ಕಿ, ಭತ್ತ ದಿಪೊ—ಗಳಲ್ಲಿ ಕೆಲವೆನೆ ಅಲ್ಲಲ್ಲಿಯ ಪೋಸ್ತು ಮಾಸ್ತರರನ್ನು ನಿಜಂಟಿರಾಗಿ ನೇರಿಸಿದುದರಿಂದ ಅಕ್ಕಿ, ಭತ್ತ ಒಸ್ಪಿಸಲು ಬರುವವರಿಗೆ ತುಂಬಾ ಅನಾನುಕೂಲವಾಗಿದೆಯೆಂಬ ವಿಷಯ ಪತ್ರಿಕೆಗಳಲ್ಲಿ ಬಂದಿದ್ದು ನಮ್ಮ ಪತ್ರಕರ್ತರಿಗೆ ತಿಳಿದಿದೆ. ಅಂತೆಯೇ ಕಜ್ಜೂರು ಗ್ರಾಮದ ರಿಟೈಲ್ ರೇಶನ್ ಡಿಪೊದಲ್ಲಿ ಶನಿವಾರ ಮಧ್ಯಾಹ್ನ ಡಿಪೋ ವಿಜಂಟರು ಬಂದ ಜನರಿಗೆ ಅಕ್ಕಿ ಕೊಡಲು ನಿರಾಕರಿಸುತ್ತಿರುವುದರಿಂದ ಬಡವರಿಗೆ ತುಂಬಾ ಕಷ್ಟವಾಗುತ್ತಿದೆಯೆಂಬ ದೂರು ನಮ್ಮ ನಮ್ಮನೆಗೆ ಬಂದಿದೆ. ಸಂಬಂಧಪಟ್ಟ ಅಧಿಕಾರಿಗಳು ತೀವ್ರ ನಿಗಾ ಕೊಡಬೇಕಾಗಿದೆ.

ಮಜೂರು ಸಂಘಗಳ—ಪರವಾಗಿ ಸಾರ್ವಜನಿಕ ಸಭೆಯೊಂದು ಗಾಂಧೀ ಮೈದಾನದಲ್ಲಿ ಇದೇ ತಾ 7ನೇ ಆದಿತಾಪ್ಪ ಶ್ರೀ. ಎಂ. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸ್ ಮೋಟಾರ್ ಲೆಬರ್ ಸಂಘದ ಕಾರ್ಯದರ್ಶಿ ಶ್ರೀ. ದೊರೆಕಣ್ಣ, ಇವರು ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣವಿತ್ತರು.

ಗಾಂಧೀ ಜಯಂತಿ—ಸಂಬಂಧವಾಗಿ ಇದೇ ತಾ. 8ನೇ ಸುಂದಾಜಿನ ಪ್ರಭಾತ ಫೇರಿ ಧ್ವಜ ವಂದನೆಗಳಿಂದ್ದುವು. ಹರಿಜನ ವಿದ್ಯಾರ್ಥಿಗಳ ನಗರ ಸಂಕೀರ್ತನೆ, ಪಾನಗೂ ವಿತರಣೆ ಫಲಾಹಾರಗಳಾಯುವು. ಅಪರಾಹ್ನ ಗಾಂಧೀ ನ್ಯೂದಾನದಲ್ಲಿ ಶ್ರೀ. ಎನ್. ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಶ್ರೀಗಳಾದ ಯು. ಸಾಗಪ್ಪ ಕಾಮತ್, ಎಂ. ವಿ. ಹೆಗ್ಡೆ, ಬಿ. ವಿ. ಕಕ್ಕಿಲ್ಲಾಯ ಮತ್ತು ಶ್ರೀ. ಸಿ. ನುಂಜುನಾಥ ಸಾಯ್ಕರ ಭಾಷಣಗಳಾದುವು.

ನೇಕಾರ ಮತ್ತು ಬೀಡಿ: ಕೆಲಸಗಾರ ಸಂಘಗಳ ಆಶ್ರಯದಲ್ಲಿ ತಾ 9ನೇ ಆದಿತಾಪ್ಪ ರಥ ಬೀದಿಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ. ಬಿ. ವಿ. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ನೇರಿತು ಅಧ್ಯಕ್ಷರೂ ಶ್ರೀ. ದೊರೆಕಣ್ಣನವರೂ ಸದ್ಯದ ರಾಜಕೀಯ ಪರಿಸ್ಥಿತಿ, ಮುಂಬರುವ ಚುನಾವಣೆ, ಜಾತೀಯ ಐಕ್ಯತೆ ಮೊದಲಾದುವುಗಳ ಕುರಿತು ಸ್ಫೂರ್ತಿದಾಯಕ ಭಾಷಣಗಳನ್ನಿತ್ತರು.

ಕರ್ನಾಟಕ ಸಂಘದ ಆಶ್ರಯದಲ್ಲಿ ಸಾಹಿತ್ಯೋತ್ಸವವು—ತಾ 12ನೆ ರು ಕುಚಾರ ಆರಂಭವಾಗಿ ತಾ 15ರ ತನಕ ಬೋರ್ಡು ಹೈಸ್ಕೂಲ್ ಪೀಪಲ್ಸ್ ಹಾಲಿನಲ್ಲಿ ಜರಗುವುದು. ಸ್ಥಳೀಯ ಕಲಾ ಶಿಲ್ಪ-ಕೈಗಾರಿಕೆಗಳ ವಸ್ತು ಪ್ರದರ್ಶನ, ಶ್ರೀಗಳಾದ ಗುಡಿ ವೀಡು ಕೃಷ್ಣ ರಾವ್, ಅಲೂರು ವೆಂಕಟ್ರಾವ್, ಎಸ್. ಗೋವಿಂದ ಪೈ, ಕಡೆಂಗೋಡ್ಲು ಶಂಕರ ಭಟ್, ಕಟ್ಟಿ ವೇಣಾಚಾರ್ಯ, ಬಿ ಎಸ್. ಕುರಪಲ್ಲಿ, ಎಮ್. ಜಗರಪ್ಪ ಮೊದಲಾದವರ ಭಾಷಣಗಳ ಕಾರ್ಯಕ್ರಮವಾಯಿದೆ. ಕೊನೆಯ ದಿನ ಮಧ್ಯಾಹ್ನ ಅಖಿಲ ಕನ್ನಡ ನಾಡಿನ ಏಕೀಕರಣದ ಕುರಿತು ವಕ್ಷಣ ಕನ್ನಡದ ಜಿಲ್ಲಾ ಸಮ್ಮೇಳನವು ಜರಗಲಿರುವುದು. ಈ ಸಂಬಂಧ ಏಕೀಕರಣದ ನಾಯಕರಾದ ಶ್ರೀಯುತರು ಕೆ. ಬಿ ಜಿನರಾಜ ಹೆಗ್ಡೆ, ಕೆ.ಆರ್. ಕಾರಂತ್ ಮೊದಲಾದವರು ಬರಲಿರುವರು.

'ಪೀಪಲ್ಸ್ ಹಾಲ್' ಉದ್ಘಾಟನಾ ಸಮಾರಂಭ—ಊರಪರವೂರ ಮಹಾ ಜನರ ಉದಾರಾಶ್ರಯದಿಂದ ಕಟ್ಟಿಸಲ್ಪಟ್ಟ ಸ್ಥಳೀಯ ಬೋರ್ಡು ಹೈಸ್ಕೂಲಿನ 'ಪೀಪಲ್ಸ್ ಹಾಲ್' ಉದ್ಘಾಟನಾ ಸಮಾರಂಭವನ್ನು ತಾ 8ರಲ್ಲು ಸಂಜೆ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರು ನೆರವೇರಿಸಿದರು. ತನ್ನ ಮಾನನ ಹೆಸರಲ್ಲಿ ಈ ಹಾಲಿಗೆ ದಾನವಿತ್ತ ಇಲೆಕ್ಟ್ರಿಕ್ ಲ್ಯಾಟುಗಳನ್ನು ಡಾ। ಶ್ರೀಪಾದರಾಯರು ಬೆಳಗಿಸಿದರು. ಡಾ। ಸುಂದರರಾಮ ಪೈಗಳವರು ಕಟ್ಟಡ ಸಮಿತಿಯ ಪರವಾಗಿ ಸಂಸ್ಥಾಗತವನ್ನಿತ್ತರು. ಡಾ। ಮೂಧವ ಪೈಗಳವರು ಸಮಿತಿಯ ಪರವಾಗಿ ವರದಿಯನ್ನೊಪ್ಪಿಸಿದರು. ಇನ್ನು ಸಾಧಾರಣ ರೂಪಾಯಿ 6000। ಬೇಕಾಗಿದೆ ಎಂಬುದು ವರದಿಯಲ್ಲಿ ಸೂಚಿಸೋಣಾಗಿತ್ತು. ಸಮಾರಂಭಕ್ಕೆ ಜಯವನ್ನು ಕೋರಿ ಬಂದ ಪತ್ರಗಳನ್ನು ಶ್ರೀ. ಯು. ವೆಂಕಟ್ರಾಯರು ಓದಿದರು. ಶ್ರೀಗಳಾದ ಬಿ. ಶ್ಯಾಮರಾಯ ಸೆಟ್ಟಿ, ಸರ್ವೋತ್ತಮ ಶೆಣೈ, ಆರ್. ಆರ್. ಕುಂಜೂರು ಮೊದಲಾದವರು ಸಮಿತಿಯ ಪರವಾಗಿ ವರದಿಯನ್ನೊಪ್ಪಿಸಿದರು. ಶ್ರೀ ಪೈಗಳವರು ರೂಪ್ಯಾ 50 ಸಹಾಯ ಧನ ಕೊಡುವೆನಾಗಿ ತನ್ನ ಭಾಷಣದಲ್ಲಿ ಜಾಹೀರುಪಡಿಸಿದರು. ಮಿ। ಆರ್. ಹೆಸ್ಸಾಂಧೀಸ್, ಶಾಲಾ ಹೆಡ್ಮಾಸ್ತರ್ ಅವರು ಧನ್ಯವಾದಗಳನ್ನರ್ಪಿಸಿದರು. ತದನಂತರ ರಾತ್ರಿ ಬಾಲಿಕೆಯರಿಂದ ವಿವಿಧ ಚಟುವಟಿಕೆಗಳ ಪ್ರದರ್ಶನ ನಡೆಯಿತು. ಶಾಲಾ ಸಹಾಯಕ ಉಪಾಧ್ಯಾಯರುಗಳಾದ ಶ್ರೀಯುತರು ಕೆ. ವಿ. ಶೆಣೈ, ಕೊರಡ್ಕಲ್ ಶ್ರೀನಿವಾಸ ರಾವ್, ಕೆ. ಎ. ದೇವದಾಸ್ ಮೊದಲಾದವರು 'ಪುನರ್ಜನ್ಮ' ಎಂಬ ಏಕಾಂಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಉಡುಪಿಯಸಾರ್ವಜನಿಕಗಣಪತಿವಿಟಿಕೆಗಳಿಗೆ (ರಾಜಕೀಯ ಹೊರತು) ಅನುಕೂಲನಾಗುವಂತೆ 'ಪೀಪಲ್ಸ್ ಹೋಲ್' ಯೋಜನೆಯನ್ನು ಕೈಕೊಂಡು ಅದರ ಸಫಲತೆಯ ಬಗ್ಗೆ ಪಂಡಿತ ಶಾಲಾ ಹೆಡ್ಮಾಸ್ತರ್ ಮಿ। ಆರ್. ಹೆಸ್ಸಾಂಧೀಸರೂ ಅವರ ಸಹಾಯಕ ಅಧ್ಯಾಪಕ ಮಂಡಳಿಯವರೂ ಅತ್ಯಧಿಕ ಅಭಿನಂದನೀಯರು.

ಧೂಳು ಹಾರಾಟ—ಆರಂಭವಾಗಿಯಿದೆ. ನಗರ ಪಾಲಕರು ಈಗಾಗಲೇ ತಕ್ಕ ಏರ್ಪಾಡು ಮಾಡುವುದು ಅತ್ಯಾವಶ್ಯಕವೆನಿಸುತ್ತದೆ ಕಾಲ್ಚಾಲೆಯ ಜನರಿಗೆ.

ಜಾಹೀರು ಪ್ರಕಟಣೆ

1939ನೆ ಯಸಾಲಿನ ಜನರಲ್ ಸೇಲ್ಸ್ ಟೇಕ್ಸ್ ಕ್ರಮಗಳಿಗನುಸಾರವಾಗಿ ತಿರಿಗೆಯನ್ನು ಕೊಡುವ ಉಡುಪಿಬೀನ್ಸ್, ಉದ್ಯಾವರ ಬೈರ್ಗ, ಕಲ್ಯಾಣಪುರ, ಕಿದಿಯೂರು ಮತ್ತು ಮಲ್ಪೆ ಸೆಂಟರ್‌ಗಳನ್ನು ಇನ್ನೂಮುಂದೆ ಬಿಲ್ ಕಲೆಕ್ಟರ್ ಮಿ। ಎಲ್. ಎಲ್. ಸಾಲ್ದಾನ ರೊಡನೆ ತಿರಿಗೆ ಹಣವನ್ನು ಕೊಡಕೊಡುವಾಗಿಯು ಇಪಕ್ಕೆ ಪ್ರತಿಕೂಲವಾಗಿ ಯಾರಾದರೂ ಕೊಟ್ಟಲ್ಲಿ ಅವರವರೇ ಜವಾಬ್ದಾರರೆಂದೂ ಇನ್ನೊಮ್ಮೆ ಜಾಹೀರು ಮಾಡುವತನಕ ಎಲ್ಲರೂ ಉಡುಪಿ ಸರ್ಕಲ್ ಟ್ರೆಜರಿಗೆನೇ ಸೀವಾ ಪಾವತಿಮಾಡಬೇಕಾಗಿಯೂ ಉಡುಪಿ ಅಸಿಸ್ಟಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರ್ ಶ್ರೀ. ಎ ಎಸ್. ಗಣಪತಿ ಅವರು ಬರೆದು ತಿಳಿಸುತ್ತಾರೆ.

ಸ್ವೀಕಾರ

ಶ್ರೀ ರಂಗನಾಥ ದಿವಾಕರರ (1) ಸತ್ಯಾಗ್ರಹ (ಇತಿಹಾಸ ಮತ್ತು ತಂತ್ರ) ಮತ್ತು (2) ರಾಷ್ಟ್ರೀಯ ಶಿಕ್ಷಣ. ಶ್ರೀ। ಪಾಟೀಲ ಕಲ್ಲನ ಗೌಡರ (3) ಅಸ್ಪೃಶ್ಯತಾ ನಿವಾರಣೆ ಶ್ರೀ. ಬಿ. ನರಸಪ್ಪನವರ (4) ಪ್ರತಿಧ್ವನಿ—ಈ ಪುಸ್ತಕಗಳು ನಮ್ಮ ನಹಸ್ಯಗತವಾಗಿವೆ. ವಿಮರ್ಶೆ ಯಥಾವಕಾಶವಾಗಿ.

In the Court of District Munsiff of Mangalore

S. C. No. 227/1945

Between

Ubaldus Cunha —Plaintiff

AND

D. Ramanna Rai —Defendant.

To

The defendant D. Ramanna Rai, son of Bellipady Maila *alias* Lakkanna Rai, residing at Koila of Rayi village Mangalore Taluk.

Take notice that the above suit filed against you by the Plaintiff for recovery of arrears of Mulgeni rent is posted for hearing on 25-10-1945 at 11 a. m and if you do not file your appearance it will be decided against you exparte.

Mangalore 2-10-1945 } P. D. Souza B.A.B.L. Vakil for Plaintiff

—ಮಕ್ಕಳನ್ನು ಹುಡಿಯವುದು ಸಾಕು—

ಆಕಳ ಸ್ತ್ರೀಯರಿಗೆ **ಬರ್ಧ ಕಂಟ್ರೋಲ್** ಕೋಗಗ್ರಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶರಗು, ಪ್ರದರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಮ್ಮತ್ತು ರೂಪಾಯಿ ೨—0—0. ಪೋಸ್ಟ್ ಚಾರ್ಜು ೧ಆಣೆ.

ಮಾಲಕರು:—**ಹಾಲಪ್ಪ ಫಕೀರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ವಿದಂಟಿಯ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಕುಲವಾಡಿ ಸ್ಟೋರ್ಸ್ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಲಿ. ಎಲ್. ಆವಲಕಾನಿ, ಕೆಮಿಸ್ಟ್, ಜುವೇರಿ, ಬ್ಯಾಂಡಿಗಿ.

Ayurveda Oushadalaya, GADAG CITY.

ದಕ್ಷಿಣ ಕನ್ನಡ

ಬೆಲ್ಲ್ ಎಕ್ಸೆಟರ್ ಎಸೋಸಿಯೇಶನ್- ನೇತೃತ್ವದಲ್ಲಿ ಬರುವ ನವೆಂಬರ ಮೊದಲನೆ ವಾರದಲ್ಲಿ ಕ್ರಿಕೆಟ್, ಹಾಕ್ಕಿ, ಫುಟ್‌ಬಾಲ್, ಬಾಸ್ಕೆಟ್ ಬಾಲ್, ಬೇಟ್‌ಮಿಂಟನ್ ಮೊದಲಾದ ಆಟಗಳಲ್ಲಿ ಸ್ಪರ್ಧೆ ಜರಗುವುದು. ಎತ್ತರ ನೆಗೆತ, ಉದ್ದಕ್ಕೆ ಓಟ ಇತ್ಯಾದಿ ಆಟಗಳ ಪಂದ್ಯಾವಳಿ ಜನವರಿಯಲ್ಲಿ ನಡೆಯಲಿರುವುದು. ಸ್ತ್ರೀಯರಿಗೆ ಸಂಬಂಧಿಸಿದ ಆಟಗಳಲ್ಲಿಯೂ ಸ್ಪರ್ಧೆಯಿದೆ. ಪ್ರವೇಶ ಹಾಸಲು ಇತ್ಯಾದಿ ವಿಶೇಷ ಮಾಹಿತಿಗೆ ಕೂಡಲೇ ಎಸೋಸಿಯೇಶನ ಗೌರವ ಕಾರ್ಯದರ್ಶಿಯವರಿಗೆ ಬರಕೊಳ್ಳುವುದು.

ಪುತ್ತೂರು.

ಗಾಂಧಿ ಜಯಂತಿ-ಕಳೆದ ತಾ. ೪ರಲ್ಲಿ ಧ್ವಜ ವಂದನೆಯು ಪ್ರಾತಃಕಾಲ ಸ್ಥಳೀಯ ಕೋರ್ಟು ಮೈದಾನದಲ್ಲಿ ಜರುಗಿಸಲ್ಪಟ್ಟು ಸಾಯಂಕಾಲ ಗಂಟೆ ೬ಕ್ಕೆ ಸ್ಥಳೀಯ ಕಾಂಗ್ರೆಸ್ ಸಮಿತಿ ಆಫೀಸಿನಿಂದ ಪುರ ಮೆರವಣಿಗೆಯು ಹೊರಟು ಕೋರ್ಟು ಮೈದಾನಿಗೆ ತಲಪಿತು. ಕಾಸರಗೋಡು ವಕೀಲ್ ಉಮೇಶರಾಯರ ಅಧ್ಯಕ್ಷತೆಯಲ್ಲಿ ಸಭೆಯುಸೇರಿತು. ಡಾ। ಕೃಷ್ಣಭಟ್, ವಕೀಲ್ ಶ್ರೀ। ಕೃಷ್ಣನಾರಾಯಣ ಮಲ್ಯ, ವಕೀಲ್ ಶ್ರೀ। ಯೆಮ್. ಸದಾಶಿವರಾವ್, ಕೃಷ್ಣಮಾಚಾರ್ಯರೇ ಮೊದಲಾದವರು ಗಾಂಧಿಜೀ ಯವರ ಅಹಿಂಸಾತತ್ತ್ವ, ಸಮಾಜಸೇವೆ, ಸರಿಜನ ಉದ್ಧಾರ ಇವುಗಳ ವಿಷಯ ಭಾಷಣಗಳ ನ್ನಿತ್ತರು. ಶ್ರೀ। ನರಸಪ್ಪನವರು ಇನ್ನು ಒರುವ ಚುನಾವಣೆಯಲ್ಲಿ ಆದಷ್ಟು ಹೆಚ್ಚು ಮಂದಿ ಒಟುಗಳನ್ನು ಕೊಡುವಂತೆ ತಮ್ಮ ಹೆಸರುಗಳನ್ನು ದಾಖಲುಮಾಡಿಕೊಳ್ಳಬೇಕಾಗಿ ವಿನಂತಿಸಿಕೊಂಡರು.

ಪೆರಡಾಲ-ಬಯಿಡ್ಡಪ ಶ್ರೇಷ್ಠ ಕೂಟದ ಅಕ್ಟೋಬರ್ ತಿಂಗಳ 12, 13 ನುತ್ತು 14ನೇ ತಾರೀಕುಗಳಲ್ಲಿ ನವ ಜೀವನ ಹೈಸ್ಕೂಲಿನಲ್ಲಿ ಆಚರಿಸಲ್ಪಡುವ ದಸರಾ ಮಹೋತ್ಸವದ ಕಾರ್ಯಕ್ರಮಗಳು ತಾ. 12-10-45ನೇ ಶುಕ್ರವಾರ ಪೂರ್ವಾಹ್ನ ಗಂ। 8ಕ್ಕೆ-ಪ್ರಭಾತ ಫೇರಿ. 9ಕ್ಕೆ ದಸರಾ ಮಹೋತ್ಸವದ ಉದ್ಘಾಟನೆ, ಅಪರಾಹ್ನ ಗಂಟೆ 5ಕ್ಕೆ-ತಾಲೂ ಮುಕ್ಕಳ ಚಟುವಟಿಕೆಗಳ ಪ್ರದರ್ಶನ. 6.30ಕ್ಕೆ-ಸಾರ್ವಜನಿಕ ಸಭೆ-ಪ್ರಜಾ ಪ್ರಭುತ್ವ ಸುತ್ತು ಮಕ್ಕಳಾಪೆ ಕುರಿತು ಮಂಗಳೂರು ಶ್ರೀ। ಡಾ. ಯು. ಪದ್ಮನಾಭ ಮಲ್ಯರ ಭಾಷಣ. ರಾತ್ರಿ ಗಂಟೆ 10.30ಕ್ಕೆ ನಾಟಕಾದಿ ವಿನೋದಗಳು

ಕಾರ್ಕಳ-ಕಲಾಭಿಮಾನಿಗಳಲ್ಲಿ ವಿನಂತಿ-ನಮ್ಮ ಜಿಲ್ಲೆಯಲ್ಲಿ ಹರಿಕೀರ್ತನೆ ಮತ್ತು ಕನಿತೆಯ ವಿಚಾರದಲ್ಲಿ 'ಗಳಗನಾಥನಭಿನಸ್ಯತಿ' ಎಂಬ ಕೀರ್ತಿ ಗಳಿಸಿದ ವಿದ್ವಾಂಸರಾದ ಶ್ರೀ. ಹರಿದಾಸ ಲಕ್ಷ್ಮೀನಾರಾಣಪ್ಪಯ್ಯನವರನ್ನು ಯಜ್ಞ ಕನ್ನಡಿಗರಿಲ್ಲ. ಇಷ್ಟು ಪ್ರಸಿದ್ಧರಾದ ಅವರ ಜೀವನ ವಿಚಾರದಲ್ಲಿ ಹಲವಾರು ರೀತಿಯ ಸ್ವಾರಸ್ಯವು ಕಥೆಗಳು ಕೇಳಿ ಬರುತ್ತಿರುವುದಾದರೂ ಇದುವರೆಗೂ ಅವು ಬಾಯ್ದೆರೆಯಾಗಿಯೇ ಉಳಿದಿರುವುದರಿಂದ ಇನ್ನು ಅಲ್ಪಾವಕಾಶದಲ್ಲೇ ಬಹುಪಾಲು ಕಣ್ಮರೆಯಾಗುವ ಭೀತಿಯಿದೆ. ಈ ಕಾರಣದಿಂದ ದಸಭರಿತವಾದ ಅವರ ಜೀವನ ಚರಿತ್ರೆಯು ಚಿರವಾಗಿ ಸಂಪೂರ್ಣವಾಗಿ ಉಳಿಯುವಂತೆ ನಾವು ಅದನ್ನು ಪುಸ್ತಕ ರೂಪದಲ್ಲಿ ನಿದ್ಯಾಸರ ಅಭಿಪ್ರಾಯ ಸಹಿತ ಪ್ರಕಟಿಸಬೇಕೆಂಬ ನಿರ್ಧಾರ ಮಾಡಿರುವೆವು. ತತ್ಸಮ್ಮಂಧ ದಿ. ಹರಿದಾಸರ ವಿಚಾರವನ್ನರಿತ ವಿದ್ವಾಂಸರೆಲ್ಲರೂ ತಮ್ಮ ಅನುಭವವನ್ನು ಬರೆದು ಕಳುಹಿಸಬೇಕಾಗಿ ವಿನಂತಿ. ಮತ್ತು ಹಲವೆಡೆಗಳಲ್ಲಿ ಅವರ ವಿಸಯದ ಸ್ವಾರಸ್ಯ ಘಟನೆಗಳು ಸಂಭವಿಸಿವೆಯೆಂದೆ ಅನೇಕರಿಂದ ಸಂಗ್ರಹಿಸಲಿಕ್ಕಾಗಿ ನಾವು ಜಿಲ್ಲೆಯಲ್ಲಿ ಸಂದರ್ಶಿಸಲಿದ್ದೇವೆ ಆಸ್ಥಿಮಹಾರಯರೆಲ್ಲರೂ ವಿಸಯ ಸಂಗ್ರಹ, ಧನ ಸಂಗ್ರಹಕ್ಕಾಗಿ ಪ್ರೋತ್ಸಾಹಪೀಯಬೇಕಾಗಿ ವಿನಂತಿ.

ಸೂಚನೆ: ಲೇಖನ ಕಳುಹಿಸುವವರೂ ಸಂಬಂಧ ಅಂತ್ಯದೊಳಗಾಗಿ ಕಳುಹಿಸಬೇಕಾಗಿ ಹರಿದಾಸ ಯಸ್. ಯನ್. ರಾವ್, ಸಂಗೀತ ಕಲಾನುಂದಿರ, ಕಾರ್ಕಳ ಇವರ ವಿನಂತಿ ಇದೆ.

ಪಡುಬಿದ್ರೆ-ತಾ. 30-9-45ರಲ್ಲಿ ಪಡುಬಿದ್ರೆ ಜೋ. ಹೈ. ಎ. ಶಾಲೆಯಲ್ಲಿ "ಬಾಲ ಸಾಹಿತ್ಯ ಸಮಿತಿ"ಯ ದ್ವಿತೀಯ ವಾರ್ಷಿಕೋತ್ಸವವು ಶ್ರೀ. ಪಿ. ನಿ. ಉಪಾಧ್ಯಾಯ B. A. L.L B. ಇವರ ಅಧ್ಯಕ್ಷತೆಯಲ್ಲಿ ಅತಿಸಂಭ್ರಮದಿಂದ ಜರಗಿತು. ಪ್ರಾತಃಕಾಲ ಪ್ರದರ್ಶನ, ಉದ್ಘಾಟನಾ ಸಮಾರಂಭವೂ ವಿವಿಧ ಕಲಾ ಸ್ಪರ್ಧೆಯೂ ಶ್ರೇಷ್ಠಕರವಾಗಿ ಆತ್ಯಂತ ಹರ್ಷ ಮತ್ತು ಅಭಿಮಾನ ಜನಕವಿದ್ದು ಎತ್ತೆಚೆಡೆಗೆ ಸಂದರ್ಶಿಸುತ್ತಿದ್ದ ಜನ ಸಂದಣಿಗೆ ಸ್ವಾಭಿರವು ನಿರ್ವಹಿಸುತ್ತಿದ್ದ ಯೋಗ್ಯ ನೈಪುಣ್ಯವು ಸಾಕಷ್ಟು ಆಕರ್ಷಕವಾಗಿತ್ತು. ಸಂಜೆ ಜರಗಿದ ಸಮಾರಂಭದಲ್ಲಿ, ಕಾರ್ಯಕ್ರಮವನ್ನು ಅಸಾಮಾನ್ಯ ಸಂಖ್ಯೆಯ ಜನರು ಭಾಗವಹಿಸಿದ್ದುವು. ಮಕ್ಕಳ ಲೀಲಾನಂದಮಯ ವಿನೋದಗಳು ಚಿತ್ತಾಕರ್ಷಕವಾಗಿದ್ದುವು. ಮನ ಸೋತ ಊರ ಪರವೂರ ಮನೋರಂಜನೆಯಲ್ಲಿ ಬಾಲಕ ಬಾಲಕಿಯರಿಗೆ ಪದಕ ಮತ್ತು ಸ್ವತಂತ್ರ ಉತ್ತಮ ಪಾರಿತೋಷಕಗಳನ್ನಿತ್ತರು. ಸಭಿಕರಲ್ಲಿ ಅನೇಕ ಕಲಾಭಿಜ್ಞರು ತಮಗಾದ ಆನಂದವನ್ನು ಸಂತೋಷೋದ್ಗಾರವಾದ ಭಾಷಣಗಳಿಂದ ವ್ಯಕ್ತಪಡಿಸಿದರು. ಅಧ್ಯಕ್ಷರು ಮುಕ್ಕಳ ಪವಿತ್ರ ಹೃದಯವೆಂಬ ಕ್ಷೇತ್ರವನ್ನು ಹಿಮೆಯನ್ನು ವರ್ಣಿಸಿದರು. ಬಾಲ ಹೃದಯದ ಆಮೋಘ ಶಕ್ತಿಯನ್ನು ರಸವತ್ತಾಪ ಪ್ರತ್ಯಕ್ಷೋಪಾಹರಣಗಳಿಂದ ವಿವರಿಸುತ್ತ ಸಭಿಕರನ್ನು ನಗಾಟದಲ್ಲಿ ತೇಲಿಸಿದರು. ಅಂತೂ ಸಭಿಕರಲ್ಲಿ ನವ ಚೈತನ್ಯವನ್ನು ಬೀರಿ ಊರ ಮಹನೀಯರ ಸಹಾಯ ಶಾಲಾಧ್ಯಾಪಕರ ಸಾಹಸ ಬಾಲಸೀರ ದಳದ ಸೇವೆ, ಕಲಾವಿದರ ನಿಪುಣತೆಗಳನ್ನು ಕೊಂಡಾಡುತ್ತ ಇಂತಹ ಕಲಾ ನೈಪುಣ್ಯವನ್ನೊಳಗೊಂಡ ಈ ಶಾಲೆಯು ಅನತಿದೂರದಲ್ಲೇ ಹೈಸ್ಕೂಲ್ ಆಗುವುದರಲ್ಲಿ ಸಂದೇಹವಿಲ್ಲವೆಂದೂ ಹೇಳಿದರು. ಬಳಿಕ ಧನ್ಯವಾದಾರ್ಪಣೆಯೊಂದಿಗೆ ಮಂಗಳ ಗೀತೆ ಯೊಡನೆ ಸಭಾ ವಿಸರ್ಜನೆಯಾಯ್ತು. ರಾತ್ರಿ ಉಡುಪಿ ಯಕ್ಷಗಾನ ಸಾಹಿತ್ಯ ಮಂಡಲಿಯವರು ತಮ್ಮ ಯಕ್ಷಗಾನ ಸಮಾರಂಭದಿಂದ ಸಭಿಕರನ್ನು ಆನಂದ ಮಗ್ನರನ್ನಾಗಿಸಿದರು.

ಬಡಗಬೆಟ್ಟು-ತಾ. 1-9-1945ರಲ್ಲು ಬಡಗಬೆಟ್ಟು ಬೋರ್ಡು ಶಾಲಾ ಸಹಾಯಕ ಉಪಾಧ್ಯಾಯ, ಯು. ಶ್ರೀನಾಮು ಮುಖ್ರಿಯರಿಗೆ ವರ್ಗವಾಗಿ ಬಿಡುಗಡೆಯಾಗಲು, ಸದ್ರಿ ಗ್ರಾಮದ ಜೆತ್ತರ ಸಂಘದವರು ಆವರಿಗೆ ವಿದಾಯ ಕೂಟವಿತ್ತು ಸತ್ಕರಿಸಿದರು.

ಮೈಸೂರು ಪತ್ರ

ಗಾಂಧಿ ಜಯಂತಿ-ಯು ಸಾನಾ ಕಡೆಗಳಲ್ಲಿ ಆಚರಿಸಲಾಯ್ತು. ಗಾಂಧಿ ಸೇವಾ ಸಂಘವಾಶ್ರಯದಲ್ಲಿ 1ನೇ ತಾರೀಖು ನಾಲ್ಕು ಸಾಲ್ಕು ಗಂಟೆಯಿಂದ 2ನೇ ತಾರೀಖು ನಾಲ್ಕು ಗಂಟೆ ವರೆಗೆ 24 ಗಂಟೆಗಳ ಕಾಲ ಬಿಡದೆ ವಾರ ತೆಗೆಯಲಾಯ್ತು. ಅಜ್ಜಿಪೆ ಸುಮಾರು 150 ಜನರು 76 ನಿಮಿಸ ನೂಲುವ ಸ್ಪರ್ಧೆ ಮಾಡಲಾಗಿತ್ತು. 7 ಗಂಟೆಗೆ ಬಹಿರಂಗ ಸಭೆಯು ದಿ. ಬನುಸಯ್ಯ ಹೈಸ್ಕೂಲು ಆವರಣದಲ್ಲಿ ಶ್ರೀ। ನಾಲಜೆ ವೇಸಾಯಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಮಗನ್‌ಲಾಲ್ ವೇಸಾಯಿಯವರು ಸೂತ್ರ ಯಜ್ಞದ ವಿಚಾರವಾಗಿ ಭಾಷಣ ಮಾಡಿದರು.

ಕಾಂಗ್ರೆಸ್ ಕಛೇರಿಯಲ್ಲಿ ಐದು ಗಂಟೆ ಕಾಲ ಸಾರ್ವತ್ರಿಕ ನೂಲುವ ಕಾರ್ಯಕ್ರಮವನ್ನು ಸಾಯಂಕಾಲ ಬಹಿರಂಗ ಸಭಾ ನಡೆಯಿತು ಕಸ್ತೂರ್ ಬಾ ಶಿಬಿರದಲ್ಲಿ 12 ಗಂಟೆಗಳ ನೂಲುವ ಕಾರ್ಯಕ್ರಮವು ಬೆಳಿಗ್ಗೆ ಪ್ರಜಾತೋಪಣದೊಡನೆ ಪ್ರಾರಂಭವಾಯಿತು. ಅಲ್ಲಿ 7 ದಿನಗಳ ಕಾಲ ಕಾರ್ಯ ನಡೆಯಿತು. ಬೀಗೆಯೇ ರಾಜಧಾನಿಯ ಅನೇಕ ಕಡೆ ನಡೆಯುತ್ತಿದೆ.

ದಸರಾ ಮಹೋತ್ಸವ-ವು ವಿನಂತಿಂತೆ ಈ ವರ್ಷವೂ ವಿಜೃಂಭಣೆಯಿಂದ ನಡೆಯುವುದು. ದಸರಾ ವಸ್ತು ಪ್ರದರ್ಶನವು 7ನೇ ತಾರೀಖು ಪ್ರಾರಂಭವಾಯ್ತು. ಈ ವರ್ಷ ದಸರಾ ಮೆರವಣಿಗೆಯ ರಸ್ತೆ ಬದಲಾಯಿಸಲಾಗಿದೆ. ಹಿಂದೆ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಹೊರಟು ಮಿನ್ಸಿಪಲ್ ಕಛೇರಿಗೆ ತೆರಳಿ ಅಲ್ಲಿಂದ ದೊಡ್ಡ ಸೇಟಿ ಮೂಲಕ ಅರಮನೆಗೆ ಹಿಂತಿರುಗುತ್ತಿತ್ತು. ಈ ವರ್ಷ ಸಯ್ಯಾಜಿರಾವ್ ರಸ್ತೆ ಮೂಲಕ ನುಸ್ಸುಮಂಟಪಕ್ಕೆ ತೆರಳಿ ಅಲ್ಲಿಂದ ಅದೇ ರಸ್ತೆಯಿಂದ ಹಿಂತಿರುಗಿ ಬರುವುದು. ಆದಕ್ಕಾಗಿ ಆ ರಸ್ತೆಯನ್ನು ಅಲಂಕರಿಸಲಾಗುತ್ತಿದೆ.

ಎ. ಎಂ. ಸಿ-ಆಪಿಲ ನೈಸೂರು ಕಾಂಗ್ರೆಸ್ ಸಮಿತಿಯ ಸಭೆಯು ಇದೇ ತಿಂಗಳ ಕೊನೆ ವಾರದಲ್ಲಿ ಮಂಡ್ಯ ಜಿಲ್ಲಾ ಸ್ಪೆಂಟಾಕ್ಸಿನಲ್ಲಿ ನಡೆಯುವುದೆಂದು ಗೊತ್ತಾಗಿದೆ. ಮೂರು ವರ್ಷದ ನಂತರ ಎ. ಐ. ಸಿ. ಸೇರುವುದು ಇದೇ ಮೊದಲು. ಕಾಂಗ್ರೆಸ್ ಸಂಸ್ಥೆ ಮೇಲಿನ ಪ್ರತಿಬಂಧಕಾಜ್ಞೆಯನ್ನು ಸರಕಾರದವರು ತೆಗೆದಿರುತ್ತಾರೆ. ಆದರೆ ಅಲ್ಲಲ್ಲಿರುವ ಪ್ರತಿಬಂಧಕಾಜ್ಞೆಗಳು ಮಾತ್ರ ಇನ್ನು ಹೋಗಿಲ್ಲ.

ಇಂಗ್ಲೆಂಡಿಗೆ ಪ್ರಯಾಣ- ನೈಸೂರು ಕಾಂಗ್ರೆಸ್ ಮುಖಂಡರೂ ನ್ಯಾಯ ಸಿಧಾಯಕ ಸಭಾ ಕಾಂಗ್ರೆಸ್ ಪಕ್ಷದ ನಾಯಕರೂ, ಚಿನ್ನದ ಗಣಿ ಕೂಲಿಗಾರರ ಸಂಘಗಳ ಸಂಯುಕ್ತ ನುಂಡಲಿಯ ಅಧ್ಯಕ್ಷರೂ ಆದ ಶ್ರೀ। ಕೆ. ಚಂಗಲರಾಯ ರೆಡ್ಡಿಯವರು 2ನೇ ತಾರೀಖಿನ ಬೋಬಾಯಿಂದ ಹಡಗು ಮುಖಾಂತರ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಅವರು ಸುಮಾರು ಆರು ತಿಂಗಳ ಕಾಲ ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ಪ್ರವಾಸ ಮಾಡುವರು ಅವರು ತಮ್ಮ ಪ್ರವಾಸವಲ್ಲಿ ದೇಶೀಯ ರಾಜ್ಯಗಳಲ್ಲಿ ಜವಾಬ್ದಾರಿ ಸರಕಾರದ ಆಸಕ್ತಿಕತೆ ಸಿಚಾರವಾಗಿ ಪ್ರಚಾರ ಮಾಡುವರೆಂದೂ ಗೊತ್ತಾಗಿದೆ. ಅವರು ಅಲ್ಲಿಯ ಹಲವು ಕೈಗಾರಿಕಾ, ಇಾನಜ್ಯ ಸಂಸ್ಥೆಗಳಿಗೂ, ಕೂಲಿಗಾರರ ಸಂಘಗಳಿಗೂ ಭೇಟಿ ಕೊಡುವರು. ಮಾಧ್ಯಮದ ಪಾರ್ಲಿಮೆಂಟ್ ಆಧಿನೇತನಕ್ಕೆ ಹಾಜರಾಗಿ ಅಲ್ಲಿಯ ಕಾರ್ಯ ಕಲಾಪಗಳನ್ನು ನೋಡುವರು.

ಬಂಟರ ಯಾನೆ ನಾಡವರ ಸಂಘ, ಮುಂಬಯಿ-ಈ ಸಂಘದ ವಿಶೇಷ ಸಾರ್ವತ್ರಿಕ ಮಹಾಸಭೆಯು ತಾ. 14-10-1945ನೇ ಆದಿತ್ಯವಾರ ಅಪರಾಹ್ನ ಘಂಟೆ 4ಕ್ಕೆ ಸರಿಯಾಗಿ ಕರ್ನಾಟಕ ಫ್ರೀ ಸ್ಕೂಲ್ ಹೈಸ್ಕೂಲಿನಲ್ಲಿ (17 ಕುಮ್ಮ ಸ್ಟ್ರೀಟ್ ಕೋಟೆ) ಶ್ರೀ ಮದ್ಭಾರ ಶಬ್ದ ಅಧ್ಯಕ್ಷತೆಯಲ್ಲಿ, ಈ ಸಂಘದ ಕ್ರಮ ನಿಯಂಬಂಧನೆಗಳನ್ನು ತಿದ್ದುಪಡಿ ಮಾಡುವರೆ ಜರಗಲಿರುವುದರಿಂದ ಸಂಘದ ಸದಸ್ಯರೆಲ್ಲರೂ ಚಿತ್ತೈಸಿ ಸಭಾ ಕಾರ್ಯ ಕಲಾಪಗಳಲ್ಲಿ ಭಾಗ ನಹಿಸಬೇಕಾಗಿ ಗೌ. ಜತೆ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಿಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 80ಹೊಟ್ಟು, ಸಣ್ಣಮಕ್ಕಳಿಗೆ 10ರಿಂದ 20ಹೊಟ್ಟು ಲವಂಗ ಯಾ ಏಲಕ್ಕಿಯ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉದುಪಿ ಸ್ಟಾಕಿಸ್ಟರು:—ಡಾ। ನಾಯಕ್ಸ್ ಕಸ್ಸೆಲ್ಸ್ ರೂಮ್ಸ್ ಎಂಡ್ ಫಾರ್ಮಸಿಸ್; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ. ಜಿ. ಅಣಾಜ್ಞ ಫಾರ್ಮಸಿಸ್; ಡಾ। ಕೆ. ಶೇಷಗಿರಿ ಪೈ, L. I. M.; ಡಾ। ನೆಂಕಟರಾಜ್, ಕೊರಡ್ಡಳ್ಳಿ; ನವಭಾರತ ಬುಕ್ ಡಿಪೊ.

ಮುಟ್ಟಾಗುವಿಕೆ

ಹಲವಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಆಥವಾ ಇನ್ನಾವಕಾರಣವಿದ್ದರೂ— 'ಋತುಮತಿ ಮಾತ್ರೆಗಳು' ನಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಯೊಪಿಡ ಕೇಸುಗಳಿಗೆ ರೂ. 5. 6ತಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ಸಿ. ಓ. 12 ಆಣೆ ಆಲಾಯಿದ.)

Mrs. P. DEVEE,
P. O. Box (A. 8.) Tollygunge, Calcutta.
ಸ್ಟಾಕಿಸ್ಟ್ಸ್: ಇಾ ಕಂಪೆನಿ ವಂಗಳೂರು

ದಕ್ಷಿಣ ಕನ್ನಡ.

ಮಂಗಳೂರು

ಗಾಂಧಿ ಜಯಂತಿ-ಅಕ್ಟೋಬರ ತಾ. ೨ರಂದು ಗಾಂಧಿಜಿಯವರ ಹುಟ್ಟುವ ದಿನ. ಆ ದಿನವು ಭಾರತದ ಎಲ್ಲೆಡೆಗಳಲ್ಲಿಯೂ, ವಿದೇಶ ಗಳಲ್ಲಿಯೂ ಆಚರಿಸಲ್ಪಟ್ಟಿತು.

ಆ ದಿನ ಬೆಳಿಗ್ಗೆ ಮಂಗಳೂರು ನಗರದಲ್ಲಿ ಯೂ ಪ್ರಭಾತ ಫೇರಿಯಾಗಿ ಮೈದಾನನಲ್ಲಿ ಶ್ರೀ. ಎಂ. ಡಿ. ಅಧಿಕಾರಿಗಳು ರಾಷ್ಟ್ರಧ್ವಜ ನನ್ನು ಹಾರಿಸಿದರು.

ಸಂಜೆ, ವಿದ್ಯಾರ್ಥಿಗಳೂ ಮಜೂರರೂ ಮೆರವಣಿಗೆಯಿಂದ ಹೊರಟು ಮೈದಾನನಲ್ಲಿ ಸೇರಿದರು. ಶ್ರೀ. ಎ. ಜಿ. ಕೆಟ್ಟರ ಅಧ್ಯಕ್ಷತೆ ಯಲ್ಲಿ ಸಾರ್ವಜನಿಕ ಸಭೆ ಸೇರಿತು. ಅಧ್ಯಕ್ಷ ರು ತಮ್ಮ ಭಾಷಣದಲ್ಲಿ, ಲೇಬರ್ ಸರಕಾರವು ಭಾರತಕ್ಕೆ ಉಪಕಾರ ಮಾಡುವದಂಬ ಮಾತು ಸುಳ್ಳೆಂದು ತಿಳಿಸಿ,ವೇಲೆರ ಹೊಸ ಯೋ ಜನೆಯನ್ನು ವಿವರಿಸಿದರು. ಭಾರತದ ಸ್ವಾತಂ ತ್ರ್ಯಕ್ಕಾಗಿ ಸಕಲ ಪಕ್ಷಗಳೂ ಒಂದಾಗಬೇ ಕು. ನುಂಬರುನ ಚುನಾವಣೆಯಲ್ಲಿ ಎಲ್ಲರೂ ತಮ್ಮ ಓಟುಗಳನ್ನು ಕಾಂಗ್ರೆಸಿಗೆ ಕೊಡಬೇ ಕೆಂದರು. ಶ್ರೀ. ಅಧಿಕಾರಿಗಳು ನೂತನವಾಡು ತ್ತ, ಮುಂದಿನ ಚುನಾವಣೆಗೆ ಉಮೇದ್ವಾರ ರಾಗಿ ನಿಲ್ಲುತಕ್ಕವರು, ಸಂಪರ್ಭ ಜಿದ್ದಾಗ, ಸ್ವಾತಂತ್ರ್ಯ ಹೋರಾಟದಲ್ಲಿ ಜುಮುಕಲು ಹಿಂಜರಿಯುವವರಾಗಿರಾದು. -ಎಂದರು. ಶ್ರೀಮತಿ ನೂರಿ ಬ್ರಿಟೂರವರು ಅನಂತರ ನೂತನವಾಡುತ್ತ ಒಂದೂ, ಕ್ರೈಸ್ತ ನುನ್ನಿಂ ಎಂಬ ಭೇದವಿಲ್ಲದೆ ಸಕಲರೂ ಒಂದಾಗಿ ದೇಶ ದ ಸ್ವಾತಂತ್ರ್ಯಕ್ಕಾಗಿ ಯೋರಾಡಬೇಕೆಂದರು. ಡಾ। ಮಲ್ಕರು ಜಾಪುಜಿಗೆ ಅಯುರಾರೋಗ್ಯ ನನ್ನು ಕರುಣಿಸಲೆಂದು ಪ್ರಾರ್ಥಿಸಿದರು. ಶ್ರೀ. ಬಿ. ವಿ. ಕಕ್ಕಿಲ್ಲಾಯರು ನೂತಾಡುತ್ತ ಒಗ್ಗ ಟ್ಟಿನ ಅವಶ್ಯಕತೆಯನ್ನು ವಿವರಿಸಿದರು. ಅ ನಂತರ ಚಕೀಲ್ ಶ್ರೀ. ಕೆ. ಆರ್. ಕಾರರವ ರು ನೂತನವಾಡುತ್ತ, ಜಾತೀಯ ಐಪ್ಯಂದಕ್ಕಾ ಗಿ ಇಂದಿಜ ಹಾಗೂ ರಾಜಾಜಿ ಈತನಕ ಜೆ ನ್ನರ ನುಂಡಿ ಜಾಗಿದುದೇ ಸಾಕು ಎಂದರು. ದ್ವಿತೀಯ ನುಯಾ ಯುದ್ಧಕ್ಕೆ ಕಮ್ಯುನಿಸ್ಟರು ಜನತಾ ಯುದ್ಧವೆಂದು ಹೆಸರಿಟ್ಟಾರೆ ಆದ ನ್ನು ನಾನು ಒಪ್ಪಲಾರೆ.ಎಂದರು. ಶ್ರೀ. ಕೆ. ಈಶ್ವರನರು ಗಾಂಧಿಜಿಯವರ ಹರಿಜನ ಸೇವೆಯ ನ್ನುವಿವರಿಸಿದರು. ಶ್ರೀ.ಕೆ. ಕೃಷ್ಣರಾ ಯರು ಮಹಾತ್ಮರಿಗೆ ದೀರ್ಘಾಯುಸ್ಸನ್ನು ಬಯಸಿದರು ಅನಂತರವೂ ಒಬ್ಬಿಬ್ಬರು ನೂತ ನಾದಿದ ಬಳಿಕ ಶ್ರೀ. ಕೆ. ಕೆ. ಶೆಟ್ಟರು ಧನ್ಯ ವಾದಗಳನ್ನು ಅರ್ಪಿಸಿದರು

ಕಾಂಗ್ರೆಸ್ ಮತ್ತು ಹರಿಜನ ಕೆಲ ಸಗಾರರಲ್ಲಿ ವಿನಂತಿ— ಮುಂಬಯಿ ಸ ನ್ಯಾಯನಿಧಾಯಕ ಸಭೆಗೆ ಜುನಾಜಡೆಯ ಆ ರ್ಜವಿಯಲ್ಲಿ ಒಟರರ ಪಟ್ಟಿಯಲ್ಲಿ ಹೆಸರನ್ನು ದಾಖಲು ನೂಡಿಸಿಕೊಳ್ಳುವ ಕೊನೆಯ ತಾ ರೀಕು (ತಾ ೧೫) ಸಮಿಸಗತಕವಾಗಿದೆ. ಆ ನೊದಲೆ ಪ್ರತಿಯೊಬ್ಬ ಕಾಂಗ್ರೆಸಿಗ ಪಾಗೂ ಹರಿಜನ ಕೆಲಸಗಾರನು ತಪ್ಪು ಹೆಸರು ಮತ ದಾರರ ಪಟ್ಟಿಯಲ್ಲಿ ದಾಖಲಾಗುವಂತೆ ಎಚ್ಚೆ ರ ತಾಳಬೇಕಾಗಿದೆ. ಕಾಂಗ್ರೆಸ್ ಕೌರ್ಯಕರ್ತ ರೆಲ್ಲಾ ಈ ಕಡೆ ಗಮನನಿಸಿತ್ತು ಅಪಪ್ಪು ನುಂ ದಿಯನ್ನು ಒಟರರ ಪಟ್ಟಿಗೆ ಸೇರಿಸುವ ಕಾ ರ್ಯವಲ್ಲಿ ನಿರವಾಗಬೇಕೆಂದು ಶ್ರೀ. ಕೆ. ಈಶ್ವ ರನನರು ವಿನಂತಿಸುತ್ತಾರೆ.

ನಗರ ಸಭೆಯು— ಕಳೆದ ತಾ. ೧೫ ನೆ ಯ ಸೋನುವಾರ ಸೇರಿದಾಗ ಮುನಿಸಿಪಾಲಿ ಟಿಯೊಳಗಿನ ಯಾನಪ್ತು ನೂರ್ಕಿಟುಗಳ ನ್ನೂ ವೃದ್ಧಿಗೊಳಿಸುವ ಕಾರ್ಯವನ್ನು ಕೂಡಲೆ ಕೈಕೊಳ್ಳುವಂತೆ ಕೌನ್ಸಿಲು ತೀರ್ಮಾನಿ ಸಿತು ಸರಕಾರವು ತನ್ನ ವಶಕ್ಕೆ ಕೆಲವು ಪೆ ದ್ಧಾರಿಗಳನ್ನು ಸ್ಥಳೀಯ ಸಂಸ್ಥೆಗಳಿಂದ ತೆಗೆ ದುಕೊಳ್ಳುವ ನಿರ್ಧಾರಕ್ಕೆ ಅನುಸಾರವಾಗಿ. ಈ ಮುನಿಸಿಪಾಲಿಟಿಯೊಳಗಿನ್ನ ಕೆಲ ಹದ್ದಾರಿ ಗಳ ಆರಂಗಳು ಸರಕಾರಕ್ಕೆ ಸರ್ಗಾರಿಯನ ಲ್ಪಡುವ ನಿರ್ಣಯವನ್ನು ಬೌನ್ ಸ್ಟಾನಿಂಗ್ ಕಮಿಟಿಯ ಅಲೋಚನೆಗೊಪ್ಪಿಸಲಾಯಿತು. ಮುಸ್ಕಿ ಅಕ್ಕಿ ನುಂಡಿಯೊಂದಕ್ಕೆ ಬೆಲೆ ರೂ. ೨ರಂತೆ ನಿರ್ಬಂಧಿಸಬೇಕಾಗಿ ಅಸೆಂಬ್ಲಿಸಿ ನಿ. ಸಿ. ಎಲ್. ಲೋಬರಿಂ ಕಂತಿತು ಜಿಲ್ಲಾ ಕಲೆ ಕ್ಟರರನ್ನೂ ನುರ್ವಾಗಿ ಸರಕಾರವನ್ನೂ ಧಾ ರ್ಥಿಸಿಂದ ರಾಜಾಜ್ಞೆ ತಂದು ಮುನ್ಯಾಪಾಯಿತು

ಕಬ್ಬಿಣ-ಉಕ್ಕು— ಗಣಿಯ ಜು ಲ್ಯಾ ತಾ. ೧೦ರಿಂದ ಆಯೆ ಸಬ್ಬಂಬರೆ ತಾ. ೨೦ರ ವರಗಿನ ಅವಧಿಯಲ್ಲಿ, ನೂತಾಡಿದೆ ಹೊರ ತಾದ ಇತರ ಕಾರ್ಯಗಳಿಗೆ ಕಬ್ಬಿಣ ಉಕ್ಕು ಬೇಕಾದ ಈ ಜಿಲ್ಲೆಯವರು ಅನರವರ ಅಗ ತ್ಯಕ್ಕೆ ಮೀರಿಗೆ ಆವಶ್ಯಕ ಪ್ರಮಾಣ ಇತ್ಯಾದಿ ಗಳ ವಿವರವನ್ನು ಕಾಗದ ಬರೆದ ತಿಂಗಳ ತಾ. ೧೫ರೊಳಗೆ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಆ ಫೀಸರವರ ಕಾರ್ಯಾಲಯ, ಕಲ್ಲಿಕೋಟೆ" ಇವರಿಗೆ ಅರ್ಜಿ ಸೂಡತಕ್ಕದ್ದು.

ಜಿಲ್ಲಾ ಬೋರ್ಡಿನ- ವಿಶೇಷ ಸಭೆ ಯೊಂದು, ತಾ. ೨೯ರಂದು ಸೇರಿತು. ಈಗ ಡಿ. ಬೋರ್ಡಿನ ಅಧಿನದಲ್ಲಿರುವ ೧೦' ಕ್ವಾಸ್ ನುತ್ತ ತನೇ ಕ್ವಾಸ್ ರಸ್ತೆಗಳನ್ನೂ ವ್ಯಾಪಾರ ವಹಿವಾಟಿನ ಇತರ ಮುಖ್ಯ ರಸ್ತೆಗಳನ್ನೂ ಸರಕಾರವು ತನ್ನ ಅಧೀನಕ್ಕೆ ತೆಗೆದುಕೊಳ್ಳು ವುದಾಗಿಯೂ, ಆಪ್ಪಗಳಕ್ಕೆನ್ನಿಪ್ಪುವಾಗ, ಬೋರ್ಡು ವ್ಯಯಾಗಕರ ಬಂಗಲೆಗಳನ್ನೂ, ರಸ್ತೆದುರುಸ್ತಿಯ ಸಾಧನಗಳನ್ನೂ ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ, ಬಿಟ್ಟು ಕೊಡ ಬೇಕಾಗಿಯೂ ಸೂಚಿಸಿದುದರ ಮೇರಿಗೆ ಜೋ ರಿನ ಅಭಿಸ್ರಾಯವನ್ನು ವ್ಯಕ್ತಪಡಿಸುವುದ ಕ್ಕಾಗಿ ಸಭೆ ಸೇರಲಾಗಿತ್ತು. ಜಿಲ್ಲಾ ಬೋರ್ಡು ಈ ವಿಚಾರವಾಗಿ ನಿರ್ಣಯ ಒಂದನ್ನು ನುಂ ದಿಸುತ್ತ, ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳ ಕಾರಭಾರದ ಮೇಲೆ, ಸರಕಾರವು ಕತ್ತರಿಪ್ರ ಯೋಗಿಸುವುದನ್ನು ನಿಷೇಧಿಸಿ, ಸರಕಾರವು ಗ್ರಾಮಾಂತರಗಳ ರಸ್ತೆಗಳನ್ನು ಕೂಡ ತಮ್ಮ ವಶಕ್ಕೆ ತೆಗೆದುಕೊಳ್ಳಲಿ. ಆದರೆ, ಸರಕಾರ ಕ್ಕೊಪ್ಪಿಸಬೇಕಾದ ಉಸಕರಣಗಳ ಬಗ್ಗೆ ಪ್ರ ತಿಫಲಿಸಬೇಕೆಂದು ಸೂಚಿಸಿತು.

ಜಿಲ್ಲಾ ಆಹಾರ ಸಮಿತಿಯ ಸಭೆ- ದಕ್ಷಿಣ ಕನ್ನಡ ಜಿಲ್ಲಾ ಆಹಾರ ಸಮಿತಿಯ ಸ ಭೆ ತಾ. ೨೮ರಲ್ಲಿ ಜಿಲ್ಲಾ ಕಲೆಕ್ಟರ ರಾವ್ ಬ ಹದ್ದೂರ್ ಪಿ. ರಾಮಯ್ಯಾಬ್ ಬಿ. ಎ. ರವರ ಆಧ್ಯಕ್ಷತೆಯಲ್ಲಿ ಜರಗಿತು.

ಕಳೆದ ಮಾಚಿನಿಂಗಿನ ಬಳಿಕ ಪೊಕ್ಕೂರ್ ಮೆಂಟ್ ಇಲ್ಲಿ ಹೇಗೆ ಸಾಗಿಸಿದೆ ಜಿಲ್ಲೆಯಲ್ಲಿ ಕೂಡಿಟ್ಟ ದವಸಧಾನ್ಯಗಳ ಪರಿಮಾಣವೆಷ್ಟಿವೆ ಹೊರ ಜಿಲ್ಲೆಗಳಿಂದ ಜಿಲ್ಲೆಯೊಳಕ್ಕೆ ಎಸ್ಟು ಅ ಕ್ಕಿ ಬಂದಿದೆ ಎಂದು ಮುಂತಾದ ವಿಷಯಗಳ ನ್ನು ಕಲೆಕ್ಟರರು ವಿಷದೀಕರಿಸಿದರು. ನುತ್ತು ಸರಬರಾಯಿ ಪರಿಸ್ಥಿತಿ ಸಾಮಾನ್ಯವಾಗಿ ಸಮಾ ಧಾನಕರವಾಗಿದೆ ಎಂದೆರು. ಪ್ರೊಕ್ಯೂರ್‌ಮೆಂಟ್ ಯೋಜನೆಯು ಸಾಧಾರಣವಾಗಿ ಕಳೆದ ನ ಸ್ಸದಂತೆಯೇ ಸಾಗಿದೆ ಆದರೆ ಕಸ್ಟ್ರು ಮೆಂ ಬು ಏರ್ಪಾಗೆ ಯಾರಿಂದ ಗೇಂ ರವಿಸಬೇಕೆಂ ದಿದೆಯೂ ಅಂಥ ಒಕ್ಕಲುಗಳ ವಿವರಗಳನ್ನು ಬರೆದು ನರ್ಗದಾರರು ಒಂದು ಧೃಢ ಪತ್ರಿಕೆ ಯನ್ನು ಹಾಜರು ನೂಡಬೇಕೆಂಬುದು ಮತ್ತು ಅದರ ಅವಶ್ಯಗಳಿಗೆ ಹೆಚ್ಚಿಗೆ ಸಡಕ್ಕಿಳ್ಳ ಲು ಪರ್ಮಿಟ್ ನೀಡುವ ಸಾಧ್ಯವಿಲ್ಲವೆಂಬುದು, ಈ ಎರಡು ಹೊಸ ವಿಷಯಗಳೆಂದೂ ಕಲೆಕ್ಟ ರು ತಿಳಿಸಿದರು. ಕಳೆದ ನರ್ಷದಸ್ಟೇ ಬೆ ಲೆ ಈ ನರ್ಷವೂ ಎಕ್ಕ ಭತ್ತಕ್ಕೆ ರೂಪ್ಪುದೆಂದು ವೈಧವಡಿಸಿದರು.

ಅಕ್ಕಿ ಭತ್ತವನ್ನು ಎಷ್ಟಿಸಬೇಕಾದ ತಾರೀ ಕು. ಸಮಯಗಳ ಪ್ರಸ್ತಾಪವು ಬಂದಾಗ ಈ ಗೆ ಎಸ್ಟಿಸಲು ನಿರ್ಧರಿಸಿದ ಸಾಯಿದೆಯೆಂ ಸಮೂಹ ನಿಮದಿಗಳನ್ನು ಮುಂಚಿತವಾಗಿಯೇ ಆಯತಿಸಿದೂ, ಹಾಗೆ ಬೆಲೆಯ ನಿಯಂತ್ರಣಗಳ ನ್ನು ಸಂತಿಲಿಸಿ, ಆ ದೃಷ್ಟಿಯಿಂದ ಈ ನಿ ರ್ಧರಿಸಿದ ನಾಯಿನೆಗಿಂತೆ ನಿಮದಿಗಳನ್ನು ಮುಂದುವರಿಸಿ ಒಪ್ಪುವಂತೆ ಆಗಬೇಕೆಂದೂ ಸಮಿತಿಯು ಅಭಿಪ್ರಾಯಪಟ್ಟಿತು. ಆದರೆ ಆ ಕ್ಕಿಯ ಸರಿಸ್ಥಿತಿಯ ದೆಸೆಯಿಂದ ಆ ಪಾಯಿನೆ ಯನ್ನು ಮುಂದುವರಿಸುವುದು ಯೋಗ್ಯವಾಗ ದೆಂದೂ, ಆದರೆ ಬಿಡ್ಡೇರಪ್ಪುರ್ದಕವಾಗಿರು ವಪ್ಪುಗಳ ಹೊರತಾದ ಸಂಪರ್ಭಗಳಲ್ಲಿ ಆ ಅ ವಧಿ ಏರಿದುದಕ್ಕಾಗಿ ಫ್ರೈತಿಕ್ಯಾರ್ಸ್‌ಗಳ ನ್ನು ಹೂಡಲಾಗುವುದಿಲ್ಲವೆಂದೂ ಕಲೆಕ್ಟರ ರು ನಿರ್ಣಯಿಸಿದರು. ಇಷ್ಟೇ ಅಲ್ಲದೆ ಬೇಕಾಯ ಬರ್ಜಿಂದೆ ಹಿಂದೆ ನುಂ ದಿಸಲ್ಪಟ್ಟಿದ್ದ ಅಂಶವನ್ನು ಕಡಿಮೆಮಾಡಲು ಅಪ್ಪಣೆಯಾಗಿದೆಯೆಂದೂ ಅದುದರಿಂದ ಕಳೆದವರ್ಷ ಎಕರೆಗೆ ನೂರು ಮುಡಿಯಂ ತೆ ಬರ್ಜಿಗೆ ಬಿಟ್ಟಲ್ಲೆಲ್ಲಾ ಈ ನರ್ಷ ಸಾಮಾ ನ್ಯವಾಗಿ ಆದನ್ನು ಎರಡು ಮುಡಿಗೆ ತಗ್ಗಿಸ ಲಾಗುವುದೆಂದೂ ಈ ಮೂರು ಮುಡಿಎಂ ಬುದು ಅಂಥ ವಿಶೇಷ ಪರಿಮಾಣದಿಂದ ವಿಶಿ ಯಸ್ಟೇ ಎಂದು ಕ್ಷಪ್ತೀಕರಿಸಲಾಯಿತು. ಟ್ರೈ ನ್ ಸರ್ವಿಸುಗಳು ಹೆಚ್ಚುವಂತೆ ಸರಕಾರವ ನ್ನು ಸ್ಪಾರ್ಧಿಸಬೇಕೆಂದೂ ಮಿಲ್ ಬಿ. ಎಸ್. ರಮ್ಮಾನ್ ಅವರು ಸೂಚಿಸಿದರು. ಈ ವಿಷ ಯ ಈಸಮಿತಿಗೆ ಸಂಬಂಧಪಟ್ಟದ್ದಲ್ಲವೆಂದು ತೀರ್ಮಾನಿಸಲಾಯಿತು.

ಜಿಲ್ಲಾ ಪರಿಯಾಡಿಕಲ್ ಪರಿಷತ್ತು

ಕಳೆದ ತಾ. ೨೯ರಿಂದ ಕಲೆಕ್ಟರರ ಅಧ್ಯಕ್ಷತೆ ಯಲ್ಲಿ ಸೇರಿತು. ಡಿ. ಜೊ. ಅಧ್ಯಕ್ಷ, ನುತ್ತು ನುತ್ತು ಡಿ. ಬೋರ್ಡಿನ ಇಂಜಿನಿಯರ್. ಹೆ ಲ್ತ್ ಆಫೀಸರ್, ಜಿಲ್ಲಾ ಫಾರೆಸ್ಟ್ ಆಫೀಸರ್ ನೊದಲಾದವರು ಉಪಸ್ಥಿತರಾಗಿದ್ದರು. ಉ ಡುಪಿಯ ಸಾಂಗಾಣ ಹೊಳೆಗೆ ರೂ. 4000 ವರ್ಚಿನಿಂದ ಕಾಲ್ವಾರಿಯ ಸಂಕ ಬಂದನ್ನು ನಿರ್ಮಿಸುವ, ಕುಂಜಾಲದಲ್ಲೊಂದು ಬಾವಿ ತೋಡಿಸುವ ಯೋಜನೆಗಳು ನೂತ್ಯನಾದು ಪು ಕುಂದಾಪುರದಲ್ಲಿ ಪ್ರಾಣಿಗಳ ಆಸ್ಪತ್ರೆ ಯೊಂದನ್ನು ಸ್ಥಾಪಿಸುವ ವಿಚಾರ ಬಂದಾಗ್ಗೆ, ಮೊದಲು ಉಡುಪಿಯಲ್ಲಿ ಸ್ಥಾಪಿಸಲ್ಪಡಬೇ ಕಾದೆಯೆ ಅವಶ್ಯ-ಎಂದು ತೀರ್ಮಾನಿಸಲಾ ಯಿತು. ಕೊಲ್ಲೂರಲ್ಲೊಂದು ಅಸ್ಪತ್ರೆ ತೆರೆ ಯುವ ವಿಚಾರ ಬಂದಾಗ, ಈ ವಿಚಾರವು ಯುನ್ನೋತ್ತರ ಯೋಜನೆಯಲ್ಲಿ ಸೇರಿದುವು ದೆಂದು ಸಭ್ಯ ವಿಚಾರಿಸಬೇಕಾಗಿಲ್ಲವೆಂದಾಯಿ ತು. ಜೊಲಾರ್ ಪೇಟೆ-ಕಣ್ಣನ್ನೂರ್ ಜೆಸಂ ಜರ್ ರೈಲನ್ನು ಮಂಗಳೂರಿಂದು ವರೆಗೂ ನುಂದುವರಿಸಬೇಕೆಂದೂ, ಇತರ ರೈಲುಗ ಳನ್ನೂ ಮಂಗಳೂರು ವರೆಗೆ ಸೇರಿಸಬೇಕೆಂ ದೂ ಸಂಬಂಧಪಟ್ಟವರಲ್ಲಿ ವಿನಂತಿಸಿಕೊಳ್ಳ ಲು ನಿರ್ಧರಿಸಲಾಯಿತು.

ಬಿಸೆಂಟ್ ದಿನಾಚರಣೆಯೂ ಸ್ಥಳೀ ಯ ಬಿಸೆಂಟ್ ಬಾಲಿಕಾ ಪಾಠಶಾಲೆಯ ವಾ ರ್ಷಿಕ ದಿನಾಚರಣೆಯೂ ಈ ಶಾಲೆಯಲ್ಲಿ ಕಳೆ ದ ತಾ. ೩೦, ೧ ಮತ್ತು ೨ರಲ್ಲಿ ನಡೆಯಿತು. ನೊದಲನೆಯ ದಿನದ ವನತೆಯರ ದಿನದಂದು ಶ್ರೀಮತಿ ಕೆ. ಶಾಂತಬಾಯಿ ಅವರು ಅಧ್ಯಕ್ಷ ತೆ ವಹಿಸಿದ್ದರು. ಮರುದಿನ ಬಿಸೆಂಟ್ ದಿನಾ ಚರಣೆಯು ರಾ। ಸಾ। ಎಂ. ಕೆ. ನಂಬಿಯಾ ರರ ಅಧ್ಯಕ್ಷತೆಯಲ್ಲಿ ಜರಗಿತು. ಕೊನೆಯ ದಿನ ಹಳ ವಿದ್ಯಾರ್ಥಿನಿಯರ ದಿನಾಚರಣೆಯು ಶ್ರೀ ಮತಿ ಕೆ ಪಾರ್ವತಿ ಬಾಯಿ ಎಂ. ಎ. ಎಲ್. ಟಿ. ರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರತಿ ದಿನವೂ ವಿದ್ಯಾರ್ಥಿನಿಯರ ಮನೋರಂಜಕ ವಾದ ವಿವಿಧ ನಿನೋದಾವಳಿಗಳಿದ್ದುವು.

ಹಿಂದೂಸ್ಥಾನ್ ಸ್ಕೌಟ್-ಸಪ್ತಾಹವು ಕೆನರಾ ಪ್ರೌಸ್ಕೂಲಿನ ಆವರಣ ಬಯಲಲ್ಲಿ ತಾ. ೧೮ರಂದು ಮುಂಜಾನೆ ಆರಂಭವಾಯಿತು. ಅಂ ದು ಶ್ರೀ. ಎಂ. ಎಸ್. ನೂಥಿವ ರಾಯರು ಅಧ್ಯಕ್ಷತೆ ವಹಿಸಿ ಸ್ಕೌಟ್ ದಳದ ಧ್ವಜವನ್ನು ಹಾರಿಸಿದರು

ಜೇನು ವ್ಯವಸಾಯಗಾರರ-ಅಖಿಲ ಭಾರತ ಪರಿಷತ್ತೊಂದು ಬರುವ ಕ್ರಿಸ್‌ಮಸ್ ನೇಳೆಯಲ್ಲಿ ಮಂಗಳೂರಲ್ಲಿ ಜರಗುವುದೆಂ ದು ತಿಳಿಯುತ್ತೇವೆ.

ಸಾಂಕ್ರಾಮಿಕ ರೋಗಗಳನ್ನು ತ ಡೆಗಟ್ಟುವರೆ-ಜಿಲ್ಲೆಯೊಂದು ಕಮಿಟಿಯು ರಚಿಸಲ್ಪಟ್ಟಿತೆ. ಜಿಲ್ಲಾ ಕಲೆಕ್ಟರರು ಈ ಕಮಿ ಟಿಯ ಪ್ರೆಸಿಡೆಂಟರು. ಜಿಲ್ಲಾ ಹೆಲ್ತ್ ಆಫೀ ಸರರು ಕಾರ್ಯದರ್ಶಿಗಳಿರುರು. ಜಿಲ್ಲೆಯ ಯಾ ವ ಭಾಗದಲ್ಲೇ ಆಗಲಿ ಸಾಂಕ್ರಾಮಿಕ ರೋ ಗಗಳು ತಲೆದೋರಿದರೆ ಕೂಡಲೇ ಮಂಗಳೂ ರಲ್ಲಿರುವ ಈ ಕಮಿಟಿಗೆ ತಿಳಿಸಿ ಮಹಾ ಜನರು ಸಹಕರಿಸಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಉಡುಪಿ ಶಹರಿನಿಂದ ಕೆಲವೇ ಫರ್ಲಂಗು ದೂರದ ಉತ್ತರ ನಗರಿ ಎಂಬಲ್ಲಿಯ ಸಾರ್ವಜನಿಕ ಸಹಾಯದಿಂದ ಕಟ್ಟಿ ಲ್ಪಟ್ಟ ಶ್ರೀ ಮಾಸುಕೀ ಸುಬ್ರಹ್ಮಣ್ಯ ದೇವರ ಗುಡಿಯ ದೃಶ್ಯ ನಿದು. ಮಹಾ ಜನರ ವಿನಂತಿ ಮೇರಿಗೆ ಈ ಗುಡಿಯನ್ನು ಇನ್ನಷ್ಟು ವಿಶಾಲಗೊಳಿಸಿ ಜನೋಪಯೋಗೀ ಸ್ಥಳವನ್ನಾಗಿ ಮಾರ್ಪಡಿಸಿ ವರೆ ಅದರ ಜನ್ಮದಾತರಾದ ಶ್ರೀ. ಆನಂತ ಸಾ ಮಗ, ನಾಗಪಾತ್ರಿಯವರು ಹಣ ಸಂಗ್ರಹದ ಸಲುವಾಗಿ ಸದ್ಯವೇ ಬೊಂಬಾಯಿ ಮೊದಲಾದ ಶಹರುಗಳನ್ನು ಸಂದರ್ಶಿಸಲಿರುವರು. (Adv.)

NOTICE

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ.

O P. No 61/45

ಕೃಷ್ಣಾಯ ಪ್ರಭು, ಗೋವಿಂದ ಪ್ರಭುಗಳ ಮಗ. ಉಡ್ಡಿ ತಾಲೂಕು ಬಾಳಕುದ್ರು ಗ್ರಾಮದ ಹಂಗಾರಕಟ್ಟೆಯಲ್ಲಿರುವವನ

. ಅರ್ಜಿದಾರ.

ಈ ಮೂಲಕ ಸರ್ವಜನರಿಗೂ ತಿಳಿಯಪ ಡಿಸುವದೇನೆಂದರೆ:—

ಅರ್ಜಿದಾರನ ಮಗ ತಾ 27 7 45ನೇ ಮೃತಪಟ್ಟ ಕೆ ರಂಕರ ಪ್ರಭುಗಳಿಗೆ ಆದಿ ಕೆನ ರಾ ಸ್ಯೂರೆನ್ಸ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಉಡ್ಡಿ" ಇವರ ಪೋಲಿಸಿ ನಂ ಬ್ಲ 10304 ರಜಾಟ್ಟು ಒರಕಕ್ಕೆ ಲೈವಜನ್ನು ವಸೂಲು ಪಡಿಯನರೆ ಅರ್ಜಿದಾರನೊಬ್ಬ ನೇ ಹಕ್ಕುದಾರನೆಂತಲೂ, ಆ ಬಗ್ಗೆ ಅರ್ಜಿ ದಾರನ ಹೆಸ್ಸಲ್ಲಿ ಸಕ್ಸೆಶ್ಶನ್ ಸರ್ಟಿಫಿಕೇಟು ಕೂಡಿಸಬೇಕಾಗಿಯೂ ನಗ್ಗೆರೆ ಸಂಗ್ರ ಕಾಣಿ ಅರ್ಜಿದಾರನು ಬಾಕ್ಲು ಮಾಡಿರುವ ಮೇ ಲ್ಕಂಡ ಅರ್ಜಿಯು ತಾ 29 10-1945ಕ್ಕೆ ಯಿಟ್ಟುರುತ್ತದೆ. ಆಕ್ಷೇಪ ಹೇಳಲಿಳ್ಳವರು ಸ ದ್ದಿ ತಾ 29-10 45ನೇ ದಿವ್ಸ ಮೇಲ್ಕಂಡ ಕೋರ್ಟು ನುಂದೆ ಹಾಜ್ಯಾಗಿ ಜ್ಯಾಬೀದು ಬಾಡಿಕೊಳ್ಳತಕ್ಕದ್ದು.

P. V. Achar,
VaKil for petitioner.

ಉಡ್ಡಿ ತಾ. 6 10-45.

ಗಾಂಧೀ ಜಾತಕ.

(೨ನೇ ಪುಟದಿಂದ ಮುಂದುವರಿದುದು.)

ನಸಿ ವಿಶೇಷಾಧಿವೇಶನದಲ್ಲಿ ಖಿಲಾಫತ್ತು ಮತ್ತು ಪಂಜಾಬಿನ ಅತ್ಯಾಚಾರಗಳಿಗೆ ನ್ಯಾಯ ಸಂಪಾದಿಸಲು ಅಸಹಕಾರ ಕಾರ್ಯಕ್ರಮಗಳನ್ನು ಮುಂದಿಟ್ಟು ವಿಜಯ. ಅಹಮ್ಮದಾಬಾದಿನಲ್ಲಿ ಗುಜರಾಥ್ ವಿದ್ಯಾಪೀಠದ ಸ್ಥಾಪನೆ. ನಾಗಪುರ ಕಾಂಗ್ರೆಸ್ ಅಧಿವೇಶನದಿಂದ 'ಶಾಂತ ಚಳವಳದ ಮೂಲಕ ಸ್ವರಾಜ್ಯ ಸಾಧನೆಯೇ ಗುರಿ' ಎಂಬ ನಿರ್ಧಾರ ಮಾಡಿಸುವಿಕೆ.

1921—ಕಾಂಗ್ರೆಸಿಗೆ 1 ಕೋಟಿ ಸದಸ್ಯರನ್ನು ಸೇರಿಸುವ ಚಳವಳ. 1 ಕೋಟಿ ರೂಪಾಯಿಯ ನಿಧಿ ಸಂಗ್ರಹ ಮತ್ತು 20 ಲಕ್ಷ ಚರಕಗಳ ಪ್ರಚಾರ. ವಿದೇಶಿ ವಸ್ತ್ರದ ಪೂರ್ಣ ಬಹಿಷ್ಕಾರ ಚಳವಳ ಹೂಡಿ ಬೊಂಬಾಯಿಯಲ್ಲಿ ದೊಡ್ಡ ಪರದೇಶಿ ವಸ್ತ್ರದ ರಾಶಿಗೆ ಸ್ವಹಸ್ತದಿಂದ ಬೆಂಕಿ ಹಚ್ಚಿಸಿದ್ದೂಣ ಕಾಂಗ್ರೆಸಿನ ಸರ್ವಾಧಿಕಾರ ಪ್ರಾಪ್ತಿ.

1922—ಬಾರ್ಡೋಲಿಯಲ್ಲಿ ಸತ್ಯಾಗ್ರಹವಾರಂಭಿಸುವದಾಗಿ ವೈಸರಾಯರಿಗೆ ನೋಟೀಸು. ಚೌರಿಚಾರಾದಲ್ಲಿ ಜನರು ದಂಗೆಯೆದ್ದು 21 ಪೋಲೀಸ್ ಮತ್ತು ಒಬ್ಬ ಸಬ್ ಇನ್ಸ್ಪೆಕ್ಟರನನ್ನು ಸಜೀವ ದಹನ ಮಾಡಿದ ಸಂತಾಪದಿಂದ 5 ದಿನಗಳ ಉಪವಾಸ ವ್ರತ. ಮತ್ತು ಸತ್ಯಾಗ್ರಹ ಚಳವಳವನ್ನು ನಿಲ್ಲಿಸಿದುದು.

1922—ರಾಜದ್ರೋಹಕ್ಕಾಗಿ ದಸ್ತಗಿರಿಯಾಗಿ 6 ವರುಷಗಳ ಸಜೆ ಪ್ರಾಪ್ತಿ.

1924—'ಎಂಡಿಪಿಟೆಸ್' ಕಾಹಿಲೆಗಾಗಿ ಓಪರೇಶನ್ ನಡೆದು ನಿಶ್ಚರ್ತ ಬಿಡುಗಡೆ. ಪುನಃ 'ಯಂಗ್ ಇಂಡಿಯಾ' ಮತ್ತು 'ನವ ಜೀವನ' ಪತ್ರಿಕೆಗಳ ಸಂಪಾದಕತ್ವ. ಹಿಂದೂ-ಮುಸ್ಲಿಂ ಐಕ್ಯಕ್ಕಾಗಿ 21 ದಿನಗಳ ಉಪವಾಸ. ಬೆಳ್ಗಾಂವ್ ಕಾಂಗ್ರೆಸಿನ ಅಧ್ಯಕ್ಷತೆ.

1925—ಅಖಿಲ ಭಾರತ ಚರಕಾ ಸಂಘದ ಸ್ಥಾಪನೆ. ಅಶ್ರಮವಾಸಿಗಳ ಅಕೃತ್ಯದ ಪಾಪ ಶಮನಕ್ಕಾಗಿ 7 ದಿನಗಳ ಉಪವಾಸ. 'ಸತ್ಯದ ಮೇಲೆ ನಾನು ನಡೆಸಿದ ಪ್ರಯೋಗಗಳ ಕಥೆ' ಎಂಬ ಹೆಸರಿನಿಂದ ತನ್ನ ಆತ್ಮವೃತ್ತ ಬರೆಯಲು ಪ್ರಾರಂಭ.

1928—ಕಾಂಗ್ರೆಸ್ ಅಧಿವೇಶನದಲ್ಲಿ 1929ರೊಳಗೆ ಪೂರ್ಣ ಸ್ವರಾಜ್ಯ ದೊರೆಯದಿದ್ದಲ್ಲಿ ಪೂರ್ಣ ಸ್ವಾತಂತ್ರ್ಯವೇ ಬೇಕೆಂಬ ಠರಾವು ತಂದುದು.

1929—ಲಾಹೋರ್ ಕಾಂಗ್ರೆಸಿನಲ್ಲಿ ಸ್ವರಾಜ್ಯವೆಂದರೆ ಪೂರ್ಣ ಸ್ವರಾಜ್ಯವೆಂಬ ನಿರ್ಧಾರಮಾಡಿಸಿದುದು.

1930—ಅ. ಭಾ. ಕಾಂಗ್ರೆಸ್ ಸಮಿತಿ ನಿರ್ಣಯದಲ್ಲಿ [illegible] ಹೊಡುವ ಸರ್ವಾಧಿಕಾರಿಯಾಗಿ ನೇಮಕ. ಕಾಂಗ್ರೆಸ್ ಬೇಡಿಕೆ ಮನ್ನಿಸದಿದ್ದಲ್ಲಿ ಉಪ್ಪಿನ ಕಾನೂನು ಮುರಿಯುವೆನೆಂದು ವೈಸರಾಯರಿಗೆ ನೋಟೀಸು. ದಂಡೀ ದಂಡಯಾತ್ರೆ ಮಾಡಿ ಉಪ್ಪು ಹೆಕ್ಕಿದುದು. ದಸ್ತಗಿರಿಯಾಗಿ ವಿಚಾರಣೆಯಿಲ್ಲದೆ ಕಾರಾಗೃಹ. ಅಖಿಲ ಭಾರತದಲ್ಲಿ ಹರತಾಳ. ಒಂದು ಲಕ್ಷಕ್ಕೆ ಮಿತ್ತು ದಸ್ತಗಿರಿಗಳು.

1931—ನಿಶ್ಚರ್ತ ಬಿಡುಗಡೆ. ವೈಸರಾಯರೊಡನೆ ಮಾತುಕತೆ ನಡೆದು, ಗಾಂಧೀ-ಇರ್ವಿನ್ ಒಪ್ಪಂದ. ಕಾಂಗ್ರೆಸಿನ ಏಕ ಮಾತ್ರ ಪ್ರತಿನಿಧಿಯಾಗಿ ದ್ವಿತೀಯ ದುಂಡು ಮೇಜು ಸಮ್ಮೇಲನಕ್ಕಾಗಿ ಲಂಡನ್ನಿಗೆ ಪ್ರಯಾಣ. ಅಲ್ಲಿ ಭಗವಹಿಸಿ ಮರಳಿ ಭಾರತಕ್ಕೆ.

1932—ದಸ್ತಗಿರಿಯಾಗಿ ವಿಚಾರಣೆಯಿಲ್ಲದೆ ಜೈಲು. ಜಾತೀಯ ಎವಾರ್ಡಿನ ಹರಿಜನರಿಗೆ ಪ್ರತ್ಯೇಕ ಪ್ರಾತಿನಿಧ್ಯದ ನಿವಾರಣೆಗಾಗಿ ಜೈಲಿನಲ್ಲೇ ಮರಣಾಂತಿಕ ಉಪವಾಸ ವ್ರತ. ತನ್ನ ಬೇಡಿಕೆ ಮನ್ನಿಸಲ್ಪಟ್ಟುದರಿಂದ 7 ದಿನಗಳ ನಂತರ ಉಪವಾಸ ತ್ಯಾಗ.

1933—ಇಂಗ್ಲಿಷ್ ಮತ್ತು ಹಿಂದಿ ಯಲ್ಲಿ 'ಹರಿಜನ' ವಾರಪತ್ರಿಕೆಯ ಸ್ಥಾಪನೆ. ಆತ್ಮಶುದ್ಧಿಗಾಗಿ 21 ದಿನಗಳ ಉಪವಾಸ ವ್ರತ ಧಾರಣೆ ಮಾಡಿದ ಮರುದಿನವೇ ನಿಶ್ಚರ್ತ ಬಿಡುಗಡೆ. ಕಾಯಿದೇ ಭಂಗ ಚಳವಳವನ್ನು 6 ವಾರಗಳ ಮಟ್ಟಿಗೆ ನಿಲ್ಲಿಸಿ, ಸರಕಾರಕ್ಕೆ ಓರ್ಡಿನೆನ್ಸುಗಳನ್ನು ಹಿಂತೆಗೆದು ಕೊಳ್ಳುವಂತೆ ಕರೆ. ಸತ್ಯಾಗ್ರಹ [illegible] ದ ಪುನರುತ್ಥಾನಕ್ಕಾಗಿ [illegible] ನಿಂದ ರಾಜ್ಯಗೆ 33 ಸ್ವಯಂ ಸೇವಕರುಗಳಿಗೆ ಧಾಳಿ ಹೂಡುವೆನೆಂದು ಬೊಂಬಾಯಿ ಸರಕಾರಕ್ಕೆ ಸೂಚನೆ. ದಸ್ತಗಿರಿಯಾಗಿ ವಿಚಾರಣೆಯಲ್ಲದೆ ಜೈಲು. ಬಿಡುಗಡೆಯಾಗಿ ಪ್ರತಿಬಂಧಕಾಜ್ಞೆಯನ್ನು ಮುರಿದು ದಕ್ಕಾಗಿ ಮತ್ತೊಮ್ಮೆ ನಸ್ತಗಿರಿ. ಅಸ್ಪರ್ಶತಾ ನಿವಾರಣಾ ಪ್ರಚಾರಕ್ಕೆ ಕಾಶ ಕೊಡದುದಕ್ಕಾಗಿ ಉಪವಾಸ ಧಾರಣೆ ಮತ್ತು ನಿಶ್ಚರ್ತ ಬಿಡುಗಡೆ. ಹರಿಜನೋದ್ಧಾರಕ್ಕಾಗಿ ದೇಶಸಂಚಾರ. ಗ್ರಾಮ ಕೈಗಾರಿಕೆಗಳ ಪುನರುದ್ಧಾರ ಹರಿಜನೋದ್ಧಾರ. ಮತ್ತು ಕೈಗಾರಿಕಾ ಸಿಬ್ಬಂದಿಗಾಗಿ ರಾಜಕೀಯದಿಂದ ನಿವೃತ್ತಿ ಹೊಂದುವ ನಿರ್ಧಾರ. ಅಖಿಲ ಭಾರತ ಗ್ರಾಮೋದ್ಯೋಗಿ ಸಂಘದ ಸ್ಥಾಪನೆ

1936—ಮಧ್ಯ ಪ್ರಾಂತ್ಯದ ವಾರ್ಧಾ ಬಳಿಯ ಸೇವಾಗ್ರಾಮದಲ್ಲಿ ತನ್ನ ಮುಖ್ಯ ಕಾರ್ಯಾಲಯ ಸ್ಥಾಪನೆ.

1937—'ವಾರ್ಧಾ ಶಿಕ್ಷಣ' ಎಂದು ಹೆಸರಾದ ಶಿಕ್ಷಣ ಪ್ರಚಾರದಲ್ಲಿ ಆಸಕ್ತಿ. ಆ ಸಂಬಂಧವಾಗಿ ವಾರ್ಧಾದಲ್ಲಿ ನೆರೆದ ವಿದ್ಯಾ ಸಮ್ಮೇಲನದ ಅಧ್ಯಕ್ಷತೆ.

1939—ರಾಜ್ ಕೋಟೆ ಸಂಸ್ಥಾನದ ಆಡಳಿತ ಸುಧಾರಣೆಗಾಗಿ, ಆಲ್ಲಿಯೆ 'ಮರಣ ತನಕ ಉಪವಾಸ' ವ್ರತ ವೈಸರಾಯರು ಮಧ್ಯಸ್ಥಿಕೆ ವಹಿಸಿದುದರಿಂದ 7 ದಿನಗಳಲ್ಲಿ ಉಪವಾಸ ಮುಕ್ತಾಯ.

1940—ಯುದ್ಧ ಸ್ಥಿತಿಯ ಪರ್ಯಾಲೋಚನೆ ನಡಿಸಲು ವೈಸರಾಯರಿಂದಾಮಂತ್ರಣ ಬಂದು ಅವರೊಡನೆ ಸಂಧಾನ [illegible] ಪ್ರಸ್ತಾವನೆ. ಲೇಖನ ಮತ್ತು ವಾರ್ತೆಗಳನ್ನು ಮುಂಬಾಗಿ ಸಂಪೂರ್ಣವಾಗಿ ನಿಷೇಧಾರ್ಥವಾಗಿ 'ಹರಿಜನ' ಮತ್ತು ಇತರ ಪತ್ರಿಕೆಗಳನ್ನು ತಾನೇ ನಿಲ್ಲಿಸಿ ಬಿಟ್ಟುದು.

1941—ಸ್ವತಃ ತನ್ನ ಬೇಡಿಕೆಯಂತೆ ಕಾಂಗ್ರೆಸ್ ಕಮಿಟಿಯಿಂದ ನಿರ್ಧಾರಮಾಡಿಸಿ ಕಾಂಗ್ರೆಸಿನ ತನ್ನ ನಾಯಕತ್ವವನ್ನು ಬಿಟ್ಟು ಕೊಟ್ಟುದು.

1942—'ಹರಿಜನ' ಮತ್ತು ಇತರ ಪತ್ರಿಕೆಗಳ ಪುನರಾರಂಭ. ನವಫಿಲ್ಲಿಯಲ್ಲಿ ಸರ್. ಕ್ರಿಪ್ಸರೊಡನೆ ಸಂಧಾನಿಸಿ, ಕ್ರಿಪ್ಸ್ ಸೂಚನೆಯು 'ಮೇಲ್ನೋಟಿಕು ಹಾಕಿರುವ ಚೆಕ್ಕು' ಎಂದುದು. ಭಾರತವನ್ನು ಬಿಡುವಂತೆ ಬ್ರಿಟಿಷರಿಗೆ ವಿಜ್ಞಾಪನೆ ಬೊಂಬಾಯಿಯ ಎ. ಐ. ಸಿ ಸಿ ಸಭೆಯಲ್ಲಿ 'ಕ್ವಿಟ್ ಇಂಡಿಯಾ' ನಿರ್ಧಾರಮಾಡಿಸಿ ಸ್ಫೂರ್ತಿಯ ಭಾಷಣ. ದಸ್ತಗಿರಿಯಾಗಿ ಆಗಾಖಾನ್ ಅರಮನೆಯಲ್ಲಿ ಬಂಧನ. ಆಗೋಸ್ತು ಗಲಭೆಯ ಕುರಿತು ಅಲ್ಲಿಂದಲೇ ವೈಸರಾಯರೊಡನೆ ಸತ್ಪ್ರವ್ಯವಹಾರ.

1943—21 ದಿನಗಳ ಉಪವಾಸ ವ್ರತ ಕೈಕೊಂಡು ಮರಣದ ಗಡಿಯ ವರೆಗೂ ಮುಟ್ಟಿ, ಕೊನೆಗೆ ಉಪವಾಸ ವ್ರತ ವಿಜಯ.

1944—ಆಗಾಖಾನ್ ಅರಮನೆಯಲ್ಲಿ ದ್ವಂತೆಯೇ ಕಸ್ತೂರಿಬಾನನ್ನು ಕಳಕೊಂಡು ವಿಧುರನಾದುದು. ಅನಾರೋಗ್ಯದ ಕಾರಣದಿಂದ ನಿಶ್ಚರ್ತ ಬಿಡುಗಡೆ ಪಾಕಿಸ್ತಾನ್ ಪ್ರಶ್ನೆಯ ಕುರಿತು ಜಿನ್ನರೊಡನೆ ಚಿರಸ್ಮರಣೀಯ ಸಂಧಾನ ಮಾತುಕತೆ. 75 ತುಂಬಿ 76 ಹಿಡಿಯುವ ಆ ಒಕ್ಟೋಬರ್ 2ರಲ್ಲಿ ಕಸ್ತೂರಿಬಾ ಸ್ಮಾರಕವಾಗಿ ಇಡೀ ರಾಷ್ಟ್ರ ಸಂಗ್ರಹಿಸಿಕೊಟ್ಟ 110 ಲಕ್ಷ. ರೂ. ಗಳ ನಿಧಿಯನ್ನು ಕಾಣಿಕೆ ಪಡೆದುದು

ಯಾವತ್ತೂ ವಿಧದ ಜೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

The Pangal Nayak Bank Limited.
(Incorporated in 1920)
Registered Office Court Road, UDIPI.
branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE

Every kind of upto-date Banking business facility is provided by this POPULAR and COSMOPOLITAN institutio non sound lines and advantageous terms.

Please ascertain business particulars from any of our Offices at the above places.

Date 25th Aug 1945.

ಗನೋರಿಯಾ ಪರಮಾಶ್ಚರ್ಯಕರ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ನೋದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಸಕ್ಕರೆ: ಹಸೀಖೋವ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ್ ಚಾರ್ಜ ೪ ಆಣೆ.

ವಿಳಾಸ:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ಪೈನ್ಸ್. ಶಕ್ತ್ಯನುಸಾರ ಮಾಡತಕ್ಕ ಮೂಲಕರ ವಿಶಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಆರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 1-8-0 ಮಾತ್ರ.
ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-
ಹೆಚ್ಚಿನ ವಿಚಾರಕ್ಕೆ ಬರೆಯಿರಿ—
ಬಾಲಚಂದ್ರ ಆಫೀಸು, ಉಡುಪಿ

ಮಣಿ
ಪುಸ್ತಕಗಳು
ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಿಗಳು, ದಾಖಲು ಮತ್ತು ಮಂತ್ಲಿ ರಿಟರ್ನ್ಸ್ ಫಾರ್ಮುಗಳು, ರಿಕಾರ್ಡು ಶೀಟುಗಳು ದೊರೆಯುತ್ತವೆ.
ಮಣಿ ಪುಸ್ತಕ 1ಕ್ಕೆ 0—1—0
,, ,, 50ಕ್ಕೆ 2—9—0
,, ,, 100ಕ್ಕೆ 5—0—0
Navabharat Book Depot,
UDIPI.

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,
UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ರಾಷ್ಟ್ರಸಭೆಯ ಇತಿಹಾಸ	2	8	0
2.	ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3.	ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4.	ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5.	ಭಾರತ ಗೀತಾಂಜಲಿ	0	2	0
6.	ಪುರಂದರದಾಸರ ಕೀರ್ತನೆ ಭಾಗ 4ರ ಸ್ಟಿಪ್ ಬೈಂಡ್	1	4	0
7.	ಶಾಂತಿಪುರಾಣ	3	0	0
8.	ಸಾಮುದ್ರಿ ಶಾಸ್ತ್ರ	0	8	0
9.	ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ಕೃಷ್ಣ ಸಂಧಾನ	....	1	0	0
ತುಳುನಾಲ ಬಲಿಯೇಂದ್ರ	....	0	4	0
ಅಳಿಯ ಸಂತಾನದ ಕಟ್ಟ್ಪದ ಗುಟ್ಟು ..		0	8	0
ಕಾಸಿಗೆ	....	0	8	0
ತುಳು ವ್ಯಾಕರಣ	....	1	0	0
ನುಬ್‌ಮೂಳತ್ತ್ ಮದ್‌ಮಾಯೆ	....	0	4	0
ಜನಮೆಲ್	....	0	12	0
ತುಳು ಪದ್ಯಮಾಲಿಕೆ	..	0	2	0
ಬಂಗಾರ್ದಂಗಿದ ಕತೆ	....	0	2	0
ಮಿತ್ಯ ನಾರಾಯಣ ಕತೆ	....	1	0	0
ಸತೀ ಕಮಲೆ	....	0	12	0
ಬೊಬ್ಬರ್ಯ	....	0	4	0
ತೊಡಕೆನಾಂ	....	0	4	0
ಮುಂಡತ್ತಾಯೆ	...	0	4	0
ಕನ್ನಡಕೊ	....	0	1	0
ವಿಶ್ವರೂಪದರ್ಶನೊ	..	0	2	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: 2—8—0. ದಪ್ಪವಾದ ಹೊದಿಕೆಯುಳ್ಳದ್ದು:

ಹಳಿಗನ್ನಡದ ತಿಳಿನುಡಿಯ ರಸಗಬ್ಬ
ಹಳಿಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, **ಉಡುಪಿ.**
ಬೆಲೆ: 3—0—0
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪೈ & ಬ್ರದರ್ಸ್, ,,
ಕೆ. ಭೋಜರಾವ್ & ಕೊ ,,
ಪಾವಂಜೆ ಗುರುರಾವ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ
ಪಿ. ಎ. ಪೈ ಬ್ರದರ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd No. M 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಪ್ರತಿ ಪ್ರತಿಗೆ ರೂ 0—1—6

ವರ್ಷ 25] ಪ್ರತಿ ಗುರುವಾರ ಹೊರಡುವ ನಾಮ್ಕೀಯ ವಾರಪತ್ರಿಕೆ. [Vol. 25

ವಾರ 2] Founder SRI A. B. SHETTY. [No. 7

ಉಡುಪಿ • 18—10—1945 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಚಿಕೆ ರೂ. 0—1—6.

ಅಮೃತಾಂಜನ ತಲೆನೋವನ್ನೆ, ತಿರಿ, ನೋವನ್ನೆ, ಉಳುಕು ಆ.ತ್ತಿಗೆ, ಘುಡ, ಹುಲ್ಲು ನೋವಿನೆಗಳಿಗೂ ಎದನೋವು, ಗ್ಯಾಮಗ್ಗ. ಕೊಳ್ಳುವದು, ಚೇಳು ವಿಷ ಮುಂಡಾದ ಬೇನೆ ಕಳ್ಳಪಾತ್ರ ಮೊದಲು ನೋವಾದ ಎಲ್ಲ ರೋಗಗಳಿಗೂ ಸಹ ನಮ್ಮಲ್ಲಿ ಸಿಕ್ಕುತ್ತದೆ.

REGD.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,

Head Office:- **UDIPI** (S. India.)

New Appointments.

Applications from candidates of S S L C standard are invited for clerical posts in the Company.

Applicants should possess a good hand, a good command of English a good moral character and should be quick at figures

All applications must be accompanied by two testimonials one from the Headmaster of their School and another from any local gentleman

UDIPI,
2nd October, 1945.

T R A Pai,
Managing Director.

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಆದು

'ಜುಪಿಟರ್' (ದೇವತೆಗಳ ರಾಜ) ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ

'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ, ವಿಜಂಟರು ಮತ್ತು ಏರ್ಗನೈಝುರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ

ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ

ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910

ದಕ್ಷಿಣ ಭಾರತದ ಚೀಫ್ ಏಜಂಟರು

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಕಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.

Central Office:—**UDIPI** S. K

Mangalore ○ Calicut ○ Bangalore ○ Madras ○ Madura ○ Trivandrum ○ Bombay

ANNOUNCEMENT.

We have the pleasure to announce that a branch of the Bank will shortly be opened at

317, Linghi Chetty Street,
MADRAS.

ESTD 1906 స్థాపనే.)

CANARA BANK LIMITED

(Incorporated in British India, liability of Members Limited)

ANNOUNCEMENT

We have much pleasure to announce that branches of the Bank will be opened shortly at

KANHANGAD & MERCARA.

Other Branches at- Udipi, Kaup, Coondapoor, Karkal, Brahmavar, City-Mangalore, Kasaragod, Puttur, Byndoor & Bombay

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ಈ 28—8—45ರಲ್ಲು ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ವ್ಯಂಗ್ಯ.

ನಾನು ಮಹಾತ್ಮಾ ಗಾಂಧಿಯಾಗುತಿದ್ದರೆ—

(ವಿಶೇಷ ಹೆಮ್ಮೆಗಾರನಿಂದ)

ಈ ಕಾಲದಲ್ಲಿ ಇಡೀ ಲೋಕದಲ್ಲಿ ನನ್ನಂಥವನಿರುವದು ನಾನೊಬ್ಬನೇ ಎಂಬುದನ್ನು ತಿಳಿಯುತಿದ್ದೆ

ಆದ್ದರಿಂದ ನಾನು ಮುಂದಿಡುವ ಸತ್ಯ, ಅಹಿಂಸೆ, ಸತ್ಯಾಗ್ರಹ, ಕಾಯಿದೇ ಭಂಗ ತತ್ವಗಳನ್ನು ಅಲ್ಲಗಳೆಯುವವರಾರೂ ಇಲ್ಲವೆಂಬ ಧೈರ್ಯದಿಂದ ಕಾಲಾನುಗುಣ ಸೂತ್ರಗಳನ್ನೇ ಮುಂದಿಡುತಿದ್ದೆ.

ಹಿಂದೀ ಮಹಿಳೆಯರ ಮೇಲೆ ಸೋಲ್ಜರರ ಅತ್ಯಾಚಾರವಾಗುವದನ್ನು ಕಣ್ಣಾರೆ ಕಂಡರೂ, ಅದಾದುದೇ ಇಲ್ಲವೆಂದು ಹೇಳುವದು ಮತ್ತು ನೆನಸಿಕೊಳ್ಳುವದನ್ನು ಸತ್ಯದ ದರ್ಜೆಗೆ ಸೇರಿಸುತ್ತಿದ್ದೆ. ಯಾಕಂದರೆ ಅದನ್ನು ತಡೆಯಲು ನಮ್ಮಿಂದಾಗುತ್ತದೆಂಬುದು ಸುಳ್ಳು. ತಡೆಯಿಲ್ಲದೆ ಅದು ನಡೆಯಿತೆಂದರೆ ಹಿಂದೀಯರು ಮನುಷ್ಯರೆನ್ನುವದೇ ಸುಳ್ಳು. ಮನುಷ್ಯರಲ್ಲದ ಪ್ರಾಣಿಗಳಿಗೆ ಸ್ವಾತಂತ್ರ್ಯದ ಯೋಗ್ಯತೆಯಿದೆಯೆನ್ನುವದು ಪರಮಾವಧಿ ಸುಳ್ಳು. ಆದ್ದರಿಂದ ಈ ಸಂದರ್ಭದಲ್ಲಿ ಸೋಲ್ಜರರ ಅತ್ಯಾಚಾರ ನಡುದುದೇ ಇಲ್ಲವೆಂದು ಭಾವಿಸಿಕೊಳ್ಳುವದೊಂದೇ ಸತ್ಯ.

ಸಾವಾನುಗಳಗೆ ನಾಲ್ಮಡಿ ಬೆಲೆ ಹೇಳುವ ಸಾಹುಕಾರರ ಮಾತು ಸತ್ಯವೆಂದು ಸಾರುತ್ತಿದ್ದೆ. ಯಾಕಂದರೆ ನವ್ಯ ಜೀವನ ಮಟ್ಟವನ್ನು ಮೇಲೇರಿಸಲು ಅದು ಸುಲಭೋಪಾಯ

ಧಾನ್ಯ ಧಾರಣೆ ನಿಯಂತ್ರಣಾಜ್ಞೆಗಳನ್ನು ಉಲ್ಲಂಘಿಸಿದವರನ್ನೆಲ್ಲಾ ದೇಶ ಭಕ್ತರೆಂದು ಗೌರವಿಸುತಿದ್ದೆ. ಯಾಕಂದರೆ ಅವೆಲ್ಲಾ ಸರಕಾರೀ ಕಾನೂನುಗಳು.

ಆಹಾರವಿಲ್ಲದೆ ಉಪವಾಸ ಬೀಳದಂತೆ ತಡೆಯುವದು ಸತ್ಯಾಗ್ರಹ ತತ್ವಕ್ಕೆ ವಿರುದ್ಧವೆನ್ನುತಿದ್ದೆ; ಯಾಕೆಂದರೆ 'ಉಪವಾಸದಿಂದಲೇ ಆತ್ಮಶುದ್ಧಿ'ಯೆಂಬ ತತ್ವಾನುಸಾರವಾಗಿ ನಾನು ಹಲವು ಉಪವಾಸ ಮಾಡಿದವನಾದ್ದರಿಂದ ಆ ಪುಣ್ಯದಿಂದ ನನ್ನ ವರನ್ನು ಹೊರತು ಸಡಿಸಲಾರೆ.

ದರಿದ್ರನಾರಾಯಣನ ನಿಜವಾದ ಪ್ರತಿನಿಧಿಯನ್ನಿಸುವಂತೆ ಎರಡು ಬೈರಾಸುಗಳಿಂದೇ ಬಾಳುತ್ತಿರುವ ನಾನು ಕಳೆದ ನಾಲ್ಕು ವರುಷಗಳಿಂದ ಕೈಯಲ್ಲೊಂದು ಗೆರಟೆಯನ್ನೂ ಹಿಡಿದುಕೊಳ್ಳುತಿದ್ದೆ. ಯಾಕಂದರೆ ಈ ಅವಧಿಯಲ್ಲಿ ಹಿಂದೀ ಜನಸಾಮಾನ್ಯರು ಹಾಗಾಗಿರುವರಾದ್ದರಿಂದ, ಅದನ್ನನುಕರಿಸದೆ ಬಟ್ಟರೆ ದರಿದ್ರನಾರಾಯಣನ ಯಥಾರ್ಥ ಪ್ರತಿನಿಧಿಯಾಗಲಾರೆ.

ಹರಿಜನರಿಗೆ ಪ್ರವೇಶವಿಲ್ಲದ ದೇವಾಲಯದೊಳಗೆ ಕಾಲಿತಲಾರೆನೆಂಬ ನನ್ನ ಪ್ರತಿಜ್ಞೆಯನ್ನು, ಹರಿಜನರಂತೆ ಗೇದು ಕೊಳಗು ಮಾಡಿಕೊಂಡೇ ದೇವಸ್ಥಾನ ಪ್ರವೇಶಿಸುನೆಂದು ಬದಲಾಯಿಸಿಕೊಳ್ಳುತಿದ್ದೆ.

ಎಲ್ಲರಿಗೂ ಖಾದಿಯ ಉಪದೇಶ ಕೊಡುವ ಬದಲಿಗೆ ಎಲ್ಲರನ್ನೂ 'ಕಾದಿ' ಎಂದೇ ಹುರಿದುಂಬಿಸುತಿದ್ದೆ. ಸದ್ಯ ವಸ್ತ್ರಕ್ಕಿಂತ ಶಸ್ತ್ರ ಮುಖ್ಯ.

ಹರಿಜನರ ಸುಧಾರಣೆಯನ್ನು ಬದಿಗಿಟ್ಟು ಅರಿಜನರ ಸುಧಾರಣೆ ಕೈಕೊಳ್ಳುತಿದ್ದೆ. ಯಾಕಂದರೆ ವೈರಿಗಳು ತಿದ್ದಲ್ಪಟ್ಟರೆ ಎಲ್ಲವೂ ಸುಲಭಸಾಧ್ಯ.

ಹಿಂದೂ ಮುಸಲ್ಮಾನರ ಐಕ್ಯ ಸಾಧನೆಯ ಸಲುವಾಗಿ 'ಕಾಯಿದೇ ಭಂಗ'ದಂತಹ 'ಕೂದಲು ಭಂಗ' ಚಳವಳವೊಂದನ್ನು ಹೂಡಿ ಎಲ್ಲರ ತಲೆಯೂ ಬೋಳಾಗಿ ಹಿಂದೂ ಮುಸ್ಲಿಂ ಭೇದವೇ ಉಳಿಯದಂತೆ ಮಾಡಿಬಿಡುತ್ತಿದ್ದೆ.

ನನ್ನ 'ಗೋರಕ್ಷಣೆ' ಬೋಧೆಯು ಕಾಲಾನುಗುಣವಾಗುವಂತೆ ಒಂದಕ್ಷರ ಹೆಚ್ಚಿಗೆ ಜೋಡಿಸಿ 'ಅಗೋ-ರಕ್ಷಣೆ'ಯೆನ್ನುತಿದ್ದೆ. ಈ ಕಾಲದಲ್ಲಿ ರಕ್ಷಣಾ ಹೊಣೆ ಹೊತ್ತಿರುವ ಸೋಲ್ಜರರುಗಳಿಗಾಗಿ ಗೋವುಗಳೆಲ್ಲಾ ಆ ಕಡೆಗೆ ರಫ್ತಾಗಿರುವುದರಿಂದ.

ಸೇವಾ ಗ್ರಾಮವನ್ನು ವಾರ್ಧಾದಿಂದ ನವಢಿಲ್ಲಿಗೆ ವರ್ಗಾಯಿಸುತಿದ್ದೆ. ಲೋರ್ಡ್ ವೇವೆಲರನ್ನು ತರಬೇತಿ ಮಾಡುವದಕ್ಕಾಗಿ

ಪಾನ ನಿಷೇಧದ ಬದಲಿಗೆ 'ಘಣ ನಿಷೇಧ' ಚಳವಳ ಹೂಡುತಿದ್ದೆ. ಯಾಕಂದರೆ ಈಗ ಎಲ್ಲರ ತಲೆಗೇರಿರುವ ಅಮಲೆಂದರೆ ಸಟ್ಟಾ ಜ್ವರಾಟ.

ಬ್ರಿಟಿಷರನ್ನೋಡಿಸುವ ಸಲುವಾಗಿ 'ಕ್ವಿಟ್ ಇಂಡಿಯಾ' ಘೋಷಿಸಿದಂತೆ, ಜಿನ್ನರನ್ನೋಡಿಸುವ ಸಲುವಾಗಿ 'ಕಟ್ ಇಂಡಿಯಾ' ಘೋಷಣೆಯನ್ನೂ ಮಾಡಿಸುತಿದ್ದೆ.

ಮುಂಬರುವ ಚುನಾವಣೆಗಳಿಗೆ ಸರ್ವ ಕಲಿತವರನ್ನು ಮಾತ್ರ ಉಮೇದ್ವಾರಿಗಳಾಗಿ ನೇಮಿಸಿಕೊಳ್ಳತಕ್ಕುದ್ದೆಂದು ಕಾಂಗ್ರೆಸ್ ಪಾರ್ಲಿಮೆಂಟೀ ಬೋರ್ಡಿಗೆ ಸಲಹೆ ಕೊಡುತಿದ್ದೆ; ಯಾಕಂದರೆ ಮುಂದೆ ದೇಶವನ್ನು ವಿಭಾಗಿಸುವ ಪ್ರಶ್ನೆಯೇ ಮುಖ್ಯವಾದ್ದರಿಂದ ಅಳತೆ ತಿಳಿಯದವರು ಹೋಗುವದು ನಿಷ್ಫಲ.

ಪೋಲೀಸರು ಅಥವಾ ಪೋಲಿಗಳ ಹೊಡೆತವನ್ನು ತಪ್ಪಿಸಿಕೊಳ್ಳುವದೇ ಅಹಿಂಸೆಯೆನ್ನುತಿದ್ದೆ; ತನ್ನಂತೆ ಸರರು-ಎಂಬ ತತ್ವಾನುಸಾರವಾಗಿ ತನಗೂ ಹಿಂಸೆಯಾಗದಂತೆ ನೋಡಿಕೊಳ್ಳುವದೇ ಅಹಿಂಸೆಯಾದ್ದರಿಂದ.

'ಅಹಿಂಸಾಚಾರ್ಯ' 'ಸತ್ಯತಿಪಾಮಣಿ' ಇತ್ಯಾದಿ ಬಿರುದುಗಳನ್ನೇರ್ಪಡಿಸಿ, ಆ ಕೂಡಲೆ ನಾಶ ಕೊಡಲು ಅಲ್ಲಲ್ಲಿ ಶಾಲಾ ಕಾಲೇಜುಗಳನ್ನು ಸ್ಥಾಪಿಸುತಿದ್ದೆ. ಅಂತಹ ಸರ್ಟಿಫಿಕೇಟುಗಳಿಗಲ್ಲದೆ ಅವುಗಳನ್ನಾರೂ ಅಭ್ಯಸಿಸುತ್ತಿಲ್ಲವೆಂದು ನನಗೆ ಗೊತ್ತು.

ತಂತೀ, ರಸ್ತೆ, ಲೈನು ಕಡಿಯುವದು ಹಿಂಸೆಗೆ ಸೇರುವದಿಲ್ಲ—ಅನುಗಳಗೇನೂ ನೋವಾಗುವದಿಲ್ಲವಾದ್ದರಿಂದ; ಪಶು ಪ್ರಾಣಿಯ ಮಾಂಸ ತಿಂದವರು ಅಹಿಂಸಾವಾದಿಗಳೆಂದೂ ಕೊಂದ ಪ್ರಾಣಿಯ ಮಾಂಸಾಹಾರಿಗಳು ಹಿಂಸಾವಾದಿಗಳೆಂದೂ ಗಣಿಸುತಿದ್ದೆ.

ಭಗವದ್ಗೀತೆಯ ಬದಲು ಆಧುನಿಕ ಕವಿಗಳ ಭಾವ ಗೀತೆಯನ್ನೋದುತಿದ್ದೆ. ಯಾಕಂದರೆ ಅವೆಲ್ಲಾ ನಿಷ್ಕಾಮ ಕರ್ಮಯಾನೆ ಪ್ರತಿಫಲದ ಆಶೆ ಎಳ್ಳಷ್ಟೂ ಇಲ್ಲದ ಕೃತಿಗಳು.

ಸೋಮವಾರ ಮೌನ ಮಾಡುವ ಬದಲಿಗೆ 'ಸೋಮವಾರೀ ಮೌನ'ವೆಂಬ ವ್ಯತಿರಿಕ್ತ ಧಾರಣೆ ಮಾಡುತಿದ್ದೆ. ಬೇರೆ ಕೆಲಸವಿಲ್ಲದ್ದರಿಂದಾಗಿ ಮಾತಾಡಲು ಬರುವವರಿದಿರು ಮೌನದಲ್ಲಿದ್ದು ಆರೋಗ್ಯ ಉಳಿಸಿಕೊಳ್ಳುವದಕ್ಕಾಗಿ.

ಕಸ್ತೂರಿ ಬಾ ಸ್ಮಾರಕವಾಗಿ ನನಗೆ ದೊರೆತ ನಿಧಿಯಲ್ಲಿ 125 ಲಕ್ಷ ರೂ. ಗಳನ್ನೂ ನಾಲ್ಕಾಣೆ ಸಾವಲಿಗಳಾಗಿ ಮುರಿಯಿಸಿ, 5 ಕೋಟಿ ಮುಸಲ್ಮಾನರ ಹೆಸರಿನಲ್ಲಿ ಪ್ರಾಧಮಿಕ ಸದಸ್ಯತ್ವದ ಹಣವಾಗಿ ಕಾಂಗ್ರೆಸಿಗೆ ತುಂಬಿಸಿ, ಅವಂಗಿಲ್ಲಾ ರಶೀದಿ ಕಳುಹಿಸಿ, 8 ಕೋಟಿ ಮುಸಲ್ಮಾನರ ಪೈಕಿ 5 ಕೋಟಿ ಕಾಂಗ್ರೆಸಿನೊಳಗೆ ಸೇರಿದ್ದಾರೆ, ಎಂದು ಲೋಕಕ್ಕೆಲ್ಲಾ ಡಂಗುರ ಹೂಡೆದು ಜಿನ್ನರ ಕಿವಿ ಕೆಪ್ಪು ಮಾಡಿಬಿಡುತಿದ್ದೆ.

ಕುಟುಂಬ ಪೋಷಣೆಗಳಿಸಿಕೊಳ್ಳುವದಕ್ಕಾಗಿ ಧನಿಗಳ ಗೇಣಿ, ಶ್ರೀಮಂತರ ಸಾಲಗಳನ್ನು ಕ್ರಮಪ್ರಕಾರ ಸಲಾಯಿಸದೆ ವಾಯಿದೇ ಭಂಗವನ್ನೇ ಸದ್ಯದ ಕಾಯಿದೇ ಭಂಗವಾಗಿ ಗಣಿಸುತಿದ್ದೆ.

ಕಾಂಗ್ರೆಸಿನ ಅಧಿಕಾರೀ ಸ್ಥಾನಗಳಲ್ಲಿರುವವರಿಗೆ 'ಖಾಸಗಿ'ಯೆಂಬುದೇ ಇರಬಾರದೆಂದು ಕಾಂಗ್ರೆಸ್ ಘಟನೆಯಲ್ಲಿತಿದ್ದುಪಡಿ ಮಾಡಿಸಿ, ಒಂದು ವರ್ಷ ಬೆಲ್ಜರು ಮತ್ತೊಂದು ವರ್ಷ ತಾತಾರು ಕಾಂಗ್ರೆಸ್ ಖಜಾನ್ಜಿಯಾಗಿ ಅರಿಸಿಬರುವಂತೆ ನೋಡುತಿದ್ದೆ.

ನಾನು ಪ್ರಚಾರಕ್ಕೆ ತಂದ ಲಕ್ಷಾವಧಿ ಚರಕಗಳು ಕಟ್ಟಿಗೆ ಅಭಾವದ ಈ ಕಾಲದಲ್ಲಾದರೂ ಸದುಪಯೋಗಕ್ಕೆ ಬೀಳುವಂತೆ ಮಾಡುತಿದ್ದೆ.

ದೇಹ ವಿಜ್ಞಾನದಿಂದ ನವನವ ಶೋಧ ಮಾಡಿಸಿ, ಮಾನವ ಚರ್ಮಕ್ಕೆ ಸೂಜೀಕಲ್ಲಿನ ಸತ್ವವನ್ನು ಹೊಂದಿಸುವ ಉಪಾಯ ಕಂಡುಹಿಡಿದು ಹರಿಜನರ ಮೈಗೆ ಅದನ್ನು ಅಂಟಿಸಿ, ಸುಲಭದಲ್ಲಿ ಅಸ್ಪರ್ಶತಾ ನಿವಾರಣೆ ಮಾಡಿ ಬಿಡುತಿದ್ದೆ.

ನನ್ನ 'ಕಾಯಿದೇ ಭಂಗ' ಚಳವಳವನ್ನು ಈ ಕೆಳಗಿನ ಕಾಯಿದೆಗಳಿಗೆಲ್ಲಾ ಲಗ್ತಿಸಿಕರಿಸುತಿದ್ದೆ:—

ಹಿಂದೀ ಚಲಚ್ಚಿತ್ರಗಳಲ್ಲಿ ಚುಂಬನಗಳಿರಬಾರದೆಂಬ ಕ್ರಮ-ಇದರಿಂದಾಗಿ ಹಿಂದೀ ನಟ ನಟಿಯರು ತಟ್ ತಂಬಾ ಹರಟುವಂತಾಗಿ ಪ್ರೇಕ್ಷಕರ ಮನೋಹಿಂಸೆಯಾಗುತ್ತಿದೆ.

ದಿನಕ್ಕೆರಡು ಊಟ ಎಂಬ ಕ್ರಮ-ಜನರ ಲಕ್ಷ್ಯವೆಲ್ಲಾ ಇದರ ಮೇಲೆಯೇ ಕೇಂದ್ರೀಕರಿಸಲ್ಪಟ್ಟು ತ್ಯಾಗಬುದ್ಧಿ ಮಾಯವಾಗಿದೆ.

ಗಂಡು ಹೆಣ್ಣು ಜಾತಿಗಳು ಒಂದೇ ಊರು, ಒಂದೇ ಕಡೆಯಲ್ಲಿರಬಹುದೆಂಬ ಕಾಯಿದೆ-ಇದರಿಂದಾಗಿಯೇ ಪ್ಯಾರೇಲಾಲರಂಥವರಿಗೂ ಕಾರ್ಯದರ್ಶಿಯಾಗಿರುವದಕ್ಕಿಂತ ಕೈ ಹಿಡಿಯುವದುತ್ತಮವೆಂಬ ದುರ್ಬುದ್ಧಿ ಹುಟ್ಟಿದೆ.

ನನ್ನ ಅಹಿಂಸಾ ವರ್ಗದಲ್ಲಿ ಈ ಕೆಳಗಿನ 'ಹಿಂಸೆ'ಗಳ ನಿಷೇಧವನ್ನೂ ಸೂಚಿಸುತಿದ್ದೆ:—

ಈ ಕಾಲದಲ್ಲಿ ಅತಿಥಿಯಾಗಿ ಬೇರೆಯರ ಮನೆಗೆ ಹೋಗುವದು.

ಬೆಳೆ ಕಟಾವಾಗುವ ಮೊದಲೇ ಭತ್ತ ಸಂಗ್ರಹವು ಅವಧಿ ಪೂರ್ತಿ ಧಾನ್ಯ ಸಂಗ್ರಹಾಜ್ಞೆ ಹೊರಡಿಸುವದು.

ಸಿನೆಮಾ ನಾಟಕಗಳಲ್ಲಿ ನೋಟ ಸಂಬಂಧ ಬೆಳೆದಿದ್ದ ಹೆಣ್ಣು-ಗಂಡುಗಳ ಮುಧ್ಯದ ಸೀಟುಗಳಲ್ಲಿ ಕುಳಿತು ಬಿಡುವದು.

ಖಾಕೀ ಪೋಷಾಕಿನಲ್ಲಿ ಹಳ್ಳಿಗಳಿಗಿಳಿಯುವದು.

ಕಾಲ್ಬುಡ, ಓರೆ ಬೈತಲೆ ಇತ್ಯಾದಿ ಕೂದಲು ಹಿಂಸೆ; ನರ್ತನ, ಹಸ್ತಲಾಘವ, ಕೈಸನ್ನೆ, ಕಣ್ಣು ಸನ್ನೆ ಇತ್ಯಾದಿ ನರನಾಡೀ ಹಿಂಸೆ, ಇತ್ಯಾದಿ, ಇತ್ಯಾದಿ.

ನನ್ನ 'ಸತ್ಯ'ವರ್ಗದಲ್ಲಿ ಈ ಕೆಳಗಿನವನ್ನು ಸೇರಿಸಿಕೊಳ್ಳುತಿದ್ದೆ:—

ಯಾರೆಂತಹ ಸಾಹಾಯ್ಯಕ್ಕಾಗಿ ಎಷ್ಟೆಂದು ಬೇಡಿಕೊಂಡರೂ 'ಇಷ್ಟು ಸಾಧ್ಯವೇ ಇಲ್ಲ' ಎನ್ನುವದು.

ಯಾರೆಂದರೂ ಕೇಳದೆ ಎಷ್ಟೇ ದೊಡ್ಡ ತಪ್ಪನ್ನು ಮಾಡಿದರೂ 'ಇದು ಅಂತರ್ವಾಣಿಯ ಕರೆ' ಎನ್ನುವದು.

ಜಮೀನ್ದಾರಗು ಅಕ್ಕಿ ಮುಡಿಯ ಮಟ್ಟಿಗೆ, ಸಾಹುಕಾರರು ನಿಯಂತ್ರಿತ ಬೆಲೆ

(೩ನೇ ಪುಟ ನೋಡಿರಿ.)

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ-ಯೋಗ್ಯ ಬ್ರಾಹ್ಮಣರಿಂದ ತಿಂಡಿ ವಾಸೀಯಗಳ ತಯಾರಿಕೆಗಳು-ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉದಚಾರ.
ಬೇಸಾರ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಜಪಾನಿಗೆ ಜಪಾನೀಯರಿಂದಲೇ ಹಿತೋಪದೇಶ.

ಪ್ರತೀಕಾರೋನ್ಮತ್ತತೆ ಬಿಟ್ಟು ಸಹೋದರಭಾವ ಸ್ವೀಕರಿಸಿರಿ!

ಜಪಾನಿನ ಮುಖ್ಯ ಪತ್ರಿಕೆಗಳಲ್ಲೊಂದಾದ 'ಮೈನಿಚಿ' ಮತ್ತು ಇತರ ಜಪಾನೀ ಪತ್ರಿಕೆಗಳು ಸಂಡಿತ ಜಪಾನೀಯರಿಂದ ಹಿತೋಪದೇಶವನ್ನು ಸೇರ್ಪಿಸಿದ್ದುವು; "ನಾಗರಿಕ ಪ್ರಪಂಚದಲ್ಲಿ ಗೌರವಾರ್ಹ ಮತ್ತು ಸಹಾಯಕವಾದ ಸ್ಥಾನಮಾನಗಳನ್ನು ಜಪಾನು ಪುನಃ ಸಂಪಾದಿಸಿಕೊಳ್ಳುವ ಒಗೆ ಹೇಗೆ ಎಂಬ ಕುರಿತು ಸಲಹೆಯೀಯಬೇಕು" ಎಂದು ಜಪಾ ಪತ್ರಿಕೆಗಳು ವಿಜ್ಞಾಪಿಸಿಕೊಂಡಾಗ "ಆಸ್ಯದ ಶಾಂತಿ ಸ್ಥಾಪನಾ ಕಾರ್ಯದಲ್ಲಿ ಜಾಪಾನಿನೊಡನೆ ಸಹಕರಿಸಲು ಭಾರತವು ಆನಂದದಿಂದ ಮುಂದಾಗುವದು" ಎಂದು ನೆಹರುಗಳು ಉತ್ತರವಿತ್ತಿದ್ದಾರೆ. ಅದರೆ ಒಂದು ಶರ್ತದ ಮೇಲೆ "ಪಾಶ್ಚಿಮಾತ್ಯ ಆಕ್ರಮಣ ಮನೋವೃತ್ತಿಯ ಸಾಮ್ರಾಜ್ಯವಾದೀ ರಾಷ್ಟ್ರಗಳನ್ನು ಅನುಕರಿಸುವದನ್ನು ಜಪಾನು ಬಿಟ್ಟುಕೊಟ್ಟರೆಂಬುದು ನಮಗೆ ಮುಂದಿಟ್ಟಾದರೆ ಮಾತ್ರ". ಪಂಡಿತ ನೆಹರುಗಳ ಸಂದೇಶವನ್ನು ಇಲ್ಲಿ ಕೊಡಲಾಗಿದೆ: —

ನನ್ನ ಯೋಗ್ಯತೆ

"ಜಪಾನಿಗೊಂದು ಸ್ಪಷ್ಟ ಸಲಹೆ ಕೊಡಬೇಕೆಂದು ನನ್ನನ್ನು ಜಪಾನೀ ಪತ್ರಿಕೆಗಳು ಕೇಳಿಕೊಂಡಿವೆ ಮುಖ್ಯವಾ ಗಿ. ಇತರ ರಾಷ್ಟ್ರಗಳ ವಿಶ್ವಾಸ ಮತ್ತು ಗೌರವದ ಅರ್ಹತೆಯನ್ನು ಜಪಾನ್ ಪುನಃಗಳಿಸ ಬೇಕಾದರೆ ಅದೇನು ಮಾಡತಕ್ಕದ್ದೆಂಬ ಕುರಿತು ನನ್ನ ಅಭಿಪ್ರಾಯವಾವುದೆಂದು ಕೇಳಿಕೊಳ್ಳಲಾಗಿದೆ. ಅದನ್ನಾಡಿ ತೋರಿಸ.ವದು ನನ್ನ ಪಾಲಿಗೆ ಸುಲಭವಲ್ಲ ಅನ್ಯ ಜನಾಂಗಗಳಿಗೆ ಅಧವಾ ರಾಷ್ಟ್ರಗಳಿಗೆ ಉಪದೇಶ ಕೊಡುವದು ಯಾವಾಗಲೂ ಪ್ರಯಾಸದ ಕೆಲಸ; ಒನ್ಮೊಮ್ಮೆ ಗಂತೂ ಅದು ದುರಹಂಕಾರದ ಮಾತಾಗಿ ಪರಿಣಮಿಸುವದಿದೆ. ಆದರಲ್ಲೂ, ಈ ಪ್ರಾಯಶ್ಚಿತ್ತಕ್ಕುವರೆಂತಹ ಆಹ್ವತೆ ಪಡೆದಿದ್ದರೂ ಪರಾಭವ ಮತ್ತು ದುರದೃಷ್ಟದಿಂದ ನೆಲಹಿಡಿದು ಹೋಗಿರುವ ಒಂದು ಜನತೆಗೆ ಉಪದೇಶಕೊಡುವದೆಂದರೆ ಮತ್ತೂ ಕಷ್ಟದ ಕಾರ್ಯ. ಮಾತ್ರವಲ್ಲ, ಅಖಿಲ ಸಂಯುಕ್ತ ರಾಷ್ಟ್ರಗಳ ಪರವಾಗಿ ಆಗಲೀ, ಆ ರಾಷ್ಟ್ರಗಳ ಯೋಜನಾತ್ಮಿಕಾರೀ ಸ್ಥಾನದಲ್ಲಿರುವ ಪ್ರಮುಖ ಚತುರ್ರಾಷ್ಟ್ರಗಳ ವತಿಯಿಂದಾಗಲೀ ನಾನು ಮಾತಾಡಲಾರೆ. ಆದರೆ ನನ್ನಲ್ಲೊಂದು ಯೋಗ್ಯತೆಯಿದೆ. ತಕ್ಕ ಮಟ್ಟಿಗೆ ಭಾರತೀಯ ಆಂತರ್ಯದ ಒಳ ನೋಟವು ನನಗಿದೆ; ಅದಕ್ಕಿಂತ ತುಸು ಕಡಿಮೆ ಆಸ್ಯಾದ ಹೃದಯವನ್ನೂ ನಾನು ಬಲ್ಲೆ. ಆದ್ದರಿಂದ ಓರ್ವ ಭಾರತೀಯನಾಗಿ ಕೆಲವು ಮಾತುಗಳನ್ನಾಡಲಿಚ್ಛಿಸಿದೆನೆ.

ಭಾರತ--ಜಪಾನ್

ಭಾರತೀಯರು ಜಪಾನರ ಕಡೆಗೆ ನೋಡುತ್ತಿದ್ದ-ಆನರ ಮಹಾ ಮಹಾ ಕಾರ್ಯಗಳಿಗೆ ಮನ ಮೆಚ್ಚಿದ್ದ-ಕಾಲವೊಂದಿತ್ತು. ಆದರೆ ಆದರ ಬೆನ್ನಲ್ಲೇ ಜಪಾನು ಪಾಶ್ಚಿಮಾತ್ಯ ಆಕ್ರಮಣಕಾರೀ ರಾಷ್ಟ್ರಗಳ ಮಾದರಿಯನ್ನೇ ಇಳಿಬಿಡದೆ ಅನುಕರಿಸ ಹತ್ತಿದ ಕಾಲವೊದಗಿತು. ಆಸ್ಯಾದ ಸ್ವಾತಂತ್ರ್ಯರಾತಂತರಿಗುವ ಬದಲಿಗೆ ಅಧಿಕಾರ ಮತ್ತು ಸಾಮ್ರಾಜ್ಯ ವಿಸ್ತಾರದಾಹ ಬಲದಿಂದ ಜಪಾನರು ಆಸ್ಯಾದ ರಾಷ್ಟ್ರಗಳನ್ನು ಸದೆಬಡಿಯಲಾರಂಭಿಸಿದರು. ಕೆರಿಯದ ಸ್ವಾತಂತ್ರ್ಯಸಹಾರವಾಯಿತು ನವಸ್ವಾತಂತ್ರ್ಯದ ಪ್ರಸನ್ನ ನೇರನೆಯಲ್ಲಿದ್ದ ಚೀನಕ್ಕೆ ನೆಲಿಂದ ನೇಲೆ ಉಪಟಳ, ಬೆದರಿಕೆಗಳು ಬೀಳ ಹತ್ತಿ, ಕೊನೆಗೆ ಆಕ್ರಮಣವನೇ ನಡೆಯಿತು. ಈ ಪರಿಸ್ಥಿತಿಗಳು ಜಪಾನಿನ ನೇಲಿದ್ದ ಭಾರತದ ಭಾವನೆಯನ್ನೂ ಬದಲಾಯಿಸಿ ಬಿಟ್ಟುವು; ಗೌರವದ ಸ್ಥಾನವನ್ನು ಪ್ರತೀಕಾರವಾಕ್ರಮಿಸಿಕೊಂಡಿತು. ಪಶ್ಚಿಮ ಸಹಾನುಭೂತಿಯ ಪ್ರವಾಹ ಜಪಾನಿನ ದಬ್ಬಾಳಿಕೆಗೊಳಗಾದ ಚೀನಾ ಮತ್ತು ಇತರ ರಾಷ್ಟ್ರಗಳ ಕಡೆಗೆ ಹರಿಯಿತು.

ಪ್ರತೀಕಾರೋನ್ಮತ್ತತೆ ಬಿಡಬೇಕು

ತನ್ನ ಸಾಮ್ರಾಜ್ಯವಾದೀ ಸಾಹಸ ಪಥದಲ್ಲಿ ಜಪಾನ್ ಈಗ ಅವಘಡಕ್ಕೀಡಾಗಿ ಮುರಿದು ಬಿದ್ದಿದೆ. ಇಂದು ಲೋಕ ವಿಜಯದ ಗುರಿಯಿಟ್ಟುಕೊಂಡಿರುವ ಪ್ರತಿಯೊಂದು ರಾಷ್ಟ್ರವನ್ನೂ ಕಾದಿರುವ ಅದೃಷ್ಟವಿದು. ಜಾಗತಿಕ ಸರಿಸ್ಥಿತಿ ಮತ್ತು ಸಂಕುಚಿತ ರಾಷ್ಟ್ರೀಯ ಹಿತಸಾಧನೆ-ಇವೆರಡು ದೃಷ್ಟಿಯಿಂದಲೂ, ತನ್ನ ವಿಜಯ ಮತ್ತು ನಿಸ್ತಾರಿಂದ ಹಳೇ ಕನಸನ್ನು ಬಿಟ್ಟು ಜಪಾನೀಗ ಕಕ್ಕೆರಿಯಬೇಕಾಗಿದೆ ಅಂತೆಯೇ ಪ್ರತೀಕಾರ ಮನೋವೃತ್ತಿಯನ್ನು ಕಿಟ್ಟು ಕೊಂಡೂ ಅದಿರಬಾರದು ದ್ವೇಷಾಸೂಯೆ ಮತ್ತು ಪ್ರತೀಕಾರದ ಚಕ್ರದುರುಳಾಟಕ್ಕೊಂದು ಕೊನೆಯೇ ಇಲ್ಲ. ಜಪಾನರು ಅಸಾಮಾನ್ಯ ಯೋಗ್ಯತೆಗಳನ್ನು ತೋರಿಸಿದ್ದಾರೆ; ಅದರೆ ಅನೆಲ್ಲ ತಪ್ಪು ಹಾದಿ ಹಿಡಿದಿದ್ದುವು. ಈಗ ಸ್ಥಿರವಾದ ಆಸ್ತಿವಾರದ ಮೇಲೆ ಹೊಸತನ್ನು ನಿರ್ಮಿಸುವದರಲ್ಲಿ ಅನರೀ ಅಮೋಘ ಗುಣಗಳನ್ನು ಉಪಯೋಗಿಸಬೇಕು. ಅವರು ಸೈನ್ಯ ಶಾಹಿತ್ಯ ಮತ್ತು ಸಾಮ್ರಾಜ್ಯ ರಾಹಿತ್ಯವನ್ನು ಕಿತ್ತೊಗೆದುಕೊಳ್ಳಬೇಕು. ಯಾರಿಗೂ ಬೆದರಿಕೆ ವೀರರು, ಯಾವ ಬೆದರಿಕೆಗೂ ಸೊಪ್ಪು ಹಾಕದ, ಸ್ವತಂತ್ರ ಸ್ವಜಾತಂತ್ರ್ಯತ್ಮಕ ಸಾಸ್ಥೆಗಳ ರಾಷ್ಟ್ರವಾಗಿ ಜಪಾನನ್ನು ಕಟ್ಟಬೇಕು. ಅವರು ಸಮಾನತೆ ಮತ್ತು ತಮ್ಮ ಜನತೆಯಲ್ಲಿ ನೆರ್ಪರಿಗೂ ಸಮಾನ ಸಂದರ್ಭಗಳನ್ನೊದಗಿಸುವ ರೀತಿಯಲ್ಲಿ ತಮ್ಮ ಆರ್ಥಿಕ ಆಸ್ತಿವಾರವನ್ನು ರಾಕಿಕೊಳ್ಳಬೇಕೇ ಹೊರತು, ಇತರ ಯಾವ ರಾಷ್ಟ್ರದ ಮೇಲಾದರೂ ಆರ್ಥಿಕಾಧಿಕಾರ ಹೇರುವ ಗುರಿಯಿಟ್ಟುಕೊಳ್ಳಬಾರದು ಈ ರೀತಿ ಹೊಸತಾದ ಪಾಗೂ ಆಭಿವೃದ್ಧಿ ಪರವಾದ ಜೀವನಸಂಸ್ಕೃತಿಯ ರಾಷ್ಟ್ರಗಳ ಕುಟುಂಬದೊಳಗೆ ಜಪಾನನ್ನು ಸ್ನೇಹ ಸೌಹಾರ್ದತೆಯಿಂದಿರುವ ಹಾಗೂ ಆಸ್ಯಯ ಕುಟುಂಬದೊಂದು ಸದಸ್ಯನಾಗಿರುವ, ಅಂತೆಯೇ ಜಾಗತಿಕ ಸಹೋದರ ರಾಷ್ಟ್ರಗಳಲ್ಲೊಂದಾಗಿ ನಿಲ್ಲುವ ಜಪಾನನ್ನು-ನಿರ್ಮಿಸಿಕೊಳ್ಳಬೇಕು.

ಆಗ ಮಾತ್ರ ಸಹಕಾರ

ಜಪಾನು ಚೀನಕ್ಕೆ, ಕಾರ್ಯ ಮತ್ತು ಮಾನಸಿಕವಾದ ಮಹತ್ತಾದ ಜಖಮ್ಮಗಳನ್ನು ಮಾಡಿದೆ. ಆದ್ದರಿಂದ ಚೀನೀ ಜನತೆಯ ಬಲವು ಸಂಘಾಟನೆಯನ್ನೇ ಜಪಾನು ತನ್ನ ವಿಶೇಷ ಕರ್ತವ್ಯವಾಗಿ ಗಣಿಸಬೇಕು. ದೂರ ಪೂರ್ವದ ಶಾಂತಿಯೂ ವಸ್ತುತ ಜಪಾನೀ ಮತ್ತು ಚೀನೀ ಜನತೆಯ ಸಹಕಾರವನ್ನವಲಂಬಿಸಿದೆ. ಅಂತಹ ಸಹಕಾರವು ಸ್ವಾತಂತ್ರ್ಯದ ಅಸ್ತಿವಾರವನ್ನಾಧರಿಸಿ ಮಾತ್ರಸಿಲ್ಲಬಲ್ಲುದು. ಈ ಘೋರಣೆಯನ್ನು ಜಪಾನು ಅನುಕರಿಸಿದಲ್ಲಿ, ಅದರ ಅಗಾಧ ಯುದ್ಧ ಭಾಯ, ತಾನಾಗಿ ಮಾಸುವದಷ್ಟೇ ಅಲ್ಲ; ಅದಕ್ಕಿಂತಲೂ ಆಳಕ್ಕು ಹೋಗಿರುವ, ತನ್ನ ಮತ್ತು ಇತರರ ಭಾವನಾಯಾನತೆಗಳನ್ನೂ ಗುಣಪಡಿಸಿವಂತಾಗುವದು; ಪದ್ಯ ತನ್ನನ್ನು ಇತರ ರಾಷ್ಟ್ರಗಳಿಂದ ಪ್ರತ್ಯೇಕಿಸಿವ ಕಣಿವೆಗೊಂದು ಸೇತುವೆಯನ್ನು ಕಟ್ಟಬಂತೆಯೂ ಆಗುವದು. ಭಾರತವೂ ಇತರ ರಾಷ್ಟ್ರಗಳೂ ತಮಗೆ ಜಪಾನಿನ ಮೇಲಿದ್ದ ನಿಸ್ಸೆಯ ಸಿಟ್ಟು ಮತ್ತು ಪ್ರತೀಕಾರ ಭಾವನೆಯನ್ನು ತೆಗೆದೊಗದು; ಲೋಕ ಶಾಂತಿಯ ವಿಶಾಲ ಆಯ.ಕಟ್ಟಿನೊಳಗೆ ಆಸ್ಯಾದ ಸ್ವಾತಂತ್ರ್ಯ ಮತ್ತು ಪರಸ್ಪರ ಸಹಕಾರಕ್ಕಾಗಿ ಜಪಾನಿನ ಕೈಗೆ ಕೈಕೊಡುವವು".

(ಒಂದನೆ ಪುಟದಿಂದ)

ಯ ಸಾಮಾನುಗಳ ಮಟ್ಟಗೆ, ಬಸ್ಸು ಏಜೆಂಟರು ಸೀಟುಗಳಮಟ್ಟಗೆ 'ಇಲ್ಲ' ಎನ್ನುವದು

ಬಾವೀ ಕಟ್ಟೆಯಲ್ಲಿ ಕೇಳಿಬರುವ ಮನೇ ನಾರ್ತೆ, ಸಂತೀ ಕಟ್ಟೆಯಲ್ಲಿ ಕೇಳಿಬರುವ ಯುದ್ಧ ನಾರ್ತೆಗಳು.

ತಾಣ ಮತ್ತು ಪ್ರೇಮ ಸಂಬಂಧವಾದ ಎಲ್ಲಾ ರೀತಿಯ 'ಇಲ್ಲ'ಗಳು.

ಇಷ್ಟೆಲ್ಲಾ ಕೇಳಿದ ಮೇಲೆ ನನ್ನ ಬರುವಾದ 'ಮಹಾತ್ಮ'ದಲ್ಲಿ 'ಹಾ'ದ ಒದಲಿಗೆ 'ಬಾ' ಬಿದ್ದರೆ ಅದು ಕೂಡಾ!

ವಿದ್ಯಾವಿಷಯಕ ಸ್ವಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಪೆಚ್ಚಿನ ವಿವರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ತಿಪ್ಪೆಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ನೋಟೀಸು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್ ಲಿಮಿಟೆಡ್

ಶಿವಳ್, (ದ. ಕ.)

ಈ ಕೆಳಗೆ ಹೆಸರು ಕಾಣಿಸಿವವರು ಈ ಬ್ಯಾಂಕಿನಲ್ಲಿ, ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಸಾಲಗಳ ಬಾಬ್ತು, ಕೆಳಗೆ ನಮೂದಿಸಿದ ಅಸ್ಸು, ಆದರ ಮೇಲಣ ಬಡ್ಡಿ, ಖರ್ಚು ವಸೈರೆ ಐವೇಜುಗಳನ್ನು ತೆರದೆ ಇದ್ದು, ಅವರಿಗೆ ಬಿಟ್ಟು ರಿಜಿಸ್ಟ್ರಿ ನೋಟೀಸು, ಸದ್ರಿಯವರಿಗೆ ಪಾವ್ತಿಯಾಗದೆ ವಾಪ್ಸು ಬಂದಿರುವುದರಿಂದ, ಸದ್ರಿ ಸಾಲಗಳ ಬಾಬ್ತು ಆಡವಿಟ್ಟ ನಗಗಳನ್ನು, ಅವರು ಬಿಡಿಸಿಕೊಂಡು ಹೋಗದಿದ್ದಲ್ಲಿ, ಇದೇ ತಾರೀಕು 27-10-1945ನೇ ಶನಿವಾರ ಅಪರಾಹ್ನ ಘಂಟೆ 3ಕ್ಕೆಯೂ ಆನಂತರ ಬ್ಯಾಂಕಿಗೆ ಯುಕ್ತಕಂಡ ಯಾವದೇ ದಿವಸದಲ್ಲಿ, ಸದ್ರಿ ನಗಗಳನ್ನು ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ಎಂತ ಈ ಮೂಲಕ ಎಳಸೋಣಾಗಿಯದೆ.

ವಿವರ

ಜಿಲ್ಲೆ	ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಬಾಬ್ತು ಬಾಕಿಯಿರುವ ಅಸ್ಸು ಮೊಬಲಗು
			ರೂ ಆ. ಪೈ.
1.	270 43	ಕೆ. ಮುದ್ದಣ್ಣ ಶೆಟ್ಟಿ, ಲಿಂಗಪ್ಪ ಶೆಟ್ಟಿಯವರ ಸೊಸೆ, ಕುತ್ಯಾರು, ಶಿವಳ್.	10—0—0
2.	7044	—ಡಿಂ—	65—0—0

ಶಿವಳ್,
ತಾ. 6—10—1945

U. A Prabhu,
Agent

★ ಮುಂದಿನ ಚುನಾವಣಾ ಗೊಂದಲ— ★

ಜನಸಾಮಾನ್ಯರ ಮುಂದಿರುವ ನೀತಿ ಸೂತ್ರ.

ಮಿಕ್ಕೆಲ್ಲಾ ಸಂದರ್ಭಗಳಲ್ಲಿಯೂ ತಲೆ ಮರೆಸಿಕೊಂಡಿರಬಲ್ಲ, ಮಾನವನೊಳಗಿನ ಮರ್ಕಟತನವಾದರೂ, ಚುನಾವಣೆಗಳ ವೇಳೆ ಹೊರ ಬೀಳದಿರುವವದಿಲ್ಲ. ಇದಕ್ಕೆ ಯಾವ ದೇಶವೂ ಅಪವಾದವಲ್ಲ ಕಳದ ಬಾರಿಯ ಬ್ರಿಟಿಷ್ ಚುನಾವಣೆ ಸಭೆಯೊಂದರಲ್ಲಿ ಹುಡುಗನೊಬ್ಬ ಚರ್ಚಿಲ್ಲರ ಮುಖದ ಮೇಲೆಯೇ ಪಟಾಕಿ ಸುಟ್ಟಿದ್ದ. ನರನಾಯಿಗಳಂತೆ ಕೊಗಿ ಇಂಗ್ಲ್ಯಾಂಡು ರಕ್ಷಕನ ಬಾಯಿ ಮುಚ್ಚಿಸಿದ ಸಭೆಗಳೂ ಇದ್ದುವು. ಸ್ಪರ್ಧೆಗೂ ಪಶುಹಿಂಸೆಗೂ ಹತ್ತಿರದ ಸಂಬಂಧವಿದೆ, ಮೇಲಾಟವಿದ್ದಲ್ಲಿಲ್ಲಾ ನೋಲೇರಿ ಹೋಗುವ ಹವ್ಯಾಸವಿದ್ದದ್ದೇ! ಸಭ್ಯ ಜನಾಂಗಗಳು, ಸದ್ಗ್ರಹಸ್ಥರೆನ್ನಿಸಿದವರು ಚುನಾವಣೆ, ವಾಗ್ಯುದ್ಧಗಳಂತಹ ಮಾಮೂಲಿ ಪಿ ಹೋರಾಟಗಳಲ್ಲಿ ದೈಹಿಕಶಕ್ತಿಪ್ರದರ್ಶಿಸಿದ ಸಂದರ್ಭಗಳು ಬೇಕಾದಷ್ಟಿವೆ ಲೋಕದ ನ್ಯಾಯವಿಧಾಯಕ ಸಭೆಗಳ 'ಮಾತಾಯಿ'ಯಾದ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಎಷ್ಟು ಬಾರಿ ಗುದ್ದಾಟಗಳು ನಡೆದಿಲ್ಲ!

ಈ ಬಾರಿಯ ಹಿಂದೀ ಚುನಾವಣೆಗಳು—

ಸಭೆ, ಸಮ್ಮೇಲನಗಳಲ್ಲಿ ಇಂತಹ ಕಾರ್ಯಶಕ್ತಿಯ ಕಾಳಗಗಳು! ದೊಡ್ಡ ಪರಿಮಾಣದಲ್ಲಿ ನಡೆಯುವದು ಸಂಭವನೀಯ. ಇದಕ್ಕೆ ಬಲವಾದ ಎರಡು ಕಾರಣಗಳಿವೆ. ಮೊದಲನೆಯದೆಂದರೆ ಕಾಂಗ್ರೆಸ್–ಲೀಗ್ ತಿಕ್ಕಾಟ; ಎರಡನೆಯದಾಗಿ ಕಾಂಗ್ರೆಸ್–ಕಮ್ಯೂನಿಸ್ಟ್ ವಿವಾದ ಇನೆರಡು ಹೇತುಗಳಿಂದಾಗಿ ಇಪ್ಪತ್ತರಲ್ಲೇ ಭಾರತದ ವಾತಾವರಣವು ಪ್ರಕ್ಷುಬ್ಧವಾಗಿದೆ ಪ್ರಾಥದ ಪರಮಾವಧಿಗೆ- ಅವೇಶದ ಅತೀವ ತುದಿಗೆ- ಚುನಾವಣಾ ಹೋರಾಟ ನಿರತ ಪ್ರತಿಯೊಂದು ಪಕ್ಷದ ಮನೋವೃತ್ತಿಯೂ ಮುಟ್ಟಿದೆ ಸಾಮಾನ್ಯರ ದರ್ಜೆಯನ್ನು ಮೀರಿ, ಸಾಮಾನ್ಯ ಮನೋವಿಕಾರಗಳ ಗಡಿದಾಟಿರವ, ಸುಸಂಸ್ಕೃತ ಪ್ರಮುಖರು ಕಡಿಯುದ್ರೇಕದಾಯೀ ಮಾತುಗಳನ್ನಾಡತೊಡಗಿದ್ದಾರೆ. "ಅಜಿಲ್ ಕೆಲಸ್" ಆಚಾರದಂತಹ ಕಾಂಗ್ರೆಸಿನ ಸೂತ್ರದ ಗೊಂಬೆಗಳು ಪ್ರದರ್ಶಿಸಲ್ಪಡುವಲ್ಲೆಲ್ಲಾ ಪ್ರಪ್ಪಗುಚ್ಛಗಳ ಬದಲಿಗೆ ಇಟ್ಟಿಗೇ ತುಂಡುಗಳು ಕಾಣಿಸಿ" ಎಂದು ಲೀಗಿನ ಬಾಯಿಯಂತಿರುವ 'ಡಾನ್' ಸತ್ರಿಕೆಯೇ ಮುಸ್ಲಿಮರನ್ನು ಹುರಿದುಂಬಿಸಿದೆ. ವಾಡಿಕೆಯ ಮಾತಾದರೂ, ತನ್ನಲ್ಲಾ ಕುರಿತು ಹುಟ್ಟುವ ಸಂಘವನ್ನು ಪ್ರದರ್ಶಿಸುವದಕ್ಕಾಗಿ ಸಂಚಿತ ನೆಹರುಗಳು ಈ ಬಾರಿ ಲೀಗಿನೊಡನೆ 'ಹಲ್ಲುಗುರುಗಳಿಂದ ಕಾದಾಡುವೆವು' ಎಂದು ಹುರುಪಿನಿಂದ ಹೂಂಕರಿಸಿದ್ದಾರೆ "ನೋಡೋಣ. ಮುಂದಿನ ಚುನಾವಣೆಯಲ್ಲಿ ಧ್ವಂಸವಾಗುವದು ಯಾರು–ಮುಸ್ಲಿಂ ಲೀಗೂ ಕಾಂಗ್ರೆಸೋ ಎಂಬುದನ್ನು ಒಂದು ಕೈನೋಡಿಯೇ ಬಿಡೋಣ" ಎಂದು ಪೊನ್ನೆಯ ವರೆಗೂ ವೈಸರಾಯೀ ಕೌನ್ಸಿಲ್ ಸದಸ್ಯರಾಗಿದ್ದು ಈಗ ತಾನೇ ಈ ಉದ್ದೇಶಕ್ಕಾಗಿಯೇ ಲೀಗನ್ನು ಸೇರಿರುವ ಸರ್. ಖಾನ್ ನೂನರು ಪಂಡಿತ ನೆಹರುಗಳಿಗೆ ಧುರವಿಲ್ಯಿಸಿದ್ದಾರೆ. ಅಂತೂ ಸಾಹಾರ್ದತೆಯ ಸಾರವಾರಿ, ವಾತಾವರಣ ಒಣಗಿ ಹೋಗಿದೆ, ಕಡಿತಾಗಿದೊಡನೆ ಭುಗ್ಗೆಂದು ಉರಿಹತ್ತಿಕೊಳ್ಳುವದು ಸಂಭವನೀಯ.

ಕೆಲವು ದುರ್ಘಟನೆಗಳು

ಕೆಲವಾರಗಳ ಮೊದಲು ಬೊಂಬಾಯಿಯಲ್ಲಿ ನಡೆದ ಸಾರ್ವಜನಿಕ ಸಭೆಯೊಂದರಲ್ಲಿ ಶಂಕರರಾವ್ ದೇವೋರ ಭಾಷಣವಾಗುತಿದ್ದಾಗ ಕಮ್ಯೂನಿಸ್ಟರು ಹಾಕಿದೆ ಪ್ರಶ್ನೆಯಿಂದಾಗಿ ಗೊಂದಲವೆದ್ದು ಹೊಯ್ ಕೈಯ್ಯಾಗಿ ಹಲವು ಜನರು ಜಖಂ ಗೊಂಡಿದ್ದರು. ಹಿಂದೂ-ಮುಸ್ಲಿಂ ಮತ್ತು-ಕಮ್ಯೂನಿಸ್ಟ್ ಕಾಳಗಗಳ ರಣರಂಗನೆಂಬಂತೆ ಬೊಂಬಾಯಿಯ ಪರಿಸ್ಥಿತಿ ಕ್ಷುಬ್ಧವಾಗಿದೆ ಆ ಭಾ ಕಾಂಗ್ರೆಸ್ ಸಭಾ ಜಪ್ಪರವನ್ನೇ ಕಮ್ಯೂನಿಸ್ಟರು ಸುಟ್ಟುಬಿಡುವರೆಂಬ ಸುದ್ದಿ ಹೆಬ್ಬಿತ್ತು; ಮೊದಲಿನ ಕಾಂಗ್ರೆಸ್ ಸಮಿತಿ ಅಧಿವೇಶನದ ತೀಜೋವಧೆ ಮಾಡಿದ್ದ ಧ್ವನಿಪಾಷಕಗಳ ಕಡಿತಗಳಿಗೆ ಕಮ್ಯೂನಿಸ್ಟರೇ ಕಾರಣರೆಂಬ ಪ್ರತೀತಿಯಿದೆ. "ಮುಸಲ್ಮಾನ್ ಸ್ಥಾನಗಳಲ್ಲಿ ಲೀಗ್ ಉಮೇದ್ವಾರಿಗಳಿಗೆ ಬೆಂಬಲಕೊಡುವೆವು; ಸಾಮಾನ್ಯ ಮತದಾರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಉಮೇದ್ವಾರಿಗಳನ್ನು ಸಮರ್ಥಿಸುವೆವು. ಸಾಧ್ಯವಿದ್ದಲ್ಲಿ ಸ್ವಂತ ಉಮೇದ್ವಾರಿಗಳನ್ನು ನಿಲ್ಲಿಸುವೆವು" ಎಂಬುದೇ ಸದ್ಯದ ಚುನಾವಣೆಯಲ್ಲಿ ಕಮ್ಯೂನಿಸ್ಟರ ತ್ರಿಮುಖೀ ಧೋರಣೆ. ಈ ವಿಲಕ್ಷಣ ವಿಧಾನದಿಂದ ಸಭಾಗೊಂದಲಗಳ ಸಂಖ್ಯೆ ಹೆಚ್ಚುವ ಸಂಭವವಿದೆ ಅಹ್ಮದ್, ಮಜ್ಲಿಸ್ ಮೊದಲಾದ ರಾಷ್ಟ್ರೀಯ ಮುಸಲ್ಮಾನರ ಪ್ರಮುಖರಿಗೆ ಒಂದೆರಡು ಕಡೆಗಳಲ್ಲಿ ಲೀಗ್ ಮುಸಲ್ಮಾನರಿಂದ ಅಪಮಾನ, ಆಘಾತಗಳುಗಿವೆ 'ಲೀಗಿನೊಡನಿನ್ನು ಸಂಧಾನ ಯಾಚಿಸುತ್ತಾ ಹೋಗುವಂತಿಲ್ಲ; ಮುಸ್ಲಿಂ ಜನತೆಯನ್ನೇ ಸಂಘಿಸುವೆವು' ಎಂಬ ಕಾಂಗ್ರೆಸ್ ಪ್ರಮುಖರ ನಿರ್ಧಾರದಿಂದಾಗಿ ಉಗ್ರ ಲೀಗ್ ಪ್ರಮುಖರೆಲ್ಲಾ ಉದಿಮು ಬಿದ್ದು, 'ನ್ಯಾಯನೀತಿ ಸಭ್ಯ ವರ್ತನೆಗಳನ್ನು ಬಿಟ್ಟರೂ ಪರವಾ ಇಲ್ಲ; ಲೀಗ್ ವಿರೋಧಿಗಳನ್ನು ನೆಲಹಿಡಿಸಲೇಬೇಕು' ಎಂದು ಧರ್ಮಾಂಧ ಮುಸ್ಲಿಂ ಜನತೆಯ ದುರಭಿಮಾನವನ್ನು ಕೆರಳಿಸ ಹತ್ತಿದ್ದಾರೆ. ಕಳದ ವಾರ ಮದ್ರಾಸ್ ನಗರದ ರಾಷ್ಟ್ರೀಯ ಮುಸಲ್ಮಾನರು ಕರೆದಿದ್ದ ಸಭೆಯೊಂದಕ್ಕೆ ಲೀಗ್ ಮುಸ್ಲೀಮರು ಪ್ರವೇಶಿಸಿ ಸಾಕಷ್ಟಾನ್ ಘೋಷಣೆಗಳಿಂದ ಎಲ್ಲವನ್ನೂ ತೇಲಿಸಿಬಿಟ್ಟು, ಸಭಾ ಪ್ರಮುಖರ ಮೇಲೆ ಹಿಂಸೆಯನ್ನೂ ಪ್ರಯೋಗಿಸಿ, ಸಭೆ ನಡೆಯದಂತೆ ಮಾಡಿಬಿಟ್ಟರು. ಮತ್ತೊಂದೆಡೆ ಕಮ್ಯೂನಿಸ್ಟ್ ಆಶ್ರಯದಲ್ಲಿ ಜರಗಿದ ಸಮ್ಮೇಲನವೊಂದರ ಮೇಲೆ ಕಲ್ಲೆಸೆಯಲ್ಪಟ್ಟು ಗೊಂದಲ ನಡೆಯಿತು ಚುನಾವಣಾ ಪ್ರಚಾರದ ರಭಸವೇರುತ್ತಾ ಬಂದಂತೆ, ಅಲ್ಲಲ್ಲಿ ಗಲಭೆಗಳೂ ಹೆಚ್ಚತ್ತಾ ಹೋಗಬಹುದು. ಮತ ಪ್ರದರ್ಶನದ ಜತೆಗೆ-ಅದಕ್ಕೂ ನಾಲ್ಕಡಿ ಪರಿವಾಣದಲ್ಲಿ -ಮದಪ್ರದರ್ಶನವಾಗಬಹುದು!

ನೆನಪಿರಲಿ—

ಚುನಾವಣೆಯೆಂಬುದು ಸಂದರ್ಭಸಾಧಕರ ಯುಕ್ತಿಶಕ್ತಿಗಳ ಆಟಕ್ಕನುಕೂಲವಾದ ಕಾಲ ಆದ್ದರಿಂದ ಎಲ್ಲಾ ವಿಧದ ಸ್ವಾರ್ಥ, ಅನ್ಯಾಯ, ಅತಿರೇಕಗಳ ಪರಮಾವಧಿಯನ್ನು ನಿರೀಕ್ಷಿಸಬೇಕು ತತ್ವ, ಧೋರಣೆ, ನೀತಿ, ನಿಯಮಗಳ ಕಡೆಗೆ ಲಕ್ಷ್ಯ ಕೊಡಲಾಗದಂತಹ ಪರಿಸ್ಥಿತಿ ನಿರ್ಮಾಣಗೊಳ್ಳಬಹುದಾದ್ದರಿಂದ-ವಂಚನೆ, ವರ್ಚಸ್ಸಿಗೊಳಗಾಗಿ ಭವಿಷ್ಯವನ್ನು ಕೆಡಿಸಿಕೊಳ್ಳುವ ಸಂದರ್ಭ ಬರಬಹುದಾದ್ದರಿಂದ— ಜನಸಾಮಾನ್ಯರು ಅತೀವ ಜಾಗ್ರತೆಯಲ್ಲಿರಬೇಕು. ಈ ನಾಟಕದ ಪ್ರಥಮಾಂಕದಲ್ಲಿ ಪಾತ್ರಯದೊಳಗೆ ಕಚ್ಚಾಟಗಳೇಳಬಹುದು, ಉಮೇದ್ವಾರಿಗಳ ನೇಮಕದ ಕುರಿತು ಕಾಂಗ್ರೆಸು, ಲೀಗು, ಮತ್ತಿತರ ಪಕ್ಷಗಳೊಳಗೇನೇ ಆಂತರ್ಯದ್ದ ನೆಳಬಹುದು. ಎಲ್ಲಾ ಪಕ್ಷಗಳಲ್ಲಿಯೂ ಕೆಲವರು ಪಕ್ಷ ಬದಲಾಯಿಸಿಕೊಳ್ಳುವ ಬಣ್ಣ ಬದಲಾವಣೆಗಳಾಗಬಹುದು.

ದ್ವಿತೀಯ ರಂಗದಲ್ಲಿ ಪಕ್ಷ-ಪಕ್ಷಗಳೊಳಗಿನ ಕಾದಾಟ ತುತ್ತ ತುದಿಗೇರಬಹುದು. ರಾಜಕೀಯಾಭರಣಚಿಯೇನೂ ಇಲ್ಲದೆ, ಜಾತ್ಯಭಿಮಾನವೇ ಸರ್ವಸ್ವವಾಗಿರುವ ಮುಸ್ಲಿಂ ಜನತೆಯಲ್ಲಿ ಲೀಗಿನ ವರ್ಚಸ್ಸು ಅಧಿಕವಿರುವದರಿಂದ ರಾಷ್ಟ್ರೀಯ ವಾದಿ ಮುಸಲ್ಮಾನರು ವಿಷಮಾವಸ್ಥೆಗೀಡಾಗಬಹುದು. ಮುಸಲ್ಮಾನ ಜನತೆಯನ್ನು ತಿದ್ದಲಿಳಿಯುವ ಕಾಂಗ್ರೆಸ್ ಪ್ರಮುಖರು ಮತ್ತು ಕೆಲಸಗಾರರು, ಸಂಕೋಚ, ಸಂಕಷ್ಟ ಮತ್ತು ಹೊಡೆತಗಳಿಗೂ ಗುರಿಯಾಗಬೇಕಾದೀತು. ಕಮ್ಯೂನಿಸ್ಟರು ಮುಸ್ಲಿಂಲೀಗನ್ನು ಸಮರ್ಥಿಸಿ ಅಬೆಂಕಿಗೆ ಪೆಟ್ರೋಲು ಸುರಿಯಲಿದ್ದಾರೆ.

ಚುನಾವಣೆ ಸಮೀಪಿಸಿದಂತೆ ಮತ್ತು ಚುನಾವಣಾ ದಿನದಲ್ಲಿ ಈ ಗೊಂದಲ ತುತ್ತ ತುದಿಗೆ ಮುಟ್ಟಿ ಚರಿತ್ರೆಯಲ್ಲೊಂದು ಶಾಶ್ವತ ವಿಷಯಾಗಿ ನಿಲ್ಲುವ ಮಹಾ ದುರ್ಘಟನೆ ನಡೆಯದಿದ್ದರೆ ಅದೇ ವಿಶೇಷ.

ಚುನಾವಣೆಯಾದ ಮೇಲೆ ಪಕ್ಷಗಳ ಬಲಾಬಲವನ್ನು ಕಂಡ ಸಂದರ್ಭಸಾಧಕರೂ ಅತ್ಯಂದಿತ್ತ ಅಂತರ್ಲಾಗ ಹೊಡೆಯಬಹುದು.

ಆದ್ದರಿಂದ—

ಜನ ಸಾಮಾನ್ಯರು ತಮ್ಮ ಹೃದಯವನ್ನು ತಮ್ಮಲ್ಲೇ, ಆತ್ಯಂತ ಮೇಲಂತಸ್ತಿಗೇರಿಸಿ ಇಟ್ಟುಕೊಳ್ಳಲಿ; ಯಾವನೊಬ್ಬನ ಬೆನ್ನಿಗೂ ಅದನ್ನು ತಾಗಿಸದಿರಲಿ.

ಈ ಚುನಾವಣೆಯಲ್ಲಿ ಸ್ವಾರ್ಥವೇನೂ ಇಲ್ಲದವರು ತಾವು ಮಾತ್ರ ಹೊರತು, ರಂಗದ ಮುಂಭಾಗದಲ್ಲಿರುವ ಪ್ರಮುಖರಲ್ಲ ವಾದ್ದರಿಂದ ತಾವೇ ಅವರಿಗೆ ಮಾರ್ಗದರ್ಶರಾಗಬೇಕು, ಅವರ ಅನುಯಾಯಿಗಳು ತಾವಲ್ಲವೆಂಬುದನ್ನು ಖಂಡಿತ ತಿಳಿದಿರಬೇಕು.

ಪಕ್ಷ ನೋಡಿ ಬೆಂಬಲ ಹೊರತು ಮುಖ, ಜಾತಿ ನೋಡಿಯಲ್ಲವೆಂಬುದನ್ನು ತಿಳಿದಿರಬೇಕು. ಎಂತಹ ಮಹಾತ್ಮನೇ ಇದ್ದರೂ ಒಬ್ಬನಿಂದಾಗುವ—ಎಷ್ಟೇ ಅಗತ್ಯವಿದ್ದರೂ ಒಂದು ಜಾತಿಯ ಉದ್ಧಾರಕಾರ್ಯ ಕುವ—ಕಾರ್ಯಗಳಾವುವೂ ನ್ಯಾಯವಿಧಾಯಕ ಸಭೆಗಳಲ್ಲಿಲ್ಲ.

ಭಾರತ ಸ್ವತಂತ್ರವಾಗದೆ ಯಾವ ಕಾರ್ಯ ನಡೆದರೂ ಅದು ಎರಳೆನ ಮನೆಯಾಗುವದು ಖಂಡಿತ. ಆದ್ದರಿಂದ ಸ್ವಾತಂತ್ರ್ಯಸಾಧಕ ಪಕ್ಷಕ್ಕೇನೇ ಪೂರ್ಣ ಬೆಂಬಲಕೊಡಬೇಕು; ಮಿಕ್ಕೆಲ್ಲಾ ಪಕ್ಷಗಳೂ ಸ್ವಾತಂತ್ರ್ಯ ವಿರೋಧಿಗಳೆಂದು ಗಣಿಸಿ, ಅವುಗಳಗಸ್ತಿತ್ವವೇ ಉಳಿಯದಂತೆ ಮಾಡಬೇಕು.

ಈ ನಿರ್ಧಾರವೊಂದು ಅಚಲವಾಗಿರಲಿ. ಆದರೆ ವಿರುದ್ಧ ಪಕ್ಷೀಯರ ಎಲ್ಲಾ ವಿಧದ ಪ್ರಚಾರಗಳನ್ನೂ ಶಾಂತವಾಗಿ, ನಿರ್ವಿಕಾರ ಬುದ್ಧಿಯಿಂದ ಆಲಿಸೋಣಾಗಲಿ.

ಅಡ್ಡಹಾದಿಯ ಪ್ರಚಾರ, ಅಸತ್ಯ ರೋಪ, ಅತ್ಯಾಚಾರ, ಅತಿರೇಕ ವರ್ತನೆಗಳೆಲ್ಲಾ ನಮ್ಮ ವೈರಿಗಳ ಪಾಲಿಗಿರಲಿ-ಅವೆಲ್ಲಾ ಅವರನ್ನೇ ಅಹುತಿಗೊಳ್ಳಲಿ, ಎಂದು ಯಾವ ಸಂದರ್ಭದಲ್ಲಾದರೂ ದೃಢವಾಗಿರೋಣ. 'ನಿನ್ನ ಮಾಡವನ್ನು ಜೀವವಿರುವ ವರೆಗೊಪ್ಪಲಾರೆ; ಸ್ವತೃತಿಯಿರುವ ವರೆಗೆ ಸಮರ್ಥಿಸಲಾರೆ. ಆದರೆ ಸ್ವಾಧಿಸ್ವಾರ್ಥವನ್ನು ಮುಂದಿಡುವ ನಿನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಜೀವ ತೆತ್ತಾದರೂ ಕಾಪಾಡಿಕೊಡುವೆ'—ಎಂದು ಎಲ್ಲರೂ ಕರೋರ ಶಪಥಧಾರಿಗಳಾಗಬೇಕು.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945.

ಹಿಂದೀ ಸೋಲ್ಜರರಲ್ಲಿ ಬ್ರಿಟಿಷ್ ದ್ವೇಷ!

ಶ್ರೀ ಡಾವಿಡ್ ಕಾರ್ಪೆಂಟರ್ ಎಂಬವರು ಬ್ರಿಟಿಷ್ ಸೇನಾ ವಿಭಾಗದ ಅಧಿಕಾರಿಯಾಗಿ ದೀರ್ಘಕಾಲ ಹಿಂದುಸ್ಥಾನದಲ್ಲಿದ್ದು ಹಿಂದೀ ಯೋಧರ ಮನೋವೃತ್ತಿಕೇಗಿದೆ ಎಂಬ ಗುಟ್ಟನ್ನರಿತವರು. ಇಲ್ಲಿರುವಾಗ ಉಚ್ಚ ಸೇನಾಧಿಕಾರಿಗಳಾಗಿದ್ದ 20 ಮಂದಿ ಹಿಂದೀಯರೊಡನೆ ದುಂಡು ಮೇಜು ಸಮ್ಮೇಲನಗಳನ್ನು ನಡೆಯಿಸಿ ಪರಿಸ್ಥಿತಿಯ ಗಾಢ ಪರಿಚಯವನ್ನು ಮಾಡಿಕೊಂಡಿದ್ದಾರೆ. ಈಗ ಲಂಡನ್ನಿಗೆ ಮರಳಿ, ಅಲ್ಲಿಯ 'ಟ್ರೂ ಒನ್ಸ್' ಪತ್ರಿಕೆಯಲ್ಲೊಂದು ಲೇಖನ ಬರೆದು ಹಿಂದೀಯರ, ಅದರಲ್ಲೂ ಭಾರತೀಯ ಸೋಲ್ಜರರ ಚಿತ್ತವೃತ್ತಿ ಹೇಗಿದೆ ಎಂಬ ಕುರಿತು ಪ್ರಪಂಚದ ಕಣ್ಣನ್ನು ತೆರೆಯಿಸಿದ್ದಾರೆ.

ಬ್ರಿಟಿಷರ ಮೇಲೆ ದ್ವೇಷ

ಕಾರ್ಪೆಂಟರ್ ಬರೆದಿದ್ದಾರೆ "ಭಾರತದ ರಾಜಕೀಯದಲ್ಲಿ ಕಂಡು ಬರುವ ಒಂದು ಅತಿ ಮುಖ್ಯ ವಿಷಯವೆಂದರೆ ಜನತೆಯ ಹೃದಯದಲ್ಲಿ ಇಂಗ್ಲಾಂಡಿನ ಮತ್ತು ಬ್ರಿಟಿಷರದಾಗಿರುವ ಪ್ರತಿಯೊಂದರ ಮೇಲೂ ನೆಲೆಸಿರುವ ಪ್ರಬಲ ದ್ವೇಷ. ಈ ದ್ವೇಷವು ಕರೋರ ರೀತಿಯಿಂದ ಬೆಳೆಯುತ್ತಾ ಹೋಗುತ್ತಿದೆ ಅನುದಿನದ ಅಭಾವಗಳು ಅದನ್ನು ದಿನ ದಿನವೂ ಬೆಳೆಸುತ್ತಿವೆ ಇದು ಸೈನ್ಯದಲ್ಲಿರುವಷ್ಟು ಬಲವಾಗಿ ಬೇರೆಲ್ಲಿಯೂ ಇಲ್ಲ; ಸೇನಾಧಿಕಾರಿಗಳಲ್ಲಿರುವಷ್ಟು ಬಲವಾಗಿ ಸೈನ್ಯದ ಬೇರೆ ಭಾಗಗಳಲ್ಲೂ ಇಲ್ಲ. ನಾವು ತುತ್ತಾದರೆಂದೆ--ಅಥವಾ ನಮ್ಮ ಜಾಗತಿಕ ಸ್ಥಾನವಮಾನಗಳ ಮೇಲೆ ಲಕ್ಷ್ಯವಿಟ್ಟು--ಇಲ್ಲಿನ ಹಿಂದ ಸ್ಥಾನವನ್ನು ಬಿಡುವ ಮೊದಲು ಅದನ್ನು ವಿಕೇಂದ್ರೀಕರಿಸಿಕೊಳ್ಳಬೇಕೆಂಬ ಯತ್ನ ದ್ವೇಷದಿಂದ, ಇನ್ನೂ ತಡಮಾಡಿದರೆ ಸಾಮೂಹಿಕ ಕಾಯಿದೇ ಭಂಗವು ಮತ್ತೊಮ್ಮೆ ಸ್ಫೋಟವಾಗುವಂತೆ ಮಾಡಿದಂತಾಗುವದು, ಆಗ ಸೇನೆಯು ಅಮೂಲಾಗ್ರವಾಗಿ ಜನತೆಯ ಪಕ್ಷವಹಿಸುವದು, ಸೇನಾಧಿಕಾರಿಗಳು ಆದರೆ ಮುಂದಾಳುತ್ವ ವಹಿಸುವರು

ಮುಸ್ಲಿಮರ ಆತಂಕವಿದೆಯೆ?

ಹಿಂದೀ ಸೋಲ್ಜರರಿಗೆ, ಅವರ ಸೇನಾ ಶಿಕ್ಷಣವು ಬ್ರೈಯ ಮೇಲಿನ ದ್ವೇಷವನ್ನು ಕಡಿಮೆಮಾಡಿಕೊಳ್ಳಲು ಕಲಿಸಿಲ್ಲವಾದರೂ ಬ್ರಿಟಿಷರನ್ನು ಹೆಚ್ಚಿಚ್ಚಾಗಿ ದ್ವೇಷಿಸಲು ಕಲಿಸಿದೆ. ಅವರೆಲ್ಲ ತಮ್ಮ ಸಹವರ್ತಿ ಬ್ರಿಟಿಷ್ ಅಧಿಕಾರಿಗಳ ಪಕ್ಷಪಾತನದ ಕಹಿ ಅನುಭವ ಮತ್ತವರ ಮೇಲ್ಮೆಯ ಹೆಮ್ಮೆಗಾಗಿ ದ್ವೇಷವನ್ನು ಕಟ್ಟಿಕೊಂಡೇ ಸೇನೆಯನ್ನು ಬಿಡಲಿದ್ದಾರೆ ಎಂದು ನಾನೆಣಿಸುತ್ತೇನೆ ಆಳುವ ಮತ್ತು ಅಧಿಕಾರ ನಡಿಸುವ ತಮ್ಮ ಸ್ವಸಾಮರ್ಥ್ಯದ ಮೇಲೆ ಪೂರ್ಣ ವಿಶ್ವಾಸವಿರುವ ಆವರು ಭಾರತವು ತನ್ನನ್ನು ತಾನೇ ಆಳಿಕೊಳ್ಳಬೇಕೆಂಬ ಕುರಿತು ಅತ್ಯುಜ್ವಲ ನಿರ್ಧಾರದಲ್ಲಿದ್ದಾರೆ ಅಂತೆಯೇ ಭಾರತವು ಬಲಶಾಲಿಯಾಗಿರಲು ಏಕರೂಪಿಯಾಗಿರಬೇಕೆಂದೂ ಆತರ ದೃಢಾಭಿಪ್ರಾಯ. ಮುಸ್ಲಿಂ ಅಧಿಕಾರಿಗಳಲ್ಲಿ ಪ್ರಬಲ ಬಹುಮತೀಯರಿಗೆ ಪಾಕಿಸ್ತಾನದಲ್ಲಿನಂಬಿಕೆಯೆ ಇಲ್ಲ. ಸಂಡಿತ ಜವಾಹರಲಾಲರ ನಾಯಕತ್ವದ ಒಂದು ಪರಕಾರವು-ಕಾಂಗ್ರೆಸು ಈ ಮೊದಲೇ ಕೊಟ್ಟರುವ ವಿಯಾಯತಿಗಳನ್ನಲ್ಲದೆ. ಅಳುತ್ತಾ ಹೊದರೆ ಸಾಕು, ಅದು ಮುಸ್ಲಿಂ ಜನತೆಯ ಪ್ರಬಲ ಒಹುಮತವನ್ನೊಲಿಸಿಕೊಳ್ಳುವದು ಖಂಡಿತವೆಂದು ಮುಸಲ್ಮಾನ್ ಸೇನಾಧಿಕಾರಿಗಳು ನನ್ನೊಡನೆಂದಿದ್ದಾರೆ"—ಎನ್ನುತ್ತಾ ಡೇವಿಡ್ ಕಾರ್ಪೆಂಟರರು, ಲೊರ್ಡ್ ವೇವೆಲರ ಯಬಾರ್ಥತೆಯನ್ನೇ ಬ್ರಿಟಿಷ್ ಸರಕಾರವು ಅನುಕರಿಸಿ ಕೂಡಲೇ ಭಾರತಕ್ಕೆ ಸ್ವಾಯತ್ತೆಯಿತ್ತಿಯಿದ್ದರೆ ಅನಾಹುತವನ್ನುಬೀತೆಂದು ಬ್ರಿಟಿಷರನ್ನು ಎಚ್ಚರಿಸಿದ್ದಾರೆ

ಎಲಿಯನರ್ ಡೆನ್ನಿನಳ ಹಿತೋಕ್ತಿ

ಲಿವರ್‌ಪೂಲಿನಲ್ಲಿ ಏವರ್ಣ ಜನಾಂಗದ ಹಿತ ಸಾಧನಾ ಕಾರ್ಯಕರ್ತೆಯಾಗಿರುವ ಎಲಿಯನರ್ ಡೆನ್ನಿಳು ಲಂಡನ್ನಿನ 'ಡೈಲಿ ಮಿರರ್' ಪತ್ರಿಕೆಯಲ್ಲಿ ಬ್ರಿಟಿಷರ ವರ್ಣದ್ವೇಷದ ದುಷ್ಪರಿಣಾಮದ ಕುರಿತು ಸ್ಪಷ್ಟ ಎಚ್ಚರಿಕೆ ತೊಟ್ಟು ಬರೆದ ಲೇಖನದ ಸಾರಾಂಶ ಹೀಗಿದೆ "ಬ್ರಿಟಿಷ್ ಸಾಮ್ರಾಜ್ಯದ ಕರಿಜನರು—ಬ್ರಿಟಿನ ಸೇನೆ, ನಾವಿ, ಇತ್ಯಾದಿ ಯುದ್ಧ ಬಲಗಳಿಗೆ ಸೇರಿದವರು—ರಾಜಭಕ್ತಿ ಮತ್ತು ಪ್ರಾಣಗಳನ್ನು ಕಾಣಿಕೆಯಿತ್ತಿದ್ದಾರೆ. ಆದರೆ ಇಲ್ಲಿಗೆ ಬಂದು ತಮ್ಮ ನಿರೀಕ್ಷೆಯಿದ್ದ ಆ ನೇಲ್ಜರ್ಜಿಗೇರಲಾಗದ ಒಂದು ರಾಷ್ಟ್ರವನ್ನು ಅವರು ಕಂಡಂತಾಯಿತು. ಅವರನ್ನಲ್ಲಿ ಅಪಜ್ಞೆಯುತ್ತ ಅಸಾಯೆಯಿದಿರಿಸಿತು ಕೆಲವು ನೆರೆಕರೆ ಪ್ರದೇಶಗಳಲ್ಲಿ,ಕೆಲವು ವ್ಯಾಪಾರೋದ್ಯಮಗಳಲ್ಲಿ ತಮಗೆ ಪ್ರವೇಶವಿಲ್ಲದುದನ್ನು ಅವರಿತುಕೊಂಡರು ಅತಿದೊಡ್ಡ ಜನಸಂಗಡವನ್ನೊಂದು ಕ್ಷೇತ್ರದೊಳಗೆ ತುಂಬಿಸಿ ವಿಂಗಡಿಸಿಡಲಾಗಿದ ಅರೇಳು ಕುಟುಂಬಗಳು ಒಂದೇ ಮನೆಯೊಳಗೆ ವಾಸಿಸುವದನ್ನು ಕಾಣಬಹುದು ಕುಟುಂಬ ಕುಟುಂಬಗಳು ಒಂದೇ ಕೋಣೆಯೊಳಗೆ ಊಟ ಆಡುಗೆ ಸಿದ್ಧಮಾಡಬೇಕಾಗಿ ಒಂದಿದೆ ಕೆಲವರಂತೂ ರಸ್ತೆಗಳಲ್ಲೇ ವಾಸಿಸುತಿದ್ದಾರೆ ನಾನು ಈ ಜನತೆಯ ನಡುವೆ ಹಾಸಿ, ಕೆಲಸಮಾಡಿ ಅನುಭವ ಪಡೆದಿದ್ದೇನೆ ಅವರಿಗೂ ನಮಗೂ ಗೌರ್ಮೆಂಟ್ಯತ್ಯಾಸವಾತ್ರವೆಂದು ನಾನು ಬಲ್ಲೆ ಅವರ ಮೇಲೆ ನಾವು ತೋರಿಸುತ್ತಿರುವ ತಾತ್ಸಾರ, ದ್ವೇಷಾಸೂಯೆಗಳು ನಮ್ಮನ್ನು ಹೀನ ದರ್ಜೆಗಿಳಿಸುವದಷ್ಟೇ ಅಲ್ಲ, ನಮ್ಮ ಸ್ವತಂತ್ರ ಸಾಹಸಕ ತತ್ವಕ್ಕೆ ಅಪಾಯವೊಡ್ಡುವದೆಂದೂ ನಾನು ತಿಳಿದಿದ್ದೇನೆ"

BANK WITH THE CONNECTIONS ON THE WEST COAST

OFFERS:-

EFFICIENT, PROMPT & COURTEOUS SERVICE OF EVERY TYPE

OPEN AN ACCOUNT WITH

The Canara Industrial & Banking Syndicate Ltd.



Standing counts but planned drive carries away the trophy in insurance world This is the secret of Warden's outstanding leadership

Let figures speak Out of 191 life insurance companies in India only 22 have passed the much-coveted crore mark in new paid-for business in 1944 The standing of almost all these 22 companies varies from 30 to 70 years And Warden is the youngest in this top notch group

Equally striking is Warden's speed record in business While most companies of ranking took 22 to 62 years to wrke their first crore paid-for new business in a year Warden has broken this record in 11 years **Thus age for age, it ranks as one of the largest life insurance under-writers in the East.**

With conservative traditions of rigid economy and scrupulous efficiency, this great company is playing the role of a true **Warden** of its policy-holders

Chairman Sir Chinubhai Madhowlal, Bart
Managing Director S H Thaker

LIFE • FIRE • ACCIDENT

THE WARDEN INSURANCE CO. LTD.

WARDEN HOUSE, SIR PHIROZSHAH MEHTA ROAD, FORT, BOMBAY.
BRANCHES & AGENCIES ALL OVER INDIA

For Agencies apply to -
Branch Office,
Jayant Building,
Maidan Road, MANGALORE.

CHAMPA'ES
Snow & Castrex
(Sole Distributers for (India)
Sukhananda Stores
Santhekatte, UDIPI, S K.

NOTICE

The General Assurance Society Ltd , Ajmer

Notice having been given of the loss of policy No. 20034 on the life of Mr B Shivaram Shetty, President, Panchayat Board P O Brahmavar S Kanara District, a duplicate Copy of the said Policy will be issued if no objection is received by us within one month from this date

Ajmer / **Brahma Datta**
Dated 12-10 45) General Manager

ಶ್ರೀ ಶಿವರಾಮ ಕಾರಂತರ
ಹೊಸ ಪುಸ್ತಕ
ಮುಗಿದ ಯುದ್ಧ
ಬೆಲೆ 3—8—0.
ನವಭಾರತ ಪುಸ್ತಕ ಭಂಡಾರ
ಉಡುಪಿ

The Canara Banking Corporation Limited.
(Incorporated in British India, with limited Liability)
Estd 1906
Head Office: **UDIPI**, South Kanara.

ANNOUNCEMENT.

A branch of the BANK will shortly be opened at "COCHIN".

ನವಯುಗ

ಉಡುಪಿ, ಗುರುವಾರ ೧೪-೧೦-'೪೫.

ತಿರುವಾಂಕೂರಿನ ಮಾದರಿ

ಸಂಸ್ಥಾನದ ಪ್ರಾಥಮಿಕ ವಿದ್ಯಾಭ್ಯಾಸದ ಹತೋಟಿ ಮತ್ತು ಆಡಳಿತೆಯನ್ನು ತಾನೇ ವಹಿಸಿಕೊಂಡು ಧಾರ್ಮಿಕ ಶಿಕ್ಷಣೋದ್ದೇಶದಿಂದ ನಡೆಯಿಸಲ್ಪಡುವ ಖಾಸಗೀ ಶಾಲೆಗಳಿಗೆ ಗ್ರಾಂಟು ನಿರಾಕರಿಸುವ ನಿರ್ಧಾರವನ್ನು ತಿರುವಾಂಕೂರು ಸರಕಾರವು ಪ್ರಕಟಿಸಿ ಒಂದೂವರೆ ತಿಂಗಳು ಕಳೆಯಿತು; ಇನ್ನೂ ಆ ಕುರಿತು ದೇಶ ತುಂಬಾ ಬಿಸಿ ಬಿಸಿ ಚರ್ಚೆಗಳಾಗುತ್ತಿವೆ. ರಾಷ್ಟ್ರದ ಮೂಲೆ ಮೂಲೆಯಲ್ಲಿದ್ದ ಕೆಥೋಲಿಕರೂ ಇದಕ್ಕಾಗಿ ಸಂತಾಪ ವ್ಯಕ್ತಮಾಡುತಿದ್ದಾರೆ; ನಿಷೇಧ ಪ್ರದರ್ಶಿಸುತಿದ್ದಾರೆ; ಮಾತು ಬರುವವರೆಂಬುದಕ್ಕೆ ಇದು ವರೆಗೆ ನಿದರ್ಶನಗಳು ದೊರಯದಿದ್ದ ಕೆಥೋಲಿಕ್ ಗುರುಗಳು-ಇದ್ದುವೆಂಬುದಕ್ಕೆ ದಾಖಲೆಯಿಲ್ಲದ ಕೆಥೋಲಿಕ್ ಸಂಘ ಸಂಸ್ಥೆಗಳು—ತಿರುವಾಂಕೂರು ಸರಕಾರದ ಆನ್ಯಾಯವನ್ನು ಖಂಡಿಸುವ ಅದ್ಭುತ ಸಾಹಸ ಕೈಕೊಳ್ಳುವ ಶಕ್ತಿಯನ್ನು ಅಕಸ್ಮಾತ್ತಾಗಿ ಪಡೆಸಿಕೊಂಡಿವೆ. ಇದೇ ರೀತಿ ಇದಿರುವಾದಿ ಪಾಳಯದಲ್ಲೂ ಇಂತಹ ಆಶ್ಚರ್ಯಕರ ಚೇತನಗಳ ಉಗಮವಾಗಬೇಕೆಂದು ನಾವು ಆಶಿಸುತ್ತೇವೆ. ಹರಿಜನರಿಗೆ ದೇವಾಲಯಪ್ರವೇಶ ಕೊಟ್ಟಾಗ ತಾವಿತ್ತ್ರೋಪಾಂಕೂರು ಸಹ ಹೀಗೆಯೇ ಸಿಟ್ಟಿಗೆದ್ದಿದ್ದರು, ಇಂದಿನ ತಮ್ಮಾಚೀರ್ಯಾದಿ ಸ್ವೀಕರಿಸಲು ತಿರುವಾಂಕೂರು ಸರಕಾರವೇ ಉಳಿಯಲಿಲ್ಲವೆಂಬುದನ್ನೆರಿಯದ ಧರ್ಮಭ್ರಾಂತರು-ಜನಜೀವನವನ್ನು ಧರ್ಮಾಂಧ ದೃಷ್ಟಿಯಿಂದಲ್ಲದೆ ಅನ್ಯಥಾ ನೋಡಲರಿಯದ ಹಲವರು-ಈ ಸುಧಾರಣೆಗಾಗಿ ತಿರುವಾಂಕೂರು ಸರಕಾರವನ್ನೂ, ದಿವಾನ್ ಸರ್. ಸಿ. ಪಿ ಯನ್ನೂ ಮುಕ್ತ ಕಂಠದಿಂದ ದೂಷಿಸುತಿದ್ದಾರೆ. ಈ ವಿರುದ್ಧ ಪಕ್ಷಗಳೆರಡರ ವಾದಗಳೊಳಗೂ ಸ್ವಧರ್ಮಾಂಧತೆಯೇ ಹುಗಿದಿದೆ; ಇಕ್ಕಡೆಯ ಮನೋವೃತ್ತಿಯೂ ಖಂಡನೀಯ. ಆ ಸೈಕಿ ದುಸ್ಸಂದರ್ಭವ್ಯಾಖ್ಯಾತ್ ಕೆಥೋಲಿಕರ ವಾದವು ತಪ್ಪು ಹಾದಿ ಹಿಡಿದಿದೆ.ಹಿಂದೂ ಧರ್ಮಾಂಧರನ್ನು ಇಂದಿನ ಸಂದರ್ಭವು ನ್ಯಾಯವಾದಿಗಳನ್ನಾಗಿ ಮಾಡಿದೆ ಕಾರಣ, ತಿರುವಾಂಕೂರು ಸರಕಾರದ ಧೋರಣೆಯು ಭಾವೀ ಜನತೆಯ ಹಿತಚಿಂತಕತೆಯಿಂದ, ನ್ಯಾಯವಾದಿಗಳಿಂದ ನಕಾರಾಸ್ಪದವೆನಿಸಿಕೊಳ್ಳಲಾರದು. ಸರಕಾರವು ಕೆಥೋಲಿಕರ ಪಡೆಯವಂತಹದು. ಈ ನಿಟ್ಟಿಗೆ ವಿಶ್ವ ಸರಕಾರಗಳಿಗೆ ತಿರುವಾಂಕೂರಿನಂದು ಮೇಲ್ಪಂಕ್ತಿ ಹಾಕಿದೆ.

'ಸಾಧ್ಯವಿದ್ದಷ್ಟು ಬೇಗನೇ ಪ್ರಾಥಮಿಕ ಶಿಕ್ಷಣವನ್ನು ಸ್ವತಂತ್ರ ಮತ್ತು ಖಡ್ಡಾಯಗೊಳಿಸುವ ಸ್ಪಷ್ಟೋದ್ದೇಶದಿಂದ, ಪ್ರಾಥಮಿಕ ಶಿಕ್ಷಣದ ಹತೋಟಿ ಮತ್ತು ಆಡಳಿತೆಯನ್ನು ಸರಕಾರವೇ ವಹಿಸುವದು. ವಿಶೇಷತಃ ಅಥವಾ ಮುಖ್ಯವಾಗಿ ವಿಶಿಷ್ಟರೀತಿಯ ಧಾರ್ಮಿಕ ಶಿಕ್ಷಣ ಕೊಡುವ ಉದ್ದೇಶದಿಂದ ನಡೆಸಲ್ಪಡುವ ಪ್ರಾಥಮಿಕ ಶಾಲೆಗಳಿಗೆ ಇಂದಿನಿಂದ ಸರಕಾರೀ ಗ್ರಾಂಟು ದೊರೆಯುವಂತಿಲ್ಲ' ಎಂದು ತಿರುವಾಂಕೂರು ಸರಕಾರದ ಜಾಹೀರುನಾಮೆ. ಶಾಲಾ ಸಮಯವನ್ನು ಬಿಟ್ಟು ಇತರ ವೇಳೆಯಲ್ಲಿ ಶಾಲೆಯಲ್ಲೇ ಧಾರ್ಮಿಕ ಶಿಕ್ಷಣ ಕೊಡಬಹುದು; ಈ ಅನುಕೂಲತೆಯ ಪೂರ್ಣೋಪಯೋಗವನ್ನು ಬೇಕಾದವರು ಪಡೆಯಬಹುದು. ಆದರೆ ವಿವಿಧ ಧರ್ಮಗಳ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ ಶಾಲಾ ಸಮಯದಲ್ಲಿ, ಶಿಕ್ಷಣದೊಂದು ಅಂಗವಾಗಿ ಧಾರ್ಮಿಕ ಶಿಕ್ಷಣವಿಯಲು ಬಿಡಲಾಗುವದಿಲ್ಲ-ಎಂಬ ತಿರುವಾಂಕೂರು ಸರಕಾರದ ವಾದವು ನ್ಯಾಯುವಿದೆ. ತಿರುವಾಂಕೂರಿನಲ್ಲಿ ಇದುವರೆಗೂ ಪ್ರಾಥಮಿಕ ಶಾಲೆಗಳು ಹೆಚ್ಚಾಗಿ ಕೆಥೋಲಿಕ್ ಧಾರ್ಮಿಕ ಸಂಸ್ಥೆಗಳಿಂದ, ಖಾಸಗೀ ಮಹನೀಯರಿಂದ ನಡೆಯಿಸಲ್ಪಡುತಿದ್ದುವು ಇತರ ಕಡೆಗಳಂತೆ ಅವುಗಳಿಗೆ ಸರಕಾರೀ ಸಹಾಯ ಧನ ದೊರೆಯುತಿತ್ತು. ಈಗ ಅದನ್ನು ಅಲ್ಲಗಳೆಯುವರೆ ತಿರುವಾಂಕೂರು ಸರಕಾರವೆ ನ್ಯಾಯವಾದ ಕಾರಣಗಳನ್ನಿತ್ತಿದೆ. ಕೆಥೋಲಿಕ್ ಶಿಕ್ಷಣಗಳ ಉದ್ದೇಶ ಮತ್ತು ಗುರಿಯೇ ನೆಂಬುದು ಪಿಚಿತವಾಗಿದೆ. ಅನ್ಯ ಮತೀಯರೂ ಅಂತಹ ಶಾಲೆಗಳಿಗೇನೇ ತಮ್ಮ ಮಕ್ಕಳನ್ನು ಕಳುಹಿಸುವಂತೆ ಒತ್ತಾಯಿಸುವದು ಸರಕಾರೀ ನೀತಿಯಲ್ಲ ಆಂಥವರ ಮಕ್ಕಳಿಗೂ ವಿದ್ಯಾಭ್ಯಾಸ ದೊರೆಯಬೇಕಾದರೆ ಕೆಥೋಲಿಕ್ ಶಾಲೆಗಳಲ್ಲಿದ್ದ ಕಡೆಗಳಲ್ಲಿ ಪ್ರತ್ಯೇಕ ಸರಕಾರೀ ಶಾಲೆಗಳಾಗಬೇಕು. ಆತ್ತ ಅವುಗಳನ್ನೂ ನಡೆಯಿಸಿ, ಇತ್ತ ಕೆಥೋಲಿಕ್ ಶಾಲೆಗಳಿಗೂ ಗ್ರಾಂಟು ಕೊಡುವದೆಂದರೆ, ಸರಕಾರದ ಆರ್ಥಿಕ ಸ್ಥಿತಿಗೆ ಸಹಿಸದು ಆದ್ದರಿಂದ ಯಾವ ಧರ್ಮಿಕ ಶಿಕ್ಷಣವೂ ಇಲ್ಲದ ಸ್ವತಂತ್ರ ಶಾಲೆಗಳನ್ನು ಸರಕಾರವೇ ನಡೆಯಿಸುವದೆಂದು ಸರಕಾರದ ವಾದ 'ನಾವೂ ಕರ ಕಂದಾಯ ಕೊಡುವವರು. ಲದ್ದರಿಂದ ಬೇಕಾದಂತಹ ಶಾಲೆಗಳನ್ನು ನಡೆಯಿಸಿ ಸರಕಾರದ ಸಹಾಯ ಪಡೆಯುವ ಅಧಿಕಾರವಿದ್ದರಿದ್ದೇವೆ' ಎಂಬ ಕೆಥೋಲಿಕರ ವಾದವು ಹುರುಳಿಲ್ಲದುದು.ಸರಕಾರವು ಕೆಥೋಲಿಕರ ಮಕ್ಕಳಿಗೆ ವಿದ್ಯಾಭ್ಯಾಸದ ಅನುಕೂಲತೆಯಿಯದಿದ್ದರೆ ಈ ವಾದ ಹೂಡಬೇಕು. ಅಥವಾ ಹಿಂದೂ ಧರ್ಮಿಕ ಶಾಲೆಗಳಿಗೆ ಸಹಾಯ ಕೊಟ್ಟು, ಕೆಥೋಲಿಕರಿಗದನ್ನು ವಂಚಿಸಿದರೆ ಮಾತ್ರ ಹೀಗನ್ನಬೇಕು. ತಿರುವಾಂಕೂರು ಸರಕಾರವು ಬಹು ಸಂಖ್ಯಾಕ ಧರ್ಮಾಂಧರಿದಿರಲ್ಲಿ ಇಂತಹ ಹೆಜ್ಜೆಯಿಡಲು ಧೈರ್ಯಗೊಂಡುದು ಅಭಿನಂದನೀಯ. ಪ್ರತಿಯೊಂದು ಸರಕಾರವೂ ಈ ಮಾದರಿಯನ್ನು ಅನುಕರಿಸಬೇಕು. ತಿರುವಾಂಕೂರು ಈ ಭಾಗದಲ್ಲಿ ನೊದಲ ಹೆಜ್ಜೆಯಿಟ್ಟಿದೆ; ಧಾರ್ಮಿಕ ಶಿಕ್ಷಣವನ್ನು ತನ್ನ ವಲ್ಲನೆಂದಿಸ್ಟೇ,ಹೇಳಿದೆ; ಅದನ್ನು ತನ್ನ ವೈರಿಯೆಂದೇ ಪ್ರತಿಯೊಂದುಸರಕಾರವೂ ಭಾವಿಸುವದಗತ್ಯ. ಸಾರ್ವಜನಿಕ ನಿಲಯ, ಸಂಘ, ಸಂಸ್ಥೆಗಳಾವುದರಲ್ಲೂ ಯಾವದೇ ಧಾರ್ಮಿಕ ಶಿಕ್ಷಣ, ಧಾರ್ಮಿಕಾಚರಣೆ, ಧಾರ್ಮಿಕ ಚಿಹ್ನೆಗಳಿರಬಾರದೆಂದು ನಿಷೇಧಿಸುವದೇ ಸಮಂಜಸವಿದೆ.

'ಭಾರತೀಯ ರಾಷ್ಟ್ರೀಯ ಸೇನೆ'

'ಸಿಪಾಯಿ ದಂಗೆ'ಯೆಂದು ಹೆಸರಾದ ಅಂದಿನ ಸ್ವಾತಂತ್ರ್ಯ ಸಮರದ ಬಳಿಕ ಭಾರತವು ಮತ್ತೊಂದು ಚಿತ್ಕಾರೀಯ 'ವಿಚಾರಣೆ'ಯನ್ನು ನೋಡುವ ಸಂದರ್ಭವೀಗ ತಾನೇ ಬಂದಿದೆ. ಸುಭಾಸ್ ಚಂದ್ರ ಬೋಸರ 'ಭಾರತ ರಾಷ್ಟ್ರೀಯ ಸೇನೆ'(ಅಜಾದ್ ಹಿಂದ್ ಫೌಜ್) ಯ ಮೂವರು ಅಧಿಕಾರಿಗಳ (ಒಬ್ಬ ಹಿಂದೂ, ಒಬ್ಬ ಮುಸ್ಲಿಂ, ಒಬ್ಬ ಸಿಖ್) ವಿಚಾರಣೆಯು ನವಂಬರ್ ೨೯ಕ್ಕೆ ನವಢಿಲ್ಲಿಯಲ್ಲಿ ಆರಂಭವಾಗಲಿದೆ. ಆ ಮೂವರೆಂದರೆ ಕೆಪ್ಟನ್ ಶೆಗಾಟ್, ಕೆಪ್ಟನ್ ಶಾನವಾಜ್, ಮತ್ತು ಕೆಪ್ಟನ್ ಡಿಲ್ಲೋನ್. ಇವರು ಬ್ರಿಟಿಷ್ ಇಂದೀ ಸೇನೆಯಿಂದ ತಪ್ಪಿಸಿಕೊಂಡು ಸುಭಾಸ್ ಸೇನೆಯನ್ನು ಸೇರಿದ್ದರೆಂದೂ ಅಲ್ಲಿ ಸುಮಾರು 1200 ಮಂದಿ ಹಿಂದೀ ಸೇನಾಧಿಕಾರಿಗಳನ್ನು ಚಕ್ರವರ್ತಿಗಳ ವಿರುದ್ಧ ಯುದ್ಧಕ್ಕೆ ತರಬೇತಿ ಮಾಡಿದರೆಂದೂ ಆರೋಪ ವಿದೆ. ಸುಭಾಸ್ ಸೇನೆಯಿಂದ ತಪ್ಪಿಸಿಕೊಂಡು ಹೋಗಿ ಬ್ರಿಟಿಷ್ ಸೇನೆ ಸೇರಲಿಚ್ಛಿಸಿದ ನಾಲ್ವರು ಹಿಂದೀ ಸೋಲ್ಜರರಿಗೆ ಇವರು ಮರಣದಂಡನೆಯನ್ನೂ ವಿಧಿಸಿದ್ದರಂತೆ. ಅ. ಭಾ. ಕಾಂಗ್ರೆಸ್ ಕಮಿಟಿಯು ಈ ಯೋಧರ ರಕ್ಷಣೆಗಾಗಿ ಶ್ರೀ ಭುಲಾಭಾಯಿ, ಡಾ! ಕಟ್ಜು, ಮಿ. ಆಸಫ್ ಆಲಿ ಮತ್ತು ರಘುನಂದನ್ ಸರನೆರಿರುವ ಒಂದು ಡಿಫೆನ್ಸ್ ಕಮಿಟಿಯನ್ನು ರಚಿಸಿದ್ದು ಆವರೀಗ ನವಢಿಲ್ಲಿಯಲ್ಲಿದ್ದಾರೆ. ಈ ಕಮಿಟಿ ಸ್ವಾತಂತ್ರ್ಯ ಸೈನಿಕರ ಮೇಲಿನ ದಾವೆಯನ್ನು ನಿರಿಸಲು ಸರ್ವಯತ್ನಮಾಡುತ್ತಿದೆ. ಬರ್ಮಾ, ಮಲಯಗಳಿಂದ ಡಿಫೆನ್ಸ್ ಸಾಕ್ಷಿಗಾರರೂ ಬರಲಿದ್ದಾರೆ. 300ವರುಷಗಳ ಮೊದಲು ರಾಜಹಾನನಿಂದ ಕಟ್ಟಲ್ಪಟ್ಟು ಚರಿತ್ರಾರ್ಹ ಘಟನೆಗಳಿಗೆ ಹೆಸರು ಹೋದ 'ಕೆಂಪು ಕೋಟೆ'ಯಲ್ಲಿ ಈ ವಿಚಾರಣೆ ನಡೆಯಲಿದೆ.

ಆ ಸೇನೆಯ ರಚನೆ

ಡಿಫೆನ್ಸ್ ಕಮಿಟಿಯವರ ಕೋಧನೆಗಳಿಂದ ಹಲವು ಸಂಗತಿಗಳು ಬೆಳಕಿಗೆ ಬಂದಿವೆ. ಸುಭಾಸ್ ಸೇನೆಯು ಸೈನಿಕ ಕ್ರಮ, ಶಿಸ್ತು ಮತ್ತು ವ್ಯವಸ್ಥೆಗನುಗುಣವಾಗಿ ರಚಿಸಲ್ಪಟ್ಟ ಒಂದು ಸೇನೆಯಾಗಿತ್ತು; ಗಲಭೆಗಾರರ ಕೂಟವಾಗಿರಲಿಲ್ಲ. ಆದರಲ್ಲಿ ನೈ 50000 ಸೈನಿಕರು ಮತ್ತು 750 ಅಧಿಕಾರಿಗಳಿದ್ದರು. 3 ಲಕ್ಷಕ್ಕೇರಬೇಕೆಂಬುದು ಆದರ ಗುರಿ. ಸಾಕಷ್ಟು ಯಾಂತ್ರಿಕೋಪಕರಣಗಳು ದೊರೆಯದೆ ಆ ಗುರಿ ಮುಟ್ಟಲರಿಲ್ಲ. ಆದರ ಏಕ ಮಾತ್ರ ಗುರಿಯೆಂದರೆ ಭಾರತದ ಬಂಧವಿಮೋಚನೆ. ಜಾಪಾನಿಯರಿಂದ ಈ ಬಗ್ಗೆ ಸಹಾಯವನ್ನು ಪಡೆಯುತಿತ್ತು, ಹೊರತು ಜಾಪಾನಿನ ಸಲಕೆಗಾಗಲೀ, ಧ್ಯೇಯ ಧೋರಣೆಗಳಿಗಾಗಲೀ ಕಟ್ಟು ಬಿದ್ದಿರಲಿಲ್ಲ. ತಮ್ಮ ಸಹಾಯಕ್ಕಾಗಿಯಲ್ಲದೆ ಬೇರಾವುದೇ ವಿಧದಿಂದ ಜಾಪಾನಿಯರು ಹಿಂದುಸ್ಥಾನದೊಳಗೆ ಪ್ರವೇಶಿಸುವ ಯೋಚನೆಯು ಈ ಸೇನೆಯದಾಗಿರಲಿಲ್ಲ. ಸೇನಾ ಘೋಷಣೆಗಳೆಂದರೆ 'ಢಿಲ್ಲಿಯ ಮೇಲೆ ದಾಂಡು' 'ಪುರಾತನ ಢಿಲ್ಲಿ ಕೋಟೆಯಲ್ಲಿ ವಿಜಯ ನೆರವಣಿಗೆ'! ತನ್ನ ಧೋರಣೆಗೆ ಜಾಪಾನಿಯರಿಂದ ತೊಂದರೆ ಬಂದಾಗಲೆಲ್ಲಾ ಈ ಸೇನೆ ತಿಕ್ಕಾಟಕ್ಕೆ ನಿಲ್ಲುತಿತ್ತು.

ಸೇನಾ ಪ್ರತಿಜ್ಞೆ

ಸೇನೆಗೆ ಸ್ವಯಂ ಪ್ರೇರಣೆಯಿಂದಲೇ ಸೇರಬೇಕೆಂಬ ಕ್ರಮವಿತ್ತು. ಪ್ರತಿಯೊಬ್ಬನೂ ಈ ಕೆಳಗಿನ ಮುಖ್ಯ ಶರ್ತಗಳಿದ್ದ ಪ್ರತಿಜ್ಞಾಪತ್ರಕ್ಕೆ ಸಹಿ ಹಾಕಬೇಕಿತ್ತು:-

"ನಾನು ನನ್ನ ಸ್ವಯಂಪ್ರೇರಣೆಯಿಂದ, ಸ್ವಂತ ಬುದ್ಧಿಯಿಂದ ಈ ಮೂಲಕ ಭಾರತ ರಾಷ್ಟ್ರೀಯ ಸೇನೆಯನ್ನು ಸೇರುತ್ತೇನೆ. ನಾನು ಪೂರ್ಣವಾಗಿ ಮತ್ತು ಯಥಾರ್ಥತೆಯಿಂದ ನನ್ನನ್ನು ಭಾರತಕ್ಕರ್ಪಿಕೊಳ್ಳುತ್ತೇನೆ; ಮತ್ತು ಈ ಮೂಲಕ ನನ್ನ ಪ್ರಾಣವನ್ನು ಅವಳ ಸ್ವಾತಂತ್ರ್ಯಕ್ಕಾಗಿ ಮಿಸಲಿಡುತ್ತೇನೆ. ನಾನು ಭಾರತ ಕ್ಕಾಗಿ ಮತ್ತು ಭಾರತ ಸ್ವಾತಂತ್ರ್ಯಕ್ಕಾಗಿ ಜಳ ವಳದಲ್ಲಿ ಪ್ರಾಣಾಪಾಯವನ್ನು ಗಣಿಸದೆ ನನ್ನ ಸರ್ವಶಕ್ತಿಯಿಂದ ಮುಡಿಯುತ್ತೇನೆ. ಈ ದೇಶ ಸೇವೆಯಲ್ಲಿ ನಾನು ವ್ಯಕ್ತಿಶಃ ನನಗೆ ಯಾವ ಅನುಕೂಲತೆಯನ್ನೂ ಬಯಸುವದಿಲ್ಲ. ಮತ, ಭಾಷೆ, ಅಥವಾ ಸ್ಥಳವಾರು ಭೇದವಾವುದನ್ನೂ ನೋಡದೆ ಎಲ್ಲಾ ಭಾರತೀಯರನ್ನೂ ನನ್ನ ಸಹೋದರ, ಸಹೋದರಿಗಳಂತೆ ಕಾಣುತ್ತೇನೆ."

ಗಾಂಧೀ ನೆಹರು ಹೆಸರುಗಳು

ಸುಭಾಸಚಂದ್ರರ ಮೇಲೆ -'ನೇತಾಜೀ' ಎಂದು ಸೇನೆಯಲ್ಲೆಲ್ಲಾ ಗೌರವಿಸಲ್ಪಡುತಿದ್ದ ಅವರ ನಾಯಕತ್ವದ ಮೇಲೆ-ಸೈನಿಕರಿಗೆ ಅಜೇಯ ವಿಶ್ವಾಸ, ಅಪಾರ ನಿಯತ ಭಕ್ತಿಗಳಿದ್ದುವು ಜಾತೀಯ ಅಥವಾ ಧರ್ಮಿಕ ಭೇದಗಳನ್ನು ಆ ಸೇನೆಯೊಳಗೆ ಕಾಣುವವೆಂದರೆ ಲವಲೇಶವೂ ದೊರೆಯುತ್ತಿರಲಿಲ್ಲ. ಆತುಗೇಮನೆ, ಊಟದ ಕೋಣೆಗಳಲ್ಲಿ ಕೂಡಾ ಆ ಭೇದಗಳಿರಲಿಲ್ಲ. ದಳಗಳು ಗಾಂಧೀ, ನೆಹರುಗಳ ಹೆಸರಿನಿಂದ ಕರೆಯಲ್ಪಡುತಿದ್ದುವು. ಸೇನಾಧಿಕಾರಿಗಳು ಮತ್ತು ಸೋಲ್ಜರರು ಬಬ್ಬರಿನ್ನೊಬ್ಬರಿಗೆ 'ಜೈ ಹಿಂದ್' ಎಂದು ಸೆಲ್ಯೂಟ್ ಕೊಡುವ ಕ್ರಮವಿದ್ದಿತು

ಹಣವ ಅಧಾವವಿರಲಿಲ್ಲ

ಈ ಸೇನಾ ನೆಟ್ಟಕ್ಕೆ ಬೇಕಾದಷ್ಟು ಧ

ನಾನುಕೂಲತೆಯಿತ್ತು. ಸುಮಾರು 8 ಕೋಟಿ ರೂಪಾಯಿಗಳ ಪರಿಷ್ಕೃತ ಧನ ಸಂಗ್ರಹವಾಗಿತ್ತಂತೆ. ಆದರೆ ಸಾಕಷ್ಟು ಶಸ್ತ್ರಾಸ್ತ್ರ ಸರಬರಾಯಿಯಿದ್ದಿಲ್ಲ. ಬರ್ಮಾದ ಕಾಡುಹಾದಿಗಳ ಸರಬರಾಯಿ ಪಥದ ಅನಾನುಕೂಲತೆಗಳೇ ಇದಕ್ಕೆ ಕಾರಣವಾಗಿದ್ದುವು. ಆದರೂ ಆ ಕೊರತೆಯನ್ನು ಅಸಹಕಾರಿಯವಾಗಿತ್ತೆಂದರೆ ಕೆಲವೊಮ್ಮೆ ಅವರು ಹುಲ್ಲು ಎಲೆಗಳನ್ನು ತಿನ್ನಬೇಕಾಗುತಿತ್ತು; ಆದೂ ಹೊಟ್ಟೆ ತುಂಬಾ ತಿಂದು ಬಂದಿರುವ ಬ್ರಿಟಿಷ್ ಮತ್ತು ಬ್ರಿಟಿಷ್ ಹಿಂದೀ ಸೈನಿಕರನ್ನು ಬಾಡಾಮಾಡಿ ಇದಿರಿಸುವ ಸಂದರ್ಭಗಳಲ್ಲೇ! ಬ್ರಿಟಿಷ್ ಸೇನೆಗಳಿಗೆ ವಿಮಾನ ಮೂಲಕ ಆಹಾರವಸ್ತುಗಳನ್ನು ಒಯ್ಯಲಾಗುತಿದ್ದುವು.

ಯುದ್ಧ ಹಂಚಿಕೆ ಯೇನಿತ್ತು?

1944ರಲ್ಲಿ ಕೊಹಿಮಾದ ಸುತ್ತು ವಲಯವನ್ನೊಮ್ಮೆ ಜಾವಾನರಾಕ್ರಮಿಸಿಕೊಂಡರಷ್ಟೆ? ಆಗ ಈ 'ಆಜಾದ್ ಹಿಂದ್ ಸರಕಾರ'ದ ಅಡಿಯಲ್ಲಿ ಒಂದು ನಾಗರಿಕಾಡಳಿತೆಯ ಸರಕಾರ ಸ್ಥಾಪಿಸಲ್ಪಟ್ಟಿತು. ಪೃಥಮತಃ ಅಸ್ಸಾಮು ಮತ್ತು ಬಂಗಾಳವನ್ನಾಕ್ರಮಿಸಿಕೊಳ್ಳಬೇಕು. ಆ ಮೇಲೆ ಅನುಕ್ರಮವಾಗಿ ತನ್ನ ಅಧಿಕಾರವನ್ನು ಭಾರತದ ಇತರ ಕಡೆಗಳಿಗೆ ವ್ಯಾಪಿಸುತ್ತಾ ಹೋಗಬೇಕೆಂದೇ ಸುಭಾಸ್ ಸೇನೆಯ ಹಂಚಿಕೆಯಿದ್ದಿತು. ಎಲ್ಲಾ ಹಂಚಿಕೆಗಳೂ ಅಡಿಮೇಲಾಗಿ ಸದ್ಯ ಹಿಂದೀ ಸರಕಾರವೂ ಕೋರ್ಟು ಮಾರ್ಶಲ್ ವಿಚಾರಣೆಯೊಂದೇ ಅವರ ಪಾಲಿಗುಳಿದಿದೆ. ಜಾತಿ, ವರ್ಗ ಭೇದವಿಲ್ಲದೆ, ಅಖಿಲ ಭಾರತವು ಈ ಕುರಿತು ಆಗ್ರಹಗೊಂಡಿದೆ. ಅವರ 'ತಿಫೆನ್ಸ್' ಗಾಗಿ ಭಾರತೀಯರಿಂದ ಹಣ ಸಂಗ್ರಹವಾಗಿದೆ. ಈ ಸುಭಾಸ್ ಸೇನೆಯಲ್ಲಿ ಸಿಖ್ ಮತ್ತು ಮುಸಲ್ಮಾನರು ಅಧಿಕ ಸಂಖ್ಯೆಯಲ್ಲಿದ್ದಾರೆ. ಸೇನಾ ಸಂಘಟಕರುಮತ್ತು ಸೇನಾನಿಗಳನ್ನುಮಾತ್ರವೇ ವಿಚಾರಿಸಲಿರುವರೇದೂ ಅಂಥವರ ಸಂಖ್ಯೆಯು ಸುಮಾರು ನೂರಾಗಬಹುದೆಂದೂ ತಿಳಿದುಬರುತ್ತದೆ. ಸಾಮಾನ್ಯ ಸೈನಿಕರೆಲ್ಲಾ ಬಿಡುಗಡೆಯಾಗುವರೆಂಬ ಸಾಧಾರ ನಿರೀಕ್ಷೆಯಿದೆ.

ಕೆಲವು ಘಟನೆಗಳು

ನವಂಬರ್ ೨೯ಕ್ಕೆ ವಿಚಾರಣೆಯಾಗಲಿರುವ ಮೂವರು ಆರೋಪಿಗಳ ಪೈಕಿ ಒಬ್ಬರಾದ ಕೆಪ್ಟನ್ ಶಾನವಾಜರ ಕುಟುಂಬದ 62 ಮಂದಿ ಬ್ರಿಟಿಷ್ ಹಿಂದೀ ಸೇನೆಯಲ್ಲಿದ್ದಾರೆ. ಬರ್ಮಾ ಯುದ್ಧದಲ್ಲಿ ಒಂದು ಕಡೆ ತನ್ನ ಸಹೋದರನಿಗಿದಿರಾಗಿ ಶಾನವಾಜರು ಹೋರಾಡಬೇಕಾಯಿತಂತೆ ಸುಭಾಸ್ ಸೇನೆಯಿಂದ ತಪ್ಪಿಸಿಕೊಂಡು ಬ್ರಿಟಿಷ್ ಸೇನೆ ಸೇರಲಿಚ್ಛಿಸಿದ ನಾಲ್ವರು ಹಿಂದೀ ಯೋಧರಿಗೆ ಸುಭಾಸ್ ಸೇನೆಯ ವಿಚಾರಣಾ ಮಂಡಲಿಯು ಕೂಲಂಕುಷ ತನಿಕೆ ನಡೆಸಿಯೇ ಮರಣ ದಂಡನೆ ವಿಧಿಸಿತ್ತಂತೆ. ಭಾರತ ರಾಷ್ಟ್ರೀಯ ಸೇನೆಯಲ್ಲಿ ಹಿಂದು ಸ್ಥಾನದ ಧನಿಕ ಕುಟುಂಬಗಳಿಗೆ ಸೇರಿದವರಿದ್ದಾರೆ. ಛತ್ರಪತಿ ಶಿವಾಜಿಯ ವಂಶಸ್ಥರಾಗಿದ್ದು ಸಾಹಸಮಯೀ ಕಾರ್ಯಸಾಧನೆಗೆ ಹೆಸರು ಹೋದ ಬೋಸ್ಲೆ ಎಂಬವರೊಬ್ಬರು. ಮಧ್ಯಾನಿನ ಧನವಂತ ಕುಟುಂಬಕ್ಕೆ ಸೇರಿದ ಯುವತಿಯೊಬ್ಬಳು ಸುಭಾಸರ ಸ್ವಾತಂತ್ರ್ಯ ಚಳವಳಿಯಿಂದಾಕರ್ಷಿಸಲ್ಪಟ್ಟು 'ಝಾನ್ಸಿ ಲಕ್ಷ್ಮೀಬಾಯಿ ದಳ' ಎಂಬ ಹಿಂದೀ ಮಹಿಳಾ ಸೇನೆಯೊಂದನ್ನು

ಜಾವಾ. ಇಂಡೋ-ಚೈನಾಗಳ ಭೀಕರಾಪಸ್ಥೆ!

ಜಾವಾದ ಸಮರ ಘೋಷಣೆ

ಡಾ! ಸೋಯಿಕರ್ನೋರ ನಾಯಕತ್ವದಲ್ಲಿ ಡಚ್ಚರ ವಿರುದ್ಧ ನಡೆಯುತಿದ್ದ ಸ್ವಾತಂತ್ರ್ಯ ಹೋರಾಟವೀಗ ಪ್ರತ್ಯಕ್ಷ ಸಮರವಾಗಿ ಮಾರ್ಪಟ್ಟಿದೆ. ಸಂಧಾನ ಯತ್ನಗಳು ವಿಫಲವಾದುದರಿಂದ ಜಾವಾದಲ್ಲಿರುವ ಡಚ್, ಯುರೋಪಿಯನ್ ಮತ್ತು ಎಂಬೋನೀಸರ ಮೇಲೆ ಸ್ವಾತಂತ್ರ್ಯ ಸೇನೆಯು ಯುದ್ಧಘೋಷಿಸಿದೆ. ಎಲ್ಲಾ ವಿಧದ ಸಿಡಿಮದ್ದುಗಳನ್ನೂ ವಿಷ ಮಿಶ್ರಿತ ಬಾಣ, ಉಪಕರಣಗಳನ್ನೂ ಡಚ್ಚರ ವಿರುದ್ಧವಾಗಿ ಉಪಯೋಗಿಸಬೇಕು. ಎಲ್ಲಾ ವಿಧದ ವಿಧ್ವಂಸನಾ, ಒಳಸಂಚುಗಳನ್ನೂ,ಸರ್ವಗಳೆಂತಹ ಕ್ರೂರಜಂತುಗಳನ್ನೂ ಪ್ರಯೋಗಿಸಬೇಕು ಮಾರ್ಕೆಟುಗಳಲ್ಲಿ ಪಹರೆಯಿಟ್ಟು ವೈರಿಗಳಿಗೆ ಸಾಮಾನು ಕೊಡುವವರನ್ನು ಕಠಿಣವಾಗಿ ಶಿಕ್ಷಿಸಬೇಕು. ವಿರೋಧಿಗಳಿಗೆ ಆಹಾರ ಬಹಿಷ್ಕಾರ, ಆರ್ಥಿಕ ಬಹಿಷ್ಕಾರಗಳನ್ನು ಹಾಕಬೇಕಿಲ್ಲದೆ ಎಲ್ಲಾ ವಿಧದ ಗೊರಿಲ್ಲಾ ಯುದ್ಧಕ್ರಮಗಳನ್ನು ಉಪಯೋಗಿಸಬೇಕು ಎಂದು ಆ ಘೋಷಣೆಯಲ್ಲಿದೆ

ಭೀಕರ ಪರಿಸ್ಥಿತಿ

ಜಾವಾದ ರಾಜಧಾನಿ ಬಟವಿಯಾವನ್ನು ಮಿತ್ರರಾಷ್ಟ್ರೀಯ ಸೇನೆಗಳಾಕ್ರಮಿಸಿಕೊಂಡಿವೆ ಎಂದು ತಿಳಿದುಬರುತ್ತದೆ. ನಗರವೀಗ ಮುತ್ತಿಗೆಗೊಳಗಾಗಿದೆ. ಇಂಗ್ಲಾಂಡು ಮತ್ತು ಹೊಲ್ಲೆಂಡುಗಳಲ್ಲಿದ್ದ ಡಚ್ ಸೇನೆಗಳೆಲ್ಲಾ ಜಾವಾಕ್ಕೆ ಹೊರಟಿವೆ. ಆರ್ಥಿಕ ಬಹಿಷ್ಕಾರ ಮತ್ತು ಗೊರಿಲ್ಲಾ ಯುದ್ಧ ವಿಧಾನಗಳು ಡಚ್ಚರಿಗಸಹನೀಯವಾಗಬಹುದಾದ್ದರಿಂದ ಅವರು ಪ್ರತಿ ಹಂಚಿಕೆಗಳನ್ನು ಕೈಕೊಳ್ಳಹತ್ತಿದ್ದಾರೆ. ಜಾವಾದ ಬಹುಭಾಗವು ಸೋಯಿ ಕರ್ನೋ ಸರಕಾರದ ಅಂಕೆಯಲ್ಲಿದೆ. ಬ್ರಿಟಿಷ್ ಸೇನೆಗಳು ಜಾಪಾನೀ ಸೇನೆಗಳನ್ನು ಕೂಡಿಕೊಂಡು ರಾಷ್ಟ್ರೀಯವಾದಿಗಳ ವಿರುದ್ಧ ಹೋರಾಟ ಕೊಡುತ್ತಿವೆ. ಡಾ. ಸೋಯಿಕರ್ನೋರಿಗೆ ಪಂಡಿತ ನೆಹರುಗಳು ಬಿಟ್ಟದ್ದ ತಂತಿ ಅವರಿಗೆ ಮುಟ್ಟಿಲ್ಲವೆಂದೂ, ಜಾವಾಕ್ಕೆ ತೆರಳಲು ನೆಹರುಗಳು ಕೇಳಿರುವ ಅನುಕೂಲತೆಗಳಿಗೂ ಈ ತನಕ ಹಿಂದೀ ಸರಕಾರದಿಂದ ಉತ್ತರ ಬಂದಿಲ್ಲವೆಂದೂ ತಿಳಿದುಬರುತ್ತದೆ

ಇಂಡೋ ಚೀನಾದ ಸ್ವಾತಂತ್ರ್ಯ ಸಮರ

ಫ್ರೆಂಚ್ ಚಳ್ಳೆಕಿಯ ವಿರುದ್ಧ ಇಂಡೋ ಚೀನದ ರಾಷ್ಟ್ರೀಯವಾದಿಗಳು ಹೂಡಿರುವ ಸ್ವಾತಂತ್ರ್ಯ ಹೋರಾಟವೂ ಅತ್ಯುಗ್ರವಾಗಿದೆ. ರಾಜಧಾನಿ ಸೈಗಾನಿನಲ್ಲಿ ಫ್ರೆಂಚರಿಗೂ ರಾಷ್ಟ್ರೀಯರಿಗೂ ಅತಿ ಕಠಿಣ ಕಾಳಗ ನಡೆಯುತಿದೆಂದೂ ಬ್ರಿಟಿಷ್ ಭಿರಂಗಿಗಳು ಫ್ರೆಂಚರಿಗೆ ಬೆಂಬಲವಿತ್ತುವೆಂದೂ ತಿಳಿದು ಬಂದಿದೆ. ಇಲ್ಲಿಯೂ ಬ್ರಿಟನರು ಜಾಪಾನೀ ಸೇನೆಗಳನ್ನು ರಾಷ್ಟ್ರೀಯರ ವಿರುದ್ಧ ಪ್ರಯೋಗಿಸುತಿದ್ದಾರೆ. ಇಬ್ಬರು ಜಾಪಾನೀ ಅಧಿಕಾರಿಗಳನ್ನು ಹಿಡಿದು ರಾಷ್ಟ್ರೀಯರು ಕೂಡಲೇ ಗುಂಡಿಟ್ಟು ಕೊಂದರು. ಸೈಗಾನಿನೊಂದು ಭಾಗದಲ್ಲಿ ಬ್ರಿಟಿಷರಿಂದ ನಿಲ್ಲಿಸಲ್ಪಟ್ಟ ಹಿಂದೀ ಸೇನೆಯನ್ನೊಡಿಸಲು ಇಂಡೋ ಚೈನೀಯರು ಧಾಳಿ ನಡೆಸಿದರು. ಇಂಡೋ ಚೀನದ ರಾಷ್ಟ್ರೀಯ ಹೋರಾಟ ನಿರತ ಪಕ್ಷಗಳಲ್ಲೊಂದರ ಕೇಂದ್ರ ನಿಲಯವನ್ನು ಬ್ರಿಟಿಷ್ ಸೇನಾಯಕ್ರಮಿಸಿಕೊಂಡಿದೆ. ಫ್ರೆಂಚರು ಸಂಧಾನ ಸಾಧಿಸಬಹುದೆಂಬ ಆಶೆಯಲ್ಲಿದ್ದಾರೆ.

ಲಾವಶರ ಸಮಾಪ್ತಿ

ವಿಚಿ ಸರಕಾರದ ಪೃಧಾನಿಯಾಗಿದ್ದು, ಓಟ್ಟರನ ಬಲಗೈಯಾಗಿ ಫ್ರಿನ್ಸೆನ್ನು ಜರ್ಮನಿಯೊಂದಿಗೆ ಸೇರಿಸಿದ್ದ ಲಾವಲನನ್ನು ತಾ. 15ರಲ್ಲಿ ಗುಂಡಿಟ್ಟು ಕೊಲ್ಲಲಾಯಿತು. ವಿಚಾರಣೆಯ ಕಾಲದಲ್ಲಿ ತೋರ್ಟನಲ್ಲಿಯೇ ಘರ್ಜನೆ, ನಿಂದೆ ಮಾಡಿ ತನ್ನಬಿಯ [illegible] ಏಸಿದ್ದ. ಆವನ ಗೈರುಹಾಜರಿಯಲ್ಲೇ ಆತಹೆಚ್ಚಿನ ವಿಚಾರಣೆ ಮುಗಿದು ಮರಣದಂಡನೆ ವಿಧಿಸಲ್ಪಟ್ಟಿತು. ಪುನರ್ವಿಚಾರಣೆಗಾಗಿನಡೆದ ಪ್ರಯತ್ನವನ್ನು ಡಿ ಗೋಲೆ ನಿರಾಕರಿಸಿಬಿಟ್ಟರು. ತೀರ್ಮಾನ ಕೇಳಿದ ಲಾವಲ್ ಪತ್ನೀವು ಕ್ರಿಯರಿಗೆ ಪತ್ರ ಬರೆದು 'ತನಗೊಂದು ತುಂಬಿದ ರಿವೋಲ್ವರ್ ತಂದುಕೊಡಬೇಕೆಂದು ಪಹರೆಗಾರರನ್ನು ಬೇಡಿಕೊಂಡ. 'ನನಗೀ ಗತಿ ಕಾಣಿಸಿದ ಈ ಚರಿತ್ರಾರ್ಹ ಅಪರಾಧವು ಭಯಂಕರ ಪರಿಣಾಮವಿಯ.ಲಿದೆ. ಚರಿತ್ರೆಯಲ್ಲಿ ನ್ಯಾಯದ ಪುನರುತ್ಥಾನವಾಗುವೆದಿಂದು ನಾನು ಆಶಿಸುತ್ತೇನೆ' ಎಂದು ಲಾವಲನ ಕೊನೆಯ ಮಾತು. ಜೈಲಿನಲ್ಲಿ ಅವನ ಕಾಲಿಗೆ ಸಂಕೋಲೆ ಹಾಕಲಾಗಿತ್ತು. ಮರಣದ ಮುಹೂರ್ತ ತಿಳಿಸುವದಕ್ಕಾಗಿ ಮೆಜಿಸ್ಟ್ರೇಟರು ಬಂದೊಡನೆ ಆತ ವಿಷದ ಬಾಟ್ಲಿಯೊಂದನ್ನು ಜಗಿದು ಬಿಟ್ಟ. ಆದರೆ ಡಾಕ್ಟರರು ಅವನ ಪ್ರಾಣವನ್ನು ಉಳಿಸಿದರು. ಕೂಡಲೇ ಗುಂಡಿಟ್ಟು ಕೊಂದು ಶಿಕ್ಷೆಯನ್ನು ಜ್ಯಾರಿಮಾಡಲಾಯಿತು.

ಯುರೋಪು ಚುನಾವಣೆಗಳು

ಡೆಕೊಸ್ಲೊನೇಕಿಯದ ಚುನಾವಣೆ ಇದೇ ತಾ. 14ರಲ್ಲಿ ನಡೆಯಿತು. ಡೆನ್ಮಾರ್ಕಿನ ಚುನಾವಣೆ ತಾ. 15ರಲ್ಲಾಯಿತು. ಫ್ರಾನ್ಸಿನ ಸಾರ್ವತ್ರಿಕ ಚುನಾವಣೆ ಇದೇ ತಾ.24ರಲ್ಲಿ ನಡೆಯಲಿದೆ ಅದು ಮುಂದಿನ ರಾಜ್ಯಾಂಗ ವಿಧಾನಗಳನ್ನೂ ನಿರ್ಣಯಿಸಲಿದೆ. ಅಂತೆಯೇ ಹಂಗೇರಿ, ಯುಗೊಸ್ಲೇವಿಯಾ, ಬಲ್ಗೇರಿಯಾ, ಆಸ್ಟ್ರಿಯಾ, ಸೋವಿಯೆಟ್ ಯೂನಿಯನ್, ಗ್ರೀಸ್, ಇಟಲಿ, ರುಮೇನಿಯಾ, ಪೋರ್ಚುಗಲ್, ಮೊದಲಾದ ದೇಶಗಳಲ್ಲೆಲ್ಲಾ ಚುನಾವಣಾ ಹವೆ ಬೀಸುತ್ತಿವೆ ಜಾವಾನಿನಲ್ಲಿ ಜನವರಿ 200ಂದ 31ರ ವರೆಗೆ ಹೊಸ ಮಾದರಿಯ ಸಾರ್ವತ್ರಿಕ ಚುನಾವಣೆಗಳುನಡೆಯಲಿವೆ.

ಉಡುಪಿ

ಮಿಗಿತೆ ಭತ್ತ ಮತ್ತು ಅಕ್ಕಿಯ ಸ್ವಚ್ಛೀಕರಣದ ಅವಶ್ಯಕತೆ– ನೈಜ ಪಡಿಗೂ ಬೇಕಾಯಿರುವ ಅಕ್ಕಿಪ್ರಮಾಣಕ್ಕೆ ಅಗತ್ಯವಿರುವ ಭತ್ತ ಮಾತ್ರವನ್ನು ಮಿಗಿತೆಯೆಂದು ಸರಕಾರವು ಲೆಕ್ಕಹಾಕಿ ಅದರಂತೆ ಭತ್ತ ಮತ್ತು ಅಕ್ಕಿಯನ್ನು ರೇಷನಿಂಗ್ ಮಾಡುವ ಸರಕಾರದ ಧೋರಣೆಯು ಸಮಜಸವೆಂದೂ ಆದರೆ ಕಳೆದ ಸಲುಪದಲ್ಲಿ ರೇಷನಿಂಗ್ ಸಿಪಾಯಿಯನ್ನು ನಿಶ್ಚಯಿಸುವ ಕೆಳ ನೌಕರರು ಸರ್ವಸಾಧಾರಣ ಧನಿಗೆ ತೆರುವ ಗೇಣಿಯನ್ನು ಸಮಸಮಿಗಿತೆಯಕ್ಕಿಯೆಂದು ಭಾವಿಸಿ ಅದನ್ನು ರಿಪೊಗಳಿಗೆ ಒಪ್ಪಿಸತಕ್ಕದ್ದೆಂದು ಸೂಚಿಸಿರುವ್ದಾರೆ ಪರಿಣಾಮ ದೊಪಣಾಗಿ ಸುಸಂಘಟಿತರಾಗದ ಬಡ ಒಕ್ಕಲಿಗರು ತಮ್ಮ ಬೆವರು ಸುರಿಸಿ ಬೆಳೆಸಿದ ಉತ್ತಮ ಅಕ್ಕಿಯನ್ನು ರಿಪೊಗಳಿಗೆ ಒಪ್ಪಿಸಿ ಮಳೆಗಾಲದಲ್ಲಿ ಜಾಸ್ತಿ ಕ್ರಯ ಕೊಟ್ಟು ತೀರ್ಥರವ ಅಕ್ಕಿಯನ್ನು ಅಲ್ಪಸ್ವಲ್ಪ ಪ್ರಮಾಣದಲ್ಲಿ ಪಡೆಯು ಅರೆ ಉಪವಾಸದಿಂದೆ ಸಂಸಾರ ಸಾಗಲೆವಲ್ಲಿ ತೀರಾ ಪಾಡುಪಡಬೇಕಾಗಿ ಬಂದ ಪ್ರಸಂಗ ಎಂದೆಂದಿಗೂ ಮರೆತು ಹೋಗುವಂತಹದಲ್ಲ. ಈಗ ತಾನೆ ಹೊಸ ಬೆಳೆ ಕಟಾವು ಪ್ರಾರಂಭವಾಯಿತು ದಿಪೋಗಳಿಗೆ ಭತ್ತ, ಅಕ್ಕಿ ಒಪ್ಪಿಸುವ ಅವಧಿ ಪರಿಷ್ಕಾರಗಾರರ ವೈಪರೀಯ ಮುಂದೆ ನಲಿದಾಡುತ್ತಿದೆ. ಮಿಗಿತೆಯ ಅಕ್ಕಿ ಅ ಭತ್ತ ಎಂದರೆ ಯಾವುದೆಂಬುದನ್ನು ರೇಷನಿಂಗ್ ನೌಕರರಿಗೆ ಜಿಲ್ಲಾ ಕಲೆಕ್ಟರರು ತೀವ್ರ ಸೂಚನೆಗಳನ್ನು ಕೊಟ್ಟಿರುವರೆಂದು ತಿಳಿಸಲಾಗಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **17—10—1945**ರಿಂದ

ರಣಜಿತ್‌ನವರ

ಈಶ್ವರಲಾಲ್, ಶಮಿನಾಜ್, ಚಾಲಿ, ಕೇಸರಿ, ಊರ್ಮಿಳಾ

ಮೊದಲಾದವರು ನಟಿಸಿರುವ

ಬನ್ ಸಾರಿ

ಅನಂತರ:—

'ಅಪಾಯಕ್ಕೊಂದು ಹಿನ್ಸೆಲೆ' (Back Ground to Danger.) ಇತ್ಯಾದಿ.

ಕರ್ನಾಟಕ ಏಕೀಕರಣದ ದ. ಕ. ಜಿಲ್ಲಾ ಸಮ್ಮೇಲನ.

ಮಂಜೂರಾದ ನಿರ್ಧಾರಗಳು.

ಏಕೀಕರಣದ ದ. ಕ. ಜಿಲ್ಲಾ ಸಮ್ಮೇಲನವು ಇವೇ ತಾ. 15ನೇ ಆದರಾಷ್ಟ 3 ಘಂಟೆಗೆ ಉಡುಪಿ ಬೆ... ರ್ ಹ್ಯಾಸ್ಕೂಲಿನ 'ಸೀ ಪ್ಲಾ ಹಾಲ್'ನಲ್ಲಿ ನೂಚೀ ಸಾರ್ವಮೌಂಟೀ ಕಾರ್ಯದರ್ಶಿ ಶ್ರೀ. ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜಯಶೀಲವಾಗಿ ನೆರವೆಯಿತು. ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಕೆ. ಪಿ. ಜಿನರಾಜ ಹೆಗ್ಡೆ, ಎಂ. ಎಲ್. ಎ.,ಇವರು ಉದ್ಘಾಟನೆ ಮಾಡಿದರು. ಗಾಂಲಕಯುರಿಂದ ಸ್ವಾರ್ಥಸೆಯಾಪ ಮೇಲೆ ಶ್ರೀ. ಎಸ್. ರಾಜಗೋಪಾಲಕೃಷ್ಣ ರಾಯರು ತನ್ನ ಸ್ವಾಗತ ಭಾಷಣದೊಂದಿಗೆ ಸಮ್ಮೇಲನ ನವನ್ನಾರಂಭಿಸಿದರು. ಶ್ರೀ. ಕೆ. ಆರ್ ಕಾರಂ ಕರುಆಧ್ಯಕ್ಷ ಸ್ಥಾನವನೀಕರಿಸಿ, ಶ್ರೀ ನಾಸ್ ಹೆಗ್ಡೆಯವರ ಸ್ವಾರಂಭಿಕ ಭಾಷಣ ವಾಯಿತು.

ಶ್ರೀ. ಹೆಗ್ಡೆಯವರ ಉದ್ಘಾಟನಾ ಭಾಷಣ

ಇಂದು ಸಂಯುಕ್ತರಾಗಿರುವ ಕನ್ನಡವಾಡಿಗ ಚಿತ್ತವನ್ನು ನಂದಿಟ್ಟಿಗುವಂತೆ ಮುಂದಿಟ್ಟು ಭಾರತದಲ್ಲಿ ಏಕಸೆಯ ಸ್ವಾತಂತ್ರ್ಯಾಗ ಬೇಕಾದ ಯೋಗ್ಯತೆಯುಳ್ಳ ಕರ್ನಾಟಕವು ಬಂದು ಸ್ವಾತಂತ್ರ್ಯವೆಂಬ ಪರಿಚಯ-ವನ್ನು ಕೂಡಾ ಅನ್ಯ ಪ್ರಾಂತೀಯರು ಪಡೆದಿಲ್ಲ. ಅಂದು ಕನ್ನಡಿಗ ನಾಡವರು ತೀರ್ವೆ ನಿರಾಕರಿಸ ಹೂಡಿದಾಗ ಅವನ್ನು ಬಗ್ಗು ಬಡೆಯುವವಕ್ಕಾಗಿ ಬಂಗಾಳಾ ವಿಭಜನೆಯಂತೆ ದಕ್ಷಿಣ ಕನ್ನಡವನ್ನು ಪ್ರತ್ಯೇಕಿಸಲಾಯಿತು. ವಿದೇಶೀ ಸರಕಾರವು ಏಕೀಕರಣವನ್ನೊಪ್ಪುವುದಿಲ್ಲ; ಕಾಂಗ್ರೆಸ್ ಸರಕಾರಗಳು ಕೂಡಾ ನೆವ ಹೇಳಿ ತಪ್ಪಿಸಿಕೊಂಡಿದ್ದುವು. ಜೋಬಾಯಿಯ ಕಾಂಗ್ರೆಸ್ ಪ್ರಧಾನಿ ಬೇರರು ಮದ್ರಾಸಿನ ಪ್ರಧಾನಿ ರಾಜಾಜಿಯನ್ನೂ ರಾಜಾಜಿಯು ಬೇರನ್ನೂ ತೋರಿಸಿ ಕನ್ನಡದ ಏಕೀಕರಣದ ಪ್ರಶ್ನೆಯಿಂದ ತಪ್ಪಿಸಿಕೊಂಡಿದ್ದರು. ಮೊನ್ನೆ ತಾನೇ ಕರ್ನಾಟದಲ್ಲಿ ಸಂಚರಿಸಿ ಹೋದ ಡಾ! ಪಟ್ಟಾಭಿಯವರು ಕೂಡಾ ಈ ಕುರಿತು ವಿಲಕ್ಷಣ ಬುದ್ಧಿವಾದ ಹೇಳಿದರೇ ಹೊರತು ಕರ್ನಾಟಕದ ಏಕೀಕರಣದ ಅವಶ್ಯಕತೆಯನ್ನು ಮನಗಂಡಿಲ್ಲ' ಎಂದಲ್ಲಾ ಶ್ರೀ. ಜಿನರಾಜ ಹೆಗ್ಡೆಯವರು ಸ್ಪಷ್ಟೀಕರಿಸಿದರು. ಏಕೀಕರಣ ಸಂಘದ ಅಧ್ಯಕ್ಷನಾಗಿ ತಾನು ಸರಕಾರೀ ಅಧಿಕಾರಿಗಳಿಗೂ ನೆರೆ ಸ್ವಾಂತ್ರ್ಯಗಳ ಘೋಷಣೆಗಳನ್ನೂ ಸಂದರ್ಶಿಸಿದಾಗ ಪಡೆದ ಕಟು ಅನುಭವಗಳನ್ನೆ ಹೃದಯ ಸ್ಪರ್ಶಿಯಾಗಿ ಗುಣಿಸಿ ತಿಳಿಸಿದರು. ಕನ್ನಡ ನಾಡಿನ ಸಂಸ್ಕೃತಿ ಬಂದು ಮಹಾ ಸ್ವಾತಂತ್ರ್ಯಾಗಿ ರಾಜಕೀಯ ಅದರ ಯೋಗ್ಯತೆಗಳನ್ನು ಸಾಧಾರವಾಗಿ ಉಪ್ಪೆಗಳಾಡಿನೆ ಮುಂದಿಟ್ಟು, ಇನ್ನೂ ಪ್ರತ್ಯೇಕ್ಷಿಸದ ಕನ್ನಡಿಗರಿಂತಹ ಮುಂದೆಪ್ಪೆಕ್ಕೆ ಬಾಗಬೇಕೆಂಬ ಭೀಕರ ಚಿತ್ರವನ್ನು ಚಿತ್ರಿಸಿ ಎಚ್ಚರಿಸಿದರು. ದಕ್ಷಿಣ ಕನ್ನಡವು ಕರ್ನಾಟಕದಲ್ಲಿ ಸಂಪರ್ಕಿಸಿ ಮುಸ್ಲಿಗಳಿಗೆ ಪ್ರತಿನಿಧಿಸ್ಥಾನವನ್ನು ಕೊಡಲೂ ಇಲ್ಲಿ ಕನ್ನಡಪತ್ರಿಕೆಯೊಂದಿಲ್ಲದಿರುವ ಕೊರತೆಗಳನ್ನು ತೀರಿಸಿದರು. ಕನ್ನಡಿಗರ ಎಲ್ಲಾ ರೋಗಗಳಿಗೆ ಚಿಕಿತ್ಸೆಯಾಗಬಲ್ಲುದು ಏಕೀಕರಣವೆಂಬುದನ್ನು ಮುಂದಿಟ್ಟು ಸಾಮಿರಿಸಿದರು.

ಶ್ರೀ. ಕಾರಂತರ ಅಧ್ಯಕ್ಷ ಭಾಷಣ

ಶ್ರೀಯುತ ಕಾರಂತರು ತನ್ನ ಅಧ್ಯಕ್ಷ ಭಾಷಣದಲ್ಲಿ ಹೆಗ್ಡೆಗಳ ಭಾವನೆಯನ್ನು ಸಮರ್ಥಿಸಿ ಏಕೀಕರಣಕ್ಕಾಗಿ ಸತತ ಪ್ರಯತ್ನಗಳನ್ನೂ ಜೊರಕ ಪ್ರತಿಫಲಗಳನ್ನೂ ವರ್ಣಿಸಿ, ಇನ್ನು ಸಹಿಸಿ ನಿಲ್ಲುವದು ಅಸಾಧ್ಯ; ಈ ಕಾಲದಲ್ಲಿ ಏಕೀಕರಣ ಸಾಧನೆಯು ಸುಲಭ ವೆಂಬುವನ್ನೂ ನೇರ ಸ್ವಾತಂತ್ರ್ಯಕ್ಕೂ ಏಕೀಕರಣಕ್ಕೂ ಇರುವ ಸಂಬಂಧಗಳನ್ನೂ ಮುಂದುಗುಣಂತೆ ತಿಳಿಸಿದರು. ಇನ್ನು ಸಾಲ್ಕೆದು ವರುಷಗಳೊಳಗೆ ಕರ್ನಾಟಕವ ಸಂಸ್ಥಾನ ಭಾಗಗಳೂ ಬ್ರಿಟಿಷ್ ಕರ್ನಾಟಕದೊಂದಿಗೆ ಏಕೀಕೃತವಾಗುವಂತಹ್ಕ ರಾಜಕೀಯ ಬದ ಲಾವಣೆಗಳಾಗಬಹುದು. ಸದ್ಯ ಸಂಸ್ಥಾನೇತ ರ ಕರ್ನಾಟಕದ ಭಾಗಗಳನ್ನು ಒಂದುಗೂಡಿ ಸಬೇಕು' ಎನ್ನುತ್ತಾ ಮುಂದಿನ ರಾಜ್ಯಾಂಗ ರಚನಾ ಸಮಿತಿಯ ಮುಂದೆ ಕರ್ನಾಟಕದ ಬೇಡಿಕೆಯನ್ನಿಡುವ ನೈಸರ್ಗಿಕ ಇದಿನಿಂದಲೇ ಆರಂಭವಾಗಬೇಕೆಂದು ಸೂಚಿಸಿದರು. ಪ್ರತ್ಯೇಕ ಸ್ವಾಂತ್ಯಕ್ಕೆ ಒಲ್ಲದ ಜೆಸೆಯಿಂದ ದಕ್ಷಿಣ ಕನ್ನಡವನ್ನು ಪ್ರತ್ಯೇಕಿಸಲಾಯಿತು ಎಂಬುದನ್ನು ಪ್ರತ್ಯೇಕ ಸ್ವಾತಂತ್ರ್ಯಕ್ಕೆ ಒಲ್ಲದ ಜೆಸೆಯಿಂದ ದಕ್ಷಿಣ ಕನ್ನಡಿಗರು ಏಕೀಕರಣವನ್ನು ಒಪ್ಪುವಂತೆ ಮಾಡಲು ಸಾಧ್ಯವಾಗಬೇಕು. ಕರ್ನಾಟಕದ ಏಕೀಕರಣವು ಸಂಕಷ್ಟಗಳನ್ನೂ ಶ್ರೀ. ಕಾರಂತರು ನೆನಸಿಗೆ ತಂದರು. ಸಮ್ಮೇಲನಕ್ಕೆ ಬಂದಿದ್ದ ಸಂದೇಶಗಳ ಸ್ನೋದಲಾಯಿತು. ಆ ಮೇಲೆ ಈ ಕೆಳಗಿನ ನಿರ್ಣಯಗಳು ಸಭೆಯ ಮುಂದೆ ಬಂದು ಅಂಗೀಕರಿಸಲ್ಪಟ್ಟುವು.

ನಿರ್ಧಾರಗಳು

1. ಕನ್ನಡ ನಾಡು ಸರ್ವ ವಿಭಾಗಗಳಲ್ಲೂ ವಿರ್ವಾವಧಿಯ ಆಧೋಗತಿಗೆ ಇಳಿದಿರಲು ಆದು ತುಂಡುತುಂಡಾಗಿರುವದೇ ಕಾರಣವಾದ್ದರಿಂದ ಕೂಡಲೇ ಇಡೀ ಕರ್ನಾಟಕವ ಸಾಧ್ಯವಾಗುವಲ್ಲಿ ಬ್ರಿಟಿಷ್ ಕರ್ನಾಟಕದ ಏಕೀಕರಣವಾಗಬೇಕು. ಆದರ ಹೋರಾಟ ಅನಿರ್ವಾಂತವಾಗಿ ನಡೆಯಬೇಕು. (ಸೂಚಕರು: ಶ್ರೀ. ಎಸ್. ರಾಜಗೋಪಾಲಕೃಷ್ಣರಾವ್, ಅನುಮೋದಕರು: ಶ್ರೀ. ಆಲೂರು ವೆಂಕಟರಾವ್, ಶ್ರೀ. ಸ್ಯಾಟ ರ್ಯಾಮರಾವ್, ಸೂಚನೆಯಂ ಮತಕ್ಕೆ ಬಿದ್ದಾಗ ಒಂದು ಮೂಲೆಯಿಂದೊಂದು ಕೈ ವಿರುದ್ಧವಾಗಿ ತೋರಿ ಮೂಯಸಾಗಿತ್ತು.') 2. ಕೇವಲ 31 ಲಕ್ಷದೊಳಗಿನ ಸಂಖ್ಯೆಯಲ್ಲಿರುವ ಗುಜರಾತಿ ಮತ್ತು ಸಿಂಧಿಯರಿಗೆ ಕೇಂದ್ರ ಎಸೆಂಬ್ಲಿಯ 45 ಸ್ಥಾನಗಳಿರುವಾಗ 50 ಲಕ್ಷ ಜನರಿರುವ ಕರ್ನಾಟಕಕ್ಕೆ ಒಂದೇ ಒಂದು ಸ್ಥಾನ ದೊರೆತಿರುವದು ಕ ಸ್ರಾಂ. ಕಾಂಗ್ರೆಸ್ ಕಮಿಟಿಯನ್ನು ವಿಸ್ತರಿಸಲೆಯೇ ಪ. ಕನ್ನಡ ನುತ್ತು ಬಳ್ಳಾರಿ ಜಿಲ್ಲೆಗಳ ಸ್ಥಾನಕ್ಕೆ ಮಲಬಾರು, ತುಳುವಾದು, ಅಂಧ್ರ ಕಾಂಗ್ರೆಸ್ ಕಮಿಟಿಗಳು ಸೇರಿ ಸೇನುಕಮಾಡಿಕೊಳ್ಳುವಂತೆ ತೀರಾ ಬಂದಿಯೆಯಾದ್ದರಿಂದ ಕೂಡಲೇ ಈ ಅನ್ಯಾಯದ ನಿವಾರಣೆಯಾಗಬೇಕು. (ಸೂ:- ಶ್ರೀ. ಪಿ. ವಿ. ಉಪಾಧ್ಯಾಯ, ಅ. ಶ್ರೀ ಎನ್. ಪಿ. ಕಾಮತ್. ಶ್ರೀ. ಬಿ. ದಾಸೋಪರ ಬಾಳಿಗರು ರಾಜಿನಿ ಕೊನೆಯ ಭಾಗಕ್ಕೊಂದು ತಿದ್ದುಪಡಿ ತಂದರೂ ಅದಕ್ಕೆ ಅನುಮೋದಕರಿರಲಿಲ್ಲ. ಶ್ರೀ. ಮುಂದಿನೀಡುಕಾರರು ನೂಲ ರಚನನ್ನು ಸಮರ್ಥಿಸಿ ಉಜ್ವಲ ಭಾಷಣವಿತ್ತರು.) 3. ಕರ್ನಾಟಕದ ಚಿಕ್ಕ ಸಂಸ್ಥಾನಗಳನ್ನೊಜ್ಜೊಡ್ಡಿ ಸಂಸ್ಥಾನಗಳೂದಿಗೆ ನೇರಿಸುವ ಸರಕಾರೀ ಯೋಜನೆಯನ್ನು ಈ ಸಮ್ಮೇಲನ ಖಂಡಿಸುತ್ತದೆ. (ಸೂ. ಶ್ರೀ. ಮುದಪೇಡಿ ಕೃಷ್ಣರಾವ್, ಅ.-ಶ್ರೀ. ಕಟ್ಟ ಕೇಷಾಚಾರ್ಯ. 4. ಮಂಗಳೂರು, ಮಲ್ಪೆ ಭಟ್ಕಳಗಳೊಳ್ಗೊಂಡಿನ್ನು ಕರ್ನಾಟಕದ ಒಂದೆ ರಾಜಾ ಮೂರ್ಪದಿಸಬೇಕು; ಗೆರ್ನರ್ಸ್ಥೆಯಿಂದ ಪ. ಕನ್ನಡಕ್ಕೆ ಸಿಮ್ಮಜ್ಜಿತ್ತಿಯೊಡಗಿಸಬೇಕು; ರೈಲ್ವೆ, ರೇಡಿಯೋ, ಆಂಚೆ, ಸಂಶೋಧನ ಮೊದಲಾದ ಖಾತೆಗಳಲ್ಲಿ ಇತರ ಭಾಷೆಗಳ ಸಮಾನಸ್ಥಾನವನ್ನು ಕರ್ನಾಟಕಕ್ಕೆ ಕೊಡ ಬೇಕು ಕರ್ನಾಟಕಕ್ಕೊಂದು ಪ್ರತ್ಯೇಕ ರೇ ಡಿಯೋ ಸ್ಟೇಶನಾಗಬೇಕು. (ಸೂ:-ಶ್ರೀ. ಬಿ. ಡಿ. ಜತ್ತಿಗ; ಅ. ಶ್ರೀ. ಮರ್ಲಿ ಭೀಮ ರಾವ್, ಶ್ರೀ. ಗೋವಿಂದ ರಾವ್ ಜಂಳಕಿ.) 5. ಈ ಜಿಲ್ಲೆಯವರು ಕನ್ನಡ ಸಾಹಿತ್ಯಾಭ್ಯಾಸವನ್ನು ಹೆಚ್ಚಸಬೇಕಲ್ಲದೆ ಸ್ವಮಾತರದಲ್ಲಿ ಕನ್ನಡವನ್ನೇ ಉಪಯೋಗಿಸಬೇಕು. (ಸೂ.-ಶ್ರೀ. ಬಿ ರಾಮಾಚಾರ್ಯ; ಅ: ಶ್ರೀ. ಕೆ. ಎಚ್. ಸೆಟ್ಟಿ). ಪ. ಕ. ಜಿಲ್ಲೆಯು ಈಗಿನ ಏಕೀಕರಣ ಸಮಿತಿಗೆ ತಾಲೂಕು ವಾರಾಗಿ ಕನಿಷ್ಠ ಸತ್ವ ಮೂವರು ಪ್ರತಿನಿಧಿಗಳನ್ನಾರಿಸಬೇಕು. (ಸೂ: ಶ್ರೀ. ಕೆ. ರಾಮಕೃಷ್ಣ ಸೆಟ್ಟಿ, ಅ: ಶ್ರೀ ಬಿ.ರಾಮಕೃಷ್ಣಾಚಾರ್). 7. ಈ ಕೆಳಗಿನ ಸದಸ್ಯರುಳ್ಳ ಒಂದು ಉಪಸಮಿತಿಯನ್ನು ಕುಂದಾಪುರ ಡಿವಿಜನಿಗಾಗಿ ಆರಿಸಲಾಗಿದೆ; ಆದರ ಕೇಂದ್ರ ಸೆಲೆ ಉಡುಪಿಯಾಗಿರಬೇಕು. (ಸೂ:-ಶ್ರೀ. ಬಿ. ಸಾಸುದೇವ ರಾವ್; ಅ. ಶ್ರೀ. ಕೆ ಸೂರ್ಯನಾರಾಯಣ ಪತಾಳ), ಉಪಸಮಿತಿಯ ಸದಸ್ಯರು: ಶ್ರೀಗಳಾದ ಎಸ್. ಆರ್. ರಾವ್, ಡಾ ಪಿ ಎಸ್.ಶೆಟ್ಟಿ, ಕೆ ಜಿ. ಬಲ್ಲಾಳ್, ಬಿ.ಎ.ರ್. ಆಚಾರ್; ಪಿ ಎಸ್. ಸೆಟ್ಟಿ; ಪಿ. ಎಸ್ ಪ್ರಭು, ಕೆ. ಪಿ. ಸಟ್ಟಿ; ಕೆ. ಎಸ್. ಕಾರಂತ ; ಜೆ. ಎಸ್ ಹೆಗ್ಡೆ, ಪಿ ವಿ. ಉಪಾಧ್ಯಾಯ; ಬಿ. ಎಸ್. ಸಟ್ಟಿ; ಕೆ. ಪಿ. ಎಸ್. ಪ್ರಭು

ಸಭಾ ಕಾರ್ಯಕ್ರಮಗಳನ್ನು ಅಧ್ಯಕ್ಷರು ಸಮಯಸ್ಫೂರ್ತಿ ಭಾಷಣದಲ್ಲಿ ಭಿನ್ನಾಭಿಪ್ರಾಯಗಳನ್ನು ಮರೆತು ಪಡಿಪಡಬೇಕೆಂದೂ, ನಿರ್ಧಾರಗಳನ್ನು ಕಾರ್ಯಕ್ಕಿಳಿಸಬೇಕೆಂದೂ ವಿನ್ನವಿಸಿ, ಸಮ್ಮೇಲನದ ಜಯಶೀಲತೆಗಾಗಿ ವಂದನೆಗಳನ್ನರ್ಪಿಸಿದರು. ಧನ್ಯವಾದಗಳಾಗಿ ಜಾಲಕಯರು ನುಂಗಳಗೀತೆ ಹಾಡಿದರು.

ಬಿಲ್ಲವರ ಸೇವಾ ಸಂಘ, ಉಡುಪಿ ಇವರು ಕಟ್ಟಸಲಿರುವ ವಿದ್ಯಾರ್ಥಿ ಭವನದ ಶಂಕು ಸ್ಥಾಪನೆಯು ಸಮಾರಂಭವು ಶ್ರೀ. ಕೊಚ್ಚಿಕಾರ್ ಪದ್ಮನಾಭ ಸೈ, B. A. ಇವರ ಅಧ್ಯಕ್ಷತೆಯಲ್ಲಿ ತಾ. 14 10 45ರಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿಯ- ಬಗ್ಗರನೈಜರ್ ಆಫೀಸೊಂದು ಇವೇ ತಾ 16ನೇ ಬೆಳಿಗ್ಗೆ ಮಾಂಗಾಳ ನಾಯಕ್ ಬ್ಯಾಂಕಿನ ಎದುರುಗಡೆಯ ಕಟ್ಟಡದಲ್ಲಿ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ B Sc. L.L. B. M. L. A. (ಸೆಟ್ಲರ್) ಇವರ ಅಧ್ಯಕ್ಷತೆಯಲ್ಲಿ ನಿಜ್ಯಂಭಣೆಯಿಂದ ತೆರೆಯಲ್ಪಟ್ಟಿತು ಸಾಯಂಕಾಲ ಈ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ. ಪಿ. ಎಸ್. ಕಿಣಿಯವರ ಅಜ್ಞರಕಾರ್ಯಾನುಸಾರ ಉಪಹಾರ ಕೂಟವನ್ನೇರ್ಪಡಿಸಲಾಗಿತ್ತು. ಸ್ಟೇಲ್ ಬಗ್ಗರೈಜರರಾದ ತರು ನೋತ್ಸಾಹಿ ಶ್ರೀ. ಬಿ. ಎಂ. ಎ. ಕಿಣಿಯವರ ಸ್ಥಸಸ್ಥಾಪಕತ್ವದಲ್ಲಿ ಈ ಸಂಸ್ಥೆಯು ಪ್ರಗತಿ ಹೊಂದಿ ಜನಾದರಕ್ಕೆ ಪಾತ್ರವಾಗಲೆಂದು ಹಾರೈಸಲಾಗಿದೆ.

ಹಡಗು ಚಲಾವಣೆ- ಬಲ್ಲಿಗೆ ಬರುವ ಪ್ರಥಮ ಹಡಗನ್ನು ಇವೇ ತಾ.೨೦ರಂದು ಜೊಂಬಾಯಿಂದ ಹೊರಟು ತಾ. ೨೫ಕ್ಕೆ ಮಂಗಳೂರಿಗೆ ತಲಪುವುದು. ಹೊನ್ನಾವರ ಒಂದು ಬಿಟ್ಟು ಉಳಿದಲ್ಲಿ ಬಂದರುಗಳಲ್ಲಿ ಹಿಂದಿನಂತೆ ಯೇ ತಂಗುವುದು. ತಂದ ಸಾಮಾನುಗಳನ್ನಿಲಿ ಇಲ್ಲಿಯ ರಫ್ತನ್ನು ಏರಿಸಿಕೊಂಡು ತಾ. ೨೫ ರಂದು ಹಡಗು ಇಲ್ಲಿಂದ ಜೊಂಬಾಯಿಗೆ ತಿರುಗುವುದು. ಪ್ರಯಾಣಿಕರ ಟಿಕೇಟು ನ್ಯವಸ್ಥೆ ಬಗ್ಗೆ ಮುಂದೆ ಪ್ರಕಟಿಸಲಾಗುವುದು ಎಂದು ಸ್ಥಳೀಯ ಜಾಂಜೆ ಸ್ಟೀಮರ್ ನೆವಿಗೇಶನಿನವರು ತಿಳಿಸುತ್ತಾರೆ.

ಉಡುಪಿ ಜುನ್ಮೇಸಿಯಂ-ದಲವು ವರ್ಷಗಳಿಂದ ಶ್ರೀ. ಟಿ. ಸಂಜೀವ ಶೈಗರು ಸಚಿಸಿಕೊಂಡು ಬರುತ್ತಿರುವ ಈ ಸಂಸ್ಥೆಯ ಆಯುಧ ಪೂಜಾ ಸಮಾರಂಭವು ತಾ 15ರಲ್ಲಿ ಜರಗಿಸಲ್ಪಟ್ಟಿತು.

ಪ್ರಕಟಣೆ-ಕಂಕಣಬಟ್ಟು ಅಬ್ಬಗ ವಾರಗಳ ಘಂಕ ಮತ್ತು ಸಂಜುಂಳಿ ದೈವ ಸ್ಥಾನಗಳ ಹಾಗೂ ಮಂಜಲಿಗೇಶ್ವರ ದೇವಸ್ಥಾನದ ನಮೂರು ಸುತ್ತೋಶ್ವರಿಕೆಗಳು ಶ್ರೀ ಕೆರಾಡಿಕೂರು ತೀರ ತಟ್ಟಿರಾಜೇ ನಿಕ್ಕಿರುತ್ತವೆಂದು ಸಂಬಂಧಪಟ್ಟವರು ತಿಳಿಸುತ್ತಾರೆ

ಸಾಂತೂರು ಕೊಪ್ಪ ಬೋರ್ಡು ಶಾಲೆ-ಈ ಶಾಲಾ ಮಕ್ಕಳ ಹೆತ್ತವರ ಸಭೆಯು ತಾ 12-10-45ರಲ್ಲು ಜರಗಿತು. ಮಕ್ಕಳ ಚಟುವಟಿಕೆಗಳಾವ ಸಂಬಂಧ, ಶಾರದಾ ಪೂಜೆಯೂ ಬಹು ವಿಜೃಂಭಣೆಯಿಂದ ಜರಗಿತು ಸಭಿಕರಿಂದೂ ವಿದ್ಯಾರ್ಥಿಗಳಿಗೂ, ಸಹಾಯಕ ಉಪಾಧ್ಯಾಪಕರಾದ ಶ್ರೀ. ಎಸ್. ನಾರಾಯಣ ಶೆಟ್ಟರಿಗೂ ಕಾಳಿ ತಟ್ಟಿ ಫಲತಾಂಬೂಲ ಯಾರವು ಉದಾರತೆಯಿಂದ ಕೊಡಲ್ಪಟ್ಟಿತು.

ಬೆಳ್ಳೆ-(ಕುಂದಾಪುರ ತಾಲೂಕು) ಇಲ್ಲಿ ಒಂದು ಬ್ರಾಂಚ್ ಪೋಸ್ಟಾಫಿಸಿನ ಅವಶ್ಯಕತೆ ಬಹಳವಿದೆ. ತ್ಯೆರ್ಯದಲ್ಲಿ ಆಗದೆ ಹೋದರೆ ಗ್ರಾಮವಾಸಿಗಳಿಗೂ ಆಸುಪಾಸಿನ ಗ್ರಾಮಸ್ಥರಿಗೂ ತುಂಬ ಕಷ್ಟನಷ್ಟಗಳು ಸಂಭವಿಸುವವು. ಸಂಬಂಧಪಟ್ಟವರು ಈ ಕುರಿತು ಕ್ಷಿಪ್ರದಲ್ಲೇ ತಕ್ಕ ವ್ಯವಸ್ಥೆ ಮಾಡುವರೆಂದು ನಿರೀಕ್ಷಿಸಲಾಗಿದೆ. ಮುಂದು ಪ್ರಾರಂಭವಾದ ಜನರ ಸೌಕರ್ಯಕ್ಕಾಗಿ ಬೆಳ್ಳೆಯಲ್ಲಿ ತಾ. 1-10-45 ರಿಂದ S. K. C. C. ಯ ಒಂದು ಹೋಲ್ ಸೇಲ್ ಅಕ್ಕಿ ಮತ್ತು ಭತ್ತದ ರಿಸೆಪ್ಷನ್ ಡಿಪೊ ತೆರೆಯಲ್ಪಟ್ಟಿದೆ.

1000's SAVED
MARGARET'S
FITS CURE
Stops children's fits in 3 minutes.
Ask your chemist for a box.
Sole Agents
BRIGHTSTAR AGENCIES,
Hospital Rd, Udipi, S. K

— ಮಕ್ಕಳನ್ನು ಹಡೆಯುವುದು ಸಾಕು —
ಅಪೇಕ್ಷ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಸ್ತ್ರೀಯರಿಗೆ ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಜಿಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಕ್ಕೆ:— ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಷ್ಟ ಚಾರ್ಜು ಬಿಡಿಆಣೆ.
ಮಾಲಕರು:— ಹಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ
ಏಜಂಟರು:—ಬಾಬ್ಜಿ ಘಾಮಾಸಿ—ಹುಬ್ಬಳ್ಳಿ, ಗದಗ್ ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ದಲಿಂಗಪ್ಪ ಧಾಂಡಾವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸಕ್ಕಿರ್ ಡ್ಡಾವಣಗೇರಿ:—ಡಾವಣಗೇರಿ ಪ್ರೆಸ್ಟ್. ಆರ್. ಎಲ್. ಆಯುರ್ವೇದಾಸ, ಕಮಿಸ್ಟ್, ಹಾವೇರಿ. ಬ್ಯಾಡಗಿ.
Ayurveda Oushadalaya, GADAG CITY.

ಉಡುಪಿಯಲ್ಲಿ ಸಾಹಿತ್ಯೋತ್ಸವ

ಕರ್ನಾಟಕ ಸಂಘದ ಆಶ್ರಯದಲ್ಲಿ ಸಾಹಿತ್ಯಕ್ಕೆ ಸಂದ ನಾಲ್ಕು ದಿನ.

[illegible] ಸಂಘದವರೇ ಏರ್ಪಡಿಸಿದ್ದ ಸಾಹಿತ್ಯೋತ್ಸವವು ಇದೇ ತಾ. 12-10-45ರಿಂದ ತಾ.15ರ ವರೆಗಿನ ನಾಲ್ಕು ದಿನಗಳಲ್ಲಿ ಉಡುಪಿ ಬೋರ್ಡು ಹೈಸ್ಕೂಲಿನ (ಪಿಎಸ್ಸೆಸ್ ಹಾಲ್)ನಲ್ಲಿ ಜಯಶೀಲವಾಗಿ ಜರಗಿತು. ಕನ್ನಡ ನಾಡಿನ ಹಿರಿಯ ಸಾಹಿತಿಗಳ ಸಮ್ಮಿಲನದಿಂದ ನಾಲ್ಕು ದಿನ ನಡೆದ ಈ ಸರ್ವ ವಿಧದ ಸಾಹಿತ್ಯ ಸೇವೆಯು ಉಡುಪಿಯ ಚರಿತ್ರೆಗೊಂದು ಹೊಸ ಪುಟವನ್ನು ಸೇರಿಸಿತು. ಸ್ವರಜೆ, ಸ್ಫೂರ್ತಿ, ಜೋಡಿ, ಹೃದಯ ವಿಕಾಸ, ವಿಚಾರೋದ್ದೀಪನ, ವಿನಯ, ಮನನದಂತಹ ಇತ್ಯಾದಿ ಸಾಹಿತ್ಯದ ಸರ್ವಾಂಗ ದರ್ಶನ ಕೊಟ್ಟು ಆ ನಾಲ್ಕು ದಿನಗಳು ಎಲ್ಲರನ್ನೂ ನಾಡು-ನುಡಿಯೊಡನೆ ತಲ್ಲೀನಗೊಳಿಸಿದುವೆನ್ನಬಹುದು

ಮೊದಲ ದಿನ

ಮುಂಜಾನೆ ಶ್ರೀ. ಸಿ. ಎಸ್. ಕುಡಿಯರು 'ಹಳ್ಳಿಯ ಕನಬು ಕೈಗಾರಿಕೆಗಳಿಗೆ ಪ್ರೋತ್ಸಾಹ ಹೊರಿಯಬೇಕು; ಅದಕ್ಕಾಗಿ ಇಂತಹ ಸ್ವದರ್ಶನಗಳ ವಿರ್ಣಾಡಾಗಬೇಕು' ಎನ್ನುತ್ತಾ ನಸ್ತುಪ್ರದರ್ಶನದ ಉದ್ಘಾಟನೆ ಮಾಡಿದರು. ಸ್ಥಳೀಯ ಕಲಾ ಶಿಲ್ಪ ಕೈಗಾರಿಕೆಗಳ ವಿವಿಧ ವಸ್ತುಗಳು ಪ್ರದರ್ಶನಕ್ಕಿಡಲ್ಪಟ್ಟಿದ್ದುವು ಮಧ್ಯಾಹ್ನ ಎಳೆಯರ ಕವಿತಾವಾಚನ ಸ್ಪರ್ಧೆ ನಡೆಯಿತು.

ಶ್ರೀ. ಮುದನೀಡು ಮತ್ತು ಶ್ರೀ ಆಲೂರರ ಭಾಷಣ

ಅಪರಾಹ್ನ ಶ್ರೀ ಮುದನೀಡು ಕೃಷ್ಣರಾಯರು ಸಾಹಿತ್ಯೋತ್ಸವದ ಉದ್ಘಾಟನೆಮಾಡುತ್ತಾ ಸ್ಫೂರ್ತಿದಾಯಕ ಅಸ್ಖಲಿತ ಪಾಂಡಿತ್ಯದಲ್ಲಿ ಉಡುಪಿಗೂ ತನಗೂ ಇರುವ ಸಂಬಂಧ, ಕನ್ನಡ ನಾಡಿನ ದೊರಪತ್ತಿ, ಕನ್ನಡಿಗರ ಕರ್ತವ್ಯ, ಇತ್ಯಾದಿ ವಿಷಯಗಳ ಸೈತ್ತಿ ಅಮೋಘ ಭಾಷಣವನ್ನಿತ್ತು ಸಭೆಯನ್ನಾಕರ್ಷಿಸಿಕೊಂಡರು. ತನ್ನ ದೀರ್ಘಾವಧಿ-ಭಾಷಣಗಳನ್ನು ಮನ ಮುಟ್ಟುವಂತೆ ವರ್ಣಿಸಿ, ಕನ್ನಡಿಗರು ಪರಭಾಷಾ ಗುಲಾಮತ್ವದಿಂದ ಪಾರಾಗದೆ ಮಾನವಸತ್ವಗಳಿಸಲೆಂಬ ಜನ್ಮಸಿದ್ಧ ಹಕ್ಕಿನ ಬೆಳಕನ್ನು ಎಲ್ಲರ ಹೃದಯದೆಲ್ಲೂ ಜಗ್ಗನೆ ಸೆಳೆದರು. ಶ್ರೀ ಆಲೂರು ವೆಂಕಟರಾಯರು ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷ ಭಾಷಣವು ಸ್ವದೇಶ, ಸ್ವಸ್ವಾತ್ಯ ಮತ್ತು ಸ್ವ ಭಾಷಾಭಿಮಾನಗಳನ್ನು ಕುದುರಿಸುತ್ತಿತ್ತು. 'ಸ್ವಾತಂತ್ರ್ಯ ಸಂಗ್ರಾಮವು ಯುಗಧರ್ಮ, ಸ್ವತಂತ್ರ ಭಾರತದಲ್ಲಿ ತನ್ನ ವೇಷ, ಮನಸ್ಸು, ಆತ್ಮಗಳನ್ನು ಬಲಿಸಿಕೊಳ್ಳುವ ಸ್ವತಂತ್ರ ಪ್ರಾಂತ್ಯವಾಗಿ ಕರ್ನಾಟಕವು ರಾಜಿಸಬೇಕು, ಅದಕ್ಕಾಗಿ ಕನ್ನಡಿಗರು ಆರ್ಯಾಶಿ ಯತ್ನಿಸಬೇಕು' ಎಂಬುದನ್ನು ಆಲೂರರು ಸಕಾರಣವಾಗಿ ಸಯುಕ್ತವಾಗಿ ಮಂಡಿಸುತ್ತಾ ಹೋದರು

ಆ ಮೇಲೆ ಶ್ರೀ. ಆರ್. ವೇಣು ಗೋಪಾಲರಾಯರ ಸಂಗೀತ ಸೇವೆ ನಡೆಯಿತು. ಶ್ರೀ ಉಗ್ರಾಣ ಮಂಗೇಶರಾಯರು 'ರತ್ನಾಕರ ಸಾಹಿತ್ಯ'ದ ಕುರಿತು, ಭಾಷಣವಿತ್ತರು. ಅನ್ಯಾಕ್ಷರ ಕೊನೆಯ ಮಾತು ಮತ್ತು ಧನ್ಯವಾದ ಸಮರ್ಪಣೆಯಾದ ಮೇಲೆ, ಉಡುಪಿಯ ಶ್ರೀಯುತ ಹೈಸ್ಕೂಲಿನ ಸಾಲ್ಕರು ವಿದ್ಯಾರ್ಥಿಗಳಿಂದ 'ಜಯ ಶ್ರೀ' ಎಂಬ ಪ್ರಹಸನವು ಉತ್ತಮ ರೀತಿಯಿಂದಅಭಿನಯಿಸಲ್ಪಟ್ಟಿತು. ವಿದ್ಯಾರ್ಥಿಗಳ ನಟನಾಚಾತುರ್ಯವು ಮೆಚ್ಚುಗೆ ಪಡೆಯಿತು.

ಎರಡನೇ ದಿನ

ಮುದ್ದಣನ ತೈಲ ಚಿತ್ರದ ಅನಾವರಣ.

ತಾ. 13ನೇ ಮುಂಜಾನೆ ಶ್ರೀ. ಪಾಸ್ತಾ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ದಿವಂಗತ ಮಹಾ ಕವಿ ಮುದ್ದಣನ ತೈಲ ಚಿತ್ರದ ಅನಾವರಣವು ಶ್ರೀ. ಮುದನೀಡು ಕರವ ಹಸ್ತದಿಂದಾಯಿತು. ಕನ್ನಡ ನಾಡಿನ ದುರದೃಷ್ಟೆಯು ಕವಿ ಲಕ್ಷ್ಮೀ ನಾರಣಪ್ಪಯ್ಯ (ಮುದ್ದಣ)ನ ಜೀವನದಲ್ಲಿ ಹೇಗೆ ಪ್ರತಿಬಿಂಬಿಸಿತ್ತೆಂಬುದನ್ನು ಹೃದಯಸ್ಪರ್ಶಿಯಾಗಿ ವರ್ಣಿಸಿ ಶ್ರೀ ಮುದನೀಡುಕರರು ಮತ್ತೊಮ್ಮೆ ಸಾಹಿತ್ಯಾಕರ್ಷಣವನ್ನು ಕೆರಳಿಸಿದರು. ಶ್ರೀ. ಪಂಜೇಶ್ವರ ಗೋವಿಂದ ಪೈಗಳು ಬರೆದು ಕಳುಹಿಸಿದ್ದ ಮುದ್ದಣನ ಪರಿಚಯವನ್ನು ಸಂಘದ ಅಧ್ಯಕ್ಷ ಶ್ರೀ. ಎಸ್. ರಾಜಗೋಪಾಲಕೃಷ್ಣರಾಯರೋದಿದರು ಪಂಡಿತ ಶ್ರೀ. ಕೆ. ವೆಂಕಟ್ರಮಣಾಚಾರ್ಯರು ಹೃದಯಂಗಮ ಶೈಲಿಯಲ್ಲಿ ದಿವಂಗತ ಕವಿಯ ಮತ್ತು ಸನ್ಮಾನ ಕಾರ್ಯದ ಪ್ರಶಂಸೆಮಾಡಿದರು.

ಶ್ರೀ ಮಾಸ್ತಿಯವರ ಭಾಷಣ

ಶ್ರೀ ಸಿ. ಕಾಡಪ್ಪಯ್ಯನವರು 'ನಮಗೆ ಬೇಕಾದ ಸಾಹಿತ್ಯ' ಎಂಬ ವಿಷಯವನ್ನೆತ್ತಿ ಭಾಷಣವಿತ್ತ ಮೇಲೆ ಶ್ರೀಮಾಸ್ತಿ ವೆಂಕಟೇಶ ಅಯ್ಯಂಗಾರರು ಅಧ್ಯಕ್ಷರು ನೆಸ್ಸ ಸುರಸ, ಆಕರ್ಷಕ ಹಾಗೂ ಸರಳವಾಗಿಯಲ್ಲಿ ಮುಂದಾಗ ಪರಿಷತ್ತಿನ ಸ್ಥಾಪನೆಯ ಸಂದರ್ಭದಲ್ಲಿ ಸ್ಥಾಪಕರೊಬ್ಬರೆಂದನ್ನು ರಚಿಸಬೇಕೆಂಬ ಸೂಕ್ಷ್ಮ ಸಲಹೆಗಳನ್ನಿತ್ತರು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳನ್ನು ಎಲ್ಲರಿಗೂ ದಕ್ಕಿಸಬಲದಲ್ಲಿ ನುಡ್ಡಾನಗಳನ್ನು ಕೆಲವು ವರ್ಷಗಳಿಗೊಮ್ಮೆ ಸಮ್ಮೇಳನ ಸಕ್ಕೆಯ್ದಿಸುವ ಪ್ರೋತ್ಸಾಹನವನ್ನು ಕೊಡಿದರು ಧನ್ಯವಾದ ಸಮರ್ಪಣೆಯ ಮೇಲೆ ಸಂಧ್ಯಾಸ್ಮ ಸಾಹಿತ್ಯೋತ್ಸವವು ಕೊನೆಗೊಂಡಿತು.

ಶ್ರೀ. ಕಡಿಂಗೋಡ್ಲು ಭಾಷಣ

ಅಪರಾಹ್ನ ಶ್ರೀ. ಕಡಿಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಮಂಡಿಕೇರಿಯ ಶ್ರೀ. ಎಸ್. ಎಸ್. ಆನಂತ ಪದ್ಮನಾಭರಾಯರು 'ಪರಿಸರನರಗಳಿಗಾಗಿ ಕುರಿತು ಭಾಷಣವಿತ್ತರು. ದಾಸ ಸಾಹಿತ್ಯವನ್ನೆತ್ತಿಕೊಂಡು ಶ್ರೀ. ಕಬ್ಬಿ ಶೇಷಾಚಾರ್ಯರು ಸರಳೋಪನ್ಯಾಸವನ್ನಿತ್ತರೆ ಆ ಅಧ್ಯಕ್ಷರು 'ಸಾಹಿತ್ಯದಲ್ಲಿ ಪ್ರಗತಿವಾದ' ಎಂಬ ಕುರಿತು ಅಮೋಘ ಭಾಷಣವಿತ್ತರು 'ಸಾಹಿತ್ಯಕ್ಕೆ ಸರ್ಬಂಧನಿರಬಾರದು. ಯಾರು, ಯಾವ ಸಕ್ಕನ್ನೂ ಅಧಿಕಾರವಿರಬಾರದು ಅದ್ಯಾಗತಿಕತೆಗಳನ್ನು ಆಸ್ಥಾಯೋಗ್ಯಗಳನ್ನು ಮಾಡಿಸಬಹುದು; ಆದರೆ ಅಂಥವರಲ್ಲಿರುವ ಸುಂದರಗಳನ್ನು ಇಲ್ಲಗಳೆಯಬಾರದು. ಪ್ರಗತಿಶೀಲತೆ-ಪ್ರತಿಕ್ರಿಯಾವಾದಿಗಳನ್ನು ಪ್ರಗತಿಶೀಲಸಿದ್ಧಾಂತ ಸಾಹಿತ್ಯವಾಗುವದಿಲ್ಲ, ಸ್ಟಾಲಿನ್‌ವಾದ ಹೋರಾಟದಲ್ಲಿ ಜೊತೆಯೊಂದಿಗೆ ಸ್ಫೂರ್ತಿಗೆಟ್ಟಿರುವ ಸ್ಥಳದಲ್ಲಿಯೂ ಇದೆ ಪೂರ್ವಾಗ್ರಹಗಳನ್ನು ಸಂಸ್ಕಾರಕ್ಕೆ ಕಿಗಳಿತ ಸಂಘಾ ಕಲಿಸಿಲ್ಲ ಸಂಯಮ ಪಡೆ ಪ್ರಗತಿಯೊಂದಿಗೆ ಸಮ್ಮಿಗತಿಯೊಂದಿಗೆ ಎಂಬ ವಾದವನ್ನು ರಸ, ಭಾವಭರಿತ ಧಾರೆ ಸುರಿಸಿ ಸ್ಪಲಿಯಲ್ಲಿ ಸುಂಡಿಸಿದರು. ಮುಂಜಾನೆ ಧನ್ಯವಾದಗಳಾರ್ಪಣೆ ಶ್ರೀ ಯು ಸಂಜೀವ ಸೇರಿಗಾರ ಮತ್ತು ಸಾರ್ವಜನಿಕ ಸಂಸ್ಥಾವ ಕೊಳಲು ಗಾಯನ ನಡೆದ ಮೇಲೆ ಉಡುಪಿಯ ಸಾಹಿತ್ಯ ಕಾರ್ಯದರ್ಶಿಗಳು ಮುಂದಿನ ಸಾರಿ ಅಖಿಲ ಕರ್ನಾಟಕ ಎಂಬ ಪ್ರಯತ್ನವನ್ನು ಆಚರಿಸಬೇಕೆಂದು ಆಶಯವಿತ್ತರು.

ಮೂರನೆಯ ದಿನ

ಪೂರ್ವಾಹ್ನ 'ಪಾಸರ ಸಭೆ'ಗಳ ಸ್ಪರ್ಧೆಗಳಿಗೆ ಹಲವು ಮಂದಿ ಎಳೆ ಬಾಲಕಿಯರು [illegible] ಸ್ಪರ್ಧೆಗಳನ್ನು ನಡೆಸಿಕೊಟ್ಟರು. ಅಪರಾಹ್ನ ಎಳೆಯರಿಗಾಗಿ ಆಶುಭಾಷಣ ಸ್ಪರ್ಧೆ ಜರಗಿತು.

ಶ್ರೀ. ಹೆಗ್ಡೆಯವರ ಭಾಷಣ

ಆ ಮೇಲೆ ಶ್ರೀ ಕೆ. ಜಿ ಜನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ವಿಷಾ ವಿಧ ಪ್ರಾರ್ಥನೆ, ಸಂಘದ ಅಧ್ಯಕ್ಷರ ಮುಮ್ಮಾತುಗಳಾದ ಮೇಲೆ ಅಧ್ಯಕ್ಷರು ಜೋಧಸ್ಪದ ಭಾಷಣವಿತ್ತರು. ರಾಜಕೀಯ ಮತ್ತು ಭಾಷಾಂತರಗಳಲ್ಲಿ ನಾಡಿನ ಸಿಸಿಧ ವಿಭಾಗಗಳ ಕನ್ನಡಿಗರು ಎಂತಹ ಮೊನಚ್ಚಿಯಲ್ಲಿದ್ದಾರೆಂಬುದನ್ನು ಶ್ರೀಮಾನ್ ಹೆಗ್ಡೆಯವರು ತಾನು ಪ್ರತ್ಯಕ್ಷ ಕುತ್ತು ಪರೋಕ್ಷ ಅನುಭವಗಳಿಂದ ಪಡೆದುರುವ ಹಲವು ಗೋಸ್ಕರ ವಿಷಯಗಳ ಸಮರ್ಪಕ ವಿವೇಚನೆ ಕೊಟ್ಟು ವಿಚಾರೋದ್ದೀಪಕ ಉಪನ್ಯಾಸವಿತ್ತರು. ಕರ್ನಾಟಕದ ಏಕೀಕರಣದ ಆವಶ್ಯಕತೆಯು ಎನ್ನೆಲೆಯನ್ನೆಲ್ಲ ಸ್ಪಷ್ಟವಾಗಿ ಚಿತ್ರಿಸಿ ಜಾತೀಯ ಸನ್ನಿವೇಶವನ್ನೆಬ್ಬಿಸಿದರು ಶ್ರೀ ಎಸ್ ಎಸ್ ಆನಂತಪದ್ಮನಾಭರಾಯರು ಸಂಯುಕ್ತ ಕರ್ನಾಟಕ ಸಂಘಸ್ಥಾಪನೆಯನ್ನು ಸಂಪ್ರಾಸ್ತಾವನಾ ಕಲೆಗಾರಿಕೆಯಿಂದ ಮಾಡಿಸಿದರು. ತಿರುಮಾಕ್ಕೂರು ಸಮಾವಿಯನ್ನೆತ್ತಿಕೊಂಡು 'ಧರ್ಮಸ್ಥಳ ಮಂಜುನಾಥ ಕುರಿತು ಶ್ರೀ ಕೆ ಸುಬ್ಬಣ್ಣ ಪಟ್ಟಿಯರು ಪಂಪನಿಂದ ಕುವೆಂಪುವರೆಗಿನ ಸೊಗಸಿನ ದಿನ-ವರೆಗಿನ ಪಡಿಗಾಗಿ ಶ್ರೀ ಕೆ ಸಿ ಮಲ್ಯಾಚಾರ್ಯರಿಂದ ಇದೇ ಕೊಳಲು ಗಾಯನ ನಡೆಯಿತು ಅಧ್ಯಕ್ಷರು ಕೊನೆಯನುಡಿಗಳನ್ನಾಡಿದ ಮೇಲೆ ಸ್ವಲ್ಪ ಕಾಲ ಸಂಘದ ಸಕ್ಕಾನಾಮಗಳಿಂದಿಗೆ ಶ್ರೀ ಬೆಳ್ಳೆ ಎಸ್. ಕಾರಂತ ಅಪಾಧ್ಯಾಯರು ಜಾಯಿ ಪಾಮಾಯಿಯಾಯಿತು ಉಡುಪಿಯ ಸಾಹಿತ್ಯ ಕಾರ್ಯದರ್ಶಿಗಳು 'ಶಕ್ತಿಗಾರ' ಎಂಬ ಪ್ರಹಸನವನ್ನು ಅಭಿನಯಿಸಿದ ಮೇಲೆ ಧನ್ಯವಾದ ಸಂಗಡಗಳಾದುವು.

ನಾಲ್ಕನೇ ದಿನ

ಪೂರ್ವಾಹ್ನ ಶ್ರೀ. ಜಿ. ಎಸ್. ಕುದಾಲಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ದಾಸರ ಪದ, ಪ್ರಬಂಧ, ಆಶುಭಾಷಣ, ಕಥಾಕಥನ, ಇತ್ಯಾದಿ ಸ್ಪರ್ಧೆಗಳಲ್ಲಿ ನೆದ್ದಪಟಿಗೂ ಸಾಟಿಕಾಳಿಯು ಸಪ್ರಜ್ಞರಿಗೂ ಬಹುಮಾನಗಳ ವಿತರಣೆಯಾಯಿತು. ಪ್ರದರ್ಶನಕ್ಕೆ ಸಾವಾನ್ಯಗಳನ್ನು ಕಳುಹಿಸದವರಿಗೆ 'ಅರ್ಜಿಕೇಡು'ಗಳು ಕೊಡಲ್ಪಟ್ಟವು. 'ಎಂತಿನ ದಸರೆಯನ್ನು ಹೇಗೆ ಆಚರಿಸಬೇಕು?' ಎಂಬ ವಿಷಯದ ಮೇಲೆ ಶ್ರೀ. ಕೆ. ಎಲ್ ಆಸ್ ಉಪಾಧ್ಯಾಯರು ಭಾಷಣವಿತ್ತರೆಲ್ಲರೆ, ಧಾರ್ಮಿಕ ಕವಿತೆಗಳ ಗಾಯನವನ್ನು ಮಾಡಿತೆನಂತರ ವಿಜಯ. ಶ್ರೀ ಎಸ್. ಸಿ. ಸುಬ್ರಾಯಪ್ಪನವರು ಅಧ್ಯಾಪಕರ ಸಾಹಿತ್ಯ ಸೇವೆಯು ಕುರಿತು ಉಪನ್ಯಾಸವಿತ್ತರು. ಅಧ್ಯಕ್ಷರು ತನ್ನ ಸುದೀರ್ಘ ಭಾಷಣದಲ್ಲಿ 'ಮುಕ್ಕಳ ತರಬೇತು' ಹೇಗಿರಬೇಕೆಂಬುದನ್ನು ವರ್ಣಿಸಿದರು. ಈ ನಾಲ್ಕು ದಿನಗಳ ಸಾಹಿತ್ಯೋತ್ಸವಕ್ಕೆ ಕಿರೀಟವಿಡುವಂತೆ ಸನ್ಮಾನಾರ್ಪಣೆಗಾಗಿ ಸುಂದರ ಸಭೆಯಾಯಿತು. ಎಲ್ಲಾ ಸಭೆ ಸಮಾರಂಭಗಳಿಗೂ ಶ್ರೀ ಪುರುಷರ ಕಿಕ್ಕಿರಿದು ನೆರೆದು ಒಂದು ಕಾರ್ಯಕ್ರಮಕ್ಕೆ ಬೆಲೆ ತಸ್ಮಯತೆಗೊಂಡರು. ಈ ಸಮಾರೋಭಕ್ಕೆ ಬಲು ಪು ಮನಸೋಯಿಂದ ದುಃಖ ಸಂತೋಷಗಳು ಬಂದಿದ್ದುವು. ರಾತ್ರಿ ಉಡುಪಿಯ 'ಯಂತ್ರಾನ ಕಲಾ ಮಂದಿರ'ದಲ್ಲಿ 'ಕರ್ಣಪರ್ವ' ಪ್ರಸಂಗದ 'ತಾಳ ಮದ್ದಳೆ' ನಡೆಯಿತು. ತುಳಿ ಕರ್ನಾಟಕದ ಉತ್ತಮ ಎನ್ನಬಹುದಾದ ಉತ್ತಮ ವೈಜಯಂತಿ ಸಾಹಿತ್ಯೋತ್ಸವವನ್ನು ನೆರೆಯಿಸಿದ ಉಡುಪಿಯ ಕರ್ನಾಟಕ ಸಂಘ ಅದರ ಅಧ್ಯಕ್ಷ ಶ್ರೀ ಎಸ್. ರಾಜಗೋಪಾಲ ಕೃಷ್ಣರಾವ್, ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳು, ಕಾರ್ಯಕಾರಿ ಸಮಿತಿ ಮತ್ತು ಸಹಾಯಕರು ಅಭಿನಂದನಾರ್ಹರು.

Wanted

Applications are invited upto 30-11-1945 from Graduates for responsible posts in the Bank.

Preference will be given to these with previous experience in the Banking line or possessing Commercial or Banking qualifications.

Further particulars may be had on application.

THE VIJAYA BANK, LIMITED,

Head Office:-

MANGALORE

ಬಾಣಂತಿಯರ ದಲು ವಾಗಿಯೇ ದೇಶ ಮತ್ತು ಪ್ರಕೃತದ ವೇಹಸ್ಥಿತಿಯನ್ನು ವಿಶ್ಲೇಷಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ನವಜೀವಾತು ಎಂಬ ಸೂತಿಕಾ ರಸಾಯನ

(ಇದು ವಿಜಯರು ಮಾಡಲ್ಪಟ್ಟದೆ)

ಆ ಔಷಧಿಯನ್ನು ಸೇವಿಸಿದ ಹೆಣ್ಣುಮಕ್ಕಳಿಂದ ಹೊಗಳಿಕೆಯ ಪತ್ರಗಳು ಬರುತ್ತಿವೆ. ಅಂದರೆ ಕೆಂಪಾಲ ಳ ವಂಶಾಗ್ಯಗಳೇ ಒಂಭು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ದಕ್ಷಿಣ ಕನ್ನಡ

ಮಂಗಳೂರು

ಜಿಲ್ಲಾ ಕೊಂಗ್ರೆಸ್ ಕಮಿಟಿ ಕಚೇರಿಯಲ್ಲಿ–ತಾ ೨೮ರಂದು ಸೂತ್ರಯಜ್ಞ ಸಪ್ತಾಹದ ಉದ್ಘಾಟನಾ ಸಮಾರಂಭವನ್ನು ಡಾ। ಯು. ಪಿ. ಮಲ್ಯರವರು ಮಾಡಿದರು. ತಾ ೨೮ ವರೆಗೆ ಸೂತ್ರಯಜ್ಞ ಆಹೋರಾತ್ರಿ ನಡೆದಿತ್ತು. ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರೂ ಸಿವ್ಯಾಧಿಗಳೂ ಮಹಿಳೆಯರೂ ಇದರಲ್ಲಿ ಭಾಗವಹಿಸಿದ್ದರು. ತಾರೀಕು ೨೮ರಾತ್ರಿ ತಡಕಾಲ ಸ್ಥಳೀಯ ವಿದ್ಯಾರ್ಥಿಗಳೂ ಯುವಕ ಮಂಡಳಿಯವರೂ ಸೇರಿ ಬೆಳಗ್ಗೆ ದ್ವಜಪಥ ನೆಯನ್ನು ಜಿ। ಉಮ್ಮಪ್ಪ ಇವರಿಂದ ಜರುಗಿಸಿ ಸಾಯಂಕಾಲ ಸುಮಾರು ೧೫೦ ಸ್ತ್ರೀಪುರುಷರೊಂದಿಗೆ ರಾಷ್ಟ್ರಧ್ವಜಗಳೊಂದಿಗೆ ಗಾಂಧಿಜಿಯವರ ದೊಡ್ಡ ಭಾವಚಿತ್ರವನ್ನು ಸುಂದರವಾಗಿ ಅಲಂಕರಿಸಿದ ಲೋರಿಯು ಮೇರೆ ಮಂಡಿಸಿ ಪಟ್ಟಣದ ಮುಖ್ಯ ಬೀದಿಗಳಲ್ಲಿ ಸೆರವಣಿಗೆ ನಡೆಯಿತು. "ಕೊಂಗ್ರೆಸಿಗೆ ಓಟು ಕೊಡಿರಿ" ಎಂಬ ಸೈಕಲ್ ಸವಾರರು ಕೂಗಿ ಹೇಳುತ್ತಿದ್ದರು. ಸಂಜೆ ಲೈಟ್ ಮೈದಾನಿನಲ್ಲಿ ಶ್ರೀ। ಟಿ. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರವಿತು. ಶ್ರೀ ದಾಮೋದರ ಬಾಳಿಗರು ಗಾಂಧಿಯವರ ರಚನಾತ್ಮಕತ್ವವು ಭಾರತಕ್ಕೆ ದೀರ್ಘಕಾಲ ಮೊದಲೆಯಲಿ ಎಂದು ಪ್ರಾರ್ಥಿಸಿದರು. ಅಂದೇ ವಿದ್ಯಾರ್ಥಿ ಸಂಘದವರು ತಾವು ಏರ್ಪಡಿಸಿದ ನೂಲಿನ ಸ್ಪರ್ಧೆಯು ಕಾಂಗ್ರೆಸ್ ಆಳ್ವಿಕೆಯಲ್ಲಿ ಯಶಸ್ವಿಯಾಗಿ ನಡೆಯಿತು. ತಾ ೧೯ನೇ ದಿನ ಬೆಳಿಗ್ಗೆ ಸಪ್ತಾಹದ ಮುಂಕ್ತಾಯ ಸಮಾರಂಭವು ನಡೆದು ವಿದ್ಯಾರ್ಥಿಗಳು ನೂಲಿನ ಸ್ಪರ್ಧೆಯಲ್ಲಿ ಬಹುಮಾನ ಪಡೆದವರಿಗೆ ಅವರ ವಿತರಣೆಯಾಯಿತು.

ವಿದ್ಯಾರ್ಥಿ ಸಂಘದ–ಆಶ್ರಯದಲ್ಲಿ ಗಾಂಧಿ ಜಯಂತಿಯು ಶ್ರೀ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೊ। ಜೊಸೆಫರು, ಶ್ರೀ ಗಳಾವ ಎ. ಪಿ. ಶೆಟ್ಟಿ, ಎಂ. ಪಿ. ಪ್ರಭು, ಮಾಮೋದರ ಬಾಳಿಗ, ಮಹಾಬಲ ಶೆಟ್ರು, ಚಂದ್ರಶೇಖರ ರಾವ್ ಮೊದಲಾದವರು ಮಾತನಾಡಿದರು.

ಖಡ್ಡಾಯ ಶಿಕ್ಷಣವು–ನಮ್ಮ ಜಿಲ್ಲೆಯ ೨೫ ಗ್ರಾಮಗಳಲ್ಲಿ ಇದೇ ತಾ. ೧೬ರಂದು ಆರಂಭವಾಗುವುದು.

ಧ್ಯಾನಾಕೃನಾದ ಯೋಗಿ–ಎಂಬ ವಿಚಾರವಾಗಿ ತಿರುವಾಂಕೂರಿನ ಕಲಡಿಯ ಸ್ವಾಮಿ ಧರ್ಮಾನಂದರು ಸ್ಥಳೀಯ ಬ್ರಹ್ಮ ಮಂದಿರದಲ್ಲಿ ತಾ. ೧೫ರಂದು ಸುಮಾರಾಗಿ ೪-೩೦ ಘಂಟೆಗೆ ಭಾಷಣಮಾಡಿಯುವರು.

ಪ ಕ ಜಿಲ್ಲಾ ಟೀಚರ್ಸ್ ಗಿಲ್ಡಿನ ಸಾಮಾನ್ಯ ಸಭೆಯೊಂದು ತಾ. ೪ರಂದು ಕೆನರಾ ಹೈಸ್ಕೂಲಿನಲ್ಲಿ ಶ್ರೀ। ಸಂಕಾಜರಾಯರ ಅಧ್ಯಕ್ಷತೆಯಲ್ಲಿ ನೆರೆದಾಗ ಜಿಲ್ಲೆಯ ಐತ್ತಾಯ ಶಿಕ್ಷಣ ಖಾತೆಯ ಸುಸರ್ ಪೈಸರ ಕೆಲಸವನ್ನು ಅನುಭವಶಾಲಿಗಳಾದ ಸ್ಥಳೀಯ ಉಪಾಧ್ಯಾಯರುಗಳಿಗೇನೇ ಕೊಡಬೇಕೆಂದು ಮೊದಲಾದ ನಣಯಗಳನ್ನು ಕೈಕೊಂಡಿತು.

ಮುದ್ಕಾಡಿ–ಗ್ರಾಮಸೇವಾ ಸಮಿತಿಯ ಪ್ರಥಮ ವಾರ್ಷಿಕೋತ್ಸವವು ತಾ 7-10-45 ರಲ್ಲಿ ಡಾ. ಯು. ಪಿ. ಮಲ್ಯರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ। ಎಂ. ಬಿ. ಆಧಿಕಾರಿಗಳ ಸ್ವಾಗತ ಭಾಷಣವಾದ ಮೇಲೆ ಸಮಿತಿಯ ಕಾರ್ಯದರ್ಶಿ ಶ್ರೀಮತಿ ಕಮಲಾವತಿ ಅಧಿಕಾರಿಯವರು ವಾರ್ಷಿಕ ವರದಿಯನ್ನು ಸಭೆಗೆ ಒಪ್ಪಿಸಿದರು. ಮುಖ್ಯ ಅತಿಥಿಯಾಗಿ ಬಂದಿದ್ದ ಶ್ರೀ. ಕೆ. ವೆಂಕಟೇಶ ಪ್ರಭುಗಳವರು ಸಂಸ್ಥೆಗೆ ಅಭಿವೃದ್ಧಿಯನ್ನು ಕೋರಿ ಮಾತನಾಡಿದರು. ಆ ನೇಲೆ ಶ್ರೀ।। ಎಂ. ಎಸ್. ಅಧಿಕಾರಿ. ವಕೀಲರ್, ಕಾರ್ಕಳ. ಆವರು ದೀರ್ಘ ಭಾಷಣದೊಡಿಗೆ ಸಮಿತಿಯ ಪತಿಯಿಂದ ನಡೆಯುವ ಕನ್ನಡಾ ಪಾಠಶಾಲೆಯನ್ನು ಶಂಕರ ನಿದ್ಯಾಲಯದ ಶಂಕರ ಶಾಖಾಪನೆಯನ್ನು ಜರಗಿಸಿದರು. ಆ ಮೇಲೆ ಸಭಿಕರ ಪೈಕಿ ಕೆಲವರ ಭಾಷಣವಾಯ್ತು. ಕೊನೆಗೆ ಅಧ್ಯಕ್ಷರು ನೂತನವಾಯುತ್ತಾ ಸುಹಾತ್ತಾ ಗಾಂಧಿಜಿಯವರ ಯೋಜನೆಯಂತೆ ಗ್ರಾಮಗಳಲ್ಲಿ ಈ ರೀತಿಯ ಸಂಸ್ಥೆಗಳು ಜನತೆಯ ಸೇವೆಯನ್ನು ಮಾಡುವುದು ಅಗತ್ಯವೆನಿಸಿದೆ. ಈ ಸಂಸ್ಥೆಯು ಇಡೀ ಜಿಲ್ಲೆಯಲ್ಲಿ ನೂಡರಿಯಾದ ಪ್ರಥಮ ಸಂಸ್ಥೆಯೆಂದು ನಾನು ಘಾನಿಸುತ್ತೇನೆ. ಇದೇ ರೀತಿಯ ಗ್ರಾಮ ಸೇವಾ ಸಮಿತಿಗಳು ಜಿಲ್ಲೆಯ ಒಳ್ಳೆಯ ಒಳ್ಳೆಯ ಕಡೆಯಲ್ಲಿಯೂ ಸ್ಥಾಪಿಸಲ್ಪಡಬೇಕೆಂದು ನನ್ನ ಆಭಿಪ್ರಾಯವಿದೆ. ಸಮಿತಿಯ ಇತರ ಜವಾಬ್ದಾರಿಕೆಗಳೊಡನೆ ಗ್ರಾಮದಲ್ಲಿಯ ರೋಗ ನಿವಾರಣೆಯ ಸಲುವಾಗಿ ಕಾರ್ಯ ಕೈಕೊಳ್ಳುವರು ಕೂಡಾ ಆಗತ್ಯವೆಂದು ನನ್ನ ಅಭಿಪ್ರಾಯ. ಈ ಕಾರ್ಯದಲ್ಲಿ ಡಾಕ್ಟರನಾದ ನಾನು ನೆರವಾಗುವರೆ ನಿಷ್ಠೆನಿದ್ದೇನೆಂದು ಸುಂಠಾಗಿ ಹೇಳಿ ತನ್ನ ಭಾಷಣವನ್ನು ಮುಗಿಸಿದರು. ಆ ಮೇಲೆ ಸಮಿತಿಯ ಕಡೆಯಿಂದ ಶ್ರೀ। ಎಂ. ಡಿ ಆಧಿಕಾರಿಗಳು ಅಧ್ಯಕ್ಷರಿಗೂ ಅತಿಥಿಗಳಿಗೂ ಧನ್ಯವಾದನ್ನರ್ಪಿಸಿದ ನಂತರ ರಾಷ್ಟ್ರ ಗೀತೆಯೊಡನೆ ಆದಿನ ಸಮಾರಂಭವು ಕೊನೆಗೊಂಡಿತು.

ಬೈಲೂರು–ಮಹಾತ್ಮ ಗಾಂಧಿಜಿಯವರ 77ನೇ ಹುಟ್ಟು ಹಬ್ಬದ ಉತ್ಸವವು ಬೈಲೂರು ಕೇಂದ್ರಕ್ಕೆ ಸೇರಿದ 4-5 ಗ್ರಾಮಗಳ ಜನರ ನೆರವಿನಿಂದ ಶ್ರೀ. ಜಾರ್ಕಳ ನಾಗಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. 2-10-45 ರಲ್ಲಿ ಜರಗಿಸಲ್ಪಟ್ಟಿತು. ಸ್ಥಳೀಯ 4 5 ಶಾಲೆಗಳ ಬಾಲಕ ಬಾಲಿಕೆಯವರಿಂದ ಕೂಡಿದ ಸಾರ್ವಜನಿಕರ ಪೆರವಣಿಗೆಯು ಗಾಂಧಿಜಿಯವರ ಭಾವ ಚಿತ್ರ, ರಾಷ್ಟ್ರೀಯ ಧ್ವಜದೊಂದಿಗೆ ಜೈಕಾರ ಹಾಕುತ್ತಾ ಪೇಟೆಯಿಂದ ಹೊರಟು ಮರ್ಣೆಂಬೈಲು ಮೈದಾನಿನಲ್ಲಿ ಸಭೆ ಕೂಡಿತು. ಶ್ರೀಗಳಾದ ಕೆ. ಅಂತಯ ಶೆಟ್ರು, ಎನ್. ಸಂಜೀವ ಶೆಟ್ರು, ಡಿ. ಡಿ. ಆಳ್ವರೆಲ್ಲರು ಹಾಗೂ ಅಧ್ಯಕ್ಷರು ಗಾಂಧಿಜಿಯವರ ಜೀವನ ಚರಿತ್ರೆಯನ್ನು ಹೇಳಿಮಿದಲ್ಲದೆ, ಆವರಿಗೆ ದೀರ್ಘಾಯುಷ್ಯರಾಗಿರೋಗೃವನ್ನು ಬಯಸಿ ಭಾಷಣಗಳಾದ ಬಳಿಕ ನಂದೇ ಮಾತರಂ ಹಾಡಲಾಗಿ ಕೂಡಿ ಬಂದ ಸುಮಾರು 450 ಜನರಿಗೆ ತಿಂಡಿಯನ್ನು ಹಂಚಿದ ನಂತರ ಸಭೆಯು ಆಗಲಿತು.

ಪಡುಬಿದ್ರಿ–ಗಾಂಧಿಜಯಂತಿ ದಿನಾಚರಣೆಯು ತಾ. 8 10-1945ರಲ್ಲು ಜರಗಿತು. ಸೂತ್ರ ಯಜ್ಞ ಕ್ರಮದಂತೆ ಕಾರ್ಯಕ್ರಮಗಳು ನಡೆದವು. ಪ್ರಭಾತ ಸೇರಿ, ಧ್ವಜ ವಂದನೆ, ಸತತ ನೂಲು ತೆಗೆಯುವ ಕಾರ್ಯಕ್ರಮಗಳು ಬೆಳಿಗ್ಗೆ ನಡೆದವು. ಸಾಯಂಕಾಲ ಡಾ। ಕೆ ಶ್ಯಾಮ ಸೆಟ್ಟಿ ಮತ್ತು ಡಾ। ಯು ಪಿ ಯ ನಾ. ಗಡಿಯಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಶ್ರೀಗಳಾದ ಯು. ಪಿ. ಬಾರ್ಕೂರ್ ವಿದ್ಯಾನಂದ ಪಿ ರಾಘವೇಂದ್ರ ರಾವ್, ಪಾಸು ಶೆಟ್ಟಿ, ಕರಿಯಣ್ಣ ಶೆಟ್ಟಿ, ಶಿವಣ್ಣ ಹೆಗ್ಡೆ ಮೊದಲಾದವರ ಭಾಷಣಗಳಿದ್ದವು. ಶ್ರೀಯುತ ಯು. ಆರ್. ಪ್ರಭು ಹಾಗೂ ಅಧ್ಯಕ್ಷರುಗಳ ವತಿಯಿಂದ ಪರಿಜನರಿಗೆ ವಸ್ತ್ರ ಹಂಚೋಣದ ಕಾರ್ಯಕ್ರಮವು ನಡೆಯಿತು

ಪುತ್ತೂರು–ತಾ. 5 ಮತ್ತು ೬ನೇ ಜನವರಿ 1946ಕ್ಕೆ ಪುತ್ತೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಪುತ್ತೂರು ತಾಲೂಕು ಬಂಟರ ಸಮ್ಮೇಳನವನ್ನು ಜರಗಿಸಬೇಕಾಗಿ ಯೂ ಈ ಸಂಬಂಧವಲ್ಲಿ ಯೆಕ್ಕಾಗಿ ಸಿ ತ್ತು ಹಾಸ್ಯೇಲಾ ಜೇ ಸಮಾರಂಭಗಳನ್ನು ಮಾಡಬೇಕಾಗಿಯೂ ತಾ. 7-10-45ಕ್ಕೆ ಜರಗಿದ್ದ ಪುತ್ತೂರು ತಾಲೂಕು ಕಮಿಟಿಯವರು ನಿಶ್ಚಯಿಸಿರುವರೆಂದೂ, ಎಲ್ಲರೂ ಸಹಕರಿಸಬೇಕೆಂದೂ ಆಜ್ಞಾಪಿ ಮಹಾಬಲ ರೈಗಳು ವಿನಂತಿಸುತ್ತಾರೆ.

ಬೆಳ್ಳಾರೆಯಲ್ಲಿ– ಶ್ರೀಮಂತ ಮನೆತನದ ವೆರು ನಿವೃತ್ತ ಶಾನಭೋಗರೂ ಆಗಿದ್ದ ಶ್ರೀ। ಪಿ. ಕೋಚಪ್ಪನವರು ತಮ್ಮ ಒಡೆತನಿಯ ನಮಸ್ಥಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಗಾಂಧಿಜಯಂತಿಯಂ–ಬೆಳ್ಳಾರೆಯಲ್ಲಿ ಧ್ವಜವಂದನೆ, ನೂಲಜಗಣಿ ತಿಂಡಿ ಹಂಚೋಣ ಇತ್ಯಾದಿ ಕ್ಯಾಯಕ್ರಮಗಳಿಂದ ನಡೆಯಿತು.

ಪಾಣಾಜೆಯಲ್ಲಿ ಗಾಂಧಿಜಯಂತಿ ಶ್ರೀ। ಶಂಕರನಾರಾಯಣ ಭಟ್ಟರ ನೇತೃತ್ವದಲ್ಲಿ ಜರಗಿತು. ಸಾಯಂಕಾಲ ಸ್ಥಳೀಯ ಮೈದಾನದಲ್ಲಿ ಶ್ರೀ। ಗಿಳಿಯಾಲ ಕೇಶವ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ವಿಧಾಯಕ ಕಾರ್ಯಕ್ರಮಗಳ ಕುರಿತು ಪ. ಶಂಕರನಾರಾಯಣ ಭಟ್ಟರೂ ಪ್ರಕೃತ ಜನಾಪಕಯ ಪಿ ಸಯ ಶ್ರೀ. ಪಿ. ಯಸ್. ಗಣಪತಿ ಭಟ್ಟರೂ ವಿವರಿಸಿದರು. ಆರ್ಥಮೂಲಿ ಶಂಕರನಾರಾಯಣ ಭಟ್ಟರು ಹರಿಜನರಿಗೆ ಮತ್ತು ಊರ ಮಜದಜನರಿಗೆ ತಿಂಡಿ ವಿತರಣೆಯನ್ನು ಮಾಡಿದರು.

ಮುಂಬಯಿಯ ಕನ್ನಡ ಮಹಾಜನರಲ್ಲಿ ವಿನಂತಿ

ನಮ್ಮ ಉಡುಪಿಯ ಸಮಾಜ ಶ್ರೀ ಪಾಸುಕ ಸುಬ್ರಹ್ಮಣ್ಯ ದೇವರ ನೂಲು ಸ್ಥಾನವೊಂದು ಜೀರ್ಣ ಸ್ಥಿತಿಯಲ್ಲಿರುವುದನ್ನು ಶ್ರೀ ಆಸಂತ ಸಾಮುಕರು ಜೀರ್ಣೋದ್ಧಾರ ಮಾಡಿಸುವಂಥ ಶ್ಲಾಘನೀಯ ಕಾರ್ಯವೆಲ್ಲಿ ತೊಡಗಿರುವ ಅಂಶ ಎಲ್ಲರಿಗೂ ತಿಳಿದಿದ್ದೆ. ನಾಗ ಪಾತ್ರಿಕಳಾದ ಶ್ರೀ ಪಾಸುಕರು ನಮ್ಮ ಜಿಲ್ಲೆಯ ಪ್ಲೆಲ್ಲಾ ಪ್ರಖ್ಯಾತರಾಗಿದ್ದಾರೆ. ಇವರೆ ಮಹಾಜನಗಳ ನೆರವಿನಿಂದ ಈ ಕಾರ್ಯಕೊಂಡದ್ದು ಸ್ತುತ್ಯ. ಧರ್ಮ ಸಾಲೆ ಮುಂತಾದ ಕಟ್ಟೋಣಗಳು ಬಹಳ ಒಳ್ಳೆಯ ರೀತಿಯಲ್ಲಿದ್ದು ಇನ್ನು ಮುಂದೆ ಆಗಲಿರುವ ಗರ್ಭಗುಡಿಗೋಪುರ ಮುಂತಾದ ಕೆಲವು ಕೆಲಸಗಳು ಬಾಕಿಯಿವೆ. ಆಗಲುಳಿ ಕೆಲಸವನ್ನು ಮಹಾ ಜನರು ಶ್ರೀ ಸಾಮುಕರಿಗೆ ನೆರವಿತ್ತು ಪೂರ್ತಿಗೊಳಿಸಬೇಕಾಗಿದೆ. ಸದ್ಯವೇ ಶ್ರೀ ಆಸಂತ ಸಾಮುಕರು ಈ ಸಂಬಂಧಕ್ಕಾಗಿಯೇ ಮುಂಬಯಿಯ ಮಹಾ ಜನರ ನೆರವು ಕೋರಲಕ್ಕಾಗಿ ಮುಂಬಯಿಗೆ ಬರಲಿದ್ದಾರೆ. ಮಹನೀಯರು ಈ ಸತ್ಕಾರ್ಯಕ್ಕೆ ಕೊಡುಗೈ ದೊರೆಗಳಾಗಿ ಶ್ರೀ ಸಾಮುಕರಿಗೆ ಸರ್ವಾಯತ್ತು ಅವಶ್ಯವಾಗಿ ಆಗಬೇಕಾಗಿರುವ ಈ ಮಹಾ ಕಾರ್ಯವನ್ನು ಸಾಂಗಗೊಳಿಸಿ ಶ್ರೀ ಪಾಸುಕೇ ಸುಬ್ರಹ್ಮಣ್ಯ ದೇವರ ಕೃಪೆಗೆ ಪಾತ್ರರಾಗಿ ಶ್ರೇಯೋಭಜಕರಾಗಬೇಕೆಂದು ನಾಗ ಭಕ್ತನೊಬ್ಬನ ಸವಿನಯ ಪ್ರಾರ್ಥನೆ.

ಏವರ್ ನಾಗಭಕ್ತ,

ಉಡುಪಿ 13-10-'45

Adv.

ESTD. 1926
CROWN RUBBER STAMP Co
MFRS OF
RUBBER STAMPS & ENGRAVERS
BALMATTA ROAD MANGALORE S.K
Approved firm by the Govt. of Mysore Certified by the Agent of the Govt. of India in Ceylon.

ಮುಟ್ಟಾಗುವಿಕೆ
ಹಲವಾರಿಂಗಳಿಂದ ಕಟ್ಟಾಗಿದ್ದರೂ, ಕಷ್ಟಪಡಿ ಗರ್ಭಧಾರಣೆ ಆಥವಾ ಇನ್ನಾವಕಾರಣವಿದ್ದರೂ— 'ಋತುಮಾರಿ ಮಾತ್ರೆಗಳು' ನಿಶ್ಚಿತ ನಿವಾರಣೆ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯುಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3।- ಕೈಮೊಂದೆ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4।- (ವಿ. ಪಿ. 12 ಆಣೆ ಆಲಾಯಿದ.)
Mrs. P. DEVEE,
P. D. 3, (A. R.) Tollygunge, Calcutta.
ಸ್ಟಾಕಿಸ್ಟ್ಸ್: ಮಾ ಕಂಪೆನಿ ವಿಗಳೆಲ್ಲಾ

ಧಾತುಪುಷ್ಟಿ ಲೇಹ
ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರಮೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಾಚು, ವೃದ್ಧ, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0
ಕಸ್ತೂರಿಮಿಶ್ರಣ ದಶಮೂಲ
ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಆಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.
ಚ್ಯವನ ಪ್ರಾಶ್ಯ (ಬಂಗಾರ ಮಿಶ್ರಿತ)
ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.
ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.
ಮಹಾಮದನ ಕಾಮೇಶ್ವರಿ ಲೇಹ
(ಬಂಗಾರ, ಪುಸುಗು, ಕಸ್ತೂರಿ ಮಿಶ್ರಿತವಾದದ್ದು.)
ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ಸಾಯು ಉದಾವ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.
ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.
ಎಲ್ಲಾ ಸಮೂನೆಯ ಔಷಧಿಗಳು ಮೊರೆಯುತ್ತವೆ.
— ಎಂ. ಗಣಪಯ್ಯ ಎಂಡ್ ಸನ್ಸ್, —
ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ಸಂಖ್ಯೆ, 10 ಮಂಗಳೂರು
ಎಲ್ಲಾ ನಮೂನೆಯ ಔಷಧಿಗಳ ದೊರೆಯ ತ್ವವೆ. ಕ್ಯಾಲೆಕಾಂಗ್ಲಿ ಲರದ್ದಿ ರೋಗಕ್ಕೆ ತಕ್ಕಹಾದ ಔಷಧಿ ರಾಸ್ಯಲಬಹುದು.
(1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ,
(2) ಬೊಂಬಾಯಿ. ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆವಿಸ್ಟ್ರೀ 183, ಸುಕಾರಿಬಾಗ್ ರೋಡ್, ಜೈಪಿ ಲೈಲೆ, ನರ ಕೆಷಪ್ ಎಮೆರುಗಡೆ, ಪೂಲ್ (3) ಇನಾಲ್ ಸ್ಟೋರ್ಸ್, ಕೆವಿಸ್ಟ್ರೀ ಜೆ. ಇ ಪಿ. ಪಾಟಂಗಾ.

ದಕ್ಷಿಣ ಕನ್ನಡ.

ಕಾರ್ಕಳ–ಶ್ರೀ ಸ್ವಾಮಿ ವಿಯೋಗಾನಂದ ಸರಸ್ವತಿಗಳಿಂದ ವಿರಚಿತವಾದ ಸತ್ಯಾರ್ಥ ಪ್ರಕಾಶವನ್ನು ಪ್ರಚಾರ ಮಾಡುವ ಮತ್ತು ವೈದಿಕ ಸಂಧ್ಯಾವಂದನೆ ವಿಧಿಯನ್ನು ಲೋಕಪ್ರಿಯ ಮಾಡುವ ಉದ್ದೇಶದಿಂದ ಒಂದು ಸ್ಪರ್ಧೆಯನ್ನು ಏರ್ಪಡಿಸಬೇಕೆಂದು ಯೋಚಿಸಿ, ಈ ಸ್ಪರ್ಧೆಯಲ್ಲಿ ಸಫಲರಾದವರನ್ನು ಪುರಸ್ಕರಿಸಿ ಸಮ್ಮಾನಿಸುವುದಕ್ಕೋಸ್ಕರ ಟೌನ್‌ಹಾಯಿಯನ್ನು ಮ್ಯುನಿಸಿಪಲಿಂಗ್ ಕೋಲೇಜಿನ ಮೂಲಕರಾಜ ಶ್ರೀ. ಎನ್. ಜಿ. ರಾಮರಾವರು 150-0-0 ರೂಪಾಯಿಗಳನ್ನು ಕೊಡುವ ಪ್ರಾಮಾಸ್ಯವನ್ನು ಕೊಟ್ಟಿದ್ದಾರೆ. ಈ ಸ್ಪರ್ಧೆಯು ಇದೇ ಬರುವ ಪಷ್ಟದ ಎಸ್ಸಲ್ ಅಥವಾ ಮೇ ತಿಂಗಳಲ್ಲಿ ಕಾರ್ಯರೂಪದಲ್ಲಿ ನಡೆಯುವುದು. ಹೆಚ್ಚಿನ ವಿವರಗಳನ್ನು ಶ್ರೀ ಕೇಶವ ರಾಮಚಂದ್ರ ಶೆಣೈ, ಕಾರ್ಯದರ್ಶಿ, ಸತ್ಯಾರ್ಥ ಪ್ರಕಾಶ ಸ್ಪರ್ಧಾ ಸಮಿತಿ, ಆರ್ಯ ಸಮಾಜ, ಕಾರ್ಕಳ, ಇವರಿಂದ ತಿಳಿಯಬಹುದು.

ಹಾಲಾಡಿ–ಇಲ್ಲಿಯ ಕೇಂದ್ರ ಕಾಂಗ್ರೆಸ್ ಕಮಿಟಿಯು ಪುನರುಜ್ಜೀವನಗೊಳಿಸಲಾಗಿ, ಆದರೆ ಒಕ್ಕಯಂದಿಂದ ತಾ 8 10 45ರಷ್ಟು ಗಾಂಧಿ ಜಯಂತ್ಯುತ್ಸವವು ಆಚರಿಸಲ್ಪಟ್ಟಿತು. ಬಳಿಕ್ಕೆ ಪ್ರಭಾತ ಸೇವಾ ಧ್ವಜ ವಂದನೆ ಸಂಜೆ ಸುರವಣಿಗೆಯಾಗಿ ಶ್ರೀ ಹಾರ್ಡಳ್ಳಿ ಏರಿಯಣ್ಣ ಶೆಟ್ಟಿಯವರ ಅಧ್ಯಕ್ಷತೆಯಿಂದ ಸಾರ್ವಜನಿಕ ಸಭೆ ಜರಗಿತು. ಬಾಲಕಿಯರು ರಾಷ್ಟ್ರ ಗೀತೆಯನ್ನು ಹಾಡಿದ ಬಳಿಕ, ಸ್ಥಳೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಮಹಾಬಲ ಶೆಟ್ಟಿ ಶ್ರೀ ಪಟ್ಟಾಭಿರಾಮ ಪ್ರಭು, ಶ್ರೀ. ಕೆ ಎಸ್ ಪದ್ಮನಾಭಾಚಾರ್ಯರು ಮಾತನಾಡಿದರು. ಅಧ್ಯಕ್ಷರ ಭಾಷಣದೊಂದಿಗೂ ಇದೇ ಸಭೆಯು ಮುಕ್ತಾಯವಾಯಿತು.

ಸೋಮೇಶ್ವರ ಸೋಮೇಶ್ವರ ಸೆಟಿಲ್ಮೆಂಟ್ ಎಲಿಮೆಂಟರಿ ಶಾಲೆಯಲ್ಲಿ ತಾ. 10-10-45ರಲ್ಲು ಶಾರದಾ ಪೂಜಾ ಸಮಾರಂಭವು ವಿಜೃಂಭಣೆಯಿಂದ ಜರಗಿತು. ಬೇರೆಡು ವಾಲಗಗಳೊಂದಿಗೂಡಿ ಸುಮಾರು 100ಕ್ಕೂ ಜನರು ನೆರೆದಿದ್ದರು. ನೆರೆದ ಸಭಿಕರಿಗೆ ತಂಡಿ ತೀರ್ಥ ಪ್ರಸಾದಗಳು ಹಂಚಲಾಯಿತು. ನೆರೆದ ಸಭಿಕರಿಗೂ ಪೂಜಾ ಕಾರ್ಯಕ್ರಮಗಳಿಗೂ ಆದರವನ್ನಿತ್ತ ಸುಬ್ರಹ್ಮಣ್ಯರಿಗೂ ಶಾಲೆಯ ಶಾಲಾ ಮುಖ್ಯ ಉಪಾಧ್ಯಾಯ ಶ್ರೀ. ಮುಂಡ್ಕೂರು ಗೋಪಾಲ ಶೆಟ್ಟಿರಿಂದ ಧನ್ಯವಾದ ಸಮರ್ಪಣೆಯಾಯಿತು.

ಸಾಹಿತ್ಯ ಪರಿಷತ್ತಿನ ಪ್ರಕಟಣೆ

ಇದೇ ದಿಸೆಂಬರ್ತು ತಿಂಗಳು ಕೊನೆಯವಾರದಲ್ಲಿ ಮುದರಾಯ ನಗರದಲ್ಲಿ ನಡೆಯಲಿರುವ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಶ್ರೀಮಾನ್ ಟಿ. ಸಿ. ಸ್ವಾಮಿಗಳವರು ಹೆಚ್ಚು ಉತ್ಸಾಹದಿಂದ ಚುನಾಯಿತರಾಗಿರುತ್ತಾರೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಮುಂಬಯಿಯಲ್ಲಿ ನಾಟಕ ಮುಹೂರ್ತ–ತಾ. 7 10 45ರಲ್ಲಿ ಅರ್ಜುನ ಸ್ಪುಡಿಯೋದ ಸದನದಲ್ಲಿ "ಮಾಸ್ಟರ್" ದೇವದಿಗಾರ್ ಮತ್ತು ಪಾರ್ಟಿ ಇವರು ದಶಂಬರ್ ತಾರೀಕು 28ರಂದು ಭಾರತಮಾತೆಯ ರಂಗ ಭೂಮಿಯಲ್ಲಿ ಆಭಿನಯಿಸಲಿರುವ "ವಿಷದು ಜೀವನ" ನೆಂಬ ಸಾಮಾಜಿಕ ನಾಟಕದ ಮುಹೂರ್ತವು ನೆರವೇರಿತು ಮಂಗಳೂರಿನ ಮಾಸ್ಟರ್ ಎಂ. ಯನ್. ಪೈಯವರ ಪ್ರಾರ್ಥನೆಯಂತೆ ನೋಟ್ ನಾಟಕದ ಬರೆಹಗಾರರಾದ ಶ್ರೀ. ಎಂ ನಾರಾಯಣರಾಯರು ಪಾತ್ರ ನಿರೂಪಣಾ ಕಾರ್ಯವನ್ನು ಸೂರೈಸಿದರು ಕುಮಾರಿ ರಾಣಿ ಮಂಗ್ಳೂರ್‌ರವರಿಗೆ ಕಥಾ ನಾಯಕಿಯ ಪಾತ್ರವನ್ನು ಕೊಡಲಾಯಿತು ಲಘು ಉಪಹಾರದೊಂದಿಗೆ ಆದಿನ ಕಾರ್ಯಕ್ರಮಗಳು ಕೊನೆಗೊಂಡುವು

ದಿವಂಗತ ಕೈಪುಂಜಾಲು ಚಿನ್ನಪ್ಪ ಸಾಹುಕಾರ್ ಸ್ಮಾರಕ ಸಮಿತಿ, ಮುಂಬಯಿ–ಸ್ವರ್ಗವಾಸಿ ಶ್ರೀ ಕೈಪುಂಜಾಲು ಚಿನ್ನಪ್ಪ ಸಾಹುಕಾರರ ದ್ವಿತೀಯ ಪಾರ್ಷಿಕ ತಿಥಿ ಸಾಹಿತ್ಯಾರಾಧನೆಯನ್ನು ಇದೇ ತಿಂಗಳ ತಾ 21ನೇ ಆದಿತ್ಯವಾರ ಅಪರಾಹ್ನ ಸಂಜೆ 2 30ಕ್ಕೆ ಕೋಟೆಯೊಳಗಣ ವರ್ಧಮಾನ ವೈದ್ಯಾಶ್ರಮದಲ್ಲಿ ನಡೆಯಲಿರುವ ಸಭಾ ಸದನದಲ್ಲಿ ಶ್ರೀಮಾನ್ ಎಂ ಎಸ್. ರಾವ್, ಇವರ ಸನ್ನಿಧ್ಯದಲ್ಲಿ [illegible] ತಾವು ತನ್ನು ಇಷ್ಟ ಮಿತ್ರರಿಂದೊಡ [illegible] ಯ ಮಾಡಿ ಚಿತ್ರಿಸಿ ಆದಿನ ಸಭಾ ಕಾರ್ಯದಲ್ಲಿ ಸಹಕರಿಸಿ ವಿನಯಾಗಬೇಕಾಗಿ ಜತೆ ಕಾರ್ಯದರ್ಶಿಗಳು ಕೋರಿರುತ್ತಾರೆ.

ಜೇನಿನ ವ್ಯವಸಾಯ

ಜನತೆಗೊಂದು ಉಪಯುಕ್ತ ಸೂಚನೆ

ದೇವದಲ್ಲಿ ಗುಡಿ ಕೈಗಾರಿಕೆಗಳಿಗೆ ಪೂರಣ ಅನುಕೂಲತೆಗಳಿವೆ ಇವುಗಳ ಪೈಕಿ ಜೇನಿನ ವ್ಯವಸಾಯವು ಒಂದಾಗಿದೆ. ಜೇನಿನ ವ್ಯವಸಾಯಕ್ಕೆ ಹೆಚ್ಚಿನ ಮೂಲ ಧನವಾಲ್ಲಿ, ವಿಶೇಷ ತರಬೇತಿಯಾಗಲಿ ಬೇಕಾಗಿಲ್ಲ. ಅಲ್ಪ ಪ್ರಯತ್ನದಿಂದ ಪ್ರತಿಯೊಂದು ಮನೆಯಲ್ಲಿಯೂ, ಒಂದೆರಡು ಜೇನು ಗೂಡುಗಳನ್ನು ಇಟ್ಟುಕೊಂಡು ಮನೆಗೆ ಬೇಕಾದ ಉತ್ತಮ ಜೇನನ್ನು ಸಂಗ್ರಹಿಸಿಕೊಳ್ಳಬಹುದಾಗಿದೆ, ಹೆಚ್ಚಿನ ಜೇನನ್ನು ನಿಶ್ಚಯಿಸಿ ಸ್ವಲ್ಪ ಧನವನ್ನು ಕೂಡ ಹೂಡಿಬಹುದು. ದೈವಕೃಪೆ, ಪಟ್ಟುಬಿಗರೂ, ತಮ್ಮ ಪಡು ಸಮಯವಿದ್ದಲ್ಲಿ, ಈ ಕೆಲಸವನ್ನು ನೂಡಬಹುದು.

ಅನುಕೂಲತೆಗಳು–ನಮ್ಮ ದೇವದ ಸಭಿಕರಿಗೆ ಸಾಮಾನ್ಯ ಜೇನು ವ್ಯವಸಾಯಕ್ಕೆ ಇದು ಉತ್ತಮ ಕೇಂದ್ರ ಪಟ್ಟಣವಾಗಿರುವುದರಿಂದ ಸಾಮಾನ್ಯ ಜೇನು ಪೆಟ್ಟಿಗೆಗಳೂ ಕೂಡ ಒಂದೆರಡು ಗೂಡುಗಳನ್ನು ಸುಲಭವಾಗಿ ಸಾಕಬಹುದು ಹಳ್ಳಿಯ ಜೇನು ಕುಟುಂಬಗಳು ಧಾರಾಳವಾಗಿ ಸಿಗುತ್ತವೆ. ಅವನ್ನು ಗೂಡುಗಳಿಗೆ ಸಗಾಣಿಯು ಸಿದರೆ ಸರಿ.

ಜನ್ಮದ [illegible] ಯುಳ್ಳಿ **ಸಂಪಾದಿಸುವದು**. ನಮ್ಮ ಪಳ್ಳಿಗಳಲ್ಲಿ ಜೇನನ್ನು ಬಗಲ ಹಿಂಸಾತ್ಮಕ ರೀತಿಯಿಂದ ಸಂಗ್ರಹಿಸುತ್ತಾರೆ. ಜೇನು ಹಿಂಡುವ ಕ್ರಮದಲ್ಲಿ ಮರಿ ಹೊಟ್ಟೆಗಳು ನಾಶವಾಗಿ ಅವುಗಳ ನೆತ್ತರಿನಿಂದ ಕೂಡಿದ ಜೇನು ಬೇಗನೆ ಕೆಡುವದಲ್ಲದೆ, ಜೇನು ಸೊಣಗಳ ವಂಶವು ನಾಶವಾಗುತ್ತದೆ. ಗೂಡುಗಳಲ್ಲಿ ಸಾಕಿದ ಜೇನುಗಳಿಂದ ನೊಣಗಳಿಗಾಗಲಿ, ಅವುಗಳ ಮರಿ, ಹೊಟ್ಟೆಗಳಿಗಾಗಲಿ, ಯಾವ ತರದ ಅಪಾಯವೂ ಇಲ್ಲ ಗೂಡುಗಳಲ್ಲಿ ಎರಿಗಳನ್ನು ಸರಿ ಮಾಡುವ ಕಾರಣ ಜೇನು ಬಹು ಬೇಗನೆ ಸಂಗ್ರಹವಾಗುವುದು ಯಂತ್ರದ ಮೂಲಕ ಜೇನನ್ನು ಹಿಂಡುವದರಿಂದ ಎರಿಗಳಿಗೆ ಹಿಂದೆ ಸಿಗುವುದು ಎರಿ ಪಿಡ್ಡೆಗೆ ಉಪಯೋಗವಾಗುವ ಜೇನು ಸಹಿತ ಸಿಗುವುದು.

ಪಾಶ್ಚಾತ್ಯ ದೇಶಗಳಲ್ಲಿ– ಪಾಶ್ಚಾತ್ಯ ದೇಶಗಳಲ್ಲಿ ಈ ವ್ಯವಸಾಯಕ್ಕೆ ಸರಕಾರದಿಂದ ಸಹಾಯವು ಹೆಚ್ಚಾಗಿ ಲಭಿಸುವುದು ಸರಕಾರದವರ ಪ್ರಕಾರ, ಧನ ಸಹಾಯ, ಇನ್ನಗಳಿಂದಾಗಿ ಅಲ್ಲಿ ಜೇನ್ನು ಜಂದಿ ಜೇನಿನ ವ್ಯವಸಾಯವಲ್ಲಿ ನಿರತರಾಗಿದ್ದಾರೆ ನಮ್ಮ ದೇಶದಲ್ಲಿಯೂ ಕೂಡ ಜೇನಿನ ವ್ಯವಸಾಯಕ್ಕೆ ಕುಂಬಾ ಅನುಕೂಲತೆಗಳಿವೆ ಸರ್ಕಾರದವರು ಈ ವ್ಯವಸಾಯದ ಕಡೆಗೆ ಗಮನ ಕೊಡಬೇಕಾಗಿದೆ

ಈಗ ಮಾಡಬೇಕಾದ ಕಾರ್ಯ

ಸರಕಾರದವರು ಅಲ್ಲಿಷ್ಟೆ ಮಾಡಲಿ ಎಂದು ವ್ಯವಸಾಯ ಕೇಂದ್ರಗಳನ್ನು ಸ್ಥಾಪಿಸುವುದು ಪತ್ರಿಕೆ, ಪುಸ್ತಕ, ಸಲಹಾ ಕೇಂದ್ರಗಳನ್ನು ಏರ್ಪಡಿಸುವುದು ಬೇಕಿಲ್ಲ ಕಾಲಿಗಳನ್ನು ಎಲ್ಲಾ ಸಿಸುವುದು ಸರಕಾರದವರಿಗೆ ಇದು ಅಧಿಕಾರಿಗಳಿಗೆ ಸ್ವಾಭಾವಿಕವಾಗಿ ತಿಳಿದಿರುವ ಕೆಲಸವನ್ನು ಮಾಡಿಸಬೇಕು. ಈ ಒಳ್ಳೆಯ ಉದ್ದೇಶವನ್ನು ನೆರವೇರಿಸಬೇಕು.

ಪರಿಷತ್ತು–ಜೇನಿನ ವ್ಯವಸಾಯಕ್ಕೆ ಪೂರಕವಾಗಬೇಕಾದ ಪ್ರೋತ್ಸಾಹನವನ್ನು ಪೂರೈಸಿಕೊಳ್ಳುವುದಕ್ಕೂ, ಈ ವಿಷಯವಾಗಿ ಪರಿಜ್ಞಾನವು ನಮ್ಮ ದೇಶದಲ್ಲಿ ಸಾರ್ವತ್ರಿಕವಾಗಿ ಪೆಚ್ಚಾವದಕ್ಕೂ ಅಖಿಲ ಭಾರತ ಜೇನು ವ್ಯವಸಾಯಗಾರರ ಸಂಘತ್ತನ್ನು ಈ ಬಾರಿ ಮಂಗಳೂರಲ್ಲಿ ಜರಗಿಸಲು ನಿರ್ಧರಿಸಿದೆವಾಗಿದೆ

ಪಿ. ಲಕ್ಷ್ಮೀನಾರಾಯಣ ರಾವ್, ಬಿ ಎ

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Kalapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಸಿರತಕ್ಕ ಅತ್ಯುತ್ತಮ ಔಷಧಿ
ದೊಡ್ಡವರಿಗೆ 4ರಿಂದ 8ಚೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಚೊಟ್ಟು ಲವಂಗ ಯಾ ಏಲಕ್ಕಿ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ ಕ

ಗನೋರಿಯಾ ಪರವಾರೋಗ ಉಷ್ಣ ರೋಗಕ್ಕೆ ಔಷಧ
೫ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ
ಶರೀರದಿಂದ ಕೀವು ಬರುತ್ತಿದ್ದರೆ ಹೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಾಯವಾಗಿದ್ದರೆ,... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೊಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರು ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೀನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ಕುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ನ ನುಂಡಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಪಾರ, ಕುಂಬಳಕಾಯಿ, ಒಳೈಣ್ಣೆ ಬಿಡಬೇಕು.
ಬಾಟ್ಲಿಗೆ ೧ಕ್ಕೆ ಕ್ರಮ. ಪೋಸ್ಟ್ ಚಾರ್ಜ ೦ ಆಣೆ.
ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿಪ್ರೆಸ್ ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ
ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.
Ayurveda Oushadalaya GADAG.

ನೋಟೀಸು

ಉಡುಪಿ ಡಿ. ಮು ಕೋರ್ಟಿನಲ್ಲಿ.

O P. No. 66/45

N. ಇಮಾಮಸಾ ಬ್ಯಾಯಾನೆ ಜಯಂಲಕ್ಷ್ಮಿ. -ಆರ್ಜಿದಾರಳು

ಮೇಲ್ಕಂಡ ಅರ್ಜಿ ವಿಷಯದಲ್ಲಿ ಅರ್ಜಿದಾರಳ ಗಂಡ N. ಗುರುದತ್ತರಾಯನು ತಾ ತಾರೀಕು 12-3-1945ಲ್ಲಿ ಮೃತನಾಗಿ ಸದ್ರಿಯವರು ದಿ. ಜನರಲ್ ಎಕ್ಸ್ಯೂಟರ್ಸ್ ಸೊಸೈಟಿ ಆಫೀಸ್‌ರ್. ಇದರಲ್ಲಿ ಪೋಲಿಸಿ ನಂಬ್ರ 12623 ನೇಗೆ ಡಾಕ್ಟರ್ N. ಶ್ರೀಪಾದರಾಯರ ಹೆಸರಿಗೆ ಮಾಡಿಸಿ ಯಿನ್ಶೂರೆನ್ಸ ಬಾಬ್ತು ರೂಪಾಯಿ 1574-0-0ನ್ನು ವಸೂಲು ಪಡೆಯುವರೆ ತಾನು ಹಕ್ಕುದಾರಳಾಗಿ ಆ ಬಗ್ಗೆ ಸರ್ಟಿಫಿಕೇಟ್ ಆಫ್ ಡಿಸ್ಚಾರ್ಜ್ ಸರ್ಟಿಫಿಕೇಟು ಕೊಡುವಂತೆ ಅರ್ಜಿದಾರಳು ಕೊಟ್ಟ ಅರ್ಜಿಯು ತಾರೀಕು 21-10-1945 ಕ್ಕೆ ತನ್ನಿಗೆ ಯಿಬ್ಬರುವನ್ನಿಂದ ಅಕ್ಷೇಪ ಹೇಳಿಕ್ಕವರು ಆ ದಿವಸ ಸ್ವತಹಾ-ವ-ನವಿೀಲರ ಮುಖಾಂತರ ಮೇಲ್ಕಂಡ ಕೋರ್ಟು ನುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Petitioner.
ಉಡುಪಿ. ತಾ. 12-10-45.

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಸೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಾಜಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಮಗ್ಗಿ
ಪುಸ್ತಕಗಳು
ಮಕ್ಕಳ ವತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಿಗಳು, ಬಾಖಲು ಮತ್ತು ಲೆಂಡ್ಲಿರಿಟರ್ಸ್ ಫಾರ್ಮ್‌ಗಳು, ರಿಕಾರ್ಡ್ ಶೀಟುಗಳು ದೊರೆಯುತ್ತವೆ.
ಮಗ್ಗಿ ಪುಸ್ತಕ 1ಕ್ಕೆ 0—1—0
,, ,, 50ಕ್ಕೆ 2—9—0
,, ,, 100ಕ್ಕೆ 5—0—0
Navabharat Book Depot,
UDIPI.

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,
UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1. ರಾಷ್ಟ್ರಸಭೆಯ ಇತಿಹಾಸ	2	8	0
2. ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3. ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4. ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5. ಭಾರತ ಗೀತಾಂಜಲಿ	0	2	0
6. ಪುರಂದರದಾಸರ ಕೀರ್ತನೆ ಭಾಗ 4ರ-ಸ್ಪಿಪ್ ಬೈಂಡ್	1	4	0
7. ಶಾಂತಿಪುರಾಣ	3	0	0
8. ಸಾಮುದ್ರಿ ಶಾಸ್ತ್ರ	0	8	0
9. ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ಕೃಷ್ಣ ಸಂಧಾನ	1	0	0
ತುಳುವಾಲ ಬಲಿಯೇಂದ್ರ	0	4	0
ಅಳಿಯ ಸಂತಾನದ ಕಟ್ಟ್ಪದ ಗುಟ್ಟು	0	8	0
ಕಾನಿಗೆ	0	8	0
ತುಳು ವ್ಯಾಕರಣ	1	0	0
ಮುಪ್ಪಾಳತ್ತ್ ಮದ್ಮಾಮೆ	0	4	0
ಜನಮರ್ಲ್	0	12	0
ತುಳು ಪದ್ಯಮಾಲಿಕೆ	0	2	0
ಬಂಗಾರ್ದಂಗಿದ ಕತೆ	0	2	0
ಮಿತ್ಯ ನಾರಾಯಣ ಕತೆ	1	0	0
ಸತೀ ಕಮಲೆ	0	12	0
ಜೊಬ್ಬರ್ಯೆ	0	4	0
ತೊಡಕಿನಾರ್	0	4	0
ಮುಂಡತ್ತಾಯೆ	0	4	0
ಕನ್ನಡಕೂ	0	1	0
ವಿಶ್ವರೂಪದರ್ಶನೊ	0	2	0

ನ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.

ಬೆಲೆ: **3—0—0**
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಶೆಣೈ ಬ್ರದರ್ಸ್, ,,
ಕೆ. ಭೋಜರಾವ್ & ಕೊ ,,
ಪಾವಂಜೆ ಗುರುರಾವ್, ಉಡುಪಿ.
ಸವಧಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ
ಪಿ. ಎ. ಪೈ ಬ್ರದರ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ನವಯುಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ 0—1—6

NAVAYUGA

ವರ್ಷ 25 ವಾರ 8 ಪ್ರತಿ ಗುರುವಾರ ಹೊರಡುವ ಗಾಣ್ಮುಂಯ ವಾರಪತ್ರಿಕೆ. Vol. 25 No. 8

Founder SRI A. B. SHETTY.

ಉಡುಪಿ • 25—10—1945 • ಮಂಗಳೂರು

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅನ್ನಕಾಂಜನ

ತಲೆನೋವು, ತಿರಿ, ಮೈಕೈ ಉಳುಕು ಶ.ತ್ತಿಗೆ, ಧೂಮ, ಸುಟ್ಟು ಮೇದನೆಗಳಿಗೂ ಎದೆಹೊಡೆತ ಬಾಯಿಗೂ ಬಾಕು ಕೆಲ್ಲುವದು, ಚೇಳು, ವಿಷದ ಜಂತುವಿನ ಬೆಸ ಪಕ್ಷಬಾತ ಮೊದಲಿನ ಮೊದಲಾದ ಎಲ್ಲ ರೋಗಗಳಿಗೂ REGD ಹದ, ಹುಲಿಳಿಡ್ಡಿ ಮದ್ದು ಸಹ ನಮ್ಮಲ್ಲಿ ಕಳ್ಳುತ್ತಿದೆ

ಅನ್ನಕಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,

Head Office - **UDIPI**, (S India.)

New Appointments.

Applications from candidates of S S L C standard are invited for clerical posts in the Company

Applicants should possess a good hand, a good command of English, a good moral character and should be quick at figures

All applications must be accompanied by two testimonials one from the Headmaster of their School and another from any local gentleman

UDIPI,
2nd October, 1945.

T R A Pai,
Managing Director

The Jupiter General Insurance Co., Ltd.,

ಮುಪ್ಪಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲಿ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ. ಆದು 'ಜುಪಿಟರ್' (ದೇವತೆಗಳ ರಾಜ) ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ 'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ, ಏಜಂಟರು ಮತ್ತು ಏರ್ಪನ್ಮೈಝರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

ಅತಿ ಹೆಚ್ಚಿನ ಆದಾಯ, ಕನಿಷ್ಠ, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ

ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ 1910

ದಕ್ಷಿಣ ಭಾರತದ ಚೀಫ್ ಏಜಂಟರು

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.

Central Office—UDIPI S. K

Mangalore ○ Calicut ○ Bangalore ○ Madras ○ Madura ○ Trivandrum ○ Bombay

ANNOUNCEMENT.

We have the pleasure to announce that a branch of the Bank will shortly be opened at

317, Linghi Chetty Street,

MADRAS.

(ESTD 1906 ಸ್ಥಾಪನೆ)

CANARA BANK LIMITED

(Incorporated in British India. Liability of Members Limited.)

ANNOUNCEMENT

We have much pleasure to announce that branches of the Bank will be opened shortly at

KANHANGAD & MERCARA.

Other Branches at:- Udipi, Kaup, Coondapoor, Karkal, Brahmavar, City-Mangalore, Kasaragod, Puttur, Byndoor & Bombay

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನನಗೆ ಸಕಲ ವಿಧ ದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ ಇದಕ್ಕಿಂತಲೂ ದ್ವಿಗುಣಿತ ವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ನಾವಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಯುದ್ಧ ವಹ್ನಿಯಾರಿತು–ಅದರ ಚಿಹ್ನೆಯಡಗೀತೆ?

ಯುದ್ಧ ಮುಗಿದ ಮೊದಲೇ ದಿನವೇ 1918ನೇ ಇಸವಿಯೊಂದು ದಿವ್ಯವಾಗಬೇಕೆಂದು ನಯಸಿದವರು–ಹಾಗಾಗಲಿತ್ತೆಂದು ನಿರೀಕ್ಷಿಸಿದವರು–ಬಹು ಮಂದಿ. ಆದೇನು ಅಷ್ಟು ಸುಲಭದ ಕೆಲಸವೆ? ಮಹಾ ಯುದ್ಧವೆಂದರೆ ಮಾರಿ–ಮೃತ್ಯುಗಳೊಳಗಿನ ವಿವಾಹ. ಮದುವೆ ಒಂದೇ ದಿನದಲ್ಲಿ ಮುಗಿದರೆ ಅದರ ಪೂರ್ವ ಸಿದ್ಧತೆ ಮಾಸಾವಧಿ ನಡೆದಿರಬೇಕು; ಅದು ಮುಗಿದ ಮೇಲೆ ಶಂದ ಸಾಮಾನು, ಸಾಲ, ಸಲಕರಣೆಗಳ ಮರುಪಾವತಿಯಾಗಿ ಯಥಾಸ್ಥಿತಿಗೆ ಬರುವಾಗ ಇನ್ನು ಕೆಲವು ತಿಂಗಳು ಕಳೆಯಲೇಬೇಕು. ಈ ಬಾರಿಯ ಲೋಕ ಯುದ್ಧವೂ ಹಾಗಿನೇ; ಕಳದ ಮಹಾಯುದ್ಧ ಮುಗಿದೊಡನೆಯೇ ಈ ಯುದ್ಧದ ಸಿದ್ಧತೆ ನಡೆಯಹತ್ತಿತು; ಈಗ ಇದೂ ಮುಗಿದಿದೆ; ಇದರಿಂದಾದ ದೆಲ್ಲವನ್ನೂ ಸರಿಪಡಿಸಿಕೊಂಡು ಎಲ್ಲವೂ ಯಥಾಸ್ಥಿತಿಗೆ ಬರಬೇಕಾದರೆ ಇನ್ನೊಂದು 25 ವರುಷ ಹೋಗಬೇಕು. ಇಂಗ್ಲಾಂಡು, ರಶ್ಯ, ಫ್ರಾನ್ಸ್, ಇಟಲಿ, ಜರ್ಮನಿ, ಚೀನಾಗಳಲ್ಲಿ ಧ್ವಂಸವಾಗಿ ಹೋದ ಲೋಕ ಪ್ರಸಿದ್ಧ ಪುರಾತನ ಕಟ್ಟಡಗಳು, ಸ್ಮಾರಕಗಳು, ಅಣೆಕಟ್ಟುಗಳು, ಪ್ರಕೃತಿ ಸೌಂದರ್ಯಗಳು ಮುಂದಿನ 25 ವರುಷಗಳಲ್ಲಾದರೂ ಮತ್ತೊಮ್ಮೆ ತಲೆಯೆತ್ತುವದು ಅಸಾಧ್ಯ. ಆಹಾರ, ವ್ಯಾಪಾರ, ವಹಿವಾಟುಗಳೊಂದಿಗೆ ಜನಜೀವನವು ನೊದಲಿನ ಸ್ಥಿತಿಗೆ ಬರಬೇಕಾದರೆ 10 ವರುಷ ಸಂದೀಪು. ಶತಮಾನಗಳುರುಳಿದರೂ ಮಾಸದೆ, ಚಿರಸ್ಥಾಯಿಯಾಗಿ ಉಳಿಯುವ ಯುದ್ಧ ಚಿಹ್ನೆಗಳು ಲೋಕದ ಎಲ್ಲಾ ಕಡೆ-ಎಲ್ಲಾ ರಂಗಗಳಲ್ಲಿ-ಕೆಲವಾದರೂ ಇದ್ದೇ ಇರುವವು. ಹೀಗಿರುವಾಗ ಬೆನ್ನಲ್ಲೇ ಇನ್ನೊಂದು ಯುದ್ಧವಿದೆ, ಎಂದು ಭವಿಷ್ಯವಾಡುವವರಿಗೇನೆನ್ನಬೇಕು! ಮಿಕ್ಕೆಲ್ಲಾ ಮಾತು ಹಾಗಿರಲಿ-ಯೆರಿಗಳಂದಾದ ಅನಾಹುತ ನಿವಾರಣೆಯ ಪ್ರಸ್ತಾಪ ಬಿಟ್ಟೇ ಬಿಡೋಣ-ಆರ್ಥಿಕ ಅಡಚಣೆ, ಆಮದು ರಫ್ತು, ಧಾರಣೆ ಧೋರಣೆ, ಇತ್ಯಾದಿಗಳ ಪುನರ್ರಚನೆಯ ಮಟ್ಟಿಗೂ ಸುಮ್ಮನಿರೋಣ-ಕೇವಲ ರಕ್ಷಣಾ ವ್ಯವಸ್ಥೆಗಾಗಿ ಯುದ್ಧೋಪಿನ ರಾಷ್ಟ್ರಗಳು ತಮ್ಮಲ್ಲಿ ತಾವೇ ಮಾಡಿಕೊಂಡ—ಹಾಕಿಕೊಂಡ ಕಣಿವೆ, ಕುಳಿ, ಸಿಡಿ ಮದ್ದುಗಳನ್ನು ಮುಚ್ಚಿಸಲು, ಯಾಂತ್ರಿಸಿಕೊಳ್ಳಲು, ಗುಡಿಸಿಕೊಳ್ಳಲು ಸಮಯವೆಷ್ಟು ಬೇಕು, ಖರ್ಚುಮುವೆಷ್ಟಿದೆ, ಎಂಬುದನ್ನು ಒಲ್ಲಿಂ?

ಫ್ರಾನ್ಸಿನ ನಿದರ್ಶನ

ಇತ್ತೀಚೆಗೆ ಶಂಕರ್ಕನ ಒಂದು ದೊಡ್ಡ ಸಿಡಿ ಮದ್ದು ಕಾರ್ಖಾನೆಯ ಮದ್ದು ಗುಂಡುಗಳನ್ನು ಸಪ್ಪೆಗಟ್ಟಿಸುವ ಕಾರ್ಯಕ್ಕೆ ಫ್ರೆಂಚ್ ಮತ್ತು ಜರ್ಮನ್ ಸೋಲ್ದರರನ್ನು ಹಚ್ಚಲಾಗಿತ್ತು. ಅಲ್ಲಿ ಆಗ ನಡೆದ ಒಂದು ದೊಡ್ಡ ಸ್ಫೋಟದಿಂದ ಜನ ಹಾನಿಯೆಷ್ಟಾಯಿತೆಂಬ ಪೂರ್ಣ ವಿವರ ಬಂದಿಲ್ಲ. ಆದರೆ ಯುದ್ಧದ ಅನಾಹುತ ನಿವಾರಣೆಯ ಕಾರ್ಯವೆಷ್ಟು ಅಪಾಯಕಾರಿಯಿದೆ ಎಂಬುದನ್ನು ಲೋಕಕ್ಕೆ ಸ್ಫೋಟದ ಬೆಳಕಿನಿಂದ ಕಾಣುವಂತಾಯಿತು. ಇಡೀ ಪ್ರಪಂಚದಲ್ಲಿ ಇಂತಹ ಸಿಡಿ ಮದ್ದು ಕಾರ್ಖಾನೆಗಳಿವೆ ಎಂಬುದನ್ನು ಗಣಿಸುವುದಸಾಧ್ಯ; ಅವುಗಳನ್ನೆಲ್ಲಾ ಬರ್ಖಾಸ್ತುಪಡಿಸದೆ ಯುದ್ಧವೇಷವನ್ನು ಝಾಡಿಸಿ ತೆಗೆದಂತಾಗದು. ಆದರೆ ಈಮನೆ ಗುಡಿಸುವ ಕಾರ್ಯದಲ್ಲಿರುವ ಅಪಾಯವೂ ಯುದ್ಧಾಪಾಯಗಳಿಗಿಂತ ತೀರಾ ಕಡಿಮೆಯದಲ್ಲ. ಎಲ್ಲಾ ವಿಧದ ಬೋಂಬುಗಳು, ಮದ್ದು ಗುಂಡುಗಳು, ಮೈನ್‌ಗಳು, ಸ್ಫೋಟಕ ದ್ರವಗಳು–ಇನ್ನೊಂದು 10 ವರುಷದ ಯುದ್ಧ ನಡೆಯಸಬಲ್ಲ ವಿಧ್ವಂಸಕೋಪಕರಣಗಳು-ಪ್ರಪಂಚ ತುಂಬಾ ಹರಡಿವೆ. ಅವುಗಳನ್ನೆಲ್ಲಿಗೆ ವೈರಿಯೆಂದು ಭಾವಿಸಿ ಪೂರ್ಣ ನಾಶ ಮಾಡುವ ಒಂದು 'ಅಪಾಯಕಾರಿ ಯುದ್ಧ' ಬಾಕಿಯಿದೆ. ಇನ್ನು ನೆಲ 'ಮೈನ್'ಗಳು, ಜಲ 'ಮೈನ್'ಗಳು ಮಿಲಿಯಾವಧಿ ಸಂಖ್ಯೆಯಲ್ಲಿ ಅಲ್ಲಲ್ಲಿ ಹುಗಿದ ಕೊಂಡೇ ಇವೆ. ದೃಷ್ಟಾಂತಕ್ಕಾಗಿ ಫ್ರಾನ್ಸ್ ಒಂದನ್ನೇ ನೋಡೋಣ ಫ್ರಾನ್ಸಿನ ಪಾಲಿನ ಯುದ್ಧ ಮುಗಿದು ಸುಮಾರು ಒಂದು ವರುಷವಾಗುತ್ತಾ ಬಂತು. ಫ್ರಾನ್ಸ್ ಸರಕಾರವು ತನ್ನ ಪ್ರಥಮ ಕಾರ್ಯವಾಗಿ, ಈ ಮೈನ್ ಗುಡಿಸುವ ಕೆಲಸಕ್ಕೆ ತೊಡಗಿದ್ದಿತು ಆದರೆ ಇನ್ನೂ ಅಲ್ಲಿ ಸುಮಾರು30,000,000 ಮೈನ್‌ಗಳು ಮಣ್ಣಿನಡಿಯಲ್ಲೇ ಇವೆ ಎಂದು ಅಂದಾಜು ಮಾಡಲಾಗಿದೆ. ಒಂದೊಂದು ಮೈನನ್ನು ಅಗೆದು ತೆಗೆಯುವಾಗ ಒಬ್ಬಿಬ್ಬನ ಆಸೆಯನ್ನಾದರೂ ಬಿಡಬೇಕು. ಆದರೂ ಆ ಕೆಲಸವನ್ನು ಅವಸರದಿಂದ ಮಾಡದೆ ವಿಧಿಯಿಲ್ಲವಾಗಿದೆ. ಯಾಕೆಂದರೆ ಈ ಸಿಡಿಲ ಚೆಂಡುಗಳಡಗಿರುವ ಹೆಚ್ಚಿನ ಭೂಮಿಗಳು ಸಾಗುವಳ್ಳಿಯಾಗುವತಹ ವು. ಮೈನ್ ತೆನೆ ಬಿಡಲೆಂದು ಮಾಗೆಯೇ ಬಿಟ್ಟು ಬಿಡಲು ಸಾಧ್ಯವಿದೆಯೆ?

ಇತರ ಕಡೆಗಳಲ್ಲಿ

ಇತ್ತೀಚೆಗೆ ರಶ್ಯಾ ಸರಕಾರವು ಉಕ್ರೆಯಿನ್ ಮತ್ತು ಬೆಯಿಲೋರುಸ್ಯಾದ ಬಹು ಭಾಗವನ್ನು ಗುಡಿಸಿ ಮುಗಿಯಿಸಿತಂತೆ. ತಿಳಿದಿರಲಿ-ಅವೆರಡು ಕಡೆಗಳ ಬಹು ಭಾಗವನ್ನು. ಎಲ್ಲಾ ಕಡೆಗಳ ಮೂಲೆ ಮೂಲೆಗಳನ್ನೂ ಅಲ್ಲ! ಹಾಗೆ ಗುಡಿಸಿ ತೆಗೆದ ಮೈನ್, ಬೋಂಬುಗಳ ಸಂಖ್ಯೆ12 ಮಿಲಿಯಕ್ಕೂ ಮಿಕ್ಕಿದ್ದಿತಂತೆ. ಕೇವಲ ಮೈನ್, ಬೋಂಬುಗಳಂತಹ ಸ್ಫೋಟಕೋಪಕರಣಗಳನ್ನು ಪೂರ್ತಿ ಗುಡಿಸಿಕೊಳ್ಳುವಾಗ ಹಲವು ವರುಷಗಳು ಕಳೆಯಬಹುದು. ಈ ಪ್ರಯಸ ಪ್ರಸಾದವಾಗಿ ಉಳಿದಿರುವದೆಂದರೆ ಈ ಸಿಡಿ ಗುಂಡುಗಳು ಮಾತ್ರವಲ್ಲ. ದೃಷ್ಟಾಂತಕ್ಕಾಗಿ ಇಂಗ್ಲಾಂಡನ್ನು ನೋಡಿರಿ. ಅಲ್ಲಿ ಮಿಲಿಯಾವಧಿ ವೈಲುಗಳುದ್ದದಷ್ಟಾಗುವ ತಂತಿ ಬೇಲಿಗಳು ಇನ್ನೂ ಹಾಗೆಯೇ ಉಳಿದಿವೆ. ಅಷ್ಟು ಮಾತ್ರವೇ?ಟೀಂಕುಗಳನ್ನು ಆತಂಕಿಸಲು ಅಲ್ಲಲ್ಲಿ ಕಟ್ಟರುವ ತಡೆಗಳು-ಕಾಂಕ್ರೀಟ್ ಮತ್ತು ಉಕ್ಕಿನಿಂದಲೇ ತಯಾರಿಸಿದವುಗಳು-ಅಗಣಿತ ಸಂಖ್ಯೆಯಲ್ಲಿ ವಿಂಡಿವೆ. ಇನ್ನು ಥಾಳಿ ನಿರೋಧಕ ಶೆಲ್ಟರುಗಳು, ನೆಲದಡಿಯ ಇಟ್ಟಿಗೆ ಕಟ್ಟಡಗಳು, ಸಮುದ್ರದಡಿಯಲ್ಲಿ ಕಟ್ಟಿಟ್ಟ ತಡೆ ವ್ಯವಸ್ಥೆಗಳು:-ಲವೆಷ್ಟೋ ಲೆಕ್ಕಿಸುವದಸಾಧ್ಯ! ಇವೆಲ್ಲಾ ಸರಿಪಡಿಸಿ, ಬ್ರಿಟನಿನ ಪವಿತ್ರ ನೆಲವನ್ನು ಸಮವಾಟ್ಟಿಕ್ಕೆ ತಂದು, ಸ್ಥಿತಿಂತಿಯಿಂದ 'ಗೋಡ್ ಸೇವ್ ದಿ ಕಿಂಗ್' ಹಾಡುವದೆಂದಿನೆ? ಮುಂದಿನ ಕೆಲಸವೆಷ್ಟು ಅಗಾಧವೆಂಬುದರ ಸರಿಚಯಕ್ಕಾಗಿ ಇದೊಂದೇ ಒಂದನ್ನು ನೋಡೋಣಾಗಲಿ-ಲಂಡನಿನ ಬೀದಿಗಳಲ್ಲಿ ಯುದ್ಧಾವಶ್ಯತೆಗಾಗಿ ರಚಿಸಲ್ಪಟ್ಟಿದ್ದ ತಾತ್ಕಾಲಿಕ ನೀರು ಪೈಪ್‌ಗಳನ್ನು, ಕೆರೆಗಳನ್ನು, ಮತ್ತು ಅಸಂಖ್ಯಾತ ಶೆಲ್ಟರುಗಳನ್ನು ಮುಚ್ಚಿಸಲಿಕ್ಕಾಗಿಯೇ ಸುಮಾರು 200,000 ಮಂದಿ ಆದರಿಂದ ಎಂಟು ವಾರಗಳ ವರೆಗೆ ಕೆಲಸ ಮಾಡಬೇಕಾದೀತೆಂದು ತಿಳಿದುಬಂದಿದೆ. 2 ಲಕ್ಷದ ಮಾತಂತಿರಲಿ, 20000 ಜನವೂ ಈ ಕೆಲಸಕ್ಕೆ ದೊರೆತಿಲ್ಲವಂತೆ ಕಾರಣ, ಅಪಾಯವಿದೆ. ಕೆಲಸಗಾರರಿಗೂ ತಮ್ಮ ಪ್ರೀತಿಯ ಪ್ರಾಣವನ್ನಿಟ್ಟು ಕೊಳ್ಳುವ ಮನಸ್ಸಿದೆ! ಅದ್ದರಿಂದ ವಾರ, ಮಾಸಗಳ ಮಾತನ್ನು ಮರೆತು ಬಿಟ್ಟು, ಯುದ್ಧ ಚಿಹ್ನೆಗಳೆಲ್ಲಾ ಮಾಸುವದು ವರುಷ ವರುಷಗಳ ನಂತರ ಮಾತ್ರವೆಂದೇ ನಿರೀಕ್ಷಿಸೋಣ. ಇಂಗ್ಲಾಂಡಿನಲ್ಲಿರುವದು ಲಂಡನ್ ಮಾತ್ರವಲ್ಲ; ಅಂತಹ ಇತರ ಪಟ್ಟಣಗಳಿವೆ; ಅವುಗಳನ್ನೂ ವಿಮಾನ ಧಾಳಿ ನಿರೋಧಕ್ಕಾಗಿ ನಡೆದಿದ್ದ ಇಂತಹ ಕೆಲಸಗಳೆಲ್ಲಾ ಬಾಕಿಯೇ ಇವೆ. ಇದನ್ನು ಮಾಡಿ ಮುಗಿಸುವದೆಂದಿಗೆ? ಯುದ್ಧ ಚಿಹ್ನೆ ತೊಳೆಯುವ ಕಾರ್ಯ ಉತ್ಕರಾಷ್ಟಿಕ, ಅಮೇರಿಕೆದಲ್ಲಿ ಕೂಡಾ-ಅಂತೂ ಇಡೀ ಪ್ರಪಂಚದಲ್ಲಿ—ಆಗಬೇಕಾಗಿದೆ; ಆಗಿ ಮುಗಿಯಲು ವರುಷ ವರುಷಗಳೇ ಬೇಕಾಗಿವೆ.

ಹೀಗಿದೆ ಪರಿಸ್ಥಿತಿ!—

'ನಾಜೀಶಾಹಿಯ ಕುರುಹು ಉಳಿಯದಂತೆ ತೊಡೆದುಬಿಟ್ಟಿವು;ಜಪಾನ್ ಸಾಮ್ರಾಜ್ಯಶಾಹಿಯ ಚಿಹ್ನೆಯುಳಿಯದಂತೆ ಝಾಡಿಸಿಕೊಂಡಿವೆ'—ನಿಜ. ಆದರೆ ಯುದ್ಧದ ಕೇಷವುಳಿಯದಂತೆ ಮಾಡಲು ಮಾತ್ರ ಆಗಿಲ್ಲ; ಅದು ಸುಲಭದಲ್ಲಿ,ಬೇಗನೆ ಆಗುವಂತೆಯೂ ಇಲ್ಲ. ತಜ್ಞರನ್ನು ಕೇಳ್ದಾರೆ-'ಯುದ್ಧ ಚಿಹ್ನೆಗಳನ್ನು ಪೂರ್ತಿ ನಿವಾರಿಸಿಕೊಳ್ಳಬೇಕಾದರೆ ಕಡಿಮೆಯೆಂದರೆ ಹತ್ತು ವರುಷ ಬೇಕು'. ಈ 10 ವರುಷ ಯಾಕೆ ಬೇಕು ಗೊತ್ತೆ? ಕೇವಲ ಬೋಂಬು, ಮೈನ್‌ಗಳನ್ನೆ ಹೆಕ್ಕಿ ಕೊಳ್ಳಲಿಕ್ಕೆ; ಕಣಿ, ಕುಳಿ, ಬೇಲಿ, ಗುಪ್ಪೆಗಳನ್ನು ಸಮವಟ್ಟ ಮಾಡಲಿಕ್ಕೆ. ಬೋಂಬಿನಿಂದ ಮಲಗಿದ ಮನೆಮಠಗಳನ್ನು ಕಟ್ಟಿಕೊಳ್ಳಲಿಕ್ಕಲ್ಲ—ಅವುಗಳನ್ನು ಪುನಃ ಕಾಣುವದು ಈಗಿರುವವರಲ್ಲಿ ಬಹುಸಂಖ್ಯಾಕರ ಆಯುರ್ಮಾನದಲ್ಲೇ ಇಲ್ಲ! 1914ರ ಲೋಕಯುದ್ಧದ ಪ್ರಸಾದ ದ್ವಿತೀಯ ಲೋಕಯುದ್ಧ ಪ್ರಾರಂಭವಾಗುವ ವರೆಗೂ ಉಳಿದಿತ್ತು-ಅಂದರೆ ಶಾಂತಿ ಕರಾರು ನಡೆದು 21 ವರುಷ ಕಳೆದರೂ ಯುದ್ಧ ಕುರುಹು ಇದ್ದೇ ಇತ್ತು. ಈ ಅವಧಿಯಲ್ಲಿ, ಮಣ್ಣಡಿಯಲ್ಲಿದ್ದ ಹಳೆಯ ಗುಂಡು ಅಥವಾ ಕೈ ಫಿರಂಗಿಯ ಸ್ಫೋಟವೊಂದಾದರೂ ನಡೆಯದೆ ಇಂಗ್ಲಾಂಡಿನ ಒಂದೇ ಒಂದು ವರುಷ ಕಳೆದುದಿಲ್ಲ ಫ್ರಾನ್ಸಿನಲ್ಲಿ ಬೇಸಾಯ ಕಾಲದಲ್ಲಿ ಮಣ್ಣು ಗುಂಪೆಗೆ ನೇಗಿಲು ಹಿಡಿದು ಆದರೊಳಗಿನ ಗುಂಡು ಸ್ಫೋ''ನಿಂದ ಫೈಂಡ್ ರೈತರು ವರುಷಂಪ್ರತಿ ಜಖಂಗೊಳ್ಳುತಿದ್ದರು. ಎಲ್ಲಾ ಕಡೆಗಳಲ್ಲೂ ಇದೇ ಹಾಡು. ಸದ್ಯವವಕಾತ್ ಆಗ ಹೊಸ ಭೂತದಂತೆ ಲೋಕದ ಎಲ್ಲಾ ಕಡೆಗಳಲ್ಲೂ ಕಮ್ಯೂನಿಸಂ ಪೆಡಂಭೂತವೊಂದು ತಲೆದೂಕಿತ್ತು;ಈ ಸ್ಫೋಟದ ಆರೋಪಗಳ ತಲೆಯೊಡ್ಡಲು ಅದೊಂದಿತ್ತು! ಸ್ಫೋಟ ಶಕ್ತಿಯ ಗುಂಡುಗಳೆಲ್ಲಾ ಕಾಲಕ್ರಮೇಣ ತಣ್ಣಗಾಗಿ ಹೋಗುತ್ತವೆ—ಸಿಡಿಗುಂಡು ರಬ್ಬರ್ ಚೆಂಡಾಗುತ್ತದೆ ಎಂಬ ನಂಬಿಕೆ ನಿರಾಧಾರವಾದುದು. 'ಅಟೆಗ್ಲಿಯೋ' ದುರಂತದ ಬಳಿಕ ಈ ಅಜ್ಞಾನ ನಿವಾರಣೆಯಾಗಿದೆ.

(ಗಾನೇ ಪುಟ ನೋಡಿರಿ.)

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಿಯಿಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ಕಲ್ಯಾಣಿ, ಉಡುಪಿ.

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ಸಿಂಡಿ ಪಾನೀಯಗಳ ತಯಾರಿಕೆಗಳು – ವಿದ್ಯುದ್ದೀಪ, ರೇಡಿಯೊಗಳ ಆಧುನಿಕ ಸಲಕರಣೆ, ಉತ್ಕೃಷ್ಟ ಉಪಚಾರ.
ಟೇಸಾರ್ಟ್ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

1000's SAVED
MARGARET'S
FITS CURE
Stops children's fits in 5 minutes.
Ask your chemist for a box.
Sole Agents:
BRIGHTSTAR AGENCIES,
Hospital Rd., Udipi, S. K.

ನಾಜೀ ನಾಯಕರ ತಕ್ಕೀರು!

ಲೋಕ ಪ್ರಾಮುಖ್ಯ ವಿಚಾರಣೆ.

ಯುರೋಪಿನ ಒಗ್ಗಟ್ಟು ಮತ್ತು ಅಭಿವೃದ್ಧಿಗೆ ಅಡ್ಡಿಯಾಗಿರುವ ಆರೋಪಣೆಗಳ ಸೈಜು ಅತ್ಯಂತ ದೊಡ್ಡ ತಕ್ಷೀರು ದಾಖಲೆಯೊಂದು ಈ ಬಾರಿ ಬರ್ಲಿನಿನಿಂದ ಪ್ರಕಟಿಸಲ್ಪಟ್ಟಿದೆ. ಬ್ರಿಟನ್, ಅಮೇರಿಕ, ರಶ್ಯ ಮತ್ತು ಫ್ರಾನ್ಸಿನ ನ್ಯಾಯಾಧೀಶರನ್ನೊಳಗೊಂಡ ಅಂತರ್‌ರಾಷ್ಟ್ರೀಯ ಸೇನಾ ಕೋರ್ಟಿನ ಮುಂದೆ 24 ಮಂದಿ ಪ್ರಮುಖ ನಾಜೀ ಯುದ್ಧಾಪರಾಧಿಗಳ ಮೇಲೆ ತಯಾರಿಸಲ್ಪಟ್ಟಿರುವ ತಕ್ಷೀರಿದು. ಮೇಲಿನ ಚತುರ್‌ರಾಷ್ಟ್ರಗಳ ಪ್ರಾಸಿಕ್ಯೂಟರರ ಸಮಿಶ್ರ ಸಮಿತಿಯೊಂದು ವ್ಯವಹರಿಸಲು ನೇಮಿಸಲ್ಪಟ್ಟಿದೆ. ಅವರು ತಯಾರಿಸಿ ಮುಂದಿಟ್ಟ ಈ ಫಿರ್ಯಾದೀ ಪತ್ರದಲ್ಲಿ 30,000 ಶಬ್ದಗಳಿಗೂ ಮಿಕ್ಕಿ ನಾಜೀ ಪ್ರಮುಖರ ಮೇಲಿನ ಆರೋಪಗಳು ಇವೆ.

ಒಕ್ಟೋಬರ್ 18ರಲ್ಲಿ

ಈ ಚತುರ್‌ರಾಷ್ಟ್ರೀಯ ಮಿಲಿಟರಿ ಕೋರ್ಟು ಪ್ರಥಮ ಬಾರಿ ಬರ್ಲಿನಿನಲ್ಲಿ ಕೂಡಿ ಬಂತು. ಆ ದಿನ ಫಿರ್ಯಾದಿ ದಾಖಲು ಪಡಿಸಿಕೊಳ್ಳುವ ಕೆಲಸ ಮಾತ್ರವಿದ್ದುದರಿಂದ ಆರೋಪಿಗಳು ಹಾಜರಿರಲಿಲ್ಲ. 1944ನೇ ಜುಲಾಯಿ 20ರಲ್ಲಿ ಹಿಟ್ಲರನಿಗೆ ಬೋಂಬೊಗೆದವರ ನಿಚಾರಣೆ ನಡೆದಿದ್ದ ಬರ್ಲಿನಿನ ಕೋರ್ಟಿನಲ್ಲಿಯೇ ಈ ಕೋರ್ಟು ನೆರೆದಿತ್ತು. ಕೋರ್ಟು ತುಂಬಾ ಮಿತ್ರ ಸೇನಾಧಿಕಾರಿಗಳು, ಚತುರ್‌ರಾಷ್ಟ್ರಗಳ ಪತ್ರಿಕಾ ಪ್ರತಿನಿಧಿಗಳು, ಕೆಲವು ಜರ್ಮನ್ ನಾಗರಿಕರು, ದಾವೆ ತಯಾರಿಸಿದ ಲೋಕ ಪ್ರಸಿದ್ಧ ವಕೀಲರು ಮತ್ತವರ ಸಹಾಯಕರು ಹಾಗೂ ಹಲವು ಮಂದಿ ಕೋರ್ಟು ಭಾಷಾಂತರಕಾರರು ತುಂಬಿದ್ದರು. ಉದ್ದದೊಂದು ಮೇಜಿನ ಹಿಂಭಾಗದಲ್ಲಿ ಆನುಕ್ರಮವಾಗಿ ಬಲದಿಂದ ಎಡಕ್ಕೆ, ಅಮೇರಿಕ, ರಶ್ಯ, ಫ್ರಾನ್ಸ್ ಮತ್ತು ಬ್ರಿಟಿಷ್ ಜಡ್ಜರು ಕುಳಿತಿದ್ದರು. ಅಂದಿನ ಅಧ್ಯಕ್ಷತೆಯನ್ನು ಸೋವಿಯೆಟ್ ಜಡ್ಜ್ ಎಮ್. ನಿಕಿಚೆಂಕೋ ವಹಿಸಿದ್ದರು. ಅವರು ಈ ವಿಚಾರಣೆಯ ಪ್ರಾರಂಭಿಕ ಮಾತುಗಳನ್ನಾಡಿದೊಡನೆ ನ್ಯಾಲ್ಯರು ಜಡ್ಜರು ಮತ್ತವರ ಸಹಾಯಕರು ಪ್ರಮಾಣ ಬದ್ಧರಾದರು. ಮುಖ್ಯ ಬ್ರಿಟಿಷ್ ಪ್ರಾಸಿಕ್ಯೂಟರರಾದ ಸರ್. ಹಾರ್ಟ್ಲೆ ಶಾ ಕ್ರೋಸರು ಚತುರ್‌ರಾಷ್ಟ್ರೀಯ ಪ್ರಾಸಿಕ್ಯೂಶನ್ ಸಮಿತಿಯ ಪರವಾಗಿ ಆರೋಪಗಳನ್ನು ಕೋರ್ಟಿಗೆ ದಾಖಲು ಪಡಿಸಿದ ಮೇಲೆ 30 ದಿನಗಳೊಳಗೆ ವಿಚಾರಣೆಗೆ ತಯಾರಾಗಬೇಕೆಂಬ ಆಜ್ಞೆಯೊಡನೆ ಆರೋಪಿಗಳಿಗೆಲ್ಲಾ ನೋಟೀಸು ಹೊರಡಿಸಲಾಗಿದೆ. ಆರೋಪಗಳನ್ನು ಇಂಗ್ಲಿಷ್, ಫ್ರೆಂಚ್, ರಶ್ಯನ್ ಭಾಷೆಗಳಿಗೆ ಪರಿವರ್ತಿಸಿಕೊಳ್ಳಲಾಗಿದೆ.

ಆರೋಪಗಳು

ಅಂದಿನ ಕೋರ್ಟು ಕಾರ್ಯಕ್ಕೆ ಹದಿನೈದೇ ನಿಮಿಷ ಸಾಕಾಗಬಹುದಿತ್ತು. ಆದರೆ ಶಬ್ದ ಬಡದೆ ಪ್ರತಿಯೊಂದನ್ನೂ ಮೂರು ಭಾಷೆಗಳಿಗೆ ಭಾಷಾಂತರಿಸಿಕೊಳ್ಳಬೇಕಾಗಿದ್ದುದರಿಂದ 50 ನಿಮಿಷ ಹಿಡಿಯಿತು. ಇನ್ನು 30 ದಿನಗಳೊಳಗೆ ವಿಚಾರಣೆಗೆದನ್ನು ನೂರೆಂಬರ್ಗಿಗೆ ಮುಂದರಿಸಲಾಗಿದೆ. ಅಲ್ಲಿ ಬ್ರಿಟಿಷ್ ಜಡ್ಜ್ ಲೋರ್ಡ್ ಜಸ್ಟಿಸ್ ಲಾರೆನ್ಸರು ಅಧ್ಯಕ್ಷತೆ ವಹಿಸುವರು. ಇದು ಲೋಕದ ಚರಿತ್ರೆಯಲ್ಲೇ ಅಪೂರ್ವವಾದ ಮೊಕದ್ದಮೆ. ಚತುರ್‌ರಾಷ್ಟ್ರೀಯ ಕೋರ್ಟೊಂದು ಇಷ್ಟು ದೊಡ್ಡ ಅಪರಾಧೀ ಪಂಗಡವನ್ನು ವಿಚಾರಿಸಿದ ದಾಖಲೆ ಬೇರಿಲ್ಲ. ಇಷ್ಟು ದೊಡ್ಡ ಲೋಕ ಮುಖ್ಯ ಆರೋಪಗಳನ್ನು ಹೊತ್ತು ಕೋರ್ಟು ಹತ್ತಿದೆ. ಅಪರಾಧಿಗಳೂ ಬೇರಿಲ್ಲ. ಆವರ ಮೇಲಿನ ಮುಖ್ಯ ಮೂರು ಆರೋಪಗಳಿಂದರೆ:—(1) 1921ರಿಂದ 1945ನೇ ಮೇ 8ರ ವರೆಗೆ ಆಕ್ರಮಣ ಯುದ್ಧದ ಹಂಚಿಕೆ ಹಾಕಿದುದು, ತಯಾರಿ ಮಾಡಿದುದು, ಪ್ರಾರಂಭಿಸಿದುದು, ಮತ್ತದನ್ನು ನಡೆಯಿಸಿದುದು. ಇದೂ ರಾಷ್ಟ್ರೀಯ ಕರಾರುಗಳು, ಒಪ್ಪಂದಗಳು ಹಾಗೂ ಆಶ್ವಾಸನೆಗಳಿಗೆ ವಿರುದ್ಧವಾಗಿ.(2)1939ನೇ ಸೆಪ್ಟೆಂಬರ್ 1ರಿಂದ 1945ನೇ ಮೇ 8ರ ವರೆಗೆ ಜರ್ಮನಿಯಲ್ಲಿಯೂ ಜರ್ಮನಿ ರಾಕ್ರಮಿಸಿದ ಇತರ ರಾಷ್ಟ್ರಗಳಲ್ಲಿಯೂ ಯುದ್ಧಾಪರಾಧಗಳನ್ನು ಮಾಡಿದುದು. (3) 1945ನೇ ಮೇ 8ರ ವರೆಗೆ ಜರ್ಮನಿಯಲ್ಲಿ ಮತ್ತು ಇತರ ಕಡೆ ನಾಜೀ ಪಕ್ಷ ಮತ್ತು ತಮ್ಮ ಯೋಜನೆಗೆ ವಿರುದ್ಧವೆಂದು ಸಂಶಯ ತೋರಿದವರನ್ನು ಕೊಲೆ, ಮರಣದಂಡನೆ ಇತ್ಯಾದಿಗಳಿಂದ ನಿರ್ಮೂಲಿಸಿದುದು.

ಆರೋಪಿಗಳು

ಹಿಟ್ಲರನು ಸಿಗುತ್ತಿದ್ದರೆ ಆತನೇ ಪ್ರಧಾನಾರೋಪಿಯಾಗಿ ಕೋರ್ಟಿಗೆ ಹಾಜರಾಗಬೇಕಿತ್ತು. ಈಗ ಅವನ ಸ್ಥಾನ ಗೋರಿಂಗನಿಗೆ ದೊರೆತಿದೆ. ಈ ಆರೋಪೀ ತಪ್ಪೆಯಲ್ಲಿ ಆತ್ಮಹತ್ಯೆಮಾಡಿಕೊಂಡು ಸತ್ತವರು ಮತ್ತು ಕಾಣೆಯಾಗಿರುವವರನ್ನು ಬಿಟ್ಟು ಉಳಿದ ಎಲ್ಲಾ ನಾಜೀ ಪ್ರಮುಖರು ಪ್ರಾಪ್ತರಿ. ಮಾತ್ರವಲ್ಲದೆ, ರೀಬ್ ಮಂತ್ರಿಮಂಡಲ, ಎಸ್. ಎಸ್. ದಳ, ಗೆಸ್ಟೆಪೋದಳ, ನಾಜೀ ಪಕ್ಷದ ನಾಯಕ ದಳ, ನಾಜೀ ಸೇನಾನೀ ಮಂಡಲ, ಮತ್ತು ಜರ್ಮನ್ ಸೈನ್ಯದ ಹೈಕಮಾಂಡ್—ಈ ಸಂಸ್ಥೆಗಳೂ ಆರೋಪಿಗಳಾಗಿ ವಿಚಾರಣೆಗೊಳಗಾಗಿವೆ. ಆರೋಪಿಗಳಲ್ಲಿ ಪ್ರಮುಖರೆಂದರೆ—

ಹೆರ್ಮಾನ್ ಎಲ್‌ಹೆಲ್ಮ್ ಗೋರಿಂಗ್—ಹಿಟ್ಲರನ ಉತ್ತರಾಧಿಕಾರಿ ಮತ್ತು ನಾಜೀ ಜರ್ಮನಿಯ ಎರಡನೇ ಪ್ರಮುಖ. ವೈಭವದಲ್ಲಿ ಯಾವ ರಾಜನೂ ಇವನಿಗೆ ಸಾಟಿಯಿರಲಿಲ್ಲ. ನಾಜೀ ಪ್ರಮುಖರಲ್ಲಿ ದೊಡ್ಡ ಮನೆತನದವ; ಜನಪ್ರೀತ ಮತ್ತು ಉಚ್ಚನಾಗರಿಕನೆಂದು ಲೋಕ ವ್ಯಾಪೀ ಹೆಸರು ಪಡೆದವ. ತನ್ನನ್ನು ಕೈದು ಮಾಡಲು ಬಂದ ಮಿತ್ರ ಸೇನಾನಿಗೆ ಹಸ್ತಲಾಘವವಿತ್ತು ನಗುಮೊಗದಿಂದ ಸ್ವಾಗತಿಸಿದ್ದ.

ಆಲ್ಫ್ರೆಡ್ ರೋಸೆನ್‌ಬರ್ಗ್—ನಾಜೀ ಪಕ್ಷಕ್ಕೆ ತತ್ವ ಮತ್ತು ಧ್ಯೇಯಾನುಗುಣ ತರಬೇತಿಯಿತ್ತವನಿವನೇ ಕಡೆಗೆ ಆಕ್ರಮಿತ ರಾಷ್ಟ್ರಗಳ ಪೂರ್ವಭಾಗಕ್ಕೆ ಮಂತ್ರಿಯಾಗಿದ್ದ. ಭಾವರುದ್ಧತೆಯ ಮೆಟ್ಟಿಗೆ ನಾಜೀ ಪಕ್ಷದಲ್ಲಿ ಈತನಿಗೇ ಪ್ರಥಮ ಸ್ಥಾನ.

ಮಾರ್ಟಿನ್ ಬೊರ್ಮಾರ್ಸ್—ಹಿಟ್ಲರನ ಕಾರ್ಯದರ್ಶಿ ಮತ್ತು ಪುರೋಹಿತ ನಡಿಪ್ಯುಟೆ ಸ್ಥಾನದಲ್ಲಿದ್ದ. ಅತ್ಯಂತ ಸೂಕ್ಷ್ಮಬುದ್ಧಿಯ ಮನುಷ್ಯ.

ರೋಬರ್ಟ್ ಲೀ—ಜರ್ಮನ್ ಕೂಲಿಗಾರ ವಿಭಾಗದ ನಾಯಕ ಮತ್ತು ವಿದೇಶೀ ಕೆಲಸಗಾರರ ಕೇಂದ್ರ ಮೇಲ್ವಿಚಾರಣೆಯ ಸಂಘಟನಾ ನಾಯಕ. ಕೆಲಸಗಾರರ ತಲೆಯ ಮೇಲೆ ಸುತ್ತಿಗೆಯಂತಿದ್ದವ.

ವಾಲ್ಟರ್ ಫಂಕ್—ಹಿಟ್ಲರನ ಆರ್ಥಿಕ ಸಲಹೆಗಾರ; ರೀಖ್ಸ್ ಬೇಂಕಿನ ಅಧ್ಯಕ್ಷ ಮತ್ತು ಜರ್ಮನ್ ಅರ್ಥ ಸಚಿವನಾಗಿದ್ದ. ಜರ್ಮನಿಯ ಆರ್ಥಿಕ ನಳಿಗೆಯ ಸೂಲ ತಿರುಗಣಿ ಇವನೇ.

ಹ್ಜಾಲ್‌ಮಾರ್ ಶಾಟ್— ಒಂದು ಕಾಲದಲ್ಲಿ ಈತನೂ ರೀಖ್ಸ್ ಬೇಂಕಿನ ಅಧ್ಯಕ್ಷ ಮತ್ತು ಹಣಕಾಸಿನ ಮಂತ್ರಿ. ದುಡ್ಡಿನ ವಹಿವಾಟಿನಲ್ಲಿ ಇಂತಹ ಮೇಧಾವಿ ಮೆದುಳು ಪ್ರಪಂಚದಲ್ಲೇ ಅಪೂರ್ವ.

ಹೆರ್ಮಾನ್ ಎಲ್‌ಹೆಲ್ಮ್ ಗೋರಿಂಗ್—ಹಿಟ್ಲರನ ಉತ್ತರಾಧಿಕಾರಿ ಮತ್ತು ನಾಜೀ ಜರ್ಮನಿಯ ಎರಡನೇ ಪ್ರಮುಖ. ವೈಭವದಲ್ಲಿ ಯಾವ ರಾಜನೂ ಇವನಿಗೆ ಸಾಟಿಯಿರಲಿಲ್ಲ. ನಾಜೀ ಪ್ರಮುಖರಲ್ಲಿ ದೊಡ್ಡ ಮನೆತನದವ; ಜನಪ್ರೀತ ಮತ್ತು ಉಚ್ಚನಾಗರಿಕನೆಂದು ಲೋಕ ವ್ಯಾಪೀ ಹೆಸರು ಪಡೆದವ. ತನ್ನನ್ನು ಕೈದು ಮಾಡಲು ಬಂದ ಮಿತ್ರ ಸೇನಾನಿಗೆ ಹಸ್ತಲಾಘವವಿತ್ತು ನಗುಮೊಗದಿಂದ ಸ್ವಾಗತಿಸಿದ್ದ.

ಆಲ್ಫ್ರೆಡ್ ರೋಸೆನ್‌ಬರ್ಗ್—ನಾಜೀ ಪಕ್ಷಕ್ಕೆ ತತ್ವ ಮತ್ತು ಧ್ಯೇಯಾನುಗುಣ ತರಬೇತಿಯಿತ್ತವನಿವನೇ ಕಡೆಗೆ ಆಕ್ರಮಿತ ರಾಷ್ಟ್ರಗಳ ಪೂರ್ವಭಾಗಕ್ಕೆ ಮಂತ್ರಿಯಾಗಿದ್ದ. ಭಾವರುದ್ಧತೆಯ ಮೆಟ್ಟಿಗೆ ನಾಜೀ ಪಕ್ಷದಲ್ಲಿ ಈತನಿಗೇ ಪ್ರಥಮ ಸ್ಥಾನ.

ಮಾರ್ಟಿನ್ ಬೊರ್ಮಾರ್ಸ್—ಹಿಟ್ಲರನ ಕಾರ್ಯದರ್ಶಿ ಮತ್ತು ಪುರೋಹಿತ ನಡಿಪ್ಯುಟೆ ಸ್ಥಾನದಲ್ಲಿದ್ದ. ಅತ್ಯಂತ ಸೂಕ್ಷ್ಮಬುದ್ಧಿಯ ಮನುಷ್ಯ.

ರೋಬರ್ಟ್ ಲೀ—ಜರ್ಮನ್ ಕೂಲಿಗಾರ ವಿಭಾಗದ ನಾಯಕ ಮತ್ತು ವಿದೇಶೀ ಕೆಲಸಗಾರರ ಕೇಂದ್ರ ಮೇಲ್ವಿಚಾರಣೆಯ ಸಂಘಟನಾ ನಾಯಕ. ಕೆಲಸಗಾರರ ತಲೆಯ ಮೇಲೆ ಸುತ್ತಿಗೆಯಂತಿದ್ದವ.

ವಾಲ್ಟರ್ ಫಂಕ್—ಹಿಟ್ಲರನ ಆರ್ಥಿಕ ಸಲಹೆಗಾರ; ರೀಖ್ಸ್ ಬೇಂಕಿನ ಅಧ್ಯಕ್ಷ ಮತ್ತು ಜರ್ಮನ್ ಅರ್ಥ ಸಚಿವನಾಗಿದ್ದ. ಜರ್ಮನಿಯ ಆರ್ಥಿಕ ನಳಿಗೆಯ ಸೂಲ ತಿರುಗಣಿ ಇವನೇ.

ಹ್ಜಾಲ್‌ಮಾರ್ ಶಾಟ್— ಒಂದು ಕಾಲದಲ್ಲಿ ಈತನೂ ರೀಖ್ಸ್ ಬೇಂಕಿನ ಅಧ್ಯಕ್ಷ ಮತ್ತು ಹಣಕಾಸಿನ ಮಂತ್ರಿ. ದುಡ್ಡಿನ ವಹಿವಾಟಿನಲ್ಲಿ ಇಂತಹ ಮೇಧಾವಿ ಮೆದುಳು ಪ್ರಪಂಚದಲ್ಲೇ ಅಪೂರ್ವ.

ಯುದ್ಧಾರಂಭಕ್ಕೆ ಮೊದಲು ಹಿಂದುಸ್ತಾನ ಸುತ್ತಾಡಿ ಹೋಗಿದ್ದ.

ಫ್ರಾನ್ಸ್ ವೋನ್ ಪೇಪನ್—ವೀರ್ಮರ್ ಯಲ್ಲಿ ಜರ್ಮನ್ ರಾಯಭಾರಿಯಾಗಿದ್ದವನು. ಪಿಕಲಾಟ ಪ್ರವೀಣನೆಂದು ಜಗತ್ಪ್ರಸಿದ್ಧ. ಹಿಟ್ಲರನ ಕೈಕೆಳಗೆ ವೈಸ್ ಚಾನ್ಸೆಲರ್ ಆಗಿದ್ದವ.

ಆರ್ಥರ್ ಸೈಸ್-ಇಂಕ್ವಾರ್ಟ್—ನಾಜೀ ಆಕ್ರಮಿತ ಆಸ್ಟ್ರೀಯದಲ್ಲಿ ವೈಸ್ ಚಾನ್ಸೆಲರ್ ಆಗಿದ್ದ ಕಪಿ ಮುಷ್ಟಿಯ ಪಕ್ಕಾ ನಾಜಿ.

ಜೂಲಿಯಸ್ ಸ್ಟ್ರೈಚರ್—'ಡೆರ್ ಸ್ಟ್ರೈಮರ್' ಎಂಬ ನಾಜೀ ಪತ್ರಿಕೆಯ ಮುಖ್ಯ ಸಂಪಾದಕ. ನರಭಕ್ಷಕ ವ್ಯಾಘ್ರನೆಂದು ಕ್ರೂರತ್ವಕ್ಕೆ ಹೆಸರಾದವ. ಯಹೂದೀ ವೇಟೆಯೇ ಇವನ ನಿಚ್ಚಿನ ಕಾರ್ಯ.

ವಿಲ್‌ಹೆಲ್ಮ್ ಕೀಟೆಲ್— ನಾಜೀ ಮಹಾನಾಯಕರೆಲ್ಲೊಬ್ಬ. ಬರ್ಲಿನಿನಲ್ಲಿ ಶರಣು ಕಾಣಿಗೆ ಸಹಿ ಹಾಕಿದವನಿವನೇ. ರೇಕಾರಪೂರ್ವಕ ದಸ್ಕತ್ತೆಳೆದು ಒಂದು 'ರಶ್ಯನ್ ಶಿಬಿರದಲ್ಲಿ ಕೀಟೆಲ್' ಎಂಬ ಪುಸ್ತಕ ಬರೆದು ಹೆಣ ಕೂಡಿಸಯ್ಯಾ' ಎಂದು ತನ್ನ ಸಹಾಯಕನೊಡನೆ ತಮಾಷೆ ಯಾಡಿದ ಅಭೀದ್ಯ ಹೃದಯಿಯೀತ.

ಎರಿಚ್ ರೈಡರ್—ಜರ್ಮನಿಯ ಹಡಗ ಬಲದ ಕೊನೆಯ ಕಮಾಂಡರ್-ಇನ್-ಚೀಫ್. ನಮ್ಮವ್ವೆಂದರೆ ಇವನ ಚಾತುರ್ಯದಿದಿರಲ್ಲಿ ಬೊಗಸೇ ಜಲ.

ಎಡ್ವಿರಲ್ ಜೊಯಿನೆಟ್ಜ್—ಹಿಟ್ಲರನು ಮಡಿದನೆನ್ನುತ್ತಾ ಸರ್ವಾಧಿಕಾರವಹಿಸಿ, ಒಂದೆರಡು ದಿನ ಯುದ್ಧ ನಡೆಯಿಸಿ ಶರ್ತು ಕೆಳಗಿಡುವಂತೆ ಜರ್ಮನಿಗಾಜ್ಞಾಪಿಸಿದವನಿವನೇ. ರಾಜಕೀಯ ಕಂತ್ರದಲ್ಲಿ ಅಸಾಮಾನ್ಯ.

ಪೋನ್ ರಿಬ್ಬಂಟ್ರಾಪ್—ಸೂಜೀಕನ್ನಡಿಗನ ಸತ್ಪವಿದ್ಯವನಂತೆ ಸ್ತ್ರೀಪುರುಷರನ್ನು ಆಕರ್ಷಿಸಬಲ್ಲ ಚತುರ, ಸುಂದರ ವ್ಯಕ್ತಿ. ಜರ್ಮನಿಯ ವಿದೇಶ ಮಂತ್ರಿಯಾಗಿದ್ದ. ರಶ್ಯದೊಡನೆ ಒಂದೇ ದಿನದೊಳಗೆ ಮೈತ್ರಿ ಸಾಧಿಸಿದ ಕೀರ್ತಿ ಇವನ ಚಾತುರ್ಯಕ್ಕೆ ಸಲ್ಲಬೇಕು ರಾಜಕೀಯ ಯುಕ್ತಿ ಚಾತುರ್ಯಗಳ ಜಗದ್ಗುರು ಈತ.

ಹೆರ್ ಹೆಸ್—ಹಿಟ್ಲರನ ಡಿಪ್ಯುಟೆ ಮತ್ತು ಉತ್ತರಾಧಿಕಾರಿ. ಜರ್ಮನಿಯು ವಿಜಯದುಬ್ಬಿನಲ್ಲಿರುವಾಗಲೇ ಸಂಧಾನಾಪೇಕ್ಷೆಯಿಂದ ಇಂಗ್ಲಾಂಡಿಗೆ ಬಂದಿಳಿದು ಸೆರೆ ಸಿಕ್ಕಿದ್ದ. ಮಿತ್ರರಾಷ್ಟ್ರೀಯರಿಗೆ ದೊರೆತ ಮೊದಲ ಮುಖ್ಯ ಕೈದಿ. ಇವನು ಇಂಗ್ಲಾಂಡಿನಲ್ಲಿದ್ದ ಉದ್ದೇಶನೇನೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ನಾಜೀ ಪ್ರಮುಖರ ಪೈಕಿ ಈತ ಸೌಮ್ಯ ಸ್ವಭಾವದವನೆನ್ನುತ್ತಾರೆ.

ನಿನ್ನೆ ಈ ಮಂದಿ ಇಡೀ ಲೋಕವೇ ಕಂಪಿಸುವಂತೆ ಮಾತುತಿದ್ದರು; ಈ ದಿನ ಕೈದಿಗಳಾಗಿದ್ದು ವಿಚಾರಣಾ ನೋಟೀಸು ಪಡೆದಿದ್ದಾರೆ; ನಾಳೆ?

Wanted

Applications are invited upto 30-11-1945 from Graduates for responsible posts in the Bank.

Preference will be given to those with previous experience in the Banking line or possessing Commercial or Banking qualifications.

Further particulars may be had on application.

THE VIJAYA BANK, LIMITED,

Head Office -

MANGALORE.

★ಬರ್ಮಾ ರಾಷ್ಟ್ರೀಯ ಸೇನೆ★

ಭಾರತ ರಾಷ್ಟ್ರೀಯ ಸೇನೆಗೆ ದೊರೆತ ಗೌರವ ದೊಂದಿಗೆ ಇದಕ್ಕೆ ಸಿಕ್ಕಿದ ಗೌರವವನ್ನು ಹೋಲಿಸಿ ನೋಡಿ—

ಸುಭಾಷ್‌ಚಂದ್ರರ ನಾಯಕತ್ವದಲ್ಲಿದ್ದ 'ಹಿಂದೀ ರಾಷ್ಟ್ರೀಯ ಸೇನೆ'ಯ ಪ್ರಮುಖರನ್ನೀಗ ಕೋರ್ಟು ಮಾರ್ಷಲ್ ನ ಚಾರಣೆ ಕಾಯುತ್ತಿದೆ; ಅವರ ಕತೆಗೆ ನ್ಯಾಯ್ಯ ಬಾಯ್ದೆರೆದು ನಿಂತಂತಿದೆ. ಕಲ್ಕತ್ತದ ಬಂದೀಖಾನೆಯಿಂದ ತಪ್ಪಿಸಿಕೊಳ್ಳಲು ನೋಡಿದ ಆ ಯೋಧರಲ್ಲೊಬ್ಬನಿಗೆ ಪತ್ರಿಕೆಗಾರರು ಗುಂಡಿಟ್ಟರೆಂಬುದನ್ನು ಸರಕಾರವೇ ಒಪ್ಪಿದೆ. ಇಡೀ ರಾಷ್ಟ್ರವು ಏಕಕಂಠದಿಂದ ಅವರ ಬಿಡುಗಡೆಯನ್ನು ಯಾಚಿಸುತ್ತಿದೆಯಾದರೂ, ಸರಕಾರವು ಅವರನ್ನು ದೋಷಮುಕ್ತರೆಂದು ಗಣಿಸಲು ತಯಾರಿಲ್ಲ. ಆದರೆ ಇದೇ ರೀತಿಯ ರಾಷ್ಟ್ರೀಯ ಸೇನೆಯೊಂದು ಬರ್ಮದಲ್ಲಿಯೂ ತಯಾರಿಸಲ್ಪಟ್ಟಿದ್ದು, ಬ್ರಿಟಿಷರನ್ನು ಬರ್ಮದಿಂದೋಡಿಸಲು ನೆರವಾಗಿತ್ತು. 'ಹಿಂದೀ ರಾಷ್ಟ್ರೀಯ ಸೇನೆ'ಗಿಂತ ಹೆಚ್ಚಿನ ಹಾನಿ, ಅಪಾಯ, ದುರವಸ್ಥೆಗೆ 'ಬರ್ಮಾ ರಾಷ್ಟ್ರೀಯ ಸೇನೆ'ಯು ಬ್ರಿಟಿಷರನ್ನೀಡು ಮಾಡಿದ್ದಿತು ರಚನೆ, ಕಾರ್ಯ, ಧ್ಯೇಯಗಳಲ್ಲಿ ಭಾರತದ ಮತ್ತು ಬರ್ಮದ ಇವೆರಡು ಸೇನೆಗಳೊಳಗೂ ನಿಕಟ ಸಾಮ್ಯತೆಯಿದೆ. ಆದರೆ ಭಾರತದ ರಾಷ್ಟ್ರೀಯ ಸೇನೆ ಇಂದು ಬ್ರಿಟಿಷ್ ದ್ರೋಹಿಯಾಗಿ ವಿಚಾರಣೆಗೊಳಗಾಗಿದೆ, ಬರ್ಮದ ರಾಷ್ಟ್ರೀಯ ಸೇನೆ ಬ್ರಿಟಿಷ್ ಮೈತ್ರಿಗಳಸಿ ಬ್ರಿಟಿಷ್ ಸೇನಾಂಗವಾಗಿ ರಾಜಿಸುತ್ತಿದೆ. ಇದೀಗ ಸ್ವಾಭಾವಸ್ಥಿತಿ ವಿಪರ್ಯಾಸ! ಸ್ವಾತಂತ್ರ್ಯ ಸ್ಫೋಮೀ ಬರ್ಮೀಯ ಸೇನೆಯ ಚರಿತ್ರೆಯನ್ನು ಕೆದರಿ, ಅಂತಹದೇ ಆದ ಹಿಂದೀ ರಾಷ್ಟ್ರೀಯ ಸೇನೆಗೊದಗಿರುವ ದುರದೃಷ್ಟಕ್ಕಾಗಿ ಹಿಂದೀಯರು ಕೊರಗಬೇಕು. ತಮ್ಮ ನಿಸ್ಸಹಾಯಕತೆ, ನಿರರ್ಥಕತೆಗಾಗಿ ನಾಚುಗೆಯಿಂದ ತಲೆ ತಗ್ಗಿಸಬೇಕು.

ಕುದಿಯುತ್ತಿದ್ದ ಬರ್ಮ

'ಬರ್ಮಾ ರಾಷ್ಟ್ರೀಯ ಸೇನೆ'ಯ ಕಥೆ ಹೇಳುವ ಮೊದಲು ಅದಿಯಿಂದಲೂ ಬರ್ಮದ ಸ್ಥಿತಿ ಹೇಗಿತ್ತೆಂಬುದನ್ನು ತುಸು ಪ್ರಸ್ತಾಪಿಸಬೇಕಾಗಿದೆ. ಬರ್ಮೀಯರು ಹಿಂದೀಯರಿಗಿಂತ ಉದ್ರೇಕ ಸ್ವಭಾವದವರು; ಉಗ್ರಸ್ವಾತಂತ್ರ್ಯಭಿಲಾಷಿಗಳು. ದ್ವಿತೀಯ ಲೋಕ ಯುದ್ಧಾರಂಭವಾಗುವ ಮೊದಲೇ ಸಶಸ್ತ್ರ ಹೋರಾಟದಿಂದ ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆಯಬೇಕೆಂಬ ಒಯ್ಗಿಯಿಂದ ರಾಷ್ಟ್ರಭಿಮಾನಿ ಬರ್ಮೀಯರೆಲ್ಲಾ ಕುದಿಯುತ್ತಿದ್ದರು; ಆ ಸಂದರ್ಭಕ್ಕಾಗಿ ಹೊಂಚುಹಾಕುತ್ತಿದ್ದರು. ಅಹಿಂಸಾ ಬೋಧೆಯಿಂದ ನಪ್ಪೆಗಟ್ಟಿಸಲು ಅಲ್ಲೊಬ್ಬ ಮಹಾತ್ಮಾ ಗಾಂಧಿಯಿರಲಿಲ್ಲ. ಕೇವಲ 60 ವರುಷಗಳಿಗೆ ಮೊದಲು ತಮ್ಮ ರಾಜನ ಆಡಳಿತ್ಲಿ ತಾವು ಸ್ವತಂತ್ರ ರಾಷ್ಟ್ರವಾಗಿದ್ದೆವೆಂಬ ಸ್ಮರಣೆಯು ಬರ್ಮೀಯರಿಗೆ ದಿನಕ್ಕೆ ಹಲವು ಬಾರಿ ಬಾರದೆ ಹೋಗುತ್ತಿರಲಿಲ್ಲ. ಅನ್ಯಾಧಲ್ಲಿ ಹರಿಯುತ್ತಿದ್ದ ಫ್ರೆಂಚ್ ಸಾಮ್ರಾಜ್ಯವನ್ನು ಕುಂಠಿಸುವದಕ್ಕಾಗಿ ಬ್ರಿಟಿಷರು ಬರ್ಮಾ ರಾಜನ ಮೇಲೆ ವಿನಾಕಾರಣ ಯುದ್ಧ ಹೂಡಿ ಆತನನ್ನು ಹಿಂದು ಸ್ಥಾನಕ್ಕೋಡಿಸಿದ್ದರು. ಇಳಿ ಆತ ಪರದೇಶೀ ಜೀವನ ನಡಿಸಿ ಮೃತ್ಯುವಿನೊಳಗಾಗಿದ್ದ ಈ ಅನ್ಯಾಯದ ಪ್ರತೀಕಾರಕ್ಕಾಗಿ ಬರ್ಮೀಯರು ಹೊಂಚುತಿದ್ದರು ಅದಕ್ಕನುಗುಣವಾಗಿ ಹಿಂದುಸ್ಥಾನದಲ್ಲಿ 'ಸಿಪಾಯಿ ದಂಗೆ' ನಡೆದಂತೆ ಬರ್ಮೀಯರು ಸ್ವಾತಂತ್ರ್ಯೇಚ್ಛೆಯ ದ್ಯೋತಕವಾಗಿ ಬರ್ಮದಲ್ಲಿ 'ತಾರವಾಡಿ ದಂಗೆ' ಯೆದ್ದಿತ್ತು. ಆದರೆ ಒಂದು ಅಂಥಶ್ರದ್ಧೆಯಿಂದಾಗಿ ಆ ಹೋರಾಟ ಪರಾಭವಗೊಂಡಿತು. ತಮ್ಮ ಎದೆಗೆ ಮಾಂತ್ರಿಕ ಮಜ್ಜೆಗಳನ್ನು ಚುಚ್ಚಿಸಿಕೊಂಡರೆ ಗುಂಡು ನಾಟುವಂತಿಲ್ಲ ಎಂಬ ಭ್ರಮೆಯಿಂದ ಬರ್ಮೀಯರು ಆ ಹೋರಾಟವನ್ನಿದಿರಿಸಿ ಸೋತುಹೋದರು. ಆ ಮೇಲೆ ಅಧುನಿಕ ತಂತ್ರ, ವ್ಯವಹಾರಗಳನ್ನರಿತ ಸುಶಿಕ್ಷಿತ ಬರ್ಮೀಯರು ಒಳಗಿಂದೊಳಗೆ ಸಂಘಟನೆ ಮಾಡುತ್ತಿದ್ದರು. ಒಂದಲ್ಲೊಂದು ದಿನ ಬ್ರಿಟಿಷ್ ಅಡಳಿತೆಯನ್ನು ಕಿತ್ತೊಗೆಯುವ ನಿರೀಕ್ಷೆಯಿಂದ ಸನ್ನಾಹ ನಿರತರಾಗಿದ್ದರು. ಆ ಸಂದರ್ಭವೂ 1911ನೇ ದಶಂಬರಿನಲ್ಲಿ ಒದಗಿ ಬಂತು; ಜಾಪಾನು ಅನೇಕ ಬ್ರಿಟನುಗಳ ಮೇಲೆ ಯುದ್ಧ ಸಾರಿತು.

ಬ. ರಾ. ಸೇನಾ ಮೂಲ

ಯುದ್ಧ ಘೋಷಿಸಿ ತಿಂಗಳಾಗುವದರೊಳಗೆ ಜಾಪಾನೀ ಸೇನೆ ಆ ಮೂಲೆಯಿಂದ ಬರ್ಮನೆಲೆಗೆ ನುಗ್ಗಿ 'ವಿಕ್ಟೋರಿಯಾ ಪ್ಲೈಂಟ್'ನಿಂದಾರಂಭಿಸಿ ಉತ್ತರಕ್ಕೆ ತಾವೋರಿ ಕಡೆಗೆ ಮುನ್ನುಗ್ಗುತ್ತಾ ಬರುತಿತ್ತು. ಬ್ರಿಟಿಷ್ ದಾಸ್ಯನಿವಾರಣೆಯ ಸಂದರ್ಭ ಯಾವಾಗ ದೊರೆಯುವದೆಂದು ಕತ್ತು ನೀಡಿ ಕಾಯುತ್ತಿದ್ದ ಬರ್ಮ ಕೂಡಲೇ ಅಣಿಯಾಯಿತು. ಆಕ್ರಮಿಸಿಕೊಂಡು ಮುಂದೊತ್ತುತಿದ್ದ ಜಾಪಾನೀ ಸೇನೆಯ ಮುಂಭಾಗದಲ್ಲಿ ಬರುತ್ತಿದ್ದವರೆಂದರೆ 30ಮಂದಿ ಬರ್ಮೀಯ ತರುಣರು; ಅಂದಿನಿಂದ'ತ್ರಿದಶಧೀರರು' ಎಂದು ಬರ್ಮದಲ್ಲೆಲ್ಲಾ ಈ 30 ಮಂದಿಯ ಅಂಗಾಧನೆ ನಡೆಯುತ್ತಿದೆ. ಈ 30 ಮಂದಿಯ ನಾಯಕನಾಗಿ ಆತಿ ಮುಂಭಾಗದಲ್ಲಿದ್ದವನೆಂದರೆ ಈಗ 'ನೇಜರ್ ಜನರಲ್ ಆಂಗ್ ಸೇನ್' ಎಂದೊಡನೆ ಬ್ರಿಟಿಷ್ ಸಾರ್ಜೆಂಟನೂ ಹ್ಯಾಟ್ ಎತ್ತುತ್ತಿರುವ—ಲೋರ್ಡ್ ಲೂಯಿಸ್ ಮೌಂಟ್ ಬ್ಯಾಟನರೊಂದಿಗೆ ಸಂಧಾನಮಾಡಿಕೊಂಡು ಬ. ರಾ. ಸೇನೆಯನ್ನು ಬ್ರಿಟಿಷ್ ಸೇನಾಂಗವಾಗಿ ಜೋಡಿಸಿ ಸರ್ವ ವಿಧದ ಸೇನಾ ಗೌರವ ಪಡೆಯುತ್ತಿರುವ—ಇದೇ ಆಂಗ್ ಸೇನ್ ಯಾನೆ ಬರ್ಮದ ಸುಭಾಸ್‌ಚಂದ್ರ ಬೋಸ್! ಆಂಗ್ ಸೇನ್ ರಂಗೂನ್ ಯುನಿವರ್ಸಿಟಿಯ ವಿದ್ಯಾರ್ಥಿ. ಆಗಲೇ ವಿದ್ಯಾರ್ಥಿ ಮುಖಂಡನಾಗಿ ಆತ ವಿಶೇಷ ಚಟುವಟಿಕೆ ಪ್ರದರ್ಶಿಸಿದ್ದ. ದೀರ್ಘಾವಧಿಯ ವರೆಗೆ ಆತನ ಮೇಲೆ ಪೋಲಿಸ್ ಕಾವಲು ನಡೆದಿದ್ದಿತು. 1941ರಲ್ಲಿ ಕಾರಣಿಯಾಗಿ ಬರ್ಮದಲ್ಲಿದ್ದ ಬ್ರಿಟಿಷ್ ಸರಕಾರದ 'ಅಪೇಕ್ಷಿತ ಮನುಷ್ಯ'ನಾಗಿದ್ದ. ಆತ ಆಗ ಎಲ್ಲಿ ಹೋಗಿದ್ದ ಗೊತ್ತೆ? 1941ರ ಆದಿಯಲ್ಲೇ ತನ್ನ 29 ಮಂದಿ ಅನುಯಾಯಿಗಳನ್ನು ಕೂಡಿಕೊಂಡು ಗುಟ್ಟಿನಿಂದ ಬರ್ಮ ಬಿಟ್ಟು ಹೈನಾನಿಗೆ ಹೋಗಿ, ಬರ್ಮದಲ್ಲಿ ವ್ಯವಸ್ಥಿತ ಹೋರಾಟವೆಬ್ಬಿಸುವ ಕುರಿತು ಸೈನಿಕರ ತರಬೇತಿ ಪಡೆಯುತ್ತಿದ್ದ. ಜಾಪಾನರು ಬರ್ಮಾ ನುಗ್ಗುವಾಗ ಮುಂಭಾಗದಲ್ಲಿದ್ದುದು ಇವರೇ 30 ಮಂದಿ.

ಬ. ರಾ. ಸೇನಾ ಸಂಘಟನೆ

ಜಾಪಾನೀ ಸೇನೆಯ ಮುಖ್ಯನಾ ತಮ್ಮ ರಾಷ್ಟ್ರಾಭಿಮಾನೀ ತರುಣ ಮುಖಂಡರಿಯವದನ್ನು ಕಂಡ ಬರ್ಮೀಯರು ಆ ಸೇನೆಗೆ ಸುಸ್ವಾಗತ ಬಯಸಿದರು; ಕೈಯೆತ್ತಿ ಸ್ವಾಗತಿಸಿದರು. ಜಾಪಾನೀ ಸೇನೆಯ ಕಾರ್ಯವು ಅತಿ ಸುಲಭವಾಗಿ ನೆರವೇರುತ್ತಾ ಹೋಯಿತು. ಉತ್ಸಾಹೀ ಬರ್ಮೀಯ ತರುಣರು-ರೈತರು ಕೆಲಸಗಾರರು-ಈ ತ್ರಿದಶಯೋಧರನ್ನು ಕೂಡಿಕೊಂಡರು. ಹೀಗೆ ಆ ಸೇನೆ ಮುಂದೊತ್ತುತ್ತಾ ಬಂದಂತೆ ಅದಕ್ಕೆ ಸೇರಿಕೊಂಡ ಬರ್ಮೀ ತರುಣರ ಸಂಖ್ಯೆ 10 ಸಾವಿರಕ್ಕೂ ಮಿಕ್ಕಿ ಆಂಗ್ ಸೇನನ ನಾಯಕತ್ವದಲ್ಲಿ ಇದೇ 'ಬರ್ಮೀಯ ಸ್ವತಂತ್ರ ಸೇನೆ'ಯಾಗಿ ಸಂಘಟನೆಗೊಂಡಿತು. ಬ್ರಿಟಿಷರಿಗೆ ಸೇರಿದ ಅಸ್ತಾವ್ಯದಲ್ಲಿ ಬ್ರಿಟಿಷ್ ವಿರುದ್ಧವಾಗಿ ಸ್ವಧರ್ಮತಃ ಸ್ಥಾಪನೆಗೊಂಡ ಸ್ವತಂತ್ರ ಸೇನೆಯೆಂದರೆ ಇದೇ. ಸುಭಾಷರ ನಾಯಕತ್ವದ ಹಿಂದೀ ರಾಷ್ಟ್ರೀಯ ಸೇನೆಯ ನಿರ್ಮಾಣವಾದುದು ಆ ಮೇಲೆ—1943ರಲ್ಲಿ! ಮೊನ್ನೆಯ ವರೆಗೂ ಬ್ರಿಟಿಷರಾ ಸೇನೆಯನ್ನು 'ಬರ್ಮಾ ದ್ರೋಹಿಗಳ ದಳ' ಎಂದೇ ಕರೆಯುತ್ತಿದ್ದರು. ಈ ಸೇನೆಯಿಂದ 1941-42ರಲ್ಲಿ ಬ್ರಿಟಿಷ್ ಸೇನೆಗಾಗಿದ್ದ ಹಾನಿ ಅಗಣಿತ. ಬರ್ಮಾ ಸ್ವತಂತ್ರ ಯೋಧರು ಜಾಪಾನರಿಗೆ ಸುದ್ದಿಗಳನ್ನು, ಸಂಗ್ರಹಿಸಿಕೊಡುತಿದ್ದರು.

ಆಂಗ್ ಸೇನರಿಗೆ ಮನ್ನಣೆ - ಸುಭಾಷರಿಗೆ ಮರಣ!

ಬೇರೆಯರಿಗೂ ತಿಳಿಯದಂತಹ ಗುಟ್ಟನ್ನು ತಿಳಿಸುತಿದ್ದರು, ಹಾಗು ತೋರಿಸುತ್ತಾ ಮುಂಭಾಗದಲ್ಲಿರುತಿದ್ದರು. ಅಂತೆಯೇ ಹಿಂಜರಿಯುತ್ತಿದ್ದ ಬ್ರಿಟಿಷ್ ಸೇನೆಗಳನ್ನು ಅಡ್ಡಗಟ್ಟಿ ಧ್ವಂಸಮಾಡಿದ್ದರು; ಅವರ ಸರಬರಾಯಿ ಸಥಗಳನ್ನು ಮೋಯಾಜಾಲ ದಿಂದೆಂಬಂತೆ ಕಡಿದು ನಿರ್ಗತಿಕರನ್ನಾಗಿಸಿ, ಸುತ್ತುಗಟ್ಟಿ ಹೊಡೆದಪ್ಪಳಿಸಿದ್ದರು, ಬರ್ಮದ ನೆಲವು ಬ್ರಿಟಿಷರ ಪಾಲಿಗೆ ಕಾದ ಕಾವಲಿಯಾಗುವಂತೆ ಮಾಡಿದುದು ಈ ಬರ್ಮ ರಾಷ್ಟ್ರೀಯ ಸೇನೆ ಹೊರತು ಜಪಾನರಲ್ಲ. ಈ ಸೇನೆಯ ಸಾಹಸವಲ್ಲವಾಗಿದ್ದರೆ ಬ್ರಿಟಿಷ್ ಸೇನೆ ಅಷ್ಟು ಬೇಗನೆ ಬರ್ಮದಿಂದ ಪಲಾಯನವಾಗುತಿರಲಿಲ್ಲ-ಜಾಪಾನೀ ಸೇನೆ ಪ್ರಗತಿ ಪಡೆಯುತಿರಲಿಲ್ಲ. ಇವರ ಕೈಯಲ್ಲೇ ಪ್ರಾಣಕೊಟ್ಟ ಬ್ರಿಟಿಷ್ ಯೋಧರ ಸಂಖ್ಯೆ ಬಹಳವಿದೆ. ಈ ರಾಷ್ಟ್ರೀಯ ಸೇನಾಧಿಕಾರೀ ಮಂಡಲದಲ್ಲಿ 'ಥಾಕಿನರು' ಎಂಬ ಉಗ್ರ ಬರ್ಮೀ ರಾಷ್ಟ್ರಾಭಿಮಾನೀ ತರುಣರೇ ಇದ್ದರು. ಈ ಸೇನೆಯ ಬಹು ಭಾಗವಾಗಿ ಮಾಜೀ ಥಕಾಯಿತರು ಮತ್ತು ಒಚ್ಚಾಳಿಗಳು ತುಂಬಿದ್ದರೆಂದೂ, ಅವರೀ ಸಂದರ್ಭವನ್ನು ತನ್ನ ಸ್ವಾರ್ಥ ಸಾಧನೆಗಾಗಿ ಉಪಯೋಗಿಸಿಕೊಂಡರೆಂದೂ ಬ್ರಿಟಿಷರ ಪ್ರಚಾರವಿದೆ.

ಬರ್ಮಾಕ್ರಮಣದ ನಂತರ—

ಜಾಪಾನರು ಬರ್ಮವನ್ನು ಪೂರ್ಣವಾಗಿ ಆಕ್ರಮಿಸಿಕೊಂಡ ನಂತರದ ಕೆಲವು ತಿಂಗಳುಗಳ ವರೆಗೆ ಈ ಸೇನೆಯು ಬರ್ಮದ ಆಡಳಿತೆಗೆ ಸಹಾಯ ಮಾಡಿತು ದೇಶದ ಲ್ಲೆಲ್ಲಾ ಕೂಡಲೇ ಸುವ್ಯವಸ್ಥೆ ಸ್ಥಾಪನೆಯಾದುದು ಬ ರಾ. ಸೇನೆಯ ಸಹಾಯ ದಿಂದಲೇ. 1942ನೇ ಜೂನಿನಲ್ಲಿ, ಅಲ್ಲಿಯ ಜಾಪಾನ್ ಸೇನಾನಿಯಾಗಿದ್ದ ಶೋಜಿರಾ ಇಷಾ ಈ ಸೇನೆಯನ್ನು ಬರ್ಮಾಸ್ತು ಪಡಿಸಲಿಚ್ಛಿಸಿದ. ಡಾ। ಬಾ ಮಾನ ಪ್ರಧಾನಿತ್ವ ದಲ್ಲಿ ಜಾಪಾನರ ಕೈಕೆಳಗೆ ಬರ್ಮೀಯ ನಾಗರಿಕ ಸರಕಾರ ಸ್ಥಾಪಿಸಲ್ಪಟ್ಟೊಡನೆ ಬರ್ಮಾ ಸ್ವತಂತ್ರ ಸೇನೆ ವಿಸರ್ಜಿಸಲ್ಪಟ್ಟು 1943ನೇ ಆಗೋಸ್ತಿನಲ್ಲಿ 'ಬರ್ಮಾ ರಕ್ಷಣಾ ಸೇನೆ'ಯ ರಚನೆಯಾಯಿತು ಆಂಗ್ ಸೇನರೇ ಈ ಸೇನೆಯ ಕಮಾಂಡರ್ ಆಗಿದ್ದರೆಲ್ಲದೆ ಮೊದಲಿನ ನಾಯಕರೂ ಯೋಧರೂ ಇದರಲ್ಲಿಯೂ ಇದ್ದರು ಆಂಗ್ ಸೇನರು ಬರ್ಮದಲ್ಲೆಲ್ಲಾ ತರಬೇತಿ ಕೇಂದ್ರಗಳನ್ನು ರಚಿಸಿ, ಸಪ್ತ ಸಂಘಟನೆಯಿಂದ ಈ ರಾಷ್ಟ್ರೀಯ ದಳವನ್ನು ಮತ್ತಷ್ಟು ಬಲಗೊಳಿಸಿದರು. ಆಗ ಡಾ। ಬಾ ಮಾ (ಈಗ ಸುಭಾಷರಂತೆ ಇವರೂ ಕಾಣೆಯಾಗಿದ್ದಾರೆ.) ಸರಕಾರದ ಕೈಕೆಳಗೆ ಈ ಸೇನೆ ತನ್ನ ಕಾರ್ಯ ನಿರ್ವಹಿಸಬೇಕಾಗಿತ್ತು. 1945ನೇ ಆಗೋಸ್ತಿನಲ್ಲಿ ಬರ್ಮದ ಸ್ವಾತಂತ್ರ್ಯ ಘೋಷಣೆಯಾಯಿತು ಆಂದಿನಿಂದ ಇದಕ್ಕೆ 'ಬರ್ಮಾ ರಾಷ್ಟ್ರೀಯ ಸೇನೆ' ಎಂಬ ನಾಮಕರಣವಾಯಿತು. ಡಾ। ಬಾಮಾರ ಸ್ವತಂತ್ರ ಸರಕಾರದಲ್ಲಿ ಆಂಗ್ ಸೇನರು ರಾಷ್ಟ್ರ ರಕ್ಷಣಾ ಮಂತ್ರಿಯಾಗಿ ನೇಮಕಗೊಂಡುದರಿಂದ ಈ ಸೇನೆಯ ಪ್ರತ್ಯಕ್ಷ ನಾಯಕತ್ವವನ್ನು ಅಂದೇ ಬಿಟ್ಟು ಕೊಟ್ಟರು. ಬದಲಿಗೆ ಅದು ವರೆಗೂ ಆಂಗ್ ಸೇನರ ಬಲಗೈಯಂತಿದ್ದು ಸೇನಾ ಸ್ಟಾಫ್ ನಾಯಕರಾಗಿದ್ದ ಕರ್ನಲ್ ನೇವಿನ್ ಸೇನಾನಿಯಾದರು

ಆ ಮೇಲಿನ ಅಂತರ್ಯಾಗ!

ಈ ಅವಧಿಯೊಳಗೆ ಪರಿಸ್ಥಿತಿ ಕೆಡುತ್ತಾ ಬಂದಿತ್ತು. ಬರ್ಮಾ ರಾಷ್ಟ್ರೀಯ ಸೇನೆಗೆ ಮುಖ್ಯ ಮೂರು ಕಾರಣಗಳಿಂದಾಗಿ ಜಪಾನರ ಮೇಲೆ ದ್ವೇಷ ಮೂಡಹತ್ತಿದ್ದಿತು. ಒಂದನೆಯದಾಗಿ, ತಾವು ಮೇಲೆಂಬ ಭಾವನೆಯಿಂದ ಜಪಾನೀ ಆಕ್ರಮಣ ಸೇನೆಯು ಬರ್ಮೀಯರನ್ನು ತಾತ್ಸಾರದಿಂದ ನೋಡುತ್ತಿತ್ತಲ್ಲದೆ ಸಾಂಘಿಕ ಅತ್ಯಾಚಾರಗಳನ್ನೂ ಮಾಡುತಿತ್ತು. ಅವರು ಬರ್ಮೀಯರಕಚ್ಚಿ, ಆಹಾರವಸ್ತು, ದನಕರುಗಳು, ಕೆಲಸಗಾರರನ್ನೆಲ್ಲಾ ಸೇನೋಪಯೋಗಕ್ಕಾಗಿ ಜುಲುಮೆಯಿಂದೊಯ್ಯುತಿದ್ದರು. ಬರ್ಮೀಯರ ಅಲ್ಪಾಪರಾಧಕ್ಕೂ ಕಠಿಣ ಶಿಕ್ಷೆಯೀಯುತಿದ್ದರು. ಈ ಅತ್ಯಾಚಾರಗಳನ್ನು ತಡೆಗಟ್ಟದಿದ್ದಲ್ಲಿ ಬರ್ಮಾ ರಾಷ್ಟ್ರೀಯ ಸೇನೆಯು ಜನತಾಗೌರವವನ್ನು ಕಳೆಕೊಳ್ಳುವ ಅಪಾಯವಿದ್ದಿತು ಬರ್ಮಕ್ಕೆ ನಿಜವಾದ ಸ್ವಾತಂತ್ರ್ಯ ಕೊಡುವ ಇಚ್ಛೆ ಜಾಪಾನರಿಗಿಲ್ಲವೆಂಬ ಗುಟ್ಟು ಗೊತ್ತಾಗಿ, ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯಲಾಗುವಷ್ಟು ಸುಲಭದಲ್ಲಿ ಜಪಾನರಿಂದ ಪಡೆಯುವದಸಾಧ್ಯವೆಂಬುದು ಮಂದಬುದ್ಧಿಯಿತು ಎರಡನೆಯದಾಗಿ ಬರ್ಮಾ ರಾಷ್ಟ್ರೀಯ ಸೇನೆಯನ್ನು ಉಪಯೋಗಿಸುವ ಕಾರಿತು ಆಂಗ್ ಸೇನರಿಗೂ ಪ್ರಧಾನಿ ಡಾ। ಬಾಮಾರಿಗೂ ತೀವ್ರ ಮತಭೇದ ಹುಟ್ಟಿ ಆಂಗ್ ಸೇನ್ ಅಧಿಕಾರದಿಂದ ಹೊರಬಿದ್ದರು. ಮೂರನೆಯದಾಗಿ ಯುದ್ಧಗತಿಯು ಜಾಪಾನರಿಗೆ ಪ್ರತಿಕೂಲವಾಗಹತ್ತಿದುದನ್ನು ಬರ್ಮಾ ರಾಷ್ಟ್ರೀಯ ಸೇನೆಯ ನಾಯಕರು ಸ್ಪಷ್ಟವಾಗಿ ತಿಳಿದಿದ್ದರು. ಹೀಗಾಗಿ ಆಂಗ್ ಸೇನ್ ಹಿಂದುಸ್ಥಾನದ ಲ್ಲಿದ್ದ ಬ್ರಿಟಿಷ ಸೇನಾ ಕಚೇರಿಯೊಡನೆ ಗುಪ್ತವಾಗಿ ಸಂಧಾನ ವ್ಯವಹಾರ ನಡಿಸಹತ್ತಿದರು ತಮ್ಮನ್ನು ಬ್ರಿಟಿಷ್ ಸೇನೆಗೆ ಸೇರಿಸಿಕೊಳ್ಳಬೇಕೆಂಬ ಸೂಚನೆಯು ಬ್ರಿಟಿಷರು ಬರ್ಮಾ ನುಗ್ಗುವ ಮೊದಲೇ ಈ ರಾಷ್ಟ್ರೀಯ ಸೇನಾಪತಿಯಿಂದ ಒಂದಿತ್ತು.

ಬ್ರಿಟಿಷ್ ಪಕ್ಷದಲ್ಲಿ!

ಆದರೆ ಈ ಬರ್ಮೀ ಸ್ವತಂತ್ರಸೇನೆಯು ತಮಗೆ ಮಾಡಿದ್ದ ಅತ್ಯಾಚಾರಗಳನ್ನು ಬ್ರಿಟಿಷ್ ಸೇನಾನಿಗಳು ಮರೆತಿರಲಿಲ್ಲ. ಆದಕ್ಕೆ ತೀವ್ರ ಪ್ರತೀಕಾರ ಮಾಡಬೇಕೆಂಬ ಬಯಕೆ ಬ್ರಿಟಿಷರೊಳಗೆ ಕುದಿಯುತಿತ್ತು. ಮಾತ್ರವಲ್ಲ, ಈ ಸೇನೆಯು ಬರ್ಮದ ಪುನರಾಕ್ರಮಣದಲ್ಲಿ ತಮಗೆ ಸಹಾಯಮಾಡಲೆಷ್ಟರ ಮಟ್ಟಿಗೆ ಸಾಧ್ಯವೆಂಬ ಸಂದೇಹ ಕೂಡಾ ಬಂದಿತ್ತು. ಎಲ್ಲಕ್ಕಿಂತ ದೊಡ್ಡ ಹೆದರಿಕೆಯೆಂದರೆ ಇವರನ್ನು ಕೂಡಿಕೊಂಡು ಬರ್ಮವನ್ನು ಗೆದ್ದರೂ, ಆ ಮೇಲೆ ಬ್ರಿಟಿಷ್ ಅಧಿಕಾರವು ಸುಗಮವಾಗಿ ಸಾಗದಂತೆ ಈ ಸೇನೆಯೇ ಕಂಟಕವಾಗಲಾರದೇ ಎಂಬುದು! ಆದರೆ ಬರ್ಮಾದ ಪರಿಸ್ಥಿತಿಯೆಷ್ಟು ಕಠಿಣವಾಗಿತ್ತೆಂದರೆ ಈ ರಾಷ್ಟ್ರೀಯ ಸೇನೆಯ ಸಹಾಯ ವಿನಹ ಬ್ರಿಟಿಷರು ಬರ್ಮಾಗೆಲ್ಲುವದ ಸಾಧ್ಯನೇಬುದು ಮನವರಿಕೆಯಾದ್ದರಿಂದ ಕೊನೆಗೆ ಅದರ ನೈತ್ರೀ ಸೂಚನೆ ಅಂಗೀಕಾರ ಪಡೆಯಿತು ಕಟ್ಟಕಡೆಗೆ ಈ ಸೇನೆಯ ಮೇಲಿಟ್ಟ ವಿಶ್ವಾಸ ನಾರ್ಥಕವಾದುದಷ್ಟೆ ಅಲ್ಲ, ಅದು ಜಾಪಾನರಿರಿಂದಾಗಿ ತಮಗಿತ್ತ ಅಮೂಲ್ಯ ಸಹಾಯ, ತೋರಿಸಿದ ಅದ್ಭುತ ಸಾಹಸಗಳಿಗಾಗಿ ಲೋರ್ಡ್ ಲೂಯಿಸ್ ಮೌಂಟ್‌ಬ್ಯಾಟನರೇ ಮೊದಲಾದ ಬ್ರಿಟಿಷ್ ಸೇನಾನಾಯಕರು ಹಲವು ಬಾರಿ ಮುಕ್ತ ಕಂಠದಿಂದ ಹೊಗಳಿದ್ದಾರೆ. ಮೊದಲೇ ಒಪ್ಪಂದವಾದಂತೆ ಬ್ರಿಟಿಷ್ ಸೇನೆ ಬರ್ಮಾ ನುಗ್ಗಿ ವೀರ್ಯಲಾವಣ್ಯವನ್ನು ಗೆದ್ದೊಡನೆ ಬರ್ಮೀಯ ರಾಷ್ಟ್ರೀಯ ಸೇನೆ ಬ್ರಿಟಿಷ್ ಸೇನೆಯನ್ನು ಕೂಡಿಕೊಂಡಿತು. ಜಾಪಾನರ ವಿರುದ್ಧ ತಿರುಗಿ ಬಿದ್ದು ಅವರನ್ನು ಹೊಡೆದೋಡಿಸಿತು. ಇಂದು ಜಾಪಾನೀ ಸೇನೆಯು ಅಗ್ಗಾನಿಯಾಗಿ ಹೋಗಿ ಬ್ರಿಟಿಷರನ್ನೇ ದಿಕ್ಕೆಡಿಸಿದ್ದಂತೆ, ಇಂದು ಬ್ರಿಟಿಷ್ ಸೇನೆಯು ನೂಗದರ್ಶಿಯಾಗಿ ಸಾಗಿ ಜಾಪಾನರನ್ನೋಡಿಸಿತು ಆಗಲೂ ಈಗಲೂ ಬರ್ಮಾಗೆದ್ದವರು ಈ ಬರ್ಮೀಯರೆ. ಬರ್ಮದ ಜನತೆ ಈ ಸ್ವರಾಷ್ಟ್ರಾಭಿಮಾನಿಗಳಿಗಲ್ಲದೆ ಹರ ರಾಷ್ಟ್ರೀಯರಿಗೂಲಿಯುಪಚರಿಲಿಲ್ಲ. ಇತ್ತೀಚೆಗೆ ದಕ್ಷಿಣಪೂರ್ವ ವಿಷ್ಯಾದಿ ಮಿತ್ರ ಸೇನಾಸಿ ಲೋರ್ಡ್ ಲೂಯಿಸ್ ಮೌಂಟ್ ಬ್ಯಾಟನ್ ಮತ್ತು ಬರ್ಮಾ ರಾಷ್ಟ್ರೀಯ ಸೇನೆಯ ನಾಯಕ ಮೇಜರ್ ಜನರಲ್ ಆಂಗ್ ಸೇನರೊಳಗೆ ಕಾಂಡಿಯಲ್ಲೊಂದು ಒಪ್ಪಂದ ನಡೆದು, ಈ ರಾಷ್ಟ್ರೀಯ ಸೇನೆಯನ್ನು ತನ್ನ ಕ್ರಮಬದ್ಧ ಸೇನೆಯ ಒಂದು ಅಂಗವಾಗಿ ಬ್ರಿಟಿಷರು ಜೋಡಿಸಿಕೊಂಡಿದ್ದಾರೆ ಆ 'ದ್ರೋಹಿ ಸೇನೆ' 'ದರೋಡೆಗಾರರ ದಳ'ವನ್ನು ತಮ್ಮಲ್ಲಿ ವಿಕೀಕರಿಸಿ ಕೊಂಡಿದ್ದಾರೆ!

ಭಾ. ರಾ ಸೇನೆ ಮತ್ತು ಬ ರಾ. ಸೇನೆಯೊಳಗಿನ ವ್ಯತ್ಯಾಸ

ಈ ಬರ್ಮಾ ರಾಷ್ಟ್ರೀಯ ಸೇನೆಯು ಮಾಡಿರಿಯಲ್ಲೀ, ಇಂಡಿಯಾ ರಾಷ್ಟ್ರೀಯ ಸೇನೆಗಳಿಂದಲೇ ಸ್ಥಾಪಿಸಲ್ಪಟ್ಟಿದ್ದು ಬ್ರಿಟಿಷರಿಗೆ ಅದರಲ್ಲು ಹಾನಿಯೊಡ್ಡಿದ್ದ ಭಾರತ ರಾಷ್ಟ್ರೀಯ ಸೇನೆಯೀಗ ಕೋರ್ಟ್ ಮಾರ್ಶಲ್ ವಿಚಾರಣೆಗೊಳಗಾಗಿದೆ. ಆದರೆ ಬ್ರಿಟಿಷರನ್ನು ಬರ್ಮಾದಿಂದೋಡಿಸಿದ್ದ (ಕೊನೆಗದು ಜಪಾನರನ್ನೋಡಿಸಲು ಸೆರನಾಯಿತೇಬಿಡಿ) ಬರ್ಮಾ ರಾಷ್ಟ್ರೀಯ ಸೇನೆ ಇಂದು ಬ್ರಿಟಿಷ್ ಸೇನಾ ದರ್ಜೆಗೇರಿದೆ! ಈ ವ್ಯತ್ಯಾಸಕ್ಕೇನು ಕಾರಣ ಬಲ್ಲಿರಿ?

ಬ. ರಾ. ಸೇನೆ ಸ್ವರಾಷ್ಟ್ರದಲ್ಲಿ ನಿರ್ಮಾಣಗೊಂಡಿತ್ತು; ಬರ್ಮೀಯರೆಲ್ಲರ ಬೆಂಬಲ ಅದಕ್ಕಿತ್ತು. ಆದ್ದರಿಂದ ಪ್ರಧಮತಃ ಜಪಾನರಿಗೆ ಕೊನೆಯಲ್ಲಿ ಬ್ರಿಟಿಷರಿಗೆ ಅದರ ಸಹಾಯ ಪಡೆಯುವೆ ಗತ್ಯಂತರವಿರಲಿಲ್ಲ. ಆದರೆ ಭಾ. ರಾ ಸೇನ ಭಾರತದ ಹೊರಗೆ ನಿರ್ಮಾಣವಾಯಿತ, ಭಾರತೀಯರ ನಿಕಟ ಸಂಬಂಧವಿಟ್ಟುಕೊಳ್ಳಲಾಗದ್ದಿರಲಿಲ್ಲ.

ಬರ್ಮಾ ರಣರಂಗವಾಯಿತು ಬರ್ಮೀಯ ರಾಷ್ಟ್ರೀಯ ಸೇನೆಗೆ ಆಸ್ತಿತ್ವ ದೊರೆಯಿತು ಭಾರತ ರಣರಂಗವಾಯಿದೂ ಇಲ್ಲ; ತಮ್ಮ ಹೋರಾಟಕ್ಕೆ ಪೂರಕವಾಗಿ ಹಿಂದುಸ್ಥಾನದೊಳಗೆ ಬಂಗೆಯೇಳಬಹುದೆಂಬ ಸುಳಿ ಸರ ಅಸೆಯೂ ಇರಲಿಲ್ಲ. ಆದ್ದರಿಂದ ಭಾರತ ರಾಷ್ಟ್ರೀಯ ಸೇನೆಗೆ ಸ್ವಾಮ್ಯಾಸ್ತಿತೆ ದೊರೆಯಲಿಲ್ಲ.

ಕೊನೆಯದಾಗಿ ಬರ್ಮೀಯರು ರಾಷ್ಟ್ರೀಯ ಸೇನಾ ನಾಯಕರಲ್ಲಿ ಧೈರ್ಯ, ಶೌರ್ಯ, ದೇಶಭಿಮಾನಗಳಿದ್ದಂತೆ ವ್ಯವಹಾರ ಜಾಣ್ಮೆ ಮತ್ತು ಸ್ವಸಂಗಾವಧಾನತೆಯೂ ಇದ್ದಿತು ಆದ್ದರಿಂದ ಯುದ್ಧಗತಿ ತಿರುಗಿದೊಡನೆ ಅವರು ಜಾಪಾನೀ ಪಾಳಯದಿಂದ ಬ್ರಿಟಿಷ್ ಪಾಳಯಕ್ಕೆ ಅಂತರ್ಯಾಗ ಹೊಡೆದರು. ಆದರೆ ಸುಭಾಸ್ ಚಂದ್ರರು ಕೊನೆಯ ವರೆಗೂ ಕಟ್ಟಿಗ್ರಹರಿಮಾರಿತನ ಪ್ರದರ್ಶಿಸಿ ವೈರಿ ಕಡೆಯಲ್ಲೇ ಉಳಿದರು. ಹೀಗಾಗಿ ಬರ್ಮೀಯ ಸೇನೆಯ ಆಧಿಪತ್ಯವಿದ್ದ ಅಪಕಾರವಿತ್ತು ಕೊನೇ ಭಾಗದ ಉಪಕಾರದಿಂದ ಉಜ್ಜಿಹೋದರೆ, ಭಾರತೀಯ ಸೇನೆಯು ಅದಿಯಿಂದ ಅಂತ್ಯದ ವರೆಗೂ ಅಪಕಾರಿಯಾಗಿಯೇ ಉಳಿಯಿತು.

ಹೀಗಾಗಿ ಬ ರಾ ಯೋಧರು ಸೆರೆಪಟ್ಟಕ್ಕೆಳಿದರು, ಭಾ. ರಾ. ಸೈನಿಕರು ಕಾರಾಗೃಹ ಸೇರಿದರು!

ಆದರೆ ನಾವು ಮರೆಯಬಾರದು-ಇವೆರಡು ಸೇನೆಗಳೂ ಸ್ವದೇಶಾಭಿಮಾನದಿಂದ ಸ್ವಾತಂತ್ರ್ಯ ಸಾಧನೆಯ ಏಕಮಾತ್ರ ಬಯಕೆಯಿಂದ ನಿರ್ಮಾಣಗೊಂಡಿದ್ದುವು, ಅದಕ್ಕಾಗಿ ಅಪಾರವಾದ ಕಷ್ಟನಷ್ಟಗಳನ್ನು ಸಹಿಸಿ ಹೋರಾಡಿದ್ದವು ಸಂದಿಗ್ಧ ಕಾಲಗಳಲ್ಲಿ ಅಯಾಮ ಕಡೆಯ ತಂತ್ರವನ್ನು ದೇಶೀಯರ ರಕ್ಷಣೆಯಾವಿದ್ದವು

ಇನ್ನು ಯಾವ ವಿಧಿಯೇ ಒದಗಲಿ— ಸುಭಾಸ್ ಯೋಧರು ಭಾರತೀಯರಿಗೆ ಚಿರಸ್ಮರಣೆ ಯರು. ಆ ದೃಷ್ಟಿಯಿಂದ ಸಾರ್ಥಕಜೀವಿಗಳು!

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at – **Udipi, Mangalore, Katapadi, Kanhangad, Kinnigoli, Nileshwar and Suranthkal South Canara.**

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guding PRINCIPLES and the outstanding features of our UNIFORM SERVICE.

Every kind of upto date Banking business facility is provided by this POPULAR and COSMOPOLITAN institution on sound lines and advantageous terms

Please ascertain business particulars from any of our Offices at the above places.

Date 25th April 1945

The Canara Banking Corporation Limited.

(Incorporated in British India, with limited Liability)

Estd 1906

Head Office: **UDIPI**, South Kanara.

ANNOUNCEMENT.

A branch of the BANK will shortly be opened at "COCHIN".

ಉಡುಪಿ, ಗುರುವಾರ ೨೫-೧೦-'೪೫.

ಎಂಡೋಮೆಂಟ್ಸ್ ಕಾನೂನು ತಿದ್ದುಪಡಿ ಮಸೂದೆ.

ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ಕಾನೂನಿಗೊಂದು ತಿದ್ದುಪಡಿಯನ್ನು ಮದ್ರಾಸ್ ಸರಕಾರವು ಇತ್ತೀಚೆಗೆ ಪ್ರಕಟಿಸಿದೆ. ಪ್ರಾಂತ್ಯದಲ್ಲಿ ಎಲ್ಲೆಲ್ಲಿ ಮಠಗಳಿವೆಯೋ ಅವೆಲ್ಲಾ ಕಡೆಗಳಿಂದಲೂ ಈ ಮಸೂದೆಗೆ ತೀವ್ರ ವಿರೋಧ ಪ್ರಕಟವಾಗುತ್ತಿದೆ ಇದು ಸ್ವಾಭಾವಿಕ ಇದಕ್ಕಿಂತಲೂ ಹೆಚ್ಚಿನ ವಿರೋಧವನ್ನು ನಿರೀಕ್ಷಿಸಿಯೇ ಗವರ್ನರರ ಸಲಹೆಗಾರರು ಈ ತಿದ್ದುಪಡಿಯನ್ನು ರೂಪಿಸಿರಬೇಕು. ಮಠ ದೇವಾಲಯಗಳಲ್ಲಿರುವವರು ವಸಿಷ್ಠ, ವಿಶ್ವಾಮಿತ್ರರೆಂದೆನಿಸಿಕೊಂಡರೂ ಗುರು, ಸ್ವಾಮಿಗಳ ಶಾಪಕ್ಕಂಜಿ, ಸರ್ವ ತ್ಯಾಗಮಾಡಿ ಅವರ ಆತಿರ್ವಾದವನ್ನು ಪಾರ್ಜಿಸುವ ಹರಿಶ್ಚಂದ್ರ, ರಾಮಚಂದ್ರರ ದೈರ್ಯಶ್ಥೈರ್ಯ ಇಂದಿನ ರಾಜ್ಯ ಸೂತ್ರವಿಲ್ಲ. ಸ್ವಾರ್ಥಕ್ಕೆ ಧಕ್ಕೆ ಬೀಳುವವರೆಬ್ಬಿಸುತ್ತಿರುವ ಹಾಹಾಕಾರದಿಂದ ಈಗಿನ ಸರಕಾರದ ಎದೆಕರಗುವಂತಿರದು. ಬೆಲೆ ಬಾಳುವದು ನ್ಯಾಯ ಪೂರ್ಣ ವಾದಕ್ಕೊರತು ಸ್ವಾರ್ಥದ ಕೂಗಾಟಕ್ಕಲ್ಲ ಆದ್ದರಿಂದ ಎಂಡೋಮೆಂಟ್ಸ್ ಕಾನೂನಿಗೆ ಸೂಚಿಸಲ್ಪಟ್ಟಿರುವ ಇಂದಿನ ತಿದ್ದುಪಡಿಯ ಗುಣಾವಗುಣಗಳೇನೆಂಬುದನ್ನು ಪ್ರಸ್ತುತ ತಕ್ಕಮಟ್ಟಿಗೆ ತಿಳಿದುಕೊಳ್ಳಬೇಕು. ದೇವಸ್ಥಾನದ ಆಡಳಿತೆಯನ್ನು ಸರಕಾರೀ ಹತೋಟಿಗೆ ತರುವ 'ಮದ್ರಾಸ್ ಹಿಂದೂ ರಿಲೀಜಿಯಸ್ ಎಂಡೋಮೆಂಟ್ಸ್ ಏಕ್ಟ್' ಬಂದದ್ದು 1927ರಲ್ಲಿ. ಅದು ಬರೆಗೂ ಮಠ ದೇವಾಲಯಗಳಿಗೆ ಮಂಡಾಧಿಪತಿಗಳು ಹಾಗೂ ಮೊಕ್ತೇಸರರೇ ಸರ್ವಾಧಿಕಾರಿಗಳಾಗಿದ್ದರು 1927ರ ಕಾನೂನಿನನ್ವಯ ಸ್ಥಾಪನೆಗೊಂಡ ಎಂಡೋಮೆಂಟ್ಸ್ ಬೋರ್ಡಿಗೆ ದೇವಸ್ಥಾನಗಳ ಆಡಳತಾಧಿಕಾರ ದೊರೆತರೂ ಮಠಗಳಮೇಲೆ ನೇರಾದ ಹತೋಟಿಯುರಲಿಲ್ಲ; ಕೆಲವು ದೇವಸ್ಥಾನಗಳೂ ಅದರ ಅಧಿಕಾರ ಕ್ಷೇತ್ರದಿಂದ ಹೊರಗಿದ್ದುವು. ತಮ್ಮ ಆಯವ್ಯಯ ಪಟ್ಟಿಯನ್ನು ಕಳುಹಿಕೊಡಬೇಕೆಂತೆ ಮಠಾಧಿಪತಿಗಳನ್ನು ಕೇಳುವ ಅಧಿಕಾರವು ಬೋರ್ಡಿಗೆ ಅಂದಿನಿಂದಲೇ ಇತ್ತು. ಆದರೆ ಆ ಆಯವ್ಯಯದಲ್ಲಿ ಬದಲಾವಣೆ ಮಾಡುವ ಅಥವಾ ಮಠಗಳ ಆಡಳಿತೆಯಲ್ಲಿ ಕೈ ಹಾಕುವ ಅಧಿಕಾರ ಎಂಡೋಮೆಂಟ್ಸ್ ಬೋರ್ಡಿಗಿರಲಿಲ್ಲ. ಆದರೂ ಸಾಕಾದ ಕಾರಣಗಳಿದ್ದರೆ ಬೋರ್ಡು ತಾತ್ಕಾಲಿಕ ಉಪಟ್ರಸ್ಟಿಯನ್ನು ನೇಮಿಸುವ-ತನ್ನ ಯೋಜನೆಗಳನ್ನು ಮಠಗಳಿಗಾಗಿ ತಯಾರಿಸುವ—ಅಧಿಕಾರ ನಡೆದಿತ್ತು. ಈ ಯೋಜನೆಗಳ ರದ್ದತಿ ಅಥವಾ ತಿದ್ದುಪಡಿಗಾಗಿ ವ್ಯವಹರಿಸುವ ಅಧಿಕಾರ ಮಠಗಳಿಗೆ ದೊರೆತಿತ್ತು. 1935ರಲ್ಲಿ ಕಾನೂನಿನ ಈ ಭಾಗದಲ್ಲಿ ಸ್ವಾಮುಖ್ಯ ತಿದ್ದುಪಡಿಯಾಯಿತು ಮಠಗಳ ಮೇಲೂ, ವಿರಹಿತಗೊಳಿಸಿದ ದೇವಸ್ಥಾನಗಳ ಮೇಲೂ ಬೋರ್ಡು ಎಕ್ಸೆಕ್ಯೂಟಿವ್ ಆಫೀಸರನ್ನೇ ನೇಮಿಸಬಹುದೆಂದಾದುದಲ್ಲದೆ, ಈ ಅಧಿಕಾರಿಗೆ ಮಂಡಾಧಿಪತಿ ಅಥವಾ ದೇವಸ್ಥಾನಗಳ ಟ್ರಸ್ಟಿಗಳಮೇಲಿರುವ ಅಧಿಕಾರವೂ ಅದರಲ್ಲಿ ಸ್ವಸ್ಟೀಕರಿಸಲ್ಪಟ್ಟಿತು ಅಂತಹ ಮಠ ದೇವಾಲಯಗಳ ಕಟ್ಟುಪೆಗಳ ಹಾಗೂ ವಿಶಿಷ್ಟ ಉಂಬಳಿಗಳ ಸಂಬಂಧವಾಗಿ ತನ್ನ ಯೋಜನೆಗಳನ್ನು ತಯಾರಿಸುವ ಅಧಿಕಾರವೂ ಬೋರ್ಡಿಗೆ ದೊರೆತಿತ್ತು. ಆದರೆ ಆದರಲ್ಲಿ ಮಠಗಳಿಗೊಂದು ವಿನಾಯಿತಿ ದೊರೆತಿತ್ತು. 1935ರ ತಿದ್ದುಪಡಿ ಮಸೂದೆಯ ಅಜ್ಞಾಪನಕಾರಣದಲ್ಲಿ ಬೋರ್ಡಿನಿಂದ ಹೊರಗಿರುವ ದೇವಸ್ಥಾನಗಳ ಉಲ್ಲೇಖವಿತ್ತು ಹೊರತು ಮಠಗಳ ಪ್ರಸ್ತಾಪವಿರಲಿಲ್ಲ. ಹೀಗಾಗಿ ಇದು ಏರೆಗೂ ಎಂಡೋಮೆಂಟ್ಸ್ ಬೋರ್ಡಿನ ಪೂರ್ಣಾಧಿಕಾರ ಪ್ರಯೋಗವಾಗುತ್ತಿದ್ದುದು ದೇವಸ್ಥಾನಗಳ ಮೇಲೆ ಮಾತ್ರ; ಮಠಗಳನ್ನದು ಸ್ಪರ್ಶಿಸದಂತಿತ್ತು ಹೊರತು ಒಳಗೆ ಕಾಲಿಟ್ಟಿರಲಿಲ್ಲ. ಈ ಬಾರಿ ಪ್ರಕಟಿಸಲ್ಪಟ್ಟಿರುವ—ಮಂತ್ರಾನುಯಾಯಿಗಳ ಪ್ರಬಲ ವಿರೋಧಕ್ಕೀಡಾಗಿರುವ—1945ರ ತಿದ್ದುಪಡಿಯು ಮಠಗಳನ್ನೂ ದೇವಸ್ಥಾನಗಳ ಸಾಲಿಗೆ ಸೇರಿಸುತ್ತದೆ. ಮಠಗಳ ಉಳಿತಾಯ, ವಿಶಿಷ್ಟ ಉಂಬಳಿಗಳ ಸಮೇತ ಅದರ ಎಲ್ಲಾ ವಹಿವಾಟುಗಳ ಕುರಿತು ಸೂಚನೆ-ಆಜ್ಞೆಯೆಂದೇ ಹೇಳಬಹುದು—ಕೊಡುವ ಅಧಿಕಾರವು ಬೋರ್ಡಿನದಾಗುತ್ತದೆ. 1935ರ ತಿದ್ದುಪಡಿಯಂತೆ ಮಠಗಳ ಮತ್ತು ಬೋರ್ಡುಬಾಹಿರ ದೇವಾಲಯಗಳ ಮೇಲೆ ಎಕ್ಸಿಕ್ಯೂಟಿವ್ ಆಫೀಸರನನ್ನು ನೇಮಿಸುವ ಅಧಿಕಾರ ಬೋರ್ಡಿಗಿದ್ದರೆ 1945ರ ತಿದ್ದುಪಡಿಯಂತೆ ಅವನ ಜತೆಗೊಬ್ಬ ಮೆನೇಜರನನ್ನೂ ನೇಮಿಸಲೇಬೇಕೆಂದು ಬೋರ್ಡು ಒತ್ತಾಯಿಸಬಹುದು. ಈ ಮೆನೇಜರನೇ ಮಠಾಧಿಪತಿಗಳ ಅಂಕಿಗೊಳಗಾಗದ ಮುಂದಿನ ಪಾರುಪತ್ಯಗಾರ! ಹೀಗೆ ಹೊರಗಡೆಯಲ್ಲಿ ಎಗ್ಜಿಕ್ಯೂಟಿವ್ ಆಫೀಸರನ ಕಾವಲು, ಒಳಗಡೆಯಲ್ಲಿ ಮೇನೇಜರನ ಕೈವಾಡ—ಇವೆರಡು ಹೊಸ ಅಧಿಕಾರಗಳೇ ಮುಂದಿನ ಮಠಾಡಳಿತೆಯ ರಥದೆರಡು ಗಾಲಿಗಳು! ಆದರಲ್ಲೂ ಬಿಕ್ಕಟ್ಟಿಗವಕಾಶ ಬಹಳವಿದೆ ಬೋರ್ಡಿನಿಂದ ನೇಮಿಸಲ್ಪಡುವ ಎಕ್ಸಿಕ್ಯೂಟಿವ್ ಆಫೀಸರ್-ಮಠಾಧಿಪತಿಗಳಿಂದ ಆನಿರ್ವಾಹವಾಗಿ ನೇಮಕ ಪಡೆದು ಬೋರ್ಡಿನ ಅಂಕೆಯಲ್ಲಿರುವ ಮೆನೇಜರ್—ಈ ದ್ವಿದಳ ರಾಜ್ಯಭಾರ ಅಥವಾ ಕರ್ತರಿಯೊಳಗೆ ಸಿಲುಕಿ ಮಠಾಧಿಪಗಳು ಇನ್ನು ಮುಂದೆ ನಿಜಕ್ಕೂ ಧ್ಯಾನಮಗ್ನರಾಗಬೇಕಾದೀತು! ಮಠಗಳ ಪ್ರತಿಯೊಂದು ಗುಟ್ಟನ್ನೂ ವಿಚಾರಿಸುವ ಅಧಿಕಾರ ಬೋರ್ಡಿಗೀಮೂಲಕ ಬಂದಿತ್ತದೆ. ಕೆಲವು ಸಂದರ್ಭಗಳಲ್ಲಿ ಮಂಡಾಧಿಪತಿಗಳನ್ನು ದಂಡನೆಗೀಡು ಮಾಡುವ, ಅರ್ಥಾತ್ ಜುಲ್ಮಾನೆ ವಿಧಿಸುವ ವಿಶೇಷ ಹಕ್ಕನ್ನು ಈ ತಿದ್ದುಪಡಿಯನ್ವಯ ಪ್ರಾಂತಿಕ ಸರಕಾರಕ್ಕೆಯಲಾಗಿದೆ. ಮಠಾಧಿಪತಿಗಳ ಮೇಲೆ ವಿಶೇಷ ಕರುಹೊರಿಸುವ ಅಧಿಕಾರವೂ ಬಂದಿದೆ. ಅಂತೂ, 'ಆಧಿಪತಿಗಳಾಗಿದ್ದು ಇದು ನರಿಗೆ ನೀತಿ ನಡೆದಿದ ನಹಿವಾಟು ಬ್ರಹ್ಮಾಂಡದಷ್ಟಾಯಿತು, ಇನ್ನು ಅರ್ಚಕರಾಗಿದ್ದರೆ ಸಾಕು' ಎಂದು ಎಂಡೋಮೆಂಟ್ ಕಾನೂನಿನ ಇಂದಿನ ತಿದ್ದುಪಡಿ ಸೂಚನೆಯು ಮಠಾಧಿಪತಿಗಳನ್ನು ಮೂದಲಿಸುತ್ತಾ ಮುಂದೆ ಒಂದಿದೆ.

ಈ ಮಸೂದೆಯು ರೂಪರೇಖೆಯ ಕುರಿತು 'ಕೈತಪ್ಪಿತಲ್ಲಾ' ಎನ್ನುವವರ ಜೊಟ್ಟೆ ಹೊರತು, ಕಸಿಕರ ಪಡುವವರ ನಿಷೇಧದೊಂದು ಸೊಲ್ಲಾದರೂ ಕೇಳಬರುವದು ಅಸಂಭವ. ಆದರೆ ಮೂಲನ್ಯಾಯ ಪ್ರಶ್ನೆಯಿದೆ. ಮದ್ರಾಸಿನಲ್ಲಿ ಗವರ್ನರ್ ಆಳ್ವಿಕೆ ಆರಂಭವಾಗಿ ಐದಾರು ವರುಷಗಳು ಕಳೆದಿವೆ ಇನ್ನು ಅವಕ್ಕೆರುವದು ಐದಾರು ತಿಂಗಳ ಆಯುಷ್ಯ ಮಾತ್ರ ಅಷ್ಟರೊಳಗೆ ಚುನಾವಣೆಗಳು ನಡೆದು ಜನಪ್ರತಿನಿಧಿ ಸರಕಾರದ ಸ್ಥಾಪನೆಯಾಗಲಿರುವಾಗ, ಸಲಹೆಗಾರರ ಸರಕಾರಕ್ಕೆ ಕೊನೆಯ ಗಳಿಗೆಯಲ್ಲಿ ಈ ಸದ್ಬುದ್ಧಿ ಹುಟ್ಟಿದುದರ ಗುಟ್ಟೇನು? ಆದೇನೇ ಇರಲಿ, ಇಂತಹ ಸುಧಾರಣೆಯು ಜನಪ್ರತಿನಿಧ್ಯವುಳ್ಳ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲ್ಪಟ್ಟಿಲ್ಲದಕ್ಕೆಹೊಣೆಗಾರರಾದ ಮಂತ್ರಿಗಳಿಂದಲೇ ಹೊರಬೀಳಬೇಕಲ್ಲದೆ ಗವರ್ನರರ ಲೇಖನಿಯಿಂದ ಸಿಡಿಯಬಾರದು. ಪ್ರಕಟಿತ ಮಸೂದೆಯಲ್ಲಿರುವ ದೋಷಗಳನ್ನು ತೊಡೆದು ಹಾಕಿ, ಆದನ್ನು ಇನ್ನಷ್ಟು ಸರಿ ಪ್ರಾಮಾಣಿಕರಿಯಾಗಿ ರೂಪಿಸಿ, ಜನಪ್ರತಿನಿಧಿಗಳೇ ಮುಂದೆ ತರಬಲ್ಲರು. ಆಗ ವಿರೋಧ, ವಿವಾದ, ವಿಡಂಬರಗಳ ಬಿರಿಗಲ್ಲಿನಲ್ಲಿ ಪರೀಕ್ಷೆಸಲ್ಪಟ್ಟೇ ಅದು ಕಾನೂನಾಗಬಲ್ಲುದು. ಆ ರೀತಿ ಪಕ್ವವಾಗಬೇಕಾದ ವಿಷಯವಿದು; ಧಾನ್ಯ, ಧರಣಿ ನಿಯಂತ್ರಣಗಳಂತಹ ಅವಸರದ ಅವಶ್ಯಕತೆ ಈ ಮಟ್ಟಿಗಿಲ್ಲ. ಬೇಸಾಯೋತ್ಪತ್ತಿಯ ಮೇಲಿನ ಆದಾಯ ತೆರಿಗೆ ಹೊರಿಸುವ ಮಸೂದೆಯೊಂದು ಇದೇ ರೀತಿ ಈ ಮೊದಲೊನ್ಮೆ ಗವರ್ನರರಿಂದ ಪ್ರಕಟಿಸಲ್ಪಟ್ಟಿದ್ದರೂ, ವಿರೋಧಗಳನ್ನು ಗಮನಿಸಿ ಗವರ್ನರರಾ ಮಸೂದೆಯನ್ನು ಬದಿಗಿಟ್ಟು ಮುಂದಿನ ನ್ಯಾಯವಿಧಾಯಕ ಸಭೆಯ ಪಾಲಿಗೆ ಬಿಟ್ಟದ್ದಾರೆ. ಅಂತೆಯೇ ಈ ಮಸೂದೆಯ ಹಿಡಿಯಿಂದಲೂ ಗವರ್ನರರು ಕೈತೆಗೆಯಲಿ. 'ಇದು ನಮ್ಮ ಕೆಲಸ--ನಿಮ್ಮದಲ್ಲ' ಎಂಬೊಂದೇ ಕಾರಣದಿಂದ ಸರ್ವಥಾ ಸರಕಾರದ ಈ ತಿದ್ದುಪಡಿಯನ್ನು ನಿಷೇಧಿಸುತ್ತೇವೆ.

ನಾಂಗಳೂರು.

ಕರ್ನಾಟಕ ಸ್ತ್ರೀಸಂತಿಕ ಮಹಿಳಾ ಪರಿಷತ್ತು— ತಾ 21ರಲ್ಲು ನಾಂಜೆ ಶ್ರೀಮತಿ ಉಮಾ ಬಾಯಿ ಕುಂದಾಪುರ-ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಮತಿ ಲೀಲಾ ಬಾಳಿಗರ ಸ್ವಾಗತ ಗೀತೆಯಾನಂತರ ಶ್ರೀಮತಿ ಕಲ್ಯಾಣಿ ಶೆಟ್ಟಿಯವರ ಸೂಚನೆ ಮೇರೆಗೆ ಶ್ರೀಮತಿ ಕಮಲಮ್ಮಾ ಬಾಸಕ್ಕನವರು ಪರಿಷತ್ತನ್ನು ಉದ್ಘಾಟನೆ ಗೊಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷೆ ಶ್ರೀಮತಿ ಪಂಡಿತ ರಮಾ ಬಾಯಿಯವರು ಅಧ್ಯಕ್ಷರನ್ನೂ, ಸಭಿಕರೇ ನೊಲವಾಪವರನ್ನು ಸ್ವಾಗತಿಸಿದರು. ಬಡವರ ಕಡೆಗೆ ಮರ್ಲಕ್ಷ ನೀಡಬಾರವಾಗಿ ಶ್ರೀಮತಿ ಉಮಾ ಬಾಯಿಯವರ ವೀರ ವಾದಯಾಯಿತು ಅಖಿಲ ಭಾರತ ಮಹಿಳಾ ಸರಿಷತ್ತಿನ ಅಧ್ಯಕ್ಷೆಯರಾದ ಪ್ರೀಮತಿ ಕಮಲಾ ನೇಸಿಯವರೂ ಭಾಷಣಮಾಡಿದ್ದರು. ಪ ಕ. ಟಿಲ್ಲೆಯ ಸ್ತ್ರೀಯರು ನೂಡಬೇಕಾದ ಕಾರ್ಯಗಳು ಇನ್ನೆಷ್ಟೋ ಇವೆ ಎಂದು ಸೂಚಿಸಿದರು.

ಸಾಕ್ಷರತಾ ಪ್ರಚಾರ, ಹಿಂದೂ ಮುಸಲ್ಮಾನರ ಐಕ್ಯತೆಗೆ, ಇಂದೂಸ್ತಾನ್ ಸ್ಕೌಟ್ ಸಂಸ್ಥೆಗೆ ಬೆಂಬಲ ಇವೇಯುನ ಸ್ತ್ರೀಯರನ್ನು ಗಣಗಳಲ್ಲಿ ಕೆಲಸ ನೂಡಿಸಬಾರದೆನ್ನುವ, ಕನ್ನಡಾ ಚಾ ಸ್ವಾದಕ ಸಮಿತಿಯಲ್ಲಿ ಹೆಂಗಸರಿಗೆ ಅಧಿಕ ಸ್ಥಾನ, ಕಡ್ಡಾಯ ಶಿಕ್ಷಣ ಕೂಡಲೇ ಜಾರಿಯಾಗಬೇಕೆನ್ನುವ ಇವೇ ಮೊದಲಾದ ನಿರ್ಣಯಗಳು ಪಾಸಾದುವು. ನುಂಬಿನ ದಿನ ತಾ 20ರಲ್ಲು ನಾಂಜೆ ಭಗಿನೀ ಸಮಾಜದವರ ವಿವಿಧ ವಿನೋದಾವಳಿಗಳಿದ್ದುವು ಪರಿಷತ್ತಿನ ಅಧ್ಯಕ್ಷರಾಗಲು ಬಂದಿದ್ದ ಜ. ದುರ್ಗಾ ಬಾಯಿಯವರು, ನುಟಿಳಿಯಲು ಜಾಗೃತರಾಗಿ ಕಾರ್ಯರಂಗದಲ್ಲಿಳಿಯಬೇಕೆಂದು ಕೇಳಿಕೊಂಡರು.

ಶಿವಾರ- ಶಿವಾರ ಪಟ್ಟಾಯತ ಬೋರ್ಡಿನ ಸಾಮಾನ್ಯ ಸಭೆಯೊಂದು ತಾ. 13-10-45 ರಲ್ಲು ಪ್ರೆಸಿಡೆಂಟ್ ಶ್ರೀ. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿ ಒಂದು ಸಾರ್ವಜನಿಕ ಪುಸ್ತಕ ಭಂಡಾರವನ್ನು ತೆರೆಯುವುದೆಂದು, ತತ್ಸಂಬಂಧ ಬೇಕಾದ ಪುಸ್ತಕ, ಫರ್ನಿಚರ್‌ಗಳಿಗೆ ಹಣವನ್ನು ಮಂಜೂರು ನೂಡಲ್ಯಾತು ಇಲ್ಲಿಯ ಹೊಸ ಬಾವಿಗೆ ಕಲ್ಲು ಕಟ್ಟುವವರೆಗೆ ಬಾವಿ ಬೆಂದು ಪೂರ್ತಿ ಕಾಮಗಾರಿಗೆ ಬಾವಿ ಕೆಲಸವನ್ನು ಎಸ್ಟಿಮೇಟು ಪಣ Rs. 2000. ಪಲ್ಲಿ ಸೇಕಡಾ 3½ ಕಡಿಮೆಯಂತೆ ಬಾಯಂ ಮಾಡಲ್ಯಾತು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 721 '5 in os 319/38.

ರಾಮಕೃಷ್ಣ ಭಟ್ಟ 2ನೇ ಪಾರ್ಟಿ-ನೀನೇರ ಅರ್ಜಿದಾರ

ಸುಬ್ರಾಯ ಭಟ್ಟ ಸಹಾ ಎದ್ರಿರು

3ನೇ ಎದ್ರಿ ರಂಕಪ್ಪ ನಾರಾಯಣ ಭಟ್ಟವಾ ಸುವರ್ಣ ಜಟ್ಟಿ ಮಂಗಳೂರು ತಾಲ್ಲೂಕು ಉಳ್ಳಾಲ ಕೈಮ ಗ್ರಾಮ

ಇವರಿಗೆ ಕೋರ್ಟಿಗೆ ಹ್ಯಂ ಪ್ರಕಾರ ಈ ನೂಲಕ ತಿಳಿಯಪಡಿಸುವದೇನೆಂದ್ರೆ :

ಮೇಲ್ಕಂಡ os. 319/48ನೇ ಪ್ಯಾಜ್ಯದಲ್ಲಿ R I. A. 1540/38ನೇ ಅರ್ಜಿ ಪ್ಲಾಂ ಪ್ರಕಾರ ವಾದಾ ಆಸ್ತಿಗೆ ರಿಸೀವರನಾಗಿ ನೇಮಿಸಲ್ಪಟ್ಟ ಅರ್ಜಿದಾರ (2ನೇ ಪಾರ್ಟಿ)ನು, ಸದ್ರಿ ರಿಸೀವರಿಕೆಯಿಂದ ತನ್ನನ್ನು ಡಿಸ್ಚಾರ್ಜು ಮಾಡಬೇಕೆಂತ ಎನ್ನುವರಿ ಕೊಟ್ಟ ಮೇಲ್ಕಂಡ ಅರ್ಜಿಯು ತಾ. 27-10 1945ಕ್ಕೆ ಇಟ್ಟುಗುವದೆಂತಲೂ, ಆ ಕಾರಿತು ನಿಮಗೇನಾದರೂ, ಆಕ್ಷೇಪ ಇದ್ರೆ ಸದ್ರಿ ವ್ಯಾದೆ ದಿನ ಪೂರ್ವಾಹ್ನ ಗಂಟೆ 10ಕ್ಕೆ ನೀವು ಸ್ವತಃಹ ಯಾ ವಕೀಲ ದ್ವಾರಾ ಕೋರ್ಟು ಮುಂದೆ ಹಾಜ್ರಾಗಿ ಉಡಿಹರಿಸತಕ್ಕದ್ದೆಂತಲೂ, ತಪ್ಪಿದ್ರೆ ನಿಮ್ಮನ್ನು ಶಿಸ್ತಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾಗುತ್ತದೆಂತ್ತ ಸಹಾ ಈ ಮೂಲಕ ಏಮಗೆ ತಿಳಿಯಪಡ್ಸಿಯದೆ.

M. Sadashiva Rao,
Pleader for Petitioner.

Puttur-
13-4-45

ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಉಮೇದ್ವಾರಿಗಳು.

ಪೂರ್ವ ಕರಾವಳಿಯಲ್ಲಿ ಬಿರುಗಾಳೀ ಅನಾಹುತ!

'ಅಪೂರ್ಣ ಹಾಗೂ ಸಿಂಕುಚಿತ ಮತದಾನ ಸದ್ಧತಿಯಿರುವ ಈ ಚುನಾವಣೆಯ ದರ್ಥಕವಿದ್ದರೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಏಕೋದ್ದೇಶದಿಂದ ಚುನಾವಣೆಯಲ್ಲಿ ಸ್ಪರ್ಧಿಸಬೇಕು' ಎಂಬ ಜೊಂಬಾಯಿ ಪ್ರಾಂತ. ಕಾಂಗ್ರೆಸ್ ಸಮಿತಿಯ ನಿರ್ಧಾರಾನುಸಾರವಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನೇಮಿಸಿದ್ದಕೇಂದ್ರ ಪಾರ್ಲಿಮೆಂಟೀ ಬೋರ್ಡು ಪೂನೆಯಲ್ಲಿ ಸೇರಿ ಇದೇ ತಾ. 21ರಲ್ಲಿ ಕೇಂದ್ರ ಎಸೆಂಬ್ಲಿಯ 11 ಸ್ಥಾನಗಳಿಗೆ ಕಾಂಗ್ರೆಸ್ ಉಮೇದ್ವಾರಿಗಳನ್ನು ನೇಮಿಸಿದೆ. ಈ ಬೋರ್ಡಿನಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರೀ ಪ್ರಮುಖ ಸರದಾರ್ ಪಟೇಲರು ಸೂತ್ರಧಾರಿಗಳಾಗಿ, ಮೌಲಾನಾ ಆಜಾದ್, ಬಾಬೂ ರಾಜೇಂದ್ರ ಪ್ರಸಾದ್, ಗೋವಿಂದ ವಲ್ಲಭ ಪಂತ್, ಆಸಫ್ ಅಲಿ, ಪಟ್ಟಾಭಿ ಸೀತಾರಾಮಯ್ಯ ಶಂಕರರಾವ್ ದೇವೋ ಇದ್ದಾರೆ ಸದರ್ಹರು ಪ್ರಾಂತಿಕ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡ್‌ಗಳಿಂದ ಉಮೇದ್ವಾರಿಗಳ ಶಿಫಾರಸು ಪತ್ರಗಳನ್ನು ಕೇಳಿದ್ದರು. ಬಂದ ಅರ್ಜಿಗಳಲ್ಲಿ 41ನ್ನು ಕೇಂದ್ರ ಸಮಿತಿಯು ಶಿಫಾರಸುಮಾಡಿದೆ ಪೂನೆಯಲ್ಲಿ ಸೇರಿದ ಸಮಿತಿ ಸಭೆಗೆ ಪಟೇಲ್, ಪಟ್ಟಾಭಿ, ಶಂಕರರಾವ್ ದೇವೋ ಮಾತ್ರ ಬಂದಿದ್ದರು. ಮೌ ಆಜಾದರು ದೇಹಾಲಸ್ಯದಿಂದ ಬಂದಿರಲಿಲ್ಲ, ಇತರ ಸದಸ್ಯರಿಗೆ ಕಾರ್ಯಬಾಹುಳ್ಯದಿಂದ ಬರಲಾಗಲಿಲ್ಲ.

ಕಾಂಗ್ರೆಸ್ ಉಮೇದ್ವಾರಿಗಳು

ಮದ್ರಾಸ್ ಪ್ರಾಂತ್ಯಕ್ಕೆ

ಗಂಜಾಮ್, ವಿಶಾಖಪಟ್ಟಣಂ ಮುಸಲ್ಮಾನೇತರ ಮತದಾರ ಕ್ಷೇತ್ರ—ಶ್ರೀ. ಎನ್. ನಾರಾಯಣ ಮೂರ್ತಿ ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಲ್ಲೆಗಳು ಮತ್ತು ಕೃಷ್ಣಾ ಮುಸಲ್ಮಾನೇತರ ಮತದಾರ ಕ್ಷೇತ್ರ—ಶ್ರೀ ವಿ ಗಂಗಾರಾಜು. ಗುಂಟೂರು ಮತ್ತು ನೆಲ್ಲೂರು ಮುಸಲ್ಮಾನೇತರ ಮತದಾರ ಕ್ಷೇತ್ರ—ಶ್ರೀ ಎನ್. ಜಿ. ರಂಗ. ಮದ್ರಾಸ್ ಸೀಡೆಡ್ ಜಿಲ್ಲೆಗಳು ಮತ್ತು ಚಿತ್ತೂರು ಮುಸಲ್ಮಾನೇತರ—ಶ್ರೀ. ಎ ಅನಂತ ಶಯನನಮ್ ಅಯ್ಯಂಗಾರ್. ದಕ್ಷಿಣ ಆರ್ಕೋಟ್, ಚಿಂಗಲ್‌ಪೇಟ್ ಮುಸಲ್ಮಾನೇತರ—ಶ್ರೀ ಆರ್. ವೆಂಕಟ ಸುಬ್ಬ ರೆಡ್ಡಿಯಾರ್, ತಂಜೂರು ತಿರುಚಿನಾಪಳ್ಳಿ ಮುಸಲ್ಮಾನೇತರ ಶ್ರೀ ಟಿ. ವಿ ಸದಗೋಪಾಚಾರಿಯರ್. ಮಧುರಾ, ರಾಮ್ನಾಡ್, ತಿನ್ನೆವೆಲ್ಲಿ ಮುಸಲ್ಮಾನೇತರ—ಶ್ರೀ ಎಸ್ ಪಿ ಆದಿತ್ಯನ್ ದಕ್ಷಿಣ ಕನ್ನಡ, ನೀಲಗಿರಿ ಮುಸಲ್ಮಾನೇತರ ಮತದಾರ ಕ್ಷೇತ್ರ—ಶ್ರೀ ಕೆ. ಕರುಣಾಕರ ಮೆನನ್, ಮದ್ರಾಸ್ ವರ್ಗದಾರ ಮತದಾರ ಕ್ಷೇತ್ರ—ಶ್ರೀ ಎಮ್. ಕೆ. ಜಿನ್ನ ಚಂದ್ರನ್. ಮದ್ರಾಸ್ ಹಿಂದೀ ವ್ಯಾಪಾರೀ ಮತದಾರ ಕ್ಷೇತ್ರ—ಶ್ರೀ. ಟಿ ಎ. ರಾಮಲಿಂಗ ಚೆಟ್ಟಿಯಾರ್.

ಬೊಂಬಾಯಿ ಪ್ರಾಂತ್ಯಕ್ಕೆ

ಬೊಂಬಾಯಿ ನಗರದ ಮುಸಲ್ಮಾನೇತರ ಎರಡು ಸ್ಥಾನಗಳಿಗೆ ಡಾ' ಜಿ ವಿ ದೇಶಮುಖ್ ಮತ್ತು ಶ್ರೀ ಎಮ್. ಆರ್. ಮಸಾನಿ ಮತ್ತು ಬೊಂಬಾಯಿ ಪ್ರಾಂತ್ಯದ ಇತರ ಮುಸಲ್ಮಾನೇತರ ಸ್ಥಾನಗಳಿಗೆ ಶ್ರೀಗಳಾದ ಸುಖದೇವ್ ಉಧಾವ್‌ದಾಸ್, ಜಿ ವಿ ಮಾವ್ಲಂಕರ್, ಎನ್. ವಿ ಗಡಿಲ್, ಬಿ ಎಸ್ ಹಿರೇ, ಮನು ಸುಬೇದಾರರನ್ನು ಶಿಫಾರಸು ಮಾಡಲಾಗಿದೆ ಕರ್ನಾಟಕಕ್ಕೆ ಸೇರಿದ ಬೊಂಬಾಯಿಯ ದಕ್ಷಿಣ ವಿಭಾಗದ ಮುಸ್ಲಿಮೇತರ ಮತದಾರ ಕ್ಷೇತ್ರಕ್ಕೆ ಶ್ರೀ ಡಿ ಪಿ. ಕರ್ಮಾರ್‌ಕರರು ಆರಿಸಲ್ಪಟ್ಟಿದ್ದಾರೆ.

ಸಂಯುಕ್ತ ಪ್ರಾಂತ್ಯಕ್ಕೆ

ಶ್ರೀಗಳಾದ ಬಾಲಕೃಷ್ಣ ರಮಾ, ಕೃಷ್ಣಚಂದ್ರ ರಮಾ, ಶ್ರೀ ಕೃಷ್ಣದತ್ತ ಪಾಲಿವಾಲ, ಶ್ರೀ ದಾಮೋದರ ಸ್ವರೂಪ್ ಶೇಟ್, ಪಂಡಿತ ಗೋವಿಂದ ಮಾಲವೀಯ, ಶ್ರೀ. ಪ್ರಕಾಶ್, ಮೋಹನಲಾಲ್ ಸಕ್ಸೇನಾ, ಜೋಗೇಂದ್ರ ಸಿಂಘ್, ಸತ್ಯನಾರಾಯಣ ಸಿಂಹ, ಮತ್ತು ಪೆಹಿನ್ ವಿಹಾರಿ ವರ್ಮರು ಮುಸ್ಲಿಮೇತರ ವಿವಿಧ ಕ್ಷೇತ್ರಗಳಿಗೆ ಉಮೇದ್ವಾರೀ ನೇಮಕ ಪಡೆದಿದ್ದಾರ

ಒರಿಸ್ಸಾಕ್ಕೆ

ಶ್ರೀ ಭಾಗೀರಥೀ ಮಹಾ ಪತ್ರ, ಇತರ ಉಮೇದ್ವಾರಿಗಳ ನೇಮಕವಾಗಿಲ್ಲ

ಬಿಹಾರಿಗೆ

ಶ್ರೀ ಬಾಬು ರಾಮನಾರಾಯಣ ಪ್ರಸಾದ್, ಬಾಬು ಗುರಿಶಂಕರ್ ಸಿಂಹ, ಬಾಬು ಬನಾರಸಿ ಪ್ರಸಾದ್ ಜುಂಜು ವಾಲಾ, ಬಾಬು ರಾಮ್ ನಾರಾಯಣ ಸಿಂಹ.

ಮಧ್ಯ ಪ್ರಾಂತ್ಯ ಮತ್ತು ಬೀರಾರಿಗೆ

ಶ್ರೀಗಳಾದ ಪಿ ಕೆ ಸಾಲ್ವೆ, ಸೇಠ್ ಗೋವಿಂದದಾಸ್, ತಿವಡಾಸ್‌ದಾಗ, ಗಣ ಪತ್‌ರಾವ್‌ದಾನಿ, ಪಿ ಬಿ ಗೋಲೆ, ಮತ್ತು ಜಿಲ್ಲಿಯ ಸಮ್ಮಿಶ್ರಮತದಾರ ಕ್ಷೇತ್ರಕ್ಕೆ ವಿ ಆರ್ ಅಲೆ.

ಅಜಮೀರ್-ಮೆರ್ವಾರಾ—ಸಮ್ಮಿಶ್ರಮತದಾರ ಒಂದು ಸ್ಥಾನಕ್ಕೆ ಮುಕ್ತ ಬಿಹಾರಿಲಾಲ್,

ಗಡಿನಾಡು ಪ್ರಾಂತ್ಯಕ್ಕೊಂದು ಸ್ಥಾನಕ್ಕೆ ಬಾನ್ ಅಬ್ದುಲ್ ಗಾಫರ್‌ಖಾನ್.

ಪಂಜಾಬಿನ ಉಮೇದ್ವಾರಿಗಳ ನಿರ್ಧಾರವಿನ್ನಷ್ಟೇ ಆಗಿಬ್ಬಾಹೆಸರು ಪ್ರಕಟಗೊಳ್ಳಲಿದೆ. ಬಂಗಾಳದಲ್ಲಿನ ಮಹಿಳಾ ಸ್ಥಾನಕ್ಕೆ ನವಂಬರ್ 3ರ ವರೆಗೆ ಅವಕಾಶ ವಿರುವದರಿಂದ ಹಿಂದಿನಿಂದ ನೇಮಕವಾಗಲಿದೆ ಇದು ವರೆಗಿನ ಕಾಂಗ್ರೆಸ್ ನೇಮಕಗಳಲ್ಲಿ 7 ಮಂದಿ ಹಳೇ ಸದಸ್ಯರಿದ್ದಾರೆ ಕಾಂಗ್ರೆಸು ಕೇಂದ್ರ ಎಸೆಂಬ್ಲಿಯ 70—75 ಸ್ಥಾನಗಳಿಗೆ ತನ್ನ ಉಮೇದ್ವಾರಿಗಳನ್ನು ನಿಲ್ಲಿಸಲಿದ ಮುಸಲ್ಮಾನ್ ಮತದಾರ ಕ್ಷೇತ್ರಗಳಿಗೆ ಕಾಂಗ್ರೆಸ್ ಉಮೇದ್ವಾರಿಗಳಿಕೆಸರುಗಳನ್ನು ಪ್ರಾಂತಿಕಬೋರ್ಡ್‌ಗಳ ಶಿಫಾರಸುಗಳನ್ನು ಕಂಡ ಮೇಲೆ ಸೂಚಿಸಲುಗುನದು. ತನ್ನ ಉಮೇದ್ವಾರಿಗಳಲ್ಲಿ ದ ಕಡೆ ರಾಷ್ಟ್ರೀಯ ಮುಸ್ಲಿಂ ಉಮೇದ್ವಾರಿಗಳಿಗೆ ಕಾಂಗ್ರೆಸ್ ಬೆಂಬಲವೀಯುವದು ಅಗ್ರಗಣ್ಯ ಕಾಂಗ್ರೆಸ್ ಪ್ರಮುಖರು ಕೇಂದ್ರ ಎಸೆಂಬ್ಲಿಗೆ ನಿಲ್ಲುವೆಂಬ ಊಹೆ ಸುಳ್ಳಾಯೆನ್ನಬಹುದು ಸಂಯುಕ್ತ ಪ್ರಾಂತ್ಯದೊಂದು ಸ್ಥಾನಕ್ಕೆ ಉಮೇದ್ವಾರಿಯಾಗಲು ಕೃಪಲುನಿಯವರೊಪ್ಪಲಿಲ್ಲ!

ಡ. ಕ ಮಲಬಾರು ಮತ್ತು ನೀಲಗಿರಿ ಕ್ಷೇತ್ರ—ದ ನವಾಗಿ ಸದ್ಯ ಕೇಂದ್ರ ಎಸೆಂಬ್ಲಿಯಲ್ಲಿರುವವರೆಂದರೆ ಉಪಚುನಾವಣೆಯ ಮೂಲಕ ಆರಿಸಲ್ಪಟ್ಟಿದ್ದ ದಕ್ಷಿಣ ಕನ್ನಡಿಗರಾದ ಶ್ರೀ. ಕೆ. ಬಿ ಮೆನನ್ ರಾಜ ಹೆಗ್ಡೆ ಇವರು ನುಂದಿನ ಕಾಂಗ್ರೆಸ್ ಉಮೇದ್ವಾರಿಯಾಗಿ ಮಲಬಾರಿನ ಶ್ರೀ ಕರುಣಾಕರ ಮೆನನರು ಆರಿಸಲ್ಪಟ್ಟಿದ್ದಾರೆ 1935ರ ಚುನಾವಣೆಯಲ್ಲಿ ಆ ಸ್ಥಾನವನ್ನು ಕಾಂಗ್ರೆಸ್ ಸರವಾಗಿ ಸಿಂಗೆದ್ದವರು ಶ್ರೀ ಸಾಮುವೇಲ್ ಅರೂನರು ದಕ್ಷಿಣ ಭಾರತದಿಂದ ಒರ್ವ ಕ್ರೈಸ್ತಿಯನ್ ಉಮೇದ್ವಾರಿಯನ್ನಾರಿಸಬೇಕೆಂಬ ಧ್ಯೇಯದಿಂದ ಆ ಬಾರಿ ಶ್ರೀ ಅರೂನರನ್ನು ನಿಲ್ಲಿಸಲಾಗಿತ್ತು. ಈ ಭಾರಿ ಮದ್ರಾಸ್ ಪ್ರಾಂತ್ಯದ ಬೇರೊಂದು ಸ್ಥಾನಕ್ಕೆ ಕ್ರೈಸ್ತಿಯನ್ ಉಮೇದ್ವಾರಿಯನ್ನು ಆರಿಸುವ ಸಂಭವವಿದೆ ಕೇಂದ್ರ ಸಮಿತಿಗೆ ಉಮೇದ್ವಾರೀ ಹೆಸರುಗಳನ್ನು ಶಿಫಾರಸು ಮಾಡುವರೆ ತಾ 15ರಲ್ಲಿ ತಮಿಳುನಾಡು, ಆಂಧ್ರ ಮತ್ತು ಕೇರಳ ಪಾರ್ಲಿಮೆಂಟೀ ಸಮಿತಿಗಳು ಮದ್ರಾಸಿನಲ್ಲಿ ಸೇರಿ ಪರ್ಯಾಲೋಚಿಸಿದ್ದುವ್ಯ ದಕ್ಷಿಣ ಕನ್ನಡವೂ ಈ ಸ್ಥಾನಗಳಲ್ಲಿ ಸೇರಿದ್ದುದರಿ [illegible] ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರೂ ಆ ಸಭೆಗಾಮಂತ್ರಿಸಲ್ಪಟ್ಟು ಹಾಜರಿದ್ದರು.

ದೇಶವ್ಯಾಪೀ ಚುನಾವಣೋದ್ಯೋಗ

ಪ್ರತಿಯೊಂದು ಮುಸ್ಲಿಂ ಸ್ಥಾನಕ್ಕೂ ಲೀಗ್ ಮತ್ತು ರಾಷ್ಟ್ರೀಯ ಮುಸಲ್ಮಾನ ಕಾಂಗ್ರೆಸ್ ಉಮೇದ್ವಾರಿಗಳು ಸ್ಪರ್ಧಿಸಲಿದ್ದಾರೆ ಬೊಂಬಾಯಿಯಲ್ಲಿ ಮಿ ಜಿನ್ನರನ್ನು ಸೇಟ್ ಹುಸೇನ್ ಬಾಯಿ ಸ್ಪರ್ಧಿಸಲಿದ್ದಾರೆ. ಸಂಯುಕ್ತ ಪ್ರಾಂತ್ಯದಲ್ಲಿ ನವಾಬಝಾದಾ ಲಿಯಾಖತ್ ಅಲೀಖಾನ್‌ರಿಗೆ ರಾಷ್ಟ್ರೀಯ ಮುಸಲ್ಮಾನರು ಪ್ರತಿಸ್ಪರ್ಧಿಯನ್ನು ನಿಲ್ಲಿಸಿದ್ದಾರೆ ಮದ್ರಾಸಿನಲ್ಲಿ ಜಸ್ಟೀಸ್ ಪಕ್ಷದ ಜನರವಣಾ ಕಾರ್ಯಾರಂಭವು ಸರ್ ಸಿ. ಟಿ ರಾಜನರಿಂದ ತಾ. 22ರಲ್ಲಿ ಉದ್ಘಾಟನೆ ಹೊಂದಿದ ಹಿಂದೂ ಮಹಾ ಸಭೆಯವರೂ ಕಮ್ಯೂನಿಸ್ಟರೂ ದೇಶವ್ಯಾಪೀ ಕಾರ್ಯಕಾರಂಭಿಸಿದ್ದಾರೆ

ಪೂರ್ವ ಕರಾವಳಿಯಲ್ಲಿ ಭೀಕರ ಬಿರುಗಾಳಿ

ಬಂಗಾಳಾ ಕೊಲ್ಲಿಯಲ್ಲಿ ಮದ್ರಾಸಿನ ಪೂರ್ವಾಗ್ನೇಯ ದಿಕ್ಕಿಗೆ ಸುಮಾರು 300 ಮೈಲು ದೂರದಲ್ಲಿ ಭೀಕರ ತೊಫಾನೆದ್ದದು ತಾ 16ರಿಂದಲೇ ತಿಳಿದು ಬಂದಿತ್ತು. ಆ ಬಿರುಗಾಳಿ ವಾಯುವ್ಯಾಭಿಮುಖವಾಗಿ ಧಾವಿಸುತ್ತಾ ಬಂದು ತಾ 17 ರಾತ್ರಿ ಪೂರ್ವ ಗೋದಾವರಿವರೆಗೆ ಒಡಿದು ವಿಂಧ್ವಂಸವಿಸುತ್ತಾ ಹೋಗಿ ಹಲವು ನಗರಗಳನ್ನು ಗಡಗಟ್ಟಿಸಿ ಬಿಟ್ಟಿತೆ. ಘಂಟೆಗರವತ್ತೈಲು ನೇಗದ ಈ ಪ್ರಚಂಡ ಬಿರುಗಾಳಿಯು ಕೋಕನಾಡ, ಮುಸಲಿಪಟ್ಟಣಂ ಗುಂಟೂರು, ಗುಡಿವಾಡಾ, ರಾಜಮಂಡ್ರಿ, ತೆನ್ನಾಲಿ, ಸಂಪರಾವ್ ಪೇಟೆ ಮೊದಲಾದ ಕಡೆಗಳಲ್ಲೆಲ್ಲಾ ಅಪಾರ ಹಾನಿಗೈದಿದ ಎರಡು ಮೂರು ದಿನ ಬೀಸಿ ದಕ್ಷಿಣ ಭಾರತದ ಹವಾಮಾನವನ್ನೇ ಬದಲಾಯಿಸಿ ಅಲ್ಲಲ್ಲಿ ಜಡಿಮಳೆ ಸುರಿಯುವಂತೆ ಮಾಡಿದ (ಇದೇ ತಾ 17ರಿಂದ 20ರ ನಡುವಿನ ದಿನಗಳಲ್ಲಿ ದಕ್ಷಿಣ ಕನ್ನಡದಲ್ಲೂ ಅಸಾಧಾರಣ ಮಳೆ ಸುರಿದಿತ್ತು) ಈ ಗಾಳಿ ಬರಬರುತ್ತಾ ಮಂದಗತಿ ಹೊಂದಿ ಹೈದರಾಬಾದಿನ ನಿಜಾಂಬಾದ್ ಪ್ರದೇಶವನ್ನಿತು ಮರಮಟ್ಟುಗಳು ಉರುಳಿ ಬಿದ್ದಿದ್ದವಲ್ಲದೆ, ದನಕರುಗಳು ಒಕ್ಕುಸುಯ್ಯೆಯಲ್ಲಿ ಮಡಿದಿದ್ದುವು. ಮೇಲ್ಕಾಣಿಸಿದ ಊರುಗಳಲ್ಲಿ ಹುಲ್ಲು ಜಾವದಿಯ ಮಾಡಿದ್ದೂ ಉಳಿದಿರಲಿಲ್ಲ ಬಿರುಗಾಳಿಯೊಂದಿಗೆ ಅಸಾಧ್ಯ ಜಡಿಮಳೆಯೂ ಸುರಿದಿತ್ತು. ಕೋಕನಾಡದಲ್ಲಿ 3 ದಿನಗಳ ವರೆಗೆ ವಿದ್ಯುದ್ದೀಪಗಳಿರಲಿಲ್ಲ. ಗುಂಟೂರೊಂದೇ ನಗರದಲ್ಲಿ 2000 ಗುಡಿಸಿಲುಗಳು ಅಡಿಮೇಲಾದವಲ್ಲದೆ ಹಲವು ಸಾವಿರ ಮಂದಿ ನಿರ್ಗತಿಕರಾದರು. ಎಮ್ ಎಂ. ಎಸ್. ಎಮ್. ರೈಲ್ವೇ ಲೈನು ಒಂದು ಕಡೆ ಕಾಲು ಮೈಲುದ್ದಕ್ಕೆ ಕಡಿಮೆಯಾಗಿದೆ, ಕಲ್ಲುತ್ತಾಯಿಂದ ಮದ್ರಾಸಿನ ರೈಲುಗಳು ಸ್ಥಗಿತಗೊಂಡಿದ್ದವು. ಸಮಯಾನೇ ಅಡಿಮೇಲಾಗಿರೆ ಛಿನ್ನಾವರಮಿನಲ್ಲಿ ಮಾತ್ರವೊಂದು ಕವಚ ಬದ್ದು 6 ಮಂದಿ ಮಡಿದರು. ಪೂರ್ವ ಗೋದಾವರಿ ಸಮುದ್ರದಡದಲ್ಲಿ 15 ಸತ್ತು ಬಿದ್ದರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 24—10—1945ರಿಂದ

ರ್ನಳಿಗೆಯಲ್ಲಿ ಬಹುಮಾನ ಪಡೆದ

★ "ಪರಾಕ್" ★

ಕೋರಾಬ್ ಮೋಡಿಯವರ ದಿಗ್ದರ್ಶನ

ಮೆತಾಬ್, ಬಲವಂತ್ ಸಿಂಗ್, ಕೌಶಲ್ಯ ಯಾಕುಬ್, ಸಾದಿಕ್‌ಅಲೀ.

ಕಾದಿರಿ—

ದ್ರೌಪದಿ.

ಉಡುಪಿ

ಶ್ರೀ. ಹನುಮಾನ್ ವಿಲಾಜೀ ವ್ಯಾಯಾಮ ಸಂಘ, ಕಿನ್ನಿಮೂಲ್ಕಿ– ಈ ಸಂಘದ ಏರ್ಪಡಿಸಿರುವ ತಾ. 16 10 45 ರಲ್ಲಿ ಉಡುಪಿಶ್ರೀ. ಸರಸ್ವತೀ ಮಹಾಲಕ್ಷ್ಮೀ ದೇವರ ಸನ್ನಿಧಾನ ಆಧ್ಯಕ್ಷತೆಯಲ್ಲಿ ಜರಗಿತು. ಮೊದಲನೆಯದಾಗಿ ಸಂಘದ ವ್ಯಾಯಾಮ ಪ್ರದರ್ಶನ ನಡೆಯಿತು. ಶ್ರೀ ಆನಂತ ಪದ್ಮನಾಭಾಚಾರ್ಯರವರು ವ್ಯಾಯಾಮದ ಕೆಲವು ಕುಶಲ ಭಾಷಣ ಮಾಡಿದರು. ತರುವಾಯ ಸಭಾ ಅಧ್ಯಕ್ಷರು ಸಂಸ್ಥೆಯ ಸಂಸ್ಥಾಪಕ ನಿವರನನ್ನು ನಿವರಿಸಿ ಭಾಷಣ ಮಾಡಿ, ಫಲಾ ನಸಮಾರಂಭವೊಡನೆ, ಸಭೆಯು ಮುಕ್ತಾ ಯವಾಯಿತು.

ಉಡುಪಿ ಹಸುಗೆ ಆಫೀಸರರ ಪ್ರಕಟನೆ– ಉಡುಪಿ ಹಸುಗೆ ನಿರ್ವಣದಾಳಿ ಗಾಗುವ ಎಲ್ಲಾ ಸಾಗುವಳಿದಾರರಿಗೂ ತಿಳಿಯ ಪಡಿಸುವುದೇನೆಂದರೆ – ಪ್ರತಿಯೊಬ್ಬ ಸಾಗುವ ಳಿದಾರನೂ, ಉಡುಪಿ ಹಸುಗೆ ಆಫೀಸರರಿಗೆ ತಾನು ಸಾಗುವಳಿ ನೂಡಿದ ಬಾಬ್ತು ಬಂದ ಬತ್ತದ ಜಾಮ್ಲಾ ಸರಿಪಾಣಿಸನ್ನು ತಿಳಿಸುವ ವೃಚ ಪತ್ರಿಕೆಯಲ್ಲಿ ಸೈರನ್ನು ಸರಿಯಾಗಿ ಜಪ್ತಿ ಆದರಲ್ಲಿರುವ ಎಲ್ಲಾ ಬತ್ತವನ್ನು ಸೂರಾ ತೆಗೆದು, ಒಟ್ಟು ಬಂದ ಬತ್ತವನ್ನು ತೋರಿಸತಕ್ಕದ್ದು. ಇದಕ್ಕೆ ವಿರೋಧವಾಗಿ ಯಾರಾದರೂ ಭತ್ತವನ್ನು ಪುಲ್ಲನಲ್ಲಿಯೇ ಒಟ್ಟು ಕಡಿಮೆ ಪರಿಮಾಣವನ್ನು ಪ್ರಜ್ಞೆ ಪತ್ರಿಕೆಯಲ್ಲಿ ತೋರಿಸಿದರೆ, ಸುಳ್ಳು ಲೆಕ್ಕ ಕೊಟ್ಟ ಬಗ್ಗೆ ಆಸ್ತಿಯನ್ನು ತಪ್ಪೀಲಿಗೆ ಗುರಿ ಮಾಡಲಾಗಿತ್ತು.

ನನಗೆ ಬಂದ ಬಾತ್ಮಿಗಳು– ಕಳೆದ 11ರ ನವಯುಗ ಸಂಚಿಕೆಯಲ್ಲಿ ಚೇರಿಸಾ ದಿ ಪೊ ಮತ್ತು ಸ್ಕೋರ್ಸ್, ಬಂಜಾರ ನೇಮಕ ಕುರಿತ. ಪ್ರಕಟಿಸಿದ ಬಾತ್ಮಿಗಳು ಸರಿ ಧಾನವೆಂದು ಎರಡು ಬಾತ್ಮಿಗಳು ಬಂದಿವೆ. ಸ್ವಳಾಭಾವದಿಂದ ಪ್ರಕಟಿಸಲಾಗಲಿಲ್ಲ.

ಮುನಿಸಿಪಲ್ ಕೌನ್ಸಿಲಿನ ಅರ್ಜಂಟ್ ಸಭೆಯು– ತಾ. 20ರಲ್ಲು ಸಂಜೆ ಕೌನ್ಸಿ ಲ್ ಹಾಲಿನಲ್ಲಿ ಜರಗಿತು. ಚೆಯರ್‌ಮೇನ್ ಮೈಸ್ ಚಿಯರ್‌ಮೇನ್ ಇಲ್ಲದೂ ಗೈರ್ತಿ ಹಾ ಜರಾದುದರಿಂದ ನಿಂ. ಜಿ. ಪಿ. ರೇಗೋ, ಆವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಟೌನ್ ಪ್ಲಾನಿಂಗ್ ಯೋಜನೆಯ ಸೆಕ್ರೆಟರಿಯ ನಿರ್ದೇಶನ ಕಾರ್ಯದಿಲ್ಲ ಅಧ್ಯಕ್ಷರು ತಿರಿಗೆದಾರರು ಬರಬಹುದಾದ ತಿಕ್ಕಾಟಿನ ಪ್ರಶ್ನೆಗಳಿಕ್ಕಾದಿ ಗಳನ್ನು ತೀರ್ಮಾನಿಸುವರ ಕುರಿತಾಗಿ ಸಭೆಯ ಅಧ್ಯಕ್ಷರನ್ನು ನೇಮಿಸಲಾಗಿ ಸುವುದು ಸೂಚಿಸಿದ ಸರಕಾರೀ ನಿರ್ಣಯ ವನ್ನು ಏಕಾರ್ಥ ಮೂಡಿಸಲಾಯಿತು. ಆಗಸ್ಟ್ ಕೆಲವು ಕೆಲಸಗಳನ್ನು ಚೀಟ್ಟಿ ಸರು ಸಭೆಲ್ಲಿ ಕೊಡಗುವುದು ನ್ಯಾಯವೆಂದಾಯಿತು. ಜನರು ಸಾಸಿಸಿಕೊಡಿರುವ ಸ್ಥಳದಿಂದ 100 ಗಜ ದೂರದಲ್ಲಿಯೇ ನಾಲಿಗೆ ರಂಗು ಹಾಕುವ ಸ್ಥಳಕ್ಕೆ ಯೆತಕ್ಕಂತಾಗಬೇಕೆಂಬ ಕೌನ್ಸಿಲಿನ ನಿ ಬಂಧನೆಯನ್ನು ನಡಿಲಿಸಬೇಕಾಗಿ ಕೈ ಮಗ್ಗ ಸಂಘದ ಮನವಿಯಂತ್ತೆ ಓದಲಾಯಿತು. ಸಾ ಧ್ಯಾಸಾಧ್ಯತೆ, ಕನ್ವಸಂಕಸ್ಯಗಳನ್ನು ಪರಿಶೀಲಿ ಸಿ ಮುಗ್ಗದವರಿಗೆ ಅನ್ಯಾಯವಾಗದ ರೀತಿಯಲ್ಲಿ ಲೈಸನ್ಸುಗಳನ್ನು ಕೊಡುವರ ಕಮಿಟಿಗೆ ರಿಗೆ ಅಧಿಕಾರವೀಯಲಾಯಿತು. ಕೆಲವು ಕಾ ಮಗಾರಿಕೆಗಳ ನೆಚ್ಚಿದ ಬಗ್ಗೆ ಪಣ ಮುಂಜಾ ರು ಮಾಡಲಾಯಿತು.

ಜನತೆಯ ಗೋಳು– ಸರ್ವಸಾಧಾರ ಣ ಜನೋಪಯೋಗದ ಸರ್ವ ವಸ್ತುಗಳಗೂ ವಿನಕ್ಕೊಂದು ಪ್ರಕಾರಣಯಾಗಿದೆ. ಬಡವರು ಪಾ ಗೂ ಮಧ್ಯಮ ವರ್ಗದವರ ಪಾಡು ಹೇಳ ತೀರದು. ಸಂಬಂಧಪಟ್ಟ ಅಧಿಕಾರಿಗಳು ಜನ ತೆಯ ಗೋಳನ್ನು ಮನ್ನಿಸಬೇಕಾಗಿದೆ.

ಸೀದಾ ಸೀಮೆಯಲ್ಲಿ ಪಡಿಯಕ್ಕಿಗೆ ಪಾಸ್ತಿ ಕ್ರಯ– ದಿನ ಹೋದಂತೆ ಉಡುಪಿ ರೇಶನಿಂಗ್ ಕ್ಷೇತ್ರದಲ್ಲಿ ವಿತರಣೆಯಾಗುವ ಊರ ಬೆಲ್ಲಿಗೆ ಆಕ್ಕಿಯ ಬೆಲೆ ಜಾಸ್ತಿಯಾಗುತ್ತಲಿದೆ ಸೇರಿಗೆ 0 5-1 ಯಂತೆ ಈಗ ಕ್ರಯ ನಮೂಲು ನೂಡಲಾಗುತ್ತಿದೆ. ಪಾಸ್ತಿ ಕ್ರಯ ಕೊಟ್ಟಾಗ್ಲೂ ಪುಡಿ, ಕಡಿ, ಧೂಳಿನಿಂದ ಕೂಡಿದಿರುತ್ತದೆ. ಜನತಾ ಸೇವೆಗೆ ಹೊರಟಿ ಪು ಣ್ಯಾತ್ಮರು ಈ ಕಡೆ ಸಿಗಾ ಕೊಡಬೇಕಾಗಿದೆ.

ನಾಟ್ಯ ಕೂಟ– ದ ಹೊಸ ಕಾರ್ಯಾಲ ಯದ ಆರಂಭೋತ್ಸವವು ತಾ 21 10 45 ನೇ ಸಾಯಂಕಾಲ ಶ್ರೀ. ಯು. ಬಿ. ಕೃಷ್ಣ ರಾವ್, ಬಿ-ಎ-ಬಿ ಎಲ್, ಇವರ ಅಧ್ಯಕ್ಷತೆ ಯಲ್ಲಿ ಜರಗಿತು. ಪೂಜೆ, ಶ್ರಾದ್ಧನೆಗಳಾದ ಶ್ರೀ. ಆರ್ ಆರ್. ಕುಂಜಾರರು ನರದಿ ಯೊಸಿದರು. ಶ್ರೀ. ಯು. ಬಿ. ಕೃಷ್ಣರಾ ವ್ ಬಿ ಎ ಬಿ ಎಲ್ ಅಧ್ಯಕ್ಷ, ದಾ ಕೆ ಎ ಲ್. ಪತಾಳ ಎಂ. ಜೆ. ಬಿ. ಎಸ್, ಉಪಾಧ್ಯ ಕ್ಷ, ಶ್ರೀ. ಎಸ್. ಪಿ. ಕಾಮತ್ ಬಿ ಎ.ಬಿ. ಎಲ್, ಇತ್ತು ಶ್ರೀ. ಆರ್. ಆರ್, ಕುಂ ಜಾರು, ಇತ್ತೆ ಕಾರ್ಯವರ್ಶಿಗಳು, ಶ್ರೀ ಎ. ಜ ಆಳ್ವ, ಬಜಾಜ್ಟಿಯಾಗಿ ಅರಿಸಲ್ಪಟ್ಟರು. ಫಲಾಹಾರ, ಸಭಾಸತ್ಕಾರಾದಿಗಳು ನಡೆದ ಮೇ ಲೆ ಸಾಟ್ಯಕೂಟದ ಇದುವರೆಗಿನ ಜಟಿಸಚಿಕೆ ಗಳು, ಆದರೆ ಮಂದಿರುವ ಉಜ್ವಲಭವಿಷ್ಯ ಇತ್ಯಾದಿಗಳ ಕುರಿತು ಸಭಿಕರೆಲ್ಲಾ ಭಾಷಣ ಮಾಡಿದ ಸಲ್ಲಿಸಿ ಆಭಿವೃದ್ಧಿಯನ್ನುಹಾರೈಸಿದರು. ಕೂ ಟದ ನಡೆಸ್ಕರ ನುತ್ತು ಅಧ್ಯಕ್ಷರ ಭಾಷಣ, ಧನ್ಯವಾದಗಳಾಮನ್ತು.

ತೀರ್ಥ– ಇಲ್ಲಿಯ ಯು ಎಸ್ ಏಜೆನ್ಸಿ ಮಾಲೀಕ ಶ್ರೀ ಸಂಘ'ಕ್ಕಾಗಿ ಸಹಾಯ ಸಂಗ್ರಹಿಸಲು ತೆ ರೆಯಲಪ ಆಧ್ಯಕ್ಷ ಶ್ರೀ ಕೆ. ಮಂಜಾ ಶೆಟ್ಟಿ, ಕುತ್ಯಾರು ಪರೀಲ್ ಶ್ರೀ ಎಲ್ಲಪ್ಪ ಶೆಟ್ಟಿ, ಮತ್ತು ಶ್ರೀ. ನಾಗಪ್ಪ ಶೆಟ್ಟಿರಿಗೆ ಜೋಬಾಯಿ ಯಲ್ಲಿರುವ ದ. ಕನ್ನಡಿಗರು ಎಕೇಷ ಪ್ರೋ ತ್ಸಾಹನಿಶ್ಚಾತ್ಯಾಪೆದು ಸಂಬಂಧಪಟ್ಟವರು ಕೃತಜ್ಞತೆಯೂರಿಸಿ ಸ್ಮರಿಸುತ್ತಾರೆ.

ಕಡಂದಲೆ– ಇಲ್ಲಿಯ ಹೊ ಹಾ. ಬಿ ನೋಂದಿ ಕಾರ್ಯಾಲಯದ ಸಿಬ್ಬಂದಿಗಳು ಅಧ್ಯಾಪಕ ನೈಂದಲೊಡನೆ ತಾ. 15ರಂದು ನಿಧಾರಕ್ಕಾಗಿ ಮಂಗ್ಳೂರಿಗೆ ಹೊರಟು ನಿಷ್ಕೋಡಿ ಸೂರ್ಯಕಾಂತಿ ಕಟ್ಟೀಲು, ಬಜಸ ಮೊಂಡಾವ ಸ್ಥಳಗಳನ್ನು ಸಂದರ್ಶಿಸಿ ಮಂ ಗ್ಳೂರಿಗೆ ಕಾಲ್ನಡಿಗೆಯಾಗಿ ಬಂದು ಇಲ್ಲಿಯ ಪ್ರಮುಖ ಸ್ಥಳಗಳನ್ನು ಸಂದರ್ಶಿಸಿ ತಾ 18 ರಂದು ಹಿಂತಿರುಗಿದರು. ಇವರ ಸಂಚಾರ ಕಾ ಲವಲ್ಲಿ ನಿಷ್ಕೋಡಿ ಶ್ರೀ. ಎನ್. ರಾಘವ ಶೆ ಟ್ಟರು ಶ್ರೀ ಕೃಷ್ಣ ಭವನದಲ್ಲಿ ಮಾಲೀಕ ದ ಶ್ರೀ. ಕೆ. ಕೃಷ್ಣ ಬಟ್ಟರು ವಿದ್ಯಾರ್ಥಿಗಳ ಊಟದ ಸಂಪೂರ್ಣ ಉಸಚಾರವನ್ನು ಉದಾರವಾ ಗಿ ಕೈಕೊಂಡಿರುವರು. ಆಪ್ಪನೆ ನಿಷ್ಕೋಡಿ ಕೃ ಷ್ಣ ಶೆಟ್ಟರು, ಬಜಕ ಕೆ. ಪಂಡಿತ ಸುಂದರ ಶೆ ಟ್ಟರು, ಕಡಂದಲೆ ಪದ್ಮನಾಭ ಭಟ್ಟರು, ಕುಡಿ ತ್ತೂರು ಗುತ್ತು ಮಂಡಾಬಲ ಕಟ್ಟು ತಿಂದಿ ತೀರ್ಥವಿತ್ತು ಉಪಕರಿಸಿದರೆಂದರು.

ಕಾರ್ಕಳ

ನಾಡ ಹಬ್ಬವು– ತಾ ೧೮, ೧೯ ನುತ್ತು ೨೦ರಂದು ಆಚರಿಸಲ್ಪಟ್ಟಿತು. ಮೊದಲನೆಯ ದಿನ ಶ್ರೀ. ಪಿ. ಪಿ. ಉಪಾಧ್ಯಾಯರು, ಪಸರೆ ಯ ಮಹತ್ವದ ಕುರಿತು ಸೂತನಾಡಿದ ಬಳಿ ಕ, ಶ್ರೀ. ಕೆ. ಎಲ್. ಎಸ್ ಉಪಾಧ್ಯಾಯರು ಕಲೆ ಮತ್ತು ಸಮಾಜ ಎಂಬುದರ ಕುರಿತ್ತು ಉಳಿ ಪನ್ಯಾಸವಿತ್ತರು. ಗಮಕ ಕಲೆಯ ಕುರಿತಾಗಿ ಶ್ರೀ. ಪಾಡುರಂಗ ಭಟ್ಟರು, ಕರ್ನಾಟಕ ಸ ಕೀಕರಣದ ಕುರಿತು ಶ್ರೀ. ಕೇರವ ರಾವು ಚಂದ್ರ ಶೆಣೈಯವರೂ ಮಾತನಾಡಿದ ಬಳಿಕ ಆಂದಿನ ಕಾರ್ಯಕ್ರಮವು ಕೊನೆಗೊಂಡಿತು. ತಾ. ೧೯ರಂದು ನುಂಗಳೂರಿನ ಶ್ರೀ. ಬಿ ರಂಕರ ಭಟ್ಟರು ಸರ್ವಜ್ಞನ ಕುರಿತಾಗಿಯೂ ಶ್ರೀ. ಪಿ. ಕೆ. ನಾರಾಯಣ ಅವರು ಸ್ತ್ರೀಯರೂ ಸಾಹಿತ್ಯವೂ ಎಂಬ ವಿಷಯವಾಗಿಯೂ ಭಾಷಣವಿತ್ತರು. ಕೊನೆಯ ದಿನ, ಶ್ರೀ. ಕಟಾ ಪಾಡಿ ಶ್ರೀನಿವಾಸ ರೆಣ್ಣೆಯವರು ಹಿಂದೀ-ಕ ನ್ನಡ ಸಾಹಿತ್ಯದ ಸಮನ್ವಯದ ಕುರಿತಾಗಿ ಯೂ, ಶ್ರೀ. ಕಜೆಂಗೋಡ್ಲು ಶಂಕರ ಭಟ್ಟ ರು ಚೀವನವೂ ಸಾಹಿತ್ಯವೂ ಎಂಬ ವಿಷಯ ವನ್ನೂ ಎತ್ತಿಕೊಂಡು ಉಪನ್ಯಾಸವಿತ್ತರು

ಪುತ್ತೂರು

ದ ಕ. ಸಂಸ್ಕೃತ ಮಹಾ ಸಭೆ– ತಾ. ೧೧ನೆಯ ಗುರುವಾರ ಸೂರ್ಯಾಸ್ತ ವೇ ದಾಲ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾ ಲರಾದ ಶ್ರೀ. ಡಿ. ನಾರಾಯಣ ಭಟ್ಟ ಅವರ ಅಧ್ಯಕ್ಷತೆಯಲ್ಲಿ ಚಿತ್ತೈಯ ಸಂಸ್ಕೃತಾಭಿಮಾನಿ ಸಹಕಾರ ಸಭೆಯು ನಡೆಯಿತು. ಆಪರಾಷ್ಟ್ರ ಪ್ರ ತ್ಯಾರಿನ ಶ್ರೀ. ಸಿ ಯೆಸ್. ಶಾಸ್ತ್ರಿಗಳವರ ಅ ಧ್ಯಕ್ಷತೆಯಲ್ಲಿ ದ. ಕ. ಸಂಸ್ಕೃತ ಮಹಾ ಸಭೆಯ ದ್ವಿತೀಯ ವಾರ್ಷಿಕಾದಿವೇತನ ನಡೆಯಿ ತು. ೧. ಸಂಸ್ಕೃತಾಧ್ಯಾಪಕರ ಸಂಘವನ್ನು ಮಹಾ ಸಭೆಯ ಆಂಗ ಸಂಸ್ಥೆಯಾಗಿ ಪರಿಗ ಣಿಸತಕ್ಕದ್ದು. ೨. ಸಂಸ್ಕೃತ ಲೇಖಕರ ಸಹ ಕಾರದಿಂದ ಸಂಸ್ಕೃತ ಸಾಹಿತ್ಯ ಮಂಡಲವೆಂ ಬ ಆಂಗ ಸಂಸ್ಥೆಯನ್ನು ರೂಪಿಸಿ ಹೊಸ ಪು ಸ್ತಕಗಳನ್ನು ಪ್ರಕಾಶಿಸತಕ್ಕದ್ದು. ೩ ಸಂಸ್ಕೃತ ಪಿಯಾಭ್ಯಾಸಕ್ಕೆ ನುತ್ತು ಪರೀಕ್ಷೆಗಳಲ್ಲಿ ವ್ಯಾ ಪಾರಿಕ ಯೋಗ್ಯತಾ ಸಂಪಾದನೆಗೆ ಆನುಷ್ಠಾ ಕ ಬದಲಾವಣೆಗಳನ್ನು ಸೂಚಿಸುವುದಕ್ಕೆ ಮ ಹಾ ಸಭೆಯು ಸ್ವಯಂತ್ರಿಸತಕ್ಕದ್ದು. ಈ ಸಂ ಬಂಧವಾಗಿ ಸರಕಾರದೊಡನೆ ಮತ್ತು ಜನತೆ ಯೊಡನೆ ವಿನಂತಿಸಿಕೊಳ್ಳತಕ್ಕದ್ದು. ೪ ಈ ವರಗೆ ಕೆಲಸ ನಡೆಸಿದ ಕಾರ್ಯ ಸಮಿತಿಗೆ ಈ ನೆಹಾ ಸಲೆಯು ಕೃತಜ್ಞವಾಗಿರುತ್ತದೆ. ೫. ಸಂಸ್ಕೃತವನ್ನು ರಾಷ್ಟ್ರದೆ ಉನ್ನತಿಗೆ ಮುಖ್ಯ ಉಪಾಯಭೂತವಾದ ಭಾಷೆಯೆಂದು ಪರಿಗಣಿಸ ಇದರ ಪ್ರಚಾರ ಅಭ್ಯಾಸಗಳಿಗೆ ಸರಕಾರವು ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಈ ನುಂ ನಿರ್ಣಯವು ಸರಕಾರವನ್ನು ಪ್ರಾರ್ಥಿ ಸುತ್ತದೆ. ಇನೇ ಮೊದಲಾದ ಗೊತ್ತುವಳಿಗ ಳು ಸ್ವೀಕೃತವಾದವು.

ನವರಾತ್ರಿ ಮಹೋತ್ಸವ– ತಾ. ೧೫ ರಂದು ಶ್ರೀ ವೆಂಕಟ್ರಾ ಕೆ. ಕೃಷ್ಣ ನಾರಾಯಣ ಪುಲ್ಕರ ಆಧ್ಯಕ್ಷತೆಯಲ್ಲಿ ಶ್ರೀ ಲಕ್ಷ್ಮೀ ರಾಯರು ರಾಸು ಚರಿತೆ ಮಾನಸದ ನಾಚನ ಮಾಡಿದರು. ತಾ. ೧೬ರಂದು ಶ್ರೀ। ವಕೀಲ್ ಯ್, ಸದಾಶಿವ ರಾಯರ ಅಧ್ಯಕ್ಷತೆಯಲ್ಲಿ ಶ್ರೀ। ಟಿ. ನಾಗೇಶರಾಯರು ರಿಕ್ಷಣ ಮತ್ತು ಸಂಸ್ಕೃತಿಯ ವಿಚಾರವಾಗಿ ಭಾಷಣವಿತ್ತರು. ನುರಿದಿನ ಬಂಧತ್ವ ವರ್ಷ ಸ್ಪಾಯಿಯ ಕುರಿತಾಗಿ ರಾಜ ರಾಜೇಶ್ವರಿ ಅಮ್ಮನವರಿಂದ ಪ ರಿಕರ ನಡೆಯಿತು. ವಿದ್ಯಾರ್ಥಿಗಳಿಂದ ಆಟಗ ಳ ಸ್ಪರ್ಧೆಗಳು ನಡೆದುವು. ತಾ. ೧೪ರಂದು ಶ್ರೀ ವಕೀಲ್ ರಾಮಚಂದ್ರರಾಯರ ಅಧ್ಯಕ್ಷ ತೆಯಲ್ಲಿ ಶ್ರೀ। ಯಂ. ಬಿ. ನರಸಿಂಹಪರು ರಾಷ್ಟ್ರಿಯ ಚಾರಿತ್ರವು ಮತ್ತು ಶ್ರೀ।ಗಳಾ ದ ಪರಮೇಶ್ವರ ಶಾಸ್ತ್ರಿಗಳು, ಕೆ. ಶಂಭು ಶ ರ್ಮರು, ಯಸ್. ಶ್ರೀನಿವಾಸ ಶಾಸ್ತ್ರಿಗಳು ನ ನ್ಮುಪ್ರಗತಿಯನುಸಾರವಾಗಿ ವಿಚಾರವಾಗಿಯೂ ಭಾಷಣ ಮಾಡಿದರು. ಮಂಗಳವಾರ ಪೂರ್ವಾಹ್ನ ಶಾರದಾ ಮೆರವಣಿಗೆಯೂ ಶ್ರೀ। ಯನ್. ಶ್ರೀನಿವಾಸ ಶಾಸ್ತ್ರಿಗಳ ಅಧ್ಯಕ್ಷತೆ ಯಲ್ಲಿ ಶಾರದಾ ಪೂಜೆ, ನಿತ್ಯಾರಂಭೋತ್ಸವ ಗಳೂ ನಡೆದುವು. ಅಪರಾಷ್ಟ್ರ ವಕೀಲ್ ಯ್. ಗಣಪತಿ ರಾಯರ ಅಧ್ಯಕ್ಷತೆಯಲ್ಲಿ ಶ್ರೀ. ಕೆ. ರಂಭು ಶರ್ಮರು ಸಂಸ್ಕೃತವು ಏಕೆ ಬಾಳಬೇಕು? ಎಂಬ ವಿಚಾರವಾಗಿ ಭಾಷಣ ಮಾಡಿದರು. ಸ್ಪರ್ಧೆಗಳ ಬಹುಮಾ ನಗಳಲ್ಲಿ ಎರಡು ಮೆದಲುಗಳನ್ನು ಜೋ ರ್ಡು ಹೈಸ್ಕೂಲಿಗೂ, ಇತರ ಹತ್ತು ಪುರ ಸ್ಕಾರಗಳನ್ನು ವಿದ್ಯಾರ್ಥಿಗಳಿಗೂ ಅಧ್ಯಕ್ಷ ರು ವಿತರಣ ನೂಡಿದರು. ಭಜನಾ ಮಂದಿಳಿ ಯ ಸರವಾಗಿ ಶ್ರೀ. ಯಸ್. ಕೆ. ಈಶ್ವರ ಭ ಟ್ಟರು ಪೂತನಾಡಿದರು. ನವರಾತ್ರಿಯ ಒಂ ಭತ್ತು ದಿನವೂ ಭಜನೆಗೆ ನೆರವಾದವರಿಗೆ ಧ ನ್ಯವಾದಗಳನ್ನು ಅರ್ಪಿಸಿದರು. ಅನಂತರ ಶ್ರೀ. ಕೆ. ಕೃಷ್ಣಪೂಜಾರ್ಯರು ನವರಾತ್ರಿ ಮಹೋತ್ಸವದಲ್ಲಿ ಭಾಗ ನಡಿಸಿದ ಮಹಾನ್ ಯರಿಗೂ ಸಹಕರಿಸಿದ ಸುರಜನರಿಗೂ ಧನ್ಯ ವಾದಗಳನ್ನರ್ಪಿಸಿದರು

ಸ್ವೀಕಾರ.

ಶ್ರೀ. ರಂಗನಾಥ ದಿವಾಕರರ **ಸತ್ಯಾಗ್ರಹ** ಇತಿಹಾಸ ಮತ್ತು ತಂತ್ರ, ಮತ್ತು **ಕಾಂಗ್ರೆ ಸ್ ಸ್ವರೂಪ ದರ್ಶನ**, ಶ್ರೀ. ಬಿ. ನ ರಸಿಂಹನಂ **ಹೃತಿಧ್ವನಿ** ಇವನ್ನು ಸಾದರ ಸ್ವೀಕಾರ ಮಾಡಿಸ್ವೇವೆ ವಿಮರ್ಶೆ ನುಂದಿನ ವಾರ.

CHAMPAE'S
Snow & Lastrex
(SoleDistributers for (India.)
Sukhananda Stores
Santhekatte, UDIPI, S. K.

ಮಗ್ಗಿ
ಪುಸ್ತಕಗಳು
ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ತ್ರಿಗಳು, ದಾಖಲು ಮತ್ತು ಮಂತ್ಲಿ ರಿಟರ್ನ್ಸ್ ಫಾರ್ಮುಗಳು, ರಿಕಾರ್ಡು ಶೀಟುಗಳು ದೊರೆಯುತ್ತವೆ.
ಮಗ್ಗಿ ಪುಸ್ತಕ 1ಕ್ಕೆ 0—1—0
" 50ಕ್ಕೆ 2—9—0
" " 100ಕ್ಕೆ 5—0—0
Navabharat Book Depot,
UDIPI.

ESTD. 1926
CROWN RUBBER STAMP Co.
MFRS OF
RUBBER STAMPS
ENGRAVERS
BALMATTA ROAD MANGALORE S.K
Approved firm by the Govt. of Mysore. Certified by the Agent of the Govt. of Indian Ceylon.

ಭಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೈವಿ ತಯಾರಿಸಲ್ಪಟ್ಟ **ಆವೋಷಧ ವಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಿಜಿಸ್ತರು ಮಾಡಲ್ಪಟ್ಟಿದೆ)

ಲ ಔಸ್ಸಾಧಿಬಾಟ್ಲಿಗಳು ಹೆಚ್ಚು ಕಡಿಮೆ ಉದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳ ಒಂಡು ಬಾಣಂತಿಯನ್ನಕ್ಕೆ ಸಾಕಾಗುವವು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ಮ.ಶ.

ಮದ್ರಾಸಿನ.

ಉಡುಪಿಯ ಎಕೆಡೆಮಿಯ ಆಫ್ ಜನರಲ್ ಎಡ್ಯೂಕೇಶನ್- ಇವರು ಸ್ಥಾಪಿಸಲು ಕೈಕೊಂಡಿರುವ ಫಸ್ಟ್ ಗ್ರೇಡ್ ಕೊಲೇಜಿನ ನಿಧಿ ಸಂಗ್ರಹದ ಬಗ್ಗೆ ಇದೇ ದಸರಾ ವೇಳೆಗೆ ಮೈಸೂರು, ಬೆಂಗಳೂರು ಗಳಿಗೆ ದಕ್ಷಿಣ ಕನ್ನಡದ ಖಾಂಥವರಿಂದ ಸಹಾಯ ಪ್ರೋತ್ಸಾಹ ಪಡೆಯಲು ಹೋಗಿದ್ದ ಎಕೆಡೆಮಿಯ ರಿಜಿಸ್ಟ್ರಾರರಾಗಿರುವ ಡಾ। ಟಿ. ನಾಥವ ಪೈ, ಎಸ್. ಟಿ., ಬಿ. ಎಸ್.ರವರು ಮರಳಿ ಬರುತ್ತಾ, ಮದ್ರಾಸಿಗೂ ತರ್ತಾರ್ಯ ನಿಮಿತ್ತ ಹಾಗೂ ಎಕೆಡೆಮಿಯ ನಿಯಮ ಪ್ರಸಾರ ಕಾರ್ಯಕ್ರಮಗಳ ಬಗ್ಗೆ ಸಹಾ ಅಧಿಕಾರಿಗಳನ್ನು ಭೆಟ್ಟಿಮಾಡಿ, ಎಕೆಡೆಮಿಯ ವಿದ್ಯಮಾನ ಚಟುವಟಿಕೆಗಳ ಮಾಹಿತಿಯನ್ನು ಸ್ವತಃ ನೇಮ್ಮಡಿಸುವತೆ ಚಿತ್ತೈಸಿದ್ದರು. ಈ ಸಂದರ್ಭದಲ್ಲಿ ಸನ್ಮಾನ್ಯ ಅತಿಥಿಗಳನ್ನು ಸತ್ಕರಿಸಿ ಬಹುಮಾನಿಸುವರೆ ಒಂದು ಉಪಹಾರ ಕೂಟವು ರೊಯಪೇಟೆಯ-ಪುಡ್ ಟೀಂಜ್ ನಲ್ಲಿ ತಾ. 18ನೇ ಸಾಯಂಕಾಲ ಸರ್ವಸಿಸಲಾಗಿತ್ತು. ಪೆಟ್ಟಿಣ ಕನ್ನಡ ಜಿಲ್ಲೆಯವರಾದ ಸುಮಾರು ನೂರು ಮಂದಿ ಅನ್ಯ ಮಹಾನೀಯರೂ ಕೆಲ ಬೇಂಕುಗಳ ಆಫೀಸರರೂ ಆಮಂತ್ರಿತರಾಗಿ ಹಾಜರಿದ್ದರು. ಉಪಹಾರಾನಂತರ 'ಸ್ಪೆದೇರ ನಿಮ್ತ್ರನ' ಪತ್ರಿಕೆಯ ಸಂಪಾದಕರೂ ರಿಜಿಸ್ಟ್ರಾ ಬೇಂಕ್ ಡೈರೆಕ್ಟರರೂ ಆಗಿರುವ ಶ್ರೀ. ಸಿ. ಆರ್. ಶ್ರೀನಿವಾಸರಾವರು ತಮ್ಮ ಅಧ್ಯಕ್ಷಪೀಠಾಸನದಲ್ಲಿ ಮೂಸ್ಯ ಅತಿಥಿಗಳಿಗಿರುವ ವ್ಯಾಪಾರ, ಕೈಗಾರಿಕೆ, ಬೇಂಕಿಂಗ್, ಇನ್ಸೂರೆನ್ಸ್, ವಿದ್ಯಾಭ್ಯಾಸ ಮೊದಲಾದ ಅನೇಕ ವ್ಯವಹಾರಗಳ ಅನುಭವ ಕೌಶಲ್ಯಗಳ ಬಗ್ಗೆ ಅಭಿನಂದಿಸಿದುವಲ್ಲದೆ, ಸಭೆ ಅವರು ಮದ್ರಾಸಿಗೆ ಬಂದಿದ್ದ ಕಾರಣದಿಂದಾಗಿ ಸ್ವಾತ್ಯಾಪ್ತ ಭಾವೀ ಆರ್ಥಿಕ ಅಭ್ಯುದಯವನ್ನು ಮುಂದುವರಿಸುವಲ್ಲಿ ಅವರಿಗೆ ಸಹಾಯಕವೂ ಪ್ರೋತ್ಸಾಹದಾಯಕವೂ ಆಗಲೆಂದು ಆ ಸಿದರು.

ಎಡ್ವಕೇಟಾದ ಶ್ರೀ. ಕೆ. ಸಂಜೀವ ಕಾಮತರು ಮಾನನೀಯ ಡಾ। ಪೈಗಳವರು ಇಂದಿಗೆ ಇಪ್ಪತ್ತು ವರ್ಷಗಳಿಗೂ ಮೇಲ್ಪಟ್ಟು ಜನತಾಸೇವೆಯಲ್ಲಿ ದುಡಿದಿರುವ, ಇನ್ನೂ ಹೆಚ್ಚಿನ ಭರದಿಂದ ದುಡಿಯುತ್ತಿರುವ ಬಗೆಯನ್ನು ವಿವರಿಸಿ ಹೇಳಿದರು. ಸದ್ಯ ಡಾ. ಪೈಗಳವರು ಮದ್ರಾಸಿಗೆ ಬಂದುದು ಉಡುಪಿಯಲ್ಲಿ ಒಂದು ಫಸ್ಟ್ ಗ್ರೇಡ್ ಆರ್ಟ್ಸ್ ಕೊಲೇಜನ್ನು ಎಕೆಡೆಮಿಯೇ ಪರವಾಗಿ ಸ್ಥಾಪಿಸುವ ಸಮರ್ಪಕ ಪ್ರಯತ್ನಕ್ಕಾಗಿದೆಯೆಂದರು.

ಮಾನ್ಯ ಅತಿಥಿಗಳು ಉತ್ತರವೀಯುತ್ತ ಎಕೆಡೆಮಿಯ ಸಂಕ್ಷಿಪ್ತ ಪರಿಚಯವನ್ನು ಸಭೆಕರಿಗೆ ಮಾಡಿಕೊಟ್ಟು,ಅದರ ನಿಯಮವನ್ನೂ ಆನಶ್ಯಕತೆಯನ್ನೂ ಅಧಿಕಾರಿಗಳಲ್ಲಿ ಮುಂದಿಟ್ಟು ಪಾಡುವ ಉದ್ದೇಶವನ್ನು ಸ್ಪಷ್ಟಪಡಿಸಿದರು. ನಿಸ್ವಸಿವ್ಯಾಲಯದ ಯಾವುದೋ ಒಂದು ಪಾರ್ಶ್ವದ ಚಟುವಟಿಕೆಗಳನ್ನೆ ಸಂಶೋಧಿಸಿ ಮಾಡದೆ, ಅವುಗಳಿಗೆ ಅನುಸಂಧಿಸಿ ಜನತೆಯ ಆವಶ್ಯಕತೆಗಳನ್ನು ಪೂರೈಸುವುದೇ ಎಕೆಡೆಮಿಯ ಧ್ಯೇಯೋದ್ದೇಶವು.

ಸುದೀರ್ಘವಲ್ಲದ, ಆಗ್ರಾವಧಿಯ ಪಾಲಿಕ್ರಮ, ತರಬೇತುಗಳ ಮೂಲಕ ಇಂಜಿನಿಯರಿಂಗ್, ವೈದ್ಯಕೀಯ, ಕೃಷಿ ಸಂಬಂಧಿ ವಿದ್ಯಾ ಯೋಜನೆಗಳನ್ನು ಎಕೆಡೆಮಿಯು ಪಾಡಿರುವ ಸಂಗತಿಯನ್ನೂ ವೇದ್ಯಪಡಿಸಿದರು. ಒಟ್ಟಿನ ಮೇಲೆ ವಿದ್ಯಾಧನವೂಗಳೆಲ್ಲರೂ ಎಕೆಡೆಮಿಗೆ ಸದಸ್ಯರಾಗಿ ಜಿಲ್ಲಾ ಖಾಂಥವರು ಉಡುಪಿ ಕೊಲೇಜಿಗೆ ಸಹಾಯ ಪ್ರೋತ್ಸಾಹ ಗಳನ್ನೀಯಬೇಕೆಂದು ಸಂಖ್ಯಾರ್ಥಿಸಿ, ತಮ್ಮನ್ನೂ ತಮ್ಮ ಸಂಸ್ಥೆಗಳನ್ನೂ ಸನ್ಮಾನಿಸಿ ಗೌರವಿಸಿದ ಒಗ್ಗೆ ಧನ್ಯವಾದಗಳನ್ನರ್ಪಿಸಿದರು.

ಮದ್ರಾಸಿನಲ್ಲಿ ವಿದಾಯ ಸತ್ಕಾರ ಕೂಟ-ಮದ್ರಾಸಿನಲ್ಲಿರುವ ಬಂಟರ ಯಾನೆ ಸಾಡವರ ಕೂಟದವರು ತಾ 18ರಲ್ಲು 'ನೊರ್ತರ್ನ್ ಕೆಪೆ'ಯಲ್ಲಿ ಆಸೀನರಿಕ್ಕೆ ಏಜಿಸಿಯರಿಂಗ್ ಉದ್ಯೋ ಶಿಕ್ಷಣ ಪಡೆಯಲು ಹೋಗಲಿರುವ ಶ್ರೀ. ಕೆ. ಶಿವರಾಮ ಹೆಗ್ಡೆ, ಬಿ. ಇ. ಯವರಿಗೆ ವಿದಾಯ ಸತ್ಕಾರ ಕೂಟ ನಡೆಸಲಿರಿಸಿದರು. ಈ ಸಂದರ್ಭದಲ್ಲಿ ಶ್ರೀಗಳಾದ ರಾಮಕೃಷ್ಣ ರೈ, ಭೋಜ ಶೆಟ್ಟಿ, ಬಿ. ನಿರಲದಾಸ ಹೆಗ್ಡೆ, ಬಿ. ರಂಘನ ಶೆಟ್ಟಿ ಮುತ್ತು ಕೆ. ಶಿವರಾಮ ಶೆಟ್ಟಿಯರು ಶ್ರೀ ಹೆಗ್ಡೆಯವರ ಗುಣಾಕರ್ಷಣ ಮಾಡಿ ಅವರಿಗೆ ತ್ರೀಯಸ್ಸನ್ನು ಕೋರಿದರು. ತನ್ನನ್ನು ಗೌರವಿಸಿದ ಮೆಡಕ್ಕಾಗಿ ಶ್ರೀ ಹೆಗ್ಡೆಯವರು ಆಭಾರ ಸೂಸಿ ಸಂಪರ್ಕೋಚಿತ ಮಾತುಗಳನ್ನಾಡಿದರು. ಗ್ರೂಪ್ ಫೋಟೊ, ಧನ್ಯವಾದಾರ್ಪಣೆಯಂದಿಗೆ ಸತ್ಕಾರ ಕೂಟ ಕೊನೆಗೊಂಡಿತು.

ಮದ್ರಾಸಿನಲ್ಲಿ ಕನ್ನಡ ಪ್ರಾಥಮಿಕ ಶಾಲೆ ಮದ್ರಾಸಿನಲ್ಲಿ ಕನ್ನಡ ಪ್ರಾಥಮಿಕ ಶಾಲೆಯೊಂದು ಇಲ್ಲದುದು ಕೊರತೆಯೆಂದು ಬಹಳ ಸಮಯದಿಂದ ಹಲವರು ಹೇಳುತ್ತಿದ್ದಾರೆ. ಅಂತಹ ಕೊರತೆಯನ್ನು ತೆಗೆದು ಹಲವರ ಆಕಯಂತೆ ಒಂದು ಶಾಲೆಯನ್ನು ಇದೇ ವಿಜಯದಶಮಿ ದಿನ ತೆರೆಯಲಾಯಿತು. ಪ್ರಕೃತ ಹೆಚ್ಚು ಮಕ್ಕಳು ತಿರುವಲ್ಲಿ ಕೇರಿಯಲ್ಲಿರುವುದರಿಂದ ಅಲ್ಲಿ ತೆರೆಯಲಾಯಿತು. ತಾ ೧೬ರಂದು ಪ್ರಾರಂಭವಾಯ ನುವಲ್ಲಿ—ಶ್ರೀ ಪಿಚೈಸ್ವ ಕಾಲೇಜ್ ಕನ್ನಡ ಪಂಡಿತರಾದ ಸಾ. ಉಡುಪಿ ಸೀತಾರಾಮಾಚಾರ್ಯರವರ ಆಧ್ಯಕ್ಷತೆಯಲ್ಲಿ ಈ ಶಾಲಾರಂಭ ನೆರವೇರಿತು.

ಹೈದರಾಬಾದು-ಡಾ। ಕೆ. ಎಸ್. ಶಿಟ್ಟಿ, ವೆಟರ್ನರಿ ಸರ್ಜನ್; ಹೈದರಾಬಾದು, ಇವರನ್ನು ನಿಜಾಮ ಸರಕಾರವು ಹೆಚ್ಚಿನ ಶಿಕ್ಷಣ ಪಡೆಸಿಲೋಸುಗ ಅಮೇರಿಕಕ್ಕೆ ಕಳುಹಿಸಲು ನಿರ್ಧರಿಸಿರುತ್ತದೆ. ಶ್ರೀಯುತರು ಸದ್ಯದಲ್ಲೆ ಪ್ರಯಾಣ ಬೆಳೆಸಲಿರುವರು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನವರು ಇನಿಗೆ ಶ್ರೇಯಸ್ಸನ್ನು ಬಯಸುವೆವು.

ಬೊಂಬಾಯಿಯಲ್ಲಿ ಸಂಯುಕ್ತ ಕ[illegible]-ಸಂಘದ ಆಶ್ರಯದಲ್ಲಿ ನಾಡಿನ ಪ್ರಖ್ಯಾತ ಕಾರ್ಯಕ್ರಮಗಳು [illegible] ವರೆಗೆ ವಿಶಿಷ್ಟ ರೀತಿಯಲ್ಲಿ ನಡೆದುಬಂದಿದ್ದು ಶ್ರೀಗಳಾದ ಆರ್. ಕೆ. ಪ್ರಭು, ಜಿ. ಪಿ. ರಾಜರತ್ನಂ, ಇವರು ಮೊದಲನೆಯ ದಿನದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಎರಡನೆಯ ದಿನ ನ್ಯಾಯಮೂರ್ತಿ ಲೋಕೂರ್ ಸಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಪ್ರತೀಕರಣದ ಗೊತ್ತುವಳಿಗಳು ಸ್ವೀಕೃತವಾದುವು. ಎರಡೂ ದಿನಗಳಲ್ಲಿ, ನಾಟಕ, ಸಂಗೀತ ಮೊದಲಾದ ಮನರಂಜನೆಯ ಕಾರ್ಯಕ್ರಮಗಳಿದ್ದುವು.

ದಾಸಪ್ರಕಾಶದಲ್ಲಿ- ಮೈಸೂರಿನಲ್ಲಿ ಮಾರ್ವಾರ್ ಕೆಪೆ ಮತ್ತು ಮಾರ್ವಾರ್ ಹೋ[illegible] ನೂಲಿಕರೂ ಆದ ಶ್ರೀ[illegible] ಕೂತ್ತೆ ಪೂರು ನೀರಾ[illegible] ನವರು ಮಂತ್ರಿಗಳನ್ನು ನ್ಯಾಯವಿಧಾಯಕ ಸಭಾಧ್ಯಕ್ಷರನ್ನೂ ಬರಗೂಡಿಕೊಂಡು ಸತ್ಕರಿಸಿದರು. ಈ ಕೂಟಕ್ಕೆ ಸರಕಾರದ ಉನ್ನತಾಧಿಕಾರಿಗಳೂ, ಪುರ ಪ್ರಮುಖರೇ ಕರೂ ಬಂದಿದ್ದರು. ಬಂಜಿ ರುಚಿಯಾದ ತಿಂಡಿ ತೀರ್ಥಗಳಾದ ನಂತರ ಶ್ರೀ ಶೇಕಾರಾನು ರಾಯರು ಆತಿಥಿಗಳನ್ನೆಲ್ಲಾ ಪರಿಚಯಿಸಿದರು ಮಂತ್ರಿಗಳಾದ ಶ್ರೀ ಪುಲ್ಲಾರೆಡ್ಡಿಯವರು ಸಮುಚಿತ್ತ ಸ್ವಾಗತ ಮತ್ತು ಸತ್ಕಾರಕ್ಕಾಗಿ ಸ್ವತಃ ವಂದನೆ ಸಲ್ಲಿಸಿ ಶ್ರೀ ರಾಯರ ಉದ್ಯಮಗಳೆಲ್ಲವನ್ನು ಯಶಸ್ವಿಯಾಗಲೆಂದು ಹಾರೈಸಿದರು.

ಪತ್ರಿಕೋದ್ಯೋಗಿಗಳ ಸತ್ಕಾರ-ಮೈಸೂರು ನಗರದ ಪತ್ರಿಕೋದ್ಯೋಗಿ ಸಂಘದವರು ಸಂಸ್ಥಾಪನೆಯ ಪತ್ರಿಕೋದ್ಯೋಗ ಸಮ್ಮೇಳನದ ಸ್ಥಾಪಿ ಸಮಿತಿ ಸದಸ್ಯರಿಗೆ ಸಾರ್ವಜನಿಕ ಪಾಸರ್ಕಾರದಲ್ಲಿ ಚಿಕ್ಕ ಕಿನಲ್ಲಿ ಒಂದು ಭೋಜನ ಕೂಟ ಏರ್ಪಡಿಸಿದ್ದರು.

ಸ್ಥಾಯಿ ಸಮಿತಿ ಸಭೆ- ಸಂಸ್ಥಾಪನ ಪತ್ರಿಕೋದ್ಯೋಗಿ ಸಮ್ಮೇಳನ ಸ್ಥಾಪಿ ಸಮಿತಿ ಸಭೆಯು 14ನೇ ತಾರೀಖು ಮೈಸೂರಲ್ಲಿ ನೇರಿ ಜನವಾಣಿ. ವಿಶ್ವಕರ್ನಾಟಕ ಪತ್ರಿಕೆಗಳಿಗೆ ಕೊಟ್ಟಿರುವ ಸೋಟೀಸನ್ನು ಲಿಂದಲ್ಲೆ ಪಡೆಯಬೇಕೆಂದು ಸರಕಾರವನ್ನು ಒತ್ತಾಯ ಪಡಿಸುವ ನಿರ್ಣಯವನ್ನು ಅಂಗೀಕರಿಸಿ ಆ ಸ್ಥಿದೆ ಈ ವಿಚಾರದಲ್ಲಿ ವಿಶಾಸರಲ್ಲಿ ಒಂದು ಯೋಗ ಹೋಗತಕ್ಕದ್ದೆಂದು ತೀರ್ಮಾನಿಸಿತು.

ಕಸ್ತೂರ್ ಬಾ ಶಿಕ್ಷಣ ಶಿಬಿರ-ಶ್ರೀ ಜಮನಾಲಾಲರವರ ಬಂಧುಗಳಾದ ಲಕ್ಷ್ಮಣದಾಸ್ ಪೊದ್ದಾರವರು ದಸರಾ ಸೋಡಲು ಬಂದಿದ್ದವರು ಇಲ್ಲಿ ನಡೆಯುತ್ತಿರುವ ಕಸ್ತೂರ್ ಬಾ ಶಿಕ್ಷಣ ಶಿಬಿರಕ್ಕೆ ತಮ್ಮು ಪತ್ನಿಯೊಡನೆ ಭೇಟಮಿತ್ತು ಕನ್ನ ಸಂತೋಷವನ್ನು ವ್ಯಕ್ತಪಡಿಸಿ 251 ರೂಗಳನ್ನು ಶಿಬಿರದ ಖರ್ಚಿಗಾಗಿ ದಾನ ನೀಡಿರುತ್ತಾರೆ. ದಸರಾಕ್ಕೆ ಬಂದ ಹಲವು ಮುಖಂಡರು ಶಿಬಿರವನ್ನು ಸಂದರ್ಶಿಸಿ ಸಂತೋಷವನ್ನು ವ್ಯಕ್ತಪಡಿಸಿದರು.

ಪಾನ ನಿರೋಧ-ಜಾರಿಗೆ ಬರಬೇಕು. ಪ್ರತಿನಿಧಿ ಸಭೆಯಲ್ಲಿ ಎರಡು ಖಾಸಗಿ ಖಾರ್ಖಾನೆಗಳ ಆಂಗೀಕಾರ. ಪ್ರಜಾ ಪ್ರತಿನಿಧಿ ಸಭೆಯಿಂದ ಸೇರಿದ ದಿನದ ಕಾರ್ಯಕ್ರಮವು ದಿವಾನರಾದ ಪ್ರಧಾನಿ ಶೇಷಾದ್ರಿ ಎಸ್. ನಾಯಿ ದಿವಾನರ ಅಧ್ಯಕ್ಷತೆಯಲ್ಲಿ ನಡೆದು ಸಾರ್ವಜನಿಕ ಪಬ್ಲಿಕ್ ಆರೋಗ್ಯವನ್ನು ಜಾರಿಗೆ ತರಬೇಕೆಂದು ಸರಕಾರಕ್ಕೆ ವಿಶಾಸ ಬೇಕೆಂದು ಕಾಂಗ್ರೆಸ್ಸಿನ ಶ್ರೀ ಅಣ್ಣಾಸ್ವ ಕೆಟ್ಟಿರವರಿಗೆ ಯ ಬಹುಮತದಿಂದ ಆಂಗೀಕೃತವಾಯ್ತು. ಸರಕಾರ ನಿರ್ಣಯವನ್ನು ಒಪ್ಪಿಕೊಳ್ಳಲು ಇಷ್ಟಪಡಲಿಲ್ಲ.

ಮೈಸೂರು ಪತ್ರ

(ಸ್ವಂತ ಸುದ್ದಿಗಾರರಿಂದ)

ದಸರಾ ಮಹೋತ್ಸವ-ವು ನೈಜವಿಂದ ಸಡಿಮಿಯಾ. ಜನಸಂದಣಿ ಆಕಾಂಕ್ಷಾತ್ಮಕವಾಗಿತ್ತು. ಜನರ ಸೌಕರ್ಯಕ್ಕಾಗಿ ಹಲವಾರು ಸ್ಪೆಷಲ್ ರೈಲುಗಳು ಓಡಾಡಿದುವು ಹೊರಗಿನಿಂದ ಬಂದವರಿಗೆ ರೇಶನ್ ವ್ಯವಸ್ಥೆಯೂ ಸಮರ್ಪಕವಾಗಿತ್ತು. ಹೋಟೆಲಿನವರೂ ತಾಲೂ ಸಕ್ಕರೆಗೆ ಅಭಾವವಾಗಿದ್ದರೂ ಸಾಧ್ಯವಾದಷ್ಟು ಪುಷ್ಟಿಗೆ ಕಾಫಿ ತಿಂಡಿ. ಊಟಗಳನ್ನು ನಿರಾತಂಕಗಳಿಗೆ ಒದಗಿಸಿದರು. ಐದೆರಡು ದಿನ ಸುಳೆ ಬಾದುವರಿಂದ ಅನೇಕರಿಗೆ ರಾತ್ರಿ ಹೊತ್ತು ಕಾಲ ಕಳೆಯುವುದೇ ತಪ್ಪಾದಂತ್ತು. ಪ್ರಜಾ ಪ್ರತಿನಿಧಿ ಸಭೆ ಕೂಡಾ ಇದೇ ಸಮಯದಲ್ಲಿ ನಡೆಯುತ್ತಿದ್ದರಿಂದ ಕೆಲವು ಇತ್ರಗಳು ಪ್ರತಿನಿಧಿ ಸಭಾ ಸದಸ್ಯರಿಗೆ ವಿಮಾನ ಲಾಗಿರುವುದು ಇತರರಿಗೆ ಅನಾನುಕೂಲಕ್ಕೆ ಕಾರಣವಾಗಿದೆ.

16ನೇ ತಾರೀಖು 4 30 ಗಂಟೆಗೆ ಶ್ರೀ ಮನ್ಮಹಾರಾಜರವರು ದಿವ್ಯವಾಗಿ ಅಲಂಕರಿಸಲಾಗಿದ್ದ ಅನೆಯ ಮೇಲೆ ಸಿಂಹಾಸನಾರೂಢರಾಗಿ ಸಕಲ ಪರಿವಾರದೊಡನೆ ಮೆರವಣಿಗೆ ಹೊರಟರು ಮೆರವಣಿಗೆಯು ಸಯ್ಯಾಜಿರಾವ್ ರಸ್ತೆ, ಬಂಬೂ ಬಜಾರ್ ಮಾರ್ಗವಾಗಿ ಬನ್ನಿ ಮಂಟಪಕ್ಕೆ ತೆರಳಿ ಆಲ್ಲಿಂದ ಅದೇ ಮಾರ್ಗವಾಗಿ ಹಿಂತಿರುಗಿತು. ದಾರಿಯುದ್ದಕ್ಕೂ ಲಕ್ಷಾಂತರ ಜನರು ಹಾಜರಿದ್ದು ಪ್ರಭು ದರ್ಶನ ಪಡೆದರು ದಸ್ಸುಮಲ್ಲಿ ಅನೇಕರು ಚಿತ್ರಪಟಗಳನ್ನುಹಾಕಿ ಹಾರ ತುರಾಯಿಗಳನ್ನು ಅರ್ಪಿಸಿದರು.

ಸತ್ಕಾರ ಕೂಟಗಳು-ಮೈಸೂರಿನ ಸ್ಥಾನಿಕ ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಪಿ ಆರ್ ರಾಮಯ್ಯಂಗಾರವರು ಸಂಸ್ಥಾನದ ದಿವಾನರಾದ ಸರ್ದಾರ ಶಿ ಸೀಮಾನ್ ಎಸ್. ನಾಯಿ ದಿವಾನರವರಿಗೆ ಚಾಮುಂಡೀಪುರಿ ಭವನದಲ್ಲಿ ಒಂದು ಸತ್ಕಾರ ಕೂಟವನ್ನು 14ನೇ ತಾರೀಖು ಸರ್ಪಡಿಸಿದ್ದರು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟುನಿದ್ದರೂ, ಕಸ್ಪದ ಗರ್ಭಧಾರಣೆ ಅಥವಾ ಇನ್ನಾವಕಾರಣವಿದ್ದರೂ— **ಋಮಾರಿ ಮಾತ್ರೆಗಳು** ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಅಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮೂರಿದ ಕೇಸುಗಳಿಗೆ ರೂ. 5. 6ನಿಂಗಳ ಬರ್ತ್ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಆಲಾಯಿದೆ.)

Mrs. P. DEVEE,

P. O. Box (A. B.) Tollygunge, Calcutta,

ಸ್ಥಾನಿಕಸ್ಥ: ಸಾ ಕೆಂಪಿನಿ, ಮಂಗಳೂರು

—ಮಕ್ಕಳನ್ನು ಹಡೆಯುವುದು ಸಾಕು—

ಆತಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹರಿವಿಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦. ಪೋಸ್ಟೇಜ್ ಚಾರ್ಜು ೧೫ಆಣೆ.

ಮೂಲಕರು:—**ಹಾಲಪ್ಪಾ ಹಕೀರಪ್ಪಾ ಹಾವಣಗೇರಿ**

ಆರ್ಯುರ್ವೇದ ಔಷಧಾಲಯ, ಗದಗ-ಸಿಟಿ

ವಿಜಯಪುರ:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಪ್ಪಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್ ಹಾವಾಸಗೇರಿ:—ಹಾವಹಗೇರಿ ಪ್ರೆಸ್ಸ್. ಬಿ. ಎಲ್. ಕೆಮಲಾಪುರ, ಕೆಮಿಸ್ಟ್, ಹಾವೇರಿ. ಬ್ಯಾಡಗಿ.

Ayurveda Oushadalaya, GADAG CITY.

ಶ್ರೀ. ಶಿವರಾಮ ಕಾರಂತರ

ಹೊಸ ಪುಸ್ತಕ

ಮುಗಿದ ಯುದ್ಧ

ಬೆಲೆ 3—8—0.

ನವಭಾರತ ಪುಸ್ತಕ ಭಂಡಾರ,

ಉಡುಪಿ.

ದಕ್ಷಿಣ ಕನ್ನಡ.

ಮಂಗಳೂರು

ಖಡ್ಡಾಯ ಶಿಕ್ಷಣ ಕೇಂದ್ರಗಳು- ತಾ. 20ರಲ್ಲು ಬೆಳಿಗ್ಗೆ ಬಸ್ರೂರಲ್ಲಿ ಮಧ್ಯಾಹ್ನ ಗಂಗೊಳ್ಳಿಯಲ್ಲಿ ಶ್ರೀ. ಬಿ. ವಿ. ರಮಣರವರ ಅಧ್ಯಕ್ಷತೆಯಲ್ಲಿ ಖಡ್ಡಾಯ ಶಿಕ್ಷಣ ಕೇಂದ್ರಗಳು ತೆರೆಯಲಾದುವು. ಶಾಲಾ ಡಿ. ಇನ್ಸ್‌ಪೆಕ್ಟರ್ ಶ್ರೀ ಶಿವರಾಮ ಗೌಡರು ಖಡ್ಡಾಯ ಶಿಕ್ಷಣದ ಕುರಿತು ಭಾಷಣವಿತ್ತರು. ಆಂತೆಯೇ ಪಿಟ್ಲದಲ್ಲಿ ಶ್ರೀ. ಎನ್. ಸುಬ್ಬರಾವ್, ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರ ನೇತೃತ್ವದಲ್ಲಿ ಯೂ ತೆರೆಯಲಾಯಿತು.

ಕೆಲವು ಪಾರ್ಕರ್ ಪೆನ್ನುಗಳು ದಕ್ಷಿಣ ಕನ್ನಡ ಜಿಲ್ಲೆಗೂ ಮೂರಾಟಕ್ಕಾಗಿ ಬಿಂಗಡಿಸಿದ ಪ್ಪಟ್ಟಿವೆ. ಪೆನ್ನು ಆಪೇಕ್ಷಿಸುವವರು ತಮ್ಮ ಅನಿವಾರ್ಯತೆ, ನೈತ್ರಿ. ಸಂಗಾಡನೆ ಮೊದಲಾದ ಮಾಹಿತಿಗಳನ್ನಿತ್ತು ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಿಗೆ ಪರ್ಮಿಟ್ ಬಗ್ಗೆ ಬರಕೊಳ್ಳಬಹುದು.

ಗಡಿಯಾರ ಗೋಪುರ- ಪಂಪನಕಟ್ಟೆಯಲ್ಲಿ ಒಂದು ಗಡಿಯಾರ ಗೋಪುರವನ್ನು ರಚಿಸಬೇಕೆಂದು ಮಂಗಳೂರು ಮುನಿಸಿಪಲ್ ಕೌನ್ಸಿಲಿನಲ್ಲಿ ನಿರ್ಣಯವಾಗಿದೆ.

ಶಿಕ್ಷೆ- ಉಡುಪಿ ತಾಲೂಕು ಮಣಿಪುರದ ರಾಮಕೃಷ್ಣ ಭಟ್ ಮತ್ತು ಮಂಗಳೂರು ತಾಲೂಕು ಕುದುಪಿನ ಮೋಗ್ರ ಪೂಜಾರಿ ಎಂಬವರು ರಿಕ್ವಿಜೀಶನ್ ಆಕ್ಟಿಯನ್ನೊಪ್ಪಿಸಲಿಲ್ಲವೆಂಬ ಆಪಾದನೆಯ ಮೇಲೆ ದ್ದಪಡಿಸಲ್ಪಟ್ಟರಾದ ಮಿ. ಜೋಶ್ವರು, ಮೊದಲನೆಯವರಿಗೆ ರೂ. ೬೫ ಮತ್ತು ಎರಡನೆಯವರಿಗೆ ರೂ. ೬೦ ಜುಲ್ಮಾನೆ ವಿಧಿಸಿದರು. ತಂಡೇಲ ಹಮ್ಮದ ಬ್ಯಾರಿ ಎಂಬವನು, ಜಿಲ್ಲಾಧಿಕಾರಿಗಳ ನೋಟಿಫಿಕೇಶನ್ ಉಲ್ಲಂಘಿಸಿ ಗೆಣಸನ್ನು ಬೇರೆ ಕಡೆಗೆ ಬಯ್ಯತೆತ್ತಿಸಿದ ಆರೋಪದ ಮೊಕದ್ದಮೆಯಲ್ಲಿ, ಎಡಿಶನಲ್ I ಕ್ಲಾಸ್ ಮೆಜಿಸ್ಟ್ರೇಟರು ರೂ. ೧೦೦ ಜುಲ್ಮಾನೆ ವಿಧಿಸಿರುವರು.

೧೫೪ ಲಡಿ ನೂಲು- ಗಾಂಧಿಜಿಯವರ ಜನ್ಮ ದಿನದ ಕಾಣಿಕೆಯಾಗಿ ಸುಂಗಳೂರು ಸ್ವದೇಶೀ ಸ್ಪೋರ್ಟಿನವರು ಸ್ವೀಕರಿಸಿದ್ದಾರೆ.

ಕಮ್ಯುನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ತಾ. ೧೪ರಂದು ಸಂಜೆ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ. ಎಸ್. ಎನ್. ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ವಿ. ಕಕ್ಕಿಲ್ಲಾಯರು ಮಾತಾಡುತ್ತ ಜಿಲ್ಲೆಯ ಪತ್ರಿಕೆಗಳ ಮೂಲಕ ಕಮ್ಯುನಿಸ್ಟ್ ಪಾ[illegible]ಗೂ ಮಂಗಳೂರು ಕಮ್ಯುನಿಸ್ಟರ ವಿಷಯ ಕೃಕಟಿತವಾದ ಅಪಪ್ರಚಾರಕ್ಕೆ ತಕ್ಕ ಉತ್ತರವನ್ನಿತ್ತರು. ಶ್ರೀ. ಶಾಂತರಾಂ ಪೈಗಳು ಪಾರ್ಟಿಯ ಧ್ಯೇಯ ಧೋರಣೆಗಳನ್ನು ವಿವರಿಸಿ ದೇಶದ ಸ್ವಾತಂತ್ರ್ಯವೇ ಇನ್ನಿತರ ದೇಶಸ್ಪೀರಿ ಕಮ್ಯುನಿಸ್ಟರ ಕೃಷಿಗಳಂತೆ ಕಮ್ಯುನಿಸ್ಟರದೂ ಆಪ್ಯ ಧ್ಯೇಯವಾಗಿಜಿಯೆಂದೂ ಅಂಧ ಸ್ವಾತಂತ್ರ್ಯಕ್ಕಾಗಿ ಬಿತರರಂತೆ ಯಾವ ತ್ಯಾಗ ಮಾಡಲು ಕಮ್ಯುನಿಸ್ಟರೂ ಹಾಗೂ ಸಜೂರ ವರ್ಗವು ಸದಾ ಸಿದ್ಧವೇ ಇದೆ ಎಂದೂ ಹೇಳಿದರು. ಶ್ರೀ. ಹೊಳ್ಳರು ಮಾತಾಡುತ್ತಾ ಕೋಂಗ್ರೆಸ್. ಲೀಗ್. ಕಮ್ಯುನಿಸ್ಟ್ ಐಕ್ಯದ ಬಗ್ಗೆ ಮಾತಾಡಿದರು. ಶ್ರೀ. ಜಿ. ಎ. ಸ್. ಶೆಣೈಯವರ ವಂದನೋಕ್ತಿಯೊಡನೆ ಕಾರ್ಯಕ್ರಮ ಕೊನೆಗೊಂಡಿತು.

ಇನ್ನಂಜೆ- ತಾ 16-10-45ರಲ್ಲು ಸ್ಥಳೀಯ ಶ್ರೀ ವಿಷ್ಣುಮೂರ್ತಿ ಹಯನದನ ಸ್ವಾಮಿ ಜೈಹ್ಯೂಲಿನಲ್ಲಿ ಸದ್ರಿ ಶಾಲಾ ಸ್ಥಾಪಕರ ದಿವಾನಾಥರೆಯು ಶ್ರೀ ಸಾಬಾಜಿ ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಉಪಹಾರ ಕೂಟದ ನಂತರ ವಿದ್ಯಾರ್ಥಿಗಳ ಪಂದ್ಯಾಟ, ಇತ್ಯಾದಿ ಚಟುವಟಿಕೆಗಳೂ ಇದ್ದುವು. ಮಧ್ಯಾಹ್ನ ಸಭೆಯು ಜರಗಲಾಗಿ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣವಾದೊಡನೆ ಶಾಲಾ ಮೆನೇಜರರ ಸ್ವಾಗತ ಭಾಷಣವಾಯಿತು. ಶ್ರೀ. ನಾಥವ ತಂತ್ರಿಗಳು ಸ್ಥಾಪಕರ ಗುಣ ಕಥನದೊಡನೆ ಅವರ ಸೂರ್ಣ ಚರಿತ್ರೆಯನ್ನು ಕುರಿತು ಭಾಷಣವಿತ್ತರು. ಅನಂತರ ಅಧ್ಯಕ್ಷರ ಸುರಸವಾದ ಭಾಷಣವಾದೊಡನೆ ಧನ್ಯವಾದವನ್ನು ಸಮರ್ಪಿಸಿದ ಬಳಿಕ ಸಭೆಯು ಮುಕ್ತಾಯವಾಯಿತು.

ಪಡುಬಿದ್ರಿ- ತಾ. 28-10-45ನೇ ಆದಿತ್ಯವಾರ ರಾತ್ರಿ ಸ್ಥಳೀಯ ಬೋ. ಹಾ. ಎ. ಶಾಲಾ ಕಟ್ಟಡದಲ್ಲಿ ಸದ್ರಿ ಕಟ್ಟಡ ವಿಸ್ತರಣಾ ಫಂಡಿನ ಧನ ಸಂಚಯಕ್ಕಾಗಿ 'ಪಡುಬಿದ್ರಿ ರೋವರ್ಸ್ ಸ್ಕೌಟ್' ದಳದವರು ಉಡ್ಪಿ ರೇಂಜನ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ. ಕೆ. ಸಂಜೀವ ಭಟ್, ಎಮ್ಸ್. ಎ. ಎಲ್. ಟಿ-ಇವರ ಅಧ್ಯಕ್ಷತೆಯಲ್ಲಿ 'ಪ್ರತೀಕಾರ' ಎಂಬ ಸಂಗೀತ ನಾಟಿಕವನ್ನು ಅಭಿನಯಿಸಿ ಸಲಿಯವರು

ಮುದ್ರಾಡಿ- ತಾ. 16-10-45ರಲ್ಲು ಮುದ್ರಾಡಿ ಬೋ. ಎ. ಶಾಲೆಯ ಮಕ್ಕಳ ಕೂಟದ ಸಹಯೋಗದಿಂದ, ಶ್ರೀ. M. ವಾದಿರಾಜ ಕಲ್ಲೂರರ ಅಧ್ಯಕ್ಷತೆಯಲ್ಲಿ ಶಾರದಾಪೂಜೆಯು ಅತಿ ಸಂಭ್ರಮದಿಂದ ಜರಗಿತು. ಪ್ರಾತಃಕಾಲ ಶಾಲಾ ಬಾಲಕರ, ಭಜನೆ, ಪೌರವಣಿಗೆ, ಸಂಜೆ ಮಕ್ಕಳಿಂದ ಲೇಜಿಮ್, ಕೋಲಾಟ, ಹಾಡ್ಯ, 'ಲವನುಶ' ಎಂಬ ಏಕಾಂಕ ನಾಟಕ ಅಲ್ಲದೆ ಇತರ ಹಾಸ್ಯರಸ ವಿನೋದಗಳು ಚಿತ್ತಾಕರ್ಷಕವಾಗಿ ಪ್ರದರ್ಶಿಸಲ್ಪಟ್ಟುವು. ಶಾಲಾ ಹರಿಜನ ಬಾಲಕರಿಗೆ ಗ್ರಾಮ ಕಾಂಗ್ರೆಸ್ ಕಮಿಟಿಯ ವತಿಯಿಂದ ಉಡಿಗೆಯನ್ನು ಅಧ್ಯಕ್ಷರು ಹಂಚಿದರು. ಅಧ್ಯಕ್ಷರು ಉಪಾಧ್ಯಾಯರೂ ಹೆತ್ತವರೂ ಎಂಬ ಕುರಿತೂ ಮುಖ್ಯ ಉಪಾಧ್ಯಾಯರು 'ಶಾಲಾಭಿವೃದ್ಧಿಗೆ ಗ್ರಾಮಸ್ಥರ ಕರ್ತವ್ಯ' ಎಂಬ ವಿಷಯವಾಗಿಯೂ ಭಾಷಣವಿತ್ತರು. ಹಲವು ಗ್ರಾಮಸ್ಥರೂ ಮಾತಾಡಿದರು. ಕೊನೆಗೆ ಧನ್ಯವಾದ ಸಮರ್ಪಣೆ ಮಂಗಳಾಚರಣಗಳಿಂದ ನೆರೆದ ಸಭಿಕರಿಗೆ ಪಂಚ ಕಜ್ಜಾಯ ಹಂಚಿ ಸಭೆಯು ಮುಕ್ತಾಯವಾಯ್ತು.

ಕಟೀಲು- ಇದೇ ಕಳೆದ ತಾ 14 ನುತ್ತು 15ರಲ್ಲು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಆಶ್ರಯದಲ್ಲಿ ಸನಾತನ ಧರ್ಮ ಸಮ್ಮೇಳನವು ವಿದ್ವಾನ್ H: ರಾಮ್ M A. L T.B O L.-ರವರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು. ಮೊದಲ ದಿನ ಧರ್ಮ ಸಮ್ಮೇಳನದ ಆವಶ್ಯಕತೆಯ ವಿಚಾರದಲ್ಲಿ ಭಾಷಣಗಳು ಜರಗಿ ಮರುದಿನ ವಾದ್ಯ ಸಂಗೀತಾದಿಗಳಾದ ಮೇಲೆ 'ಭಕ್ತಿ ನುತ್ತು ಮುಕ್ತಿ' ಎಂಬ ವಿಚಾರದಲ್ಲಿ ಶ್ರೀ ನಿಡ್ಡೋಡಿ ಗುರುರಾಜ ಭಟ್ಟರು ಶ್ರೀ. ಶ್ರೀನಿವಾಸ ಉಡುಪ, ಶ್ರೀ. ಶ್ಯಾಮರಾಯಶೆಟ್ಟಿ, ಶ್ರೀ. ಕೃಷ್ಣ ಉಡುಪ ಇವರ ಬೋಧಪ್ರದ ಭಾಷಣಗಳಾದ ಬಳಿಕ ಅಧ್ಯಕ್ಷ ಮಹಾರಯರು ಸಮಯೋಚಿತ ಭಾಷಣದಿಂದ ಸಭಿಕರನ್ನು ಆನಂದಗೊಳಿಸಲು ಇಲ್ಲಿಯ ಶಾಲೆಯ ಮುಖ್ಯೋಪಾಧ್ಯಾಯರಿಂದ ಧನ್ಯವಾದ ಸಮರ್ಪಣೆಯಾಗಿ ಸಭಾಂತ್ಯವಾಯಿತು. ಈ ಸಮ್ಮೇಳನವನ್ನು ಸಾಂಗಗೊಳಿಸಿದ ಶ್ರೀ ದೇವಾಲಯದ ಮುಕ್ತೇಸರರಾದ ಶ್ರೀ ಮಹಾಬಲ ಶೆಟ್ಟಿಯವರು ಶ್ರೀ. ಲಕ್ಷ್ಮೀನಾರಾಯಣ ಆಸ್ರಂಡರ ನಟ್ಟರ್ಮ ಶ್ರದ್ಧೆಯು ಶ್ಲಾಘನೀಯವಾದುದು.

ನೋಟೀಸು

ಕುಂದಾಪುರ ತಾಲ್ಲು ಹೇರೂರು ಗ್ರಾಮದ ಕಳ್ಳಬಿ ಗೋವಿಂದನ ಅಳಿಯ ಕುಪ್ಪ I ಮತ್ತು ಕಿಸ್ತಿಯಲ್ಲಿರುವ ಶೇಷನ ಅಳಿಯ ಕೃಷ್ಣ I ಕೂಡಾ ಇವರು ಈ ನೂಲ್ಯ ಸರ್ವಜನರಿಗೆ ತಿಳಿಯಪಡಿಸುವುದೇನೆಂದ್ರೆ—

ನಾವು ಶಿರ್ಲಿ ಗಟ್ಟಿಕ್ಕೆ ಹೋಗುವವರು. ಸದ್ರಿ ಗಟ್ಟಿಕ್ಕೆ ಹೋಗುವ ದಾರಿಯ ಪಕ್ಕದಲ್ಲಿರುವ ಶಿರೂರು ಸಂತೆ ಮಾರ್ಕೆಟಿನಲ್ಲಿ ವಿಸ್ತಾರ ತಿಳಿಕೊಂಡಲ್ಲಿ ನಮ್ಮ ಮೇಲೆ ಕಳೆದ ಸುಮಾರು 2 ವರ್ಷಗಳಿಂದ ದ್ವೇಶ ಸಾಧಿಸುತ್ತಿರುವ ಹೆರೂರು ಗ್ರಾಮವಕ ಕೆರಾಡಿ ಕೇಶ ಶೆಟ್ರ ಅಳಿಯ ಮಂಜಯ್ಯ ಶೆಟ್ಟಿಯು ಅವರ ಸಮ್ಯಂಧಿಕರಾದ ಉಪ್ಪುಂದ ಆಪ್ಪಯ್ಯ ಶೆಟ್ರ ಮನೆ ಸೂರ ಶೆಟ್ರ ನುತ್ತು ಸದ್ರಿ ಸೂರ ಶೆಟ್ರ ಭಾವ ಮಾದಯ್ಯ ಶೆಟ್ರು ನುತ್ತು ಸದ್ರಿ ಮಾದಯ್ಯ ಶೆಟ್ರ ಅಳಿಯ ಮಪಾಬಲ ಶೆಟ್ರು ಕೂಡುವಿಕೆಯಿಂದ ತಾ. 13-10 45ನೇ ಶನಿವಾರ ದಿವ್ಸ ಬೆಳಿಗ್ಗೆ ಸದ್ರಿ ಸಂತೆ ಮಾರ್ಕೆಟಿಗೆ ಬಂದು ಸದ್ರಿಯವರು ನಮ್ಮನ್ನು ಬಲತ್ಕರಿಸಿ ನಮ್ಮ ಇಷ್ಟ ನ ಅನುಮತಿಗೆ ವಿರೋಧವಾಗಿ ಬಲಾತ್ಕಾರದಿಂದ ಕಾಲಿ ಕಾಗ್ದಗಳ ಮೇಲೆ ನಮ್ಮ ಎಡ ಹೆಬ್ಬೆಟ್ಟು ಮೊಪರುಗಳನ್ನು ತೆಗೆದುಕೊಂಡಿರುತ್ತಾರೆ. ಸದ್ರಿ ಹೆಬ್ಬೆಟ್ಟುಗಳ ಕಾಗ್ದಗಳನ್ನು ನಮಗೆ ಕಷ್ಟ ನ ಸಷ್ಟ ಕೊಡುವ ಇರಾದೆಯಿಂದ ಸದ್ರಿ ಮಂಜಯ್ಯ ಶೆಟ್ರ ದುರುಪಯೋಗ ಪಡಿಸುವ ಇರಾದೆಯಲ್ಲಿ ಇದ್ದಾರೆ. ಆದ್ರಿಂದ ಸದ್ರಿ ಹೆಬ್ಬೆಟ್ಟುಗಳ ಕಾಗ್ದಗಳನ್ನು ದುರುಪಯೋಗ ಪಡಿಸಿ ಯಾವುದಾದರೂ ರಿಕಾರ್ಡು ಮಾಡಿದ್ರೆ ಅಂತಹ ರಿಕಾರ್ಡು ವಗೈರೆಗಳಿಗೆ ನಾವು ಜವಾಬ್ದಾರರಲ್ಲ. ಆ ಅಂತಹ ರಿಕಾರ್ಡುಗಳು ನಮ್ಮ ಮೇಲೆ ಬದ್ದವಾದ್ದಲ್ಲ ಎಂತ ಈ ಮೂಲಕ ತಿಳಿಸೋಣಾಗಿಯದೆ.

ಕುಂದಾಪುರ.-ತಾ. 17-10-1945.

॥ ಈ ಎರ್ಡು ಗೆರೆ ಮತ್ತು ● ಎಡ ಹೆಬ್ಬೆಟ್ಟಿನ ಗುರ್ತು ಕುಪ್ಪನದ್ದಾಗಿರುತ್ತದೆ.

॥ ಈ ಎರ್ಡು ಗೆರೆ ಮತ್ತು ● ಎಡ ಹೆಬ್ಬೆಟ್ಟಿನ ಗುರ್ತು ಕೃಷ್ಣನದ್ದಾಗಿರುತ್ತದೆ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರಪೊಡಕೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಡಿವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 8—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಹೃಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನ್ಯ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮೂಲಬದ್ಧತೆ, ಬೆನ್ನುನೋವು, ವಾಯು ಉದರ್ದ ನೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ಸಮಯದ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಕ್ಷಬೀದಿ ನಂಬ್ರ, 10 ಮಂಗಳೂರು

ಎಲ್ಲಾ ಸಮಯದ ಔಷಧಿಗಳು ದೊರೆಯುತ್ತವೆ. ಹ್ಯಾಬಿ ಸಂಗ್ರಿ ಬರದಕ್ಷಿ ರೋಗಕ್ಕೆ ಶಕ್ತಿಹಾದ ಔಷಧಿ ದೊರಾಸ್ತಿಯಿರುವ. (1) ಉಡುಪಿ ಏಜಂಟರು:— ಪವರ್‌ಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುರಾನಿಬಾಗ್ ರೋಡ್, ಜಿ. ಐ ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್ (3) ಇನೆಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ವಿದ್ಯಾವಿಷಯಕ ಹೃಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯಾಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ಬೈಂಡು ಮಾಡಿದ ಸ್ಪತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

(೨ನೇ ಪುಟದಿಂದ ಮುಂದುವರಿದುದು)

ಆರ್ಟಿಗ್ಲಿಯೋ ಮಂಡಿಸಿದ

ಕಳೆದ ಮಹಾ ಯುದ್ಧದಲ್ಲಿ ಅಮೆರಿಕದ ಒಂದು ಹಡಗ ಫ್ರೆಂಚ್ ಕರಾವಳಿ ಸಮೀಪ ಮುಳುಗಿಸಲ್ಪಟ್ಟಿದ್ದಿತು. ಆ ಮೇಲಿನ 13 ವರುಷಗಳ ವರೆಗೆ ಅದರ ಗೊಡವೆ ಗಾರೂ ಹೋಗಲಿಲ್ಲ. ಆ ಸಮುದ್ರ ಪ್ರದೇಶದಲ್ಲಿ ಅದೊಂದು ಕಂಟಕವಾಗಿದ್ದುದರಿಂದ ಕೊನೆಗೆದರ ನುಚ್ಚುನೂರಿಗಳನ್ನು ಹೆಕ್ಕಬೇಕೆಂದು ಸಂಕಲ್ಪವಾಯಿತು. ಆ ಹಡಗಿನಲ್ಲಿ ಅದ್ಭುತ ಸ್ಫೋಟಕ ಸಿಡಿಮದ್ದುಗಳಿದ್ದುವೆಂದು ಗೊತ್ತಿದ್ದುದರಿಂದ ಕೆಲಸ ಅತೀವ ಜಾಗರೂಕತೆಯಿಲ್ಲಿ ನಡೆಯಬೇಕಿತ್ತು. ಬೆಂಕಿ, ತುಘಸು ನಿರೋಧಿದಲ್ಲಿ ಹೆಸರು ಹೋದ 'ಆರ್ಟಿಗ್ಲಿಯೋ' ಹಡಗನ್ನು ಈ ಹೊಣೆಯನ್ನು ವಹಿಸಿಕೊಂಡು ಕಾರ್ಯಕ್ಕೆ ಳಿಯಿತು. ಪ್ರಥಮತಃ ಎಲ್ಲರೂ ಹೆದರಿ ಹೆದರಿ, ಆಸಾಧ್ಯರಣ ಜಾಗ್ರತೆಯಿಂದ ಕೆಲಸ ಮಾಡಿದರು. ಆದರೆ ಯಾವ ಸ್ಫೋಟ ಪೂ ಸಂಭವಿಸದಿದ್ದರಿಂದ ಅವರಿಗೆ ಧೈರ್ಯ ಬಂತು. ಸಪ್ಪೆಗಟ್ಟಿ ಹೋದುದನ್ನು ಅನಗತ್ಯವಾದ ಜಾಗ್ರತೆಯಿಂದ ಈ ರೀತಿ ಕತ್ತರಿಸಿ ತೆಗೆಯುವ ಒದಲಿಗೆ ಡೈನಾಮೈಟಿನಿಂದ ಆ ಕಸಕಡ್ಡಿಗಳೆನ್ನೆಲ್ಲ ನಿರ್ಮೂಲಿಸಿ ಸಮಯವುಳಿಸಬಹುದೆಂದು ಅವರು ಬಗೆದರು ಅಂತೆಯೇ ಅಲ್ಲಿಗೆ ಮದ್ದನ್ನು ತುಂಬಲಾಯಿತು. ಆ ಮದ್ದಿಗೆ ಬೆಂಕಿಕೊಡುವಾಗ 'ಆರ್ಟಿಗ್ಲಿಯೋ' ಬಹುದೂರದಲ್ಲಿತ್ತು. ಆಗಲೆ ಬೆಂಕಿ ಕೊಟ್ಟಲ್ಲೇ ತಡ— ಮತ್ತೇನಾಯಿತೆಂಬುದನ್ನು ತಿಳಿಸಲು, ಆ ಹಡಗಿನ ಕೆಲವೇ ಮಂದಿ ಕೆಲಸಗಾರರು ಪೂರ್ವ ಪುಣ್ಯದಿಂದ ಬದುಕಿ ಬಂದಿದ್ದರು! 'ಆರ್ಟಿಗ್ಲಿಯೋ' ಆ ಮುಹೂರ್ತದಲ್ಲಿ ಪೂರ್ಣ ಅಂತರ್ಧಾನವಾಗಿ ಹೋಗಿತ್ತು; ಅದರ ಕಡ್ಡಿ ಚೂರುಗಳನ್ನು ಹೆಕ್ಕುವ ಕೆಲಸ ಕೂಡಾ ಇರಲಿಲ್ಲ! ಆದರಿಂದ ಹೇಗೋ ನೀರಿಗೊಗೆಯಲ್ಪಟ್ಟ ಅಲ್ಪ ಮಂದಿ ಜೀವ ದೊಡನೆ ಬಂದಿದ್ದರು. ಇದೇ ರೀತಿ ಹಡಗಾವಶೇಷಗಳನ್ನು ಹೆಕ್ಕುವ ಕೆಲಸ ಈ ಬಾರಿ ಆಗಣಿತವಿದೆ; ಜಾಗರೂಕತೆಯೆಂತ ಹದಿರಬೇಕು ನೋಡಿ! ಸುಲಭದ ಕಾರ್ಯ -ಇಂಗ್ಲಂಡಿನ ಕರಾವಳಿಗಳನ್ನು ಗುಡಿಸುವ ಕೆಲಸ-ಇದನ್ನು ಕೈಕೊಂಡ ಇಂಜಿನೀಯರುಗಳ ಸಂಕಲ್ಪ ಕೇಳುವಾಗ 'ಅಯ್ಯೋ' ಎನ್ನಿಸುತ್ತಿದೆ. ಆ ಪೈಕಿ ಒಂದು ಸಣ್ಣ ಪಂಗಡದ 7 ಮಂದಿ ಕೆಲವೇ ನೈಲುಗುಡಿಸುವದರೊಳಗೆ ಮಡಿದು ಬಿದ್ದರಂತೆ. ಈ ಕಾರ್ಯವೂ ಎಲ್ಲೆಲ್ಲೂ ನಡೆಯಲುಳಿದಿದೆ.

ಶರದಿ ಗುಂಡುಗಳು

ನೈನ್‌ಗಳನ್ನು ಗುಡಿಸಿ ಸಮುದ್ರವನ್ನು ಸ್ವಚ್ಛಮಾಡುವ ಕೆಲಸದಲ್ಲಂತೂ ಅಪಾಯ ಮತ್ತಷ್ಟು ಹೆಚ್ಚಿಗೆ. ಕಳೆದ ಯುದ್ಧದಲ್ಲಿ ಈ ಬಾರಿಯಷ್ಟು ಕೊಸ ಮಾದರಿ ನೈನ್‌ಗಳಿರಲಿಲ್ಲ. ಆದ್ದರಿಂದ 1918 ನೇ ಶಾಂತಿ ಕರಾರಿನ ನಂತರ 16000 ಮಂದಿ ಯುರೋಪಿನ ಸಮುದ್ರವ್ಯಾಪ್ತಿಗಳನ್ನೆಲ್ಲಾ ಒಂದು ವರುಷದೊಳಗೆ ಮಡಿಸಿ ಬಿಟ್ಟಿದ್ದರು. ಆವರಲ್ಲಿ ಹಲವರು ಮಡಿದಿದ್ದರು. ಆದರೆ ಗುಡಿಸಿದ ಒಂದೇ ಒಂದು ವ್ಯಾಪಾರೀ ಹಡಗಕ್ಕೂ ಹಾನಿಯಾಗಿರಲಿಲ್ಲ. ಆಗ ಗುಡಿಸಿದುದೂ ಮಿತ್ರ ರಾಷ್ಟ್ರಗಳ 25000 ಮತ್ತು ಜರ್ಮನರದಾದ ಕೆಲವು ಸಾಸಿರ ನೈಸುಗಳನ್ನು ಮಾತ್ರ. ಗುಡಿಸುವ ಕೆಲಸವನ್ನೂ ಜರ್ಮನರಿಗೇ ಬಿಡಲಾಗಿತ್ತು. ಈ ಬಾರಿ ಹಾಗಲ್ಲ. ಹೊಸ ಹೊಸ ಮಾದರಿಯ, ಅಸಂಖ್ಯಾತ ನೈನುಗಳು ಸರ್ವ ಸಮುದ್ರಗಳಲ್ಲೂ ಮೃತ್ಯು ಮತ್ಸ್ಯಗಳಂತೆ ಮುಳುಗಿವೆ ಕೆಲವಂತೂ ಗುಡಿಸುವದಕ್ಕೆ ಸಾಧ್ಯವಾಗದ ಮೂಡಯಲ್ಲೇ ರಚಿಸಲ್ಪಟ್ಟಿವೆ. ದೃಷ್ಟಾಂತಕ್ಕಾಗಿ ಒಂದು ಜಾತಿಯ ನೈನಿವೆ; ಅದು ಪ್ರಥಮತಃ ಸ್ಫೋಟನವಾಗುವದೇ ಇಲ್ಲ. ಗುಡಿಸುವಾಗಲೂ ಕಲು ಗುಂಡಿನಂತೆ ಮೌನವಾಗಿ ಇರುತ್ತದೆ; ಆ ಭಾಗದಲ್ಲಿ ಗುಡಿಸುತ್ತಾ ಬರುವ ವ್ಯಾಪಾರೀ ಹಡಗದ ಸ್ಪರ್ಶವಾದಾಗ ಮಾತ್ರ ಅದರ ಸಿಡಿತ ಇಂತಹ ನೈನ್‌ಗಳ ರಚನೆಯು ಬ್ರಿಟಿಷರ ಗುಟ್ಟಾಗಿರುವದರಿಂದ ಜರ್ಮನರಿಗೆ ಈ ಕೆಲಸ ಕೊಡಲಾಗುವದಿಲ್ಲ. ಸಮುದ್ರ ಮತ್ತು ನೆಲ ನೈನ್‌ಗಳನ್ನು ಗುಡಿಸಲಾಗುವ ಅಧುನಿಕ ಸಲಕರಣೆಗಳು ಈ ಬಾರಿ ಕಂಡು ಹಿಡಿಯಲ್ಪಟ್ಟಿವೆ. ನೈನ್‌ಗಳನ್ನು ಕಂಡು ಹಿಡಿಯುವ ಮತ್ತು ಅವುಗಳನ್ನು ಕೊಟ್ಟು ಮಾಡುವ ನವಶೋಧಗಳಾಗಿವೆ. ಹಲವು ಮೈಲುಗಳ ದೂರದಿಂದಲೇ ನೈನ್‌ಗಳ ಗುರುತು ಹಚ್ಚಿ ಗುರಿ ತಪ್ಪದೆ ಅವುಗಳನ್ನು ಸೆರೆದುಕೊಳ್ಳುವ ನೂತನೋಪಕರಣವು ಕಂಡು ಹಿಡಿಯಲ್ಪಟ್ಟಿದೆಯಂತೆ.

ಅಂತೂ ಕಷ್ಟದ ಕಾರ್ಯ

ಆದರೆ ವೈರಿಗಳ ಯಾಂತ್ರಿಕ ಯುದ್ಧ ವಾಹನಗಳನ್ನು ತಡೆಗಟ್ಟಲು ಅಲ್ಲಲ್ಲಿ ಕಟ್ಟಲ್ಪಟ್ಟಿರುವ ಕಾಂಕ್ರೀಟ್ ಮತ್ತು ಬುಕ್ಕಿನ ಅಭೇದ್ಯ ಗುಪ್ತೆಗಳನ್ನೂ ತಡೆಗಟ್ಟುಗಳನ್ನೂ ಧ್ವಂಸಮಾಡಿ ತೆಗೆಯುವ ಕಾರ್ಯಕ್ಕೆ ಹಲವು ವರುಷಗಳು ಹಿಡಿದಾವು; ಕೆಲವಂತೂ ಎಂದೆಂದಿಗೂ ಅಳಿಯದೆ 'ಮೆಟ್ರೋಲೋ ಟವರ್'ನಂತೆ ಮುಂದಿನ ಎನ್ನೋ ತಲೆಮಾರಿನ ಜನಾಂಗಕ್ಕೆ 1940ರ ನೆನಪನ್ನು ಕೊಡುವ ಸ್ಮಾರಕಗಳಾಗಿ ಉಳಿದು ಬಿಡುವದೇ ಸರಿ. ನಾಜೀ ಆಕ್ರಮಣದ ಭೀತಿಯಿಂದ ಸರ್ವಸಾಮಾನ್ಯವಾಗಿ ಬ್ರಿಟಿಷ್ ಜನರ ತೋಟಗಳಲ್ಲೆಲ್ಲಾ ಧಾಳಿ ನಿರೋಧಕ 'ಕಾಂಕ್ರೀಟ್ ಹಲ್ಲು'ಗಳನ್ನು ಕಟ್ಟಿಸಿಕಾಕಿದ್ದಾರೆ. ಈಗ ಸರಕಾರದ ಸೂಚನೆಯಾಗಿದೆ.--'ಆಯಾಯಾ ಮನೆಗಳವರೇ ಅವ[illegible] ಕಾಂಕ್ರೀಟ್ ಹಲ್ಲುಗಳನ್ನು ತೆರವು ಕಿತ್ತಿಡಬೇಕು' ಎಂದು. ಬ್ರಿಟಿಷ್ ಜನರ ಅಜೇಯವಾಗಿರಬೇಕೆಂದು ಕಟ್ಟಲ್ಪಟ್ಟ ಈ ತಡೆಗಳನ್ನು ತೆಗೆಯುವವರು ಪಾರ್ಮಿಕ ಜ್ಞರಿರಬೇಕು, ಯಾಂತ್ರಿಕೋಪಕರಣಗಳು ಬೇಕು. ಸಾಮಾನ್ಯರಿಂದಾಗುವಂತಿಲ್ಲ; ಬೇಕಾಗುವ ವಿಶೇಷ ಸಲಕರಣೆಗಳು ಇನ್ನು ದೀರ್ಘಾವಧಿಯ ವರೆಗೆ ದೊರೆಯುವಂತಿಲ್ಲ. ದಕ್ಷಿಣ ಇಂಗ್ಲಾಂಡಿನ ಸರ್ವ ಕಡೆಗಳಲ್ಲೂ ಟೀಂಕು ಪ್ರತಿಬಂಧಕ್ಕಾಗಿ ದೊಡ್ಡ ದೊಡ್ಡ ಕಣಿವೆಗಳನ್ನು ಅಗೆದುಹಾಕಿದ್ದಾರೆ. ಇವುಗಳನ್ನು ಮುಚ್ಚಬೇಕಾದರೆ ಯಾಂತ್ರಿಕೋಪಕರಣಗಳಿಂದಲೇ ಸಾಧ್ಯ ಮುಚ್ಚಿದರೂ ಅವುಗಳಿಲ್ಲದ ಗುರುತು ಎಂದೆಂದಿಗೂ ಮಾಸುವಂತಿಲ್ಲ. ಸಾವಿರ ವರುಷಗಳ ನಂತರ 'ಫೋಟೋ' ತೆಗೆದರೂ ಇಂತಹ ಸ್ಥಳದಲ್ಲಿ ಕಣಿವೆಯಿತ್ತು ಎಂಬುದನ್ನು ತೋರಿಸಲಾಗುವಂತೆ ಚಿತ್ರೀಯಿಸಬಹುದು. ಆ ಕಾಲದ ರೋಮನ್ ಕಣಿವೆಗಳು ಮತ್ತು ರಸ್ತೆಗಳಿದ್ದ ಸ್ಥಳಗಳನ್ನು ಈಗಲೂ 'ಫೈಂಡೋ'ದಲ್ಲಿ ಗುರುತಿಸಲಾಗುವಂತೆ

ಅಂತೂ ಈ ಬಾರಿಯ ಯುದ್ಧಲ್ಲಾದಂತೆ ಲೋಕ ಜಖಂಗೊಡುದು ಇದುವರೆಗೂ ಇಲ್ಲ ಆ ಘಾಯಗಳನ್ನು ಗುಣಪಡಿಸುವ ಕೆಲಸ ಪೂರ್ಣಗೊಂಡಿತೇ ಎಂಬುದು ಸಂದೇಹದ ಪ್ರಶ್ನೆ; ನಮ್ಮಂತೆ-ಈಗ ವ್ಯಾಯಕ್ಕೆ ಬಂದಿರುವವರ-ಆಯುಷ್ಯವಧಿಯಲ್ಲಿ ಅದು ಸಂಪೂರ್ಣ ಮಾಸಲಾರದೆಂಬುದು ಖಂಡಿತ. ನಿನ್ನೆಯ ಯುದ್ಧೋದ್ಯೋಗಿಗಳು ನಾಳೆ ನಿರೋದ್ಯೋಗಿಗಳಾಗದಂತೆ ದೊರೆತ ಕೆಲಸವಿದು— ಎಂಬೊಂದು ಉಪಕಾರ ಸ್ಮರಣೆಯಿಂದ ಸಮಾಧಾನ ಪಡಬೇಕೇನೋ!

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ಶರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಾಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಸ್ವತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಹೊಟ್ಟು, ಸಣ್ಣಮಕ್ಕಳಿಗೆ 1ರಿಂದ 2ಹೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲೂ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ.ಕ

ಉಡುಪಿ ಸ್ಟಾಕಿಸ್ಟರು.—ಡಾ॥ ಪಾಯಸ್ ಕೆಸ್ಸಲ್ಲಿಂಗ್ ಮೊನ್ಸ್ ಎಂಡ್ ಫಾರ್ಮೆಸಿಸ್; ಶ್ರೀ ಆರ್. ಎಸ್. ಶೆಣೈ, ಸಹಪಾಠಿ; ಡಾ॥ ಪಿ. ಜಿ. ಅಡಿಗಾಸ್ ಫಾರ್ಮೆಸಿಸ್; ಡಾ॥ ಕೆ. ವೇಣುಗೋಪಾಲ್, L. I. M., ಡಾ॥ ಮೆಕಟರಾವ್, ಕೊರಡ್ಡಾಲ್; ಸಹಭಾರತ ಬುಕ್ ಡಿಪೋ

ಗನೋರಿಯಾ ಪರಮಾರೋಗಧ ಉಷ್ಣ ರೋಗಕ್ಕೆ ಔಷ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಬ್ಬುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಆರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಬುಯಿಂದ ಗರ್ಭಕೋಶ ನಾತಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೀಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬೇಳೆ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿಗೆ ೫ರೂ. ಪೋಸ್ಟು ಖರ್ಚು ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ. ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ವೈದ್ಯ. ಕಚ್ಚಾವಸ್ತು ಮಾರಾಟಕ್ಕೆ ಮಾಲಿಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya. GADAG.

PRESS NOTE

"The public are hereby informed that all proceedings commenced and action taken under the Madras Paper Control (Licensing, Economy and Distribution) Order, 1945, shall be deemed to have commenced or taken and that all Licenses, Paper Issue Cards and Permits issued by the Provincial Paper Controller under the said Order, which is now superseded by the Madras Paper Control (Licensing, Economy and Distribution) Order (No 11), 1945, published in the Fort St. George Gazette dated 2-10-45 shall be deemed as Licenses, Paper Issue Cards and Permits issued under this new Order".

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,
UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ರಾಷ್ಟ್ರಸಭೆಯ ಇತಿಹಾಸ ...	2	8	0
2	ಮಹಾತ್ಮಾಗಾಂಧಿಯವರ ಆರೋಗ್ಯ ಸಾಧನೆ	0	12	0
3.	ಮಹಾತ್ಮಾಗಾಂಧಿಯವರ ಚರಿತ್ರೆ	0	5	0
4	ಮಹಾತ್ಮಾಗಾಂಧಿಯವರ ನೀತಿಧರ್ಮ ಅಥವಾ ಧರ್ಮನೀತಿ	0	6	0
5.	ಭಾರತ ಗೀತಾಂಜಲಿ	0	2	0
6.	ಪುರಂದರದಾಸರ ಕೀರ್ತನೆ ಭಾಗ 4ರ-ಸ್ಪಿಪ್ ಬೈಂಡ್	1	4	0
7.	ಶಾಂತಿಪುರಾಣ	3	0	0
8.	ಸಾಮುದ್ರಿ ಶಾಸ್ತ್ರ	0	8	0
9.	ಬಾಲಪ್ರಪಂಚ 30 ಭಾಗ	36	0	0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, **ಉಡುಪಿ.**

ತುಳು ಪುಸ್ತಕಗಳು

ಕೃಷ್ಣ ಸಂಧಾನ	....	1	0	0
ತುಳುನಾಲ ಬಲಿಯೇಂದ್ರೆ	....	0	4	0
ಆಳಿಯ ಸಂತಾನದ ಕಟ್ಟಿದ ಗುಟ್ಟು	...	0	8	0
ಕಾಸಿಗೆ	....	0	8	0
ತುಳು ವ್ಯಾಕರಣ	....	1	0	0
ಮದ್‌ಮಾಳತ್ತ ಮದ್‌ಮಾಯೆ	...	0	4	0
ಜನಮರ್ಲ್	....	0	12	0
ತುಳು ಪದ್ಯಮಾಲಿಕೆ	....	0	2	0
ಬಂಗಾರ್ದಂಗಿದ ಕತೆ	....	0	2	0
ಮಿತ್ಯ ನಾರಾಯಣ ಕತೆ	....	1	0	0
ಸಳೀ ಕಮಲೆ	....	0	12	0
ಕೊಬ್ಬುರ್ಯೆ ...	....	0	4	0
ತೊಡಕಿನಾರ್ ...	....	0	4	0
ಮುಂಡತ್ತಾಯಿ	....	0	4	0
ಕನ್ನಡಕೂ	....	0	1	0
ವಿಪ್ರರೂಪದರ್ಶನೊ	....	0	2	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ ಪೈ. ಬ್ರದರ್ಸ್, ಉಡುಪಿ

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಖರೀಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: 2—8—0. ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, **ಉಡುಪಿ.**
ಬೆಲೆ: 3—0—0
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಕೆನೈ ಬ್ರದರ್ಸ್, ,,
ಶೆ ಭೋಜರಾವ್ & ಕೊ ,,
ಸಾವಂಜೆ ಗುರುರಾವ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡ್ಪಿ
ಪಿ. ಎ. ಪೈ ಬ್ರದರ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಸೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6



ವರ್ಷ ೨೫ ವಾರ ೯ ಪ್ರತಿ ಗುರುವಾರ ಹೊರಡುವ ಗಾತ್ರೀಯ ವಾರಪತ್ರಿಕೆ. [Vol. 25 No. 9

Founder SRI A. B. SHETTY.

ಉಡುಪಿ ● 1—11—1945 ● ಪುಂಗಳೂರು.

ವಾರ್ಷಿಕ ಚಂದಾ ರೂ 4—8—0, ಬಿಡಿ ಸಂಚಿಕೆ ರೂ. 0—1—6.



ಅಮೃತಾಂಜನ

ತಲೆನೋವಿಗೆ, ತಿರಿ, ಮೈಗೆ, ಉಳುಕು ಕತ್ತಿಗೆ, ಘುಜ, ಹಲ್ಲು ನೋವಿಗೆ ಎದೆನೋವು, ಭಾರಗಾಲು ಬಾತು ..., ಚೇಳು ರಿಂದ ಮಂತಾದ ನೋವಿ ಉಳ್ಳವರಾಗಿ ಮೊದಿಸಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD.

ಜಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

The Canara Mutual Assurance Co. Ltd.,

Head Office.- **UDIPI, (S. India)**

New Appointments.

Applications from candidates of S S L C standard are invited for clerical posts in the Company

Applicants should possess a good hand, a good command of English a good moral character and should be quick at figures

All applications must be accompanied by two testimonials one from the Headmaster of their School and another from any local gentleman

UDIPI,
2nd October, 1945.

T R A P
Managing Director

The Jupiter General Insurance Co., Ltd.,

ಮನುಷ್ಯ ರಣ ಮುಗಿಯಿತು, ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಜೀವನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಅದು

'ಜುಪಿಟರ್' (ದೇವತೆಗಳ ರಾಜ) ನ ಅನುಗ್ರಹದಿಂದ ಮಾತ್ರ ಸಾಧ್ಯ!

ಅದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ

'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ ಏಜಂಟರು ಮತ್ತು ಇರ್ಗನೈಸ್ ಮಾಡುವವರೂ ಕೂಡಲೇ ಬರೆಯಿರಿ:-

ಸಿ. ಡಿ. ನರಸಯ್ಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD' 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ

ದೊರಕಿಸಿಕೊಡುವ ಅಗ್ರಗಣ್ಯ ವಿಮಾ

ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910

ದಕ್ಷಿಣ ಭಾರತದ ಚೀಫ್ ಏಜಂಟರು.

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು

ನಮ್ಮ ಗಿರಾಕಿಗಳಿಗೆ ಆಳ್ಕಾರಿಯಾಗುವಂತೆ ಸಲ್ಲಿಸಿರುವ

ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ

ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.

Central Office:—UDIPI S. K

Mangalore ○ Calicut ○ Bangalore ○ Madras ○ Madura ○ Trivandrum ○ Bombay

ANNOUNCEMENT.

We have the pleasure to announce that a branch of the Bank will shortly be opened at

317, Linghi Chetty Street,

MADRAS.

(ESTD 1906 ಸ್ಥಾಪನೆ)

CANARA BANK LIMITED

(Incorporated in British India liability of Members Limited.)

ANNOUNCEMENT

We have much pleasure to announce that branches of the Bank will be opened shortly at

KANHANGAD & MERCARA.

Other Branches at- **Udipi, Kaup, Coondapoor, Karkal, Brahmavar, City-Mangalore, Kasaragod, Puttur, Byndoor & Bombay**

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ಶಾ 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಸುಜ್ಞಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಒಂದು ಚಿತ್ರ.

ಯೆಂಗೆಯೋ ಮುನಿಸಿಪಾಲಿಟಿ

—ಮದ್ರಾಸ್ ಹ್ಯಾಕೋರ್ಟಿನ ಜಡ್ಜರಾದ ಒನರೇಬಲ್ ಜಸ್ಟೀಸ್ ವಾಡ್ಸ್ ವರ್ತರು ಆ ಭಾ. ಆಕಾಶವಾಣಿಯ ಮದ್ರಾಸ್ ನಿಲ್ದಾಣದಿಂದ ಬ್ರಾಡ್‌ಕಾಸ್ಟ್ ಮಾಡಿದುದು.

.....ಕೋರ್ಟಿನಲ್ಲಿ S. C. No. 999/1938.

ಜಯರ್‌ಮೇನ್, ಯೆಂಗೆಯೋ ಮುನಿಸಿಪಾಲಿಟಿ ವಾದಿ.

ಆಕಾಶರಾಮ ಆಯ್ಯರ್ ಪ್ರತಿವಾದಿ.

ಪೇದೆ—ಮಾತಾಡ ಬೇಡಿ, ಮಾತಾಡ ಬೇಡಿ. (ಕೋರ್ಟಿನಲ್ಲಿ ಗುಳುಗುಳು ಮಾತು ಮತ್ತು ಕುರ್ಚಿಗಳನ್ನು ಎಳೆದು ಕೊಳ್ಳುವ ಸದ್ದು.)

ಕ್ಲಾರ್ಕ್—ಎಸ್. ಸಿ. ನಂಬರ್ 999/1938, ಜಿಯರ್‌ಮೇನ್ ಯೆಂಗೆಯೋ ಮುನಿಸಿಪಾಲಿಟಿ—ವಿರುದ್ಧ-ಆಕಾಶ ರಾಮಯ್ಯರ್.

ವಾದಿ ವಕೀಲ—ಪರಾಂಬರಿಸಬೇಕು ಯುವರ್ ಒನರ್, ಪ್ರತಿವಾದಿಯಿಂದ ವೃತ್ತಿ ತೆರಿಗೆಯ ಬಾಬ್ತು ಮುನಿಸಿಪಾಲಿಟಿಗೆ ಸಲ ಬೇಕಾದ ರೂ. 19-15-11 ನ್ನು ಬರಮಾಡಿಕೊಳ್ಳವರೆ ಈ ವ್ಯಾಜ್ಯವನ್ನು ತರಲಾಗಿದೆ. ದಾವೆಯಲ್ಲಿ ಕೇಳಲ್ಪಟ್ಟರೂ.ವ ಹಣದ ನೊಕ್ಕವು ನಿಶ್ಚಿತ ಸ್ಕೆಲಿಗನುಸಾರವಾಗಿ ಸರಿಯಿದೆ ಎಂಬುದನ್ನೂ, ಅದು ಸಂಪೂರ್ಣ ವಾಗಿಲ್ಲವೆಂಬುದನ್ನೂ ಪ್ರತಿವಾದಿ ಒಪ್ಪುತ್ತಾನೆ. ಸಂಗತಿ ಹೀಗಿರುವಾಗ, ತೀರಾ ಅಸ್ವಾಭಾವಿಕವಾದ ತನ್ನ ನಿರೋಧವು ಯಾವುದಿದೆಯೋ ಅದನ್ನು ಕೋರ್ಟಿನ ಮುಂದಿಟ್ಟು ರುಜು ಪಡಿಸುವದು ಪ್ರತಿವಾದಿಯನ್ನು ಸೇರಿದೆ ಎಂದು ನಾನು ನಿವೇದಿಸಿಕೊಳ್ಳುತ್ತೇನೆ.

ಜಡ್ಜ್—ಸರಿ, ಮಿಸ್ಟರ್ ಜಾರ್ಜಮ್ ಅಯ್ಯರ್. ಆ ಹೊಣೆಯು ಪ್ರತಿವಾದಿಯ ದೆಂಬುದನ್ನು ನಾನು ಒಪ್ಪುತ್ತೇನೆ. ಮಿಸ್ಟರ್ ಮೆಕ್ಯಾರಾವ್, ಈಗ ದಯವಿಟ್ಟು ನೀವು ಪ್ರಾರಂಭಿಸುವಿರಾ?

ಪ್ರತಿವಾದಿ ವಕೀಲ—ತನ್ನ ಆಪೇಕ್ಷೆಯಂತೆ ನಿವೇದಿಸಿಕೊಳ್ಳುತ್ತೇನೆ ಯುವರ್ ಒನರ್. ಇಲ್ಲಿ ದೀರ್ಘ ವಾದವು ಅಗತ್ಯವೆಂದು ನನಗನ್ನಿಸುವದಿಲ್ಲ ನನ್ನ ಮಿತ್ರರು ಹೇಳಿದಂತೆ ದಾವೆಯಲ್ಲಿ ಕೇಳಲ್ಪಟ್ಟಿರುವ ತೆರಿಗೆಯನ್ನು ಸಂದಾಯಿಸಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳುತ್ತೇನೆ. ಆದರೆ ಆ ತೆರಿಗೆ ಕೇಳುವ ಅಧಿಕಾರವು ನಾದಿಗಿದೆ ಎಂಬುದಕ್ಕೆ ಮಾತ್ರ ನಮ್ಮ ಒಪ್ಪಿಗೆಯಿಲ್ಲ. ಚುಟುಕಿನಲ್ಲಿ ಈ ವಾದವನ್ನು ಮುಂದಿಡುವುದಾದರೆ, ಯೆಂಗೆಯೋ ಮುನ್ಸಿಪಾಲಿಟಿಯು ಒಂದು ಮುನಿಸಿಪಾಲಿಟಿಯಂತೆ ವರ್ತಿಸಲು ತಪ್ಪಿರುವದರಿಂದ ತೆರಿಗೆ ವಸೂಲು ಮಾಡುವ ಅಧಿಕಾರ ಅದಕ್ಕಿಲ್ಲವೆಂಬುದೇ ನನ್ನ ವಾದ. ಈ ಮುನ್ಸಿಸಲ್ ಕೌನ್ಸಿಲು, ಕೇವಲ ಸ್ಥಳೀಯ ಪಕ್ಷಪಂಗಡಗಳ ರಣ ಕ್ಷೇತ್ರವಾಗಿ ಹೋಗಿದೆಯೆಂದೂ ಲಂಚ ಮತ್ತು ಒಳಸಂಚುಗಳ ಬೀಡಾಗಿ ಹೋಗಿದೆಯೆಂದೂ ಪ್ರತಿವಾದಿಯು ಆರೋಪಿಸಿದೆ. ನಗರದ ನಾಗರಿಕರ ಹಿತರಕ್ಷಣೆಗಳ ಗಾರ್ಡಿಯನ್ ಆಗಿರಬೇಕಾದ್ದ ಈ ಮುನ್ಸಿಪಾಲಿಟಿಯು, ಅದರ ಬದಲಿಗೆ ತಾಮೂಹಿಕವಾಗಿ ಪಟ್ಟಣವಾಸಿಗಳ, ಹಾಗೂ ಆ ವರಲ್ಲೊಬ್ಬನಾದ ಪ್ರತಿವಾದಿಯ ಹಿತಸಂಬಂಧಗಳಿಗೆ ಹಾನಿಕರವಾದ ಕಾರ್ಯಕಲಾಪಗಳಲ್ಲಿ ತೊಡಗಿದೆಯೆಂಬುದನ್ನು ಕೋರ್ಟಿನಲ್ಲಿ ರುಜುಪಡಿಸಲು ನಾವು ಸಿದ್ಧರಿದ್ದೇವೆ. ಆದ್ದರಿಂದ, ತನಗೆ ಹಾನಿಕರವಾದ ಕಾರ್ಯಕ್ಕೆ ತಾನೇ ವಂತಿಗೆ ಕೊಡಲು ಕಾನೂನುಗನುಸಾರವಾಗಿಯಾಗಲೀ, ನ್ಯಾಯಾನುಸಾರವಾಗಿಯಾಗಲೀ ಪ್ರತಿವಾದಿಯು ಬದ್ಧನಾಗುವದಿಲ್ಲ. ನಾನೀಗ ಪ್ರತಿವಾದಿ ಶ್ರೀ. ಆಕಾಶರಾಮ ಅಯ್ಯರರನ್ನು ಕರೆಯುತ್ತೇನೆ.

ಕರೆಯುವ ಪೇದೆ—ಆಕಾಶರಾಮ ಅಯ್ಯರ್, ಆಕಾಶರಾಮ ಅಯ್ಯರ್.

(ಪ್ರತಿವಾದಿಯ ಪ್ರವೇಶ—ಸ್ವಮಾಣ)

ಪ್ರತಿವಾದಿ ವಕೀಲ—ನೀವು ಈ ದಾವೆಯ ಪ್ರತಿವಾದಿಯಾಗಿದ್ದೀರಿ. ಮತ್ತು ನಿಮ್ಮಿಂದ ಕೇಳಲ್ಪಟ್ಟಿರುವ ತೆರಿಗೇ ಮೊತ್ತವು ಅಂಕೆಸಂಖ್ಯೆಯ ಮಟ್ಟಿಗೆ ಸರಿಯೆಂಬುದನ್ನೂ. ಅದನ್ನು ತೆರಲು ನೀವು ನಿರಾಕರಿಸಿರುವಿರೆಂಬುದನ್ನೂ ಒಪ್ಪುತ್ತೀರಿ.

ಆಕಾರರಾಮ ಅಯ್ಯರ್ — ಹೌದು, ಮಾತ್ರವಲ್ಲ; ನಾನು ಇನ್ನು ಮುಂದಕ್ಕೂ .....

ಪ್ರ ವ—ರಾಮಯ್ಯರೇ, ದಯವಿಟ್ಟು ನಾನು ಕೇಳಿದ ಪ್ರಶ್ನೆಗಳಿಗೆ ಮಾತ್ರ ಉತ್ತರಕೊಡಿ. ಅಂದರೆ ತೆರಿಗೆ ಹೇರುವ ಅಧಿಕಾರವುಳ್ಳ ಕ್ರಮಬದ್ಧ ಮುನಿಸಿಪಾಲಿಟಿಯೇ ನಮ್ಮಲ್ಲಿಲ್ಲವೆಂದು ನೀವನ್ನುತ್ತೀರಿ. ನೀವೀ ನಿರ್ಧಾರಕ್ಕೆ ಬಂದುದೇಕೆ ಎಂಬುದನ್ನು ಕೋರ್ಟಿನಲ್ಲಿ ಹೇಳುವಿರಾ?

ಆ. ರಾ.—ಆಗಬಹುದು. ಒಂದು ಮುನಿಸಿಪಾಲಿಟಿಯಿರುವದೆಂದರೆ ನಗರವಾಸಿಗಳಿಗೆ ಆರೋಗ್ಯ, ಅನುಕೂಲತೆ ಮತ್ತು ವಿದ್ಯೆಯನ್ನೊದಗಿಸಿ ಕೊಡುವದಕ್ಕಾಗಿ.ಈ ಮುನ್ಸಿಪಾಲಿಟಿ ಅದಾವುದನ್ನೂ ಮಾಡದೆ, ಪಟ್ಟಣದಲ್ಲಿ ಹೊಲಸು, ಕಾಯಿಲೆ, ಮತ್ತು ಜಗಳಗಳು ಜೆಚ್ಚುವಂತೆ ಮಾಡಿತ್ತಿದೆ.

(ಕೋರ್ಟಿನಲ್ಲಿ ಗದ್ದಲ. 'ಸ್ಯಾಲೈನ್ಸ್' ಕೂಗು. ಗದ್ದಲ ತನ್ನಂತೆ ಆಡಗುತ್ತದೆ).

ಜಡ್ಜ್—ಮೌನತೆಯಲ್ಲಿರದಿದ್ದರೆ, ನಾನು ಕೋರ್ಟನ್ನು ಖಾಲಿ ಮಾಡಿಸಬೇಕಾಗುವದು. ಮುಂದುವರಿಸಿ ಮೆಕ್ಯಾರಾವ್.

ಪ್ರ. ವ.—ನಗರದಲ್ಲಿ ಹೊಲಸು ಹೆಚ್ಚಲು ಮುನಿಸಿಪಾಲಿಟಿಯು ಸಹಾಯ ಮಾಡುತ್ತಿದೆ, ಎಂದು ನೀವು ಹೇಳಿದಿರಲ್ಲಾ, ಹಾಗೆಂದರೇನು? ದಯವಿಟ್ಟು ನಿಮ್ಮ ಆರೋಪವನ್ನು ವಿವರಿಸಿ ಹೇಳಿ.

ಆ ರಾ.—ಅವರು ನಗರದ ಬಚ್ಚಲು ತೋಡುಗಳನ್ನೆಲ್ಲಾ ಬಂದುಮಾಡಿ. ಅವು ಕೊಳೆಸೀರ ಹಳ್ಳಗಳಾಗಿ ನಾರುವಂತೆ ಮಾಡಿದ್ದಾರೆ. ರಸ್ತೆಗಳ ರಿಪೇರಿ ಅಥವಾ ಗುಡಿಸುವ ಕೆಲಸ ಮಾಡಿಸುವದೇ ಇಲ್ಲ. ಕೌನ್ಸಿಲ್ ಮೆಂಬರರಿಂದಾಗಲೀ ಅವರ ಸಂಬಂಧಿಕರಿಂದಾಗಲೀ ತೆರಿಗೆ ವಸೂಲೇ ಮಾಡುವ ಸಂಪ್ರದಾಯವಿಲ್ಲ. ಬೇರೆಯವರಿಂದ ಸಂಗ್ರಹಿಸಾಗುವ ತೆರಿಗೇ ಹಣವೆಲ್ಲಾ ದುರ್ವ್ಯಯ ಅಥವಾ ಅನಾವ್ಯಯವಾಗಿ ಹೋಗುತ್ತಿದೆ. ಒಟ್ಟಾರೆ ನನ್ನ ವಾದವೇನೆಂದರೆ ಕೌನ್ಸಿಲಿನ ಲಂಚಗೂಳತನ ಮತ್ತು ಅಸಡ್ಡೆಯ ದೆಸೆಯಿಂದಾಗಿ, ಮುನ್ಸಿಪಲ್ ನೌಕರರು ಸ್ವೇಚ್ಛಾಪ್ರವೃತ್ತರಾಗಿ ನಗರದ ಆರೋಗ್ಯವನ್ನು ಅಲಕ್ಷ್ಯಿಸಿ ಊರಲ್ಲೆಲ್ಲಾ ಕೊಳೆಕಸ್ಮಲಗಳೂ ರೋಗಗಳೂ ಹಬ್ಬುವಂತೆ ಮಾಡಿದ್ದಾರೆ.

ಪ್ರ. ವ.—ಕೊಳೆ ಮತ್ತು ರೋಗಗಳ ಮಟ್ಟಿಗೆ ಹೀಗಾಯಿತು. ಅದರೆ ಜಗಳಗಳ ಮಾತು ಹೇಳಿದಿರಲ್ಲಾ, ಅದು ಹೇಗೆ? ಪಕ್ಷ ಪಂಗಡಗಳ ಕಲಹಗಳನ್ನು ಮುನಿಸಿಪಾಲಿಟಿಯು ಪ್ರೋತ್ಸಾಹಿಸುತ್ತಿದೆಯೆಂದು ನೀವು ಹೇಗೆ ಹೇಳಬಲ್ಲಿರಿ?

ಆ. ರಾ.—ಹೇಗೆ ಹೇಳಿದೆನೆಂದರೆ, ಈ ಮುನ್ಸಿಪಾಲಿಟಿಯ ಇಡೀ ಆಡಳಿತೆಯು ದುಸ್ವಾರ್ಥಿ ಪಕ್ಷಗಳ ಕೈಯಲ್ಲಿದ್ದು, ಅವುಗಳ ಬೆಳವಣಿಗೆಗೆ ಇದು ಸಹಾಯ ಮಾಡುತ್ತಿದೆ ಈ ಪಕ್ಷಗಳು ಮತದಾರ ಪಟ್ಟಿಗಳಲ್ಲಿ ಫೋರ್ಜರಿ ಮಾಡುತ್ತಿವೆ ಮತ್ತು ಮತದಾರರನ್ನು ಲಂಚಕಂಚುಗಳಿಂದ ಪುಸಲಾಯಿಸುತ್ತಿವೆ. ತಮ್ಮ ಕಡೆಯವರೇ ಮುನ್ಸಿಪಲ್ ಉದ್ಯೋಗಗಳಲ್ಲಿರುವಂತೆ ಒಳಸಂಚು ಹೂಡುತ್ತವೆ. ಮತ್ತು ಕೌನ್ಸಿಲ್ ಸಭೆ ಸೇರುವಾಗ ಚಿಲ್ಲಿ ನಡೆಯುವ ಕಾರ್ಯಕಲಾಪಗಳೆಂದರೆ ಪಕ್ಷಪಾತತನಗಳು, ಪ್ಯೆಂಟ್ ಓಫ್ ಓರ್ಡರ್, ಕ್ರಮಬಾಹಿರ ತರಾವುಗಳು ಮತ್ತು ನಿಷೇಧ ಸೂಚಕ ಸಭಾ ತ್ಯಾಗಗಳ ಹೊರತು ಬೇರೊಂದೂ ಜರಗುವದಿಲ್ಲ. ಇಂತಹದು ಸ್ಥಳೀಯ ಸ್ವತಂತ್ರಾಡಳಿತೆಯಲ್ಲ; ಇದು ಅತಂತ್ರಾಡಳಿತೆ.

ಪ್ರ. ವ.—ಓ, ಖಾಗೆ. ನಿಮ್ಮ ಮೂಲ ವಾದವೆಂದರೆ ಸ್ಥಳೀಯ ಅಂತಂತ್ರಾಡಳಿತೆಯನ್ನು ಜ್ಯಾರಿಯಿಲ್ಲಿಲ್ಲದಿರುವ ಈಯೊಂದು ವಿಜನ್ಸಿಗೆ.....

ಆ. ರಾ.—ತನ್ನ ಕೆಟ್ಟ ಚಾಳಿಗಳಿಗಾಗಿ ತೆರಿಗೆ ತೆರುವಂತೆ ನನ್ನನ್ನು ಕೇಳುವರೆ ಕಾನೂನು ಬದ್ಧವಾದ, ಅಥವಾ ಸಾಮಾನ್ಯ ವ್ಯವಹಾರ ನೀತಿಗನುಸಾರವಾದ ಅಧಿಕಾರವಿಲ್ಲವೇ ಇಲ್ಲ.

ಪ್ರ. ವ—ಧನ್ಯವಾದ,ರಾಮಯ್ಯರೇ, ನನಗೆ ನಿಮ್ಮನ್ನು ಕೇಳಲಿಕ್ಕಿದ್ದುದಿಷ್ಟೆ.

ವಾದಿ ವಕೀಲ—ರಾಮ ಅಯ್ಯರೇ, ನೀವು ಕಳದ ಬಾರಿಯ ಮುನಿಸಿಪಲ್ ಚುನಾವಣೆಗೆ ಉಮೇದ್ವಾರಿಯಾಗಿ ನಿಂತು ಸೋತು ಹೋಗಿದ್ದೀರಿ, ಅಲ್ಲವೇ?

ಆ. ರಾ—ಹೌದು, ನಾನು ನಿಂತಿದ್ದೆ. ಫಾಗನ್ನಲು ನನಗೆ ನಾಚಿಕೆಯಾಗುತ್ತದೆ. ಮತ್ತು ನಾನದರೊಳಗೆ ಪ್ರವೇಶಿಸದಂತಾದುದಕ್ಕಾಗಿ ಬಹಳ ಸಂತೋಷ ಪಡುತ್ತೇನೆ.

ವಾ. ವ—ನಾನೀಗ ನಿಮ್ಮ ಮುಂದಿಡುವ ಪದಿಸ್ಟೆ:-ನೀವೀಗ ದೂರುತ್ತಿರುವ ಪದ್ಯದ ಕೌನ್ಸಿಲಿನ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಸುಸಂದರ್ಭವು ಆ ಮೂಲಕ ನಿಮಗೆ ತಪ್ಪಿ ಹೋದ್ದರಿಂದ ನಿಮಗದರ ಮೇಲೆ ವೈಷಮ್ಯ ಮೊಳೆತಿದೆ.

ಆ. ರಾ—ಹಾಗಲ್ಲವೇ ಅಲ್ಲ. ಅಂತಹ ಒಂದು ಕೂಟದಲ್ಲಿ ನಾನು ಮಾಡುವಂತ ಹದೇನೂ ಇಲ್ಲ. ಆವರು ನಗರದ ಕೌನ್ಸಿಲರರಲ್ಲ—ಊರ ಬಚ್ಚಾಳಿಗಳು.

(ಗದ್ದಲ. 'ಸ್ಯಾಲೈನ್ಸ್' ಎಚ್ಚರಿಕೆ)

ಜಡ್ಜ್—ರಾಮಯ್ಯರ್, ಸ್ಥಳೀಯ ಆಡಳಿತೆಯನ್ನು ಶುದ್ಧೀಕರಿಸುವ ನಿತ್ಯ ಹುರುಪಿನಿಂದಾಗಿ ಅವಾಚ್ಯ ಮಾತುಗಳನ್ನು ನೀವು ಆಡಬಾರದು.

ಆ. ರಾ—ಆದಕ್ಕಾಗಿ ಪಶ್ಚಾತ್ತಾಪ ಪಡುತ್ತೇನೆ, ಯುವರ್ ಒನರ್. ಆದರೆ ಈ ಸಂಗತಿಗಳೆಲ್ಲಾ ನನ್ನ ಮನಸ್ಸಿಗಷ್ಟೂ ನಾಟಿ ಹೋಗಿವೆ.

ಜಡ್ಜ್—ಶಾಂತತೆಯಲ್ಲಿರಿ, ಚಾರ್ಜಸ್, ಆಯ್ಯರ್, ನೀವು ಮುಂದುವರಿಸಿ.

ವಾ. ವ—ರಾಮ ಅಯ್ಯರ್, ನಿಮಗೊಬ್ಬ ದಾಯಾದಿಯಿದ್ದಾನೆ, ಆತ ಬಿಮಿಣಿ ಎಣ್ಣೆ ವ್ಯಾಪಾರದಲ್ಲಿದ್ದಾನೆ?

ಆ. ರಾ—ಸರಿ ಇದ್ದರೇನಾಯಿತು?

ವಾ. ವ—ಅವರು ಮುನಿಸಿಪಲ್ ಟೈಪಿಂಗ್ ಕಂಟ್ರಾಕ್ಟಿಗೆ ಟೆಂಡರ್ ಫಾಕಿ ಸೋತದ್ದು ನಿಜ ತಾನೆ?

ಆ. ರಾ—ಅದು ನನಗೆ ಹೇಗೆ ಗೊತ್ತು? ನಾನು ನನ್ನ ದಾಯಾದಿಯ ಉದ್ಯೋಗವನ್ನು ಮಾಡುತ್ತಿಲ್ಲ

ವಾ. ವ—ಸತ್ಯಕ್ಕೂ ನಿಮಗೆ ಗೊತ್ತಿಲ್ಲ. ಆದರೆ ವೆಲೆಯಿಲ್ಲದವನ್ ಎಂಬ ಹೆಸರನ್ನೆ ಅಳಿಯನೊಬ್ಬ ನಿಮಗಿದ್ದಾನೆ ಆತ ಈಗ ನಿರುದ್ಯೋಗಿಯಾಗಿದ್ದಾನೆ. ಇದಾದರೂ ನಿಮಗೆ ಗೊತ್ತುಂಟಷ್ಟೆ?

ಆ. ರಾ—ಹೌದು. ಆದರೆ.....

ವಾ. ವ—ಒಂದು ಮಿನಿಟು ನಿಲ್ಲಿ; ರಾಮಯ್ಯರ್, ನಾನು ಹೇಳುತ್ತೇನೆ—ಆಕ ಮುನ್ಸಿಸಲ್ ಆಫೀಸಿನ ಎಟೆಂಡರ್ (ಪಹರೇ) ಸ್ಥಾನಕ್ಕೆ ಆರ್ಜಿ ಹಾಕಿದ್ದ; ಆ ಆರ್ಜಿಯು ತಿರಸ್ಕರಿಸಲ್ಪಟ್ಟಿದ್ದಿತು ಅಲ್ಲವೆ?

(ಇನ್ನೇ ಪುಟ ನೋಡಿರಿ)

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಫಾಸೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಸಾರ್ಟ ನುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.
ಬಿ. ಬಾಬು ಪೆಟ್ಟಿ, ಪ್ರೊಪ್ರೈಟರ್.
Indra Bhavan Coffee Hotel,
Balmatta Road, Mangalore.

ಕೇಂದ್ರ ಎಸೆಂಬ್ಲೀ ಉಮೇದ್ವಾರಿಕೆಗಳು.

ಸದ್ಯ ಆಖಿಲ ಹಿಂದುಸ್ಥಾನದಲ್ಲಿ ಕೇಂದ್ರ ಎಸೆಂಬ್ಲಿಯ ಉಮೇದ್ವಾರೀ ಜ್ವರ ಹಬ್ಬಿದಂದೆ ಬಂಗಾಳವೊಂದನ್ನು(ಅಲ್ಲಿನಾಮಪತ್ರ ದಾಖಲಾತಿಯ ವಾಯಿದೆ ನವಂಬರ ೭ರ ವರೆಗಿದೆ.) ಬಿಟ್ಟರೆ ಮಿಕ್ಕೆಲ್ಲಾ ಪ್ರಾಂತ್ಯಗಳಲ್ಲಿ ಕೇಂದ್ರ ಎಸೆಂಬ್ಲಿ ಸ್ಥಾನಗಳಿಗೆ ನಾಮಪತ್ರ ಹಾಜರುಪಡಿಸುವ ದಿನಗಳು ಒಕ್ಟೋಬರ್ ಕೊನೆಯ ವಾರದಲ್ಲಿದ್ದುವು. ಹೀಗೆ ದಾಖಲಾದ ನಾಮಪತ್ರಗಳ ಪರೀಶೀಲನೆಯು ಒಂದೋ ಎರಡೋ ದಿನಗಳ ನಂತರ ನಡೆದುವು; ಆ ಮೇಲೂ ಉಮೇದ್ವಾರಿಗಳಿಗೆ ತಮ್ಮ ಹೆಸರನ್ನು ಹಿಂದೆಗೆದುಕೊಳ್ಳಲು ಒಂದೆರಡು ದಿನಗಳನ್ನು ಬಿಟ್ಟು ದಿವೆ. ಹೀಗೆ ನಾಮಪತ್ರ ಸ್ವೀಕೃತಿಯಿಂದ ಎಲ್ಲಾ ವಿಧಿನಿಯಮಗಳು ಮುಗಿದು ಎಲ್ಲೆಲ್ಲಿ ಯಾರಾರೊಳಗೆ ಸ್ಪರ್ಧೆಯೆಂಬುದು ನವಂಬರ್ ಪ್ರಥಮ ವಾರದಲ್ಲಿಯೇ ಸ್ಪಷ್ಟವಾಗಬೇಕು. ನವಂಬರ್ ಅಂತ್ಯದೊಳಗೆ ಇಡೀ ರಾಷ್ಟ್ರದಲ್ಲಿ ಚುನಾವಣೆ ನಡೆಯಲಿದೆ. ಆದ್ದರಿಂದ ಈ ಬಾರಿಯ ಕೇಂದ್ರ ಎಸೆಂಬ್ಲಿ ಚುನಾವಣೆಯಲ್ಲಿ ವಿವಿಧ ಪಕ್ಷಗಳ ಹೋರಾಟ ತೀವ್ರತೆಯದಾಗುವದಷ್ಟೇ ಅಲ್ಲ; ಅವಸರದ್ದೂ ಆಗುವದು. ಇಷ್ಟರ ವರೆಗೆ ತಿಳಿದುಬಂದ ಉಗ್ರ ಹೋರಾಟವಿರಬಹುದಾದ ಕೆಲವು ಸ್ಥಾನಗಳನ್ನು ಇಲ್ಲಿ ಕೊಡಲಾಗಿದೆ

ಮಿ. ಜಿನ್ನಾರಿಗೆ ವಿರೋಧ

ಬೊಂಬಾಯಿಯ ಮುಸ್ಲಿಂ ಮತದಾರ ಕ್ಷೇತ್ರದೊಂದು ಸ್ಥಾನ ಲೀಗ್ ಫುಗಾರ್ ಮಿ. ಜಿನ್ನಾರ ಸ್ಪರ್ಧಾಸ್ಪರ್ಧಿಯಾಂತಿದ್ದುದು. ಕಳದ 22 ವರುಷಗಳಿಂದ ಕ್ರಯದ್-ಇ-ಅಝಾದಿಯನ್ನು ಅವಿರೋಧವಾಗಿ ಆರಿಸಿ ಕಳುಹಿಸುತ್ತಿದ್ದ ಕ್ಷೇತ್ರವಿದು ಈ ಬಾರಿ ಮಿ. ಜಿನ್ನಾರಿಗಿದಿರಾಗಿ ಬೊಂಬಾಯಿಯ ಪ್ರಸಿದ್ಧ ವ್ಯಾಪಾರಿ ಸೇಟ್ ಹುಸೇನ್ ಭಾಯ್ ಲಾಲ್ಜಿಯವರು ಸ್ವತಂತ್ರ ಉಮೇದ್ವಾರಿಯಾಗಿ ನಿಂತಿದ್ದಾರೆ. ಮುಸಲ್ಮಾನರ ನಡುವೆ ಮಿ. ಜಿನ್ನಾರು ಸ್ಪರ್ಧಾತೀತರೆಂಬ ಮನಸ್ಸನ್ನು ಈ ವಿರುದ್ಧ ಉಮೇದ್ವಾರಿಕೆಯು ಹುಸಿಮಾಡಿದೆ. ಸ್ವತಃ ಇದು ಮಿ. ಜಿನ್ನಾರಿಗಾದ ಪ್ರಥಮ ಸೋಲು. ಜಾತಿ ಮತ್ತು ಪಕ್ಷಾಭಿಮಾನಗಳ ಅತೀತ ಬಿಸಿಯಿರುವ ನೆಲೆ ಬೊಂಬಾಯಿ. ಆದರೂ ಮಿ. ಜಿನ್ನಾರಿಗೆ ವಿರೋಧವೆಂದರೆ ಅಲ್ಲಿಯ ತಿಕ್ಕಾಟ ಅತ್ಯುಗ್ರವಾಗಬಹುದು. ಲೀಗ್ ಅಧ್ಯಕ್ಷರಿಲ್ಲಿಯಾದರೂ ಈ ಚುನಾವಣೆಯಲ್ಲಿ ಅಡಿಗೆ ಬಿದ್ದರಾದರೆ ಆಗೊಮ್ಮೆ ಇಡೀರಾಷ್ಟ್ರ ದೋಮಾಂಚನಗೊಂಡೀತು; ಪಾಕಿಸ್ತಾನ್ ಕೂಗು ಪಕ್ಯನ್ನೊಮ್ಮೆ ಕಂದಗತವಾದೀತು! ಆದರೆ ಇಂಥಹ ಆಕಸ್ಮಿಕವಾದ ಕಡಿಮೆ. ಈ ನಾಮಪತ್ರಗಳ ಪರೀಶೀಲನೆಯು ಒಕ್ಟೋಬರ್ 31ಕ್ಕೆ. ಆ ಮೇಲೆ ಉಮೇದ್ವಾರಿಕೆ ಹಿಂಪೆಗೆದುಕೊಳ್ಳುವ ಅವಕಾಶವೂ ಇದೆ. ಇವೆಲ್ಲಾ ಗಡಿದಾಟದ ಮೇಲೂ ಜಿನ್ನಾರಿಗಿದಿರಾಗಿ-ಹುಸೇನ್ ಭಾಯ್ ನಿಂತಿದ್ದರೆ ಮಾತ್ರ ಮಿಕ್ಕುದನ್ನು ಊಹಿಸಬೇಕು. ಸೇಟ್ ಹುಸೇನ್ ಭಾಯ್ ಲಾಲ್ಜಿಯನ್ನು ಜಾರಿಸುವ ತತಪ್ರಯತ್ನ ನಡೆಯುನಿರಲಾರದು. ಹುಸೇನ್ ಭಾಯ್ ಇದುವರೆಗೂ ಬೇರೆ ಕ್ಷೇತ್ರದಿಂದ ಎಸೆಂಬ್ಲಿ ಸದಸ್ಯರಾಗಿಯೇ ಇದ್ದರು. ಮಿ. ಜಿನ್ನಾರಂತೂ ಕೇಂದ್ರ ಎಸೆಂಬ್ಲಿಯಲ್ಲೂ ಲೀಗ್ ಪಕ್ಷದ ನಾಯಕರಾಗಿದ್ದವರು.

ಬೊಂಬಾಯಿಯ ನುತ್ತೊಂದು ಆಶ್ಚರ್ಯ

ಶ್ರೀ ಭುಲಾಭಾಯಿಗಳ ಮೇಲೆ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡು ಅಸ್ಪೃಶ್ಯ ಕ್ಷೇತ್ರವಾಗಿ 'ಶಿಸ್ತು ಜ್ಯಾರಿ' ಮಾಡಿತೆಂಬ ಎಂಬ ಸಂದೇಹ ಬರುತ್ತಿದೆ. ಶ್ರೀ. ಭುಲಾಭಾಯಿಗಳು ಕಳದ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕರು. ಪಾರ್ಲಿಮೆಂಟರೀ ಕಾರ್ಯವಿಚಕ್ಷಣತೆಯಲ್ಲಿ ಅವರನ್ನು ಸರಿಗಟ್ಟುವವರು ಬ್ರಿಟಿಷ್ ಎಂ ಪಿ ಗಳಲ್ಲಿಯೂ ಕೂಡಾ ದೊರೆಯುವದು ಅಸಂಭವ. ಅವರ ಸ್ಥಾನವೂ ಮಿ ಜಿನ್ನಾರಂತೆ ಬೊಂಬಾಯಿಯೇ. ನಗರದ ಮಹಮ್ಮದೇತರ ಎರಡು ಸ್ಥಾನಗಳಲ್ಲೊಂದು ಭುಲಾಭಾಯಿಗಳಿಗೆ ಮೀಸಲಿದ್ದುದು. ಈ ಬಾರಿ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡು ಅವರನ್ನು ಆರಿಸದೆ ಎರಡು ಸ್ಥಾನಗಳಿಗೆ ಡಾ. ಜಿ. ವಿ. ದೇಶಮುಖ್ ಮತ್ತು ಶ್ರೀ. ಮಿಸ್. ಆರ್. ಮಸಾನಿಯವರನ್ನು ನಿಲ್ಲಿಸಿದೆ ಮುಂದಿನದು ದೇಸಾ ಯಿಯ್ಯಿದ ಎಸೆಂಬ್ಲಿಯಾಗವೆದು. ಲಿಯಾಖತ್ ಅಲೀಖಾನರೊಂದಿಗೆ ಮಾಡಿಕೊಂಡ ಆ ಚರಿತ್ರಾರ್ಹ ಒಪ್ಪಂದವೇ ಭುಲಾಭಾಯಿಗಳಿಗೆ ಬೇಲಿಯಾಯಿತು ಎಂದು ತಿಳಿದು ಬರತ್ತದೆ. ಆ ಮೂಲ ಕರಾರಿನಂತೆ ಲೀಗಿನ ಪ್ರಾಮುಖ್ಯತೆಯನ್ನು ಹೆಚ್ಚಿಸಿದರೆಂದು ಹಲವು ಕಾಂಗ್ರೆಸ್ ಪ್ರಮುಖರಿಗೆ ದೇಸಾಯಿಗಳ ಮೇಲೆ ಜಗುಪ್ಸೆ ಮಾಡಿದ್ದುದು ನಿಜ. ಈ ಬಾರಿಯ ಉಮೇದ್ವಾರಿ ಡಾ! ದೇಶಮುಖರು ಹಿಂದೂ ಮಹಾ ಸಭಾ ಪಕ್ಷಪಾತಿಗಳು. ಕಾಂಗ್ರೆಸಿಗರ ವರ್ತನೆಗೆ ವ್ಯತಿರಿಕ್ತವಾಗಿ ಬೊಂಬಾಯಿಯಲ್ಲಿ ಸಾರ್ವಜನಿಕ ಹಿಂದೂ ಸಭೆಯೊಂದರ ಅಧ್ಯಕ್ಷತೆ ವಹಿಸಿ ಪಲವರ ಟೀಕೆಗೊಳಗಾಗಿದ್ದರು. ಇಂತಹ ದೇಶಮುಖ್ ಮತ್ತು ಮಸಾನಿಯನವರನ್ನು ಹಿಂದು ಮಹಾ ಸಭೆಯ ಉಮೇದ್ವಾರಿಗಳಾದ ಶ್ರೀ. ಸಾಳೆ ಮತ್ತು ಶ್ರೀ ಕೆ. ಎಮ್. ಧಾಮ್ ಧಾರೆಯವರು ಇದಿರಿಸಿ ನಿಂತಿದ್ದಾರೆ ಇಲ್ಲಿಯ ಈ ಚುನಾವಣೆಯೂ ಬಿರುಸಾಗುವ ಸಂಭವವಿದೆ.

ಕೆಲವು ತುಲನೆಗಳು

ಈ ಬಾರಿಯ ಚುನಾವಣೆಯಲ್ಲಿ ಹೊಸ ಚಟುವಟಿಕೆ ತಾಣುತ್ತಿರುವದೆಂದೆ ಒಂದೆಡೆಯಲ್ಲಿ ಕಮ್ಯೂನಿಸ್ಟರದು; ಮತ್ತೊಂದೆಡೆ ಕಾಮ್ರಾಸ್ಟರದು. ಕಮ್ಯೂನಿಸ್ಟರ ಮೇಲೆ ಕಾಂಗ್ರೆಸಿನವರಿಗಿರುವದಕ್ಕಿಂತ ಹೆಚ್ಚಿನ ದ್ವೇಷ ಕಾಮ್ರಾಸ್ಟರ ಮೇಲೆ ಲೀಗಿನವರಿಗಿರುವಂತಿದೆ. ಕಾನ್ಪುರ ಮೊದಲಾದ ಕಡೆಗಳಲ್ಲಿ ಕಾಮ್ರಾಸ್ಟರು ಸಭೆಗಳನ್ನು ಸುಗ್ಗಿ ಲೀಗ್ ಮುಸಲ್ಮಾನರು ಗೋದಲಮಳೆಬ್ಬಿಸಿ ಹಲವಂಗೆ ಜಯಮಾಗಿದೆ— ಬೇರೆ ಕಡೆಯ ಸಭೆಗಳಲ್ಲಿ ಕಾಂಗ್ರೆಸ್-ಕಮ್ಯೂನಿಸ್ಟರೊಳಗೆ ಘರ್ಷಣೆಗಳು ನಡದಂತೆ ಆದರೆ ಕಮ್ಯೂನಿಸ್ಟರಿಗಾಗಲೀ ಕಾಮ್ರಾಸ್ಟರಿಗಾಗಲೀ ಕೇಂದ್ರ ಎಸೆಂಬ್ಲಿ ಮತದಾರ ಕ್ಷೇತ್ರಗಳ ಮೇಲೆ ಗಣ್ಯ ವರ್ಚಸ್ಸಿಲ್ಲ. ಇಡೀ ರಾಷ್ಟ್ರದಲ್ಲಿ ಅವುಗಳ ಪರವಾಗಿ ಕೈಬೆಳೆಗೆಕೆಯು ಉಮೇದ್ವಾರರಿರಬಹುದು ಆದರೆ ತಾವು ನಿಲ್ಲಿದ ಕಡೆಗಳಲ್ಲೂ ತಲೆಹಾಕಲು ಇವೆರಡು ಪಕ್ಷಗಳೂ ಹಿಂಜರಿಯುವದಿಲ್ಲವಾದ್ದರಿಂದ ಅಲ್ಲಲ್ಲಿ ಕಲ್ಲೆಸೆತ, ಕೈಕೈಗಳಾಗುತ್ತಿರುವ ವಾರ್ತೆ ಬರುತ್ತಿದೆ ಮುಸಲ್ಮಾನ್ ಮತದಾರ ಕ್ಷೇತ್ರಗಳೂ ಕಾಂಗ್ರೆಸ್ ನೇ ಮಕಗಳಿಗೆ ಆಷ್ಟೊಂದು ಅನುಕೂಲವಾಗಿಲ್ಲ. ಮತ್ತು ರಾಷ್ಟ್ರೀಯ ಮುಸಲ್ಮಾನ್ ಉಮೇದ್ವಾರಿಗಳಿದ್ದಲ್ಲಿ ಜನರನ್ನು ತನ್ನೆಡೆಗೆ ಕಾಂಗ್ರೆಸು ಗಣಿಸಬೇಕಾಗಿದೆ. ಇದ್ದರಿಂದ ಬೇರೆಬೇರೆ ಪ್ರಾಂತ್ಯಗಳ ಮುಸ್ಲಿಮ್ ಸ್ಥಾನಗಳಿಗೆ ಕಾಂಗ್ರೆಸಿನಧಿಕೃತ ಉಮೇದ್ವಾರಿಗಳಂದೆಂಬುದು ಇನ್ನೂ ಸ್ಪಷ್ಟವಾಗುವದಿಲ್ಲ. ಮಿ. ಜಿನ್ನಾರ ಕಣ್ಣಿಗೆ ಕಾಸರಕನ ಕೋಲಾಗಿರುವ—ಈ ಕಾರಣದಿಂದಲೇ ವಿಶ್ವನರ ಸ್ಪೀತಿಗಳಿರುವ ಪಂಜಾಬಿನ ಯೂನಿಯನಿಸ್ಟ್ ಪಕ್ಷವು ಕೇಂದ್ರ ಎಸೆಂಬ್ಲಿಗೆ ತನ್ನ ಉಮೇದ್ವಾರಿಗಳನ್ನೇ ನಿಲ್ಲಿಸುವದಿಲ್ಲ ಪಂಜಾಬು ಪ್ರಾಂತ್ಯದ ಮಟ್ಟಿಗೆ ಲೀಗಿನೋಡನೆ ನಮಗೆ ಭಿನ್ನಾಭಿಪ್ರಾಯ ಹೊರತು ಪಾಕಿಸ್ತಾನ್ ಬೇಡಿಕೆಯಲ್ಲಿ ನಾವು ಯಾರಿಗೂ ಹಿಂದಿಲ್ಲ' ಎಂದು ಆ ಪಕ್ಷದ ನಾಯಕ ಪಂಜಾಬಿನ ಪ್ರಧಾನಿ ಮಾಲಿಕ್ ಕಿಝಾರ್ ಹಯತ್‌ಖಾನರಂದಿದ್ದಾರೆ. ಕೇಂದ್ರ ಎಸೆಂಬ್ಲಿ ಚುನಾವಣೆಯಲ್ಲಿ ಲೀಗ್ ಉಮೇದ್ವಾರಿಗಳಗೆಗೇನೇ ಅವರ ಬೆಂಬಲ ದೊರೆಯಲಿದೆ.

ರಾಷ್ಟ್ರೀಯ ಮುಸಲ್ಮಾನ್—ಹಿಂದೂ ಮಹಾ ಸಭೆ

ಸದ್ಯ ಸ್ಥಿತಿಯಲ್ಲಿ ಕಾಂಗ್ರೆಸಿನೊಡನೆ ಸ್ಪರ್ಧಿಸುವ ಹಿಂದೂ ಸಭೆಯೊಡನೆ ಲೀಗಿನ್ನು ಇದಿರಿಸುವ ರಾಷ್ಟ್ರೀಯ ಮುಸಲ್ಮಾನರನ್ನು ಹೋಲಿಸಬಹುದು ಇವೆರಡು ಪಕ್ಷಗಳಿಗೆ ಹುಟ್ಟಿರುವ ಪಂಥವೂ ಸಕಾರಣವಾದುದು. ಈ ಬಾರಿ ಹಿಂದೂ ಮಹಾ ಸಭೆಯವರು ವಿಶೇಷ ಹುರುಪಿನಿಂದ ಮುಂದಾಗಿದ್ದಾರೆ. ಕಳದ ಬಾರಿ ಕೇಂದ್ರ ಎಸೆಂಬ್ಲಿಯಲ್ಲೊಂದು ಪಕ್ಷವಾಗಿ ಇಲ್ಲದಿದ್ದವರಿಂದಲೇ ಹಿಂದೂ ಮಹಾ ಸಭೆಗೆ ಸಿಮ್ಲಾ ಸಮ್ಮೇಲನಸ್ಥಾನಮಂತ್ರಿತ್ವವಿರಲಿಲ್ಲ. ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿತ್ವ-ನೆಂದು ಹೆರಿಸಿಕೊಂಡ ಮಿ. ಜಿನ್ನಾರು ಒಂದೇ ಒಂದು ಸ್ಥಾನವನ್ನಾದರೂ ರಾಷ್ಟ್ರೀಯ ಮುಸಲ್ಮಾನರಿಗಾಗಿ ಬಿಟ್ಟುಕೊಡಲಿಲ್ಲ. ತಮಗಿಲ್ಲವೆಂದು ಹೇಳಿಸಿಕೊಂಡ ಆ ಯೋಗ್ಯತೆಗಳನ್ನು ಈ ಬಾರಿ ಸಂಪಾದಿಸಿಯೇ ತೀರಬೇಕೆಂದು ಇವೆರಡು ಪಕ್ಷಗಳೂ ನಡುಬಿಗಿದಿವೆ ಕಾಂಗ್ರೆಸ್ ಉಮೇದ್ವಾರಿಗಳಿಗೆ ಹಲವು ಕಡೆಗಳಲ್ಲಿ ಹಿಂದೂ ಸಭಾ ಇದಿರಾಳಿಗಳಾದ್ದಾರೆ. ಮಹಾ ಸಭಾಧ್ಯಕ್ಷ ಡಾ! ಶ್ಯಾಮ ಪ್ರಸಾದ ಮುಖರ್ಜಿಯವರು ಬಂಗಾಳದ ಬುದ್ವಾನ್ ಕ್ಷೇತ್ರಕ್ಕೊಬ್ಬ ಉಮೇದ್ವಾರಿ. ಘಾಯಿಸರವಾನಂದ, ನರಂಗ್ ಮೊದಲಾದ ಹಲವು ಹಿಂದೂ ಪ್ರಮುಖರು ಚುನಾವಣೆಗಿಳಿದಿದ್ದಾರೆ. ಆತ್ಯಂತ್ಯಾಗ್ರಾಮ ಮುಸಲ್ಮಾನರಂತೂ ಅತ್ಯಂತ ಹುರುಪಿನಿಂದ ಸ್ಥಾನಬಿಡದೆ ಸರ್ವ ಕಡೆಗಳಲ್ಲೂ ಲೀಗನ್ನು ಸ್ಪರ್ಧಿಸಲಿಳಿದಿದ್ದಾರೆ. ಮಿ. ಜಿನ್ನಾರಂತೆ ಲೀಗ್ ಕಾರ್ಯದರ್ಶಿ ಲಿಯಾಖತ್ ಅಲೀಖಾನರಿಗೂ ಸಂಯುಕ್ತ ಪ್ರಾಂತದೊಂದು ಮುಸ್ಲಿಮ್ ಸ್ಥಾನಕ್ಕೆ ರಾಷ್ಟ್ರೀಯ ಮುಸಲ್ಮಾನ್ ಪ್ರತಿಸ್ಪರ್ಧಿಯಿದ್ದಾರೆ ಎಲ್ಲೆಲ್ಲೂ ಚುನಾವಣಾ ಉದ್ವೇಗವೇರಿದೆ; ಕ್ರಮವು ಏರುತ್ತಿದೆ

ಒಂದು ಸಾಮಾನ್ಯ ನೋಟ.

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur B. S. Sawkar, B A I L B, Chairman. — A. S. Kini, Managing Director.

ದಿ ಯುನೈಟೆಡ್ ಕರ್ನಾಟಕ ಇನ್ಶುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ

THE UNITED KARNATAK INSURANCE Co. Ltd. DHARWAR

ಹೆಚ್ಚಿನ ಮಾಹಿತಿಗೆ ಬರೆಯಿರಿ—

Organising Office:— **Court Road, UDIPI.**

NAVAYUGA
The Leading Kannada weekly
Published every Thursday
The best medium for advertisement of every kind
For advt. rates:-
The advt. Manager
Navayuga Udipi.

★ ಕಾಂಗ್ರೆಸ್ ಚುನಾವಣಾ ಘೋಷಣೆ. ★

ಧೋರಣೆಯ ಸ್ಪಷ್ಟೀಕರಣ! : : ಸ್ಫೂರ್ತಿದಾಯಿ ಆಮಂತ್ರಣ!

"1942ನೇ ಆಗೊ ಸ್ಟು 8ರಲ್ಲಿ, ಆಂದಿನಿಂದಿದು ವರೆಗೂ ಭಾರತೀಯ ಚರಿತ್ರೆಯಲ್ಲಿ ಪ್ರಾಮುಖ್ಯತೆ ಪಡೆದಿರುವ ಒಂದು ಘಟನಾವಳಿಯನ್ನು ಆ ಭಾ. ಕಾಂಗ್ರೆಸ್ ಕಮಿಟಿ ಮಂಜೂರುಮಾಡಿತು. ಅದರಲ್ಲಿದ್ದ ಬೇಡಿಕೆ ನ.ತ್ತು ಯುದ್ಧಾಹ್ವಾನವನ್ನೇ ಕಾಂಗ್ರೆಸು ಇಂದಿಗೂ ಆಧರಿಸಿ ನಿಂತಿದೆ. ಆ ಠರಾವನ್ನೇ ಆಧಾರವಾಗಿಟ್ಟುಕೊಂಡು ಅದರ ರಣಗರ್ಜನೆಯನ್ನೇ ಮಾಡುತ್ತಾ ಕಾಂಗ್ರೆಸು ಇಂದು ಕೇಂದ್ರ ಮತ್ತು ಪ್ರಾಂತಿಕ ಎಸೆಂಬ್ಲಿ ಚುನಾವಣೆಗಿದಿರಾಗಿದೆ"— ಎಂಬುದೇ ಕಾಂಗ್ರೆಸ್ ಹೈಕಮಾಂಡ್ ರಾಷ್ಟ್ರದ ಮುಂದಿಟ್ಟಿರುವ ಚುನಾವಣಾ ಘೋಷಣೆಯ ಮೂಲವಾಕ್ಯಗಳು. ಘೋಷಣೆಯಲ್ಲಡಕವಾಗಿರುವ ಮುಖ್ಯ 12 ಮುದ್ದೆಗಳನ್ನು ಇಲ್ಲಿ ಕೊಡಲಾಗಿದೆ:—

1. ಭಾರತದ ಪ್ರತಿಯೊಬ್ಬ ನಾಗರಿಕನಿಗೂ ಸಮಾನವಾದ ಹಕ್ಕು ಮತ್ತು ಸಂದರ್ಭಗಳನ್ನೊದಗಿಸಿ ಕೊಡಲು ಕಾಂಗ್ರೆಸು ಬದ್ಧವಿದೆ.

2. ಆಯು ಎಲ್ಲಾ ಜಾತಿಗಳ ಮತ್ತು ಧಾರ್ಮಿಕ ಪಂಗಡಗಳ ಐಕ್ಯತೆಗಾಗಿ, ಹಾಗೂ ಆವುಗಳೊಳಗಿನ ಸಖನೆ, ಸೌಹಾರ್ದತೆಗಾಗಿ ನಿಂತಿದೆ

3. ಸರ್ವಜನತೆಯು ತಲತಮ್ಮ ಬಯಕೆ ಮತ್ತು ಪ್ರತಿಜೆಗನುಸಾರವಾಗಿ ಬೆಳವಣಿಗೆ ಮತ್ತು ಪುಷ್ಟೀಕರಣ ಪಡೆಯುವಂತೆ ನೋಡಲು ಕಾಂಗ್ರೆಸು ಬದ್ಧವಿದೆ.

4. ವಿಶಾಲ ಚಾಕಟ್ಟಿನೊಳಗೆಯಲ್ಲಿ, ಪ್ರತಿಯೊಂದು ಪಂಗಡ ಮತ್ತು ಪ್ರದೇಶವು ತನ್ನ ಜೀವನ ಮತ್ತು ಸಂಸ್ಕೃತಿಯನ್ನು ಬೆಳೆಯಿಸಿಕೊಳ್ಳುವಂತೆ ನೋಡುವ ಬಾಧ್ಯತೆ ಕಾಂಗ್ರೆಸಿನದಾಗಿದೆ

5. ಆದು ಭಾಷಾನುಸಾರಾಗಿ ಮತ್ತು ಸಂಸ್ಕೃತಿಗನುಸಾರ ಪ್ರಾಂತ್ಯಗಳನ್ನು ಪುನರ್ಘಟಿಸಲು ಬದ್ಧವಿದೆ

6. ಸಾಮಾಜಿಕ ಆತ್ಯಾಚಾರ ಮತ್ತು ಆ ನ್ಯಾಯಗಳಿಗೊಳಗಾಗಿರುವ ಎಲ್ಲಿರ ಹಕ್ಕು ಜಾಧ್ಯತೆಗಳ ರಕ್ಷಣೆ ಮತ್ತು ಆವರ ಸಮಾನತೆ ಸಾಧಿಸಲಿಕ್ಕಾಗಿರುವ ತನಿಕೊರತೆಗಳನ್ನು ನಿವಾರಿಸಲು ಕಾಂಗ್ರೆಸು ಬದ್ಧವಿದೆ.

7. ತನ್ನ ರಾಜ್ಯ ಘಟನೆಯೊಳಗೆ ಪ್ರತಿಯೊಬ್ಬ ನಾಗರಿಕನಿಗೂ ಜನ್ಮಸಿದ್ಧ ಹಕ್ಕು ಮತ್ತು ಸ್ವಾಧಿಕಾರವುಳ್ಳ ಸ್ವತಂತ್ರ ಪ್ರಜಾಸತ್ತಾತ್ಮಕ ರಾಜ್ಯವೇ ಕಾಂಗ್ರೆಸಿನ ಸಂಕಲ್ಪ.

8. ಘಟನೆಯೊಳಗಿನ ವಿಭಾಗಗಳಿಗೆ ಹೆಚ್ಚಿನ ಸಮಬ್ಬಿಗೆ ಪೂರ್ಣ ಆಡಳಿತಾಧಿಕಾರವಿರುವ ಒಂದು ಸಂಯುಕ್ತ (ಫೆಡರಲ್) ರಾಜ್ಯಘಟನೆಯನ್ನು ಕಾಂಗ್ರೆಸು ಆಧರಿಸುತ್ತದೆ.

9. ಕಾಂಗ್ರೆಸು ಭಾರತದ ಆತ್ಯವಸರದ ಮತ್ತು ಆತಿ ಸ್ಫಾನುಮುಖ್ಯ ಸಮಸ್ಯೆಯಾಗಿರುವ ಪ ಬಡತನದ ಮೂಲವನ್ನು ನಿವಾರಿಸಿ, ಜನ ಸಾಮಾನ್ಯರ ಜೀವನಮಟ್ಟವನ್ನು ಏರಿಸುವದು.

10. ಕೈಗಾರಿಕೆ ಮತ್ತು ಜೇಸಾಯವನ್ನು ಆಧುನಿಕ ರೀತ್ಯಾ ಸುಧಾರಿಸಿ ಐಶ್ವರ್ಯದ ಎಲ್ಲಾ ವಿಭಾಗಗಳಲ್ಲೂ ಉತ್ಪತ್ತಿ ಮತ್ತು ವಿತರಣಾ ವಿಧಾನಗಳನ್ನೂ ಸಾಮಾಜಿಕ ಹಿತೋದ್ದೇಶಗಳಿಗನುಸಾರವಾಗಿ ಭಾರತವು ಒಂದು ಸಮಕಾಲೀನ ಕಾಮನ್‌ವೆಲ್ತ್ ಆಗಿ ಬೆಳೆಯಲಿಕ್ಕೆ ಹೊಂದುವಂತೆ ನೋಡಲು ಕಾಂಗ್ರೆಸು ಬದ್ಧವಿದೆ.

11. ಆಂತರ್ರಾಷ್ಟ್ರೀಯ ನ್ಯಾಯವಹಾರಗಳಲ್ಲಿ ಕಾಂಗ್ರೆಸು ಒಂದು ಜಾಗತಿಕ ಸಂಯುಕ್ತ (ಫೆಡರಲ್) ಸಭೆಯ ನಿರ್ಮಾಣದ ಪರವಾಗಿ ನಿಂತಿದೆ.

12. ಎಲ್ಲಾ ಆಶ್ರಿತ ರಾಷ್ಟ್ರಗಳ ಸ್ವಾತಂತ್ರ್ಯವನ್ನೂ ಕಾಂಗ್ರೆಸು ಎತ್ತಿ ಹಿಡಿಯುತ್ತದಲ್ಲದೆ ಎಲ್ಲೆಡೆಯ ಸಾಮ್ರಾಜ್ಯಶಾಹಿಯೂ ನಿರ್ನಾಮವಾಗುವಂತೆ ಸಾಧಿಸುತ್ತದೆ.

'ಪಾಕಸ್ತಾನಿ'ಗೆಳು ಹರಾಂಬರಿಸಲಿ!

ಮೇಲಿನ ಸೂತ್ರಗಳನ್ನೊಳಗೊಂಡ ಕಾಂಗ್ರೆಸ್ ಚುನಾವಣಾ ಘೋಷಣೆಯು ಸಾಕಷ್ಟು ವಿವರವಾಗಿ ನಿರೂಪಿಸಲ್ಪಟ್ಟಿದೆ. ಭಾಷಾನ.ವಾರು ಪ್ರಾಂತ್ಯ ರಚನೆಗೆ ವ ತ್ತೊಮ್ಮೆ ಸಮ್ಮತಿ ವ್ಯಕ್ತಪಡಿಸಿದುದು ಕರ್ನಾಟಕ, ಆಂಧ್ರದಂತಹ ಪ್ರಾಂತ್ಯಗಳಿಗೆ ಪೂರ್ಣ ಸಮಾಧಾನಕರ. ಸಂಸ್ಥಾನಗಳು ನಾಡವಾಗಿ ಪ್ರಾಂತೀಕರಣವಾಗುವದಕ್ಕೂ ಹಚ್ಚಿನ ಆಡಳಿತಾಧಿಕಾರವನ್ನು ಅಂತಹ ಪ್ರಾಂತ್ಯಗಳಿಗೀಯುವದಕ್ಕೂ ಕಾಂಗ್ರೆಸು ತನ್ನ ಸಿದ್ಧತೆಯನ್ನು ಪ್ರದರ್ಶಿಸಿದೆ. ಪಾಕಸ್ತಾನ್ ಬೇಡಿಕೆಯ ಎಲ್ಲಾ ಉದ್ದೇರಗಳೂ ಈ ಮೂಲಕ ಫಲಿಸಬಲ್ಲು ವೆಂಬುದನ್ನು ಮಿತ್ರರವಂತರು ಮನಗಾಣದಿರಲಾರರು. ಸ್ವತಿಯೊಬ್ಬನಿಗೂ ಮೂಲ ಭೂತ ನಾಗರಿಕ ಸ್ವಾತಂತ್ರ್ಯವುಳ್ಳ ಸಂಯುಕ್ತ ರಾಜ್ಯ ಘಟನೆಗೂ ಪ್ರಾಯಸ್ಥರೆ ಬ್ಲರ ಮತದಾನದಿಂದಾರಿಸಲ್ಪಡುವ, ಆದರೊಳಗಿನ ಸ್ವತಂತ್ರಾಧಿಕಾರವಿರುವ ಈ ಉಪರಾಷ್ಟ್ರಗಳಿಗೂ ಕೆಲವು ಸಂಬಂಧ ಜೋಡಣೆಗಳಿರಬೇಕೆಂಬುದೇ ಕಾಂಗ್ರೆಸಿನ ಧ್ಯೇಯ. ಯಥಾರ್ಥ ಜನಾಂಗ ಪ್ರೇಮಿಯೊಬ್ಬನು ಇದಕ್ಕೆಂತ ಭಿನ್ನವಾದ ಪಾಕಿಸ್ತಾನ್ ಆಥವಾ ಪ್ರತ್ಯೇಕ ಸ್ಥಾನವನ್ನು ಆವೇಷ್ಟಿಸಲಾರ.

ಕಮ್ಯೂನಿಸ್ಟರೂ ಕಣ್ಣು ಬಿಡಲಿ!

ಶ್ರೀ ಬಿ. ಎಂ. ಶ್ರೀಕಂಠಯ್ಯ- ಅವರು ಮಂಗಳೂರಿಗೆ ಆಗಮಿಸಿದ್ದು ಪಾ ೨೮ರಂದು ಸಂಜೆ, ಸ್ಥಳೀಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕೆನರಾ ಹೈಸ್ಕೂಲಿನ ಭೂನಸೇಂದ್ರ ಸಭಾಸದನದಲ್ಲಿ 'ಕನ್ನಡ ಜಾನ್ಪದ' ದ ಕುರಿತು ಭಾಷಣಮಾಡಿದ್ದರು. ಶ್ರೀ ಕೆ ಬಿ. ಜಿನರಾಜ ಹೆಗ್ಡೆ ಅವರು ಅಧ್ಯಕ್ಷತೆ ವಹಿಸಿದ್ದರು ಕನ್ನಡ ಭಾಷೆ, ಕನ್ನಡ ಜನ, ಕನ್ನಡನಾಡು ಏಂದಾಗಬೇಕು. ಎನ್ನುತ್ತ ಕನ್ನಡ ರಾಷ್ಟ್ರ ಪಳೆಯ ಕವನಗಳಲ್ಲದಿರುವ ಪುರಾತನ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ತೋರಿಸಿದರು.

ರೈಲು ಬಂಡಿಯೊಂದು- ಇದೇ ನವಂಬರ ತಾ ೧೭ರಿಂದ ಹೆಚ್ಚಿಜೆ. ಈ ತನಕ ಪೈಲಟ್ ಸುತ್ತು ರಾಟ್ರಿಗಳಲ್ಲಿ ಏದೇ ರೈಲುಗಳು ಹೋಗಿ ಬರುತ್ತಿದ್ದುವಲ್ಲ. ಈಗ ಬೆಳಿಗ್ಗೆ ೧೦ ಳ ಗಂಟೆಗೆ ಮಂಗಳೂರಿನಿಂದ ಹೊರಟು, ಸಂಜೆ ೪-೪೦ಕ್ಕೆ ಪುನಃ ಮಂಗಳೂರಿಗೆ ಬರುವ ಹೊಸ ರೈಲೊಂದರ ವ್ಯವಸ್ಥೆಯಾಗಿದೆ.

ಅ ಭಾ ಜೇನು- ವೃತ್ತಿಸಾಯಗಾರರ ಪರಿಷತ್ತು ಇದಕ್ಕೆ ಸಂಬಂಧಪಟ್ಟ ಪಸ್ತು ಪ್ರವರ್ತನವೂ. ಬರುವ ಪರಂಬರ ತಿಂಗಳ ತಾ. ೨೧ ಎರಡ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗುವುದೆಂದು ಗೊತ್ತಾಗಿದೆ.

ದರ ನಿಯಂತ್ರಣ- ಸಲಹಾ ಸಮಿತಿಯವರು ತಾ. ೩೦ ೧೧೪೫ರಂದು ನಿರ್ಧರಿಸಿ ಪ್ರಕಟಿಸಿರುವ ಕೆಲವು ಧಾರಣೆಗಳು (ನಗರದೊಳಗೆ) ೧ನೇ ಕ್ಲಾಸ್ ಭತ್ತ ಸೇರಿಗೆ ರೂ ೦ ೨ ೧ ೨ನೇ ಕ್ಲಾ ಸೇರಿಗೆ ೨ ಆಣೆ. ಮುಸ್ತಿ ಅಕ್ಕಿ ಸೇರಿಗೆ ರೂ ೦ ೪೮ ಗುದ್ದು ಅಕ್ಕಿ ಸೇರಿಗೆ ರೂ ೦ ೪ ೫. ಸುಗ್ಗಿ ಅಕ್ಕಿ ಸೇರಿಗೆ ರೂ. ೦ ೪ ೩ ಗೋಧಿ ಸೇರಿಗೆ ರೂ. ೦ ೪ ೨ ಮೆಣಸು ೧ನೇ ಕ್ವಾಲ್ಸ್ ಸೇರಿಗೆ ರೂ ೦ ೯ ೦ ೨ನೇ ಕ್ವಾಲ್ಸ್ ಸೇರಿಗೆ ರೂ ೦ ೬ ೬ ಬೆಲ್ಲ ಸೇರಿಗೆ ೧ ಆಣೆ ೬ ಪೈ. ಹುಡಿ ಸೇರಿಗೆ ೦-೪-೦. ಉಪ್ಪು (ಹೊರಗಿನದು) ಸೇರಿಗೆ ೦-೬ ಉಪ್ಪು (ಹೊರಗಿನದು) ಸೇರಿಗೆ ೨ ಆಣೆ ೬ ಪೈ. ರಾಗಿ ಸೇರಿಗೆ ೦ ೩ ೧. ಕಡ್ಲೆ ೧ನೇ ಕ್ಲಾಸ್ ಸೇರಿಗೆ ೦-೪-೧೧ ೨ನೇ ಕ್ಲಾಸ್ ಕಡ್ಲೆ ಸೇರಿಗೆ ೪ ಆಣೆ ೯ ಪೈ. ಚಿಮಿಣಿ ಎಣ್ಣೆ ಬಾಟ್ಲಿಗೆ ೩ ಆಣೆ ೩ ಪೈ. ಎಳ್ಳೆಣ್ಣೆ ಕುತ್ತಿಗೆ ರೂ ೨ ಆಣೆ ೨. ಲಿಂಗಸೆಣ್ಣೆ ಕುತ್ತಿಗೆ ರೂ ೧ ೦ ೦ ತೆಂಗಿನ ಕಾಯಿ 100ಕ್ಕೆ ರೂ ೭! ಊರ ಬಿಸ್ಲಿ ರಾತ್ರಿಗೆ 3 ಆಣೆ 3 ಪೈ. ಮೈಸೂರು ಬೆಲ್ಲ ರಾತ್ರಿಗೆ 3 ಆಣೆ 5 ಪೈ. ಕಬ್ಬಿಗೆ ಖಂಡಿಗೆ 7 ರೂ. 8 ಆಣೆ ಫೀಟು ಕಾಫಿ ಮರಣಕ್ಕೆ 34 ರೂ. 8 ಆಣೆ ಸಕ್ಕರೆ ನಗದೊಳಗೆ ರಾತ್ರಿಗೆ ಆಣೆ 4. ಬದಾಟಿ ರಾತ್ರಿಗೆ ೦-೧-೬

ಮಂಗಳೂರು ನಗರ ಕಾಂಗ್ರೆಸ್. ಸಮಿತಿಯು ಕಳೆದ ತಾ. ೩೦ರಂದು ಶ್ರೀ ಕೆ ಈಶ್ವರ ಅವರ ಅಧ್ಯಕ್ಷತೆಯಲ್ಲಿ ಸೇರಿ ಪುನರ್ರಚನೆಗೊಂಡಿತು. ಶ್ರೀಗಳಾದ ಎಚ್ ನಾರಾಯಣ ರಾಯರು ಅಧ್ಯಕ್ಷರು, ಕೆ. ತಿಮ್ಮಪ್ಪ ಶೆಟ್ಟಿ ಮತ್ತು ಎಂ ರಾಮರಾಯ ಕಿಣಿ ಅವರು ಕಾರ್ಯದರ್ಶಿಗಳು ಪಾಮೋದರ ಬಾಳಿಗ, ಶ್ರೀನಿವಾಸ ಮಲ್ಯ, ಸರದಾರಾಯ ಪ್ರಭು ಮತ್ತು ಡಾ। ಯು ಸಿ ಮಲ್ಯರು ಇತರ ಸದಸ್ಯರು.

ಕೇಂದ್ರ ಅಸೆಂಬ್ಲಿಯ-ದ ಕನ್ನಡ ಮತದಾರರು ನೀಲಗಿರಿ ಈ ಕ್ಷೇತ್ರದ ಮಟ್ಟಿನ ಮೇತರರ ಏಂದು ಸ್ಥಾನಕ್ಕೆ ಕಾಂಗ್ರೆಸಿನ ಕಡೆಯಿಂದ ನಂಬಿಯಾರ ಶ್ರೀ ಕರುಣಾಕರ ಸೋಸೊರ್ರು ನಿಂತಿರುವರಷ್ಟೆ ಇವರ ಸ್ಥಾನಕ್ಕೆ ನಮ್ಮ ಜಿಲ್ಲೆಯ ಶ್ರೀ ಎಸ್. ನಾಗರಾಜಯ್ಯನವರು ಹಿಂದೂ ಮಹಾ ಸಭೆಯ [illegible] ಗೋವಿಂದರಾಗಿರುವರು. ಇದೇ ಕ್ಷೇತ್ರದ ಬಂಬಿ ಮುಸ್ಲಿಂ [illegible] ಜಿ ಅಬ್ದುಲ್ ಸತ್ತಾರ್ ಇಸಾಕ್ ಸೇಟರು ಲೀಗಿನ ಕಡೆಯಿಂದಲೂ ಪಿ. ಕುಞ್ಞಿಕೋಯ ಅವರು ಮಜ್ಲೀಸ್ ಪಕ್ಷದಿಂದಲೂ ಅಸೇಂದ್ವಾರರಾಗಿದ್ದಾರೆ.

ದ. ಭಾ ಕೈಲ್ಸೆ ಮಜೂರ-ಹಾಗೂ ಜಿಲ್ಲಾ ಮಜೂರ ಯೂನಿಯನಿನ ಆಶ್ರಯದಲ್ಲಿ ತಾ. ೭ರಂದು ಕಡಿತ ನಿಷೇಧ ಸಭೆಯೊಂದು ಜರಗಿತು. ಶ್ರೀ. ಎಸ್. ಎಸ್. ಹೊಳ್ಳರು ಅಧ್ಯಕ್ಷತೆ ವಹಿಸಿದ್ದರು. ಅ. ಭಾ. ಕೈಲ್ಸೆ ಯೂನಿಯನಿನ ಮುಂದಿಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುವ ರೂಪವು ಮಂಜೂರಾಯಿತು ಶ್ರೀಗಳಾದ ಪಿ ವಿ. ಕಕ್ಕಿಲ್ಲಾಯ ಮತ್ತು ಶಿವರಂಕರ ರಾಯರು ಸೂಕ್ತವಾಡಿದರು.

ಪೆಲಸ್ತೈನ್ ದಿನವನ್ನು- ಸ್ಥಳೀಯ ಸುಬ್ಬಿಂ ಲೀಗು ತಾ. ೨೬ರಂದು ಆಚರಿಸಿತು. ಕೇಂದ್ರ ಮೈದಾನದಲ್ಲಿ ಮುಸ್ಲಿಮರ ಸಾಹಸಭೆಯೊಂದು ಜರುಗಿತು ಸಿ ಆಮನ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು ಸಿ ಆಮನ್ಮದ್ ಆಮೂರಿಯ ಪೆಲಸ್ತೈನಿನ ಸಮಸ್ಯೆಯನ್ನು ವಿವರಿಸಿ, ಪೆಲಸ್ತೈನನ್ನು ಸ್ವತಂತ್ರ ಪಡಿಸಿ ಸ್ವಳ. ಬ್ರಿಟಿಷರೇ ಏಷೂದ್ಯ ರಿಗಲ್ಲಿ ಅಸ್ಪದವನ್ನು ಕೊಡುತ್ತಿದ್ದಾರೆಂದೂ ವಿವರಿಸಿದರು. ಪೆಲಸ್ತೈನಿನಲ್ಲಿ ಬ್ರಿಟಿಷ್ ಹಾಗೂ ಅಮೆರಿಕದ ಸರಕಾರಗಳು ಪಹಿಸುತ್ತಿರುವ ನೀತಿಯನ್ನು ಖಂಡಿಸುವ ರೂಪವು ಮಾ ಸ್ಥಳಾಯಿತು.

ಶ್ರೀ ಕೃಷ್ಣಾನಂದ ಅನಾಥಾಶ್ರಮ ಇದರ ಕಾರ್ಯಕಾರಿ ಸಮಿತಿಯು ಸಭೆಯೊಂದು ಕಳೆದ ತಾ. ೨೮ರಂದು ಸೇರಿ, ಇದರ ಕಾರ್ಯದರ್ಶಿಗಳಾದ ಶ್ರೀ। ಗೋಪಾಲ ನಾಯಕರು ನಿಧನಕ್ಕಾಗಿ ಮೌನ ಸೂಚಿಸಿತು. ೨೮ ಮುಂದಿ ಅನಾಥ ಮಕ್ಕಳಿಗೆ ಆಶ್ರಯ ಕೊಡುತ್ತಿರುವ ಈ ಅನಾಥಾಶ್ರಮವು ಸುಂದರೆಯಾಗಿ ತನ್ನ ಕಾರ್ಯವನ್ನು ಸಾಗಿಸುವಂತೆ, ನಿವೃತ್ತ ಜಿಲ್ಲಾ ಕೃಷಿಖಾಲಾಖೆಯ ಅಧೀಕ್ಷಕರಾದ ಶ್ರೀ। ಉಳ್ಳಾಲ ನಿರಲ್ ರಾಯರನ್ನು ಕಾರ್ಯಾನಿರ್ವಹಿಗಳಾಗಿ ಆರಿಸಲಾಯಿತು. ಈ ಸಂದರ್ಭದ ಶ್ರೀ। ಸಯಂಪಕ್ಕಿ ರಾಮರಾಯರು, ೧೦೧೦ ಉದಾರ ದಾನವನ್ನು ಆಶ್ರಮಕ್ಕೆ ನೂ ಡಿರುವರು.

ಬೈಂದೂರು-ತಾ 28ರಲ್ಲಿ ಜಿಲ್ಲಾ ಕಲೆಕ್ಟರರು ಬೈಂದೂರಿಗೆ ಬಂದಾಗ ಕುಂದಾಪುರ ತಾಲೂಕಿನ ಜಾತಾ ಪರಿಷತ್ತಿನ ಕುರಿತು ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಸುಬ್ಬಣ್ಣ ಶೆಟ್ಟರು ಸತ್ಕಾರ ಪತ್ರವನ್ನು ಕೊಟ್ಟರು ಸಂಸ್ಥೆಗಳನ್ನು ಕಲೆಕ್ಟರರಿಗೆ ತಿಳಿಸಿದರು. ತಾಲೂಕಿನ ಈ ನರುಸಿದ ಬೆಳೆಯು ಅಲ್ಲಿಯ ಜನತೆಗೆ ಬಂಧುತ್ವ ತಂದಿಗಳಂಗಳಿಗೆ ಸಾಕಾಗಬಹುದೇದೂ ಉಳಿದ ಮೂರು ತಿಂಗಳಿಗಾ ಹೊರಗಿನಿಂದ ಅಕ್ಕಿ ಸರಬರಾಯಿ ಆಗಬೇಕಾಗಿದೆ ಏಂದರು. ಸಾಕ್ಷ ಸೀರು ಸಂಯಿಂದ ಹೊಳೆಗಳ ದೆಸೆಯಿಂದಾಗಿ ಬೆಳೆಗಳಲ್ಲಿ ಒಕ್ಕೆಗೆ ಸರಸರಿ 20ರಿಂದ 25 ಸೂಸಿಗೆ ಭತ್ತ ಹೊರಕಟ್ಟಬಹುದೆಂತಲೂ ಕಾಡು ಸ್ಥಳಗಳ ಹಾವಳಿಗೆ ತುತ್ತಾದ ಸೂಡುಂ ಗ್ರಾಮಗಳ ಗದ್ದೆಗಳಲ್ಲಿ ಒಕ್ಕೆಗೆ ಸರ-ಸರಿ 10ರಿಂದ15 ಸೂಸಿಗೆ ಭತ್ತ ಸಿಗಬಹುದೆಂದೂ ಹೇಳಿದರು ವಿಸಿನ್ಕೊ ಇಲಾಖೆಯ ಕೆಳ ನೌಕರರು ಸರ್ಥರಿಸಿದಷ್ಟು ಬತ್ತ ಹೊರಯಲು ಸಾಧ್ಯವಿಲ್ಲವೆಂಬ ಬಗ್ಗೆನ್ನು ಸಹ ಸೃಷ್ಟಪಡಿಸಿದರು. ಭತ್ತವನ್ನು ಸ್ಟೋರುಗಳಿಗೆ ಒಸ್ಸುವ ಅವಧಿಯನ್ನು ನವಂಬರ ತಾ 15ಕ್ಕೆ ಮುಂದುವರಿಸುವೇಕೆಂತಲೂ ಅಕ್ಕಿ ನೇರವೆ ಗಿರಣಿಯನ್ನು ಕೊಡುವ ವ್ಯವಸ್ಥೆಯನ್ನು ನವಂಬರ 30ಕ್ಕೆ ಮುಂದುವರಿಸುವೆಂತಲೂ ಬಿತ್ತಿ ಬೇಳೆದರು ಜಿಲ್ಲಾ ಆಹಾರ ಸಮಿತಿಯಲ್ಲಿಯೂ ಜಿಲ್ಲಾ ಆಧಿವೃದ್ಧಿ ಸಂಘಗಳಲ್ಲೂ ತಾಲೂಕಿನ ಜನತಾ ಪ್ರತಿನಿಧಿಗಳಿಲ್ಲವೆಂಬುದನ್ನು ಹೇಳಿದರು. ಕುಂದಾಪುರ ತಾಲೂಕಿಗೆ ಒಂದು ಪರುಷೆಯ್ಯಾಲಯದ ಆವಶ್ಯಕತೆ, ಬೈಂದೂರು, ಶಿರೂರು ನೊಪಲಾದ ಅಸುಖಾನಿನ ಗ್ರಾಮಗಳಿಗೆ ಜೆಟ್ಟಿಸಲಾಗಿ ಸರಬರಾಯಿ ಅವಶ್ಯಕತೆಯನ್ನು ನಿವೆದಿಸಿದರು ಜಿಲ್ಲಾ ಕಲೆಕ್ಟರರು ಈ ಸಲಹೆ ಸೂಚನೆಗಳನ್ನು ಮನ್ನಿಸಿ ಯೋಗ್ಯ ನಿರ್ಣಯ ಕೈಗೊಳ್ಳುವೆನೆಂದು ಭರವಸೆಯಿತ್ತರು

ಕಂಬನಿ

ಕುಮಾರಿ ಕೆ ವಿ. ಬಾಯಿಮರರು ತಾ. 31-10-45ನೇ ರಾತ್ರಿ ಉಡುಪಿಯಲ್ಲಿ ತನ್ನ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಕಣ್ಮುಚ್ಚಿದ ವಿಷಯವು ಪೇಪರುಗಳಿಂದ ತಿಳಿದು ಆಘಾತವಾಯಿತು. ಕೆ ವಿ. ಸುಶಿಕ್ಷಿತೆ, ಸುಸಂಸ್ಕೃತೆಯಾಗಿದ್ದರು ಅವರ ಅಕಾಲ ಮರಣವು ಕುಮಾರಿ ಕೆ ವಿ ಯವರ ಕುಟುಂಬಕ್ಕೆ ಮಾತ್ರವಲ್ಲದೆ ಅವರ ಸ್ನೇಹಿತರಿಗೂ ಕಾಲೇಜಿಗೂ ಅಪಾರ ದುಃಖವನ್ನುಂಟುಮಾಡಿದೆ. ಅವರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಕಾಲೇಜಿನ ಸಮಸ್ತ ವಿದ್ಯಾರ್ಥಿಗಳೂ ಪ್ರಾರ್ಥಿಸುವರು.

— ಮಕ್ಕಳನ್ನು ಹಡೆಯುವುದು ಸಾಕು —

ಒಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ತೋಗಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿತೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನ ೧ಕೈ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯೆ.—ಹರಿವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦. ಪೋಷ್ಟೆ ಚಾರ್ಜು ೧ಆಣೆ.

ಮೂಲಕರು:—ಹಾಲಪ್ಪ ಫಕೀರಪ್ಪ ಡಾನಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಧಾರವಾಡ:—ಹುಬ್ಬಳ್ಳಿ ಗದಗ್ ಬಾಗಲಕೋಟೆ ಧಾರವಾಡ, ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ದಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸೆಟ್ಟರ್ಸ್. ರಾಣಿಬೆನ್ನೂರಿ:—ಶಾವಹಗೇರಿ ಪ್ರೆಸ್ಸು. ೦ರ್. ಎರ್. ಕರ್.ಲಡಾಗ, ಕೆಮಿಸ್ಟ್, ಹಾವೇರಿ, ಡ್ಯಾಡಿಗ.

Ayurveda Oushadalaya, GADAG CY.IT

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸಕ್ಕರ್ಕಾಲಾದುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಪೆಟ್ಟಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಮುಟ್ಟಾಗುವಿಕೆ

ಶಿಲಶಿಂಗಳಿದ ಕಟ್ಟಾಗಿದ್ದರೂ, ಕನ್ಯವ ಗರ್ಭಧಾರಣೆ ಆಥವಾ ಇತ್ಯಾದಿಕಾರಣವಿದ್ದರೂ— **'ಕುಮಾರಿ ಮಾತ್ರೆಗಳು'** ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ಕೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಯಿಂದ ಕೇಸುಗಳಿಗೆ ರೂ. 5. 6ತಿಂಗಳ ಬಳಕೆ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಆಲಾಯಿದ.)

Mrs. P. DEVEE,

P. O. ೦ (A. E.) Tollygunge, Calcutta.

ಸ್ವಾಕೆಸ್ಟ್: ಪಾ ಕಂಪೆನಿ ಮಂಗಳೂರು

ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಸಮಿತಿಯ ಮಹಾ ಸಭೆ-ದ. ಕ.

ಜಿಲ್ಲಾ ಕೊಂಗ್ರೆಸ್ ಸಮಿತಿಯ ಮಹಾ ಸಭೆಯು 27-10-45ರಲ್ಲಿ ಸಂಜೆ 5 ಗಂಟೆಗೆ ಕೊಂಗ್ರೆಸ್ ಭವನವೆಲ್ಲಿ ಶ್ರೀ. ಶ್ರೀನಿವಾಸ ಮಲ್ಯ ಯು. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ. ಡಿ. ಅಧಿಕಾರಿ, ಸಾಂಗಾಳ ಮಂಜುನಾಥ ಶಾನ್ಯ್ಕ, ಕೆ. ವೆಂಕಟೇಶ ಪ್ರಭು, ದೇವಪ್ಪ ಆಳ್ವ, ಆಚ್ಯುತ ಶೆಣೈ, ರಾಮಕುಂಜ, ಉಪೇಂದ್ರ ನಾಯಕ್, ಮಾಧವ ಪಡಿಯಾರ್, ನೈ. ಸಂಜೀವ ಶೆಣೈ, ರಾಮವಾಸ್ ನಾಯಕ, ಈಶ್ವರ ಕೆ. ರಾವು ಪೂತು ಉಳ್ಳ, ಶ್ರೀಮತಿ ಕನುಲಾ ದೇವಿ, ಎಚ್. ನಾರಾಯಣರಾವ್, ರಾಮರಾಯ ಕಿಣಿ, ಇವರು ಹಾಜರಿದ್ದರು-

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ದುಡಿದ ಅಮಿಲ ಭಾರತದ, ಕರ್ನಾಟಕದ ಸುತ್ತು ಜಿಲ್ಲೆಯ ದೇಶ ಭಕ್ತರ ನಿಧನದಿಂದುಂಟಾದ ದುಃಖ ಸೂಚಕ ವಿಷಯವನ್ನು ಅಧ್ಯಕ್ಷ ಪೀಠದಿಂದ ಸಭೆಯು ನುಂದಿಡಲಾಗಿ ಸರ್ವಾನುಮತದಿಂದ ಎಲ್ಲರೂ ಎದ್ದು ನಿಂತು ಮೃತರ ಆತ್ಮಗಳಿಗೆ ಶಾಂತಿಯುಂಟಾಗಲೆಂದು ಪ್ರಾರ್ಥಿಸಿದರು. ಆನಂತರ ಅಧ್ಯಕ್ಷರು ಮಾತನಾಡುತ್ತಾ 1942 ನೇ ಆಗೋಸ್ಟ್ ಚಳವಳಿಯ ನಂತರ ನಾವಿಲ್ಲಿ ಪ್ರಥಮ ಸಭೆ ಸೇರುತಿದ್ದೇವೆ. ಆ ಚಳವಳಿಯ ಕಾಲದಲ್ಲಿ ಪಬ್ಲಿಕೆಯು ಸ್ಫಾರಂಭವಾದೊಡನೆ ಜನತೆಯು ಅಪೂರ್ವಕವಾಗಿ ಸರಕಾರನನ್ನು ಸೈರ್ಯದಿಂದ ಎದುರಿಸಿತು. ನುಬಂದರು ತುರಂಗಕ್ಕೊಯ್ಯಲ್ಪಟ್ಟ ನೇಲೆ ಜನತೆಯು ಸಹಾಯ ರೂಪನ್ಯಾಗಿ ಸರಕಾರದ ಪಬ್ಲಿಕೆಯನ್ನು ಸಾಪಸ ಪೂರ್ವಕ ಎದುರಿಸಿತು. ಜಿಲ್ಲೆಯಲ್ಲಿ ಅನೇಕ ಕೊಂಗ್ರೆಸ್ ಕಾರ್ಯಕರ್ತರು ತುರಂಗವಾಸಿಗಳಾಗಿ ಕಷ್ಟ ನಷ್ಟಗಳನ್ನು ಸಹಿಸಿದಾಗ್ಯೂ ಎದೆ ಕುಗ್ಗದೆ ಪುನಃ ಕೊಂಗ್ರೆಸ್ ಕೆಲಸಕ್ಕೆ ಉತ್ಸಾಹ ಪೂರ್ವಕ ನೆರವಾಗಿರುವದನ್ನು ನೋಡಿ ನಾನು ತುಂಬಾ ಆನಂದ ಪಡುತ್ತೇನೆ. ಮಹಾತ್ಮಾ ಗಾಂಧಿಯವರು ಹಾಕಿಕೊಟ್ಟ, ಪಂಚ ಪದ ರಚನಾತ್ಮಕ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ರೂಪುಗೊಳಿಸಿದ ಹೊಸತು ಸಮಗ್ರ ಗತ್ಯಂತರವಿಲ್ಲ. ದಕ್ಷಿಣ ಕನ್ನಡ ಜಿಲ್ಲಾ ಗ್ರಾಮ ಕೈಗಾರಿಕೆ ಸಂಘದವರು ಜಿಲ್ಲೆಯಲ್ಲಿ ಖಾದಿ ಉತ್ಪತ್ತಿ ಕೆಲಸವನ್ನು ಪ್ರಾರಂಭಿಸಿ ಈ ಸಾಲಿನಲ್ಲಿ ಸುಮಾರು ಮೂವತ್ತು ಸಾವಿರ ರೂಪಾಯಿಗಳ ಖಾದಿತಯಾರಿಸುತ್ತಾರೆಂಬ ಸಂಗತಿ ನನಗೆ ಬಹಳ ಆನಂದವನ್ನುಂಟುಮಾಡುತ್ತದೆ. ಈ ಸಂಘದವರು ಸದ್ಯದಲ್ಲಿಯೇ ಜೀನು ಶಾಕುವ ಉದ್ಯಮವನ್ನು ಕೈಕೊಳ್ಳುವದೆಂಬ ಕೇಳಲು ಆನಂದ ಪಡುತ್ತೇನೆ ಜಲ್ಲಾ ವಿದ್ಯಾರ್ಥಿ ಸಂಘವು ಕಾಂಗ್ರೆಸ್ ತತ್ವಗಳನ್ನು ಪುಸ್ತಿಸಿ, ಸಂಘಟಿಸಲ್ಪಟ್ಟು ತಮ್ಮ ಜಡುಪಟಿಕೆಗಳನ್ನು ಪಡಿಸುತ್ತಿವಾ ದೆ. ಜಿಲ್ಲೆಯ ಹೊರಗಣ ಪರಿಸ್ಥಿತಿಗೆ ಹೋಲಿಸಿದಲ್ಲಿ ನಮ್ಮ ಜಿಲ್ಲೆಯಲ್ಲಿಯಾವ ವಿಧದಿಂದಲೂ ಕೆಲಸಕ್ಕೆ ಕಡಿಮೆಯಾಗಿ ನಡೆದಿದೆ ಎಂದು ನನಗನ್ನಿಸುವುದಿಲ್ಲ. ಕಮ್ಯೂನಿಸ್ಟರು ಕೊಂಗ್ರೆಸಿನ ಶಕ್ತಿಯನ್ನು ಕುಂದಿಸುವ ಅಸ್ತ್ರವಾಗಿ ಕಾರ್ಯದಲ್ಲಿ ಉದ್ಯುಕ್ತರಾಗಿರುವ ರೀತಿಯನ್ನು ಕಂಡು ನಾನು ತುಂಬಾ ಸ್ಥಸಪಡುತ್ತೇನೆ ಕೊಂಗ್ರೆಸ್ಸಿಗರೆಲ್ಲರೂ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿ, ಇವರ ದೇಶ ದ್ರೋಹದ ಚಟುವಟಿಕೆಗಳನ್ನು ಎದುರಿಸಬೇಕು. ಮುಂಬರುವ ಸಂಘಟನೆಯನ್ನು ರಾಷ್ಟ್ರ ಭಕ್ತಿಜದ ಕೆಳಗೆ ಕೈಕೊಂಡು ಆಚರ ಸಂಕಲ್ಪಗಳಿಗೆ ನೆರವಾಗುವಂತೆ ಕೊಂಗ್ರೆಸ್ಸಿಗರ ಕೆಲಸ. ಸರ್ಕಲ್ ಕಮಿಟಿಗಳನ್ನು ಪುನರ್ರಚನೆ ಮಾಡಿ ಸೇವಾ ದಳಗಳನ್ನೂ ಅಲ್ಲಲ್ಲೇ ಸ್ಥಾಪಿಸಲು ನೀವೆಲ್ಲರೂ ಹೋರಿಸುವ ಉತ್ಸಾಹವನ್ನು ನೋಡಿ ನನಗೆ ಆನಂದವಾಗುತ್ತದೆ. ಸಂಘಟನೆಯಿಂದ ಕೊಂಗ್ರೆಸಿನ ಶಕ್ತಿಯನ್ನು ಹೆಚ್ಚಿಸಲು ರಚನಾತ್ಮಕ ಕಾರ್ಯದಂತಹ ದಾರಿ ಬೇರೊಂದಿಲ್ಲ. ಬರುವ ಚುನಾವಣೆಯಲ್ಲಿ ಕೊಂಗ್ರೆಸ್ ಹುರಿಯಾಳುಗಳಿಗೆ ಪೂರ್ಣ ಬೆಂಬಲ ಕೊಟ್ಟು ಜಿಲ್ಲೆಯಲ್ಲಿ ಕೊಂಗ್ರೆಸಿಗೆ ಯಶಸ್ಸು ಬರುವಂತೆ ಮಾಡಲು ಇಂದಿನಿಂದಲೇ ನಾವು ಕಾರ್ಯ ಕೈಗೊಳ್ಳಬೇಕು ಎಂದು ಮುಂತಾಗಿ ಹೇಳಿ, ತಮ್ಮ ಭಾಷಣ ಮುಗಿಸಿದರು. ಕೆಳಗಿನ ಠರಾವುಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. 1942ನೇ ಸಾಲಿನಲ್ಲಿ ಆಯಿಲ ಭಾರತ ಕೊಂಗ್ರೆಸ್ ಕಮಿಟಿಯು ಅಗೋಸ್ತು ನಿರ್ಣಯವಾಪ ಕೂಡಲೇ ಸರಕಾರವು ಮುಬಂಧರನ್ನುತುರಂಗಕ್ಕೆ ಒಯ್ದು ನಡೆಸಿದ ಭಯಂಕರ ದಬ್ಬಾಳಿಕೆಯ ಮೂಲಕ ಜನತೆಯನ್ನು ಉದ್ರೇಕಗೊಳಿಸಿದಾಗ್ಯೂ ಜನತೆಯು ತೋರಿಸಿದ ಪ್ರತೀಕಾರ ಧೈರ್ಯ ಸ್ಥೈರ್ಯ ಕಷ್ಟ ಸಹಿಷ್ಣುತೆ ತ್ಯಾಗಗಳಿಗೆ ಈ ಸಭೆಯು ತನ್ನ ಮೆಚ್ಚುಗೆಯನ್ನು ಸೂಚಿಸುತ್ತದೆ. ಪೂರ್ಣ ಸ್ವಾತಂತ್ರ್ಯವು ತಮ್ಮ ಜನ್ಮ ಸಿದ್ಧ ಹಕ್ಕು ಎಂಬುದನ್ನು ಈ ಕಮಿಟಿಯು ನುತ್ತೂನ್ನೆ ಒತ್ತಿ ಹೇಳುವದಲ್ಲದೆ ವಿದೇಶಿ ಅಲ್ಪಸಂಖ್ಯೆಯಿಂದ ಕೂಡಲೇ ಬಳುವ ಅಧಿಕಾರವು ಹಿಂದೀ ಜನತೆಗೆ ವರ್ಗಾಯಿಸಲ್ಪಡುವುದು ತರ್ತ್ಯೂಂತ ಉದ್ದೇಶವೆಂದು ಅಭಿಪ್ರಾಯ ಪಡುತ್ತದೆ. ಹಿಂದೀ ಜನತೆಗೆ ಸರಕಾರಿ ಸೂತ್ರವನ್ನು ಬಟ್ಟು ಕೊಡುವವರಿಗಿ ಆಗಾಗ್ಗೆ ಮಾಡಿದ ಪಾಗ್ದಾನಗಳನ್ನು ಸಲ್ಯಾಸುವರೆ ಬ್ರಿಟಿಷ್ ಸರಕಾರಕ್ಕೆ ಮನಸ್ಸಿಲ್ಲವೆಂದು ಈ ಕಮಿಟಿಯು ಪೂರ್ಣ ಮನಗಂಡಿದೆ. ಅಲ್ಲದೆ ಹಳೇ ಪದ್ಧತಿಯ ಮಿತ ಸಂತಾತ್ಮಿಕರಾದರಿವರ ಚುನಾವಣಾ ಪದ್ಧತಿಯ ಆಧ್ರಯವಲ್ಲಿ ಅಯ್ಕೆ ನಡೆಸಲು ಸರಕಾರವು ಹಟ ಹಿಡಿಯುವದನ್ನು ನೋಡಿದರೆ ಹಿಂದೀ ರಾಷ್ಟ್ರೀಯ ಆಕಾಂಕ್ಷೆಗಳನ್ನು ಮುಂಬುಬುವುದೇ ಸರಕಾರದ ಉದ್ದೇಶವೆಂದು ವ್ಯಕ್ತವಾಗುತ್ತದೆ. ಆದ್ದರಿಂದ ಬರುವ ಚುನಾವಣೆಯಲ್ಲಿ ಕೊಂಗ್ರೆಸ್ ಹುರಿಯಾಳುಗಳಿಗೆ ನೇಮಕ ದೊರಕಿಸಿ ಈ ಕೆಳಗಿನ ವಿಷಯಗಳ ನೇಲೆ ಚುನಾವಣೆ ನಡೆಯಬೇಕೆಂದು ಜನತೆಯು ತನ್ನ ಅನುಜ್ಞೆಯನ್ನು ವ್ಯಕ್ತಗೊಳಿಸಬೇಕೆಂದು ಜನತೆಯನ್ನು ಈ ಕಮಿಟಿಯು ಕೇಳಿಕೊಳ್ಳುತ್ತದೆ. ಪ್ರೌಢ ಮತದಾರ ಹಕ್ಕಿನ ಮೇಲಿಂದ ರಚಿಸಲ್ಪಟ್ಟ ಮತ್ತು ಹಿಂದೀ ದೇಶೀಯ ಸಂಸ್ಥಾನಗಳ ಜನತೆಯ ಪ್ರತಿನಿಧಿಗಳಿಂದ ಕೂಡಿದ ಒಂದು ಸಮಿತಿಯನ್ನು ಕರೆದು ಸ್ವಾತಂತ್ರ್ಯ ಮತ್ತು ಪ್ರಜಾ ಸತ್ತಾತ್ಮಕ ಹಿಂದುಸ್ಥಾನಕ್ಕೆ ಬೇಕಾಗುವ ಪೂರ್ಣ ಅಧಿಕಾರ ಉಳ್ಳ ಘಟನೆಯನ್ನು ತಯಾರಿಸಲು ಒಂದು ರಾಜ್ಯಾಂಗ ಘಟನಾ ಸಮಿತಿಯನ್ನು ಕರೆಯುವುದು. ಅನೇಕ ಸಂಕಷ್ಟಗಳನ್ನು ಸಹಿಸಿಯೂ ಹಿಂದೀ ಸ್ವಾತಂತ್ರದ ಸಲುವಾಗಿ ಬರ್ಮಾ ಮತ್ತು ಅಗ್ನೇಯ ಏಶಿಯಾ ಪ್ರಾಂತ್ಯಗಳಲ್ಲಿರುವ ಹಿಂದೀ ಜನಾಂಗದ ಸಲುವಾಗಿ, ಹಿಂದೀ ರಾಷ್ಟ್ರೀಯ ಸೈನ್ಯವು ಮಾಡಿದ ದೇಶಾಭಿಮಾನಾತ್ಮಕ ಸೇವೆಗೋಸ್ಕರ ಈ ಸಭೆಯು ಅವರನ್ನು ಅಭಿನಂದಿಸುತ್ತದೆ. ಈ ಸೈನ್ಯದ ಅಧಿಕಾರಿಗಳನ್ನು ಬಂಧನದಿಗೆ ಗುರಿ ಮಾಡಿದ ಸರಕಾರದ ವರ್ತನೆಯನ್ನು ಈ ಸಭೆಯು ತೀವ್ರವಾಗಿ ಬಂದಿಸುತ್ತದೆ. ಈ ಸೈನ್ಯವು ಅತಿ ಸಂಧಿಗ್ಧ ಸನಯ ಮತ್ತು ಸನ್ನಿವೇಶಗಳಲ್ಲಿ ಜಪಸಿ ಕಾರ್ಯ ಕೈಕೊಂಡ ನಿಷಯವನ್ನು ದೃಷ್ಟಿಯ ನುಂದಿಟ್ಟುಕೊಂಡು, ಅವರ ಮೇಲಿರುವ ಬಟ್ಟಿಯನ್ನು ಹಿಂತೆಗೆದು ಅವರನ್ನು ಬಿಡುಗಡೆ ಮಾಡಿಸಬೇಕೆಂದು ಕೇಳಿಕೊಳ್ಳುತ್ತದೆ. ಆಗ್ನೇಯ ಏಶಿಯಾ ದೇಶಗಳ ಜನತೆಯ ಸ್ವಾತಂತ್ರ್ಯ ಚಳವಳಿಗಳನ್ನು ಹತ್ತಿಕ್ಕಲಿಯಂದೀ ಸೈನ್ಯಗಳನ್ನು ಸರಕಾರವು ಉಪಯೋಗಿಸುವುದನ್ನು ಜನತೆಯು ಖಂಡಿಸುವುದನ್ನು ಈ ಸಭೆಯು ಸನರ್ಥಿಸುತ್ತದೆ. ಆ ಸೈನ್ಯಗಳನ್ನು ಕೂಡಲೇ ಹಿಂತೆಗೆಯುವೇ ಕೆಂತ ಸರಕಾರವನ್ನು ಸೇಳಿಕೊಳ್ಳುತ್ತದೆ. ಆವರ ಸ್ವಾತಂತ್ರ್ಯ ಹೋರಾಟಕ್ಕೆ ತನ್ನ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸುವಲ್ಲಿನೆ ಆವರು ಪಡೆದ ಯಶಸ್ಸಿಗಾಗಿ ತನ್ನ ಅಭಿನಂದನೆಗಳನ್ನು ಕಳುಹಿಸುತ್ತದೆ. ರಾಷ್ಟ್ರೀಯ ರಾಜ್ಯಾಂಗ ರಚನೆಗೆ ನ್ಯಾಯ ಮತ್ತು ಸರಿಯಾದ ಆಧಾರವಾಗಿರುವ ಸಂಘಾತ್ಮಾ ಗಾಂಧೀಜಿಯವರ ಸೂಚನೆ ಪ ಪಂಚಾಪದ ನಿಯಮಗಳನ್ನೊಳಗೊಂಡ ರಚನಾತ್ಮಕ ಕಾರ್ಯಕ್ರಮದಲ್ಲಿ ಈ ಕಮಿಟಿಯು ತನಗಿರುವ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ. ರಾಷ್ಟ್ರೀಯ ಸ್ವಾತಂತ್ರದ ಹೋರಾಟವನ್ನು ರೂಪುಗೊಳಿಸಲೋಸುಗ ಜನತೆಯ ಎಲ್ಲಾ ಚಟುವಟಿಕೆಗಳಲ್ಲಿ ಸರಿಯಾದ ಮತ್ತು ನೈಸ್ಥಿತ ಸಂಸ್ಥೆಯ ರಚನೆಯ ಅವಶ್ಯಕತೆಯನ್ನು ಈ ಕಮಿಟಿಯು ಪೂರ್ಣ ಮನಗಂಡಿದೆ.

ನಂ॥ ರಾಗಳಾದ 1 ಕೊಚ್ಚಿಕಾರ ನಾರಾಯಣ ಸ್ಯೆ, 2 ಎಚ್. ನಾರಾಯಣರಾವ್, 3 ರಾಮರಾಯ ಕಿಣಿ, 4 M. ಉಮೇಶ ರಾವ್, 5 ಕೆ. ತಿಮ್ಮಪ್ಪ ಶೆಟ್ಟಿ, ಇವರುಗಳನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು. ಕಾರ್ಯದರ್ಶಿಯವರ ರಾಜೀನಾಮೆಯನ್ನು ಸ್ವೀಕರಿಸಿ, ಶ್ರೀ. ಎಚ್. ನಾರಾಯಣ ರಾಯರನ್ನು ಜನರಲ್ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು. ಶ್ರೀ. ಎಸ್. ಎನ್. ಹೊಳ್ಳರು ಕೊಟ್ಟರಾಜೀನಾಮೆಯನ್ನು ಅಂಗೀಕರಿಸಲ್ಪಟ್ಟರು.

ರಾಮಕುಂಜ-ಮಣಿಪೀಠರ ಅಗಮನ- ಮಂಗಳೂರಲ್ಲಿ ಚಾತುರ್ಮಾಸ್ಯ ವ್ರತವನ್ನು ತರಿಸಿ ಸುಬ್ರಹ್ಮಣ್ಯಕ್ಕೆ ತೆರಳುವರೆ ಮೊದಲು ಶ್ರೀ ಸುಬ್ರಹ್ಮಣ್ಯ ವರತೀರ್ಥರಾದ ಶ್ರೀ ವಿಶ್ವಜ್ಞ ತೀರ್ಥ ಶ್ರೀ ಶ್ರೀಪಾದಂಗಳವರು ಸರಿವಾರ ಸಮೇತರಾಗಿ ತಾ. ೧೯-೧೦-೪೫ ರಂದು ಇಲ್ಲಿಗೆ ಪಯಣಮಾಡಿದ್ದು ಇಲ್ಲಿಯ ನುಹಾ ಜನರವಿಶ್ವತೋಮುಖವಾದ ಸತ್ಕಾರ ಪೂರ್ವಕ ಆಹ್ವಾನವನ್ನು ಸ್ವೀಕರಿಸಿ ಇಲ್ಲಿಯೇ ಜೇರೆ ಬೇರೆ ಕಡೆಗಳಲ್ಲಿ ಪೂಜಾ-ಭಿಕ್ಷಾ-ಪ್ರವಚನಾದಿಗಳನ್ನು ಮಾಡುತ್ತಾ ತಮ್ಮಂಶಿಷ್ಯ ಮಂಡಳಿಯನ್ನೊಸಗ್ರಹಿಸುತಿದ್ದಾರೆ.

ಈ ಸಂದರ್ಭದಲ್ಲಿ ಇಲ್ಲಿಯ ಎಡ್ವಾನ್ಸ್‌ಡ್ ಸಂಸ್ಕೃತ ಪಾಠ ಶಾಲೆಯ ಸಂಪರ್ಕಕ್ಕಾಗಿ ಶ್ರೀ ಶ್ರೀಪಾದಂಗಳವರು ಕಳಪ ತಾ. ೨೫ರಂದು ಸದ್ರಿ ಶಾಲೆಗೆ ಚಿತ್ತೈಸಿದಾಗ ಸದ್ರಿಯವರ ಆವ್ಯಕ್ಷತೆಯಲ್ಲೊಂದು ಮಹಾ ಸಭೆಯು ಅತಿ ವಿಜೃಂಭಣೆಯಿಂದ ಜರಗಿತು. ಶಾಲೆಯಪರೆಲ್ಲರೂ ಮಾತ್ರವಲ್ಲದೆ ಬಹು ಸಂಖ್ಯೆಯಲ್ಲಿ ಊರ ಮುಹಾನೀಯರೂ ನೆರೆದಿದ್ದರು. ಸಭಾರಂಭವಾದ ಕೂಡಲೇ ಶಾಲೆಯ ಪ್ರಧಾನಾಧ್ಯಾಪಕರಾದ ಶ್ರೀ ಪಂಜಿಕಲರು ಕೃಷ್ಣಾಚಾರ್ಯ, ಶಿರೋಮಣಿಯವರು ಶಾಲೆಯ ಪರವಾಗಿ ಸಂಸ್ಕೃತ ಪದ್ಯಮಯವಾದ ನೂತನ ಪತ್ರವನ್ನು ಸನ್ಮಾನಾನದಲ್ಲಿ ಸಮರ್ಪಿಸಿದರು. ಶ್ರೀಗಳಾದ ಆರ್. ನಾರಾಯಣ ಭಟ್ಟ, ಇ. ವೆಂಕಟರಮಣ ಉಪಾಧ್ಯಾಯ, ಇನ್ನೂ ಗೋಪಾಲಾಚಾರ್ಯ, ಶಿರೋಮಣಿಯವರ ಕಾಲೋಚಿತ ಒಕ್ಕ ಭಾಷಣಗಳಾದ ಮೇಲೆ ಶ್ರೀ ಪಾದಂಗಳವರು ಶಾಲೆಯ ಅಭಿವೃದ್ಧಿಯ ವಿಷಯವಲ್ಲಿ ಸಂತೋಷವನ್ನು ಪ್ರಕಟಿಸಿ ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಾಲೆಯನ್ನಾರ್ಥಿಕವಾಗಿ ಸಂರಕ್ಷಿಸಿದರು. ಆ ನೇಲೆ ಶ್ರೀ. ಶುಬ್ರಾಯ ಕಲ್ಲು ರಾಯರ ಧನ್ಯವಾದ ನಂತರ ಶ್ರೀ ಶ್ರೀಗಳವರು ಸಭಿಕರಿಗೆ ಫಲಮಂತ್ರಾಕ್ಷತೆ ಯನ್ನಾಶಿಸಿ ಸಭಾ ಕೃತ್ಯವಾದ ಮೇಲೆ ಶಾಲೆಗೆ ಹೊಸ ಕಟ್ಟಡ ಅನುತ್ತಿರುವ ಸ್ಥಳವನ್ನು ಸಂದರ್ಶಿಸಿ ಸಂತೋಷಪಟ್ಟರು.

The best preventive in epidemics of CHOLERA
"BHUVANENDRA"
CHANDRAMAS
Also a sovereign remedy for diarrhoea, Stomachache, Vomiting and Nausea.
BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.
ದೊಡ್ಡವರಿಗೆ 40ರಿಂದ 80ಹೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 20ಹೊಟ್ಟು ಲವಂಗ ಯಾ ಏಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.
ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.
ಭುವನೇಂದ್ರ ಪೌಡರ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಉಡುಪಿ ಸ್ಪತಿನಿಧಿಗಳು:—ಡಾ॥ ಸಾಯಿಕೃಷ್ಣಪ್ಲಿಂಗ್ ರೂಮ್ಸ್‌ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ॥ ಬಿ. ಜಿ. ಆಚಾರ್ಯ ಫಾರ್ಮಸಿ; ಡಾ॥ ಕೆ. ಕೇಸರಿ ಪೈ, L I M; ಡಾ॥ ವೆಂಕಟರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೋ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧೇಸಿ ತಯಾರಿಸಲ್ಪಟ್ಟ ಅಮೋಘ ವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ನವಜೀವಾತು ಎಂಬ ಸೂತಿಕಾ ರಸಾಯನ
(ಇದು ರಜಿಸ್ತರು ಮಾಡಲ್ಪಟ್ಟಿದೆ)

೪ ದಿನ್ನಿನ ಒಳಗಾಗಿ ಹೆಚ್ಚು ಕಡಿಮೆ ಆರಿವಿಸಗಳಿಗೆ ಬರುವುದು. ಅಂತರ ತೋಲು ೪ ರಜಿಸ್ಟಾಗಳು ಒಂಟು ಬಾಣಂತಿತನಕ್ಕೆ ಸಾಕಾಗುವುದು. ವಿಶೇಷ ವಿವರಕ್ಕೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಎಂ.ವಿ. ಕಾಶ್ಯಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ದ.ಕ.

1000's SAVED
MARGARET'S
FITS CURE
Stops children's fits in 3 minutes.
Ask your chemist for a box.
Sole Agents
BRIGHTSTAR AGENCIES,
Hospital Rd, Udipi, S. K.

ESTD. 1926
CROWN RUBBER STAMP CO.
MFRS OF
RUBBER STAMPS & ENGRAVERS
BALMATTA ROAD MANGALORE S.K.
Approved firm by the Govt. of Mysore
Certified by the Agent of the Govt. of India in Ceylon.

(ಏನೇ ಪುಟದಿಂದ ಮುಂದುವರಿಯುದು.)

ಬ. ಸಾ—ಆ ಸುದ್ದಿ ನಾನು ಕೇಳಿದ್ದೆ.

ಪ್ರ. ವ—ಬಂದಾಗಿ ಹೋಗಿದ್ದ ಚರಂಡಿಯೊಂದಕ್ಕಾ ಬಿದ್ದು, ಕಸಿನಿಲ್ಲ ಊಪ ಹೋಗಿ ಅವಳು ಸತ್ತದ್ದು ನಿಜವಲ್ಲವೆ?

ಬ. ಸಾ—ಅದು ನನಗೆ ಹೇಗೆ ಗೊತ್ತು? ನಾನಾಗಲಿ ಅಲ್ಲಿ ಇರಲಿಲ್ಲ. ನಾನು ಊರ ಮಕ್ಕಳ ಬಾಯಿಕೆ ನೋಡುವ ನರ್ಸ್ ಅಲ್ಲ.

ಪ್ರ. ವ—ಅಲ್ಲಲ್ಲ. ನಾಗೆಯೇ ಚರಂಡಿಗಳನ್ನೆಲ್ಲಾ ತುಂಬಿಸಿಟ್ಟು ಊರ ಮಕ್ಕಳನ್ನೆಲ್ಲಾ ಕೊಲ್ಲುವ ಕಟುಕನೂ ನೀವಲ್ಲವೆಂದು ನಂಬುತ್ತೇನೆ. ಇನ್ನೇ ಸಾಕು, ಬಕ್ಷ ಸಾಹೇಬರೇ.

ವಾದಿ ವಕೀಲ-(ಹಿಯರಿಂಗ್) ಪರಾಂಬರಿಸಬೇಕು ಯುವರ್ ಓನರ್. ಬೀರ್ಥ ಹೇಳಿಕೆಯಿಂದ ತಮ್ಮನ್ನು ದಣಿಸುವ ಉದ್ದೇಶ ನನಗಿಲ್ಲ ಕಾನೂನು ಬದ್ಧವಾಗಿ ತನ್ನಿಂದ ಸಲಬೇಕಾಗಿರುವ ತೆರಿಗೆಗಳನ್ನು ತಾನು ಕೊಡದಿರುವದಕ್ಕೆ ಸರಿಯಾದ ಕಾರಣವನ್ನು ಮುಂದಿಡಲು ಪ್ರತಿವಾದಿಯು ಪೂರ್ತಿ ಅಸಮರ್ಥನಾದುದನ್ನು ನಾನಿಲ್ಲಿ ನಿವೇದಿಸಿಕೊಳ್ಳುತ್ತೇನೆ. ನನ್ನ ಸ್ನೇಹಿತ ಮಿತ್ರರು ಮುನ್ಸಿಪಲ್ ಚರಂಡಿಗಳಲ್ಲಿ ಕೆಸರು ನಿಂತಿರುವುದನ್ನು ಪ್ರಸ್ತಾಪಿಸಿದರು. ಆದರೆ ಈ ಮುನ್ಸಿಪಾಲಿಟಿಯ ಎಲ್ಲಾ ಚರಂಡಿಗಳಲ್ಲಿರುವದಕ್ಕಿಂತಲೂ ಹೆಚ್ಚಿನ ಕಸರನ್ನು ನನ್ನ ಸುರಿತ ಮಿತ್ರರು ಈ ದಿನ ಕೋರ್ಟಿನಲ್ಲಿ ಜೆಲ್ಲಿದರೆಂದು ನಾನು ಸಭ್ಯೆರ್ಯವಾಗಿ ವೇಳುತ್ತೇನೆ. ನಮ್ಮೂರ ಪ್ರಮುಖ ನಾಗರಿಕರ ನಡತೆಯ ಮೇಲೆಬಿದ್ದ ಈ ಹೇಯ ಅಪವಾದಗಳನ್ನೂ, ನಾನೊಬ್ಬ ನಿವಾಸಿಯೆಂದು ಹೆಮ್ಮೆ ಪಡುತ್ತಿರುವ ನಮ್ಮೀ ನಗರದ ಸತ್ಕೀರ್ತಿಗೆ ಭಂಗತರುವ ಈ ಅನ್ಯಾಯಪೂರ್ಣವಾದ ವಾಗ್ಬಾಣಗಳನ್ನೂ ನನ್ನ ಸರ್ವಶಕ್ತಿಯಿಂದ ನಾನು ಖಂಡಿಸದೆ ಬಿಟ್ಟಲ್ಲಿ ನನ್ನ ಕಕ್ಷಿಗಾರರಿಗೂ ಈ ನಗರದ ನಾಗರಿಕರಿಗೂ ದ್ರೋಹಮಾಡಿದಂತಾಗುವದು. ಗಾಢ ಯೋಚನೆ ಮಾಡಿಯೇ ನಾನು ಹೇಳುತ್ತೇನೆ-ನನ್ನ ಸುರಿತ ಮಿತ್ರರ ಅಡ್ಡ ಸವಾಲುಗಳೆಲ್ಲಾ ಕೇವಲ ಭಾವನಾಸ್ಪದವಾಯೇ ನಿಂದೆಗಳಾಗಿದ್ದುವಲ್ಲದೆ ಬೇರಲ್ಲ; ಅದನ್ನು ಅವರು ಈ ಕೋರ್ಟಿನ ಹೊರಗೂ ನ್ಮೆ ಉಚ್ಚರಿಸಿ ನೋಡಲಿ ಎಂದು ನಾನವರನ್ನು ಆಹ್ವಾನಿಸುತ್ತೇನೆ ನನ್ನ ಮಿತ್ರ [illegible] ನನ್ನು ಅಂಗೀಕರಿಸುವ ಎದೆಗಾರಿಕೆ ಪಡಿಬಿಂಬರೆ, ಇಂ[illegible] ಲಾಭಕಾರಿಯಲ್ಲದ ಬೇರೊಂದ ರೀತಿಯ ನ ಸ್ವತಃ ಅವರು ಬೇಗನೇ ಇನ್ನೊಮ್ಮೆ ಕೋರ್ಟು ಹತ್ತಬೇಕಾಬೀತು. ತಮ್ಮ ಸಮಯ, ಶಕ್ತಿಗಳನ್ನು ಜನತೋದ್ಧಾರಕ್ಕಾಗಿ ವಿನಿಯೋಗಿಸುತ್ತಿರುವ ಸಾರ್ವಜನಿಕ ಸೇವಕರನ್ನು ಈ ರೀತಿ ಬಹುಮಾನಿಸುವದು ಮಹದನ್ಯಾಯವೆಂದು ನನಗನ್ನಿಸುತ್ತಿದೆ. (ಕೋರ್ಟಿನಲ್ಲಿ ಉತ್ಸಾಹ ಧ್ವನಿಗಳು, ವಿರುದ್ಧ ಕೂಗುಗಳು ಮತ್ತು 'ಸ್ಯಾಲೆನ್ಸ್ ಜೊಟ್ಟೆ) ಯುವರ್ ಓನರ್. ಮುನ್ಸಿಪಲ್ ಆಡಳಿತೆಯ ಮೇಲೆ ಪ್ರತಿವಾದಿಯು ಕೊರಿಸಿರುವ ಆರೋಪಗಳಲ್ಲಿ ಸತ್ಯದ ಛಾಯೆಯಾದರೂ ಇದೆಯೆಂದು ಕೇವಲ ವಾದಕ್ಕಾಗಿ ಊಹಿಸೋಣ. ಈ ದಾವೆಯ ಮೇಲೆ ಆ ಆರೋಪಗಳಿಂದಾಗಬೇಕಾದ ಪರಿಣಾಮವೇನು? ತೆರಿಗೆಯನ್ನು ವಿಧಿಸುವ ಮತ್ತು ಸಂಗ್ರಹಿಸುವ ಪೂರ್ಣಾಧಿಕಾರವು ಪರಿಪೂರ್ಣತೆಯಾಗಿ ಈ ಮುನ್ಸಿಪಾಲಿಟಿಗಿದ್ದೆ. ಅದ್ದರಿಂದ ನಾನಿಲ್ಲಿ ಬಿತ್ತಿ ಹೇಳುವ ದೆಂದರೆ ಕೌನ್ಸಿಲರರು ಕಾನೂನಿನಲ್ಲಿ ನ ಮೂದಿಸಲ್ಪಟ್ಟಂತೆ ಕಾರ್ಯಕ್ರಮಗಳನ್ನು ಅನುಸರಿಸುವ ವರೆಗೆ, ಹಣವು ದುರುಪಯೋಗವಾಗುತ್ತಿದೆಯೆಂದಾಗಲೀ ಸ್ಥಳೀಯ ಆಡಳಿತೆ ದುರ್ಬಲವಿದೆಯೆಂದಾಗಲೀ ನೆವ ಹೇಳಿ ತೆರಿಗೆ ಸಲಾಯಿಸದಿರಲು ತೆರಿಗೆದಾರನಿಗೆ ಅಧಿಕಾರವಿಲ್ಲವೇ ಇಲ್ಲ ಅದ್ದರಿಂದ ಯುವರ್ ಓನರ್. ವಾದಿಯು ದಾವೆಯಲ್ಲಿ ಕೇಳಿದ ಸೊತ್ತಿಕ್ಕೆ ಖರ್ಚು ಸಮೇತ ಡಿಕ್ರಿ ಕೊಡಬೇಕೆಂದು. ಸಾಕಷ್ಟು ವಿಶ್ವಾಸ ಪೂರ್ವಕವಾಗಿ ತಮ್ಮನ್ನು ಪ್ರಾರ್ಥಿಸುತ್ತೇನೆ.

ಪ್ರತಿವಾದಿ ವಕೀಲ— (ಹಿಯರಿಂಗ್) ಯುವರ್ ಓನರ್. ನನಗೆ ದೊರೆತಿದ್ದ ಸೂಚನೆಗಳಂತೆ ತನ್ನ ಕಕ್ಷಿಗಾರ ಮತ್ತವನ ಸಹವರ್ತಿಗಳ ಮೇಲೆ ನಾನು ಹಾಕಿದ ಸವಾಲುಗಳ ಕುರಿತು ನನ್ನ ಸುರಿತ ಮಿತ್ರರು ತೋರಿಸಿದ ಅಸಹಿಷ್ಣುತೆಯು ನನ್ನಲ್ಲಾವ ಪರಿಣಾಮವನ್ನೂ ಮಾಡಿಲ್ಲವೆಂದು ನನ್ನಾ ಮಿತ್ರರ ಮೇಲೆ ವಿಶೇಷ ಗೌರವವಿಟ್ಟೇ ನಾನಿಲ್ಲಿ ನಿವೇದಿಸಿಕೊಳ್ಳುತ್ತೇನೆ. ನನಗೊಂದು ವ್ಯಾಜ್ಯದಲ್ಲಿ ದುರ್ಬಲ ಪಕ್ಷದ ಪರವಾಗಿ ನಿರುದ್ಧ ಕಡೆಯ ವಕೀಲನ ಮೇಲೆ ಬೀಳಬೇಕು. [illegible]

ಧದ ಹಳೇ ಗಾದೆಯೆಂದಿದೆ ನನ್ನದು ಗ್ಯಾಯಾಧಾರವುಳ್ಳ ಸಬಲ ಪಕ್ಷ. ಆದ್ದರಿಂದ ಸೋಕೆ ಹುಟ್ಟಿಸಿದ್ದರೂ, ನನ್ನ ಸುರಿತ ಮಿತ್ರರ ದರ್ಜೆಗೇನೇ ಇಳಿಯುವ ಅಗತ್ಯ ನನಗಿಲ್ಲ. ನನ್ನ ಮುಖ್ಯ ವಾದವೆಷ್ಟೆಯೆಂಗೆಯೋ ಮುನ್ಸಿಪಾಲಿಟಿಯು ಸಾರ್ವಜನಿಕರ ದೃಷ್ಟಿಯಲ್ಲಿ ಹೇಗೋ, ಹಾಗೆಯೇ ಕಾನೂನಿನ ದೃಷ್ಟಿಯಲ್ಲಿಯೂ ಒಂದು ಮುನ್ಸಿಪಾಲಿಟಿಯಾಗಿ ಇಷ್ಟವೇ ಇಷ್ಟವೆಂಬುದನ್ನು ನಾನು ರುಜುಪಡಿಸಿದ್ದೇನೆ ಅದರ ಮೀಟಿಂಗುಗಳೆಂದರೆ ದಂಗೆಗಳು ಮತ್ತೊಂದಲಗಳೆಂಬುದನ್ನೂ, ಎಲ್ಲಯಂದರೂ ಅತ್ಯಪರೂಪವಾಗಿ ಸಭಾ ಶಾಂತತೆಯಿದ್ದಾಗ, ನಗರದ ಹಿತಕ್ಕೇನೂ ಸಂಬಂಧಪಟ್ಟಿದ್ದ ಸಂಗತಿಗಳನ್ನೇ ಅದು ಚರ್ಚಿಸುತ್ತಿತ್ತೆಂಬುದನ್ನೂ ನಾನಿಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಿದ್ದೇನೆ. ಕಾಯಿದೆ ಕ್ರಮಕ್ಕನುಸಾರವಾಗಿ ಎಲ್ಲಾ ನಾಗರಿಕರಿಂದಲೂ ನಿಷ್ಪಕ್ಷಪಾತವಾಗಿ ತೆರಿಗೆ ವಸೂಲಿ ಮಾಡುವ ಬಯಲಿಗೆ, ಈ ಕೌನ್ಸಿಲರರೇ ತಮ್ಮ ಪಾಲಿನ ತೆರಿಗೆ ಸಲಾಯಿಸದೆ, ಎಲ್ಲಾ ಭಾರವನ್ನೂ ದುರ್ಬೈವೀ ಪಟ್ಟಣಿಗರ ಮೇಲೆಯೇ ಹೇರಿತಿವ್ವಾರೆಂಬುದನ್ನೂ, ಕಾನೂನು ಬದ್ಧವಾಗಿ ನಾಗರಿಕರಿಂದ ಹಿತರಕ್ಷಣೆಯ ಹೊಣೆ ಹೊತ್ತಿರುವ ಈ ಕೌನ್ಸಿಲರರು ಆವರ ಮೇಲೆ ಮಲತಾಯಿಯ ವಂಚನೆ ನಡಸಿದ್ದುದೆಂಬುದನ್ನೂ ನಾನು ರುಜುಪಡಿಸಿದ್ದೇನೆ. ಯುವರ್ ಓನರ್, ಲಂಚಸಂಜ್ಞೆಗಳ ಅಸಹ್ಯಕಾರ ರೋಗದಿಂದ ಈ ನಗರಾಡಳಿತೆಯು ಸಂಪೂರ್ಣ ಕೊಲಸಾಗಿದೆ ಎಂಬುದಕ್ಕೆ ಪ್ರತಿವಾದಿಯು ಸರಿಯಾದ ಸಾಕ್ಷ್ಯಗಳನ್ನೆತ್ತಿವ್ವಾನೆಂಬೇ ಕೋರ್ಟಿನ ಮುಂದೆ ನನ್ನ ನಿವೇದನೆ. ಮತ್ತು ನನ್ನ ದೃಢನಾದ ವಾದವೇನೆಂದರೆ, ಬಡವರಿಂದ ಹಣ ಸಂಗ್ರಹಿಸಿ, ತಮ್ಮ ದುರುದ್ದೇಶಕ್ಕನುಸಾರವಾದ ದುರಾಡಳಿತೆಯನ್ನು ನಡೆಸುವಂತೆ ಅವಕಾಶ ಕೊಡುವದು ಕಾನೂನಿನ ಗುರಿಯಾಗಿಲ್ಲ. ಈ ಕೋರ್ಟಿನ ಘನತೆಗೊಗ್ಗದ ರೀತಿಯಲ್ಲಿ ಪದ್ಧತಿಗೆ ವಿರುದ್ಧವಾದ, ಕಠಿಣ ಮಾತುಗಳನ್ನು ನಾನಾಡಿಯಿದ್ದರೆ ಅದಕ್ಕಾಗಿ ಯುವರ್ ಓನರ್-ನಾನು ತಮ್ಮ ಕ್ಷಮೆ ಬೇಡುತ್ತೇನೆ. ಅವರಿ ಯುವರ್ ಓನರ್, ಸುಪ್ರೀವಶಾರ್ತ್ ಈ ದಿನ ಕೋರ್ಟಿನಲ್ಲಿ ಬಹಿರಂಗವಾದಂತಹ ಹಿನ್ನಾಯಮಾನ ಸಂಗತಿಗಳನ್ನು ಕೇಳುವ ಸಂದರ್ಭಗಳು ಕೋರ್ಟಿಗೆ ಹೊಸಿಯವಲದು ಅಪರೂಪ. ನಾನು ಗೌರವ ಪೂರ್ವಕ ಕೋರ್ಟಿನ ಜ್ಞಾಪಕಕ್ಕೆ ತರುತಿದ್ದೇನೆ-ನನ್ನ ಕಕ್ಷಿಗಾರನು ಕೇವಲ ತನ್ನೊಬ್ಬನ ವಾದಕ್ಕಾಗಿ ಹೋರಾಡದೆ, ಈ ನಗರದ ಬಡವರೆಲ್ಲರ ಪರವಾಗಿ, ರೋಗಿಗಳೆಲ್ಲರ ಕಡೆಯಿಂದ ಮತ್ತು ಸೂರೆ ಸುಲಿಗೆಯಾದ ಸರ್ವರಿಗಾಗಿ ಸ್ಪೃತವಾದ ಹೊಡಿದ್ದಾನೆ. ಆದ್ದರಿಂದ ಯುವರ್ ಓನರ್, ಈ ದಾವೆಯನ್ನು ಖರ್ಚು ಸಮೇತ ಡಿಸ್‌ಮಿಸ್ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. (ಕೋರ್ಟಿನ ಹಿಂಗಡೆಯಲ್ಲಿ ಪ್ರಬಲೋತ್ಸಾಹ ಧ್ವನಿ. 'ಸ್ಯಾಲೆನ್ಸ್')

(ಜಜ್‌ಮೆಂಟನ್ನು ಬರುಜ ಮಾಡಕ್ಕೆ ಇಟ್ಟಿದೆ.)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ಮಜಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರವ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣಂದಿಂದ ಚೀರು ಕಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಬು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾತಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ೪ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸಿಪಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು

ಬಾಟ್ಲಿಗೆ ೩ರೂ. ಪೋಸ್ಟ ಖರ್ಚು ೪ ಆಣೆ.

ವಿಜಿಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿಪೈಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ವೇವಜಿ ಸಿದ್ದಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya GADAG.

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1	ನೀತಿಧರ್ಮ	...	...	0	6 0
2.	ನಾಮುದ್ರಿಕ ಶಾಸ್ತ್ರ	....	...	0	8 0
3	ಬಾಲ ರಾಮಾಯಣ	....	....	0	5 0
4.	ಸುಕನ್ಯಾ ಚರಿತ್ರೆ	....	....	0	5 0
5.	ಕೊಳಲು ಕೃಷ್ಣ	....	....	0	8 0
6.	ಗುರುಪೀಠಗಳ ಅವನತಿ	..	..	0	8 0
7	ವೈಷ್ಣವಮತ ಖಂಡನೆ	....	....	0	6 0
8	ಧರ್ಮವಂಕಟ	....	..	0	4 0
9	ಪ್ರಾಣಿರವ	....	...	0	8 0
10.	ನಿಶ್ಚಯ ಜ್ಞಾನ	...	...	0	8 0
11	ವಿನ್ಯಾರಣ್ಯ ಕಾವ್ಯ	....	...	1	0 0
12.	ಚಂದ್ರಗುಪ್ತ ಚಕ್ರವರ್ತಿ	....	....	1	0 0
13	ಸ್ವದೇಶಿ ...	....	....	0	4 0
14	ಹರಿಜನ ನೇಪ	....	....	0	1 0
15	Gauthama the Buddha	..	..	0	8 0
16.	ವ್ಯಾಘ್ರಣಿ	...	..	0	2 0
17	ಹಿಂದೀ ಪಹಲಿ ಪೋತ	....	....	0	2 0
18.	ಹರಿಶ್ಚಂದ್ರ ಉಪಾಖ್ಯಾನ(ಸಂಪ್ರಸಿದ್ಧ ಪೌರಾಣಿಕ ಘಾಟಾ ಪುರಾಣಾಗ್ರಂಥ)			0	4 0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಮೆತ್ಯ1	....	...	1	0	0
ಕೃಷ್ಣರಾಜ ಪರಂಗೊ	....	....	1	0	0
ತುಳುವಾಲ ಎಲಿಯೇಂದ್ರ	...	....	0	4	0
ಒಳಿಯ ಸಂತಾನದ ಕಜ್ಪದ ಗುಟ್ಟು		...	0	8	0
ಕಾಸಿಗೆ	....	....	0	8	0
ತುಳು ವ್ಯಾಕರಣ	....	....	1	0	0
ಮದ್ ಮಾಕತ್ತ ಮುದ್ ಮಾಯೆ		....	0	4	0
ಜನಮಂಲ್	....	....	0	12	0
ತುಳು ಪಜ್ಯಮಾಲಿಕೆ	....	....	0	2	0
ಬಂಗಾರ್ದಂಗಿದ ಕತೆ	....	....	0	2	0
ಮಿತ್ಯ ನಾರಾಯಣ ಕತೆ	....	....	1	0	0
ಸತೀ ಕಮಲೆ	....	....	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿದ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ. **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳಿಗನ್ನಡದ ತಿಳಿನುಡಿಯ ರಸಗಬ್ಬ

ಹಳಿಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, **ಉಡುಪಿ.**

ಬೆಲೆ: 3—0—0

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6



ವರ್ಷ ೨೫ ವಾರ ೧೧] ಪ್ರತಿ ಗುರುವಾರ ಹೊರಡುವ ಗಾಣ್ಮೀಯ ವಾರಪತ್ರಿಕೆ. [Vol. 25 No. 11

Founder SRI A. B. SHETTY.

ಉಡುಪಿ • 15—11—1945 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಬಿಡಿ ಸಂಚಿಕೆ ರೂ. 0—1—6.

ಅಮೃತಾಂಜನ

ತಲೆನೋವಿಗೆ, ಶೀತ, ನೆಗಡಿ, ಉಳುಕು ಗಾಯಕ್ಕೆ, ಕುಡಿತ, ಹಲ್ಲು ನೋವಿಗೆಗಳಿಗೂ ಎದೆಸೋವು, ಭಾಯಗಳು ಬಾಸು ಸೆಳೆತ ಬೀರು, ಜೇಳು ವಿಷ ಸಂಪಾದ ಜೇನು ಬಳ್ಳಾಪಾಕ್ಕೆ ನೋವಿಗೆ ಮೊದಲಾದ ಎಲ್ಲ ರೋಗಗಳಿಗೂ ಸಿದ್ಧ

REGD

ಪಥ್ಯ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಕಿಳ್ಳುತ್ತದೆ.

ಅಮೃತಾಂಜನ ಲಿಮಿಟೆಡ್.

ಮುದರಾಸು.

ದೊಂಬಾಯಿ ಮತ್ತು ಕಲ್ಕತ್ತ.

POLICYHOLDERS' OWN COMPANY.

Policy holders are the sole owners of a Mutual Company, they along share in the profits of the Company and 'Canara Mutual is such a Company Its aim is to render the highest type of Life Assurance service to its Policy holders With such an aim the Company has progressed on very sound lines and made a name in the Indian Insurance World All this is owing to the co-operation of the public with the Company "Canara Mutual has also become a Synonym for "Prompt Settlement

THE CANARA MUTUAL ASSURANCE COMPANY, LTD.,

(UDIPI, S. India.)

The Bombay Life Assurance Co., Ltd.

(ESTD: 1908)

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910

ದಕ್ಷಿಣ ಭಾರತದ ಜೀವ್ ಏಜಂಟರು

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಕಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—35,00,000.

KOCHIKAR BROTHERS, LTD.

Central Office:—UDIPI S. K

Mangalore ○ Calicut ○ Bangalore ○ Madras ○ Madura ○ Trivandrum ○ Bombay

ANNOUNCEMENT

We have much pleasure to announce that branches of the Bank will be opened shortly at

KANHANGAD & MERCARA.

Other Branches at- **Udipi, Kaup, Coondapoor, Karkal, Brahmavar, City-Mangalore, Kasaragod, Puttur, Byndoor & Bombay**

The Vijaya Bank Limited.

Head Office:- **MANGALORE.**

ಶುಚಿ! ರುಚಿ!!

ಇದೋ! ಕೇಳಿರಿ!!

ವಿಜಯದಶಮಿಯ ವಿಜಯದುಂದುಭಿ.

'ಪರಿಷನ್ಮಂದಿರ'ದ ಭವ್ಯಭವನದಲ್ಲಿ ನೂತನವಾಗಿ

'ಶ್ರೀ ಅಂಬಾಭವನ'

ಬ್ರಾಹ್ಮಣರ ಕಾಫಿ ಕ್ಲಬ್,

ಬೋರ್ಡಿಂಗ್ ಮತ್ತು ಲೋಜಿಂಗ್

ತೆರೆಯಲ್ಪಟ್ಟಿದೆ.

ಬ್ರಾಹ್ಮಣರಿಂದಲೇ ತಯಾರಿಸಲ್ಪಡುವ ಅತ್ಯುತ್ತಮ, ಅಮೋಘ ಉಪಹಾರ, ಫಲಹಾರ, ಹಾಗೂ ವಿಹಾರಯೋಗ್ಯವಾದ ಆಧುನಿಕ ರೀತಿಯಲ್ಲಿ ಸುಸಜ್ಜಿತವಾದ ಕೊಠಡಿಗಳಿಂದ ಅತಿಥಿಗಳನ್ನು ಆಕರ್ಷಿಸುವ ಸುವ್ಯವಸ್ಥೆಯಿರುವ,

ಕುಂದಾಪುರದಲ್ಲಿ

ಏಕಮಾತ್ರ ಹೊಟೆಲ್

ವರವೂರ ಪ್ರವಾಸಿಕರಿಗೆ ಸುಯೋಗ್ಯ ಸಾನುಕೂಲತೆಗಳನ್ನೊದಗಿಸುವದೇ ನಮ್ಮ ಪ್ರಮುಖ್ಯ ಧ್ಯೇಯ.

ನೀವು ಕುಂದಾಪುರಕ್ಕೆ ಭೇಟಿ ಕೊಟ್ಟಾಗ ಸಂದರ್ಶಿಸಲು ಮರೆಯದಿರಿ.

SRI AMBA BHAVAN,

Brahmin's Coffee Club,

Boarding & Lodging,

COONDAPUR, S. K.

ಮೂವರು ಗಂಡುಗಲಿಗಳು

[ಕೆಂಪುಕೋಟೆ ಮೊಕದ್ದಮೆಯ ಸರಕಾರೀ ವಾದದಿಂದ ಆಯ್ದುಕೊಂಡ ಅಂಶ]

ನವಂಬರ್ ತಾ. ೬—ಮುಂದಿನ ಸ್ವತಂತ್ರ ಭಾರತದ ದೀವಾವಳಿ ಫಿಲ್ಲಿಯ ಕೆಂಪು ಕೋಟೆ—ನೇತಾಜೀ ಸುಭಾಸರ ಆಜಾದ್ ಹಿಂದೀ ಫೌಜು ದೌಡು ಮೆರವಣಿಗೆ ನಡೆಸಿ, ತ್ರಿವರ್ಣ ಧ್ವಜ ಹಾರಿಸಬೇಕೆಂದು ಸಂಕಲ್ಪಿಸಿದ್ದ ಸ್ಥಳ. ಫಿಲ್ಲಿಯ ಒಂದು ಕೋಣೆ ಕೋರ್ಟಾಗಿ ಮಾರ್ಪಟ್ಟಿದೆ. ಮೇಜರ್ ಜನರಲ್ ಎ. ಬಿ. ಬರ್ನ್‌ಲಾಂಡರ ಅಧ್ಯಕ್ಷತೆಯಲ್ಲಿ, ತಂತಮ್ಮ ಮತಾನುಸಾರವಾಗಿ ಬೈಬಲ್, ಭಗವದ್ಗೀತೆ, ಕುರಾನ್, ಗ್ರಂಥ ಸಾಹೇಬ್‌ಗಳ ಮೇಲೆ ಕೈಯಿಟ್ಟು ನ್ಯಾಯವಾಲನೆಯ ಪ್ರತಿಜ್ಞೆ ಧರಿಸಿದ ಕೋರ್ಟ್ ಮಾರ್ಶಲ್ ಒಡ್ಡರು ಮಂಡಿಸಿದ್ದಾರೆ. ಜೇಸಾಯಿ ಸಪ್ರು, ಆಸಫಾಲಿ, ಜವಾಹರಲಾಲರಂತಹ ದೇಶಪ್ರಮುಖರೇ ಆರೋಪೀ ಪಕ್ಷದ ವಕೀಲರಾಗಿ ಕುಳಿತಿದ್ದಾರೆ. ಅವರಿಗಿಂದಿಗಾ ಸರಕಾರೀ ವಕೀಲ, ಇಂಡಿಯದ ಎಡ್ವೊಕೇಟ್ ಜನರಲ್ ಸರ್. ಎನ್. ಪಿ. ಇಂಜಿನೀಯರ್, ಮಿಲಿಟರಿ ಪ್ರೊಸಿಕ್ಯೂಟರ್ ಲೆಫ್ಟಿನೆಂಟ್ ಕರ್ನಲ್ ಪಿ. ವಾಲ್ಕ್. ಆಗಲೇ 'ಆರೋಪಿಗಳನ್ನು ತನ್ನಿ' ಎಂದು ಜಜ್ ಎದ್ದೊಕ್ಕೇಟರ ಆಜ್ಞೆ—ಸಶಸ್ತ್ರ ಮಿಲಿಟರಿ ಪಹರೆಯಲ್ಲಿ ಮೂರು ನಿಷ್ಕಳಂಕ ತರುಣರವದನಗಳು, ಸೇನಾ ಸಮವಸ್ತ್ರ ಧಾರಿಗಳ ಪ್ರವೇಶ-ಇಡೀ ಕೋರ್ಟ್ ಒಮ್ಮೆಗೆ ನಿಶ್ಶಬ್ದ—ಅದೇ ಹೊತ್ತಿನಲ್ಲಿ ಹಿಮಾಲಯದಿಂದ ಕನ್ಯಾ ಕುಮಾರಿಯ ವರೆಗೂ ಕೋಲಾಹಲ! ಕೋರ್ಟಿಗೆ ಪ್ರವೇಶಿಸಿದಾಗ ಆ ಮೂರು ಮುಖಗಳಲ್ಲೂ ಉದ್ವೇಗದ ಚಹ್ನೆಯಿತ್ತು: ತಮ್ಮ ಅಪರಾಧಗಳ ಕತೆಗಳನ್ನು ಎದ್ದೊಕ್ಕೇಟ್ ಜನರಲ್ ಮತ್ತು ಸಾಕ್ಷಿಗಾರನ ಬಾಯಿಂದ ಕೇಳುತ್ತಾ ಕುಳಿತಾಗ ಮೂವರೂ ಪ್ರತಿಶಾಂತರಾಗಿ ಲಕ್ಷ್ಯ ಗೊಟ್ಟು ಆಲಿಸುತ್ತಿದ್ದರು; ತಮ್ಮ ವಕೀಲರೊಡನೆ ಅನುಭವದ ಕೊಡಕೊಂಡ ನಡೆಸುತ್ತಿದ್ದರು. ಅವರೇ ಕೆಪ್ಟನ್ ಶಾನವಾಜ್, ಕೆಪ್ಟನ್ ಪಿ. ಕೆ. ಸೆಹ್ಗಾಲ್, ಲೆಫ್ಟನೆಂಟ್ ಜಿ. ಎಸ್. ಧಿಲ್ಲೋನ್. ಒರ್ವ ಮುಸಲ್ಮಾನ್-ಒರ್ವ ಹಿಂದೂ-ಒರ್ವ ಸಿಖ್; ಭಾರತೀಯ ಫೈರ್ಯ, ಸ್ಥೈರ್ಯ, ಸಾಹಸ ವೆಂಬ ಮೂರು ಹೆಗ್ಗುಣಗಳು; ಅಸ್ಖೇ ಏಕ್, ಇಂದು 10 ಕೋಟಿ ಹೃದಯಗಳಲ್ಲಿ ಲಟಪಟಿಸಿ ಹಾರಾಡುತ್ತಿರುವ ತ್ರಿವರ್ಣ ಧ್ವಜವೇ ಆ ಮೂವರು!

ಕೆಪ್ಟನ್ ಶಾನವಾಜ್

ಪಂಜಾಬಿನ ರಾವಲ್ಪಿಂಡಿಯಲ್ಲಿ 1914ನೇ ಜನವರಿ24ರಲ್ಲಿ ಜನಿಸಿದರು. ಹಿಂದೂಸ್ತಾನ ಮಿಲಿಟರಿ ಎಕೆಡೆಮಿಯಲ್ಲಿ ತರಬೇತಿ ಪಡೆದರು. 1936ರಲ್ಲಿ ಅವರಿಗೆ ಸೇನಾ ಕಮಿಶನ್ ದೊರೆಯಿತು. 1937ರಲ್ಲಿ ಪಂಜಾಬಿನ 11ನೇ ಸೇನೆಯಲ್ಲಿ ಉದ್ಯೋಗ ವಹಿಸಿದ. ಭಾರತ ಸರಕಾರದ ಸೇನೆಯಲ್ಲಿ ಅತಿಉತ್ತಮ ಶ್ರೇಣಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. 1942ರಲ್ಲಿ ಹಿಂದೀ ರಾಷ್ಟ್ರೀಯ ಸೇನೆಯ ಉದಾಲ ಚಮತ್ಕಾರದಿಂದಲೋ ಆಂತರ್ಯಾಗ ಹೊಡೆದರು. ಹಿಂದೀ ರಾಷ್ಟ್ರೀಯ ಸೇನೆ ಅಥವಾ ಆಜಾದ್ ಹಿಂದ್ ಫೌಜ್ ಸ್ಥಾಪನೆಗೊಂಡುದು 1942ನೇ ಸೆಪ್ಟಂಬರ್ 1ರ ಸುಮಾರಿಗೆ. ಈ ಸೇನೆಯ ತಳಕಟ್ಟು ಬಿದ್ದುದು 1942ನೇ ಜೂನಿನಲ್ಲಿ ಬೇಂಕೋಕೆನಲ್ಲಿ ಸೇರಿದ್ದ ಹಿಂದೀ ಸಮ್ಮೇಲನದಲ್ಲಿ. ಅಗ್ರಗಣ್ಯ ಕ್ರಾಂತಿ ಪುರುಷರಾಗಿದ್ದು, ಹಿಂದೀ ಸರಕಾರಕ್ಕೆ ತನ್ನ ಪ್ರಾಣದ ಬಾಯಾರಿಕೆ ಹುಟ್ಟಿಸಿ, ಎಷ್ಟೋ ವರುಷಗಳ ಮೊದಲೇ ಹಿಂದುಸ್ಥಾನದಿಂದ ತಲೆ ತಪ್ಪಿಸಿಕೊಂಡು ಜಾಪಾನಿನಲ್ಲಿ ಹೋಗಿ ನಿಂತಿದ್ದ ರಾಸ್ ಬಿಹಾರೀ ಘೋಷರೇ ಆ ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದರು. ಅಲ್ಲಿ ಭಾರತ ರಾಷ್ಟ್ರೀಯ ಸೇನಾ ರಚನೆಯ ಸರ್ವ ವ್ಯವಸ್ಥೆಯಾಗಿತ್ತು. ಸುಭಾಸ್ಚಂದ್ರರು ಅಂತರ್ಗಾಮಿಯಾಗಿ ಆ ಕಡೆಗೆ ಸೇರಿಕೊಂಡು ಹಿಂದೀ ರಾಷ್ಟ್ರೀಯ ಸೇನೆಯ ನೇತಾಜಿ, ಯಾನೆ, ಕಮಾಂಡರ್-ಇನ್-ಚೀಫ್ ಆದುದು 1943ನೇ ಅಗೋಸ್ತು. ಅಥವಾ ಸೆಪ್ಟಂಬರಿನಲ್ಲಿ. ಆದರೆ ಆ ಸೇನೆಯ ಮೂಲ ರಚನೆಯಲ್ಲೇ ಷಾನವಾಜ್‌ರ ಕೈವಾಡವಿತ್ತು. ಮಲಯ, ಬರ್ಮ, ಸಿಂಗಾಪುರ ಮೊದಲಾದ ಕಡೆಗಳಲ್ಲಿ ಯುದ್ಧ ಕೈದಿಗಳಾಗಿ ದೊರೆತ ಹಿಂದೀ ಸೈನಿಕರನ್ನೂ ನಾಗರಿಕರನ್ನೂ ಹುರಿದುಂಬಿಸಿ, ರಾಷ್ಟ್ರೀಯ ಫೌಜಿಗೆ ಸೇರಿಸಿಕೊಳ್ಳಲು ಷಾನವಾಜ್ ಅವಿಶ್ರಾಂತವಾಗಿ ದುಡಿದಿದ್ದರು. ಸುಭಾಸರಾ ಮೇಲೆ ರಚಿಸಿಕೊಂಡ 'ಹಿಂದೀ ರಾಷ್ಟ್ರೀಯ ಸರಕಾರ'ದಲ್ಲೂ ಒಂದು ಮಂತ್ರಿ ಗದ್ದುಗೆಯು ಷಾನವಾಜರಿಗೆ ದೊರೆತಿತ್ತು. ಆಜಾದ್ ಹಿಂದೀ ಫೌಜಿನ ಸೇನಾನೀ ಮಂಡಲದ ನಾಯಕ ಕೆಪ್ಟನ್ ಷಾನವಾಜರೇ. ಈ ಸೇನೆಯನ್ನು ಬರ್ಮಾದಿಂದ ಭಾರತದ ಗಡಿಯೊಳಗೆ ನುಗ್ಗಿಸಿ ಇಂಫಾಲಿನ ವರೆಗೂ ಮುಂದೊತ್ತಿ ಹೋಗುವಂತೆ ಮಾಡಿದ ಸಾಹಸಿ-ಇಂಫಾಲ್ ಮೈದಾನಿನಲ್ಲೊಮ್ಮೆ ಸಿಪಾಯಿ ಹಸ್ತವು ತ್ರಿವರ್ಣ ಧ್ವಜವೂರಿದೆ ಎಂಬ ದಾಖಲೆ ನಿರ್ಮಿಸಿದ ವೀರ ಭಾರತೀಯ-ಈ ಷಾನವಾಜರೇ. ಇವರುದು ದೊಡ್ಡ ಕುಟುಂಬ; ಆ ಕುಟುಂಬದ ಎಷ್ಟೋ ಮಂದಿ ಬ್ರಿಟಿಷ್ ಸೇನೆಯಲ್ಲಿದ್ದಾರೆ. ಬರ್ಮಾ ಭಾರತ ಗಡಿಯರಣರಂಗಗಳಲ್ಲಿ ಷಾನವಾಜರು ಈ ಸಂಬಂಧಿಕೊಡನೆ ಹೋರಾಡುವ ಸಂದರ್ಭಗಳೂ ಕೊದಗಿದ್ದುವು ಒಮ್ಮೆ ಅವರ ಸಹೋದರ ನನ್ನೇ ಅವರು ಇದಿರಿಸಿದ್ದರು. ಈ ಕೋರ್ಟು ಮಾರ್ಶಲ್ ಮೊಕದ್ದಮೆಯ ಸರಕಾರೀ ವಕೀಲರ ಕೈಗೆ ಷಾನವಾಜರ ಸ್ವಹಸ್ತ ಲಿಖಿತ ಡೈರಿ ದೊರೆತಿದೆ.

ಆ ಡೈರಿಯ ಕೆಲವಂಶ

'ತಾ. 30-8-1944. ಬೂಬಿಯು ಕೆನ್ನೆಡಿ ಶಿಖರದಿಂದ ಬಂದ. ಅವನ ವರದಿ ನೋಡಿ ತಳಮಳವಾಗುತ್ತಿದೆ. ಜಾಪಾನರು ಹಿಂದೀ ರಾಷ್ಟ್ರೀಯ ಸೇನೆಯ ವಿಧ್ವಂಸಕ ದಳವನ್ನು ತಮ್ಮ ಕೂಲಿಗಾರರಿಂಬಂತೆ ನೋಡುತಿಹ್ದಾರೆ. ಈ ಸಂಬಂಧವಾಗಿ ಕಿಮೆವಾರಿಯನ್ನು ಕಾಣುವದಕ್ಕಾಗಿ ನಾನೀದಿನ ಹಾಕಿಗೆ ಹೋಗುತ್ತೇನೆ. ಈ ಪಕ್ಷಪಾತಮಯ 'ಸಹಾಭಿವೃದ್ಧಿ'ಯ ಪರಿಣಾಮ ಏನಾಗುವದೋ ಎಂದು ನನಗೆ ದಿಗಿಲಾಗುತ್ತಿದೆ'.

'7-7-1944. ನನ್ನು ಜನರಿಗೆ ಯಾವ ರೀತಿನೂ ದೊರೆಯಲಿಲ್ಲ. ಹಸಿವೆಯಿಂದ ನಾಲ್ವರು ಗಾರ್ವಾಲಿಗಳು ಮಡಿದರು. ಇದಕ್ಕೇನಾದರೂ ಮಾಡುವಂತೆ ಕೇಳಿಕೊಳ್ಳಲು ನಾನೂ ರಿಮ್ಮರ್‌ಸರೂಸರೂ ಹಿಕಾರಿಕೆಕಾಸ ನನ್ನು ಕಂಡೆವು ಅವರು ಇದನ್ನು ಎಳ್ಳಷ್ಟೂ ಗಣಿಸುವಂತೆ ತೋರುವದಿಲ್ಲ. ನನ್ನ ಜನ್ಮಸ್ಥೀರೀತಿ ಉದ್ದೇಶ ಪೂರ್ವಕ ಉಪಮಾನ ಕೆಡಹುವ ಕಾರಣವೇನೋ ನನಗರಿಯದು'.

'15-7-1944. ನನ್ನ ಜನರು ಹಸಿವೆಯಿಂದ ನೊಣಗಳಂತೆ ಸಾಯುತಿದ್ದಾರೆ. ಕೆಲವರು ಆತ್ಮಹತ್ಯೆಮಾಡಿಕೊಳ್ಳುತಿದ್ದಾರೆ. ಜಪಾನರು ನಮಗಾವ ಸಹಾಯವನ್ನೂ ಕೊಡುವದಿಲ್ಲ'.

'8-8-1944. ಕಿಮೆವಾರಿಯ ಉತ್ತರದೊಡನೆ ಪಾರಾ ಮರಳಿ ಬಂದಿದ್ದಾನೆ. ಹಣ ಅಥವಾ ಇತರ ಸಹಾಯದ ವ್ಯವಸ್ಥೆಯೇ ಇಲ್ಲ ಟಿರಾವುನಿನಲ್ಲೆರುವ ನಮ್ಮ ರೋಗಿಗಳು ಆತ್ಮಹತ್ಯೆಮಾಡಿಕೊಳ್ಳಬೇಕೆಂದು ಆವನ ಸೂಚನೆ ಬಂದಿದೆ'

'21-2-1945. ಈ ರಾತ್ರಿ ನಾನು ಯುದ್ಧರಂಗಕ್ಕೆ ಹೋಗುತ್ತೇನೆ. ಮಧ್ಯರಾತ್ರಿಗೆ ಹೊರಡುತ್ತೇನೆ. ನೇತಾಜೀ ನನ್ನನ್ನು ಬೀಳ್ಕೊಡಲು ಬಂದಿದ್ದರು. ಮತ್ತು ನನಗೆಲ್ಲಾ ಸೂಚನೆಗಳನ್ನೂ ಕೊಟ್ಟಿದ್ದಾರೆ'.

'22-2-45. ಕುವಾಂಗ್ ಪಾದಾಂಗನ್ನು ಸೇರಿದೆ. ಒಂದು ದಳ ಶಸ್ತ್ರ ಕೆಳಗಿಟ್ಟಿತು. ಮಿಕ್ಕವು ಸಿಕ್ಕಿ ಬಿದ್ದಂತಾಗಿವೆ.'

'23-2-45. ವೈರಿಯನ್ನು ಇರ್ರವಾಡಿ ಹೊಳೆಯ ಆಚೆಗೋಡಿಸಬೇಕೆಂದು ಆಜ್ಞೆ ಬಂದಿದೆ. ನಾನು ರಕ್ಷಣಾ ಲೈನಿಗೆ ಹೋಗಿ ಭಾಷಣ ಕೊಟ್ಟು ಸೆಹ್ಗಾಲ್ ಮತ್ತು ಡಿಲ್ಲೋನರಿಗೆ ಧಾಳಿಯಾಜ್ಞೆ ಕೊಟ್ಟೆ'.

'25-2-1945. ನೇತಾಜೀಆತ ನುಂಜಾನೆಯಲ್ಲೇ ಬಂದಿದ್ದಾರೆ. ಆವರ ಭೇಟಿ ಮಾಡಿ ಪೋಪಾದ ಪರಿಸ್ಥಿತಿಯನ್ನೆಲ್ಲಾ ಹೇಳಿದೆ. ಪೋಪಾ ಮತ್ತು ಕ್ಯಾಕ್ ಪೆಡಾಂಗಿಗೆ ಹೋಗಬೇಕೆಂದು ಅವರ ದೃಢ ನಿರ್ಧಾರವಿತ್ತು. ಅದು ತೀರಾ ಅಪಾಯಕರವಾದ್ದರಿಂದ ನಾನದನ್ನು ಬಲವಾಗಿ ವಿರೋಧಿಸಿದೆ. ಕೆಲವು ಘೆಂಟೆಗಳ ಬಳಿಕ ಬ್ರಿಟಿಷರು ಪಿಯಿನ್‌ಟೆನ್ ವರೆಪಡಿಸಿಕೊಂಡು ಟುವಾಂಗ್‌ಧಾದ ಕಡೆಗೆ ಬರುತಿನ್ದಾರೆಂದು ಮೇಜರ್ ಟಿಕೇತಿ ಸುದ್ದಿ ತಂದ'.

'18-4-45. ರಾಝ್, ಮದನ್, ಸರ್ವಾರ್, ಬೇ ಮೊದಲಾದವರು ಪರಾರಿ. ಇದು ಅತ್ಯಂತ ಶೋಚನೀಯ. ಬ್ರಿಟಿಷರು ಟುವಾಂಗ್ ವಿಂಗ್ಲಿ ಅಕ್ರಮಿಸಿಕೊಂಡಿದ್ದಾರೆ. ಜಪಾನರೂ ಆಜಾದ್ ಹಿಂದೀ ಫೌಜೂ ಪ್ರತಿಧಾಳಿ ನಡೆಸುತ್ತಿದೆ'.

'19-1-45. ಬ್ರಿಟಿಷ್ ಟ್ಯಾಂಕುಗಳೂ ಸೇನಾ ವಾಹನಗಳೂ ಮಾಂಗ್ಯೆಯೊಳಗೆ ನುಗ್ಗಿ ಬಂದಿವೆ. ಸಂಘಟಿತ ಪ್ರತಿಭಟನೆ ಕೊಡುವದು ಅಸಾಧ್ಯವಾಗಿದೆ'.

'4-5-45 ಒಂದು ಮುರುಕು ಗುಡಿಸಿಲಿನಲ್ಲಿ ದಿನ ದೂಡುತಿದ್ದೇನೆ. ಇಡೀ ದಿನ ಮಳೆ ಬರುತ್ತಿದೆ. ನಮ್ಮನ್ನಿಲ್ಲಿ ಹೀಗೆಯೇ ಬಿಟ್ಟು ಜಾಪಾನರೋಡುತಿದ್ದಾರೆ. ನಮ್ಮ ಗೊಡವೆಯಲ್ಲುಳಿಯೇ ಅವರಿಲ್ಲ'.

'5-5-45. ಇನ್ನು ಹಿಂ. ರಾ. ಸೇನೆಯಿಂದ ಜಪಾನರಿಗೇನೂ ಪ್ರಯೋಜನ ಕಾಣುವದಿಲ್ಲ. ನಮ್ಮ ಎಲ್ಲಾ ಸಹಾಯ ಕಾಧಿಕಾರಿಗಳನ್ನೂ ಹಿಂದೆಗೆದುಕೊಂಡಿದ್ದಾರೆ. ಸೈನಿಕರ ಶಿಸ್ತು ನುತ್ತು ಧೈರ್ಯ ಶಿಥಿಲವಾಗಹತ್ತಿದೆ'.

'13-5-45. ಬ್ರಿಟಿಷ್ ಮತು ಸೇನೆಗಳ ಪೂರ್ಣ ವಾರ್ತೆ ದೊರೆಯಿತು. ನಾವು ವಿಂಗಡಿಸಲ್ಪಟ್ಟು ಪೂರ್ಣ ಸಿಕ್ಕಿ ಬಿದ್ದಿದ್ದೇವೆಂದು ಕಾಣುತ್ತದೆ. ತಪ್ಪಿಸಿಕೊಳ್ಳುವ

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳು—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ. ಪ್ರೊಪ್ರೈಟರ್.

Indra Bhavan Coffee Hotel,

Balmatta Road, Mangalore.

CHAMPAE'S

Snow & Eastrex

(Sole Distributers for (India.)

Sukhananda Stores

Santhekatte, UDIPI, S. K.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಜಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಆವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ಫಾನಸವಾಲ್ ಸೆಹ್ಗಾಲ್ ಢಿಲ್ಲೋನರ ಅಪರಾಧವೇನು?

ಹಾದಿಯಿಲ್ಲ. 19 ಘಂಟೆಯೊಳಗೆ ನಾವು ಹಳ್ಳಿ ಬಿಟ್ಟು ಕಾಡಿನೊಳಗೆ ಸೇರಿಕೊಂಡೆವು. ನಮ್ಮ ಜನರಿಗೆ ಎಲ್ಲಾ ಸಂಗತಿಯನ್ನೂ ವಿವರಿಸಿ ಹೇಳಿದೆ. ಬಹು ಸಂಖ್ಯಾಕರು ಯುದ್ಧ ಕೈದಿಗಳಾಗೋಣವೆಂದು ಆ ಭಿಪ್ರಾಯ ಪಟ್ಟರು'.

'17-5-1945. ಸಿಬಾಸಿಸ್ಟ್ರಿಕ್ಟ್ಸ್ ಹಳ್ಳಿಯನ್ನು ಮಧ್ಯ ರಾತ್ರಿ ಹೊತ್ತಿಗೆ ಪ್ರವೇಶಿಸುತಿದ್ದೆವು. 2-1ನೇ ಪಂಜಾಬು ದಳವು ಕೇವಲ 15 ಗಜ ದೂರದಿಂದ ನಮ್ಮ ಮೇಲೆ ಭೀಕರ ಗುಂಡಿನ ಮಳೆಗರೆಯಿತು. ನಮ್ಮ ಮಾರ್ಗದರ್ಶಕ ಕೊಲ್ಲಲ್ಪಟ್ಟ. ನನ್ನ ಬೇಗು ಕಳೆದುಹೋಯಿತು. ಒಂದು ಕಾಡಿನಲ್ಲಿ 8 ಘಂಟೆಗಳನ್ನು ಕಳೆದೆ. ಹೊರಟೆ, ಆದರೆ ಎಲ್ಲಾ ಹಾದಿಗಳೂ ಬಂದಾಗಿದ್ದುವು. 2-1 ದಳದವರು ಸೆರೆ ಹಿಡಿದರು. ಪೆಗು ಡಿವಿಜನಲ್ ಕಾರ್ಯಾಲಯಕ್ಕೊಯ್ದರು. ಅಲ್ಲಿ ಜೈಲಿಗೆ ಹಾಕಿದರು'.

ಕೆಪ್ಟನ್ ಸಹ್ಗಾಲ್

1917ನೇ ಜನವರಿಯದಲ್ಲಿ ಹೋಶಿಯಾರ್ ಪುರದಲ್ಲಿ ಇವರ ಜನನ. ಇವರೂ ಹಿಂದೀ ಸರಕಾರದ ಮಿಲಿಟರಿ ಎಕೆಡಮಿಯ ಶಿಕ್ಷಣ ಪಡೆದರು. 1940ರಲ್ಲಿ ಬಲೂಚಿಯ 10ನೇ ದಳದಲ್ಲಿ ಇವರಿಗೆ ಕೆಲಸ ದೊರೆಯಿತು. ಆಜಾದ್ ಹಿಂದೀ ಫೌಜಿನ ಮೂಲಸ್ತಂಭಗಳಲ್ಲೊಂದ ದ ಇವರು ಪರಮ ಸಾಹಸಿ. ಅದರ ಮಿಲಿಟರಿ ಕಾರ್ಯದರ್ಶಿಯಾಗಿ ವಿಶೇಷ ಹೊಣೆ ಹೊತ್ತು, ಕಾರ್ಯ ನಿರ್ವಹಿಸಿದ್ದರು. ಇವರ ತಂದೆ ಅಮೃತಸರವಾಸಿಯೂ ಗುಂಡೆದೆಯ ಮನುಷ್ಯ. ವಿಚಾರಣೆಗು ದಿನ ಆತನೂ ಕೋರ್ಟಿನಲ್ಲಿದ್ದ. ಕೋರ್ಟು ವಿರಾಮಕ್ಕೆದ್ದಾಗ ಅಚ್ಚು ರಾಮ್ ನುಗ ಕುಳಿತಲ್ಲಿಗೆ ಬಂದು ಕೃತಾರ್ಥ ಜೀವಿಯಂತೆ ಹುಗ್ಗುಳಿಕೆಯಿಂದ ಸೆಹ್ಗಾಲನ ಕೈಕುಲುಕಿದ. ಈ ರಾಷ್ಟ್ರೀಯ ಕೆಪ್ಟನನ ತಾಯಿ ಮತ್ತು ತಂಗಿಯರೂ ಬಂದಿದ್ದರು. ಅವರಾತನನ್ನು ಅಪ್ಪಿ ಕೊಂಡರು. ಕಾನವಾಜನಂತೆಯೇ ಸೆಹ್ಗಾಲನ ಸ್ವಹಸ್ತಾಕ್ಷರವುಳ್ಳ ಡೈರಿಯೂ ಸರಕಾರೀ ವಕೀಲರಿಗೆ ದೊರೆತಿದೆ

ಸೆಹ್ಗಾಲನ ಡೈರಿ

'ಫೆಬ್ರವರಿ. 1944. ಎಲ್ಲಾ ದಳ ನಾಯಕರೂ ಮಿಲಿಟರಿ ಪೆರೇಡನ್ನು ನಡೆಯಿಸಿ, ಅರಕಾನ್ ರಣರಂಗದ ಪರಿಚಯವನ್ನು ತಿಳಿಸಬೇಕೆಂದು ನೇತಾಜಿಯ ಆಜ್ಞೆ ಬಂದಿದೆ. ನಾವು ದೀರ್ಘ ನಿರೀಕ್ಷೆಯಲ್ಲಿದ್ದ ದಿಲ್ಲಿಯ ಮೇಲಿನ ದಾಳಿ ಈಗ ತಾನೇ ಆರಂಭವಾಗಿದೆ ಎಂದು ಈ ವಿಶೇಷಾಜ್ಞೆಯಿಲ್ಲಿದ. ದೃಢ ನಿರ್ಧಾರದಿಂದ ಮುಂದೊತ್ತಬೇಕು. ಈಗ ಅರಕಾನ್ ಗುಡ್ಡದಲ್ಲಿ ಹಾರಾಡುತ್ತಿರುವ ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ಢಿಲ್ಲಿಯ ವೈಸರಾಯೀ ಭವನದ ಮೇಲೇರಿಸುವ ವರೆಗೆ ಮತ್ತು ಢಿಲ್ಲಿಯ ಪ್ರಸಿದ್ಧ ಕೆಂಪು ಕೋಟೆಯಲ್ಲಿ ವಿಜಯ ಮೆರವಣಿಗೆ ಪಡೆಸುವ ವರೆಗೆ ಆ ದಾಡನ್ನು ನಿಲ್ಲಿಸಬಾರದು ಎಂದು ನೇತಾಜೀ ಆಜ್ಞೆಯಲ್ಲಿದೆ. 'ಢಿಲ್ಲಿಯ ಮೇಲೆ ದಾಂಡು' ಎಂಬುದೇ ಮುಂದಿನ ರಣರವವಾಗಬೇಕೆಂದೂ ಈ ಆಜ್ಞೆಯಲ್ಲಿ ಸೂಚಿಸಲಾಗಿದೆ".

'ತಾ 17-2-45. ವೈರಿಯು ಇರ್ರವಾಡಿ ಹೊಳೆ ದಾಟಿ ಡಿಲ್ಲೋನನ ಭಾಗಕ್ಕೆ ನುಗ್ಗಿ ಬಂದಿದ್ದಾನೆ. ಆವನ ಸೇನೆ ಬಹು ತೀಕವಾಗಿ ನಾಶವಾದಂತೆಯೇ. ಸೈನಿಕರ ಶಿಸ್ತು ಮತ್ತು ಧೈರ್ಯ ಕಳೆದುಹೋಗಿವೆ'

'22-2-1945. ಕರ್ನಲ್ ಲಿಯಿಝು ಗುಣ ಹೊಂದುವ ವರೆಗೆ ಆ ದಳ ನಾಯಕತ್ವವು ಕೆಪ್ಟನ್ ಶಾನವಾಜರ ಕೈಗೆ ಬಂದಿದೆ'.

'1-3-1945 ರಣರಂಗಕ್ಕೆ ಹೋಗಲೊಪ್ಪದ ಒಬ್ಬ ಅಧಿಕಾರಿಗೆ ನಾನು ಮರಣ ದಂಡನೆ ವಿಧಿಸಬೇಕಾಯಿತು ಎಚ್ಚೆಂದು ಮರುಕದಾಯ! ಇದೀಗ ಮಾಸವ ಪ್ರಾಣಗಳ ಅನಾವ್ಯಯ'

'2-3-1945ಈ ಅಧಿಕಾರಿಗಳು ಇದುವರೆಗೆ ಮರಳಬಂದಿಲ್ಲ. ಅವರು ವೈರಿಗಳನ್ನು ಸೇರಿಕೊಂಡರೆಂಬುದು ಖಂಡಿತ. ದಗಾಕೋರ ಫಟಿಂಗರು! ಇಂದಿನಿಂದ ನಾನು ಅತ್ಯಂತ ಕಠೋರವಾಗಿ ವರ್ತಿಸುವುದೇ ಸರಿ. ಯಾರ ಮೇಲಾದರೂ ಸಂದೇಹ ತೋರಿದರೆ ಕೂಡಲೇ ಗುಂಡಿಟ್ಟು ಕೊಲ್ಲಬೇಕೆಂದು ನಾನೊಂದು ಆಜ್ಞೆ ಹೊರಡಿಸುತ್ತೇನೆ'.

'19-3-1945. ಢಿಲ್ಲೋನಸಿಂದ ವಾರ್ತೆ ಬಂದಿದೆ. ಅವನ ಅನುಯಾಯಿಗಳು ಧೈರ್ಯವಾಗಿ ಹೋರಾಡುತಿದ್ದಾರೆ. ಅವರೊಂದು ಗುಡ್ಡದ ಮೇಲೆ ಮೂರು ಬಾರಿ ಧಾಳಿ ಮಾಡಿ 300 ವಿರೋಧಿಗಳನ್ನು ಕೊಂದು ಅದನ್ನು ವಶಪಡಿಸಿಕೊಂಡರು. ನಮ್ಮವರಿಗೂ ಹೆಚ್ಚಿನ ಪ್ರಾಣಹಾನಿಯಾಗಿದೆ'.

'28-3-1945 ನಾನು ವೆಲ್ಲೋರ್ಂಗ್ ಬಡಿಯ ರಸ್ತೆಯ ರಕ್ಷಣೆಗೆ ಒಂದೇ ತಂಡವನ್ನು ಕಡುತ್ತೇನೆ. ಉಳಿದ ಭಾಗವನ್ನೆಲ್ಲಾ ಢಿಲ್ಲೋನನ ಸೇನೆ ಬಂದು ಸೇರುವವರೆಗೂ ಪೋಪಮ್ಯಾದಲ್ಲೇ ಬಿಡುತ್ತೇನೆ'.

ಆದರೆ ಏಪ್ರಿಲ್ 28ರಲ್ಲಿ ಸೆಹ್ಗಾಲ್ ಸಿರುಪಾಯನಾಗಿ ಶರಣು ಬಂದ.

ಲೆಫ್ಟನೆಂಟ್ ಢಿಲ್ಲೋನ್

ಶಾಹೋರು ಜಿಲ್ಲೆಯ ಅಲ್ಲೋನಿನಲ್ಲಿ 1915 ಏಪ್ರಿಲ್ 4ರಲ್ಲಿ ಇವರ ಜನನ. ಇವರೂ ಡೆಹ್ರಾಡೂನ್ನಿನಲ್ಲಿ ಹಿಂದೀ ಸರಕಾರದ ಮಿಲಿಟರಿ ಎಕೆಡೆಮಿ ಶಿಕ್ಷಣ ಮುಗಿಸಿ 1940ರಲ್ಲಿ ಸೇನೋದ್ಯೋಗದಲ್ಲಿದ್ದರು ಆಜಾದ್ ಹಿಂದ್ ಫೌಜಿನ ಜೀವ ನಾಡಿಗಳಲ್ಲಿ ಇದೊಂದು. ವೀರ ಸಿಖ್; ವಿವಾಹಿತ ಮನುಷ್ಯ. ವಿಚಾರಣೆಯ ವೇಳೆ ಪತ್ನಿ ಹಾಜರಿದ್ದಳು. ಕೋರ್ಟು ವಿರಾಮಕ್ಕೆದ್ದಾಗ ಪತಿಯ ಸನಿಹಕ್ಕೆ ಹೋಗಿ ಮೌನವಾಗಿ ನಿಂತು ಹೃದಯ ಕಾಣಿಕೆಯರ್ಪಿಸಿದ್ದಳು. ಕರಿಣ ಕಾರ್ಯದಕ್ಷ. ಮೊದಲಿನ ಇಬ್ಬರು ಆರೋಪಿಗಳ ಮೇಲೆ ಚಕ್ರವರ್ತಿಗಳ ಮೇಲೆ ಯುದ್ಧ ಸಾರಿದ ಆರೋಪದೊಂದಿಕೊಲೆಗೆ ಪ್ರೋತ್ಸಾಹವಿತ್ತ ಅಪಾದನೆಯಿದೆ. ಲೆಫ್ಟನೆಂಟ್ ಢಿಲ್ಲೋನರ ಮೇಲೆ ಮೊದಲನೆಯ ಆಪಾದನೆ ಮತ್ತು ಪ್ರತ್ಯಕ್ಷ ಕೊಲೆ ಮಾಡಿದ ಆರೋಪಗಳಿವೆ.

ವಂಚಕರ ವಧೆ

ಮೊದಲು ಬ್ರಿಟಿಷ್ ಹಿಂದೀ ಸೇನೆಯಲ್ಲಿದ್ದು ಆ ಮೇಲೆ ಆಜಾದ್ ಹಿಂದ್ ಫೌಜಿಗೆ ಸೇರಿದ್ದ ನಾಲ್ವರು ಹಿಂದೀ ಯೋಧರು ಅಲ್ಲಿಂದ ತಪ್ಪಿಸಿಕೊಂಡು ಮರಳಿ ಬ್ರಿಟಿಷರನ್ನು ಸೇರಲು ಪ್ರಯತ್ನಿಸಿದರೆಂದು ಆವರನ್ನು ಕೆಪ್ಟನ್ ಸೆಹ್ಗಾಲರ ಆಜ್ಞೆಯಂತೆ ಲೆಫ್ಟನೆಂಟ್ ಢಿಲ್ಲೋನರು ತಾ 1-3-45ರಲ್ಲಿ ಗುಂಡಿಟ್ಟು ಕೊಲ್ಲಿಸಿದ್ದರು. ಆ ದಿನ ನಾಲ್ವರನ್ನೂ ಹಿಮ್ಮುರಿ ಬಿಗಿದು ಒಂದು ಕಂದರದಲ್ಲಿ ಕೂತುಕೊಳ್ಳಿಸಲಾಯಿತು. ಢಿಲ್ಲೋನರು ಆವರ ಪರಾಂ ಪ್ರಯತ್ನವನ್ನು ತನ್ನ ಜನರಿಗೆ ವಿವರಿಸಿ ಹೇ[illegible] ಯಂ ಸೇವಕರನ್ನು ಕರೆದರು. ಮೂವರೆಂದರೆ ಹೃದಯತುಲ್ಯಾಕಾಲಾರಮ್ಸ್,ಮತ್ತು ತೇರ್ ಸಿಂಗ್. ನೊದಲನೆಯವರಿಬ್ಬರಿಗೆ ರೈಫಲ್ ಮತ್ತು ವಾರನೆಯವನಿಗೆ ಪಿಸ್ತೂಲು ಕೊಡಲಾಯಿತು. ಆ ಮೇಲೆ ಢಿಲ್ಲೋನರು ಕಂದರದಲ್ಲಿದ್ದ ಅಪರಾಧಿಗಳಲ್ಲೊಬ್ಬನನ್ನು ಕರೆದು ಆವರ ದ್ರೋಹಕ್ಕಾಗಿ ಮರಣ ಶಿಕ್ಷೆ ವಿಧಿಸಿರುವುದನ್ನು ವಿವರಿಸಿ ಈಗ ಆವರಿಗೆ ಗುಂಡಿಡಲಾಗುವುದೆಂದು ತಿಳಿಸಿದರು. 'ನಿನ್ನ ದೊಂದು ಪ್ರಾರ್ಥನೆಯಿದೆ' ಎಂದ ಆ ಮನುಷ್ಯ. ಆನನ್ನು ಕೇಳಲಾಗುವದಿಲ್ಲ ಎನ್ನುತ್ತಾ ಢಿಲ್ಲೋನ್ ಗುಂಡು ಹಾರಿಸಲಾಜ್ಞೆ ಕೊಟ್ಟರು. ನಾಲ್ವರು ಅಪರಾಧಿಗಳ ಮೇಲೂ ರೈಫಲ್ ಹಾರಿಸಲಾಯಿತು. ಆವರು ಉರುಳಿ ಬಿದ್ದರೂ ಪತ್ತರಿಲ್ಲ. ಆಗ ಢಿಲ್ಲೋನರು ತೇರ್ ಸಿಂಗರಿಂದ ಪ್ರತಿಯೊಬ್ಬನಿಗೂ ಪಿಸ್ತೂಲಿನಿಂದ ಗುಂಡಿಡಿಸಿ ಪೂರ್ತಿ ಕೊಲ್ಲಿಸಿದರು–

೦೦ ೦೦ ೦೦

ಸುಭಾಸ್ ಸೇನೆಯಾದ ಆಜಾದ್ ಹಿಂದ್ ಫೌಜಿನ ಈ ಮೂವರು ಕೆಪ್ಟನರನ್ನು ಪ್ರಜಮಾರೋಪಿಗಳಾಗಿ, ನವಢಿಲ್ಲಿಯ ಕೆಂಪು ಕೋಟೆಯ ವಿಚಾರಣೆಗೆ ಇದೇ ತಾ. ೫ರಲ್ಲಿಕೆದು (ವಿಚಾರಕಾರಂಭವ ವರದಿ ಕಳದ ವಾರದ ಸಂಚಿಕೆಯಲ್ಲಿ ಬಂದಿದೆ) ಭಾರತದ ಎಡ್ವೋಕೇಟ್ ಜನರಲ್ ಸರ್. ಎನ್. ಪಿ. ಇಂಜಿನೀಯರರು ಮುಂದಿಟ್ಟ ಆರೋಪ ವಿವರಣೆಯಲ್ಲಿ ನಮೂದಿಸಿರುವ ಅಂಶಗಳಿವು. ಆಜಾದ್ ಹಿಂದ್ ಫೌಜಿನ ವಿವಿಧ ವಿಭಾಗಗಳು; ಅದಕ್ಕೆ ಯೋಧರನ್ನು ಸೇರಿಸಿಕೊಂಡ ರೀತಿ, ಸುಭಾಸರು ಸರ್ವ ಸೇನಾನಿಯಾಗಿ ಸೇರಿಕೊಂಡುದು, ಆ ಸೇನೆಯ ಬಂಧನೆ ರೀತಿನೀತಿಗಳು, ಸುಭಾಸರ ಆಜ್ಞೆ, ತಂತಿ ವ್ಯವಹಾರ, ಮತ್ತು ಜಲನ ವಲನಗಳನ್ನೆಲ್ಲಾ ಎದ್ದೊ ಕೇಟ್ ಜನರಲರು ಈ ಆರೋಪಗಳಲ್ಲಿ ವರ್ಣಿಸಿದ್ದಾರೆ. ಆ ಮೇಲೆ ಸರಕಾರೀ ಕಡೆಯ ನೊದಲನೇ ಸಾಕ್ಷಿಗಾರ ಲೆಫ್ಟನೆಂಟ್ ಡಿ. ಸಿ ನಾನ್ ಇವರ ಸಾಕ್ಷಿ ವಿಚಾರಣೆಯಾಯಿತು.

ನಾಗರ ಸಾಕ್ಷ್ಯ

ಲೆಫ್ಟನೆಂಟ್ ನಾನ್ 1920ರಲ್ಲಿ ಒಂಗಾಳದ ಜೂನಿಯರ್ ಸಿವಿಲ್ ಸರ್ವಿಸಿಗೆ ಸೇರಿದ್ದರು. 1931-35ರಲ್ಲಿ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಆದರು. 1938ರಲ್ಲಿ ಕಮಿಶನ್ ಪಡೆದು ಕೈರೋವಿಗೆ ಹೋದರು. ಯುದ್ಧಾರಂಭವಾದಾಗ ಪ್ರಥಮತಃ ಪೆನಾಂಗಿಗೆ, ಆ ಮೇಲೆ ಸಿಂಗಾಪುರಕ್ಕೆ ವರ್ಗವಾಯಿತು. ಅಲ್ಲಿ 1942ರ ಏಪ್ರಿಲ್‌ನಲ್ಲಿ ವಿಮಾನ ಧಾಳಿಯೊಂದರಿಂದ ಜಖಂಗೊಂಡು ಆಸ್ಪತ್ರೆ ಸೇರಿದರು; ಆಸ್ಪತ್ರೆಯಲ್ಲಿದ್ದಂತೆಯೇ ಯುದ್ಧ ಕೈದಿಯಾಗಿ ಜಪಾನೀ ಕಾರಾಗೃ

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ
ವಿಮಾ ಕಂಪೆನಿಯು
ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.
Rao Bahadur B. S. Sawkar, B.A. L.L. B., Chairman. A. S. Kini, Managing Director.
ದಿ ಯುನೈಟೆಡ್ ಕರ್ನಾಟಕ ಇನ್ಶುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co Ltd DHARWAR
ಹೆಚ್ಚಿನ ಮಾಹಿತಿ ಬಗೆ ಬರೆಯಿರಿ–
Organising Office:– Court Road, UDIPI.

ಮುಟ್ಟಾಗುವಿಕೆ
ಹಲವಾರುಗಳಿಂದ ಕಳ್ಕುಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವಕಾರಣವಿದ್ದರೂ— 'ಋತುಸ್ರಾವ ಮಾತ್ರೆಗಳು' ಪ್ರಸಿದ್ಧಿತ ಸರಬರಪ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯುಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3/- ಕೈಮಿಂಡಿ ಕೇಸುಗಳಿಗೆ ರೂ. 5. 6ಹಂಗಳ ಬರ್ತಾ ಕಂಟ್ರೋಲಿಗೆ ರೂ. 4/- (ವಿ. ಪಿ. 12 ಆಣೆ ಆಲಾಯಿದ.)
Mrs. P. DEVEE,
F. D. C., (A. E.) Tollygunge, Calcutta.
ಸ್ಟಾಕಿಸ್ಟ್: ಪಾ ಕಂಪೆನಿ ಮಂಗಳೂರು

1000's SAVED
MARGARET'S
FITS CURE
Stops children's fits in 3 minutes.
Ask your chemist for a box.
Sole Agents
BRIGHTSTAR AGENCIES,
Hospital Rd., Udipi, S. K.

★ ಆಜಾದ್ ಹಿಂದ್ ಫೌಜಿನ ವಿಚಾರಣೆ ★

ಹ ಸೇರಿದರು. ತನ್ನ ಕಣ್ಣು ಚಿಕಿತ್ಸೆ ಮತ್ತು ಕನ್ನಡಕ ಸಂಪಾದಿಸಲು ಪ್ರಯತ್ನಿಸುತಿದ್ದಾಗ ಕೆಪ್ಟನ್ ಶಾನವಾಜರ ಭೇಟಿಯಾಗಿ ಅವರು ನಾಗರನ್ನು ಆ ಹಿಂ ಫೌಜಿಗೆ ಸೇರಿಸಿಕೊಂಡರು ಮೆಜಿಸ್ಟ್ರೇಟ್ ಆಗಿದ್ದವರೆಂಬ ನೆರಿಂದ ಹಿಂದೀ ರಾಷ್ಟ್ರೀಯ ಸೇನಾಧಿಕಾರಿಗಳು ಇವರನ್ನ ತಮ್ಮ ಸೇನೆಯ ಕಾಯಿದೇ ವಿಭಾಗಕ್ಕೆ ನೇಮಿಸಿಕೊಂಡರಂತೆ. ಕೊನೆಗೆ ನಾಗರೂ ಇತರ ಕೆಲವು ಆಧಿಕಾರಿಗಳೂ ಆ. ಹಿಂ. ಫೌಜಿನಲ್ಲಿರಲು ಒಪ್ಪಲಿಲ್ಲವಂತೆ. ಆಗ ಈ ಫೌಜಿನ ವಿರ ಸ್ಥಾಪಿಸಿದ್ದ 'ಹಿಂದೀ ಸ್ವತಂತ್ರ ಲೀಗ್'ನ ನಾಯಕ ರಾಸಬಿಹಾರ್ ಘೋಷರು ಇವರ ಅಭಿಪ್ರಾಯ ತಿಳಿದು ಜೈಲಿಗೆ ಹಾಕಿಸಿದರು; ಅಲ್ಲಿಂದ ನಾಗರು ಆಸ್ಪತ್ರೆಯಲ್ಲಿ ಬೀಳಬೇಕಾಯಿತು ಆ ಮೇಲೆ ಯಾವ ಸಲಕರಣೆಯೂ ದೊರೆಯದ ಏಕ ಕೋಣೆಗೆ ಸೇರಿಸಿದೆನೆಂದು ಬೆದರಿಕೆ ಹಾಕಿದಾಗ, ತಾನು ಸರ್ವಾಹಪಿಲ್ಲದೆ 1942ರಲ್ಲಿ ಪುನಃ ಸೇನೆಗೆ ಸೇರಿಕೊಂಡೆನೆಂದು ಕೆಪ್ಟನ್ ನಾಗ್ ತನ್ನ ಸಾಕ್ಷ್ಯದಲ್ಲುಂದಿದ್ದರು. 1942ನೇ ಸೆಪ್ಟೆಂಬರಿನಲ್ಲಿ ಆ. ಹಿಂ. ಫೌಜಿನ ಸಂಖ್ಯೆ 10000 ಇತ್ತೆಂದು ನಾಗರಂದಾಗ "ಸಾಕ್ಷಿಗಾರನಿಗೆ ಸ್ಪಷ್ಟ ವಾರ್ತೆ ಗೊತ್ತಿದೆಯೋ ಅಥವಾ ಊಹೆ ಮಾತ್ರ ವೋ?" ಎಂದು ಭುಲಾಭಾಯಿಗೆಲೊಂದು ಸವಾಲು ಛಡಾಯಿಸಿದರು. "ನನಗದು ಅಧಿಕೃತವಾಗಿ ಗೊತ್ತಿಲ್ಲ. ಆದರೆ ಆ ಸಮಯದಲ್ಲಿ ಈ ಸಂಖ್ಯೆ ಎಲ್ಲರಿಗೂ ಗೊತ್ತಿದ್ದ ಸರ್ವಶ್ರುತ ವಿಷಯವಾಗಿತ್ತು" ಎಂದು ನಾಗರ ಉತ್ತರ. "ಇದು ನಿಮ್ಮ ಸ್ವಂತ ತಿಳುವಳಿಕೆಯೋ ಅಥವಾ ಜನರು ಹೇಳಿದ್ದನ್ನು ಕೇಳಿದುದೋ?" ಎಂದು ಸರಕಾರೀ ವಕೀಲರು ತಿದ್ದಿ ಕೇಳಿದಾಗ "ನನ್ನ ಸ್ವಂತ ತಿಳುವಳಿಕೆ" ಎಂದರು ನಾಗ್. "ಸಾಕ್ಷಿಗಾರ ತನಗೆ ಗೊತ್ತಿರುವದನ್ನೂ ಕೇಳಿರುವದನ್ನೂ ಮಿಶ್ರಮಾಡಿ ಹೇಳಿದ್ದರಾಯಿತು" ಎಂದು ಭುಲಾಭಾಯಿ ಎಚ್ಚರಿಸಿದರು.

ಆ. ಹಿಂ ಫೌಜಿನ ಕಾನೂನು

ಮೆಜಿಸ್ಟ್ರೇಟರಾಗಿದ್ದ ಕಾನೂನಿನ ಅನುಭವಶಾಲಿ ನಾಗರಿಗೆ, ಹಿಂದೀರಾಷ್ಟ್ರೀಯ ಸೇನೆಯು ಕಾನೂನುಗಳನ್ನು ರಚಿಸುವ ಕೆಲಸ ಕೊಟ್ಟಿದ್ದರು ತಾನದನ್ನು ಹಿಂದೀ ಸೇನಾ ಕಾನೂನಿನ ಮಾದರಿಯಲ್ಲೇ ತಯಾರಿಸಿದ್ದೆ ಆದರೆ ಕೊನೆಗೆ ಶಿಸ್ತು ಭಂಗ ಇತ್ಯಾದಿ ದ್ರೋಹಗಳಿಗೆ ಚಿಡೀ ಶಿಕ್ಷೆ ಕೊಡುವ ವಿಶೇಷ ತಿದ್ದುಪಡಿಯೊಂದನ್ನು ಕೂಡಿಸಿಕೊಂಡೆ ತನ್ನನ್ನು ಕರೆದು ಸ್ವತಂತ್ರ ರಂಗೂನಿನ ರಾಷ್ಟ್ರ ಸೇನಾ ಮುಖ್ಯ ಕಾರ್ಯಾಲಯದಲ್ಲಿ ಸೇರಿದ ಸಮ್ಮೇಲನದಲ್ಲಿ ಚರ್ಚಿಸಲ್ಪಟ್ಟು ಬೇರೆ ತಿದ್ದುಪಡಿಗಳಾಗಿದ್ದುವು. ಎಂದು ಕೆಪ್ಟನ್ ನಾಗರಂದಾಗ, ಅಂತಹ ಒಂದು ತಿದ್ದುಪಡಿಯ ಕರಡಿಗೆ ನಾಗರ ಲಕ್ಷ್ಯವನ್ನೆಳೆಯುತ್ತಾ ಎಡ್ವೋಕೇಟ್ ಜನರಲ್ ಅವರು ಇದಿ ತಿಳಿಸಿ ಹೇಳಿದರು. ಕೂಡಲೇ ಭುಲಾಭಾಯಿಗಳು, ಆ ದಾಖಲೆಯನ್ನೇ ಕೋರ್ಟಿಗೆ ಹಾಜರು ಪಡಿಸಿರೆಂದಾಗ ಅದು ದೊರೆತಿಲ್ಲ, ಎಂದು ಸಾಕ್ಷಿಯ ಹೇಳಿಕೆಯಾಯಿತು. ಶ್ರೀ. ದೇಸಾಯಿಗಳು ಆಕ್ಷೇಪಿಸಲೆತ್ನಿಸುತ್ತಾ 'ದಾಖಲೆ ಇಲ್ಲವೆಂದ ಮೇಲೆ ಆ ವಿಷಯವನ್ನೇ ಪ್ರಸ್ತಾಪಿಸಬಾರದು' ಎಂದರು. 'ಆ ರಿಕಾರ್ಡನ್ನು ಸಂಪಾದಿಸಲು ಪ್ರಯತ್ನಿಸಿಲ್ಲ ಎಂಬುದಕ್ಕೆ ಬೇಕಾದಷ್ಟು ಸಾಕ್ಷಿಕೊಟ್ಟು ರುಜುಪಡಿಸುತ್ತೇನೆ ಎಂದರು' ಸರ್. ಇಂಜಿನೀಯರ್. 'ಆ ರಿಕಾರ್ಡು ಇತ್ತು; ಮತ್ತು ಇಂತಹ ಸಮಯದಲ್ಲಿಯೇ ಅದು ಕಳೆದು ಹೋಯಿತು ಎಂಬ ಕುರಿತು ನೀವು ಕೋರ್ಟನ್ನು ಸಮಾಧಾನಪಡಿಸಬೇಕು. ನಮಗಾದು ದೊರೆತುದೇ ಇಲ್ಲವೆಂದು ಹೇಳಿದರೆ ಸಾಲದು' ಎಂದು ಭುಲಾಭಾಯಿ ಒತ್ತಿ ಹೇಳಿದರು. ಆ ರಿಕಾರ್ಡು ಕಳೆದು ಹೋಯಿತು. ಇಲ್ಲವೇ ನಾಶವಾಯಿತು, ಅಥವಾ ದೊರೆತುದೇ ಇಲ್ಲ ಎಂಬುದಕ್ಕೆ ಮುಂದಾಗಿ ಸಾಕ್ಷ್ಯ ವೀಯಬೇಕೆತ್ತೆಂದು ಹೇಳಿ ಇನ್ನು ಕಡೆಗಾದರೂ ಅಂತಹ ಸಾಕ್ಷಿಯಿದೆಯೇ ಎಂದು ಜಡ್ಜ್-ಎಡ್ವೋಕೇಟರು ಸ್ಪಷ್ಟಿಸಿದಾಗ ಸರ್ ಇಂಜಿನೀಯರರೆಂದರು: "ಇದು ಕೆಪ್ಟನ್ ಸೆಹಗ್ಗಲರಲ್ಲಿ ಇದ್ದಿರಬೇಕಾದ ರಿಕಾರ್ಡು. ಅದು ನಮ್ಮ ಹಸ್ತಗತವಾದುದೇ ಇಲ್ಲ. ಅದು ನಮ್ಮಿಂದ ಕಳೆದುಹೋಯಿತೆಂಬುದಕ್ಕಲ್ಲ, ನಮಗೆ ದೊರೆತುದೇ ಇಲ್ಲವೆಂಬುದಕ್ಕೆ ನಾನು ರುಜುವಾತು ಕೊಡಬಲ್ಲೆ". ಸಾಕ್ಷಿಗಾರ ನಾಗರ ಮಾತೆಂದರೆ 'ಆ ರಿಕಾರ್ಡು ಖಂಡಿತ ಇತ್ತು. ಅದನ್ನು ನಾನೇ ಬರೆದೆ. ಆದರೆ ಅದೇನಾಯಿತೆಂಬುದು ನನಗೆ ಗೊತ್ತಿಲ್ಲ'.

ತನಖಿ ತಾ.21ಕ್ಕೆ ಮುಂದರಿಯಿತು

ಸರಕಾರೀ ವಕೀಲರು ಶಾನವಾಜರದೆನ್ನುವ ಒಂದು ಸಣ್ಣ ನೋಟ್‌ಬುಕ್ ಮುಂದೆ ಹಿಡಿದು ತೋರಿಸಿದಾಗ, ಸಾಕ್ಷಿಗಾರ ನಾಗರು ಅದು ಷಾನವಾಜರ ಸ್ವಹಸ್ತಾಕ್ಷರದ ಡೈರಿಯೆಂದರು. ಆದರಲ್ಲಿ ಹಲವು ಹರಿದ ಪುಟಗಳಿದ್ದುವು. ಈ ಕುರಿತು ದೇಸಾಯಿ-ಇಂಜೀನಿಯರರೊಳಗೆ ಎರಡಿರಡು ಬಿಸಿಮಾತುಗಳು ನಡೆದುವು. ಶ್ರೀ. ಭುಲಾಭಾಯಿಗಳ ಪ್ರಶ್ನೆ: "ಆದರ ಮಿಕ್ಕ ಪುಟಗಳು ನಿಮ್ಮ ವಶದಲ್ಲಿವೆಯೋ ಅಥವಾ ಕಳೆದು ಹೋಗಿವೆಯೋ?" ಸರ್ ಇಂಜೀನಿಯರರ ಉತ್ತರ: "ನಮ್ಮ ಸ್ವಾಧೀನಕ್ಕೆ ದೊರೆಯುವಾಗ ಇದು ಹೀಗೆಯೇ ಇತ್ತು ಬಳಿಕ ತನಖಿ ನಡಿಸಿದರೂ ಈ ಡೈರಿಯ ಮಿಕ್ಕ ಭಾಗವೇನಾಯಿತೆಂಬುದನ್ನು ತಿಳಿಯಲಾಗಲಿಲ್ಲ". ಕೂಡಲೇ ಭುಲಾಭಾಯಿಗಳೆಂದರು: "ಈ ಪುಟಗಳನ್ನೆಲ್ಲಾ ವಿಶೇಷ ತಃಬೇಕೆಂದೇ ಹೆಕ್ಕಿಕೊಂಡಂತೆ ಕಾಣುತ್ತದೆ" ಈ ಮಾತಿನಿಂದ ಕೆರಳಿದ ಸರ್.ನೋಶಿರ್ವಾನ್ ಇಂಜಿನೀಯರರು ಬಿಂಕಪೂರ್ವಕ ಹೇಳಿದರು: "ಹೀಗೆ ಹೇಳಲು ನಿಮಗೇನೂ ಆಧಾರವಿಲ್ಲದಿರುವಾಗ ಇದೊಂದು ಯೋಗ್ಯ ಸೂಚನೆಯಲ್ಲ" ಆಗ ಜಡ್ಜ್ ಎಡ್ವೋಕೇಟರು ಇದು ಕೊನೆಯ ಭಾಗದ ವಾದದಲ್ಲಿ ಬರಬೇಕಾದ ವಿಷಯವೆಂದರು. ಪ್ರೊಸಿಕ್ಯೂಶನ್ ಸಾದಕ್ಕನುಮೋದನೆಯಾಗಿ ನಾಗರ ಬಾಯಿಯಿಂದ ಸುಭಾಸ್ ಸೇನೆಯ ಎಲ್ಲಾ ಚಳವಳಿಗಳ ಪರಿಚಯವೂ ಬಂದಿತ್ತು. ನೇತಾಜಿಯ ಸ್ಫೂರ್ತಿದಾಯೀ ಆಜ್ಞೆಗಳು; ಬ್ರಿಟಿಷ್ ಆಧವಾ ಅಮೇರಿಕನರನ್ನು ಕೊಂದವರಿಗೆ ಆಧವಾ ಸಜೀವ ಸೆರೆ ಹಿಡಿದವರಿಗೆ ಕೊಡುವ 'ತಾಮ್ರಾಯೀ ಶಪ್ತನಾಣ' ಇತ್ಯಾದಿ ಬಿರುದುಗಳು-ಇವೆಲ್ಲಾ ಕೋರ್ಟಿನ ಮುಂದಿಡಲ್ಪಟ್ಟದ್ದುವು. ಹಲವು ಪ್ರಮುಖ ಗುಸ್ತ ದಾಖಲೆಗಳೂ ಕೋರ್ಟಿಗೆ ದೊರೆತಿವೆ. ಆರೋಪಿಗಳ ಕಡೆಯಿಂದ 136 ಸಾಕ್ಷಿಗಾರರಿದ್ದಾರೆ. 10 ಯಾ 11 ಮಂದಿ ಜಪಾನಿನಿಂದಲೂ ಇತರ ಹಲವರು ಬೇರೆ ಬೇರೆ ಕಡೆಗಳಿಂದಲೂ ಬರಬೇಕಾಗಿದೆ. ಪ್ರಥಮ ವಿಚಾರಣೆಯ ಮೇಳೆ ಕೇವಲ 38 ಮಂದಿಯೊಡನೆ ಪರ್ಯಾಲೋಚಿಸಲು ಆರೋಪಿಗಳ ವಕೀಲರಿಗೆ ಸಾಧ್ಯವಾಗಿತ್ತು. ಇವೆಲ್ಲವನ್ನು ಗಮನಿಸಿ, ಕೋರ್ಟು ಮಾರ್ಶಲ್ ವಿಚಾರಣೆಯನ್ನು ನವಂಬರ್ 21ನೇ ಬುಧವಾರಕ್ಕೆ ಮುಂದುವರಿಸಿಟ್ಟತು. ಕೋರ್ಟು ಊಟಕ್ಕೆದ್ದ ವಿರಾಮಾವಧಿಯಲ್ಲಿ ಬಂದು ಹೃದಯ ಸ್ಪರ್ಶೀ ಘಟನೆ ನಡೆಯಿತು. ಮೂವರು ಆರೋಪಿಗಳೂ ತಮಗಾಗಿ ಇಟ್ಟಿದ್ದ ಕೋಣೆಗೆ ಪ್ರವೇಶಿಸುವಾಗ ಸೆಹಗ್ಗಲನ ತಂಗಿಯರೂ, ಧಿಲ್ಲೋನನ ಪತ್ನಿಯೂ ನೋಡುತಿದ್ದರು. ಸ್ವಲ್ಪ ಹೊತ್ತಿನ ಮೇಲೆ ಆ ಕೋಣೆಯೊಂದು ಕಿಟಿಕಿ ತೆರೆಯಲ್ಪಟ್ಟತು. ಕೂಡಲೇ ಸೆಹಗ್ಗಲನ ತಂಗಿ ಕುಂಕುಮ ಕರಡಿಗೆಯೊಂದನ್ನು ಆ ಕಿಟಿಕಿ ದ್ವಾರಾ ಕೊಟ್ಟು 'ಭಾಯಿದುಜ್' ಉತ್ಸವ ಸಂಬಂಧ ಅದನ್ನು ಹಣೆಗಿಟ್ಟು ಕೊಳ್ಳಂದು ತನ್ನ ಅಣ್ಣನಿಗೆಂದಳು. ಸೆಹಗ್ಗಲ್ ಹಾಗೆಯೇ ಮಾಡಿದ; ಮತ್ತೊಂದು ಬೊಟ್ಟನ್ನು ಕೆಪ್ಟನ್ ಶಾನವಾಜನ ಹಣೆಗೂ ಇಟ್ಟ!

ರಾಷ್ಟ್ರವ್ಯಾಪೀ ಉದ್ವೇಗ

ಚಕ್ರವರ್ತೀ ಸರಕಾರದ ವಿರುದ್ಧ ಯುದ್ಧ ಸಾರಿದ ಮತ್ತು ಕೊಲೆಮಾಡಿದ ಆರೋಪದಿಂದ ಕೋರ್ಟು ಮಾರ್ಶಲಿಗೆಳೆಯಲ್ಪಡುವ ಸುಭಾಸ್ ಯೋಧರ ಪೈಕಿ ಮೂವರಲ್ಲಿ ಪ್ರಥಮ ಸರದಿ.ಎರಡನೇ ದಳವಾಗಿ ಕೆಪ್ಟನ್ ಅಬ್ದುಲ್ ರಶೀದ್ ಅಲಿ, ಸುಬೇದಾರ್ ಶಿಂಗಾರ್ ಸಿಂಗ್ ಮತ್ತು ಜವೇಂದಾರ್ ಘಾಟೇ ಇವರ ಮೇಲೆ 'ಚಾರ್ಜ್-ಶೀಟ್' ಜ್ಯಾರಿಮಾಡಲಾಗಿದೆ. ಮೂರನೇ ದಳವಾಗಿ ಕೆಪ್ಟನ್ ಬರಹಾನುದ್ದೀನರೊಬ್ಬರನ್ನೇ ಕರೆಯಲಾಗಿದೆ. ಇವರೆಲ್ಲರ ವಿಚಾರಣೆಯೂ ತಾ. 21ಕ್ಕೇನೇ ಪ್ರಾರಂಭವಾಗುವದೆಂದು ತಿಳಿದುಬಂದಿದೆ ಆ ಪೈಕಿ ಕೆಪ್ಟನ್ ರಶೀದ್ ಅಲಿಯವರು ಮುಸ್ಲಿಂ ಲೀಗ್ ವಕೀಲರನ್ನಪೇಕ್ಷಿಸಿದ್ದಾರೆ. ಪಂಜಾಬ್ ಮುಸ್ಲಿಂ ಲೀಗಿನವರು ಇಬ್ಬರು ಪ್ರಸಿದ್ಧ ವಕೀಲರನ್ನು ಕಳುಹಿಸುವ ನಿರ್ಧಾರಮಾಡಿದ್ದಾರೆ. ದೇಶವಿಡೀ ಈ ಕುರಿತು ಅಪೂರ್ವ ಉದ್ವೇಗವೆದ್ದು ಎಲ್ಲೆಲ್ಲೂ ನಿಷೇಧ ಪ್ರದರ್ಶನಗಳು, ಹರತಾಳಗಳು ನಡೆದಿವೆ. ಲಾಹೋರು ಮೊದಲಾದ ಕಡೆಗಳಲ್ಲಿ ಹಲವರ ದಸ್ತಗಿರಿಗಳಾದುವು; ಅಲ್ಲಲ್ಲಿ ಲಾಠೀ ಚಾರ್ಜುಗಳೂ ನಡೆದುವು; ಮಧುರೆಯಲ್ಲಿ ವಿದ್ಯಾರ್ಥಿಗಳು ದೊಡ್ಡ ಪ್ರದರ್ಶನ ನಡೆಸಿ ಪೋಲಿಸರ ಮೇಲೆ ಕಲ್ಲೆಸೆದುದರಿಂದ ಗುಂಡೆಸೆಯಲ್ಪಟ್ಟು ಇಬ್ಬರು ಮಡಿದು ಹಲವರು ಜಖಂಗೊಂಡರು. ದೇಶದಾದ್ಯಂತವಾಗಿ 'ಹಿಂದೀ ರಾಷ್ಟ್ರೀಯ ಯೋಧರ ರಕ್ಷಣಾನಿಧಿ'ಯು ಸಂಗ್ರಹಿಸಲ್ಪಡುತ್ತಿದೆ. ದೇಶದಲ್ಲೆದ್ದಿರುವ ಉದ್ವೇಗವೆಂತಹದೆಂಬುದನ್ನು ರಾಷ್ಟ್ರ ಪ್ರಮುಖರ ಈ ಕೆಲವು ನುಡಿಮುತ್ತುಗಳೇ ಸೂಚಿಸುತ್ತಿವೆ:—

"ಹಿಂದೀ ರಾಷ್ಟ್ರೀಯ ಯೋಧರ ಕೂದಲು ಮುಟ್ಟಕೂಡದು. ಅವರು ರಾಷ್ಟ್ರದ ಅಮೂಲ್ಯ ಸೊತ್ತು"-ಶರಶ್ಚಂದ್ರ ಬೋಸ್.

"ನಿಜವಾಗಿ ವಿಚಾರಣೆಗೆ ನಿಲ್ಲಬೇಕಾದ ಅಪರಾಧಿಯೆಂದರೆ ವೈಸರಾಯಿಗಳೇ"—ಸರ್ದಾರ್ ಪಟೇಲ್.

"ಈ ಧೀರರ ಅದೃಷ್ಟವನ್ನು ನೆನೆದು ಯಾರೂ ಕಾತರಿಸಬೇಡಿ. ಅವರಿಗೇನೇ ಆದರೂ ನೋಲು ಸರಕ್ಕಾರಕ್ಕೆ"—ಕೈಬರಲಿನ್.

"ಯಾವ ರಾಷ್ಟ್ರಕ್ಕೇನೇ ಆದರೂ ಭೂತಣಪ್ರಾಯರಾದ ವೀರಪುತ್ರರಿವರು. ಅವರನ್ನುಳಿಸಲಾರದೆ ಹೋದರೆ ಎಲ್ಲವೂ ವ್ಯರ್ಥ"—ಪಂಡಿತ್ ನೆಹರು.

"ಈ ಭಾರತೀಯ ರತ್ನಗಳು ವಿದೇಶೀ ಸರಕಾರದ ವಿಚಾರಣೆಗೊಳಗಾಗಿರುವದನ್ನು ಹೇಗೆ ಸಹಿಸಿಕೊಳ್ಳಲಿ?"—ಸರೋಜಿನೀ ದೇವಿ.

ANNOUNCEMENT.

We have the pleasure to announce that a branch of the Bank will shortly be opened at

317, Linghi Chetty Street,

MADRAS.

(ESTD. 1906 ಸ್ಥಾಪನೆ.)

CANARA BANK LIMITED

(Incorporated in British India, liability of Members Limited.)

ಜಾವಾದ ಸ್ವಾತಂತ್ರ್ಯ ಸಮರ.

ಭಾರತದ ಪ್ರತಿರೂಪ—ಭಾರತೀಯರಿಗೊಂದು ಪಾಠ.

ಡಚ್ಚರ ವಸಾಹತುಗಳಾದ ನೆದರ್ ಲೇಂಡ್ ಈಸ್ಟ್ ಇಂಡೀಸಿನ ಲೆಫ್ಟೆನೆಂಟ್-ಗವರ್ನರ್ ಡಾ| ಎಚ್. ಜೆ. ವಾನ್ ಮೂಕರು ಜಾವಾದ ಸ್ವಾತಂತ್ರ್ಯವಾದಿಗಳಿಗೆ ಒಂದು ಸಂಧಾನ ಸೂಚನೆ ಮುಂದಿಟ್ಟರು. ಇಂಡೋನೇಶಿಯರ ರಾಷ್ಟ್ರೀಯ ಸ್ಫೂರಣೆಯನ್ನು ನಾವು ಗೌರವಿಸುತ್ತೇವೆ. ಇಂಡೋನೇಶಿಯರ ಬಹುಮತವಾಗುವಂತೆ ಜಾವಾದ ಕೇಂದ್ರ ಸರಕಾರದಲ್ಲಿ ಸುಧಾರಣೆ ಮಾಡುತ್ತೇವೆ. ಸಂಸ್ಕೃತಿ, ಆರ್ಥಿಕ, ಮತ್ತು ಸಾಮಾಜಿಕ ರಂಗಗಳ ವರ್ಣವಾರು ಭೇದಗಳನ್ನು ತೊಡೆದು ಹಾಕುತ್ತೇವೆ. ಇವುಗಳಿಗೊಂದು ರೂಪಕೊಡುವುದಕ್ಕಾಗಿ ದುಂಡು ಮೇಜು ಸಮ್ಮೇಲನವೊಂದನ್ನು ಕರೆಯಲಾಗುವದೆಂಬುದೇ ಡಚ್ಚರ ಶಾಂತಿ ಸೂಚನೆ. ಈ ಸಮ್ಮೇಲನಕ್ಕೆ ಇಂಡೋನೇಶಿಯನರ ನಾಯಕ ಡಾ| ಸೋಯಿಕರ್ನೋರಿಗೆ ಆಮಂತ್ರಣವಲ್ಲವಂತೆ!

ಡಾ| ಸೋಯಿಕರ್ನೋರ ಧಿಕ್ಕಾರ

ಇಂಡೋನೇಶಿಯನ್ ರಿಪಬ್ಲಿಕನ ಅಧ್ಯಕ್ಷ ಡಾ|ಸೋಯಿಕರ್ನೋರು ಈ ಮಾಯಾಜಾಲದೊಳಗೆ ಬೀಳದೆ ಪೂರ್ಣ ಸ್ವಾತಂತ್ರ್ಯ ವಿನಹಾ ಬೇರಾವುದನ್ನೂ ಜಾವಾ ಅಂಗೀಕರಿಸದೆಂದು ನಿರಾಕರಿಸಿದ್ದಾರೆ. ತಮ್ಮ ಹಳೇ ಆಳ್ವಿಕೆಯನ್ನೇ ಪುನಃ ಜಾರಿಗೆ ತರುವ ಡಚ್ಚರ ಸಾಮ್ರಾಜ್ಯಲಾಲಸೆಗೆ ಇಂಡೋನೇಶಿಯದಿಂದಿಗೂ ಒಪ್ಪಲಾರದೆಂದು ಕಂಠೋಕ್ತವಾಗಿ ಹೇಳಿ 'ದುರಭಿಲಾಷೆಯಿಂದ ದುಡುಕಿದರೆ ರಕ್ತದ ಹೊಳೆಹರಿದೀತು; ಶವಗಳ ರಾಶಿ ಬಿದ್ದೀತು' ಎಂದು ಎಚ್ಚರಿಸಿದ್ದಾರೆ. ಮಾತ್ರವಲ್ಲ, ಜಾವಾದ ಅದ್ಯಂತ ಹರಡಿರುವ ಈ ಯುದ್ಧವನ್ನು ನಿಲ್ಲಿಸಲು ಮಧ್ಯಸ್ಥಿಕೆ ವಹಿಸಿರಿ ಎಂದು ಆಮೇರಿಕಾಧ್ಯಕ್ಷ ಟ್ರುಮೇನರನ್ನೂ, ಬ್ರಿಟಿಷ್ ಪ್ರಧಾನಿ ಆಟ್ಲಿಯವರನ್ನೂ ವಿಜ್ಞಾಪಿಸಿಕೊಂಡಿದ್ದಾರೆ. ಅದರಂತೆ ಹೊಲ್ಲೆಂಡಿನ ಸೇನೆಗಳಳಿಯುವುದನ್ನು ಉಗ್ರವಾಗಿ ಪ್ರತಿಭಟಿಸುವ ಸೂಚನೆಯೂ ಇಂಡೋನೇಶಿಯರಿಗೆ ದೊರೆತಿದೆ.

ಬ್ರಿಟಿಷರ ಅಧಿಕೃತ ಪ್ರಸಂಗ

ಆದರೆ ಜಾವಾದ ಸೌರಾಬಾಯಾ ಬಲಯದಲ್ಲಿರುವ ೨೦ನೇ ಬ್ರಿಟಿಷ್ ಹಿಂದೀ ದಳದ ಸೇನಾನಿ ಮೇಜರ್ ಜನರಲ್ ಮಾನ್ಸೆರ್ಗರು ಸೌರಾಬಾಯಾದ ರಿಬ್ಲಿಕನ್ ಗವರ್ನರ್ ಸೋಯಿಸ್ಕರ್ನೋರಿಗೆ ಯುದ್ಧಾಹ್ವಾನವನ್ನೆಕೊಟ್ಟು ಸೌರಬಾಯಾದ ಇಂಡೋನೇಶಿಯನ್ ಸ್ವಾತಂತ್ರ್ಯ ನಾಯಕರನ್ನು ತಮಗೊಪ್ಪಿಸಬೇಕೆಂದೂ ರಾಷ್ಟ್ರೀಯ ಸೇನೆಗಳನ್ನು ನಿಶ್ಶಸ್ತ್ರಮಾಡಬೇಕೆಂದೂ ಆಜ್ಞಾಪಿಸಿದಾಗ ಸೋಯೆಸ್ಕರ್ನೋ ಆದಕ್ಕೊಪ್ಪಲಿಲ್ಲ. ಈಗ ಒಂದೇ ಸವನೆ ಜಾವಾದ ಪ್ರಾಮುಖ್ಯ ನೌಕಾ ನಿಲ್ದಾಣವಾದ ಸೌಂಬಾಯಾದ ಮೇಲೆ ಆಕಾಶ ಮತ್ತು ಜಲ ಮಾರ್ಗವಾಗಿ ಬ್ರಿಟಿಷರ ಧಾಳಿ ನಡೆಯುತ್ತಿದೆ. ಭಾರತೀಯರ ಏಕ ಕಂಠದ ವಿರೋಧವನ್ನು ಅಲಕ್ಷಿಸಿ ಸೌರಬಾಯಾದೊಳಗೆ ಹಿಂದೀ ಸೇನೆಯನ್ನು ಹೊಗಿಸಲಾಗಿದೆ. ಆ ಕಡೆಯ ಪೂರ್ವ ಜಾವವನ್ನೆಲ್ಲಾ ಆಕ್ರಮಿಸಿಕೊಳ್ಳುವ ಯೋಜನೆ ಬ್ರಿಟಿಷರದು. ವೀರ ಇಂಡೋನೇಶಿಯನರು ಉಗ್ರ ಪ್ರತಿಭಟನೆ ಕೊಡುತ್ತಾ "ಶರಣಾಗುವದಕ್ಕಿಂತ ಸರ್ವನಾಶವಾಗುವದು ಲೇಸು" ಎಂಬ ಘೋಷ ದೊಡನೆ ದಹನಾಂದೋಲನಕ್ಕಾರಂಭಿಸಿದ್ದಾರೆ. ಜಾವಾದ ಸಮರವನ್ನು ತಮ್ಮ ಮೇಲೆಬಹಿನೆನಾಡಿಕೊಂಡು ಅಲ್ಲಿಯ ಸ್ವಾತಂತ್ರ್ಯ ಚಳವಳಿಯನ್ನು ನಾಶಮಾಡಲು ಬ್ರಿಟಿಷರಿಗೆ ಮುಖಾಮುಖಿ ಕಟಬಿಗಿದ್ದಾರೆ. ಮುಂದೇನು ಎಂಬ ಕುರಿತು ಸೋಯಿಕರ್ನೋ ಸರಕಾರದ ಗಾಢಾಲೋಚನೆಯಲ್ಲಿ ಬಿದ್ದಿದೆ; ಸ್ವಾತಂತ್ರ್ಯ ಪ್ರೇಮೀ ಮಾನವ ಜಗತ್ತೇ ಅವರ ಬೆಂಬಲಕ್ಕಿದೆ.

ಭಾರತದಂತಹ ಜಾವಾ

ಜಾವಾ ಮತ್ತು ಭಾರತಗಳ ಸ್ಥಿತಿಗತಿಗಳೊಳಗೆ ನಿಕಟ ಸಾಮ್ಯತೆಯಿದೆ. ಅವರ ಸ್ವಾತಂತ್ರ್ಯಾಭಿಲಾಷೆಯೂ ಭಾರತೀಯರ ಸ್ವಾತಂತ್ರ್ಯ ಬಯಕೆಯಂತಹದೇ; ಡಚ್ಚರು ಅನುಸರಿಸಿರುವ ಎಲ್ಲಾ ಮಾದರಿಗಳೂ ಬ್ರಿಟಿಷರದೇ. ಒಂದೇ ಒಂದು ವ್ಯತ್ಯಾಸ-ಇಲ್ಲಿಯ ನಾಯಕತ್ವ ಮಹಾತ್ಮಾ ಗಾಂಧಿಯಂತಹ ಅಹಿಂಸಾವಾದಿಯ ಕೈಯಲ್ಲಿರುವಾಗ, ಅಲ್ಲಿಯ ಧುರೀಣತ್ವ ಡಾ ಸೋಯಿಕರ್ನೋರಂತಹ ಶಕ್ತಿವಾದಿಯ ಕೈಯಲ್ಲಿದೆ. ಜಾವಾ 350 ವರುಷಗಳಿಂದ ಪರಾಧೀನ ರಾಷ್ಟ್ರ; 10 ಸಾವಿರ ಮೈಲು ದೂರದ ಹೊಲ್ಲೆಂಡು ಅದನ್ನಾಳುತ್ತಿದೆ. ಹಿಂದು ಸ್ಥಾನಕ್ಕೆ ನೇರಾಗಿ ಆಗ್ನೇಯ ಮೂಲೆಯಲ್ಲಿ, ಡಚ್ ಈಸ್ಟ್ ಇಂಡೀಸ್‌ನ ಬೋರ್ನಿಯೋ, ಸುಮಾತ್ರಾಗಳ ಆಡಳಿತೆಯಲ್ಲಿರುವಜಾವಾದ2ಮಿಲಿಯಮಂದಿಯ ಯಜಮಾನರು ಯುರೋಪಿನೊಂದು ಹಳ್ಳದಂತಿರುವ ದುರ್ಬಲ ರಾಷ್ಟ್ರ ಹೊಲ್ಲೆಂಡಿನ ೮ ಮಿಲಿಯ ಮಂದಿ! ನಾಜೀ ಜರ್ಮನಿಯ ಒಂದೇ ಒಂದು ಹೊಡೆತಕ್ಕೂ ನಿಲ್ಲಲಾರದೆ ಹೊಲ್ಲೆಂಡಿನ ರಾಣಿ ವಿಲ್‌ಹೆಲ್ಮಿನಾ ಲಂಡನಿಗೋಡಿ ಹೋದಮೇಲೂ ಜಾವಾದಲ್ಲಿ ಮಾತ್ರ ಡಚ್ಚರ ಆಳ್ವಿಕೆ ಸಾಗಿದ್ದಿತು. ಆದರೆ ಜಪಾನು ಯುದ್ಧಕ್ಕಿಳಿದು ಜಾವಾವನ್ನು ಮಾನಿದ ಹಣ್ಣನ್ನು ಕಬಳಿಸುವಂತೆ ಅತಿ ಸುಲಭದಲ್ಲಿ ಜಗಿದು ಬಿಟ್ಟಿತು. ತಮ್ಮ ಹಿತ ಸಂಬಂಧಗಳನ್ನರಿಯದ ಪರಕೀಯರೂ ತಮ್ಮ ರಕ್ಷಣೆ ಮಾಡಲಾಗದ ದುರ್ಬಲರೂ ಆದ ಡಚ್ಚರ ಕೈಕೆಳಗೆ ತಾವೆಂತಹ ನಿಸ್ಸಹಾಯಕ ಸ್ಥಿತಿಯಲ್ಲಿದ್ದೇವೆಂಬ ಕುರುಹು ಇಂಡೋನೇಶಿಯರು ಪೂರ್ತಿ ಕಣ್ತೆರೆದುದು ಆಗಲೇ.

ಡಚ್ಚರ ನಿರಂಕುಶಾಡಳಿತೆ ಜಾಪಾನರಾಕ್ರಮಿಸಿಕೊಳ್ಳುವ ವರೆಗೂ ಇಂಡೋನೇಶಿಯದಲ್ಲಿದ್ದುದು ಹೊಲ್ಲೆಂಡಿನ ನಿರಂಕುಶಾಧಿಕಾರ. ಇದು ರಬ್ಬರ್, ಎಣ್ಣೆ, ಕ್ವಿನೀನು ಮತ್ತು ಮೆಣಸು ಸಮೃದ್ಧಿಯಾಗಿ ದೊರೆಯುವ ಸ್ಥಳ. ಇಂತಹ ಕಾರಣವನ್ನು ಕೈ ಗಿಡ್ಡವಲೆಂಗರ ಡಚ್ಚರು ಎದೆ ಹಾರುತ್ತದೆ. ಕಾರಣ, ಪ್ರತಿ ವರುಷ 30 ಮಿಲಿಯ ಪೌಂಡುಗಳಿಗೂ ಮಿಕ್ಕಿದ ಮೊತ್ತವು ಜಾವಾದಿಂದ ಹೊಲ್ಲೆಂಡಿಗೆ ಹೋಗುತ್ತಿದೆ. ಆದರೆ ಅತ್ಯಂತ ಹೀನಾವಸ್ಥೆಯಲ್ಲಿರುವ ಅಲ್ಲಿಯ ಜನ ಜೀವನದ ಮಟ್ಟವನ್ನು ಸುಧಾರಿಸುವ ಕಡೆಗೆ ಸರಕಾರದ ಲಕ್ಷ್ಯವಿರಲಿಲ್ಲ. ಅಲ್ಲೊಂದು ನಾಮ ಮಾತ್ರ 'ಜನತಾ ಕೌನ್ಸಿಲು' ಇದೆ. ಆದರೆ ಅದು ಕೇವಲ ಸಲಹೆಗಾರ ಮಂಡಲಿಯಾಗಿದೆ ಹೊರತು ರಾಜನ ಸಭೆಯನ್ನಿನ್ನಿಲ್ಲ. ಆದರೆ 60 ಮೆಂಬರರ ಪೈಕಿ 28 ಮಂದಿಯನ್ನು ಸರಕಾರವೇ ನೇಮಿಸಿಕೊಳ್ಳುತ್ತಿದೆ ಸೇಕಡಾ ಒಬ್ಬನಿಗೆ ಮಾತ್ರ ಅಲ್ಲಿ ಮತಾಧಿಕಾರವಿದೆ. ಶೇಕಡಾ 90 ಮಂದಿ ಅನಕ್ಷರಸ್ಥರಾಗಿದ್ದಾರೆ. ಯುದ್ಧಾನಂತರ ತನ್ನ ಸಾಮ್ರಾಜ್ಯದ ಎಲ್ಲಾ ರಾಷ್ಟ್ರಗಳಲ್ಲಿಯೂ ಸುಧಾರಣೆ ಜ್ಯಾರಿ ಮಾಡುವೆನೆಂದು ರಾಣಿ ವಿಲ್‌ಹೆಲ್ಮಿನಾ 1942ರಲ್ಲಿ ಘೋಷಿಸಿದ್ದಳು. ಆದರೆ ಆಗ ಕೂಡಾ ಜಾವಾದ ಸ್ವಾತಂತ್ರ್ಯ ಪ್ರೇಮಿಗಳು ಅದಕ್ಕೆ ಬೆಲೆ ಕೊಟ್ಟಿರಲಿಲ್ಲ.

ಸ್ವಾತಂತ್ರ್ಯ ಹೋರಾಟ

ಜಾಪಾನರು ತಮ್ಮ ಮೂಲ ನೆಲದಲ್ಲಿ ದೊಗ್ಗಾಲುರಿದೆ ಮೇಲೂ ಜಾವಾ ಜಾಪಾನರ ಕೈಯಲ್ಲೇ ಇದ್ದಿತು. ಶರಣಾಗತರ್ಗಳಂತೆ ಅವರ ಕೈಯಿಂದ ಅಧಿಕಾರ ಕಸಗೊಳ್ಳುವ ಕಾರ್ಯವು ಕೂಡಲೇ ನಡೆಯಿತು. ಆದರೆ ಜಾಪಾನೀ ಸೇನೆಗಳನ್ನು ಪೂರ್ತಿ ನಿಶ್ಶಸ್ತ್ರಗೊಳಿಸಲು ಇಗುವರೆಗೂ ಆಗಿಲ್ಲ. ಅಲ್ಲಿ ಸುಮಾರು 50 ಸಾವಿರ ಸಶಸ್ತ್ರ ಜಾಪಾನೀ ಯೋಧರಿದ್ದಾರೆಂದೂ ಜಾವಾದ ಗೊಂದಲದ ದೆಸೆಯಿಂದ ಅವರನ್ನು ನಿಶ್ಶಸ್ತ್ರೀಕರಿಸಲು ಆಗಿಲ್ಲವೆಂದೂ ನೊಸ್ಕೆ ತಾನೇ ಬ್ರಿಟಿಷಿನ ಯುದ್ಧ ಕಾರ್ಯದರ್ಶಿಯಂದಿದ್ದಾರೆ. ಈ ಜಾಪಾನೀ ಸೇನೆಗಳನ್ನು ಬ್ರಿಟಿಷರು ಜಾವಾದ ಸ್ವಾತಂತ್ರ್ಯ ಯೋಧರ ಮೇಲೀಗ ಬಿಡುತಿದ್ದಾರೆ. ಆ ಪೈಕಿ 20 ಸಾವಿರ ಸಶಸ್ತ್ರ ಯೋಧರು ಸ್ವೇಚ್ಛೆಯಿಂದ ಇಂಡೋನೇಶಿಯನರ ಪಕ್ಷ ವಹಿಸಿದ್ದಾರಂತೆ. ಯುದ್ಧ ಮುಗಿದೊಡನೆ ಪುನಃ ಯಥಾ ಪ್ರಕಾರ ತಮ್ಮ ಮೇಲಧಿಕಾರವು ಡಚ್ಚರಿಗೆ ಹೋಗುವದನ್ನು ಸಹಿಸಲಾರದೆ ಜಾವಾ ಸೋಯಿಕರ್ನೋರ ನಾಯಕತ್ವದಲ್ಲಿ ಇಂಡೋನೇಶಿಯರೆಬ್ಬಿಸಿರುವ ಹೋರಾಟವೇ ಜಾವಾದ ಸ್ವಾತಂತ್ರ್ಯ ಸಮರ. ಅದೀಗ ಎರಡು ತಿಂಗಳಿಗೂ ಮಿಕ್ಕಿ ನಡೆದಿದೆ. ಇಡೀ ಲೋಕದ ಸ್ವಾತಂತ್ರ್ಯ ಪ್ರೇಮಿಗಳ ಸಹಾನುಭೂತಿ ಸಂಪಾದಿಸಿದೆ. ಆಸ್ಟ್ರೇಲಿಯ, ಬೊಂಬಾಯಿ ಮೊದಲಾದ ಕಡೆಗಳಲ್ಲಿ ಡಚ್ ಸೇನೆ, ಸಲಕರಣೆಗಳನ್ನೊಯ್ಯುವ ಹಡಗುಗಳ ನೌಕರರು ಕೂಡಾ ಮುಷ್ಕರ ಹಿಡಿದಿದ್ದಾರೆ. 'ಬ್ರಿಟಿಷರ ಲಜ್ಜಾವಹ ಕಾರ್ಯ' ಎಂದು ನೆಹರುಗಳು ಜಾವಾ ದಬ್ಬಾಳಿಕೆಯನ್ನು ಖಂಡಿಸಿ, ಸಾಮ್ರಾಜ್ಯ ತೃಪೆಯಿಂದ ಬಿಕ್ಕೆ ಹೀನವಾದ ಆಟವನ್ನು ನಡೆಯಲಾರದೆಂದು ಎಚ್ಚರಿಸಿದ್ದಾರೆ. ಜಾವಾಕ್ಕೆ ಹೋಗಲು ಪಂಡಿತ ನೆಹರುಗಳಿಗೆ ಅನುಮತಿ ಕೊಡದ ಹಿಂದೀ ಸರಕಾರದ ವರ್ತನೆಯನ್ನು ಲಂಡನಿನ ಸಹಕಾರಿಗಳೆಲ್ಲರೂ ಖಂಡಿಸಿದ್ದಾರೆ.

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಅದು

'ಜುಪಿಟರ್' (ದೇವತೆಗಳ ರಾಜ) ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ

'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ, ವಿಜಂಟರು ಮತ್ತು ಬ್ರೋಕರ್ಸ್‌ರಿಗೂ ಉತ್ತಮರಾಗುವವರೂ ಕೂಡಲೇ ಬರೆಯಿರಿ:—

ಸಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಸ್ವಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಆರೋಗ್ಯವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೯ ದಿವಸಗಳಾಚೆಗೂ ಹೆಚ್ಚು ಕೆಲಸ ಇರದಿವಸಗಳಿಗೆ ಬರುವದು. ಆದರೆ ಕೇವಲ ೪ ದಿವಸಗಳೇ ಒಂದು ಬಾಣಂತನವೆಲ್ಲ ಸಾಕಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾಲಬೈಲು, ದ.ಕ.

The Canara Banking Corporation Limited.

((Incorporated in British India, with limited Liability.)

Estd 1906.

Head Office: **UDIPI**, South Kanara.

ANNOUNCEMENT

A branch of the bank has been opened at JEW TOWN, MATTANCHERRY, COCHIN, on 7-11-1945.

ನವಯುಗ

ಉಡುಪಿ, ಗುರುವಾರ ೧೫-೧೧-'೪೫.

ಧಾನ್ಯಸಂಗ್ರಹಕ್ರಮ.

ದ. ಕ. ಜಿಲ್ಲೆಯಲ್ಲಿ ಸರಕಾರವಂಗೀಕರಿಸಿರುವ ಅಕ್ಕಿ ಭತ್ತ ಸಂಗ್ರಹದ ವಿಧಾನಗಳನ್ನು ವಿವರಿಸುವ ಆವಶ್ಯಕತೆಯುಳಿದಿಲ್ಲ. ಕಳೆದೆರಡು ವರುಷಗಳಲ್ಲಿ ಅವರೀದಾದ ಸುಲಿಗೆಯ ಸ್ಮರಣೆಯಿಲ್ಲದೆ ದಕ್ಷಿಣ ಕನ್ನಡದ ಯಾವನೊಬ್ಬ ರೈತನ ಒಂದೇ ಒಂದು ದಿನವಾದರೂ ಕಳೆದಿರಲಾರದು. ಈ ವರುಷದ ರೆಕ್ವಿಸಿಶನ್ ನಿಯಮಗಳಲ್ಲಿ ಕಳದ ವರುಷದಲ್ಲಿರದ ಒಂದು ಬದಲಾವಣೆಯಾಗಿದೆ. ಮಾಲಕರಿಗೆ ಸಂದಾಯವಾಗಿ ತಕ್ಕ ಗೇಣಿಯನ್ನು ವಕ್ಕಲುಗಳಿಂದಲೇ ರಿಕ್ವಿಶಿಶನ್ ಮಾಡಲಾಗಿದೆ. ಮಾಲಕರಿಗೆ ತಮ್ಮ ಸ್ವಂತೋಪಯೋಗಕ್ಕಾಗಿ ಅಕ್ಕಿ ಭತ್ತ ಬೇಕಾಗಿದ್ದರೆ ಆ ಅಂಶವನ್ನು ವಕ್ಕಲುಗಳಿಂದ ಪಡಕೊಳ್ಳುವರೆ ಅಧಿಕಾರಿಗಳಿಂದ ಪರ್ಮಿಟು ಪಡಕೊಳ್ಳಬೇಕು. ಹಿಂದಿನ ವರುಷ ಗೇಣಿ ಅಕ್ಕಿ ಮಾಲಕರ ದೆಂದೊಪ್ಪಿಕೊಂಡು ಅದನ್ನು ಹುಟ್ಟುವಳಿಯ ಉಳಿತಾಯಾಂಶವಾಗಿ ಅವರಿಂದಲೇ ಪಡಕೊಳ್ಳಲಾಗಿತ್ತು. ಇದೊಂದು ಅಲ್ಪ ಬಿಟ್ಟರೆ ಮಿಕ್ಕೆಲ್ಲಾ ಕ್ರಮಗಳೂ ಹಿಂದಿನವೇ. ರಿಕ್ವಿಜಿಶನ್ ಸಂಬಂಧದ ಸರಕಾರೀ ಆಜ್ಞೆಯು ಮೂಲ ಭೂತ ನ್ಯಾಯವೊಂದನ್ನಾಧರಿಸಿ ನಿಂತಿದೆ. ಕೇವಲ ಉಳಿತಾಯಾಂಶವನ್ನು ಸಂಗ್ರಹಿಸುವದೊಂದೇ ಅದರಲ್ಲಿರುವ ಅಧಿಕಾರ. ಸಾಗುವಳ್ಳಿದಾರರ ಬೇಸಾಯ ವೆಚ್ಚ, ಮನೇ ಖರ್ಚು ಮತ್ತು ಇತರ ಆವಶ್ಯಕತೆಗಳಿಗೆ ಬೇಕಾಗುವ ಅಂಶವು ಈ ಆಜ್ಞೆಯನುಸಾರವಾಗಿ ಅಸ್ಪರ್ಶ. ಅದನ್ನು ಕಳೆದು ಉಳಿಯುವದೇ 'ಉಳಿತಾಯ'—ಅಧಿಕಾರಿಗಳು ಸರಕಾರೀ ಆಜ್ಞಾನುಸಾರವಾಗಿ ರಿಕ್ವಿಜಿಶನ್ ಮಾಡಬೇಕಾದ ಭಾಗ. ತಮ್ಮ ಆವಶ್ಯಕತೆಗೆ ಮಿಕ್ಕಿದ್ದನ್ನು ಇಟ್ಟುಕೊಳ್ಳುವ ಅಧಿಕಾರ ರೈತರಿಗೆ ಹೇಗಿಲ್ಲವೋ, ಹಾಗೆಯೇ ರೈತರ ವೆಚ್ಚದ ಅಂಶವನ್ನು ಮುಟ್ಟುವ ಅಧಿಕಾರವೂ ಕಲೆಕ್ಟರರ ಏಜಂಟರುಗಳಿಗಿಲ್ಲ. ಈ ನ್ಯಾಯವೊಂದಲ್ಲವಾದರೆ 'ಉಳಿತಾಯಾಂಶದ ಸಂಗ್ರಹ' ಎನ್ನುವ ಬದಲಿಗೆ 'ನಖ ಶಿಖಾಂತ ಸುಲಿಗೆ' ಯೆಂದೇ ಅದಕ್ಕೆ ಹೆಸರಾಗುತಿತ್ತು. ಸದ್ಯ ಹಾಗೆ ಕರೆಯಲ್ಪಡುತ್ತಿಲ್ಲವಾದರೂ ಕಾರ್ಯತಃ ಆ ಹೆಸರಿಗದು ಯೋಗ್ಯವನ್ನಿಸಿದೆ ಎಂಬುದು ಅತ್ಯಂತ ವೇದನೀಯ.

ಆನ್ನವುಣ್ಣುವ ಅಭ್ಯಾಸವಿರುವ ಜೀವಿಗಳಿಂದ, ತಾವೀ ಅಕ್ಕಿ ಬತ್ತ ಸಂಗ್ರಹಿಸುತಿದ್ದೇವೆಂಬ ಸ್ಮರಣೆಯೇ ಇಲ್ಲದೆ, ಅಗರಗಳಿಂದ ಉಪ್ಪನ್ನು ಬಾಚಿಕೊಳ್ಳುವಂತೆ ಎಲ್ಲಾ ಧಾನ್ಯಗಳನ್ನೂ ವಶಪಡಿಸಿಕೊಂಡು ಒಮ್ಮೆ ತಳ ಸ್ವಚ್ಛಮಾಡಿ ಬಿಡಲು ರಿಕ್ವಿಜಿಶನ್ ಅಧಿಕಾರಿಗಳು ನಡುಬಿಗಿದಂತಿವೆ! ಸಾಗುವಳ್ಳಿದಾರರ ಸ್ವಂತ ವೆಚ್ಚಗಳ ಕಡೆಗೆ ಅವರು ಎಳ್ಳಷ್ಟು ಲಕ್ಷ್ಯಗೊಟ್ಟಲ್ಲ. ಒಂದು ಎಕ್ರೆ ಸ್ಥಳದಲ್ಲಿ 40 ಮುಡಿ ಭತ್ತ ಬೆಳೆಯಲೇಬೇಕೆಂದೋ, ಗೇಣಿ ಸಂಖ್ಯೆಯನ್ನು ಫ್ಲೇ ಕೂಡಿಸಿಯೋ ಅತ್ಯುದಾರ ಬುದ್ಧಿಯ ಅಂದಾಜು ಕಟ್ಟಿ.. ... .'ಮುಡಿಗಳನ್ನು ...ರೊಳಗೆ ಸ್ಟೋರುಗಳಿಗೆ ಹಾಕಬೇಕು" ಎಂದಾಜ್ಞೆಗಳನ್ನು ಛಡಾಯಿಸಿ ಬಿಟ್ಟಿದ್ದಾರೆ. ಸರಕಾರೀ ನೋಟೀಸಿನಲ್ಲಿ ಉಂಟೆಂದು, ಸಾಗುವಳ್ಳಿಯಲ್ಲಿ ಹುಟ್ಟಿದಿದ್ದಷ್ಟು ಧಾನ್ಯವನ್ನು ತಂದೊಪ್ಪಿಸುವ ಮಾಯಾಜಾಲವು ರೈತರಿಗೆ ತಿಳಿಯದು. ಆ ವಿದ್ಯೆ ಕಲಿಯದ ತಪ್ಪಿಗೆ ಕ್ಷಮೆಯಿರಬಹುದು. ಆದರೆ ಅತನಲ್ಲಿದ್ದ ಎಲ್ಲಾ ಧಾನ್ಯವೂ ರೆಕ್ವಿಶಿಶನ್ ಆಗಿ ಜೋಗಿದೆ ಎಂಬ ದೂರು ಹಲವು ಕಡೆಗಳಿಂದ ಬಂದಿದೆ. 'ರೈತರ ಸ್ವಂತೋಪಯೋಗ' ಎಂಬ ವಿಷಯವೊಂದು ತಮ್ಮ ಲೋಕದಲ್ಲೆ ಇಲ್ಲವೆಂಬಂತೆ ಅಧಿಕಾರಿಗಳು ಹೆಚ್ಚಿನ ಕಡೆಗಳಲ್ಲಿ ವರ್ತಿಸಿದ್ದಾರೆ. ತಮಗೂ ಊಟದ ಅಭ್ಯಾಸವಿರುವದನ್ನು ಅಧಿಕಾರಿಗಳ ಜ್ಞಾಪಕಕ್ಕೆ ತಂದಾಗ 'ಕಡೆಗೆ ರೀಶನ್ ಕಾರ್ಡು ಪಡಕೊಳ್ಳಿ' ಎಂಬ ಉತ್ತರ ಬರುತ್ತಿದೆಯಂತೆ. ತಾವು ಬೆವರಿಳಿಸಿ ಬೆಳೆಯಿಸಿದ ಪ್ರತಿಫಲವನ್ನು ಈಗ ಮುಡಿಗೆ ರೂ. 10ರ ಬೆಲೆಗೆ ಸ್ಟೋರುಗಳಿಗೊಪ್ಪಿಸಿ ಕೊನೆಗೆ ಅದಕ್ಕೇನೇ ಅಥವಾ ಅದಕ್ಕಿಂತ ಕಳಕೆಯ ಧಾನ್ಯಕ್ಕೆ ರೂ. 12ರಿಂದ 14ರ ವರೆಗೆ ಬೆಲೆತೆತ್ತು ರೈತರು ತಂದುಣ್ಣಬೇಕು! ರೆಕ್ವಿಶಿಶನ್ ಪದ್ಧತಿಯಲ್ಲಾಗಿರುವ ಇಂತಹ ಪ್ರಮಾದಗಳ ಕುರಿತು ಅಕ್ಷೇಪ ಅಥವಾ ಆಪೀಲು ಮಾಡಲು ಅವಕಾಶವಿಲ್ಲ; ಸರಿಯಾದರೀತಿಯಿಂದಅವುಗಳ ವಿಚಾರಣೆ ನಡೆಸುವ ಸಂಸ್ಥಾಯವೇ ಇಲ್ಲ. ಇವೆಲ್ಲಾ ಅತಿರೇಕಗಳ ಕುರಿತು ದ. ಕ. ಜನತಾ ಆಹಾರ ಸಮಿತಿಯು ಮಾಡಿದ್ದ ನಿರ್ಧಾರಗಳನ್ನು ಇದೇ ತಿಂಗಳ ತಾ. 1ರ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಈ ಕುರಿತು ಪರ್ಯಾಲೋಚಿಸಲು ಇದೇ ತಾ. 17ಕ್ಕೆ ಉಡುಪಿಯಲ್ಲಿ ಕರೆಯಲ್ಪಟ್ಟಿರುವ ಬೇಸಾಯಗಾರರ ಸಭೆಯು ಪ್ರಕಟಣೆಯು ಈ ಸಂಚಿಕೆಯ ಬೇರೊಂದೆಡೆಯಲ್ಲಿದೆ. ತಾವು ಒಗ್ಗಟ್ಟಿನಿಂದ ಸಾಧಿಸಿಯೇ ತೀರಿದ ಆಪತ್ತಿನಿಂದ ಪಾರಾಗಬೇಕು ಎಂಬುದನ್ನರಿತುಕೊಂಡು ರೈತರೆಲ್ಲಾ ಸಂಘಟಿತರಾಗಲಿ ಎಂದು ವಿಜ್ಞಾಪಿಸುತ್ತೇವೆ.

ದಾಸ್ಯವಿರೋಧಿ ಭೈರವ, ರುದ್ರಕಾಳಿ!

ನೇತಾಜಿ ಬೋಸ್

ಜಾಪಾನರ ಪಂಚಮ ದಳದಂತಿದ್ದ 'ಅಜಾದ್ ಹಿಂದ್ ಫೌಜ್' ಸುಭಾಸರು ಹೋದೊಡನೆ, ರಾಮ ದೊರೆತ ವಾನರ ಸೇನೆಯಂತೆ ಅದ್ಭುತ ರೀತಿಯಿಂದ ಸ್ವತಂತ್ರ ಸಂಘಟನೆಗೊಂಡಿತು. ಸುಭಾಸರೆಂದೊಡನೆ-ಅವರ ಚಿತ್ರ ಕಂತಲ್ಲಿ ಕೂಡಾ-ಒರಟು ಜಪಾನರು ತಲೆಬಾಗುತಿದ್ದರು. ಎಷ್ಟೇ ದೊಡ್ಡ ಜಾಪಾನೀ ಅಧಿಕಾರಿಯಾದರೂ ನೇತಾಜಿಯಿದಿರು ವಿನೀತನಾಗುತಿದ್ದ. ಅಜಾದ್ ಹಿಂದ್ ಸರಕಾರವನ್ನು ಮನ್ನಿಸಿ ಜಾಪಾನರು ಸುಭಾಸರ ಸನ್ನಿಧಿಗಾಗಿ ತಮ್ಮ ರಾಯಭಾರಿಯನ್ನು ರಂಗೂನಿಗೆ ಕಳುಹಿಸಿಕೊಟ್ಟಿದ್ದರು. ಆದರೆ ಆ ಮನುಷ್ಯ ತನ್ನ ಅಧಿಕಾರ ಪತ್ರವನ್ನು ಬಿಟ್ಟುಬಂದಿದ್ದ. ಈ ರಾಯಸ ರಹಿತ ರಾಯಭಾರಿಗೆ ಬೋಸರು ಭೇಟಿಯನ್ನು ಕೂಡಾ ಕೊಡಲಿಲ್ಲ. ಕೊನೆಗಾತ ಪುನಃ ಟೋಕಿಯೋವಿಗೆ ಹೋಗಿ ಅಧಿಕಾರ ಪತ್ರ ತರಬೇಕಾಯಿತು. ಸೊತ್ತು ದೊರೆಯಿತಂತೆ. ಸಭೆಗಳಲ್ಲಿ ಬೋಸರ ಕೊರಳಿಗೆ ಒಂದೊಂದು ಪುಷ್ಪಹಾರವು ಏಲಮಿಗೆ ಬಿದ್ದಾಗ ಮೂರುನಾಲ್ಕು ಲಕ್ಷ ರೂ.ಗಳಿಗೂ ಮಾರಾಟವಾಗಿ ಹೋಗುತ್ತಿತ್ತಂತೆ. ಒಬ್ಬ ಪಂಜಾಬೀ ಯುವಕನಂತೂ ತನ್ನ ಸರ್ವಸ್ವವನ್ನೂ ಕೊಟ್ಟು ಒಂದು ನೇತಾಜೀ ಕುಸುಮಹಾರವನ್ನು ವಹಿಸಿಕೊಂಡು ಅದನ್ನು ಎದೆ ತಲೆಗೊತ್ತಿಕೊಳ್ಳುತ್ತಾ ಕುಣಿದಾಡಿದ. ಸುಭಾಸರ ಜನ್ಮದಿನದಲ್ಲಿ ಅವರಿಗೆ ಭಂಗಾರದ ತುಲಾಭಾರ ನಡಿಸಿದ್ದರು. ಹೆಂಗಸರೆಲ್ಲಾ ತಮ್ಮ ಆಭರಣಗಳನ್ನು ಆ ತಕ್ಕಡಿಗಿಟ್ಟಿದ್ದರು. ಬೋಸರಿಗೆ ಅಲ್ಲಿ ದೊರೆತಿದ್ದ ಗೌರವಗಳ ವಾರ್ತೆ ರೋಮಾಂಚವನ್ನುಂಟುಮಾಡುತ್ತಿದೆ.

ಕೆಪ್ಟನ್ ಲಕ್ಷ್ಮಿ

ಇವರು ಮದ್ರಾಸಿನವರು. ಮದ್ರಾಸ್ ನಗರದಿಂದ ಕೇಂದ್ರ ಎಸೆಂಬ್ಲಿಗೆ ಕಾಂಗ್ರೆಸ್ ಹುರಿಯಾಳಾಗಿ ನಿಂತಿರುವ ಶ್ರೀಮತಿ

ದಕ್ಷಿಣ ಕನ್ನಡ ಪುರಾತನ ಹಾಗೂ ಪ್ರಸಿದ್ಧ ದೇವಸ್ಥಾನಗಳಲ್ಲೊಂದಾದ

ಹಿರಿಯಡ್ಕ

ಮಹತೋಭಾರ ಶ್ರೀ ವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿ

ಸಂಗ್ರಹದ ಬಗ್ಗೆ ತಾರೀಕು **23—1—1946**ರಲ್ಲಿ

ಹಿರಿಯಡ್ಕದಲ್ಲಿ ಪ್ರಚಂಡ ದಶಾವತಾರ

ಜೋಡಾಟ ಜರಗಲಿದೆ.

—: ಟಿಕೇಟಿನ ದರಗಳು :—

I ಕ್ಲಾಸು	ರೂ. 100	IV ಕ್ಲಾಸು	ರೂ. 10
II ,,	,, 50	V ,,	,, 5
III ,,	,, 25	VI ,,	,, 2

ಜೀರ್ಣೋದ್ಧಾರಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಬೇಕಾಗಬಹುದೆಂದು ಅಂದಾಜು ಮಾಡಲಾಗಿರುವುದರಿಂದ ಮಹಾಜನರು ಅತ್ಯಧಿಕ ಟಿಕೇಟುಗಳನ್ನು ಪಡಕೊಂಡು ಈ ಸತ್ಕಾರ್ಯಕ್ಕೆ ಉದಾರ ಸಹಾಯ ಮಾಡುವಂತೆ ಹಾರೈಸುತ್ತೇನೆ.

ಎ. ಎಂ. ನಾಗಣ್ಣ ಹೆಗ್ಡೆ,

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್; ಮೆನೇಜಿಂಗ್ ಟ್ರಸ್ಟಿ—ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, ಹಿರಿಯಡ್ಕ, ದ. ಕನ್ನಡ.

ರು ಜಾಪಾನಾಕ್ರಮಿತ ಸರ್ವ ರಾಷ್ಟ್ರಗಳಲ್ಲಿದ್ದ ಹಿಂದೀಯರೂ ನೇತಾಜಿಯ ಮಾತೆಂದರೆ ಪ್ರಾಣಬಿಡುತಿದ್ದರು. ರಂಗೂನಿನ ಸಭೆಯೊಂದರಲ್ಲಿ ಸ್ಫೂರ್ತಿದಾಯೀ ಭಾಷಣಕೊಟ್ಟು ಕೊನೆಗೆ 'ಸ್ವಾತಂತ್ರ್ಯಸಾಧನೆಯ ಪ್ರತಿಜ್ಞೆಗೆ ನಿಮ್ಮ ರಕ್ತದಿಂದ ಸಹಿ ಹಾಕಿರಿ' ಎಂದು ನೇತಾಜಿ ಕೇಳಿಕೊಂಡಾಗ ಮುಂದಾಗಿ ಮಹಿಳೆಯರೂ,ಅವರನ್ನನುಸರಿಸಿ ಪುರುಷರೂ ತಮ್ಮ ಬೆರಳುಗಳನ್ನು ಕೊಯ್ದುಕೊಂಡು ರುಧಿರ ದಸ್ಕತುಗಳನ್ನೆ ಕೆದಿದ್ದರು. ಮಲಯದ ಮುಸಲ್ಮಾನ್ ಕೋಟ್ಯಾಧೀಶನೊಬ್ಬನೊಡನೆ ಸ್ವತಂತ್ರ ಬೇಂಕೊಂದನ್ನು ಸ್ಥಾಪಿಸುವ ಪ್ರಸ್ತಾಪವನ್ನೊಮ್ಮೆ ಬೋಸರೆತ್ತಿದ್ದೇ ತಡ; ಆತ ತನ್ನ ಭಂಡಾರದಿಂದ 30 ಲಕ್ಷ ಹಾಕಿ, ಇತರರಿಂದ 20 ಲಕ್ಷ ಕೂಡಿಸಿ 50 ಲಕ್ಷದ ಮೂಲಧನದಿಂದ ರಂಗೂನಿನಲ್ಲಿ ಬೇಂಕನ್ನು ಸ್ಥಾಪಿಸಿದ್ದ. ಬ್ರಿಟಿಷರು ಆ ಬೇಂಕ ನ್ನಾಕ್ರಮಿಸಿಕೊಂಡಾಗ ರೇವಣಾತಿಗಳೆಲ್ಲಾ ಸಾವತಿಯಾಗಿದ್ದರೂ 30 ಲಕ್ಷ ರೂ.ಗಳ ಅಮ್ಮು ಸ್ವಾಮಿನಾಥನರ ಪುತ್ರಿ, ಅವಿವಾಹಿತೆ, ಡಾಕ್ಟರೀ ಮತ್ತು ಮಿಲಿಟರೀ ತರಿಕ್ಷಣ ಪಡೆದವರು. 'ಝಾನ್ಸಿ ರಾಣಿ ಸೇನೆ' ಎಂಬ ಹಿಂದೀ ಮಹಿಳಾ ದಳವನ್ನವರು ನಿರ್ಮಿಸಿಕೊಂಡಿದ್ದರು. ಪ್ರಥಮತಃ ಈ ದಳವು 'ಅಜಾದ್ ಹಿಂದ್ ಫೌಜ್'ನ ರೋಗಿಗಳ ಶುಶ್ರೂಷೆ ನಡೆಸುತಿದ್ದಿತು. ಕೊನೆಗೆ ಮೇಜರ್ ಲಕ್ಷ್ಮಿ ಮತ್ತು ಅವ್ವಿದ್ದ ಗುಜರಾಥ್ ಬಂಗಾಳಿ, ಮಹಾ ರಾಷ್ಟ್ರಗಳ ಇಬ್ಬರಿಬ್ಬರು ಮಹಿಳೆಯರು ತಮ್ಮ ಸ್ವರಕ್ತದಿಂದ ಸಹಿಹಾಕಿ ತಾವೂ ಯುದ್ಧರಂಗಕ್ಕೆ ತೆರಳುವೆವೆಂದು ಬೋಸರಿಗೊಂದು ಅರ್ಜಿ ಬರಕೊಂಡರು. ಅರ್ಜಿ ಸ್ವೀಕರಿಸಲ್ಪಟ್ಟಿತು. ಈ ಮಹಿಳಾ ಸೇನೆಯು ಮಜಾ ಮಜಾ ಗೊಲ್ಲಾ ಸಾಹಸ ಪ್ರದರ್ಶಿಸಿ ಕೊನೆಯ ಭಾಗದಲ್ಲಿ ಮತ್ತೊಮ್ಮೆ ಶುಶ್ರೂಷಾ ದಳವಾಗಿಯೇ ಉಳಿಯಿತು. ಆದಕ್ಕೀಗ ವರುಷದ ಮೂರ್ಚೆ ಆಥವಾ ಎಪ್ರಿಲಿನಲ್ಲಿ ಬರ್ಮಕ್ಕೆ ಮಾಯುಲ್ಯೋ ಎಂಬಲ್ಲಿ ಬ್ರಿಟಿಷರು ಈ ಧೀರ ಕುಮಾರಿಯನ್ನು ಸೆರೆಹಿಡಿದರು. ಮೊನ್ನೆ

ಸ್ಥಾದಿಗಳಲ್ಲಿ ಮತ್ತೂ ಜಾಪಾನಿರಿದ್ದುದರಿಂದ ಸುಮಾರು 100 ಮೈಲಿಷ್ಟು ನದಿಯನ್ನು ದಾಟಿಕೊಂಡೇ ಈ ಭಾರತಲಕ್ಷ್ಮಿಯನ್ನು ರಂಗೂನಿಗೆ ತಂದು ಅಲ್ಲಿ ಆರ ಸ್ನೇಹಿತ ರೊಬ್ಬರ ಮನೆಯಲ್ಲಿಟ್ಟು, ತಿರುಗಾಡದಂತೆಯೂ ವಾರಕ್ಕೊಮ್ಮೆ ಪೋಲೀಸರಿಗೆ ವರದಿಕೊಡುವಂತೆಯೂ ನಿರ್ಬಂಧಹಾಕಿದರು. ಅಲ್ಲಿ ಬ್ರಿಟಷ್ ಮೇಜರರು ಹಾಕಿದ ಪ್ರಶ್ನೆಗಳಿಗೆ ಕೆಪ್ಟನ್ ಲಕ್ಷ್ಮಿ ಕೆನ್ನೇ ತಾಡನದಂತಹ ಉತ್ತರಗಳನ್ನು ಕೊಟ್ಟರು. ಆದರೆ ತನ್ನ ಸೇನೆಯ ಇತರ ಮಹಿಳೆಯರನ್ನು ಬ್ರಿಟಷ್ ಮೇಜರರು ಪ್ರಶ್ನೆಗಳಿಂದ ಪೀಡಿಸಹತ್ತಿದಾಗ ಮೇಜರ್ ಲಕ್ಷ್ಮಿ ಸಿಂಹಿಣಿಯಂತಾಗಿ "ನಿಮಗೆ ಅಕ್ಕತಂಗಿಯರು ಅಥವಾ ಕುಮಾರಿಯರಿಲ್ಲವೆ? ನಿಮ್ಮನ್ನು ಉತ್ತರಿಸತಕ್ಕವಳು ನಾನಿರುವಾಗ ಅವರಿಗೆ ಏಕೆ ಉಪದ್ರಕೊಡುತ್ತೀರಿ? ಅವರ ಕಮಾಂಡರ್ ಆಗಿದ್ದವಳು ನಾನು. ಕೇಳುವಂತಹದನ್ನೆಲ್ಲಾ ನನ್ನೊಡನೆ ಕೇಳಿ" ಎಂದುಬಿಟ್ಟರು. 'ನಿಮಗೆ ಶಸ್ತ್ರಗಳನ್ನು ಉಪಯೋಗಿಸಲು ಗೊತ್ತೆ?' ಎಂಬ ಪ್ರಶ್ನೆಗೆ 'ಹೌದು' ಎಂದರು ಲಕ್ಷ್ಮಿ. "ಯಾವಯಾವ ಶಸ್ತ್ರಗಳನ್ನು?" ಎಂಬ ಪ್ರಶ್ನೆ ಬಂತು. "ಪಿಸ್ತೂಲು, ರಿವಾಲ್ವರ್, ಟೊಮ್ಮಿ ಗನ್, ಆಟ್ಟೊಸ್ ಗನ್, ಇತ್ಯಾದಿ, ಇತ್ಯಾದಿ ಎಲ್ಲವನ್ನೂ" ಎಂದು ಈ ಕೆಪ್ಟನರಿಂದಾಗ "ನಾನು ರಣರಂಗದಲ್ಲೇ ನಿಮ್ಮನ್ನು ಇದಿರಿಸುತಿದ್ದರೆ ನೀವೇನು ಮಾಡುತಿದ್ದಿರಿ?" ಎಂದು ಬ್ರಿಟಷ್ ಮೇಜರ್ ಪ್ರಶ್ನಿಸಿದ. "ನಿಮ್ಮನ್ನು ಗುಂಡಿಟ್ಟು ಕೊಲ್ಲುತಿದ್ದೆ" ಎಂದು ಈ ಧೀರನಾರಿ ತಟ್ಟನೆ ಹೇಳಿಬಿಟ್ಟರು. ಅವರ ಮೇಲೆ ಹಾಕಿದ್ದ ನಿರ್ಬಂಧಗಳನ್ನೆಲ್ಲಾ ಆಗೋಸ್ಕರ ಅಂತ್ಯದಲ್ಲೊಮ್ಮೆ ವಜಾಮಾಡಿದ್ದರು. ಆದರೆ ಒಕ್ತೋಬರ್ 21ರಲ್ಲಿ ರಂಗೂನಿನಲ್ಲಿ 'ಆಜಾದ್ ಹಿಂದ್ ಫೌಜ್' ದಿನಾಚರಣೆಯ ಸಭಾಧ್ಯಕ್ಷತೆಯನ್ನಿವರು ವಹಿಸಿದ್ದರಿಂದ ಈಗ ಪುನಃ ನಿರ್ಬಂಧದಲ್ಲೇ ಇದ್ದಾರೆ ದಿಲ್ಲಿಯ ಕೆಂಪು ಕೋಟೆ ವಿಚಾರಣೆಯಲ್ಲಿ ಭುಲಾಭಾಯಿ ಸಮಿತಿ ಇವರ ಸಾಮ್ಯೆಯನ್ನೇ ಸೇಪ್ಪಿಸಿದೆ. ಆದರೆ, ಕಾಮ್ರೇಡ್ ಲಕ್ಷ್ಮಿಯನ್ನು ಅಲ್ಲಿಗೆ ಕಳಾಗಿ ತರುವರೆಂಬುದು ನಿಶ್ಚಯವಾಗಿಲ್ಲ.

ನೋಟಿಸು

ಬೇಸಾಯಗಾರರ ಸಾರ್ವಜನಿಕ ಸಭೆ

ಈಗಿನ ಅಕ್ಕಿ, ಬತ್ತ ರಿಕ್ವಿಜಿಸನ್ ಕುರಿತು ಸರಕಾರಿ ಆರ್ಡರನ್ನು ಮೂಲೆಗೊತ್ತಿ ಜಿಲ್ಲಾಧಿಕಾರಿಗಳು ವಹಿಸಿರುವ ಧೋರಣೆಯಿಂದ ಕೃಷಿಕರಿಗಾಗಿರುವ ತೊಡಕು ತೊಂದರೆಗಳನ್ನು ಹೇಗೆ ಕಡಿಮೆಮಾಡಬಹುದೆಂಬುದನ್ನು ಯೋಚಿಸಿ ಅವಶ್ಯವಿರುವ ಕಾರ್ಯಕ್ರಮಗಳನ್ನು ಕೈಕೊಳ್ಳುವ ಬಗ್ಗೆ ಇದೇ ತಾ. 17ನೇ ಶನಿವಾರ ಸಾಯಂಕಾಲ ೫ಗಂಟೆಗೆ ಉಡುಪಿ ಕಾನ್ವೆಂಟ್ ರಾಲೆಯ ಎದುರುಗಡೆ ಇರುವ ಶ್ರೀ. ವಕೀಲ್ ಎಂ.ವಿಟ್ಠಲಕಾಮತರ ಅಧ್ಯಕ್ಷತೆಯಲ್ಲಿಸದ್ರಿಯವರ ಮನೆಯ ವಠಾರದಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಲಿರುವುದು. ವರ್ಗದಾರರೂ, ರೈತರೂ, ಸಾಗ್ವಳ್ಳಿ ಒಕ್ಕಲುಗಳೂ ಈ ಸಭೆಗೆ ಬಹು ಸಂಖ್ಯೆಯಲ್ಲಿ ಬಂದು ತಮ್ಮ ತಮ್ಮ ಆಡಚಣೆಗಳನ್ನು ಸ್ಪಷ್ಟಪಡಿಸಿ, ಸರ್ವರೂ ಸಹಕರಿಸಬೇಕಾಗಿ ವಿನಂತಿ.

ಬಿ. ನಾರಾಯಣ ಶೆಟ್ಟಿ, ಎಡ್ವಕೇಟ್,
ವ್ಯವಸ್ಥಾಪಕ.

ಸುಭಾಸ್ ಸೇನೆ—ನೆಹರುಗಳ ಮೇಲೆ ಸರ್. ನೂನ್—ಸರ್. ಪೆಟ್ಲೆಟರ ಪ್ರಕ್ಷಪ್ತಿ?

ಕೇಂದ್ರ ಎಸೆಂಬ್ಲಿಯ ಅಖಿಲ ಭಾರತದ ಸರ್ವ ಸ್ಥಾನಗಳಿಗೂ ಉಮೇದ್ವಾರಿಗಳೀಗ ನಿರ್ಧರಿಸಲ್ಪಟ್ಟು ದೇಶದಾದ್ಯಂತವಾಗಿ ವಿವಿಧ ಪಕ್ಷೀಯ ಉಮೇದ್ವಾರಿಗಳ ಪ್ರಚಾರ ಕಾರ್ಯ ನಡೆಯುತ್ತಿದೆ.

ಸುಭಾಸ್ ಸೈನಿಕರ ವಿಚಾರಣೆಗೆ ಖಾನ್ ನೂನರ ಒತ್ತಾಯವಿತ್ತೆ?

ಈಗ ಮುಸ್ಲಿಂ ಲೀಗಿಗೆ ಸೇರಿರಂಪಾಟ ಹೆಬ್ಬಿಸುತ್ತಿರುವ ಸರ್. ಫಿರೋಝ್‌ಖಾನ್ ನೂನರು ವೈಸರಾಯಿ ಕೌನ್ಸಿಲಿನಲ್ಲಿ ರಕ್ಷಣಾ ಸದಸ್ಯನ ಸ್ಥಾನದಲ್ಲಿದ್ದಾಗ ಆಜಾದ್ ಹಿಂದ್ ಫೌಜನ್ನು ಕೋರ್ಟು ಮಾರ್ಷಲ್ ವಿಚಾರಣೆಗೊಳಪಡಿಸಬೇಕೆಂದು ವೈಸರಾಯರನ್ನೂ ಕಮಾಂಡರ್-ಇನ್-ಚೀಫರನ್ನೂ ಒತ್ತಾಯಿಸಿದ್ದರೆಂದು ಪಂಜಾಬ್ ಎಸೆಂಬ್ಲಿ ಕಾಂಗ್ರೆಸ್ ಪಕ್ಷದ ಚೀಫ್ ವಿಪ್ ಸೇಟ್ ಸುದರ್ಶನರು ಜಾಹೀರು ಸಭೆಯೊಂದರಲ್ಲಾಡಿದ್ದಾರೆ. ಈ ಸುದ್ದಿಯು ಓರ್ವ ವೈಸರಾಯೀ ಕೌನ್ಸಿಲ್ ಸದಸ್ಯರಿಂದೆದೊರೆತ ಅಧಿಕೃತ ವಾರ್ತೆಯೆಂದೂ, ಬೋಸ್ ಸೈನಿಕರನ್ನು ವಿಚಾರಿಸದೆ ಬಿಟ್ಟರೆ ಸಂಜಾಟು ಮತ್ತಿತರ ಪ್ರಾಂತ್ಯಗಳಲ್ಲಿ ಬಂಡಾಯವು ಹರಡೀತೆಂದು ಸರ್. ಖಾನ್‌ನೂನರು ವೈಸರಾಯೀ ಕೌನ್ಸಿಲು ಸಭೆಯಲ್ಲಿ ಹೇಳಿದ್ದರೆಂದೂ ಸುದರ್ಶನರು ಜಾಹೀರು ಮಾಡಿದಾಗ ಸಭೆಯಲ್ಲಿ 'ನಾಚಿಕೆ, ನಾಚಿಕೆ' ಎಂದು ಕೂಗಿದ್ದಾರು.

ಸರ್. ನೂನರ ಆಕ್ಷೇಪ

ಈ ಹೇಳಿಕೆಯನ್ನು ಖಂಡಿಸುತ್ತಾ ಸರ್. ನೂನರಂದಿದ್ದಾರೆ: "ಇದು ಸಂಪೂರ್ಣ ಸುಳ್ಳು. ದುರ್ದೈವವೆಂದರೆ ವೈಸರಾಯೀ ಕೌನ್ಸಿಲಿನ ಯಾವುದೊಂದು ಸಭೆಯಲ್ಲಿ ನಾನು ಹಾಜರಿದ್ದೆ ಅಥವಾ ಇಲ್ಲ ವೆಂಬುದನ್ನಾಗಲೀ ಈ ವಿಷಯವು ಅಲ್ಲಿ ಚರ್ಚಿಸಲ್ಪಟ್ಟಿತು ಯಾ ಇಲ್ಲವೆಂಬುದನ್ನಾಗಲೀ ಹೇಳದಂತೆ ಕಾನೂನಿನ ತಡೆಯಿದೆ. ಒಬ್ಬ ಸದಸ್ಯನಿಂದ ದೊರೆತ ಅಧಿಕೃತ ವಾರ್ತೆಯೆಂದು ಸುದರ್ಶನರು ಹೇಳಿರುವದರಿಂದ ಇವನ್ನು ಮತ್ತು ಆ ಸದಸ್ಯರನ್ನು ವೈಸರಾಯರು ಕೋರ್ಟಗೆಳೆಯುವರೆಂದು ನಾನು ಆತಿಸುತ್ತೇನೆ. ಇಂತಹ ಒಂದು ಸಂದರ್ಭದಲ್ಲಿ ಲೋರ್ಡ್ ಲಿನ್‌ಲಿತ್‌ಗೋ ಒಬ್ಬನ ಮೇಲೆ ಪ್ರೊಸಿಕ್ಯೂಶನ್ ನಡಿಸಿ ೬ ತಿಂಗಳು ಜೈಲಿಗಟ್ಟಿದ್ದರು. ಇದು ಚುನಾವಣಾ ಬಡಾಯಿ ಮಾತ್ರವೆಂದಾದರೂ, ತಾನು ಹೇಳಿದ್ದು ಸುಳ್ಳು ಎಂದು ಹೇಳಿ ಸುದರ್ಶನರು ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾರರು. ಈ ಮೊದಲು ಜೈಲಿಗೆ ಹೋದವರಿಗೆ ಇಂತಹ ವಾದದಿಂದ ಸಹಾಯವಾಗುವಂತಿಲ್ಲ".

ಸುದರ್ಶನರ ಮರುನುಡಿ

ಸೇಟ್ ಸುದರ್ಶನರು ಈ ಆಕ್ಷೇಪಕ್ಕೆ ಖಂಡ ತುಂಡ ಉತ್ತರವಿತ್ತಿದ್ದಾರೆ. "ಸರ್. ಖಾನ್‌ನೂನರ ಹೇಳಿಕೆಯಿಂದ ನಾನು ಆಶ್ಚರ್ಯಗೊಂಡಿಲ್ಲ. ತನ್ನ ಇಡೀ ಜೀವಮಾನದಲ್ಲಿ ನೌಕರ ಶಾಹಿಯ ಬಾಲ ಬಡುಕನಾಗಿದ್ದ ಓರ್ವನು ಆ ತರಗತಿಯ ಹುಟ್ಟುಗುಣವಾದ ಪೋಲೀಸ್ ಸ್ವಭಾವವನ್ನು ಬಿಡುವದು ಸಾಧ್ಯವಿಲ್ಲ. ಸರ್. ನೂನರಿಗೆ ಸ್ವಲ್ಪ ಸಮಯ ವಕಾಲತ್ ನಡಿಸಿ ಅನುಭವವಿರುವಾಗ, ಈ ಸಂದರ್ಭಕ್ಕೆ ಲಗಾವಾಗದ 'ಅಧಿಕಾರೀ ಗುಟ್ಟಿನ ಕಾನೂನ'ನ್ನು ಲಗ್ಗೀಕರಿಸುವ ಸೂಚನೆಯು ಅವರ ಬಾಯಿಯಿಂದ ಬರದೇಕಾದರೆ ನೂನರು ಹ್ಯಾಟಿನ ಮೂಲಕ (ತಲೆಯೆದ್ದಲ್ಲವೆಂದರ್ಥ) ವಾಕಾಡುತ್ತಿರಬೇಕು. ನನ್ನ ಮೇಲಿನ ಯಾವ ಕಾರ್ಯಾಚರಣೆಗಾದರೂ ನನ್ನ ಸ್ವಾಗತವಿದೆ. ಯಾಕಂದರೆ, ತಾನು ರಕ್ಷಣಾ ಸದಸ್ಯನಾಗಿದ್ದೂ, ರಕ್ಷಣೆಗೆ ಸಂಬಂಧಿಸಿದ ಈ ವಿಷಯವು ತನ್ನ ಮುಂದೆ ಬಂದಿಲ್ಲವೆನ್ನುವ ಒಟ್ಟ ಸದಸ್ಯನ ಫಿಜಿಸ್ಥಿತಿಯ ದಾಖಲೆಗಳೆಲ್ಲಾ ಆಗ ಮುಂದೆ ಬರಲಿವೆ. ಅದೇ ರೀತಿ, ತಾನು ಕಾನೂನಿಗನುಸಾರವಾಗಿ ಈ ಗುಟ್ಟನ್ನು ಬಿಡಲಾಗುವದಿಲ್ಲ ಎನ್ನುವದು ಹಾಸ್ಯಾಸ್ಪದ. ಈ ಕುರಿತು ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಿದಾಗ ಸರ್. ನೂನರು ತುಟಿ ಬಿಗಿ ಹಿಡಿದಿದ್ದರು. ಆ. ಹಿಂ. ಫೌಜಿನ ವಿಚಾರಣೆಯಲ್ಲಿ ಅವರಿಗೆ ನಾಲಿಲ್ಲವಾದರೆ, ಅಬಿಕ್ಕನ ರ ಒಪ್ಪಿಗೆಯಿಲ್ಲವಾದರೆ, ಮೋಡಿ, ಸರ್ಕಾರ್, ಆಣೆಯವರಂತೆ ಸರ್. ನೂನರೂ ತನ್ನ ತ್ರಿರಂಗು ಸ್ಥಾನಕ್ಕೆ ರಾಜೀನಾಮೆ ಕೊಡಬೇಕಿತ್ತು. ಕೇವಲ ಇಷ್ಟೀಜಿಗೆ ಮುಸ್ಲಿಂ ಲೀಗಿನ ಕೆಲವು ಪ್ರಮುಖರು ಆ ಫೌಜನ್ನು ಸಮರ್ಥಿಸಿ ಆ ಪ್ರಕಟಣೆ ಹೊರಡಿಸಿದ್ದರು. ನೋನ್ನೆ ತಾನೇ ಲೀಗಿಗೆ ಮತಾಂತರಗೊಂಡಿರುವ ಸರ್. ನೂನರ ಹೆಸರು ಆದೇಕೋ ಅದರಲ್ಲಿಲ್ಲ".

ನೆಹರುಗಳ ದಸ್ತಗಿರಿ?

ಭಾರತ ಸರಕಾರವು ನೆಹರುಗಳ ದಸ್ತಗಿರಿಯ ಆಜ್ಞೆ ಕೊಡದಿದ್ದರೆ ತಾನು ರಾಜೀನಾಮೆ ಕೊಡುವೆನೆಂದು ಸಂಯುಕ್ತ ಪ್ರಾಂತ್ಯದ ಗವರ್ನರ್ ಸರ್. ಮೌರಿಸ್ ಹ್ಯಾಲ್ಲೆಟರು ಎದ್ದಿದ್ದಾರೆಂದು ಪ್ರಕಟಿಸಲ್ಪಟ್ಟಿರುವ ಸುದ್ದಿಯು ಕೇವಲ ಕಟ್ಟುಕಥೆಯೆಂದು ವೈಶಂಪಾಯೀ ಭವನದಿಂದ ಪ್ರಕಟಿಸಲ್ಪಟ್ಟಿದೆ.

ಚೀನದಲ್ಲಿ ಆಂತರ್ಯುದ್ಧ

ಉತ್ತರ ಚೀನದ ಕೆಲವು ಪ್ರಾಮುಖ್ಯ ನಗರಗಳನ್ನು ಕಮ್ಯೂನಿಸ್ಟ್ ಸೇನೆ ಆಕ್ರಮಿಸಿಕೊಳ್ಳುತ್ತಾ ಮುಂದೊತ್ತಿದೆ. ಚಿಯಾಂಗರ ಕೆಲವು ಸೇನಾನಿಗಳು ಸೆರೆಸಿಕ್ಕಿ ಮ್ಮಾರೆ. ಆ ಭಾಗದಲ್ಲಿದ್ದ ಅಮೇರಿಕನ್ ಸೇನೆ ಹಿಂದೆಗೆದಿದೆ.

ಉಡುಪಿ

ಬೋರ್ಡು ಹೈಸ್ಕೂಲಿಗೆ ಶ್ರೀ ವಿಭುದೇಶ ತೀರ್ಥ ಶ್ರೀಗಳವರ ಸಂದರ್ಶನ ಮತ್ತು ಉದಾರ ದಾನ—

ಶ್ರೀ ಅದಮಾರು ಮಠದ ಪರ ಶ್ರೀಗಳವರಾದ ಶ್ರೀ ವಿಭುದೇಶ ತೀರ್ಥ ಶ್ರೀಗಳು ತನ್ನ ಮಠ ಪ್ರವೇಶ ಮಾಡಿದ ಮರುದಿನವೇ (ತಾ ೧೫ರಂದು ಸಾಯಂಕಾಲ) ತಾನು ಕಲಿತ ಬೋರ್ಡು ಹೈಸ್ಕೂಲಿಗೆ ಸಂದರ್ಶನವಿತ್ತರು. ಮುಖ್ಯೋಪಾಧ್ಯಾಯರಾದ ಶ್ರೀ. ಕೋಟ ಸೂರ್ಯನಾರಾಯಣರು ಬೋರ್ಡು ಹೈಸ್ಕೂಲಿನ ಸುಮಾರು ರತ್ನವು ಧರ್ಮ ಪೀಠವನ್ನಲಂಕರಿಸಿದುದರಿಂದ ತನಗೂ ಶಾಲೆಗೂ ಆಗಿರುವ ಹೆಚ್ಚಳದ ಪರಮಾನಂದವನ್ನು ವ್ಯಕ್ತಗೊಳಿಸಿದರು. ಉಪಾಧ್ಯಾಯರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಪಲವರು ತಮ್ಮ ಸಂತೋಷಗಳನ್ನು ಪ್ರದರ್ಶಿಸಿ ಶ್ರೀಗಳವರನ್ನು ಆಭಿನಂದಿಸಿದರು. ಸ್ವಾಮಿಜಿಗಳು ವಿದ್ಯಾರ್ಥಿಗಳಿಗೆ ಒತ್ತಾಸೆಯ ಭಾಷಣ ಮಾಡಿ ತನ್ನ ಈ ಸಂದರ್ಶನೆಯ ಸ್ಮರಣಾರ್ಥವಾಗಿ ಸಾವ್ಯೂರು ರೂಪಾಯಿಗಳ ಒಪ್ಪಮಾನ ನಿಧಿಯನ್ನಿತ್ತರು. ಆ ನಂತರ ಆಧ್ಯಾಪಕರಿಗೆಲ್ಲ ಬೆಳ್ಳಿಯ ಗಿಂದಲೂಗಳಲ್ಲಿ ಪುಂತ್ರಾಕ್ಷತೆಯನ್ನಿಟ್ಟುಕೊಟ್ಟು ಪುಷ್ಪ ಹಾರಗಳಿಂದ ಸನ್ಮಾನಿಸಿ ನಿವಾರ್ಥಿಗಳಿಗೆ ಸ್ಪರ್ಧಾಟಗಳನ್ನು ಕೊಡಿಸಲು ಶಾಲೆಯ ಶ್ರೀಗಳವರನ್ನು ಮನವಿಮಾಡಿಕೊಂಡಿತು. ಸಾಯಂಕಾಲ ಸಂಜಾಟಿಯಲ್ಲಿ ಪ್ರಕಟವಾದಂತೆ ಕಾಂಗ್ರೆಸ್ ಮೆಂಬರರಾಗಿ ಸೇರಿದ ಶ್ರೀ. ಬಿ. ವೆಂಕಪ್ಪ ಹೆಗ್ಡೇರು ತಾನು ಹಿಂದೂ ಮಹಾಸಭೆಯ ಅಧ್ಯಕ್ಷನಾಗಿರುವುದರಿಂದ ತನ್ನ ಕಾಂಗ್ರೆಸ್ ಸದಸ್ಯತನವನ್ನು ರದ್ದುಗೊಳಿಸಬೇಕಾಗಿ ಸ್ಥಳೀಯ ಕಾಂಗ್ರೆಸ್ ಕರ್ತರನ್ನು ಕೇಳಿಕೊಂಡಿರುತ್ತಾರಾಗಿತಿಳಿಸುತ್ತಾರೆ.

ಸಂ. ನ.

ಶ್ರೀ ಸುಧಾಕರ ರಾಷ್ಟ್ರೀಯ ಹಿಂದೀ ಸೇನೆ—ಬಿಡುಗಡೆ ಬಗ್ಗೆ ಪರ್ಕಳದಲ್ಲಿ 12 11 45ರಲ್ಲಿ ಪರ್ಕಳ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲೂ ಜೆಗರ್ ಶ್ರೀ ಮಾರ್ಕಾಪರಮೇಶ್ವರಿ ದೇವಸ್ಥಾನದಲ್ಲೂ ಸಾರ್ವಜನಿಕ ಸಭೆ ಸೇರಿ ವಿಚಾರಣೆಗೆ ಒಳಪಟ್ಟ ಸುಭಾಸರ ಆಜಾದ್ ಹಿಂದ್ ಸೇನೆಯು ಬಿಡುಗಡೆಯೊಂದಲೆಂಬ ಪ್ರಾರ್ಥನೆ ಸಲ್ಲಿಸಿಕೊಳ್ಳಲಾಯಿತು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **16-11-1945**ರಿಂದ

ನೆಶನಲ್ಸ್‌ನವರ



ಸುರೇಂದ್ರ, ಹುಸ್ನಬಾನು ಮೊದಲಾನವರು.

ನಂತರ—

OLKHOME-KID

ಬರಲಿದೆ—

ಮೊ ಭ್ಯತ್ರೋ.

ಹೊಸ ವರುಷದ ರಿಕ್ವಿಜಿಶನ್.

(ಶ್ರೀ. ಕುಂದಾರು ರಾಮರಾಯರಿಂದ.)

ಜಿಲ್ಲೆಯಲ್ಲಿ ಪೂರ್ಣ ಬೆಳೆ ಕಟಾವು ಒಂದು ಮೊದಲು ತಮ್ಮ ಸಾನುವಳ್ಳಿಯಲ್ಲಿ ಬೆಳೆಯುವ ಬೆಳೆಯೆಷ್ಟು? ಇದಕ್ಕೆ ಬೇಸಾಯಕ್ಕೆ ಹಾಗೂ ನುಸಿ ಬಿರ್ಚಿಗೆ ಮಿಕ್ಕಿ ಸ್ಟೋರಿಗೊಸ್ಕರ ಸುವ ಅಂದಾಜೆಷ್ಟು? ಎಂಬ ಸರಿಯಾದ ಪ್ರಶ್ನೆಗಳನ್ನು ಎಷ್ಟು ಅನುಭವಿಗಳಾದ ಬೇಸಾಯಗಾರರಾದರೂ ಸರಿಯಾಗಿ ಸರ್ಧರಿಸಲಾರರು. ಅದರ ಎಷ್ಟೋ ದಿನಗಳ ಹಿಂದೆ ಬಹುತೇ ಬೇಸಾಯಗಾರರು ಕಟಾವಿಗೆ ಪ್ರಾರಂಭಿಸುವದಕ್ಕಿಂತ ಮುಂಚೆ ರೈತರು ತಮ್ಮ ಖರ್ಚಿಸಂಗಡವನ್ನು ಇಟ್ಟುಕೊಂಡು ಸ್ಟೋರಿಗೊಸ್ಕರ ಅಕ್ಕಿ ಭತ್ತವೆಷ್ಟು ಬೇಕಾಗುವದೆಂಬ ಅಂದಾಜನ್ನು ಇಂತಿಷ್ಟೇ ಎಂದು ಅಧಿಕಾರಿಗಳು ಸರ್ಧರಿಸಿರುವರು. ಆದ್ದರಿಂದ ಉಳಿತಾಯದ ಪ್ರಮಾಣವನ್ನೂ, ಜೊತೆಯಲ್ಲಿ ಸ್ಟೋರಿಗೆ ಅಕ್ಕಿ ಭತ್ತಗಳನ್ನು ಕೊಡುವ ನಾಲ್ಕು ಕಂತುಗಳನ್ನೂ ಸೂಚಿಸುವ "ರಿಕ್ವಿಜಿಶನ್ ನೋಟೀಸು"ಗಳು ಕಟಾವಿನ ಕೆಲವು ದಿನಗಳ ಮೊದಲೇ ರೈತರು ಮತ್ತು ವರ್ಗವಾರಿಗೆ (ಕೆಲವೆಡೆಗಳಲ್ಲಿ) ಜಾರಿಯಾಗಿವೆ ಅಧಿಕಾರಿಗಳ ಭವಿಷ್ಯದರ್ಶಿತ್ವದ ಜಾಣಾಕ್ಷತನಕ್ಕೆ ಏನೆನ್ನಬೇಕು? ಒಂದೋ ಕೆಲವು ಅಧಿಕಾರಿಗಳಿಗೆ, ಮೊನ್ನೆಮೊನ್ನೆ ಪ್ರಕಟವಾದ ವಾರ್ತೆಗಸಾರಸಾರವಾಗಿ ಪುಣ್ಯಶ್ರೀ ಎಂ. ಎ. ನಿರ್ಣರ್ಣದಂತೆ ಜಗತ್ತಿನ ಯಾವ ಮೂಲೆಯಲ್ಲಿಯ ಏನನ್ನೂ ತಿಳಿದುಕೊಳ್ಳಬಲ್ಲ ಸರ್ವದರ್ಶಕತೆಯಿದೆ! ಅದಲ್ಲವಾದರೆ ರಿಕ್ವಿಜಿಶನ್ನಿಗೆ ಸಂಬಂಧಪಟ್ಟ ಕೆಲ ಅಧಿಕಾರಿಗಳು ಹಾಗಲವಾಡಿ ಸಂಸ್ಥಾನದ ಆಡಳಿತೆಯನ್ನು ಪುನರಾವರ್ತನೆಗೊಳಿಸಲು ಹೆಣಗುತ್ತಾರೆ!

ಸಾಮಾನ್ಯವಾಗಿ ಎಲ್ಲ ನೋಟೀಸುಗಳಲ್ಲಿ ಸೂಚಿಸಿದ ಉಳಿತಾಯದ ಅಂಶವು ಎಲ್ಲೋ ಬಂದೆತೆಯಲ್ಲಿ ಕುಳಿತುಕೊಂಡು ಬರೆದ ಸರಕಾರಿ ಅಳತೆರರೆ-ನಿಜಪರಿಸ್ಥಿತಿಯ ಸಾಕಷ್ಟು ಅನುಭವವಿಲ್ಲದವರ ಅಧಿಸ್ಯಾಯವಾದುದರಿಂದ ರೈತರು ವೈಧಪತ್ರಿಕೆಯನ್ನೂ, ನೋಟೀಸಿಗೆ ತಮ್ಮ ನ್ಯಾಯವಾದ ತಕರಾರುಗಳನ್ನೂ ಸೂಚಿಸುವ ಮನವಿಗಳನ್ನೂ ತಾಲೂಕು ಕಚೇರಿಗೆ ಕಳುಹಿಸುತ್ತಲೇ ಸಕಾಲದಲ್ಲಿ ಆವುಗಳ ವಿಚಾರಣೆಯಾಗುವುದು ಅಗತ್ಯವಿದ್ದರೂ, ನೋಟೀಸಿನಂತೆ ಅಕ್ಕಿ ಭತ್ತವನ್ನು ತಂದೊಪ್ಪಿಸದೆ ಎಲ್ಲರ ಮೇಲೂ ಸರಕಾರವು ಬಿಟ್ಟಿ ಹಾಕುವುದೆಂದಲ್ಲ. ಬೇಗ ವಿಚಾರಣೆಯಾಗುವ ಪರಿ ಸೂಚಿಸಿದ ಕಂತಿಪ್ರಕಾರ ಎಲ್ಲ ಧಾನ್ಯವನ್ನು (ಭತ್ತ) ಕೊಡಲಿಕ್ಕಾಗದೆ ಅಕ್ಕಿ ಮುಡಿಯೊಂದರ ಬಂಧ ರೂ. ಕಳೆದುಕೊಳ್ಳುವ ಪ್ರಸಂಗವು ಅನೇಕರಿಗೆ ಬರುವುದು

ರಿಕ್ವಿಜಿಶನ್ನಿನಲ್ಲಿ ತನ್ಯಾಯವು ನಲವತ್ತಿದೆ. ಕೆಲವರು ಈ ಜಾಫೆಯಿಂದ ತಪ್ಪಿಸಿಕೊಂಡಿದ್ದಾರೆ! (ಬಹುತೇ ಅವರ ಪುಣ್ಯವು ಒಳ್ಳೆದಿರಬೇಕು!) ಒಪಳ ವಿಮಾಯತಿ ಪತಿಪೆಸರಿಯ್ಯಾನ ಆವೆತೆ ಹಲವು ಮೊರೆಯ್ಪೆ ಸಂತಾಗಿ ತಮ್ಮ ಗಿದ್ದೆಗಳಲ್ಲಿ ಶ್ರೀರಾಮನ ಕಾಲವಲ್ಲೂ ಬೆಳೆಯದಿದ್ದಷ್ಟು ಧಾನ್ಯವನ್ನ ಕೊಡಬೇಕೆಂದಾಗಿದೆ!

ನಲವತ್ತೆರಡು ಸೇರಿನ ಎರಡು ಮುಡಿ ಭತ್ತವನ್ನು ಬೇಯಿಸಿ ಕುಟ್ಟಿದರೆ ಒಂದು ಮುಡಿಯಕ್ಕಿಗೂ ಮಿಗುವುದು. ತೂಕವು ಗಜಸರಿ ಎಂಭತ್ತನಾಲ್ಕು ರಾತಲಾಗುವುದು ಅಕ್ಕಿಗೆ ಮುಡಿಯೊಂದರೆ ಹತ್ತು ರೂ ಗಳೂ, ಭತ್ತಕ್ಕೆ 4 ರೂ. 5 ಆಣೆಯೂ ಚಾಲ್ತಿ ಇರುವ ಪಕ್ಷ ನಿಯಂತ್ರಿತ ಧಾರಣೆಯಪ್ಪೆ ಹಳ್ಳಿಗಳಲ್ಲಿ ಬಹಳ ಪುರಾತನ ಕಾಲದಿಂದಲೂ ನಡೆದು ಕೊಂಡು ಬರುವ ಪದ್ಧತಿಯಂತೆ ಎರಡು ಮುಡಿ ಮತ್ತು ಆರು ಸೇರು ಭತ್ತವನ್ನು ಕೊಟ್ಟು ಬಿಟ್ಟರೆ ಕಟ್ಟುವ ಒಂದು ಮುಡಿಯಕ್ಕಿಯನ್ನು (ಕುಚ್ಚಿಗೆ) ಕೂಲಿಯವರು ತಂದುಕೊಡುತ್ತಾರೆ. ಅಂದರೆ ಅಕ್ಕಿ ಮಾಡಿಸುವದಕ್ಕೂ ಮುಡಿ ಕಟ್ಟುವುದಕ್ಕೂ ಆರು ಸೇರು ಭತ್ತ ಅಥವಾ ಸುಮಾರು ಸೇರಕ್ಕಿ ಕೂಲಿಯೆಂದಾಯಿತು. ಇದೆ ನ್ಯಾಯವಾದ ಪ್ರಸ್ತಾಪವು ಎಲ್ಲರೂ ಒಪ್ಪುವಂಥದೂ ಆಗಿದೆ ಆದರೆ ಸ್ಟೋರಿನಲ್ಲಿ ಅಕ್ಕಿಗೂ ಭತ್ತಕ್ಕೂ ದರದ ಪ್ರಮಾಣಪಲ್ಲಟವನ್ನು ನೋಡಿದರೆ ನಿಚಾರವನಂತರಿಗೆ ತಲೆ ಬಿಸಿಯಾಗದಿರಲಿಕ್ಕಿಲ್ಲ. ಸರಕಾರದವರ ಅಧಿಕಾರ್ಯವನ್ನಲ್ಲಿ ಒಂದು ಮುಡಿಯಕ್ಕಿಯಾಗಬೇಕಾದರೆ, 2 ಮು. 1 ಕ (2½ ಮು.) ಭತ್ತ ಬೇಕೆಂದಾಯಿತು. ಸರಿಯಾದ ಪ್ರಮಾಣಕ್ಕೂ, ಈ ಲೆಕ್ಕಕ್ಕೂ ಎಷ್ಟು ಸೇರು ಭತ್ತ ಹೆಚ್ಚು ಆದ್ದರಿಂದ ಅಕ್ಕಿ ಮುಡಿಯೊಂದರ ಮೇಲೆ (ಭತ್ತವೆಸ್ಟೇ ಕೊಡುವುದಾದರೆ) ಹನ್ನೆರಡಾಣೆ ನಸ್ಟವಾಗುವುದು ಇದನ್ನು ತಿಳಿದ ರೈತರು ಒಕ್ಕಿಯನ್ನೇ ಸ್ಟೋರಿಗೆ ಕೊಡಲು ಮನಸ್ಸುಮಾಡುವುದು ಸಹಜವಾಗಿದೆ ಅಕ್ಕಿಮಾಡಿ ಮೂರಿದರೆ ರೈತರಿಗಾಗುವ ಇನ್ನೊಂದು ಪ್ರಯೋಜನವೆಂದರೆ, ಅವರು ಜೀವನಾಧಾರವಾದ ದನಕರುಗಳನ್ನೂ ಎತ್ತುಕೋಣಗಳನ್ನೂ ಸಾಕಲು ಬೇಕಾದ ತೌಡು ಹೊರೆಯುತ್ತವೆ. ಆದರೆ ಸರಕಾರದವರು ರೈತರಿಗೆ ಅಕ್ಕಿಯನ್ನೇ ತಂದೊಪ್ಪಿಸುವಂತೆ ಕಲ್ಪಿಸಿಕೊಟ್ಟ ಅನುಕೂಲವು ಸಾಲದು. ಅವಧಿಯು ಸಮೀಪದಲ್ಲಿದೆಯೆಂದೂ, ಅಕ್ಕಿ ಮಾಡುವುದಕ್ಕೆ ಸಮಯು ಸಾಲದೆಂದೂ ಹೆದರಿ ಅದೆಷ್ಟೋ ಜನರು- ಮನಸ್ಸಿಲ್ಲದಿದ್ದರೂ ಭತ್ತವನ್ನು ಕೊಟ್ಟುಬಿಡುತ್ತಾರೆ. ಇದರಿಂದ ಗ್ರಾಮಗಳಲ್ಲಿ ನಿರುದ್ಯೋಗವುಂಟಾಗುವಭೀತಿಯಿದೆ. ಸರಕಾರಕ್ಕಾಗುವ ಲಾಭವಾದರೂ ಏನು? ಎಷ್ಟೋ ಅಲಸಿಗರಾದ ಮಿಲ್ಲುಗಳ ಮಾಲಿಕರು ಹಸಿಯಕ್ಕಿ ಮಾಡಿ ಕೊಟ್ಟುಬಿಡುತ್ತಾರೆ ತೂಕವು ಸರಿಯಾಗಿದ್ದು ಬಿಟ್ಟರೆ ತೀರಿತು. ಒತರ ಉಪಾಸೀನದ ಎದುರಿನಲ್ಲಿ ಆ ಹಸಿಯಕ್ಕಿಯು ಯಾವ ತರದ ಉಪಯೋಗಕ್ಕೆ ಬಂದೀತೆಂಬುದರ ಕಲ್ಪನೆ ಕೂಡಾ ಬರುವುದಿಲ್ಲ. (ಅನೇಕರು ಕಾರ್ಯದೆಕ್ಷರಿದ್ದರೇ ಆ ಮಾತು ಬೇರೆ.) ಇನ್ನು ಆ ದೋಷೈದೃಷ್ಟಿಯಿಂದ ಪರಿತೀಲಿಸುವುದಾದರೂ, ಮಿಲ್ಲಿನ ಅಕ್ಕಿಯು ಪೇಯಕ್ಕೆ ಹಾಳು— ಆರೋಗ್ಯಕ್ಕೆ ಆತೀ ಉಪಯುಕ್ತವಾಪೆ ಬೇನಾತುವಿನ ಅಂಶವು ಯಾಂತ್ರಿಕ ಜಲನೆಯಿಂದ ಹಾಳಾಗಿ, ನಿಸ್ಸಾರವಾಪ ಭಾಗವು ಮಾತ್ರ ಉಳಿಯುತ್ತದೆಂಬುದು ಪ್ರತಿಯೊಬ್ಬ ಸಾಗರಿಕನೂ ಅರಿತ ವಿಷಯ

ಇದಕ್ಕೆಲ್ಲಾ ಪರಿಹಾರವೆಂದರೆ. ತಕ್ಕಷ್ಟಲದ ಉಸಯೋಗಕ್ಕೆ ಬೇಕಾಗುವ ಅಂದಾಜನ್ನು ಳಿದು ಮಿಕ್ಕುದನ್ನು ಏಪ್ರಿಲ್ ಅಂತ್ಯದ ವರೆಗೂ ನಿಧಾನವಾಗಿ ಮಾಡಿಕೊಡುವಂತೆ ರೈತರಿಗೆ ಸಸಲತ್ತನ್ನು ಕಲ್ಪಿಸಿಕೊಡಬೇಕು. ಕಳೆದ ವರ್ಷದಂತೆ ಅಕ್ಕಿಯೊಪ್ಪಿಸುವ ಕೊನೆಯ ವಾರೀಕನ್ನು ಹದಿನೈದು ಹದಿನೈದೇ ದಿನ ಮುಂದರಿಸುವುದರಿಂದ ನಿಶ್ಚಿತವಾದ ಪ್ರಯೋಜನವಾಗದು ಅವಧಿ ಮುಂದರಿಸಿವಾಗ ಒಮ್ಮೆಯೇ ಬೇಕಾದಷ್ಟು ಕೊಟ್ಟು ತಪ್ಪಿದವರಿಗೆ ದರದಲ್ಲಿ ಕಡಿಮೆಮಾಡುವುದಾದರೆ ನ್ಯಾಯ. ಮಾರ್ಚ ಎಪ್ರಿಲ್ ತಿಂಗಳಿನ ಕಡು ಬೇಸಗೆಯ ಬಿಸಿಲಿನಲ್ಲಿ ಲಕ್ಷ ತಯಾರಿಸಿದರೆ ಒಮ್ಮೆ ಮುಂದೆ ಕೆಡುವ ಸಂಭವನೇ ಇಲ್ಲ. ನುತ್ತೂ ಅನಾನುಕೂಲತೆಯಾಗುವವರಿಗೆ (ಜನರ್ಕೋರತೆಯಿಂದಾಗಿ) ವೈಯಕ್ತಿಕವಾಗಿ ಅವರವರ ಇಷ್ಟದ ಮೇರೆಗೆ ಹದಿನೈದೋ ಇಪ್ಪತ್ತೋ ದಿನ ವಾಯಿದೆಕೊಟ್ಟರೆ ಪೂಂಬ ಪ್ರಯೋಜನವಾಗುವುದು ಇದು ಸಾಧ್ಯವಿಲ್ಲವೆಂದು ಅಧಿಕಾರಿಗಳು ಮನಗಾಣುವರಾದರೆ ಭತ್ತಕ್ಕೆ ಕನಿಷ್ಟ ಪಕ್ಷ 4 10—0ರಿಂದ 4 14 0ರ ವರೆಗಾದರೂ ಇರಿಸುನಪೊಳ್ಳಿತು.

ಭತ್ತವನ್ನು ತೂಕಮಾಡಿ ತೆಗೆದುಕೊಂದರೆ ಮುಡಿಯೊಂದರ ಜದಾರು ಸೇರುಗಳ ವರೆಗೂ ನಷ್ಟವಾಗುವುದೆಂಬುದು ರೈತರ ಕಳೆದ ವರ್ಷದ ಅನುಭವ ಆದ್ದರಿಂದ ತೂಕದ ಪದ್ಧತಿಯು ಯಾವ ತಾಲೂಕಿನಲ್ಲಿಯೂ, ಯಾವ ಸ್ಟೋರಿನಲ್ಲಿಯೂ ಇರಲೇಬಾರದು ಅಕ್ಕಿಯು ದರದ ಪ್ರಮಾಣದಂತೆ ಭತ್ತಕ್ಕಿರುವುದು ಕಡಿಮೆಯೂದುದರಿಂದ ಈ ಮೊದಲು ಒಪ್ಪಿಸಿದವರಿಗೂ ಸಹ ನಷ್ಟದ ಅಂಶವು ಸಿಗಲೇಬೇಕು

ಅಕ್ಕಿಯೊಪ್ಪಿಸುವ ಕೊನೆಯ ದಿನವು ಹತ್ತಿರಗಿರೆ ಗೊತ್ತಾಗದೆ ಅವಧಿ ಮೀರುವುದರಿಂದ ಆನೇಕರಿಗೆ ಸಿಗುವ ದರ ಒಂಭತ್ತು ರೂ. ಮಾತ್ರ. ಆದರಲ್ಲೂ ಸ್ಟೋರಿನ ವರೆಗೆ ಸಾಗಿಸುವ ಗಾಡಿ ಬಾಡಿಗೆ ಮುಡಿಯೊಂದರ ನಾಲ್ಕಾಣೆಯಾದರೂ ಬೇರೆ ತೆರಬೇಕು ಆದರೂ ಬೇಸಾಯಗಾರರಿಗೆ ಸಿಗುವ ದರ ಜಾಸ್ತಿಯಾಯಿತೆಂದು ಕೆಲವರು ಕರಕರೆ ಮಾಡತೊಡಗಿದ್ದಾರೆ! ಮನುಷ್ಯನ ಜೀವನಕ್ಕೆ ಅಕ್ಕಿಯು ಅತ್ಯವಶ್ಯಕ್ತವಾದ ವಸ್ತುವಾದುದರಿಂದ ಅದರ ನೇರ ಸರಕಾರದ ಪಿಡಿತವು ಯುದ್ಧ ಪ್ರಾರಂಭದಿಂದಲೂ ಇತ್ತು. ಬಮ್ಮೆಯೂ ರೈತನು ಆತೀ ಹೆಚ್ಚು ದರವೆಲ್ಲಿ ನೂರಾ ಲಾಭಕ್ಕ ಟ್ಟುಕೊಳ್ಳಲಾಗಲಿಲ್ಲ (ಹಾಗ ಕಾನೂನನ್ನು ಉಲ್ಲಂಘಿಸಿದವರು ರಾಜಾತಿಥ್ಯ ಸಡೆದಿದ್ದಾರೆ) ಆದಷ್ಟೋ ವರ್ಷದಿಂದ ಸಾಲವೆಲ್ಲಿ ಮುಳುಗಿದ್ದವರು ಈಗ ಸ್ವಲ್ಪ ಚೇತರಿಸಿಕೊಳ್ಳಬಹುದೋ ಏನೋ. ನಮ್ಮ ಜಿಲ್ಲೆಯಲ್ಲಿ ಸರ್ಗದಾರರು ಒಕ್ಕಲಿಗರಿಗೆ ಆರೆವಾಸಿ ಅಕ್ಕಿಯೆಂದೂ ಉಳಿದುದು ಪಣನೆಂದೂ ನಿಶ್ಚೈಸಿ ಗೇಣಿಗೆ ಕೊಡುವ ಪದ್ಧತಿಯು ಹಲವು ಕಡೆ ಇದೆ ಮೊದಲು ಬರುತ್ತಿತ್ತು. ಗೇಣಿ ಕೊಡುವ ತಿದ್ದ ಒಕ್ಕಲು ಆಗಿನ ದರದ ಪ್ರಕಾರ 16 17 ಮುಡಿ ಅಕ್ಕಿ ಮೂರಿ ಧಾನಿಗೆ ಪಣ ಸಲಾಯಿಸಬೇಕಿತ್ತು. ಈಗ ಇದೇ ಮುಡಿಯಕ್ಕಿಯೊಳಗೆ ತೀರುತ್ತದೆ. ಇದು ಬಡವರಿಗಾಗುವ ಪ್ರಯೋಜನವಲ್ಲವೆಂದು ಯಾರೂ ಹೇಳಲಾರರು ಇನ್ನು ಕೂಲಿಯನಕಾರರೂ ಅಕ್ಕಿಯ ಧಾರಣೆಯನ್ನು ಸರಿಯಾಗಿ ಮಜಬೂರಿ ಹೇಳಿದರೆ ಯಾರೂ ಅಕ್ಕೇಪಪೆತ್ತುವಂತಿಲ್ಲ.

ಆದಿಕೆಯ ದರ ಇಳಿದುಬರಿಂದ ತೋಟಗಾರರಿಗೆ ಪಜದ ಅಭಾವದಿಂದಾಗಿ ಕೆಲಸ ಮಾಡಿಸಲು ತೊಂದರೆಯಾಗಿದೆಯೆಂದೂ, ಅದಕ್ಕಾಗಿ (ಅಘನಾ ಒಟ್ಟಾರೆ) ಅಕ್ಕಿಯ ದರ ಒಮ್ಮೆಯೇ ಕಡಿಸಿ ಮಾಡಲ್ಪಡಬೇಕೆಂದೂ, ತಾ. 21ರ ರಾಷ್ಟ್ರ ಬಂಧುವಿನಲ್ಲಿ ಪ್ರಕಟವಾದ ಲೇಖನಕ್ಕೆ ವರ್ಗದಾರರೆರಿತಿರಲಿ, ಬದ ಒಕ್ಕಲಿಗನೂ ಕೂಡ ಅಕ್ಷೇಪಪತ್ತಿರಲಾರ. ಒಪ್ಪೆಂದರೂ ಆಡಿಕೆ ತೋಟಗಾರರು ನಮ್ಮ ಜಿಲ್ಲೆಯಲ್ಲಿ ಕಡಿಮೆ ಆವರಿಗೋಸ್ಕರ ಅಥವಾ ಅವರ ಕೈಕೆಳಗಿನ ಕೂಲಿಯನರಿಗಾಗಿ ಅಕ್ಕಿ ದರ ಕಡಿಸೆಯೂಗುವುದು ನ್ಯಾಯನೇ? ತೋಟಗಾರರು ಸಮಾಧಾನದಿಂದ ಕೇಳುವಂಥದೆ ಇನ್ನೊಂದು ವಿಷಯವನ್ನಲ್ಲಿ ಹೇಳಬಹುದು. ಬಮ್ಮೆ ಒಂದು ಆಡಿಕೆಗೆ ಆರ್ಧಾಣೆ ಬೆಲೆಯೂಗಿತ್ತು' ಆದ್ದರಿಂದ ಆವರು ಸ್ವಲ್ಪ ದೊರೂ ಆರ್ಥಿಕ ಸರಿಸ್ಥಿತಿಯಲ್ಲಿದ್ದುಸುಧಾರಿಸಿರಬಹುದು. ಆದ್ದರಿಂದ ಕಳೆದ ವರ್ಷದ ಇಳಿಕೆಯು ಧಾರಣೆಯಲ್ಲೂ ಕೂಲಿಯವರಿಗೆ ನ್ಯಾಯವಾದ (ನುನಸ್ಸಿದ್ದರು) ಸಂಬಳ ಕೊಡಲು ಸಮರ್ಥರಾಗಿರಬಹುದು ಅದಲ್ಲವಾದರೆ ಹೊರ ದೇಶದಿಂದ ಇಲ್ಲಿಗೆ ಬಂದು ವಿಕ್ರಯವಾಗುವ ಅಡಿಕೆಗೆ ಭಾರವಾದ ಸುಂಕ ಹೊರಬೇಕೆಂದು ಕೇಳಿಕೆ ಹೊರಡಿಸಿ, ಅವರಂತೆ ಸಮಯುಸಂತೆ ಸರಕಾರವನ್ನು ಒತ್ತಾಯಿಸಲು ಬಲವಾದ ಚಳವಳಿ ಹೂಡಲಿ' ಇನ್ನೊಂದು ಉಪಾಯ- ತೋಟಗಾರರ ಪೈಕಿ ಪಲವರು ಬೇಸಾಯಗಾರರೂ ಆವ್ವರಂದೆ ತಮ್ಮಲ್ಲಿ ಬೆಳೆದ ಭತ್ತವನ್ನು ತೋಟದ ಬೇಸಾಯಕ್ಕಾಗಿ ಇಟ್ಟುಕೊಂಡು ಧಾನ್ಯದ ರೂಪದಲ್ಲಿಯೇ ಕೂಲಿ ಕೊಡಲು ಅನುಕೂಲವಿಸಿ ಕೊಡುವಂತೆ ಸರಕಾರಕ್ಕೆ ಮನವಿ ಮಾಡಿಕೊಳ್ಳಲಿ' ಆದರೆ ತಮ್ಮ ಹಿತಕ್ಕಾಗಿ ಸಾಪವ ಬಡ ಒಕ್ಕಲಿಗರ ಮೇಲೆ ಹರಿ ಹಾಯುವುದು ಬೇಡ ಎಲ್ಲೋ ಕೆಲವು ವಸ್ತುಗಳನ್ನುಳಿದು ಉಳಿದ ಪದಾರ್ಥಗಳಿಗೆ ದರ ಕಡಿಮೆಯಾಗಲಿಲ್ಲ ಬದಲಿಗೆ ಜಾಸ್ತಿಯಾದುದೂ ಇದೆ. ದೇಶದಲ್ಲೆಲ್ಲಾ ಆಹಾರಾಭಾವವಿದ್ದು ಎಲ್ಲೂ ಆಹಾರ ಪದಾರ್ಥಗಳ ಧಾರಣೆಯಿಳಿದು ಪು ಕೇಳರಿರುವಾಗ ಯಾವಾಗಲೂ ಅನ್ನಕ್ಕೆ ಕೊರತೆಯಾಗಿ ಆರೆ ಗಂಜಿ ರಾಜ್ಯ'ವೆಂದು ಖ್ಯಾತಿವೆತ್ತ ನಮ್ಮಿ ಜಿಲ್ಲೆಯಲ್ಲಿ ಒಮ್ಮೆಯೇ ಅಕ್ಕಿಯ ದರ ಕಡಿಮೆಯಾಗಬೇಕೆ?

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945

— ಮಕ್ಕಳನ್ನು ಹಡೆಯುವುದು ಸಾಕು—

ಆಕಳ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ತೋಗಸ್ತಹಕ್ಕ ಕಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿತೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವಿನಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟೆ ಚಾರ್ಜು ಬೇರೆ.

ಮಾಲಕರು:—**ಹಾಲಪ್ಪಾ ಹಕೀರಪ್ಪಾ ಡಾನಿಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ವಿಜಂಬರು:—ಹುಬ್ಬಳಿ ಧಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಗಕರ, ವಿಜಾಪುರ. ಬಳ್ಳಾರಿಯಲ್ಲಿ—ಹುಂಬರವಾಡಿ ಸ್ಟೋರ್ಸ ಡಿವಿಜಗೇರಿ.—ಹಾವೇರಿ ಪ್ರೆಸ್ಸು, ಆರ್. ಎಲ್. ಕವಲಾಪುರ, ಹಾವೇರಿ ಬ್ಯಾಡಗಿ

Ayurveda Oushadalaya, GADAG CITY.

ಉಡುಪಿ

ಶ್ರೀ ಅಧಮಾರು ಮಠಕ್ಕೆ ಸಂಸ್ಥಾನ ಪೀಠಾಧಿಕಾರಿಗಳ ಮಹಾ ಸ್ವಾಗತ

ಶ್ರೀ ಅಧಮಾರು ಮಠದ ನೂತನ ಪೀಠಾಧಿಕಾರಿಗಳಾದ ಶ್ರೀ ವಿಬುಧೇಂದ್ರ ತೀರ್ಥ ಸ್ವಾಮಿಗಳವರು ರಜತ ಪೀಠ ಪ್ರವೇರೋತ್ಸವವನ್ನು ತಾ. 12ರಲ್ಲಿ ಸಂಜೆ ಸುಲಗ್ನತಾ ಮುಹೂರ್ತದಲ್ಲಿ ನೆರವೇರಿಸಿದರು. ಸ್ವಾಮಿಗಳವರು ತಾಲೂಕು ಕಛೇರಿ ಬಳಿ ಜೋಡುಕಟ್ಟೆಗೆ ಬಂದಿಳಿದೊಡನೆ ಪೂರ್ಣಾಯ ಪುತ್ತಿಗೆ ಮಠದ ಮಹಾ ಜನರ ಸಂಘವು ಮಹಾ ಸ್ವಾಗತವೀಯಲಾಯಿತು. ಸಾಷ್ಟಾಂಗ ನಮಸ್ಕಾರದ ಪರ್ಯಾಯ ಸುರವ ಪರಮಾ ಚಾರ್ಯರೂ ಪ್ರಾಜ್ಞ ಫಲಿಮಾರು ಮಠದ ಕಿರಿಯ ಜನರಲ್ ಸಚಿವರು ಶ್ರೀ. ಎಮ್. ಎಸ್. ಸಹಸ್ರನಾಮರವರೂ ಮಂಬಾರು ಪತ್ರಿಕೆಗಳ ಪರವಾಗಿಯೂ ಉಡುಪಿ ಪತ್ರಿಕೋದ್ಯಮಿಗಳ ಪರವಾಗಿಯೂ ಶ್ರೀ ಯು. ಎಸ್. ಭಟ್ಟರೂ ಸ್ವಾಮಿಗಳವರಿಗೆ ಹಾರ ತುರಾಯಿಗಳನ್ನರ್ಪಿಸಿದರು. ತದನಂತರ ಸ್ವಾಮಿಗಳವರು ನೆರೆದಜನಸಮೂಹಕ್ಕೆ ಕೋಟಿ ಬ್ರಹ್ಮ ರಥದ ಸೇವೆ, ತೀರ್ಥ ಪ್ರಸಾದ ವಿನಿಯೋಗಗಳಿಗೆ ಪ್ರೇರಕರಾಗಿ ಸಭಾ ಮಂಟಪಕ್ಕೆ ಚಿತ್ತೈಸಿದರು. ಕನಕನ ಕಿಂಡಿಯಲ್ಲಿ ಶ್ರೀ ಕೃಷ್ಣನ ದರ್ಶನವನ್ನು ಪಡೆದು ಸುಗೋಷ್ಠಿಗಳಾದ ಶ್ರೀ ಚಂದ್ರೇಶ್ವರ, ಅನಂತೇಶ್ವರ ದೇವಾಲಯಗಳಲ್ಲಿ ಗಂಧ ಪ್ರಸಾದ ಸ್ವೀಕರಿಸಿ ಶ್ರೀ ಕೃಷ್ಣ ಮಂದಿರ ಮಹಾದ್ವಾರಕ್ಕೆ ಆಗಮಿಸಿದಾಗ ಪರ್ಯಾಯ ಪುತ್ತಿಗೆ ಮಠದ ಪೀಠಿಗಳಿಂಗಳವರಿಂದ ಸ್ವಾಗತ ಸಮಾರಂಭ ಜರುಗಿ ಪ್ರಾಯಾಯದಂತೆ ಮಧ್ವ ಸರೋವರದಲ್ಲಿ ತೀರ್ಥ ಪ್ರೋಕ್ಷಣಾದಿಗಳನ್ನೆಸಗಿದ ಶ್ರೀ ಕೃಷ್ಣ, ಆಂಜನೇಯ ಸ್ವಾಮಿಯ ದರ್ಶನ ಪಡೆದು ಕಾಣಿಕೆಗಳನ್ನರ್ಪಿಸಿ ಪರ್ಯಾಯ ಸ್ವಾಮಿಗಳವರಿಂದ ಆಶೀರ್ವಾದಗಳನ್ನು ಪಡೆದು ತಮ್ಮ ಸಪರಿವಾರಾಧಿಪತಿಯೊಡನೆ ಸುರವ ಜನರಲ್ ಮ್ಯಾನೇಜರ್ ಶ್ರೀ. ಎಮ್. ನಿಂಕೋವಾ ಚಾರ್ಯರೇ ಮೊದಲಾದ ಹಲವರನ್ನು ಎಡ ಬಿಟ್ಟಲ್ಲಿರಿಸಿಕೊಂಡು ಜಯ ಘೋಷಗಳೊಂದಿಗೆ ಮಠ ಪ್ರವೇಶ ಮಾಡಿದರು. ಶ್ರೀ. ಮಠದಲ್ಲಿ ಮಂತ್ರಾಕ್ಷತೆ ವಿತರಣೆಯಾಯಿತು. ಭಕ್ತ ವೈದಿಕ ಮಹಾ ಜನರಿಗೆ ಪಂಚಕಜ್ಜಾಯ ಹಂಚಲಾಯಿತು.

'ಯಕ್ಷಗಾನ ಕಲಾಮಂಡಲ'—ಇದರ ಪ್ರಥಮ ವರ್ಧಂತ್ಯುತ್ಸವವು ತಾ 11ನೇ ಆದಿತ್ಯವಾರ ಶಾಲಾ. ಡಿ. ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಟೌನ್ ಹಾಲ್‌ನಲ್ಲಿ ಜರಗಿತು. ಸುಂದಲಪಲ್ಲಿ ಉಪಾಧ್ಯಕ್ಷ ಶ್ರೀ. ಎನ್. ರಾಜಗೋಪಾಲಕೃಷ್ಣರಾಯರ ಸುಮಾತುಗಳಾದ ಮೇಲೆ ಜತೆ ಕಾರ್ಯದರ್ಶಿ ಶ್ರೀ. ಪಿ. ಬಾಲಕೃಷ್ಣ ಹೆಗ್ಡೆಯವರು ಸಂಘಾಧಿಯಲ್ಲಿ ಸುಂದಲವು ಪತೆದ ಸರ್ವತೋಮುಖ ಅಭಿವೃದ್ಧಿಯನ್ನು ತಿಳಿಸಿ ಪದದಿಯನ್ನು ಸಭೆಯ ಮುಂದಿಟ್ಟರು. ಮುಹಾ ಭಾರತದ ಕೃಷ್ಣರಾಯಬಾರ ದೊಂಮ ಭಾಗವನ್ನು ಶ್ರೀ ಸೊಲ್ಲ ನೇಜರ ಕೆಟ್ಟ ಹೋಳಿ ಅರ್ಥ ವಿಸ್ತಾರ ಸೂಡಿದ ನೇರೆ ಶ್ರೀಗಳಾದ ಕಿರಿಯಲ್ಲಾ ಶ್ರೀಸಾಮಕರಾಯ. ಮತ್ತು ಕೆ. ರಂಕರನಾರಾಯಣ ಉಪಾಧ್ಯ ಯರು, ಭಾಷಣಮಾಡಿದರು. ಯಕ್ಷಗಾನ ಕಲೆಗಿರುವ ಮಹತ್ವ, ಸ್ಥಾನ, ಇತ್ಯಾದಿಗಳ ಸ್ಥಿತಿಯ ಬಗ್ಗೆ ಅವರು ಸಂಕ್ಷಿಪ್ತವಾಗಿ ಬೆಳಕನ್ನು ಕೊಟ್ಟರು. ಅಧ್ಯಕ್ಷರು, ಈ ಕಲೆಯಿಂದಾಗುವ ಪ್ರಯೋಜನ ಪ್ರಚಾರ ಮತ್ತು ಜನ ಜಾಗ್ರತಿಗಳನ್ನು ವಿವರಿಸಿದ ಬಳಿಕ ಶ್ರೀ. ಕಾಡಪ್ಪ ಯ್ಯನವರ ಧನ್ಯವಾದಗಳಾಯಿತು. ರಾತ್ರಿ ಕಾರ್ಯಕ್ರಮ- ಶ್ರೀ ಕೆ. ನಾರಾಯಣ ಸಪ್ಪರ ಭಾಗವತಿಕೆಯಲ್ಲಿ ಮಂಡಲದ ಸದಸ್ಯರ ಹಾಗೂ ಪರ ಊರ ಅರ್ಥಧಾರಿಗಳ ಕೂಡುವಿಕೆಯಿಂದ 'ರಾಜಸೂಯ' ಪ್ರಸಂಗದ ತಾಳ ಮದ್ದಳೆ ಸುಶ್ರಾವ್ಯವಾಗಿ ನಡೆಯಿತು. ಶ್ರೀ. ಪಿ. ವೇಣು ಸೆಟ್ಟರು ಧನ್ಯವಾದವಿತ್ತರು.

ಬೈಲೂರು—ಮುದ್ದೋತ್ತರ ಯೋಜನೆ ಹಲವು ಯಾತ್ರಿಕ ತಜ್ಞರು ಆಗಮಿಸಿದ್ದ ದರಿಂದ ಮದ್ರಾಸು ಸರಕಾರದವರು, ತಮ್ಮ ನೆಚ್ಚಿನಿಂದ ಈ ಪ್ರಾತ್ಯಹಿದ 24 B.S.C ಕಲಿತವರನ್ನು ಬಾಚ್ಚತರ ನಿರ್ದ್ಯಾಜನೆ ಬಗ್ಗೆ ವಿದೇಶಕ್ಕೆ ಕಳುಹಿಸಲಿಕ್ಕೆ ಇರುತ್ತಾರೆ. ಆ ಪೈ [illegible] ಸಮ್ಮ ವಕ್ಷಿಣಕನ್ನಡ ಜಿಲ್ಲೆಯ [illegible] ಎಂ. ಜೆ. ತ್ರಿನಿಕ್ಷಮ ಶಟ್ಟಿಯವರನ್ನು ಬೇಕೆಂದು ಕಳುಹಿಸುವ ಸಮಾರಂಭವು ತಾ 6 11 45 ರಲ್ಲಿ ಶ್ರೀ. ಬಿ. ಕೇಶವ ಕಿದಿಯನವರಿಂದ ನೆರವೇರಿಸಲ್ಪಟ್ಟಿತು.

ಮಂಗಳೂರು.

ಜಿಲ್ಲಾ ಎಲ್. ಐ ಎಂ. ಡಾಕ್ಟರುಗಳ ಪರಿಷತ್ತನ್ನು—ದಶಂಬರ ತಾ 26 27ನೆ ದಿನಗಳಲ್ಲಿ ಮಂಗಳೂರಲ್ಲಿ ಜರಗಿ ನಡೆಯಲಿರುವುದಾಗಿ ಇತ್ತೀಚೆಗೆ ಗಣಪತಿ ಹೈಸ್ಕೂಲಿನಲ್ಲಿ ದಾ ಎಸ್. ಎಸ್ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ನಿರ್ಧಾರವಾಗಿದೆ. ಕತ್ತಲಬಂಧ ಸ್ವಾಗತ ಸಮಿತಿಯು ರಚನೆಯೂ ಆಗಿದೆ.

ಜಿಲ್ಲಾ ಪ್ರದರ್ಶನ

ದಶಂಬ್ರ ತಾ. 21, 22 & 23ರಲ್ಲಿ ಮುಲ್ಕಿಯಲ್ಲಿ ಜರಗುವುದು

ಜಿಲ್ಲಾ ಕಲೆಕ್ಟರರು ಅಧ್ಯಕ್ಷರಿರುವ ಜಿಲ್ಲಾ ಅಭಿವೃದ್ಧಿ ಸಂಘದ ನೇತೃತ್ವದಲ್ಲಿ ಮುಲ್ಕಿ ಸೆಂಟರಿನಲ್ಲಿ ಯತ್ನಿಸಲ್ಪಡುವ ಗ್ರಾಮಾಭಿವೃದ್ಧಿ ಕಾರ್ಯದ ಸಹಾಯಾರ್ಥವಾಗಿ

ವ್ಯವಸಾಯ ಮತ್ತು ಗೃಹಕೈಗಾರಿಕೆ

ಪ್ರದರ್ಶನವು ನಡೆಯುವುದು.

ಇದು ಯಶಸ್ವಿಯಾಗುವಂತೆ ಎಲ್ಲರ ಸಹಕಾರವು ಅಗತ್ಯವಿದೆ.

ಕೃಷಿ, ಕೈಗಾರಿಕೆ, ಪಶು, ವೈದ್ಯಕೀಯ, ವಿದ್ಯಾ ವಸ್ತುಗಳ ಇಲಾಖೆಗಳೆಲ್ಲವೂ ಮುಖ್ಯ ಭಾಗವನ್ನು ವಹಿಸಿಕೊಳ್ಳುವಂತಿದೆ.

ಜಿಲ್ಲೆಯ ಎಲ್ಲವರಿಗೂ ಬಂದು ನೋಡಿ ತಿಳಿಯಲು ಇದು ಸುಯೋಗವಕಾಶ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು

ತಾರೀಕು 10-11-46 ಮುಲ್ಕಿ

ಎಮ್. ಆರ್. ಪೂಂಜ, ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಸ್ಥಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚವನ್ಯ ಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಏಕ. ಉಬ್ಬಸ, ಶ್ವಾಸಕೋಶ ಸಂಬಂಧಪಟ್ಟ ರೋಗಗಳಿಗೆ ದಿವ್ಯ ಔಷಧ. ದಾರಿದ್ರಿಕ ಮತ್ತು ಹೆದೆಯನ ರಕ್ತವನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು)

ನರಗಳ ಮತ್ತು ಜನನೇಂದ್ರಿಯದ ರಕ್ತಹೀನತೆ, ಇದೆನೋವು, ಸುಟ್ಟಿಬ್ಬೆ ಬೆನ್ನುನೋವು, ಸಾಯು ಉಸಿರ್ಲೆ ಹೊವಲಾಮೆವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ತು 1ರ 10-0-0. ½ ರಾತ್ತು 5-14-0, ¼ ರಾತ್ತು 2-13-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರಯುತ್ತವೆ. ಸ್ಟಾಲ್ ಕಂತ್ರಿ ಸರದಲ್ಲಿ ರೋಗಕ್ಕೆ ತಕ್ಕಂತಾದ ಔಷಧ ದಾಸ್ತಾನಿರುವ. (1) ಉಡುಪಿ ವಿಜಯಲಕ್ಷ್ಮಿ — ನವಭಾರತ ಬುಕ್ ಡಿಪೊ, (2 ಜೋಂಬಾಮಿ ಬಿಲ್ಡಿಂಗ್ಸ್ ಪೊಲೀಸ್ ಸ್ಟೇಷನ್ಸ್, ಕೆಮಿಸ್ಟ್‌ರಿ183. ಸುಲ್ತಾನ್‌ಬಾಗ್ ರೋಡ್, ಜಿ. ಐ ಪಿ ರೈಲ್ವೆ ವರ್ಕ್ ಶಾಪ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ESTD. 1926
CROWN RUBBER STAMP Co.
MFRS OF
RUBBER STAMPS
ENGRAVERS
BALMATTA ROAD, MANGALORE S.K.

Approved firm by the Govt. of Mysore Certified by the Agent of the Govt. of India and Ceylon.

BANK WITH THE LARGEST CONNECTIONS ON THE [illegible]

OFFERS:-

EFFICENT PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd

ಮುಳ್ಳು ಮದುನೆಯ ನೆವದಿಂದ ಪಡೆದ ಸಕ್ಕರೆ, ಸೀಮೆ ಎಣ್ಣೆಯ ಸ್ವಾಧೀನ—ಇಂಡೀಯಿಲ್ ಲಿಂಗಕನ ಜಿ. ನಿರಾಸುಜಾಪ್ಪ ಮತ್ತು ಬಾಳ್ಳಿಲೆಯ ಅಸ್ಸಯ್ಯ ಎಂಬವರು ಸುಳ್ಳು ನೆವದಿನೆಯ ಕಾರಣ ಕೋರಿಸಿ ಆರ್ಜ ಮಾಡಿ ಪ್ರೆಜರಿಗೆ ಕಲೆಕ್ಟರರಿಂದ ಸುಮಾರು ಮಣ ಸಕ್ಕರೆ ಮತ್ತು ನಾಲ್ಕು ಪಾಟ್ಲ ಬೆನಿಗೆ ಎಣ್ಣೆ ಪಡೆದರೆಂಬ ಆರೋಪದ ಮೊಕದ್ದಮೆಯು ಸರ್ ದಿನಿಜನಲ್ ಮೆಜಸ್ಟ್ರೇಟರಾದ ಶ್ರೀ. ಪಿ. ವಿ. ಕಾಥವ ರಾಯರಲ್ಲಿ ತಿಸ್ಸಿ ನಡೆದು ಪ್ರತಿಯೊಬ್ಬನಿಗೂ ತಲಾ ಸಾರಣು ತಿಂಗಳ ಕಠಿಣ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ಜುಲ್ಮಾನೆ ಸಥಿಸಲಾಗಿದೆ. ಬಬ್ಬರೂ ಜ್ಯಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟಿರುವರು.

ಮೂಲ ತೀರ್ಪು ಕಾಯಂ— ಇಲ್ಲಿ ನ ಪೋಲೀಸ್ ಕಾನ್‌ಸ್ಟೇಬಲ್ ಇಸಾಕ್ ಸೂಜ ಮತ್ತು ಅಂಬಿ ಸ್ಟ್ಯಾನಿಂಗ್ ಶಾಪಿನ ಪೋಲೀಸ್ ಕಾನ್‌ಸ್ಟೇಬಲ್ ನರಸಿಂಹ ಇವರುಗಳ ಮೇಲೆ ಹೆಂಗಸ್ಸು ಕೃಷ್ಣಿಯನ್ನು ಹಾಜರುಪಡಿಸುತ್ತಿದ ದೇವು ಆರೋಪದ ಮೊಕದ್ದಮೆಯು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಗೆ ಬಂದಿದ್ದು ಆರೋಪಿಗಳಿಗೆ ತಲಾ ರೂಪಾಯಿ 50/ ದಂಡನೆ ವಿಧಿಸಿ ಸೆಷನ್ಸ್ ಜಡ್ಜಿಯವರ ಮೇಲ್ಕಂಡ ತೀರ್ಪನ್ನು ಕಾಯಂ ಮಾಡಿರುವರು.

ರಾಗಿ ದಾಸ್ತಾನು ಹೆಚ್ಚು ಇದೆ—ಜಿಲ್ಲೆಯಲ್ಲಿ ಹೆಚ್ಚು ರಾಗಿಯು ದಾಸ್ತಾನಿದೆ, ಅದು ಬೇಗನೆ ಖರ್ಚಾಗಬೇಕಾದ ವೆ. ಹೆಚ್ಚಿನ ಜನರೂ ರೈತರು ಯಾ ಕೆಳ ಪಕ್ಕಲಿನವರು ಎಂದು ಅತ್ತ ಆಧಿಕಾರಿಯು ಬಿಡಿಸಿ ರಿಗಿಯನ್ನು ತಿಳಿಸಿದರು. ಆದರಿಂದ ಅದರ ಹೆಚ್ಚಿನ ಹೆಚ್ಚಿನ ಕ್ರಯವನ್ನು ಸಡಿಲು ರಾಗಿ ಕೊಡಬಹುದೆಂದೂ ರಲ್ಲೀ ಎತ್ತ ಯಾ ಎಕ್ಕಡಾದರೂ ಗೋದಿಯನ್ನು ಪಡೆಕೊಳ್ಳಬಹುದೆಂದು ಆ ಎಗ್ಗೆ ಜಿಲ್ಲಾ ಕಲೆಕ್ಟರರ ಆ ನುಮತಿ ಪೊರೆತಿರುವುದೆಂದೂ ಸೆ. ಕ ಜಿಲ್ಲಾ ಸೆಪ್ಲೈಲ್ ಸ್ಟೋರ್ಸ್‌ನ ಅಧ್ಯಕ್ಷರಾದ ಶ್ರೀ ಹೊಳ್ಳರವರ ಪಿಜರಾಯರ ಪ್ರಕಟಣೆಯಿಂದ ತಿಳಿದುಬಂದಿದೆ.

ದಕ್ಷಿಣ ಕನ್ನಡ

ಮಂಗಳೂರು

ದೀಪಾವಳಿ ಕಲೋತ್ಸವವು ಸ್ಥಳೀಯ ಪ್ರಕಾಶ ಕೂಟದ ಆಶ್ರಯದಲ್ಲಿ ತಾ 4 ರಂದು ಆಚರಿಸಲ್ಪಟ್ಟಿತು. ಶ್ರೀ। ಕಡಂಗೋಡ್ಲು ಶಂಕರ ಭಟ್ಟರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಅಮ್ಮೆಂಬಳ ಶಂಕರನಾರಾಯಣ ಟಿ. ಗೋಪಾಲಕೃಷ್ಣ ಭಟ್, ಸಿ. ಕೆ. ನಾರಾಯಣ, ಮೊದಲಾದವರು ಭಾಷಣವಿತ್ತರು.

ಕಮರ್ಶಿಯಲ್–ಸೇಲ್ಸ್ ಟೇಕ್ಸ್ ಅಸೀಸರರು ತಮ್ಮೊದು ಹೇಳಿಕೆಯಲ್ಲಿ ಹೀಗೆ ಪ್ರಕಟಿಸಿದ್ದಾರೆ: ಆಹಾರ ಧಾನ್ಯ ವಿತರಣಾಧಿಕಾರಿಗಳನ್ನು ಹೊಂದಿದ ಪ್ರತಿ ಲೈಸನ್ಸ್‌ದಾರರೂ ಇನ್ನು ಮುಂದೆ. ತಾವು ಕಳುಹಿಸುವ ನೂಲಿಕ ಸ್ಟಾಕ್ ಲೆಕ್ಕದಲ್ಲಿ (ಸಿ' ಫಾರ್ಮ್) ಕಡಿ ಮುತ್ತು ಇದ್ದಿ ಆಕ್ಕಿಯ ಸಂಗ್ರಹಗಳನ್ನು ಬೇರೆ ಬೇರೆಯಾಗಿ ತೋರಿಸಬೇಕು.

ಸೀನಿಯರ್ ಕ್ರಿಕೆಟ್– ಪಂದ್ಯಾಟದ ಕೊನೆಯ ಪಂದ್ಯವು ಎಲೋಸಿಯಸ್ ಕಾಲೇಜ್ ಮತ್ತು ಕೆನರಾ ಪ್ರೈಸ್ಕೂಲುಗಳೊಳಗೆ ನಡೆಯು ಕೆನರಾ ಪ್ರೈಸ್ಕೂಲಿನವರು ಗೆದ್ದರು

ಕ್ರಿಮಿನಲ್ ಮೊಕದ್ದಮೆ-ಉಡುಪಿಯ ಇನ್ಸ್‌ಂಜಿ ಗ್ರಾಮದಲ್ಲಿ ಗದ್ದೆ ನೀರಿನ ವಿವಾದದಲ್ಲಿ ಬೆಂಕಿ ಸೆಟ್ಟಿ ಎಂಬಾತನ ಕೊಲೆ ನಡೆದಿದ್ದು, ಈ ತಕ್ಷೀರಿನ ಪ್ರಥಮ ಆರೋಪಿ ಸಿಲಾಸ್ ಸೋನ್ಸ್‌ನಿಗೆ ಬಾಪು ಶಿಕ್ಷೆ ವಿಧಿಸಲಾಯಿತು.

ಶ್ರೀ. ಎಂ. ಕೆ. ಶ್ರೀಧರ ಕುಡ್ವರು ಕಳೆದ ತಾ 6-11 45ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಸ್ಥಳೀಯ ಸಿ. ಪಿ. ಸಿ ಕಂಪೆನಿಯ ಕಾರ್ಯದರ್ಶಿಗಳಾಗಿ ಕಳೆದ 1916ನೆಯ ಇಸವಿಯಿಂದಲೂ ದುಡಿದು ಕಂಪೆನಿಗೆ ಅನನ್ಯ ಸೇವೆಯನ್ನು ಸಲ್ಲಿಸಿದ್ದಾರೆ. ತಾ 7ರಂದು ಮೃತರ ಕಳೇಬರವು ಬಲು ವಿಜೃಂಭಣೆಯಿಂದ ದಫನ ಸ್ಥಳಕ್ಕೆ ಸಾಗಿಸಲ್ಪಟ್ಟಿತು.

ಜಿಲ್ಲಾ ಬೀಂಕರರ

ಸಭೆಯೊಂದು ಇತ್ತೀಚೆಗೆ ಸ್ಥಳೀಯ ರಥ ಬೀದಿಯ ಕೆನರಾ ಕಾರ್ಪೊರೇಸನ್ ಬೀಂಕ್ ಕಟ್ಟಡದಲ್ಲಿ ನೆರೆತು. ಶ್ರೀ. ಬಿ. ವೈಕುಂಠ ಬಾಳಿಗರು ಈ ಸಭೆಯ ಕಸ್ಟೀನರು. ನಗರದ ಪ್ರಸಿದ್ಧ ಬೀಂಕರುಗಳೂ, ಬೀಂಕುಗಳ ಪ್ರತಿನಿಧಿಗಳೂ ವ್ಯಾಪಾರಿಗಳೂ ನೆರೆದಿದ್ದರು. ಶ್ರೀ ಎ. ಸೂಥನರಾಯರು ಅಧ್ಯಕ್ಷತೆ ವಹಿಸಿದರು. ಬೀಂಕುಗಳ ಪ್ರಗತಿ ಮಾರ್ಗದಲ್ಲಿ ಬರುವ ಅಡೆತಡೆಗಳನ್ನು ಶೋಧಿಸಿ ಅವುಗಳ ಗೆ ಇವಾ [illegible] ಡಕ ವುದೇ ಈ ಸಭೆಯ ಉದ್ದೇಶ. ಜರುಂಬರ ಕೊನೆಯ ಸಭೆಯಲ್ಲಿ ಪ್ರಾರಂಭಿಸಿದ್ದು ಬೀಂಕರರ ಪರಿಷತ್ತೊಂದು ಕರೆಯುವ ನಿರ್ಧಾರವನ್ನು ಪೂರ್ತಿ ಲಾಯಿತು. ಪ್ರಾರಂಭದ ಎಲ್ಲಾ ಬೀಂಕುಗಳೂ ತಮ್ಮ ವ್ಯೈರೆಕ್ಟರರಲ್ಲೊಬ್ಬರನ್ನು ಈ ಪರಿಷತ್ತಿಗೆ ಪ್ರತಿನಿಧಿಗಳಾಗಿ ಬರುವಂತೆ ಕೇಳಿಕೊಳ್ಳಲಾಗುವುದು. ಶ್ರೀಗಳಾದ ಸ. ವೈಕುಂಠ ಬಾಳಿಗ, ರಾ. ಸ. ರಂಗನಾಥ ಪೂಂಜ, ಪೆಲಿಕ್ಸ್ ಪೈ, ಗೋ [illegible] ಪೈ, ಸಿ. ವಿ. ಯನ್ ಪಾಯಸ್ ಇವರನ್ನೊಳಗೊಂಡ ಸಮಿತಿಯು ರಚಿತವಾಯಿತು.

ವಿಟ್ಲ–ಶ್ರೀ. ಕೆ. ಆರ್. ಕಾರಂತರು 'ಕಾಂಗ್ರೆಸು' ಕಾಂಗ್ರೆಸಿಗರು ದೇಶಕ್ಕೆ ಸಲ್ಲಿಸಿದ ಸೇವೆ, ತ್ಯಾಗ, ಆಂದಿನಿಂದ-ಇಂದಿನ ತನಕ ಕಾಂಗ್ರೆಸು ನಡೆದ ಹೆಜ್ಜೆ-ಅನುಸರಿಸಿದ ದಾರಿ ಪ್ರಗತಿ ಪರವಾದುದು ಜಗತ್ತೇ ಭಾರತದ ಕಡೆ ದೃಷ್ಟಿ ಹರಿಸುವಂತೆ ಮಾಡಿದೆ'. ಇತ್ಯಾದಿಯಾಗಿ ತಾ. ೪ರಂದು ಸಂಜೆ ವಿಟ್ಲ ಕಾಂಗ್ರೆಸು ಬುಚೇರಿಯಲ್ಲಿ ಊರ ಮತ್ತು ಸೆರೆ ಗ್ರಾಮದ ಕೆಲಸಗಾರರ ಮತ್ತು ಊರ ಮಹಾಜನರ ಸಭೆಯಲ್ಲಿ ಶ್ರೀ ರಾಮಕೃಷ್ಣ ಕಾರಂತರು ಜಾನಾವಣೆಯ ಕಹಳೆಯನ್ನೂದಿದರು. ಪುತ್ತೂರಿನ ವಕೀಲರಾದ ಶ್ರೀ. ಸದಾಶಿವರಾಯರು ಆಗ್ರಾಸವನ್ನಲಂಕರಿಸಿದ್ದರು. ಶ್ರೀ. ಕಾರಂತರು ಸುಮಾರು ೧ ಗಂಟೆಯ ತನಕ ಭಾಷಣ ಮಾಡಿ ಕಾಂಗ್ರೆಸಿಗರು ಹಿಂದಿನ ಸಲ ನ್ಯಾಯ ವಿಧಾಯಕ ಸಭೆಗೆ ಆರಿಸಿ ಬಂದು ಅಲ್ಲಿಗೆ ಸ್ವದೇಶಿನಿದೊಡನೆ ಅದ ತಡೆ ತೊಂದರೆಗಳನ್ನು ವಿವರಿಸಿ, ಮುಂದೆ ಅವರೇಕೆ ನ್ಯಾಯ ವಿಧಾಯಕ ಸಭೆಯಿಂದ ಹೊರ ಬರಬೇಕಾಯಿತು? ಎಂಬುದನ್ನು ಹೇಳಿ ಕ್ರಿಪ್ಸ್ ಕೊಡುಗೆಯ ಹುರುಳೇನಿತ್ತು? ಸಿಮ್ಲಾ ಪರಿಷತ್ತು ಏಕೆ ಸೇರಿತು? ಎಂಬುದನ್ನು ಹೇಳಿದರು. ಸಭಿಕರಿಂದ ಕೇಳಲ್ಪಟ್ಟ ಪ್ರಶ್ನೆಗಳನ್ನೂ ಉತ್ತರಿಸಿದರು

ವಿಟ್ಲದೆ ಕೊನ್ನಾಡು ಗ್ರಾಮದಲ್ಲಿ ಪುತ್ತಬ್ಬ ಎಂಬಾತನ ಕೊಲೆಯ ವ್ಯವಹಾರದಲ್ಲಿ ಬಾಪುಕುಂಞ ಖಂಬಾತನಿಗೆ ಪಾಸಿನಜೆ ವಿಧಿಸಲಾಯಿತು.

ಧರ್ಮಸ್ಥಳ-ಶ್ರೀಮಾನ್ ಡಿ. ಮಂಜಯ್ಯ ಹೆಗ್ಗಡೆಯವರ ಧರ್ಮಪತ್ನಿ ಶ್ರೀಮತಿ ಅಮ್ಮನವರು ಕಳೆದ ತಾ. 30ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದ ಪಡುತ್ತೇವೆ ಇವರು, ಉತ್ತರ ಭಾರತದಲ್ಲಿ ಜರಗಿದ ೨೮ನೆಯ ಅಖಿಲ ಭಾರತ ಮಹಿಳಾ ಸಮ್ಮೇಲನದ ಅಧ್ಯಕ್ಷೆಯರಾಗಿದ್ದು ಮಹಿಳಾ ವ್ಯಂದಕ್ಕೆ ಸನ್ಮಾರ್ಗ ಸಂದೇಶವನ್ನೆ ಮಾಡಿದ್ದರು.

ಪಾಣಾಜೆಯಲ್ಲಿ-ಅತ್ಯಂತ ಹಾನಿ ಮಾಡುತಿದೆ ಹುಲಿಗಳಲ್ಲಿ-ಆಡಿಯಹುಲಿಯೊಂದು ಕಳೆದ ಬುಧವಾರ ಕಾಕಿಕೊಟ್ಟಿ ಸಹೋನೆತ ಯ ಬೇಟೆಯಾಡಿ ಗುಂಡಿಕ್ಕಿ ಕೊಂದರು.

ಕಾಸರಗೋಡು-ತಾಲೂಕು ಬೋರ್ಡ ಮತ್ತು ಎಡೆದ್ ಎಲಿಮೆಂಟರಿ ಟೀಚರ್ಸ್ ಯೂನಿಯನುಗಳ ಸಂಯುಕ್ತ ಸಮ್ಮೇಳನವು ಉದಿನೂರು (ಚರ್ವತ್ತೂರು ವೈಲ್ಡ್ ಸೈಶನಿನಿಂದ 2½ ಸೈಲು ದಕ್ಷಿಣಕ್ಕೆ) ಶಾಲೆಯ ಮುಂಭಾಗದಲ್ಲಿ ಪ್ರತ್ಯೇಕ ನಿರ್ಮಿಸಲ್ಪಟ್ಟಿರುವ "ವಿ. ಆರ್. ನಾಯನಾರ್" ನಗರಿಯಲ್ಲಿ ಜರಗಲಿದೆ. 27-10' 45ಕ್ಕೆ ಉದಿನೂರ್ ಸಾತ್ ಇನ್ಸ್ಟಾಮಿಯ ಸ್ಕೂಲಿನಲ್ಲಿ ನೇರಿದ ಸಭೆಯಲ್ಲಿ 21 ಸದಸ್ಯರಡಗಿದ ಒಂದು ಸ್ವಾಗತ ಸಂಘವು ರಂಪೀಕರಿಸಲ್ಪಟ್ಟಿದೆ.

ನೇಮಕ-ಕಾಸರಗೋಡು ಪ್ರಿನ್ಸಿಪಲ್ ಡಿ. ಮುನ್ಸಿಫರಾದ ಬಿ. ಎ. ನಜರತರನ್ನು ಪುತ್ತೂರು ಡಿ। ಮುನ್ಸಿಫರಾಗಿ ನೇಮಿಸಿ ಮಿ. ಟಿ. ವಿ. ಬಿ. ಸಿ. ಕುಲಾಸೋರವರನ್ನು ಕಾಸರಗೋಡು ಎಡಿಶನಲ್ ಮುನ್ಸಿಫರಾಗಿ ನೇಮಿಸಲಾಗಿದೆ.

ಶುಭ್ರಹ್ಮಣ್ಯ-ಸುಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪಾರ್ಥವ ತಾ. 1-12-'45ರಂದ ತಾ. 11 12 '45ರ ತನಕ ಉತ್ಪಾದಿಗಳುಜರಗಲಿವೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾರ್ಕಳ-ಪೊಸ್ಟಿ ದಿನಾಚರಣೆಯು ಸ್ಥಳೀಯ ಪಂಚಾಯತ ಕೋರ್ಟಿನಲ್ಲಿ ಶ್ರೀ ವಿ.ವಿ. ಶೆಣೈರವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಡಿಪ್ಯೂಟಿ ತಹಸಿಲ್ದಾರ ಮಿ. ಜೋಸೆಫ ಬಿ. ಎ. ರವರು, ತಾಲೂಕು ಸಬ್ಸ್ಟಾ ಆಫಿಸರರಾದ ಶ್ರೀ. ಬಿ. ಎನ್. ಹೆಗ್ಡೆ ಬಿ. ಎ ಸೊದ ಲಾದವರ ಸಂದರ್ಭೋಚಿತ ಭಾಷಣಗಳಿದ್ದುವು.

ಸರ್ಕಲ್ ಕಾಂಗ್ರೆಸ್-ಸಮಿತಿಯ ಸಭೆಯೊಂದು ಶ್ರೀ ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾ. 5ರಂದು ಜರಗಿತು. ರಾಷ್ಟ್ರೀಯ ಸೇನಾ ವಳದ ನಾಯಕರನ್ನು ಬಿಟ್ಟು ಬಿಡಬೇಕೆನ್ನುವ ಮೊದಲಾದ ಹಲವು ರಾವುಗಳು ಮಾನ್ಯವಾದ ಬಳಿಕ ಸಮಿತಿಯ ನವೀಕರಣವಾಯಿತು.

ಸ್ಥಳೀಯ ಅನಾಥಾಶ್ರಮದಲ್ಲಿ ಶ್ರೀ. ಸದಾನಂದ ಕಲ್ಲರವರ ಅಧ್ಯಕ್ಷತೆಯಲ್ಲಿ ಗೋರಕ್ಷಣಾ ಸಭೆ ಜರುಗಿತು. ಶ್ರೀ. ಬಿ. ವಾಸುದೇವ ಹೆಗ್ಡೆ, ಶ್ರೀ ದಾಮೋದರಬಲಂಗೇರ ಮೊದಲಾದವರ ಸಂದರ್ಭೋಚಿತ ಭಾಷಣಗಳಿದ್ದವು. ಬಾಮೋದರ ಬಂಗೇರರವರ ಹೆಚ್ಚಿನ ಪರಿಶ್ರಮ, ತ್ಯಾಗದ ಕುರಿತೂ ಭಾಷಣಗಳಾದವು.

ಸ್ಥಳೀಯ ಭೂತ ಗುಡಿ ಮೈದಾನಿನಲ್ಲಿ ಕ್ರಿಕೆಟ್ ಆಟವು ಆರಂಭ ಆಗಿಯದೆ. ದಿಸ್ಟ್ರಿಕ್ಟ ಮುನ್ಸಿಫರಾದ ಶ್ರೀ. ಬಿ. ಕೊರಗಪ್ಪನವರೂ ಡಾಕ್ಟರ್. ಬಿ. ಶಂಬು ಹೆಗ್ಡೆ M. B. B. S. ರವರೂ ಭಾಗ ವಹಿಸಿದ್ದರು.

ಕಡಬ-ಇಲ್ಲಿಯ ವೇದಾಂತ ಸಂಘದವರು ತಾ. 4-11-'45ರಲ್ಲಿ ಶ್ರೀ। ವರ್ಧಮಾನ ಮಹಾವೀರ ಸ್ವಾಮಿಯ ಪುಣ್ಯ ದಿನವನ್ನು ಸ್ಥಳೀಯ ಚಿತ್ತರಂಜನ ಕ್ಲಬ್ಬಿನಲ್ಲಿ ಜರಗಿಸಿದರು. ಡಾ। ಕೆ. ಕೆ. ಶೆಣೈ ಅಧ್ಯಕ್ಷತೆಯಲ್ಲಿ ಸರ್ವಜನಿಕ ಸಭೆ ಜರಗಿ ಭಾಷಣಗಳಾದುವು.

ಸಾಂತೂರು-ಕೊಪ್ಪ ಬೋರ್ಡು ಎಲಿಮೆಂಟರಿ ಶಾಲೆಯ ನವೀನ ಕಟ್ಟಡದ ಸಹಾಯಾರ್ಥವಾಗಿ, ಜನಪ್ರೀತ ಛಲಿಪಾವು ಡಾಕ್ಟರ್ ಶ್ರೀ. ಟಿ. ಎಸ್. ಕುನಿಹಾರನ್ ನಂಬಿಯಾರರು, ಒಂದು ಸಾವಿರ ಹಂಚುಗಳನ್ನು ಉದಾರ ಮನಸ್ಸಿನಿಂದ ಕೊಟ್ಟರುವದು ಸ್ತುತ್ಯ.

ಪಡುಬಿದ್ರಿ-ತಾ. 1-11-45ರಂದು ಸ್ಥಳೀಯ ಬೋ. ಹಾ. ಎ. ಶಾಲಾ ಹೊಸ ಕಟ್ಟಡ ಶಂಕು ಸ್ಥಾಪನಾ ಸಮಾರಂಭವು ಶ್ರೀ. ಎ. ಲಕ್ಷ್ಮೀನಾರಾಯಣರಾವ್, ಬಿ. ಎ, ಬಿ. ಎಲ್ ಇವರ ನೇತೃತ್ವದಲ್ಲಿ ಸಂಭ್ರಮದಿಂದ ನೆರವೇರಿಸಲ್ಪಟ್ಟೊದನೆ ನೆರೆದು ಬಂದಿದ್ದ ಉದಾರ ಶೀಲರಾದ ಕೆಲ ಮಹನೀಯರು ಒಂದು ಸಾವಿರ ರೂಪ್ಯಾಗಳಿಗೆ ಮೇಲ್ಪಟ್ಟಿಪ್ಪು ಹಣವನ್ನು ಹಗ್ಡಿಯಿಂದ ಪ್ರೆಸಿಡೆಂಟರವರ ಹಸ್ತದಲ್ಲಿ ಶಾಲಾ ಕಟ್ಟಡ ನಿಸ್ತರಣಾ ಕಮಿಟಿಗೆ ಒಪ್ಪಿಸಿದರು. ತಾ.28-10-45ಲ್ಲು ಶ್ರೀ.ಕೆ. ಸಂಜೀವ ಭಟ್, ಯು.ಎ.ಯಲ್ ಟಿ ಇವರ ಅಧ್ಯಕ್ಷತೆಯಲ್ಲಿ ಹಾಗೂ ಈ ದಿನ ರಾತ್ರೆ ಶ್ರೀ. ರಾಯರ ಸಮಕ್ಷಮ ದೋವರ್ ಸ್ಟಾರ್ ದಳದವರು ಅಳಿಸಿಯಿಸಿದ ನಾಟಕದಿಂದ ಸುಮಾರು ಒಂದು ಸಾವಿರ ರೂಪ್ಯಾಗಳಷ್ಟು ಧನ ಸಂಚಯವಾಗಿರುವುದು ಸ್ತುತ್ಯಾರ್ಹವು.

ಕೈಕಯುನಿಯನ್ ಎಮ್ಮಾಳು-ಈ ತನಕ ಯುವಕ ಸಂಘವೆಂಬ ಹೆಸರಿನಿಂದ ನಡಿಸಿಕೊಂಡು ಬಂದಿದ್ದ ಈ ಸಂಸ್ಥೆಯ ಅಭೀಷನ್ನು ಸ್ಥಳೀಕ ಚಂದ್ರನಾಥ ಬಸ್ತಿ ಬಳಿ ಕಟ್ಟಡದಲ್ಲಿನ ಬಾಚನಾಲಯಕ್ಕೇನೇ ವರ್ಗಾಯಿಸಲಾಗಿದೆ.

ತಿರ್ವ–ಈ ಗ್ರಾಮದ ಬೇಸಾಯಗಾರರಿಗೆ ಆತಿರೇಕ ಉಪದ್ರವನ್ನೀಯುವ ಕಾಡು ಹಂದಿಗಳ ತಿಕಾರಿ ಬಗ್ಗೆ ಇಡೇ ತಾ 5ರಲ್ಲು ಗ್ರಾಮದ ಮುಂದಾಳುಗಳು ಸಾಧಾರಣ150 ಜನರಿಂದೊಡಗೂಡಿ ಕಾಡುಗಳನ್ನು ನುಗ್ಗಿ, ಕೆಲವು ಹಂದಿಗಳನ್ನು ಕೊಂದರೆಂದೂ ಬೇಟೆಗಾರರಿಗೆ ಕೋವಿ ಲ್ಯಾಸೆನ್ಸುಗಳ ಅವಶ್ಯಕತೆಯಿದೆ ಎಂದೂ ಸಂಬಂಧಪಟ್ಟಅಧಿಕಾರಿಗಳು ಗ್ರಾಮಾಭಿವೃದ್ಧಿಯ ದೃಷ್ಟಿಯಿಂದ ಈ ಆವಶ್ಯಕತೆಯನ್ನು ಪೂರೈಸಬೇಕಾಗಿದೆಯೆಂದೂ ಓರ್ವ ಬಾತ್ಮಿದಾರರು ಬರೆಯುತ್ತಾರೆ.

ಮುಂಬಯಿ ಬಿಲ್ಲವರ ಎಸೋಸಿಯೇಶನ್-ಇದರ 13ನೆ ಸಾಂವತ್ಸರಿಕೋತ್ಸವವು ತಾ. 16ನೇ ಶುಕ್ರವಾರ ಅಪರಾಹ್ನ ಘಂಟೆ 2 30ಕ್ಕೆ ಕೋಟೆಯೊಳಗಣ ಸರ್ ಕಮಾಸ್ಜಿ ಜಹಂಗೀರ್ ಸಾರ್ವಜನಿಕ ಸಭಾ ಸದನದಲ್ಲಿ ಶ್ರೀಮಂತ ಬಸಪ್ಪಳ್ಳಿ ವಿ. ಭೂಮರೆಡ್ಡಿ, ವರ್ತಕ ಸಭೆಯಹಣಿ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗುವುದು.

ಶಂಕರ ರಾವ್ ದೇವ್‌ರಿಗೆ ಮಿಲಿಟರಿಯವರ ಹೂವಿನ ಹಾರ-"ಆಲ್ ಇಂಡಿಯ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರಾದ ದೇರಭಕ್ತ ಶಂಕರ್‌ರಾವ್ ದೇವ್, ಕಳೆದ ಆಕ್ಟೋಬರ್ ತಿಂಗಳ ತಾ. 31 ರಲ್ಲಿ ಬಿಸಾವಲ್ ಎಂಬ ಸ್ಥಳಕ್ಕೆ ಭೂಪಣ ಪಾಯತ್ತಿರುವಾಗ, ಮಿಲಿಟರಿಯವರಾದ A T M Rai, ಪುತ್ತೂರು; A. B Ketkhar ಬೆಳಗಾಂ; B. S. Shevade ಪೂನ; ಈ ಮೂರು ಮಂದಿ ಶಂಕರ್‌ರಾವ್ ದೇವ್‌ರವರಿಗೆ ಹಾರ ಹಾಕಿ ತಮ್ಮ ವೀರ ಭಕ್ತಿಯನ್ನು ಸೂಚಿಸಿದರು".

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomitting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'

ಚೆಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ಸೊಡಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣವಕ್ಕರಿಗೆ 1ರಿಂದ 2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹುಳ್ಳುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ವಾಕಿಸ್ಟರು: —ಡಾ। ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಸಿ. ಜಿ. ಆಚಾರ್ಸ್ ಫಾರ್ಮೆಸಿ; ಬಾ। ಕೆ। ಕೇಶವ ನಾಯ್ಕ, L. I. M; ಡಾ। ಸೆಂಕಟರಾಮ್, ಕೊರಡ್ಡಲ್; ನವಭಾರತ ಬುಕ್ ಡಿಪೊ.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಅರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಆರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ವಿನೀತ್ಸೆ.

ಎಲ್. ವರಸಿಂಗ ರಾವ್,

ಪ್ರೊಪ್ರೈಟರ್.

ಒಂದು ಚಿತ್ರ.

ಜಡ್ಜ್—(ತೀರ್ಪು) ಈ ದಾವೆಯು ಬಹಳವಾದ ಉದ್ವೇಗ ಮತ್ತು ವಾದಾಗ್ರಹಗಳಿಗೆ ಅವಕಾಶವಿತ್ತಿದೆ. ಆದರೆ ಇದಂಲ್ಲಿ ಹುಟ್ಟಿಕೊಂಡಿರುವ ವಾದ ವಿಷಯಗಳು ನಿಜಕ್ಕೂ ಬಹಳ ಸುಲಭದಲ್ಲವೆ. ವಾದಿ ಮುನ್ಸಿಪಾಲಿಟಿಯು ಕ್ರಮ ಕಾನೂನಿನ ಸರಿಯಾದ ದೃಷ್ಟಿಯಲ್ಲಿ ಒಂದು ಮುನ್ಸಿಪಾಲಿಟಿಯೆಂದು ಒಪ್ಪಲಾಗದ ರೀತಿಯಲ್ಲಿ ತನ್ನ ಸ್ಥಾನ ಮತ್ತು ವರ್ತನೆಗಳನ್ನು ಬದಲಾಯಿಸಿಕೊಂಡಿರುವದು ನಿಜವೇ ಎಂಬುದು ಇಲ್ಲಿ ನೋದಲನೇಪ್ರಶ್ನೆ. ಎರಡನೆಯ ಪ್ರಶ್ನೆಯೆಂದರೆ, ಪ್ರತಿವಾದಿ ಮುಂದಿಟ್ಟಿರುವ ಅರೋಪಗಳೆಲ್ಲಾ ಸತ್ಯವೆಂದಿಟ್ಟುಕೊಂಡರೂ, ಆ ವುಗಳು, ಕಾನೂನಿನ ದೃಷ್ಟಿಯಲ್ಲಿ ಪ್ರತಿವಾದಿಯ ಕಂದಾಯ ನಿರಾಕರಣೆಗೆ ಸಾಕಾದ ಕಾರಣಗಳಾಗಬಲ್ಲುವೇ ಎಂಬುದು. ಇಲ್ಲಿ ದುರ್ದೈವವಶಾತ್ ನಾವೀಗ ನೋಡಬೇಕಾದ ಆ ಕಾನೂನಿನಲ್ಲಿ ಮುನ್ಸಿಪಾಲಿಟಿ ಎಂಬ ಶಬ್ದಕ್ಕೆ ಸರಿಯಾದ ವಿವರವಿಲ್ಲ ಆದ್ದರಿಂದ ಕಾಯಿದೆಯಂಡಾಗಿರುವ ಈ ಕೊರತೆಯನ್ನು ನಿವಾರಿಸುವದು ನ್ಯಾಯ ಸ್ಥಾನದ ಕೆಲಸವೇ ಆಗಿದೆ. ಹೀಗಿದ್ದರೂ, ಮುನಿಸಿಪಾಲಿಟಿಯೆಂದರೆ ಕಾನೂನು ಬದ್ಧವಾಗಿ ಪಟ್ಟಣದ ಜನತೆಯ ಬೌದ್ಧಿಕ, ನೈತಿಕ ಮತ್ತು ಭೌತಿಕ ಅವಶ್ಯಕತೆಗಳನ್ನು ಪೂರೈಸಿ ಕೊಡುವ, ಮತ್ತು ಆ ಉದ್ದೇಶಕ್ಕಾಗಿ ತೆರಿಗೆ ಹೇರುವ ಅಧಿಕಾರವುಳ್ಳ ಒಂದು ಕೋರ್ಪರೇಶನ್ ಎಂದು ನಾನಿಲ್ಲಿ ಅದನ್ನು ರೂಪಿಸಿ ಹೇಳಿದರೆ ತಪ್ಪಾಗಲಾರದೆಂದು ನೆಂಬುತ್ತೇನೆ. ನನ್ನೀ ಅರ್ಥ ವಿವರಣೆಗೆ ಮೂಲಾಧಾರವಾದ ಆ ಕಾನೂನುಗಳು ಜಡ್ಜರಿಂದ ಮುಂದೆ ಬಾರದೆ ಶಾಸನ ಸಭೆಗಳಿಂದ ನಿರ್ಮಿಸಲ್ಪಡುತ್ತಿರುವದಕಾಗಿ ನೆನ್ನೊಡನೆ ಸಾರ್ವಜನಿಕರೂ ಪಶ್ಚಾತ್ತಾಪ ಪಡುವರೆಂದು ನಿಸ್ಸಂಶಯವಾಗಿ ನೆಂಬುತ್ತೇನೆ. ಈಗ, ನಗರದ ಜನರ ನ್ಯಾಯಬದ್ಧ ಅವಶ್ಯಕತೆಗಳೇನೆಂಬುದನ್ನು ನೋಡೋಣ. ಅತಿ ಮುಖ್ಯವಾದುವುಗಳನ್ನು ಮಾತ್ರ ಹೇಳುವದಾದರೆ ಶುದ್ಧ ನೀರು ಸರಿಯಾದ ರಸ್ತೆ, ಕ್ರಮಬದ್ಧ ಚರಂಡಿಗಳು, ಮತ್ತು ಉತ್ಪಾದಕತೆ. ವಾದಿಯಿಂದ ನಗರಕ್ಕೆ ಸರಬರಾಯಿಯಾದ ಈ ಅವಶ್ಯಕತೆಗಳು ಅವೆಷ್ಟು ಎಂಬುದನ್ನೀಗ ನೋಡೋಣ. ಚರಂಡಿಗಳೆಲ್ಲಾ ಕೆಸರು ಹಳ್ಳಗಳಾಗಿ ದಾಸ್ತಾನಾಗಿದ್ದು, ಅವುಗಳಿಂದ ಹರಿದ ಕೆಸರು ಜೆರೆತನೀರೇ ಪಟ್ಟಣಿಗರಿಗೆ ದೊರೆಯುತ್ತಿದೆಯೆಂದೂ, ಸಣ್ಣ ಮಕ್ಕಳು ಆ ಚರಂಡಿಗಳಲ್ಲಿ ಬಿದ್ದು ಸಾಯುವಂತಾಗಿದೆ ಎಂದೂ ಇಲ್ಲಿ ಹೇಳಲ್ಪಟ್ಟಿದೆ. ತಮಗೆ ಬೇಕಾದವರ ಮನೇ ಕಡೆಯ ರಸ್ತೆಗಳು ಮಾತ್ರ ರಿಪೇರಿಯಾಗುತ್ತಿವೆ; ಉಂಚ ಸಂಚು, ಅವ್ಯವಸ್ಥೆ ಮತ್ತು ಅಸಂಬದ್ಧತೆಯಿಂದ ತುಂಬಿರುವ ಸ್ಥಳೀಯ ಆಡಳಿತೆಯಿದೆಯೆಂದೂ ಹೇಳಲಾಗಿದೆ. ಪಶುಪ್ರಾಣಿಗಳ ವಿಜ್ಞಾನದ ಮಟ್ಟಿಗೆ ಈ ಮುನ್ಸಿಪಾಲಿಟಿಯ ಅಂತರ್ರಾಷ್ಟ್ರೀಯ ಸ್ವರೂಪವೆಂತಹದೇ ಇರಲಿ—ಸ್ಪೆಯಿನಿನ ಕತ್ತೆಗಳ ಆರೈಕೆಯ ಕುರಿತು ಘಂಟೆ ಘಂಟೆ ಚರ್ಚಿಸಿ, ಸಾರ್ವಜನಿಕ ಸಮಯ ವ್ಯಯಮಾಡುವ ಒಂದು ಮುನ್ಸಿಪಾಲಿಟಿಯನ್ನೂ ಮುನ್ಸಿಪಾಲಿಟಿಯೆನ್ನಲು ಸಾಧ್ಯವೆ? ಪಟ್ಟಣಿಗರ ಬುದ್ಧಿ ಮತ್ತು ನೀತಿಯ ಹೊಣೆಯಿರುವ ಒಂದು ಸಂಸ್ಥೆಯ ಸಭೆಗಳಲ್ಲೇ ಅನ್ಯವಸ್ತು ಜಗಳ, ದೊಂಬಿಗಳು ನಡೆಯುತ್ತಿವೆಂದ ಮೇಲೆ ಅದರ ಅಸ್ತಿತ್ವವನ್ನೊಪ್ಪಬಹುದೆ? ಬಡವರು ಮತ್ತು ಗತಿ ವಿಹೀನರಿಂದ ಭಾರವಾದ ತೆರಿಗೆ ವಸೂಲಿಮಾಡಿ, ತನ್ನ ಶ್ರೀಮಂತ ಸದಸ್ಯರಿಗೆ ಪೂರ್ಣ ರಿಯಾಯಿತಿ ಬಿಡುವ ಒಂಯ ಕೋರ್ಪರೇಶನ್—ಚಿಯರ್‌ಮೇನ್ ಮತ್ತವರ ಕಡೆಯವರಿಂದ ರಸ್ತೆಗಳನ್ನೆಲ್ಲಾ ದರಸಿ ಮಾಡಿ, ಊರ ಮಂದಿಗೆ ಹಾದಿಯೇ ಇಲ್ಲದಂತೆ ಮಾಡುವ ಒಂದು ಸಂಸ್ಥೆ—ನಗರದ ಕೆಲಸಗಾರರಿಂದ ವಸೂಲಿ ಮಾಡುವ ಕಷ್ಟಾರ್ಜಿತ ಹಣದಿಂದ ತನ್ನ ಕಂಟ್ರಾಕ್ಟರರ ಮತ್ತು ಹಸ್ಯಕರ ಕಿಸೆ ತುಂಬಿಸುವ ಒಂದು ಅಡಳಿತೆ—ಇದನ್ನೂ ಕಾಯಿದೇಬದ್ಧವಾದ ಒಂದು ಮುನ್ಸಿಪಾಲಿಟಿ ಎಂದು ಗಣಿಸಬಹುದೆ? 'ನಾಧ್ಯವಿಲ್ಲ' ಎಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆ. ಈಗ, ಮುನ್ಸಿಪಾಲಿಟಿಗೆ ಶಾಸನ ಮೂಲಕ ವಿಸ್ತಾರವಾದ ಅಧಿಕಾರ ದೊರೆತಿರುವದು ನಿಜ; ಆದರೂ ಅದಕ್ಕೊಂದು ಹತೋಟಿಯಿದೆ. ನಮ್ಮ ಶಾಸನ ಸಭೆಗಳಿಗೆ ಸರಿಯಾದ ಅರ್ಥ ಕೊಡದ ಮತ್ತು ಬರವಣಿಗೆಯ ಚಾತುರ್ಯವಿಲ್ಲದ ಶಾಸನಗಳನ್ನು ಜ್ಯೂರಿ ಮಾಡುವದಕ್ಕೆ ಮಾತ್ರ ಗೊತ್ತು ಎಂದಿಟ್ಟುಕೊಂಡರೂ, ನಮ್ಮ ನಗರಗಳ ಮೇಲೆ ಹುಟ್ಟರ್ ಅಥವಾ ಮುಸಲಿನಿ ಮಾದರಿಯ ಅತ್ಯಾಚಾರೀ ಆಡಳಿತೆ ಹೇಳಬಾರದೆಂಬುದನ್ನು ತಿಳಿಯುವಷ್ಟು ಸಾಮಾನ್ಯ ಜ್ಞಾನ ಕೂಡಾ ಅವುಗಳಿಗಿಲ್ಲವೇನು? ಮುನ್ಸಿಪಾಲಿಟಿಗಳಿಗಾಗಿ ಕಾಯಿದೇ ತಯಾರಿಸುವಾಗ ಅವು ಪರಿಶುದ್ಧ ಭಾಷೆಯಲ್ಲಿಲ್ಲವಾದರೂ, ಸಾಕಷ್ಟು ಸ್ಪಷ್ಟವಾಗಿ ಕೆಲವು ಅಧಿಕಾರಗಳನ್ನೂ ಅವುಗಳನ್ನು ಉಪಯೋಗಿಸಬೇಕಾದ ರೀತಿ ನೀತಿಗಳನ್ನೂ ನಿರೂಪಿಸಿಲಾಗಿದೆ. ಅವೆಲ್ಲಾ ವಿಸ್ತಾರವಾಗಿವೆ; ಆದರೆ ಜನರಲ್ ಫ್ರಾಂಕೋನ ಕತ್ತೆಗಳ ಆರೈಕೆ ಮಾಡುವಷ್ಟು ಅಧವಾ ಸಾರ್ವಜನಿಕ ರಸ್ತೆಗಳಲ್ಲಿ ಚರಂಡೀ ಕೊಳಗಳನ್ನು ನಿರ್ಮಿಸುವಷ್ಟು ವಿಸ್ತಾರವಾಗಿ ಇಲ್ಲ. ಒಂದು ಮುನ್ಸಿಪಲ್ ಕೌನ್ಸಿಲಿಗೆ ಸ್ಥಿತ್ಯನುಸಾರವಾಗಿ ನಾಗರಿಕರಿಂದ ತೆರಿಗೆ ವಸೂಲು ಮಾಡುವ ಅಧಿಕಾರವಿದೆ; ಆದರೆ ತೆರಿಗೆಯ ಎಲ್ಲಾ ಭಾರವನ್ನೂ ತನ್ನ ವಿರೋಧೀ ಪಕ್ಷಾಯರ ಮೇಲೆ ಹೇರುವ ಅಧಿಕಾರವಿಲ್ಲ ಪ್ರಜಾಪ್ರಭುತ್ವವನ್ನು ಚಲಾಯಿಸಲು ಅದು ಅಧಿಕಾರ ಪಡೆದಿದೆ ಹೊರತು ನಿರಂಕುಶಾಧಿಕಾರ ಅಥವಾ ಬಂಡಾಯಗಾರರ ರಾಜ್ಯಭಾರವನ್ನು ಜ್ಯಾರಿಗೆ ತರಲು ಅಧಿಕಾರ ಹೊಂದಿಲ್ಲ. ಪರಿಣಾಮಕಾರೀ ಆಡಳಿತೆಯಿಲ್ಲವೆಂಬ ಕಾರಣದಿಂದ ತೆರಿಗೆ ಕೊಡದಿರುವ ಅಧಿಕಾರವು ಒಬ್ಬ ಪಟ್ಟಣಿಗನಿಗಿದೆಯೆಂದು ನಾನೆಂದಿಗೂ ಹೇಳಲಾರೆ. ಆದರೆ ತಾನು ನಿರ್ಮಾಣಗೊಂಡಿರುವ ಉದ್ದೇಶಕ್ಕನುಗುಣವಾಗಿ ಜಾಳಾಗದ ಮತ್ತು ಸಮಾಜಕ್ಕೆ ದ್ರೋಹಕರ ಹಾಗೂ ಹಾನಿಕಾರೀ ವರ್ತನೆಗಳಲ್ಲೇ ತೊಡಗಿರುವ ಒಂದು ಮುನ್ಸಿಪಾಲಿಟಿಗೆ ತೆರಿಗೆ ಕೊಡಲು ನಿರಾಕರಿಸುವದು ನ್ಯಾಯವಾಗಲಾರದೆ. ಆಗ ಆತ ನ್ಯಾಯವಾದಿಯೇ ಆಗುತ್ತಾನೆಂದು ನಾನು ಭಾವಿಸುತ್ತೇನೆ. ಮಾತ್ರವಲ್ಲ, ಈ ಕರ್ತವ್ಯ [illegible] ಗುಂಡಳಿತೆಯೊಡನೆ ಸಂಬಂಧ ಇಟ್ಟುಕೊಳ್ಳುವ ನಾಗರಿಕರು, ನಗರದ ಸ್ಥೈರ್ಯ ವರ್ಧನೆಗೆ ಶ್ರೇಯಸ್ಸಾಧಕವಾಗುತ್ತಾ ಹೋಗುತ್ತಲಿದ್ದಲೆ ತಮ್ಮ ಬಂಧು ನಾಗರಿಕರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಪ್ರತಿವಾದಿಯೂ ಅವನ ಸಹಾಯಕರೂ, ತಾವೀ ವ್ಯಾಜ್ಯದಲ್ಲಿ ಮುಂದೊಡ್ಡಿರುವ ತತ್ವಕ್ಕಿಂತ ಭಿನ್ನವಾದ ದುರುದ್ದೇಶದಿಂದ ಕೂಡಿರಬಹುದು. ಆದರೆ 'ಮನುಷ್ಯನ ಮನಸ್ಸು ದೇವರಿಗೆ ಮಾತ್ರ ಗೊತ್ತು' ಎಂದು ನನಗಿಂತಲೂ ದೊಡ್ಡ ಜಡ್ಜರೊಬ್ಬರು ಒಮ್ಮೆ ಉಲ್ಲೇಖಿಸಿದ್ದರು. ಅಂತಹ ದೈವಿಕ ಶಕ್ತಿಯಾವುದೂ ಇಲ್ಲದ ಈ ಕೋರ್ಟಿಗೆ ಸಾಧ್ಯವಿರುವದೆಂದರೆ ಮನುಷ್ಯರು ಮತ್ತವರ ಕೆಲಸಗಳನ್ನು ನೋಡಿ, ಅವು ತಪ್ಪು ಅಥವಾ ಸರಿಯೆಂದು ಹೇಳಲಿಕ್ಕೆ ಮಾತ್ರ. ಆದ್ದರಿಂದ ಪ್ರತಿವಾದಿಯ ಉದ್ದೇಶವನ್ನು ಆಲಾಹಿದಾ ಬಿಟ್ಟು, ಆತನ ಕೃತ್ಯಗಳನ್ನಷ್ಟೇ ನೋಡಿ, ಈ ದುರಾಚಳತೆ ಮತ್ತು ದಿವಾಳಿ ಪೋರತನವನ್ನು ಈ ರೀತಿ ಪ್ರತಿಭಟಿಸಿದ ಅವನ ಧೈರ್ಯವನ್ನು ನಾನು ಬಹಳವಾಗಿ ಶ್ಲಾಘಿಸುತ್ತೇನೆ. ಆದ್ದರಿಂದ ನನ್ನ ತೀರ್ಮಾನವು ಪೂರ್ಣ ಸರಿಯೆಂಬ ವಿಶ್ವಾಸದೊಡನೆ ನಾನು ವಾದಿಯ ದಾವೆಯನ್ನು ಡಿಸ್‌ಮಿಸ್ ಮಾಡಿದ್ದೇನೆ. ಮತ್ತು ಪ್ರತಿವಾದಿಯ ವ್ಯಾಜ್ಯದ ಖರ್ಚನ್ನು ಜೆಯರ್ಮೇನರು, ಮುನ್ಸಿಪಲ್ ಫಂಡಿನಿಂದ ತೆಗೆಯದೆ ತನ್ನ ಹುಟ್ಟುವಳಿಯಿಂದಲೇ ತೆರತಕ್ಕದ್ದೆಂದು ತೀರ್ಮಾನಿಸುತ್ತೇನೆ. ಈ ಮುನ್ಸಿಪಾಲಿಟಿಯು ನಿಜವಾದ ಸ್ಥಳೀಯ ಸ್ವತಂತ್ರ ಸರಕಾರದ ಒಂದು ಭಾಗವಾಗಿ ಎಂದಾದರೂ ಪುನರ್ಘಟನೆ ಹೊಂದುತ್ತದಾದರೆ, ತನ್ನ ಮೊದಲ ಕರ್ತವ್ಯವಾಗಿ ಓವರ್‌ಸಿಯರ್ ಬಕ್ಷೀ ಸಾಹೇಬನನ್ನು ಅದು ಡಿಸ್‌ಮಿಸ್ ಮಾಡತಕ್ಕದ್ದೆಂದು ನಾನಿಲ್ಲಿ ಸೂಚಿಸಬೇಕಾಗಿದೆ.

(ಕೋರ್ಟಿನಲ್ಲಿ ಉತ್ಸಾಹ ಪೂರಿತ ಧ್ವನಿಗಳು ಮತ್ತು 'ಸ್ಯಾಲೆನ್ಸ್')

ಯುಂಗೆರಿಯೋ ಮುನ್ಸಿಪಾಲಿಟಿ

(ಮದ್ರಾಸ್ ಹೈ ಕೋರ್ಟ್ ಜಡ್ಜ್ ಒಸರೇಬಲ್ ಜಸ್ಟಿಸ್ ವಾರ್ಡ್ಸ್‌ವರ್ತರ ಅಲಾಹಿದಾ ಘೋಷಣೆ)

(ಕಳೆದ ಸಂಚಿಕೆಯಿಂದ ಮುಂದುವರಿಯುದು.)



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯ ಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಳ್ಯಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, . ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಾತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಡಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀ-ವಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟೆ ಚಾರ್ಜ ೪ ಆಣೆ.

ವಿಳಾಸಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿವೈಸ್. ಕಕ್ರವೃದ್ಧಿಕಾರ ಮಾಡತಕ್ಕ ಮಾಲಿಕರ ವಿಳಾಸ.

ರೇವಣಸಿದ್ದಪ್ಪ ಡಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya. GADAG.

Hindu Higher Elementary School,
KALLIANPUR.
WANTED
a Secondary Grade Trained Male or Female for a permanent vacancy in the School.
Apply to—
The Manager,
Hindu Higher Elementary School,
KALLIANPUR.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾಇಲಾಖೆಗೆ ಸಂಬಂಧಿಸಿದ ಕಕ್ಕುಲಾಟುಗಳೂ ಪ್ರಕಟ

ಪಾಗುತ್ತವೆ.

ವಾರ್ಷಿಕ ಚಂದಾ ರೂ. **1-8-0** ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. **2/-**

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	...	...	0	6 0
2.	ಸಾಮುದ್ರಿಕ ಶಾಸ್ತ್ರ	....	...	0	8 0
3.	ಬಾಲ ರಾಮಾಯಣ	....	....	0	5 0
4.	ಸುಕನಾ ಚರಿತ್ರೆ	....	....	0	5 0
5.	ಕೊಳಲು ಕೃಷ್ಣ	....	....	0	8 0
6.	ಗುರುಪೀಠಗಳ ಅವನತಿ	....	....	0	8 0
7.	ದ್ವೈತಮತ ಖಂಡನೆ	....	....	0	6 0
8.	ಧರ್ಮಸಂಕಟ	....	....	0	4 0
9.	ಪೂರೂರವ	....	....	0	8 0
10.	ನಿಶ್ಚಯ ಜ್ವಾಲೆ	...	...	0	8 0
11.	ವಿದ್ಯಾರಣ್ಯ ಕಾವ್ಯಂ	....	....	1	0 0
12.	ಚಂದ್ರಗುಪ್ತ ಚಕ್ರವರ್ತಿ	....	....	1	0 0
13.	ಸ್ವದೇಶಿ	....	....	0	4 0
14.	ಹರಿಜನ ಸೇವೆ	....	....	0	4 0
15.	Gauthama the Buddha	....		0	8 0
16	ಪ್ರಾರ್ಥನೆ	...	....	0	2 0
17.	ಹಿಂದೀ ಪಹಲಿ ಪೋತಿ	....	....	0	2 0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)			0	4 0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, **ಉಡುಪಿ.**

ತುಳು ಪುಸ್ತಕಗಳು

ತುಳು ಸಾಹಿತ್ಯ1	....	....	1	0	0
ಕೃಷ್ಣರಾಜ ಪರ್ಸಂಗೊ	....	....	1	0	0
ತುಳುವಾಲ ಬಲಿಯೇಂದ್ರ	....	....	0	4	0
ಅಳಿಯ ಸಂತಾನದ ಕಟ್ಟ್ಪದ ಗುಟ್ಟು		....	0	8	0
ಕಾಸಿಗೆ	....	....	0	8	0
ತುಳು ವ್ಯಾಕರಣ	....	....	1	0	0
ಮುದ್ದಣ ಮುದ್ದಮಾಯೆ		....	0	4	0
ಪಿನಮರ್ಲ್	....	....	0	12	0
ತುಳು ಪದ್ಯಮಾಲಿಕೆ	....	....	0	2	0
ಬಂಗಾರ್ದಂಗಿದ ಕತೆ	....	....	0	2	0
ಮಿತ್ಯ ನಾರಾಯಣ ಕತೆ	....	....	1	0	0
ಸತೀ ಕಮಲೆ	....	....	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿದ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, **ಉಡುಪಿ.**

ಬೆಲೆ: **3—0—0**

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. SILVER JUBLEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4—8—0

ಪ್ರತಿ ಪ್ರತಿಗೆ ರೂ. 0—1—6



ವರ್ಷ ೨೫ ವಾರ ೧೨ ಪ್ರತಿ ಗುರುವಾರ ಹೊರಡುವ ಗ್ರಾಮೀಯ ವಾರಪತ್ರಿಕೆ. [Vol. 25 No. 12

Founder. SRI A. B. SHETTY.

ಉಡುಪಿ • 22—11—1945 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಚಿಕೆ ರೂ. 0—1—6.

ಅಮೃತಾಂಜನ

ತಲೆನೋವು, ತಲೆಸಿ, ನೋವು, ಉಳುಕು ಉತ್ತಿಗೆ, ಕುಟು, ಹುಳ್ಳು ನೋವುಗಳಿಗೂ ಎದೆನೋವು, ಬಾಮು ಶೂಲೆ, ನಿಷ್ಪ ಮಾಂತಾದ ಬೇನೆ ಒಳ್ಳವಾಕ್ಷ ನೆಡಿಸಿ ಹೋಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

POLICYHOLDERS' OWN COMPANY.

Policy-holders are the sole owners of a Mutual Company, they along share in the profits of the Company and "Canara Mutual" is such a Company Its aim is to render the highest type of Life Assurance service to its Policy-holders. With such an aim, the Company has progressed on very sound lines and made a name in the Indian Insurance World All this is owing to the co-operation of the public with the Company. "Canara Mutual" has also become a Synonym for "Prompt Settlement"

THE CANARA MUTUAL ASSURANCE COMPANY, LTD.,

(UDIPI, S. India.)

The Bombay Life Assurance Co., Ltd.

(ESTD: 1908)

1944ರ ಹೊಸ ವ್ಯವಹಾರವು 2½ ಕೋಟಿಗೂ ಮಿಕ್ಕಿದೆ.

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ ವಿಮಾ ಸಂಸ್ಥೆಗಳಲ್ಲೊಂದು

ಸ್ಥಾಪನೆ] ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ [1910

ದಕ್ಷಿಣ ಭಾರತದ ಚೀಫ್ ಏಜಂಟರು.

ಳೆದ 35 ವರುಷಗಳಲ್ಲಿ—ಯುದ್ಧ ಮತ್ತು ಕಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾತಿಗಳಿಗೆ ಲಾಭಕಾರಿಯಾಗುವಂತೆ ಪಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.

Central Office:—UDIPI. S. K.

Mangalore ○ Calicut ○ Bangalore ○ Madras ○ Madura ○ Trivandrum ○ Bombay

ANNOUNCEMENT

We have pleasure to announce the opening of a branch of the Bank

at

KANHANGAD

on 17-11-1945, by

Sri B. Appaswamy Chetty, B. A., R. D. O., Puttur.

A branch of the Bank will be opened at MERCARA shortly.

The Vijaya Bank Limited.

Head Office:- MANGALORE.

ಶುಚಿ! ರುಚಿ!!

ಇದೋ! ಕೇಳಿರಿ!!

ವಿಜಯದಶಮಿಯ ವಿಜಯದುಂದುಭಿ!

'ಪರಿಷನ್ಮಂದಿರ'ದ ಭವ್ಯಭವನದಲ್ಲಿ ನೂತನವಾಗಿ

'ಶ್ರೀ ಅಂಬಾಭವನ'

ಬ್ರಾಹ್ಮಣರ ಕಾಫಿ ಕ್ಲಬ್,

ಬೋರ್ಡಿಂಗ್ ಮತ್ತು ಲೋಜಿಂಗ್

ತೆರೆಯಲ್ಪಟ್ಟಿದೆ.

ಬ್ರಾಹ್ಮಣರಿಂದಲೇ ತಯಾರಿಸಲ್ಪಡುವ ಅತ್ಯುತ್ತಮ, ಅಮೋಘ ಉಪಹಾರ, ಫಲಹಾರ, ಹಾಗೂ ವಿಹಾರಯೋಗ್ಯವಾದ ಆಧುನಿಕ ರೀತಿಯಲ್ಲಿ ಸುಸಜ್ಜಿತವಾದ ಕೊಠಡಿಗಳಿಂದ ಅತಿಥಿಗಳನ್ನು ಆಕರ್ಷಿಸುವ ಸುವ್ಯವಸ್ಥೆಯಿರುವ,

ಕುಂದಾಪುರದಲ್ಲಿ

ಏಕಮಾತ್ರ ಹೊಟೆಲ್

ಪರವೂರ ಪ್ರವಾಸಿಕರಿಗೆ ಸುಯೋಗ್ಯ ಸಾನುಕೂಲತೆಗಳನ್ನೊದಗಿಸುವದೇ ನಮ್ಮ ಪ್ರಾಮುಖ್ಯ ಧ್ಯೇಯ.

ನೀವು ಕುಂದಾಪುರಕ್ಕೆ ಭೇಟಿ ಕೊಟ್ಟಾಗ ಸಂದರ್ಶಿಸಲು ಮರೆಯದಿರಿ.

SRI AMBA BHAVAN,

Brahmin's Coffee Club,

Boarding & Lodging,

COONDAPUR, S. K.

★ಸುಭಾಸರು ಸತ್ತದ್ದು ಹೌದೆ?★

ಜಾಪಾನೀ ಹಿಂದೀಯರಿಗೆ ಸಂದೇಹವಿದೆ.

(ಶ್ರೀ. ಕೆ. ವಿ. ನಾರಾಯಣ್)

ಶ್ರೀ ನಾರಾಯಣ್ ಇನ್ನಡಿಗ ಬೆಂಗಳೂರಿನ ಬಸವನ ಗುಡಿಯಲ್ಲಿ ವಿದ್ಯಾರ್ಥಿಯಾಗಿದ್ದವರು ಮೈಸೂರು ವಿಶ್ವವಿದ್ಯಾಲಯದಲ್ಲಿದ್ದು, ಇಂದಿಗೆ ಏಳೂವರೆ ವರುಷಕ್ಕೆ ಮೊದಲು ಜಾಪಾನಿಗೆ ಹೋಗಿದ್ದರು. ಅಂದಿನಿಂದೀಚರೆಗೂ ಅಲ್ಲಿಯೇ ಯುದ್ಧ ಸ್ಫೋಟವಾಗುವಾಗ ಶ್ರೀ ನಾರಾಯಣ್ ಜಾಪಾನಿನಲ್ಲಿ ಕಲಿಯುತ್ತಿದ್ದರು. ಯುದ್ಧಾವಧಿಯಲ್ಲಿ ಹಲವು ಪುಸ್ತಕಗಳನ್ನು ಬರೆದಿದ್ದಾರೆ ಟೋಕಿಯೋದಲ್ಲಿ, ಅನೌರಿಕದ 'ಯುನ್ಯಾಟೆಡ್ ಪ್ರೆಸ್ಸಿ'ಗೆ ಮೊನ್ನೆ ತಾನೇ ಶ್ರೀ ನಾರಾಯಣ್ ತಿಳಿಸಿದ ಅಂಶಗಳಿವು

"ಜಪಾನೀ ಸರಕಾರದೊಡನೆ ಸಮಾಲೋಚಿಸುವದಕ್ಕಾಗಿ ಸಿಂಗಾಪುರದಿಂದ ಜಾಪಾನಿಗೆ ಹೊರಟಿದ್ದ ಶ್ರೀ ಸುಭಾಸಚಂದ್ರ ಬೋಸರ ವಿಮಾನವು ಟೊಯಿಹೋಕುವಿನ ಬಳಿ ಅವಘಡಗೊಂಡುದರಿಂದುಂಟಾದ ಜಖಮಿನಿಂದಾಗಿ ಸುಭಾಸರು ಮಡಿದರು'–ಹೀಗೆಂದು ಜಾಪಾನಿನ ಸುದ್ದಿಸೂಚನಾ ಸಮಿತಿಯು ಒಂದು ಘೋಷಣೆಯಂದಿತ್ತು. ಈಗೆ ಪ್ರಕಟವಾದುದು ಜಾಪಾನ್ ಚಕ್ರವರ್ತಿಗಳು ಶರಣು ಘೋಷಣೆ ಮಾಡಿದ ಒಂದು ವಾರಾನಂತರ ಶರಣಾದ ಬೆನ್ನಲ್ಲೆ ಎದ್ದಿದ್ದ ಗಡಿಬಿಡಿಗಳ ನಡುವೆ ಈ ಚೂರು ಸುದ್ದಿಯು ಅದೃಶ್ಯವಾದಂತಿದ್ದರೂ, ಜಾಪಾನಿನಲ್ಲಿದ್ದ ಹಿಂದೀಯರೆಲ್ಲರ ಮನಸ್ಸಿನಲೂ ಇದು ನಿಜವೇ ಎಂಬ ಕುರಿತು ಕೊಡಲೇ ಸಂದೇಹ ಹುಟ್ಟಿಕೊಂಡಿತು.

ಏನು ಸಂಭವಿಸಿರಬಹುದು?

ತಲವರಂತೂ, ಸುಭಾಸರು ಜಾಪಾನರ ತೆರೆಮರೆಯ ಮೊಡೆತಕ್ಕೊಳಗಾದುದು ಖಂಡಿತವೆಂದೇ ಭಾವಿಸಿಕೊಂಡರು. ಬೇರೆ ಹಲವು, ಸುಭಾಸರ ಮತ್ತೊಂದು ಚತುರೋಪಾಯವಿದು ಎಂದು ನಂಬಿದರು ಸಂಗತಿಗಳೆಲ್ಲ ಸರಿ ಹೋಗುವವರೆಗೆ ಅದೃಶ್ಯನಾಗಿರಲು ಬೋಸ್‌ಮತ್ತೊಮ್ಮೆ ಹಂಚಿಕೆ ಹೂಡಿದರೆಂದೇ ಇಂಥವರ ಭಾವನೆ 1941ರಲ್ಲಿ ಈ ಮಾಜೀ ಕಾಂಗ್ರೆಸ್ ಅಧ್ಯಕ್ಷರು ಭಾರತದಿಂದ ಕಾಣೆಯಾಗಿ ಕೆಲವು ತಿಂಗಳು ನಂತರ ಆಕ್ಸಿಸ್ ರಾಷ್ಟ್ರಗಳಲ್ಲಿ ಕಾಣಿಸಿಕೊಂಡ ಆ ವೈಚಿತ್ರ್ಯವನ್ನೂ ಹಿಸಿಕೊಂಡರೆ ಎರಡನೆ ಪತ್ತದ ಆಭಿಪ್ರಾಯವು ಸಾಧುವೆಂದೇ ಕಾಣಿಸುತಿತ್ತು. ಹೇಗಿದ್ದರೂ, ಎಲ್ಲಾ ಸಂಗತಿಗಳ ಕುರಿತು ಇನ್ನೂ ಹೆಚ್ಚಿನ ಸುದ್ದಿಗಳೂ, ಸ್ಪಷ್ಟ ರುಜುವಾತುಗಳೂ ದೊರೆಯದೆ ಯಾರಿಗೂ ಯಾವುದನ್ನೂ ನಿಶ್ಚಯವಾಗಿ ಹೇಳಲಾಗುತಿರಲಿಲ್ಲ ದಿನಗಳು ಉರುಳಿದುವು ಮೂರು ವಾರಗಳ ನಂತರ ವತ್ತೊಂದು ವಾರ್ತೆ ಬಂತು ಸುಭಾಸರೊಂದಿಗ ಅದೇ ವಿಮಾನದಲ್ಲಿದ್ದು ಅವಘಡದಿಂದ ವಿಷಮ ಜಖಮಿಗೊಳಗಾಗಿದ್ದ [illegible]ಗುಸ್ ಬೋಸರ ನೇಹದ ತಿವರಣೆಗಳನ್ನು ಜಾಪಾನಿಗೆ ತಂದಿತ್ತಾನೆಂಬ ಸುದ್ದಿ ಸುಳಿಯಿತು. ಆದರೆ ಆ ಮನುಷ್ಯನೆಲ್ಲಿದ್ದಾನೆ ಎಂಬ ವಿಷಯವನ್ನು ಅತ್ಯಂತ ಗುಟ್ಟಿನಲ್ಲಿಟ್ಟಿದ್ದರು. ತಂದಿದ್ದ ಸುಭಾಸರ ಕ್ಷೇಮಸಮಾಚಾರವುದಲ್ಲದೆ ಎಂಬುದನ್ನು ನೋಡಬೇಕೆಂದು ಇಲ್ಲದ್ದ ಪ್ರತಿಯೊಬ್ಬ ಭಾರತೀಯನಿಗೂ ಅತ್ಯಾತುರವಿದ್ದರೂ, ಆ ಸ್ಥಳಕ್ಕೆ ಹೋಗುವ ರಿಯಾಯಿತಿಯೇಯುವದಂತಿರಲಿ, ಅವುಗಳನ್ನೆಲ್ಲಿ ಇಟ್ಟಿದ್ದಾರೆಂಬ ಸುದ್ದಿಯನ್ನು ಕೂಡಾ ಯಾರೊಬ್ಬನಿಗೂ ಕೊಡಲಿಲ್ಲ

ಸಂದೇಹ ಪ್ರಬಲವಿಸಿತು!

ಈಗ ಇಡೀ ಕಥೆಯೇ ಸುಳ್ಳಾಗಿರಬಹುದೆಂಬ ಅನುಮಾನವು ಎಲ್ಲಾ ಭಾರತೀಯರಲ್ಲೂ ಬೆಳೆಯಿತು. ಈ ಸಂದೇಹಗಳು ಇನ್ನಷ್ಟು ಬಿ[illegible]ತೆಗೆಯಲು ಕಾರಣ ದೊರೆಯಿತು ಬೋಸರ ಬೂದಿಯನ್ನಿಟ್ಟ ಸ್ಥಳವನ್ನು ಕಂಡುಕೊಂಡ ಹಿಂದೀಯನೊಬ್ಬನು 'ಉತ್ತರಕ್ರಿಯೆಯು ಯಾವಾಗ ನಡೆಯುವದು?' ಎಂದು ವಿಚಾರಿಸಿದ ಬೌದ್ಧ ನಿಯಮಾನುಸಾರವಾಗಿ ತನಗೆ ಲೋಭಾನ ಸಮರ್ಪಿಸಿ ಸುಭಾಸ್ ಭಸ್ಮವನ್ನು ಗಾಳಿಯಲ್ಲಿ ಪ್ರತಿಕವಾಗಿ ಸಮರ್ಪಿಸಬೇಕಾಗಿದೆ ಎಂದು ಪ್ರಾರ್ಥಿಸಿಕೊಂಡ ಆಗ ಉತ್ತರ ಬಂತು - 'ಎಲ್ಲಾ ಹಿಂದೀಯರಿಗೂ ಸಕಾಲದಲ್ಲಿ ಅದನ್ನು ತಿಳಿಸಲಾಗುವದು ಆದರೆ ಸದ್ಯಕ್ಕೊಂದಿಗಿರುವ ಪರಿಸ್ಥಿತಿಯಲ್ಲಿ ಗದ್ದಲವೇನೂ ಇಲ್ಲದೆ ಸುಭಾಸರ ಉತ್ತರಕ್ರಿಯೆಯಾ ಸಮಾರಂಭವನ್ನು ಸಾದಾ ರೀತಿಯಿಂದ ಜರಗಿಸಬೇಕಾಗಿದೆ" ಆದರೆ ಯಾರಿಗೂ ಏನೊಂದನ್ನೂ ತಿಳಿಸಲಿಲ್ಲ ಕೆಲವು ದಿನಗಳ ನಂತರದ ಪತ್ರಿಕೆಗಳನ್ನೋದಿದಾಗ ಪ್ರತಿಯೊಬ್ಬನಿಗೂ ತಿಳಿಯಾಯಿತು. ತಾ ಹಿಂದೀಯನು ವಿಚಾರಿಸಿ ಹೋದ ಎರಡು ದಿನಗಳಿಗೆ ಮೊದಲೇ ಸುಭಾಸರ ಉತ್ತರಕ್ರಿಯೆಯು ಟೋಕಿಯೋನಿನಲ್ಲಿ ನಡೆಯಿತು ಎಂದು ಅವುಗಳಲ್ಲಿ ಪ್ರಕಟವಾಗಿತ್ತು.

ಅವಘಡದ ಸಮಯ ಮತ್ತು ಸ್ಥಳ

ಇನೋಸ್ಕಾ ಗಸ್‌ಚಿಪ್ ಮತ್ತು ನೆವಗಳ ಮತ್ತು ವಿಮಾನಾವಘಡಗೊಂಡ ಕಾಲ ಮತ್ತು ಸ್ಥಳಗಳನ್ನು ಕಂಡು, ಇದೊಂದು ಪ್ರಶ್ನೆ ಯಾರಲ್ಲಾದರೂ ಹುಟ್ಟಲೇ ಬೇಕು:-'ಇವೆಲ್ಲಾ ಸ್ಥಳಗಳಿರುವಾಗ, ಯಾರಿಗೂ ಸ್ಪಷ್ಟವಿಯೂ ಬೇಳದಂತಹ ನೋವೋ ಸಾದಲ್ಲಿಯೇ ಆ ವಿಮಾನವು ಅವಘಡಗೊಳ್ಳಬೇಕೆಂದೇನು? ಜಾಪಾನ್ ಶರಣಾದ ತುಸು ದಿವಸ ಕಳೆಯುವದರೊಳಗೆ ಈ ಅವಘಡ ಸಂಭವಿಸಿದುದಕ್ಕೆ ವಿಶೇಷ ಸಂಬಂಧವೇನೂ ಇಲ್ಲವೆ? ಈ ಕುರಿತು ಬೋಸರ ಸಮೀಪವರ್ತಿಗಳು ಪಡುವ ಅನುಮಾನ ಹೀಗಿದೆ: ಜಾಪಾನರು ಶರಣಾದ ಮೇಲೆ ಸುಭಾಸರು ಮಲಯದಲ್ಲೇ ಇರಲು ಇಷ್ಟ ಪಡಲಿಲ್ಲ. ಯಾಕೆಂದರೆ ಮಿತ್ರ ಸೇನೆಗಳು ಆದನ್ನಾಕ್ರಮಿಸಿಕೊಳ್ಳುವಾಗಲೂ ಅಲ್ಲಿದ್ದರೆ ತಾನು ಸ್ವಕೀಯ ಸೈನ್ಯಾಧಿಕಾರಿಯ ಸ್ವಾಧೀನಕ್ಕೆ ಹೋಗುತ್ತೇನೆ. ಆದರ ಬದಲಿಗೆ ಟೋಕಿಯೋದಲ್ಲಿರುವದನ್ನೇ ಅವರು ಬಯಸಿದ್ದರು. ಕಾರಣವೆಂದರೆ, ಅಲ್ಲಿದ್ದರೆ ತಾನು ಮಿತ್ರರ ಮುಖ್ಯ ಸೇನಾನಿಯ ಕೈವಶವಾಗುತ್ತೇನೆಂದೂ, ಆ ಮೂಲಕ ಅಂತರ್ರಾಷ್ಟ್ರೀಯ ಜನರಿದಿರು ತನ್ನ ವಾದವನ್ನು ಸಮರ್ಥಿಸಿಕೊಳ್ಳಲು ಅಪೂರ್ವಕೂಲವಾಗುವದೆಂದೂ ಸುಭಾಸರ ಸಂಕಲ್ಪವಿದ್ದಿತ್ತು. ಆದರೆ ಈ ವಾದವು ತಿಳಿಗೇಡಿತನ. ಯಾಕೆಂದರೆ ಸುಭಾಸರನ್ನೆಲ್ಲಿ ಸೆರೆಹಿಡಿದರೂ, ಹಿಂದೀ ಸರಕಾರಕ್ಕೊಪ್ಪಿಸಿಕೊಡಬೇಕು, ಅದು ಶನ್ನಿಶ್ಚೈಯಂತೆ ವರ್ತಿಸಬೇಕು, ಎಂಬುದು ಆ ಮೊದಲೇ ನಿರ್ಧಾರವಾಗಿದ್ದ ವಿಷಯ.

ಅಸರ ಅವಶೇಷಗಳು

ಎರಡನೆಯದಾಗಿ ಸುಭಾಸರ ಅನಂತೇಶಗಳೆನಾದುವು ಸುಭಾಸರದೆನ್ನುವ ಬೂದಿಯನ್ನು ಟೋಕಿಯೋವಿಗೆ ತರಲಾಗಿತ್ತು. ಆದರೆ ಬೂದಿಯನ್ನ ನೋಡಿ ಸತ್ಯವನ ಗುರುತು ಹಿಡಿಯಲಾಗುವದಿಲ್ಲ ಆದು ಯಾವನೊಬ್ಬನ ಶವದ ಬೂದಿಯೂ ಆಗಿರಬಹುದು; ಅಥವಾ ಮನುಷ್ಯನೊಬ್ಬನ ಭಸ್ಮವೇ ಅದಲ್ಲವಾಗಿರಬಹುದು ಸುಭಾಸರ ಚಿಹ್ನೆಯಾಗಬಲ್ಲ ಇತರ ವಸ್ತುಗಳು ಅವರ ಚಲ್ಲಾಣ ಇತ್ಯಾದಿ ಖಾಸಗೀ ಉಡುಗೆ ಭೂಷಣಗಳು-ಯಾರಿಗೂ ನೋಡಲು ಸಿಕ್ಕಿಲ್ಲ ಅವನ್ನೆಲ್ಲಾ ಬೋಸರ ಹೆಣದೊಂದಿಗೆ ದಹನಮಾಡಿದ್ದೇವೆಂಬ ಉತ್ತರ ಬಂದಿದೆ. ಸುಭಾಸ್ ಬೋಸರು ನಿಜಕ್ಕೂ ಸತ್ತಿದ್ದರೆ, ಅವರು ಸತ್ತರೆಂಬುದಕ್ಕೆ ದೃಢವಿಲೆಯಾಗಿ ತೋರಿಸಲು ಈ ಉಸಕರಣಗಳನ್ನು ಉಳಿಸಬೇಕೆಂಬ ಪ್ರೇರಣೆ ಸಾಮಾನ್ಯ ಜ್ಞಾನವಿದ್ದವರಿಗೆಲ್ಲಾ ಬರುವಂತಹದೇ ಯಾಕೆಂದರೆ ಬೋಸರು ಮರಣವಾದರೆಂದು ಹೇಳಲ್ಪಟ್ಟರುವ ಆ ಪರಿಸ್ಥಿತಿ ಆಷ್ಟೊಂದು ಸಮಸ್ಯಾತ್ಮಕವಾದುದು. ಅವರು ಸತ್ತರೆಂಬುದಕ್ಕೆ ಸಾಧ್ಯವಿದ್ದ ಎಲ್ಲಾ ರುಜುವಾತುಗಳನ್ನೂ ಪ್ರಪಂಚವು ಕೇಳುತ್ತದೆ ಎಂಬುದಂತೂ ಖಂಡಿತ. ಬೋಸರು ಸತ್ತದ್ದು ಹೌದು ಎಂಬ ನಂಬಿಕೆಗೆ ಒಂದು ರೀತಿಯಿಂದಾಸ್ಪದ ಕೊಡುವ ಒಂದೇ ಒಂದು ದಾಖಲೆಯಿದೆ. ಸುಭಾಸರ ವಿಮಾನದಲ್ಲಿ ಅವರೊಟ್ಟಿಗೆ ಉಳಿತಿದ್ದವರೆಂದು ಹೇಳಲ್ಪಟ್ಟರುವ ಭಾರತೀಯ ಸಮುಖ ಮತ್ತು ಕೈಗಳೆರಡೂ ಜಜ್ಜಿ, ಕರಟ ಹೋಗಿರುವುದನ್ನು ಕಾಣಬಹುದಾಗಿತ್ತು. ಆದರೆ ಇದು ಕೂಡಾ ಸರಿಯಾದ ರುಜುವಾತು ಅಲ್ಲ. ಅವರು ಬೇರಾವುದಾದರೊಂದು ಅವಘಡಕ್ಕೀಡಾಗಿ ಹಾಗಾಗಿರಬಹುದು. ಆದ್ದರಿಂದ ಸುಭಾಸ್ ಸಮಸ್ಯೆ ಇನ್ನೂ ಬಿಡಿಸಲ್ಪಡದೇನೇ ಇದೆ. ಇಲ್ಲಿರುವ ಭಾರತೀಯರಿಗೆ, ಸುಭಾಸರ ಮರಣ ವಾರ್ತೆ ಸ್ಪಷ್ಟವಾಗಿ ಇದ್ದಷ್ಟೇ ಸಂದೇಹ ಈಗಲೂ ಇದೆ"

ಲೀಗ್—ಮಹಾಸಭಾ ಮತ್ತು ಸರಕಾರಕ್ಕೆ ಸರ್ದಾರರ ಸ್ಪಷ್ಟ ಎಚ್ಚರಿಕೆ.

ಮತದಾರರು ತಮ್ಮನ್ನು ತಾವರಿಯಲಿ.

ಪೂನಾ ಸಭೆಯೊಂದರಲ್ಲಿ ವಲ್ಲಭಾಯಿಗಳ ಭಾಷಣ.

ಪ್ರತಿಯೊಬ್ಬನೂ ಪ್ರತಿಧ್ವನಿಸಬೇಕಾದ ವಾಗ್ಬಾಣ!

"ಭಾರತವು ಮತ್ತೊಂದು ಹೋರಾಟದ ಸಿದ್ಧತೆ ಮಾಡುತ್ತಿದೆ ಎಂದು ಬ್ರಿಟಿಷ್ ಸರಕಾರಕ್ಕೆ ಭೀತಿ ತಾಗಿದ ಹಿಗ್ಗಾಗಿ, ಪಂಡಿತ ನೆಹರುಗಳ ನಿಯೋಜಿತ ದಸ್ತಗಿರಿಯ ಗಾಳೀ ಸುದ್ದಿಗಳು ಬರುತ್ತಿವೆ ಭಾರತವು ಸ್ವತಂತ್ರವಾಗುವ ವರೆಗೂ ಒಂದು ಹೋರಾಟದ ಸಿದ್ಧತೆ ನಿಲ್ಲುವಂತಿಲ್ಲವೆಂಬುದನ್ನು ಅಧಿಕಾರಿಗಳು ತಿಳಿದಿರಬೇಕು ಜೈಲಿನಲ್ಲಿರಲಿ, ಹೊರಗಿರಲಿ, ಆ ಸಿದ್ಧತೆ ನಡೆಯುತ್ತಾ ಹೋಗಬೇಕು ಮತ್ತು ನಡೆಯುತ್ತಾ ಹೋಗುವದು

ನೆಹರುಗಳ ತಪ್ಪೇನು?

ಸರಕಾರವು ಪಂಡಿತ ನೆಹರುಗಳ ದಸ್ತಗಿರಿಯ ಯೋಜನೆಯನ್ನೇಕೆ ಮಾಡುತ್ತಿದೆ? ನಮ್ಮ ನೆರೆಯ ರಾಷ್ಟ್ರಗಳ ಸ್ವಾತಂತ್ರ್ಯ ದಮನಿಸಲು ಹಿಂದೀ ಸೇನೆಯನ್ನು ಉಪಯೋಗಿಸಿದ್ದಕ್ಕಾಗಿ ನೆಹರುಗಳು ಯಾತನೆಗೊಂಡುದು ತಪ್ಪಾಯಿತೆ? ಅಥವಾ ತಮ್ಮ ದೇಶವನ್ನು ಪ್ರೀತಿಸಿದ್ದೇ ಅಪರಾಧವಾಗಿ ಹಿಂದೀ ರಾಷ್ಟ್ರೀಯ ಸೈನಿಕರು ವಿಚಾರಣೆಗೊಳಗಾದ್ದರಿಂದ ಅವರು ವೇದನೆಗೊಂಡುದು ದೋಷವಾಗಿ ಕಂಡಿತೆ? ಅಪ್ರಿಯವಾದ, ಮಾತ್ರವಲ್ಲ, ಕಠೋರವಾದ ಕೆಲವು ಸತ್ಯವನ್ನು ಪಂಡಿತ ನೆಹರುಗಳು ಆಡಿರಬಹುದು ಹಾಗೆ ಮಾಡಲು ಅವಂಗಧಿಕಾರವಿಲ್ಲವೆ ಬ್ರಿಟಿಷರಾದರೆ, ಏನೊಂದೂ ತೊಂದರೆಯಿಲ್ಲದೆ, ಪ್ರಪಂಚದಲ್ಲಿ ಬೇಕಾದ ಪಡೆಗೆ ಹೋಗಬಹುದು. ಆದರೆ ಅತಿ ದೊಡ್ಡ ಹಿಂದೀಯನಾದರೂ ತನ್ನ ನೆರೆ ರಾಷ್ಟ್ರವೊಂದನ್ನು ಸಂದರ್ಶಿಸಬೇಕಾದರೆ ಬ್ರಿಟಿಷ್ ಸರಕಾರದ ಸಮ್ಮತಿಪಡಕೊಳ್ಳಬೇಕು. ಆ ಸಮ್ಮತಿಯನ್ನು ಎಂತಾ ಕರಿಸುವ ಅಧಿಕಾರವನ್ನು ಕೂಡಾ ಇಟ್ಟುಕೊಳ್ಳುವ ಹೆಮ್ಮೆ ಸರಕಾರಕ್ಕಿದೆ. ಡಚ್ ಸಾಮ್ರಾಜ್ಯದ ಕಡೆಗೆ ತಮ್ಮ ನೈತಿಕ ಜವಾಬ್ದಾರಿಯಿದೆ, ಎಂದು ಬ್ರಿಟಿಷ್ ಪ್ರಧಾನಿಗಳಂದಿದ್ದಾರೆ ಆದರೂ ಅವರು ತಮ್ಮ ಹೋರಾಟವು ಮಾನವ ವರ್ಗದ ಸ್ವಾತಂತ್ರ್ಯಕ್ಕಾಗಿ ತಾವು ಹೋರಾಡುವದು ಆಕ್ರಮಣಕ್ಕಿದಿರಾಗಿ, ಎಂದು ಲೆಕ್ಕವಿಲ್ಲದಷ್ಟು ಬಾರಿ ಬಡಾಯಿ ಹಾರಿಸುತ್ತಲೂ ಇದ್ದಾರೆ. ಭಾರತವಿಂದು ಹೋರಾಡಬೇಕಾಗಿರುವ-ಅದೂ ನಿತ್ಯಸ್ವತಂತ್ರವಾಗಿ ಕಾದಾಡಬೇಕಾಗಿರುವ-ಸಾಮಾನ್ಯಾಜ್ಯವು ಇಂತಹದು!

'ಕ್ವಿಟ್-ಇಂಡಿಯಾ' ಪ್ರಶ್ನೆ

ಕಾಂಗ್ರೆಸು ಇಂದು 'ಕ್ವಿಟ್ ಇಂಡಿಯಾ' ಘೋರಣೆಯನ್ನು ಇಟ್ಟುಕೊಂಡು ಚುನಾವಣಾ ಹೋರಾಟದಲ್ಲಿದೆ ಶಾಸನ ಸಭೆಗಳನ್ನು ಪ್ರವೇಶಿಸಿ, ಬ್ರಿಟಿಷ್ ಸರಕಾರವು ಭಾರತದಿಂದೊಡುವಂತೆ ಮಾಡಲು ಸಾಧ್ಯವಿಲ್ಲ ಆ ಕೆಲಸವು ನ್ಯಾಯವಿಧಾಯಕ ಸಭೆಗಳ ಹೊರಗೇನೇ ಆಗಬೇಕು ಜೇಗಿದ್ದರೂ ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕೆಂದು ಕಾಂಗ್ರೆಸ್ ನಿರ್ಧರಿಸಿದೆ ಯಾಕೆಂದರೆ ಶಾಸನ ಸಭೆಗಳ ಹೊರಗೆ ಅದು ಸ್ವಾತಂತ್ರ್ಯ ಹೋರಾಟವನ್ನು ಸಾಗಿಸುತ್ತಿರುವಾಗ ಕೂಡಾ ಅದರೊಳಗಡೆಯಲ್ಲಿ ತನ್ನ ಪಹರೆಗಾರರನ್ನಿಡಲು ಅದು ಸಂಕಲ್ಪಿಸಿದೆ ತಾವು ಎಸೆಂಬ್ಲಿ ಸ್ಥಾನಗಳನ್ನು ಬಟ್ಟು ಕೊಟ್ಟರೆ ಅನಪೇಕ್ಷಿತ ಮನುಷ್ಯರು ಅವುಗಳನ್ನಾಕ್ರಮಿಸಿಕೊಂಡು ಹಿಂದೂ ದರೆದ ಗುಲಾಮತ್ವವನ್ನು ಬಲಪಡಿಸುವರೆಂಬ ಅನುಭವ ನಮಗಾಗಿದೆ. ಅವಲ್ಲೆಲ್ಲಾ ನಮ್ಮ ಜನರೇ. ನಮ್ಮವರ ಸಹಾಯದಿಂದಲೇ ಬ್ರಿಟಿಷರೀ ದೇಶವನ್ನು ಆಳುತ್ತಿದ್ದಾರೆ. ನಮ್ಮ ನಿರಾಯುಧ ತಂಡಗಳ ಮೇಲೆ ಲಾತೀ ಚಾರ್ಜ್ ಮಾಡಿದವರು, ಶಾಂತ ಸಭೆಗಳ ಮೇಲೆ ಗುಂಡಿನ ಮಳೆ ಕರೆದವರು, ನಮ್ಮ ಸ್ವಂತ ದೇಶೀಯರೇ. ಇದು ಶೋಚನೀಯ ಸ್ಥಿತಿ, ಲಜ್ಜೆ ಪಡಬೇಕಾದ ವಿಷಯ, ಆದರೆ ಸಂಗತಿ ಹಾಗಿದೆ!

ಹಿಂದೂ ಮುಸಲ್ಮಾನರು ಅಣ್ಣ ತಮ್ಮಂದಿರು

ಪಾಕಿಸ್ತಾನದ ಕುರಿತು ಕಾಂಗ್ರೆಸು ಸಂಧಾನ ಮಾಡಿಕೊಳ್ಳಬಹುದೆಂಬ ಹೆದರಿಕೆಯಿದೆಯಾದ್ದರಿಂದ ತಾವು ಚುನಾವಣೆಯಲ್ಲಿ ಹೋರಾಡುತ್ತಿದ್ದೇವೆಂದು ಹಿಂದೂ ಮಹಾ ಸಭೆಯವರ ಹೇಳಿಕೆ. ಆದರೂ, ಕಾಂಗ್ರೆಸು ಪಾಕಿಸ್ತಾನ್ ಸಂಧಾನಮಾಡಿಕೊಳ್ಳುವಂತಿಲ್ಲವೆಂದು ತನಗೆ ಸಮಾಧಾನವಾಗಿದೆಯನ್ನುತ್ತಾ ಪಂಜಾಬಿನಲ್ಲಿ ಜಂಗೋಕುಲ ಜಂಗ್ ನರಂಗರು ತನ್ನಉಮೇದ್ವಾರಿಕೆಯನ್ನು ಹಿಂದೆಗೆದಿದ್ದಾರೆ. ವ್ಯಕ್ತಿಗಳನಗೆ ಪಾಕಿಸ್ತಾನದ ಭೀತಿಯಿಲ್ಲ. ಮಿ. ಜಿನ್ನರು ರೂಪಿಸಿರುವ ಪಾಕಿಸ್ತಾನವು ಎಂದಿಗೂ ನಿರ್ಮಾಣಗೊಳ್ಳುವಂತಿಲ್ಲವೆಂಬುದು ನನಗೆ ಗೊತ್ತು. ಆ ಅಧಿಕಾರವೇ ತನಗಿಲ್ಲವೆಂಬ ಏಕ ಮಾತ್ರ ಸರ್ವಸ್ಮತ ಕಾರಣದಿಂದಾಗಿ ಕಾಂಗ್ರೆಸು ಅಂತಹ ಪಾಕಿಸ್ತಾನ ಕೊಡುವಂತಿಲ್ಲ ಹಿಂದುಗಳೂ ಮುಸಲ್ಮಾನರೂ ಒಂದೇ ಜನತೆ ಅಣ್ಣತಮ್ಮಂದಿರಂತೆ ಮತ್ತು ನೆರೆಕರೆಯವರಂತೆ ಅವರಿಬ್ಬರೂ ಒಂದೇ ದೇಶದಲ್ಲಿ ಬಾಳಿತಕ್ಕವರು. ಬಿನ್ನಧರ್ಮಗಳ ದಸಯಿಂದ ಭಿನ್ನ ರಾಷ್ಟ್ರೀಯತೆಯುಂಟಾಗದು

ಜಿನ್ನರ ಬುದ್ಧಿಹೀನತ್ವ ವಾದ

ತನ್ನ ಪಾಕಿಸ್ತಾನದ ಸ್ವರೂಪ ತಿಳಿಸಲು ಮಿ ಜಿನ್ನರಿಗೆ ಐದು ವರುಷಗಳು ಬೇಕಾದುವು. ಪಾಕಿಸ್ತಾನದಲ್ಲಿ ಹಿಂದುಗಳಿಗೆ ಮತ್ತು ಇತರ ಅಲ್ಪಸಮಾಜಗಳವರ ಹಕ್ಕು ಬಾಧ್ಯತೆಗಳಿಗೆ ರಕ್ಷಣೆಯಿದೆ ಎಂಬ ಆಶ್ವಾಸನೆ ಬರುತ್ತಿದೆ. ಮಿ ಜಿನ್ನರಿದನ್ನು ಯಾವ ಬಾಯಿಯಿಂದ ಹೇಳುವಿದ್ದಾರೆ? ಭಾರತೀಯ ಸಂಯುಕ್ತ ರಾಜ್ಯ ಭಾರವು ಮುಸಲ್ಮಾನರಿಗೆ ಕೊಡುವ ಇಂತಹ ಆಶ್ವಾಸನೆಯನ್ನು ಸ್ವೀಕರಿಸಲೊಪ್ಪದ ಜಿನ್ನರು, ಮುಸ್ಲಿಂ ಬಹು ಸಂಖ್ಯಾಕರದಾದ ಪಾಕಿಸ್ತಾನ್ ಸರಕಾರದ ಇಂತಹ ಮಾತುಗಳನ್ನು ಹಿಂದುಗಳು ವಿರಸಾವಹ ವರೆಂದು ನಿರಾಕ್ಷಿಸುವದಾದರೂ ಹೇಗೆ? ಹಿಂದುಗಳೇ ಅಧಿಕ ಬಹು ಸಂಖ್ಯೆಯಲ್ಲಿರುವ ಆಸ್ಸಾಮು ಪ್ರಾಂತ್ಯವನ್ನು ಮಿ. ಜಿನ್ನರು ಕೇಳುತಿದ್ದಾರೆ ಪಾಕಿಸ್ತಾನದಲ್ಲಿ ಆಸ್ಸಾಮನ್ನು ಸೇರಿಸಬೇಕೆಂಬ ಬೇಡಿಕೆಗೂ, ಸ್ವನಿರ್ಧಾರ ತತ್ವಕ್ಕೂ ಜೋಡಣಯೆಲ್ಲಿದೆ? ಮಿ ಜಿನ್ನರು ಆಖಿಲ ಭಾರತವನ್ನೇ ಕೇಳಿ ಬಿಡುವದು ವಾಸಿ, ಆಗ ಪಾಕಿಸ್ತಾನದ ಪ್ರಶ್ನೆಯೇ ಇಲ್ಲ!

ಲೀಗಿನೊಡನೆ ಸಂಧಾನ ಅಸಾಧ್ಯ

ಮುಸಲ್ಮಾನರು ನಮ್ಮ ಸಹೋದರರು. ಅವರೊಡನೆ ಹೋರಾಡಲು ನಾವು ಇಚ್ಛಿಸುವದಿಲ್ಲ ಅವರೊಡನೆ ಸಂಧಾನ ಮಾಡಿಕೊಳ್ಳಲು ನಾವು ಕಯಾರಿದ್ದೇವೆ ಆದರೆ ಲೀಗ್ ಮುಂದಾಳುವು ತನ್ನ ನಡತೆಯನ್ನು ತಿದ್ದಿಕೊಂಡ ವಿನಹ ಮುಸ್ಲಿಂ ಲೀಗಿನೊಡನೆ ಯಾವಹೇ ಸಂಧಾನ ಸಾಧಿಸುವ ಸಾಧ್ಯತೆ ಅತ್ಯಲ್ಪವಿದೆ ಮಹಾತ್ಮಾಗಾಂಧಿಯವರು ಅವರೊಡನೆ 18 ದಿನ ಮಾತನಾಡಿ ನೋಡಿದರು; ಆದರೆ ಪರಾಭವಗೊಂಡರು ಈಗ ವರ್ಕಿಂಗ್ ಕಮಿಟಿಯು ಹೊರಗಿದ್ದ, ಲೀಗಿನೊಡನೊಂದು ತೀರ್ಮಾನವೆಂಬ ಪ್ರಶ್ನೆಯನ್ನು ಬಿಡಿಸುವ ಕೆಲಸವೀಗ ವರ್ಕಿಂಗ್ ಕಮಿಟಿಯಿದು. ಕಾಂಗ್ರೆಸಿನೊಡನೆ ತೀರ್ಮಾನವೇಕೆಂದು ತೋರಿದರೆ, ಲೀಗೇ ಕಾಂಗ್ರೆಸನ್ನು ಸಂಧಿಸತಕ್ಕದ್ದೆಂಬುದನ್ನು ನಾನಿಲ್ಲಿ ಸ್ಪಷ್ಟಪಡಿಸಲಿಚ್ಛಿಸುತ್ತೇನೆ ಲೀಗ್ ಮತ್ತು ಅವರ ನಾಯಕನೇ ಭಾರತದ ಸ್ವಾತಂತ್ರ್ಯದ ಹಾದಿಯ ಅತಿ ದೊಡ್ಡ ಕಂಟಕಗಳು ಅದರೆ ಆ ಹಾದಿಯನ್ನು ಸದಾಕಾಲ ಅಡ್ಡಗಟ್ಟಿ ನಿಲ್ಲಲು ಅವರಿಂದಾಗದು. ತಮ್ಮ ಘೋರ ನೆಯು ಆತ್ಮಹತ್ಯೆಗೆ ಸಮಾನವಾದುದು. ಮತ್ತು ತಮಗಾನ ಗತಿಯನ್ನೂ ಕಾಣಿಸದಂತಹದೆಂಬುದನ್ನು ಲೀಗ್ ಮುಸಲ್ಮಾನರು ಕ್ರಿಶ್ರದಲ್ಲಿಯೇ ತಿಳಿಯಲಿದ್ದಾರೆ.

ಮತಬೇಡಿ ಮರ್ಕಾದೆ ಕೆಡೆಯಲಾರೆ!

ಹಿಂದೂ ಮಹಾ ಸಭೆಯು ಅಪಜಯದ ಆಟವಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಎಚ್ಚರಿಸುತ್ತೇನೆ ಕಾಂಗ್ರೆಸಿನೊಡನೆ ಹೋರಾಡಿ, ಹರಿಜನೋದ್ಧಾರವದಕ್ಕಿಂತ, ಹಿಂದೂ ಮಹಾ ಸಭಾ ಪ್ರಮುಖರು ಕಾಂಗ್ರೆಸನ್ನು ಸೇರಿ ತಮ್ಮ ಶಕ್ತ್ಯಾಜ್ಞಾಹಗಳನ್ನು ಪಾಕಿಸ್ತಾನ್ ಹೋರಾಟಕ್ಕೆ ಹಚ್ಚಲಿ. ಕಾಂಗ್ರೆಸಿಗೆ ಮತಕೊಡಿರಿ ಎಂದು ಕೇಳುವ ಮೂಲಕ ನಾನು ಜನತೆಗೆ ಅಪಮಾನ ಮಾಡಲಾರೆ ಕಾಂಗ್ರೆಸಿನ ಬೇಡಿಕೆಯಂತೆ ತಮ್ಮ ಪ್ರಾಣ ಮತ್ತು ಸರ್ವಸ್ವವನ್ನೂ ಕೊಟ್ಟವರು ಅವರು, ಲಾತಿ ಮತ್ತು ಗುಂಡಿಗೆ ಎದೆ ಕೊಟ್ಟವರು ಅವರು, ಅಂಥವರು ಕಾಂಗ್ರೆಸಿಗೆ ವೋಟು ಕೊಡಲು ಬದ್ಧರಾದ್ದಾರೆ ಅವರು ಹಾಗೆ ಮಾಡದೆ ಹೋದರೆ, ಭಾರತವು ಸ್ವತಂತ್ರವಾಗುವೇಕೆಂಬ ಆಸೆ ಜನತೆಗಿಲ್ಲವೆಂದರ್ಥವಾಗುತ್ತದೆ. ಮತದಾರರು ಉಮೇದ್ವಾರೀ ಜನರಿಂದುಬುದನ್ನು ನೋಡ ಕೂಡದು. ಅವರು ಯಾವುದರ ಪರವಾಗಿ ನಿಂತಿದ್ದಾರೋ ಆ ತತ್ವವನ್ನಷ್ಟೇ ನೋಡಬೇಕು. 1942ರಲ್ಲಿ ಕಾಂಗ್ರೆಸು 'ಕ್ವಿಟ್ ಇಂಡಿಯಾ' ಘರ್ಜನೆ ಮಾಡಿತು. ಈ ಘೋಷಣೆಬೆಬ್ಬಿಸಿದ್ದಕ್ಕಾಗಿ ಜನತೆಯು ಗುಂಡನ್ನು ಇದಿರಿಸಬೇಕಾಯಿತು. ಈ ದಿನ ಹಾದಿಹೋಕ ಮಕ್ಕಳು ಕೂಡಾ 'ಕ್ವಿಟ್ ಇಂಡಿಯಾ' ಮಾತ್ರವಲ್ಲ, 'ಕ್ವಿಟ್ ಎಶ್ಯಾ' ಘರ್ಜನೆ ಮಾಡುತ್ತಿವೆ ಮತ್ತು ಬೇಗನೇ ಅವರಿಲ್ಲಿಂದೋಡಲೇಬೇಕು".

1000's SAVED
MARGARET'S
FITS CURE
Stops children's fits in 5 minutes.
Ask your chemist for a box
Sole Agents
BRIGHTSTAR AGENCIES,
Hospital Rd, Udipi, S. K

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಂಡಿ ಪಾಕೀಯಗಳ ತಯಾರಿಕೆಗಳ—ವಿದ್ಯುದ್ದೀಪ, ಶೀತಿಯೆಗಳ ಆಧುನಿಕ ಸಲಕರಣೆ ಉತ್ತಮ ಉಪಚಾರ.
ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್
Indra Bhavan Coffee Hotel,
Balmatta Road, Mangalore.

ಕೇಂದ್ರ ಎಸೆಂಬ್ಲಿ ಚುನಾವಣೆಗಳು.

೭೯ ಮಂದಿ ಕಾಂಗ್ರೆಸ್‌ಗರ ಅವಿರೋಧ ಆಯ್ಕೆ.

ಪರಮಾಣು ಮತ್ತು ಪ್ರತ್ಯೇಕ ಪ್ರಾತಿನಿಧ್ಯದ ಕಲಸು ಮೇಲೋಗರ.

ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿಯ ಕಾರ್ಯದರ್ಶಿಯು ಒಂದು ಪ್ರಕಟಣೆಯಲ್ಲಿ ಕೇಂದ್ರ ಎಸೆಂಬ್ಲಿಯ ೪೨ ಮುಸಲ್ಮಾನೇತರ ಸ್ಥಾನಗಳಲ್ಲಿ ಅರೆಮಾಸಿಯಷ್ಟು ಸ್ಥಾನಗಳು ಸ್ಪರ್ಧೆ-ಯಿಲ್ಲದೇನೇ ಕಾಂಗ್ರೆಸಿಗೆ ದೊರೆತುವೆಂದು ವಿಜಯ ದುಂದುಭಿ ಬಾರಿಸಿದ್ದಾರೆ. ಇಡೀ ದೇಶದಲ್ಲಿರುವ ಸಾಮಾನ್ಯ ಮತದಾರ ಕ್ಷೇತ್ರಗಳು 51. ಅ ಪೈಕಿ 25 ಸ್ಥಾನಗಳಲ್ಲಿ ಕಾಂಗ್ರೆಸ್ ಉಮೇದ್ವಾರಿಗಳಿಗೆ ಇದಿರಾಳಿಗಳೇ ಇಲ್ಲ. ವ್ಯಾಪಾರೀ ಮತದಾರ ಕ್ಷೇತ್ರಗಳಿರುವ 4 ಸ್ಥಾನಗಳ ಪೈಕಿ ೩ ಸ್ಥಾನಗಳು ವಿರೋಧ ವಿಲ್ಲದೇ ಕಾಂಗ್ರೆಸಿಗೆ ದೊರೆತಿವೆ. ಬಂಗಾಳದ ಮತ್ತೊಂದು ಸ್ಥಾನಕ್ಕೂ ಅವಿರೋಧವಾಗಿ ಆರಿಸಿ ಬಂದ ಶ್ರೀ. ಎ ಎಮ್. ಪೊದ್ದಾರರು ತಾನು ಕಾಂಗ್ರೆಸಿನ ಪರವಾಗಿ ಇದ್ದೇನೆ ಎಂದು ಜಾಹೀರು ಮಾಡಿದ್ದಾರೆ. ಮಧ್ಯ ಪ್ರಾಂತ್ಯ ಮತ್ತು ಬೀರಾರಿನ ವರ್ಗದಾರರ ಒಂದು ಸ್ಥಾನವೂ ಅವಿರೋಧವಾಗಿ ಕಾಂಗ್ರೆಸಿಗೆ ದೊರೆತಿದೆ. ಕೇಂದ್ರ ಎಸೆಂಬ್ಲಿಗೆ ಅವಿರೋಧವಾಗಿ ಆರಿಸಿ ಬಂದ ಕಾಂಗ್ರೆಸ್ ಸದಸ್ಯರ ಪ್ರಾಂತ್ಯವಾರು ತಪಶೀಲು:—

ಮದ್ರಾಸ್ ಪ್ರಾಂತ್ಯದಿಂದ—

ಶ್ರೀಗಳಾದ 1 ಆರ್ ವೆಂಕಟ ಸುಬ್ಬರೆಡ್ಡಿ (ದಕ್ಷಿಣ ಆರ್ಕಾಟು ಮತ್ತು ಚೆಂಗಲ್‌ಪೇಟ್) 2 ವಿ. ಸಿ. ವೆಲ್ಲಿಂಗಿರಿ ಗೌಂಡರ್ (ಸೇಲಮ್, ಕೊಯಮುಟ್ಟೂರು ಮತ್ತು ಉತ್ತರ ಆರ್ಕಾಟು) 3. ಎಸ್ ಟಿ ಆದಿತ್ಯನ್ (ಮಧುರಾ, ರಾಮ್ನಾಡ್, ತಿರುನೆಲ್ವೆಲ್ಲಿ) 4. ವಿ ರಂಗರಾಜು (ಪೂರ್ವ ಮತ್ತು ಪಶ್ಚಿಮ ಗೋದಾವರಿ, ಕೃಷ್ಣಾ ಜಿಲ್ಲೆ) ೫ ಎನ್. ಜಿ ರಂಗ (ಗುಂಟೂರು ಮತ್ತು ನೆಲ್ಲೂರು) 6. ಅನಂತ ಶಯನಮ್ ಆಯ್ಯಂಗಾರ್ (ತಿರುಚಿಡ್ ಜಿಲ್ಲೆಗಳು ಮತ್ತು ಚಿತ್ತೂರು) 7 ಟಿ. ಎ. ರಾಮಲಿಂಗಮ್ ಚೆಟ್ಟಿಯಾರ್ (ವ್ಯಾಪಾರೀ ಮತದಾರ ಕ್ಷೇತ್ರ)

ಬಿಹಾರ್ ಪ್ರಾಂತ್ಯದಿಂದ—

ಶ್ರೀಗಳಾದ 1. ಗೌರೀಶಂಕರ್ ಶರಣ್ ಸಿಂಗ್, (ಗಯಾ ಮತ್ತು ಸೋಂಪೀರ್) 2. ರಾಮನಾರಾಯಣ ಪ್ರಸಾದ್ (ಪಾಟ್ನಾ ಮತ್ತು ಶಹಬಾದ್) 3 ಸತ್ಯನಾರಾಯಣ ಸಿಂಹ (ದರ್ಭಾಂಗ ಮತ್ತು ಸಾರನ್) 4 ಬಿಪಿನ್ ಬಿಹಾರಿವರ್ಮ (ಮುಝಫರ್‌ಪುರ ಮತ್ತು ಚಂಪಾರಣ್ಯ) 5 ರಾಮನಾರಾಯಣ ಸಿಂಘ್ (ಚೋಟಾನಾಗಪುರ)

ಒರಿಸ್ಸಾ ಪ್ರಾಂತ್ಯದಿಂದ—

1 ಶ್ರೀ. ಜಗನ್ನಾಥದಾಸ (ಬಲಸೋರ್-ಸಂಬಲ್ಪುರ)

ಸಂಯುಕ್ತ ಪ್ರಾಂತ್ಯದಿಂದ—

ಶ್ರೀಗಳಾದ 1 ಬಾಬು ಶ್ರೀಪ್ರಕಾಶ್ (ಕಾಶಿ ಮತ್ತು ಗೋರಕ್‌ಪುರ) 2. ಜೋಗೇಂದ್ರ ಸಿಂಘ್ (ಗಢ್ವಾಲಾ) 3 ಮೋಹನ್‌ಲಾಲ್ ಸಕ್ಸೇನಾ (ಲಕ್ನೋ) 4 ಕೃಷ್ಣದತ್ ಪಾಲಿವಾಲ್ (ಆಗ್ರಾ) 5 ಕೃಷ್ಣ ಚಂದ್ರಶರ್ಮಾ (ಮೀರತ್)

ಮಧ್ಯ ಪ್ರಾಂತ್ಯದಿಂದ—

ಶ್ರೀಗಳಾದ 1. ಸೇಠ್ ಗೋವಿಂದ ದಾಸ್ (ಮಧ್ಯ ಪ್ರಾಂತ್ಯಗಳು) 2. ಶಿವದಾಸ್ ದಾಗ (ಹಿಂದೀ ವಿಭಾಗ) 3. ಗಣಪತರಾವ್ ದಾಮಿ (ಮಧ್ಯ ಪ್ರಾಂತೀಯ ವರ್ಗದಾರ ಕ್ಷೇತ್ರ)

ಅಜಮೀರ್-ಮೇರ್ವಾಡಾದಿಂದ—

1. ಶ್ರೀ. ಎಮ್ ಬಿಹಾರೀಲಾಲ್ (ಅಜಮೀರ್-ಮೇರ್ವಾಡಾ).

ಬೊಂಬಾಯಿ ಪ್ರಾಂತ್ಯದಿಂದ—

ಶ್ರೀಗಳಾದ 1 ಜಿ ವಿ. ಮಾವ್ಲಂಕರ್, (ಉತ್ತರ ಡಿವಿಜನ್) 2. ಎಡಿಲಾಲ್ ಲಲ್ಲು ಭಾಯಿ (ಅಹಮ್ಮದಾಬಾದ್ ಗಿರಣಿ ಮಾಲಕರ ಕ್ಷೇತ್ರ) 3 ಮನು ಸುಬೇದಾರ್ (ಹಿಂದೀ ಸಾಹುಕಾರ ಸಂಘ)

ಸಿಂಧ್ ಪ್ರಾಂತ್ಯದಿಂದ —

1. ಶ್ರೀ. ಶುಖದೇವ್ ಉದಯದಾಸ್ (ಸಿಂಧ್)

ಪಂಜಾಬ್ ಪ್ರಾಂತ್ಯದಿಂದ—

1. ದಿವಾನ್ ಚಮನಲಾಲ್ (ಪಶ್ಚಿಮ ಪಂಜಾಬ್).

ಆಸ್ಸಾಮ್ ಪ್ರಾಂತ್ಯದಿಂದ—

ಶ್ರೀಗಳಾದ 1. ಮೋಹಿನಿ ಕುಮಾರ್ ಚೌಧರಿ (ಆಸ್ಸಾಮ್ ತಗ್ಗು ಪ್ರಾಂತ್ಯ) 2. ಎ ಕೆ ಚಂದ (ಸುರ್ಮ ತಗ್ಗು ಪ್ರಾಂತ್ಯ)

ಈ ರೀತಿ ಕೇಂದ್ರ ಎಸೆಂಬ್ಲಿಯ 29 ಸ್ಥಾನಗಳು ಚುನಾವಣೆಯೇ ನೂ ಇಲ್ಲದೆ ಕಾಂಗ್ರೆಸಿಗೆ ದೊರೆತಿವೆ ಹಿಂದುಗಳಿಗೆ ಕಾಂಗ್ರೆಸ್ ಇದುವರೆಗೆ ಮುಸಲ್ಮಾನರಿಗೆ ತಾವಿನ್ನೇನೆ ಎನ್ನುವ ಲೀಗಿನ ಉಪೇಕ್ಷಾರ್ಹಗಳು ಮುಸ್ಲಿಂ ಕ್ಷೇತ್ರದಲ್ಲಿ ಇಂತಹ ವಿಜಯ ಪಡೆದಿಲ್ಲ ಕಾಂಗ್ರೆಸ್ ಗೆದ್ದ ಮುಸಲ್ಮಾನೇತರ ಸ್ಥಾನಗಳು, ಕೇವಲ ಹಿಂದುಗಳ ಹಕ್ಕಿನವಾಗಿರದೆ ಕೆಥೋಲಿಕರೇ ಮೊದಲಾದ ಸರ್ವ ಜಾತಿಗಳ ಪ್ರಾತಿನಿಧ್ಯವುಳ್ಳದ್ದಾಗಿವೆ ಆದರೂ ಕಾಂಗ್ರೆಸ್ ಉಮೇದ್ವಾರಿಕೆಗಳ ಕುರಿತು ಅಲ್ಪ ಸಂಖ್ಯಾಕರ ಅತೃಪ್ತಿಯೆಲ್ಲಿಯೂ ಕಂಡು ಬರುವದಿಲ್ಲವೆಂಬುದು ವ್ಯಾಮುಖ್ಯವಿದೆ ಒರಿಸ್ಸಾದೊಂದು ಸ್ಥಾನದ ಕುರಿತು ಆಂಧ್ರ ಕಾಂಗ್ರೆಸ್ ಕಮಿಟಿಯ ಆಕ್ರಮಣ ಮನೋವೃತ್ತಿಯ ನಿಷೇಧ—ಕರ್ನಾಟಕಕ್ಕೆ ಸರಿಯಾದ ಪ್ರಾತಿನಿಧ್ಯ ದೊರೆಯದ ಖಂಡನೆ-ಇತ್ಯಾದಿ ಪ್ರಾಂತ್ಯವಾರು ದೂರು ದೂಷಣೆಗಳೆದ್ದಿವೆ ಜಾತೀವಾರು ಕ್ಷುದ್ರ ಮನೋವೃತ್ತಿ ಕಾಣುವದಿಲ್ಲ.

ಪ್ರತ್ಯೇಕ ಮತದಾನವೇ—

ಹೆಚ್ಚಿನ ಅನರ್ಥಕ್ಕೆ ಹೇತುವೆಂಬುದು ಇದರಿಂದ ಖಚಿತವಾಗುತ್ತಿದೆ. ಮುಸಲ್ಮಾನರಿಗೆ ಪ್ರತ್ಯೇಕ ಮತಾಧಿಕಾರ ಕೊಟ್ಟುದರಿಂದ ಕಾಂಗ್ರೆಸ್ ಮತ್ತು ಲೀಗ್ ಭಿನ್ನ ಕ್ಷೇತ್ರಗಳಲ್ಲಿದ್ದುಕೊಂಡು ಮೇಲಾಡಬೇಕಾಗಿದೆ. ಜಾತೀಯ ಸ್ಥಾನಗಳ ಸ್ಪರ್ಧೆಯಲ್ಲಿ ಜಾತೀಯ ಮನೋವೃತ್ತಿಯೇ ಬೆಳೆಯುವಂತಾಗಿದೆ. ಹಿಂದೀಯರನ್ನು ವಿಭಾಗಿಸಲು ಬ್ರಿಟಿಷ್ ಸರಕಾರವು ಮುಸಲ್ಮಾನರಿಗೆ ಕೊಟ್ಟ ಪ್ರತ್ಯೇಕ ಸ್ಥಾನವೇ ಇಂದಿನ ಪಾಕಿಸ್ತಾನ್ ಸ್ವಪ್ನವೃಕ್ಷದ ವಿಷ ಬೀಜ. ಕಾಂಗ್ರೆಸ್ ಆದಿಯಿಂದಲೂ ಅಪೇಕ್ಷಿಸುತ್ತಾ ಬಂದಿದ್ದ ಮಿಶ್ರ ಮತದಾನ ಪದ್ಧತಿಯಿರುತಿದ್ದರೆ ಎಲ್ಲಾ ಕ್ಷೇತ್ರಗಳಲ್ಲೂ ಇಂದಿನ ಜಾತೀಯ ಸ್ವರೂಪದ ಬದಲಿಗೆ ರಾಜಕೀಯ ರೂಪವಿರುತಿತ್ತು; ಉಮೇದ್ವಾರಿಯ ಜಾತಿ ನೋಡುವ ಬದಲಿಗೆ, ಅವನ ರಾಜಕೀಯ ನೀತಿಯೊಂದನ್ನೇ ನೋಡುವಂತಾಗುತ್ತಿತ್ತು. ಆದರೆ ಮುಸ್ಲಿಂ ಭಾವನೆಯನ್ನು ಸಮಜಾಯಿಸಬೇಕೆಂದು, ನಿರ್ವಹವಿಲ್ಲದೆ ಕಾಂಗ್ರೆಸ್ 1906 1909ರಲ್ಲಿ ಮುಸಲ್ಮಾನರಿಗೆ ಪ್ರತ್ಯೇಕ ಮತದಾನ ತತ್ವಕ್ಕೊಪ್ಪಿತು; 1916–19೩೫ಲ್ಲಿ ಜನ ಸಂಖ್ಯೆಯ ಸೇಕಡಾ ೧೫ರಿಂದ 9೫ ವರೆಗೆ ಮಾತ್ರ ಮುಸಲ್ಮಾನರಿರುವ ಮದ್ರಾಸ್, ಮಧ್ಯ ಪ್ರಾಂತ್ಯ, ಬೊಂಬಾಯಿಗಳಲ್ಲಿ ಸೇಕಡಾ 15ರಂತೆ ಮುಸ್ಲಿಮರಿಗೆ ಸ್ಥಾನಗಳನ್ನು ಕೊಡಲೊಪ್ಪಿತು. 1915ರಲ್ಲಿ, ಸಿಮ್ಲಾ ಸಮ್ಮೇಲನದಂತೆ ಸಮಾನ ಪ್ರಾತಿನಿಧ್ಯವನ್ನೇ ಮುಸಲ್ಮಾನರಿಗಿತ್ತಿತು. ಈ ರೀತಿಯ ಯತಿಗಳಿಂದಾಗಿ ಮುಸ್ಲಿಂ ಲೀಗಿನ ನಡತೆ ಸಲುಗೆದೊರೆತ ಮಗುವಿನಂತೆ ಕೆಟ್ಟುಹೋಗಿದೆ; ಅದಕ್ಕೀಗ ಪಾಕಿಸ್ತಾನವೇ ಬೇಕಾಗಿನೆ! 1932ರಲ್ಲಿ ಮಹಾತ್ಮಾ ಗಾಂಧಿ ಮರಣಾಂತ ಉಪವಾಸ ಮೂಲಕ ನಿಷೇಧಿಸದಿರುತಿದ್ದರೆ ಆಗಿನ ಬ್ರಿಟಿಷ್ ಪ್ರಧಾನಿ ಮೆಕ್ಡೊನಾಲ್ಡರ ಎವಾರ್ಡಿನಂತೆ ಹರಿಜನರೂ ಇದೇ ರೀತಿ ಪ್ರತ್ಯೇಕವಾಗಿ ಹೋಗುತಿದ್ದರು.

ಜವಾಬ್ದಾರಿಯಿಲ್ಲದ ಕೇಂದ್ರ

ಈಗ ನಡೆಯುತ್ತಿರುವ ಕೇಂದ್ರ ಎಸೆಂಬ್ಲಿ ಚುನಾವಣೆಯು ಎಲ್ಲಿಯೂ ಸಾಕಷ್ಟು ಜನ ಜಾಗ್ರತಿಯೆಬ್ಬಿಸಿಲ್ಲ. ಕಾರಣವೆಂದರೆ ಅದು ಅಂತಹ ಜೀವವಾಬ್ದಾರೀ ಸಭೆ. 1935ರ ಮಸೂದೆ ಯಂತೆ ಪ್ರಾಂತಿಕ ಎಸೆಂಬ್ಲಿಗಳ ಮತದಾರ ಕ್ಷೇತ್ರ ನಿಸ್ಕರಿಸಲ್ಪಟ್ಟಿತು ಪ್ರಾಯಸ್ಥರಿಲ್ಲದಿರಲ್ಲವಾದರೂ ಬಹಿಷ್ಕಾರಿಗಳಾದರೂ ಮತಾಧಿಕಾರ ದೊರೆಯಿತು. ಆ ಮೂಲಕ ಇಡೀ ರಾಷ್ಟ್ರದ ಸುಮಾರು ೨೬ ಮಿಲಿಯ ಮಂದಿಗೆ ಎಲ್ಲಾ ಪ್ರಾಂತಿಕ ಎಸೆಂಬ್ಲಿಗಳಿಗೆ ಒಟ್ಟಿಗೆ 1580 ಪ್ರತಿನಿಧಿಗಳನ್ನಾರಿಸುವ ಅಧಿಕಾರ ಬಂತು ಆದರೆ1935ರ ಸಂಧಾರಣೆಯ ಗಾಳಿ ಕೇಂ

(ಮುಂದಿನ ಪುಟ ನೋಡಿರಿ.)

BANK WITH THE LARGEST CONNECTIONS ON WEST COAST

OFFERS:-
EFFICENT
PROMPT &
COURTEOUS

SERVICE OF EVERY TYPE

OPEN AN ACCOUNT
with

The Canara Industrial & Banking Syndicate Ltd
ESTD 1925

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ
ವಿಮಾ ಕಂಪೆನಿಯು
ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur B. S. Sawkar, B A L.L B, Chairman.
A. S. Kini, Managing Director.

ದಿ ಯುನೈಟೆಡ್ ಕರ್ನಾಟಕ
ಇನ್ಶೂರೆನ್ಸ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co Ltd DHARWAR

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ-
Organising Office:- Court Road, UDIPI

ಪಂಥಪಕ್ಷಕ್ಕಿಂತಿರುವ ಪಕ್ಷಗಳು.

1946ನೇ ಎಪ್ರಿಲಿನ ವರೆಗೂ ಭಾರತದ ರಾಜಕೀಯದ ಗಣ್ಯವಿಷಯಗಳೆಂದರೆ ಪ್ರಾಯಶಃ ಎಂಡೆ'—ಚುನಾವಣೆ ಮತ್ತು ಸುಭಾಸ್ ಸೈನಿಕರ ವಿಚಾರಣೆ ಇದೇ ದಶಂಬರ್ ಮೊದಲವಾರದಲ್ಲಿ ಕೇಂದ್ರ ಎಸೆಂಬ್ಲಿ ಚುನಾವಣೆಗಳು ಪ್ರತಿಯೊಂದು ಪ್ರಾಂತ್ಯದಲ್ಲೂ ಮುಗಿದು ಫಲಿತಾಂಶ ತಿಳಿಯಲಿದೆ. ಈಗಲೇ ಸಿದ್ಧತೆಗಾರಂಭವಾಗಿರುವ ಪ್ರಾವಿನ್ಸಿಯಲ್ ಎಸೆಂಬ್ಲಿ ಚುನಾವಣೆಗಳು ಆಗ ಮುಂಭಾಗಕ್ಕೆ ಬರಲಿವೆ; 1946ನೇ ಇಸವಿಯ ಆರಂಭದೊಂದಿಗೆ ಪ್ರಾಂತಿಕ ಎಸೆಂಬ್ಲಿ ಚುನಾವಣೆಗಳ ರಭಸವೇರಿ, ಆ ಮೇಲಿನ ಕೆಲವು ಮಾಸಗಳು ಸಂದುದೇ ತಿಳಿಯದಷ್ಟು ಜನತೋತ್ಸಾಹನೇರುವದು ಸಂಭವನೀಯ. ಆದ್ದರಿಂದ ಈ ರಂಗಸಜ್ಜಿಕೆಯಲ್ಲಿರುವ ವಿವಿಧ ಪಕ್ಷಗಳ ಮೇಲೊಮ್ಮೆ ನೋಟ ಬೀರುವದು ಆವಶ್ಯಕ.

ಕಾಂಗ್ರೆಸ್

ಸಂಕಾರವನ್ನು ಸೋಲಿಸಬೇಕೆಂಬ ಏಕ ಮಾತ್ರ ಗುರಿಯಿಂದ ರಂಗಕ್ಕೆಳಿದಿರುವ ಪಕ್ಷ ಇದೊಂದೇ. ರಾಷ್ಟ್ರದ ಸ್ವತಂತ್ರ್ಯ ಸಾಧನೆಯೇ ತನ್ನ ಉದ್ದೇಶ ಎಂದು ಹೇಳುವ ಯೋಗ್ಯತೆಯಿರುವದು ಕಾಂಗ್ರೆಸಿಗೆ ಮಾತ್ರ. ಮಹಾ ರಥವೆಳೆಯುವ ಆನೆಗೆ, ಮಾರ್ಗದ ಗಾಡಿಯೆಳೆಯುವ ದುಸ್ಥಿತಿಯೊದಗಿದಂತೆ, ಸ್ವಾತಂತ್ರ್ಯಕ್ಕಿ ಹೋರಾಟದಲ್ಲಿ ರಬೇಕಾದ ತನ್ನ ಘನತೆಗೆ ಕೀಳೆನಿಸಿದ ಚುನಾವಣಾ ಹೋರಾಟಕ್ಕಿಳಿಯುವ ಅಸಹ್ಯ ಧರ್ಮವನ್ನನುಸರಿಸಿರುವ ಪಕ್ಷವೆಂದರೂ ಕಾಂಗ್ರೆಸೇ. ಯಾವ ಪಕ್ಷಕ್ಕೂ ರಾಷ್ಟ್ರ ಸ್ವಾತಂತ್ರ್ಯ ಬೇಡವಾಗಿಲ್ಲ; ಆದರೆ ಕಾಂಗ್ರೆಸಿಗೆ ಅದೊಂದೇ ಬೇಕಾಗಿದೆ—ವ್ಯತ್ಯಾಸವಿಸ್ಸ. ಬ್ರಿಟಿಷರೊಡನೆ ಲೀಗ್ 'ಭಾರತವನ್ನು ತುಂಡರಿಸುವ ಕೆಲಸ ನಿಮಗಿದೆ ಎನ್ನುತ್ತಿದೆ. ಮಹಾ ಸಭೆ 'ಭಾರತವನ್ನು ತೊಡರಿಸಬೇಡಿ' ಎನ್ನುತ್ತಿದೆ. ಅಂತೂ ಇವೆರಡೂ, ಬ್ರಿಟಿಷರ ಕೆಲಸವನ್ನು ಬೇಕು ಅಥವಾ ಬೇಡ ಎನ್ನುತ್ತಿವೆ. ಆದರೆ 'ಭಾರತದಲ್ಲಿ ನಿಮಗೆ ಕೆಲಸವೇ ಇಲ್ಲ' ಎಂಬುದೇ ಬ್ರಿಟಿಷರಿಗೆ ಕಾಂಗ್ರೆಸಿನ ಕಟ್ಟಪ್ಪಣ್ಣೆ. ಮಿಕ್ಕೆಲ್ಲಾ ಪಕ್ಷಗಳ ಮೂಲಧ್ಯೇಯವೇ ನಿಯೊಂದಿಗೆ ದೇಶ ಸ್ವಾತಂತ್ರ್ಯದ ಪ್ರಶ್ನೆಯು ಪುರವಣಿಯಾಗಿ ಸೇರಿಕೊಂಡಿದೆ. ಆದರೆ ಕಾಂಗ್ರೆಸಿಗೆ ಇದೇ ಸರ್ವಸ್ವವಾಗಿದೆ.

ಮುಸ್ಲಿಂ ಲೀಗ್

ಮುಸಲ್ಮಾನರಿಗೆ ಪ್ರತ್ಯೇಕ ಮತಪೆಟ್ಟಿಗೆ ತಾರವಿರುವದರಿಂದ ಆ ಕಡೆಯ ನೆಂಬರ್ ನೇ ಮುಸ್ಲಿಂ ಪಕ್ಷವೆಂದರೆ ನಿಜಕ್ಕೂ ಲೀಗ್. ಹಿಂದೀ ಜನತೆಯ ಗಣ್ಯ ಭಾಗವೆಂದರೆ—ರಾಜಕೀಯಾಭಿರುಚಿ ಮತ್ತು ದೇಶ ಪ್ರೇಮವು ಒಟ್ಟಿಗೆ ಸೇ 25 ಇರುವಾಗ ಧರ್ಮಾಂಧತೆಯು ಸೇ. 75ರಷ್ಟಿರುವ ಮುಸ್ಲೀಂ ಸಮಾಜದ—ಅಪ್ರಾಗತಿಕ ಮನೋವೈಜ್ಞಾನಿಯನ್ನು ಕಾಲ, ನ್ಯಾಯ ಮತ್ತು ವ್ಯವಹಾರ ನಿಯಮಗಳನ್ನು ವಿರೋಧಿಸಿಯೂ ಅನುಮೋದಿಸುತ್ತಿರುವದರಲ್ಲೇ ಅಲ್ಲ; ಆದನ್ನು ಬೆಳೆಯಿಸುತ್ತಿರುವ ಕೀರ್ತಿ ಮುಸ್ಲಿಂ ಲೀಗಿಗೆ ಸಲ್ಲಬೇಕು. ಪಾಕಿಸ್ತಾನಕ್ಕೆ ಸರ್ವ ಮುಸಲ್ಮಾನರ ಬೆಂಬಲವಿದೆ ಎಂಬುದನ್ನು ತೋರಿಸಬೇಕೆಂಬುದೇ ಚುನಾವಣೆಯಲ್ಲಿ ಲೀಗಿನ ಗುರಿ ಪ್ರಥಮತಃ ಪಾಕಿಸ್ತಾನವನ್ನು ಒಪ್ಪಿಕೊಳ್ಳಬೇಕು; ಸ್ವಾತಂತ್ರ್ಯವು ಅದರ ಜೊತ್ತಿಗೆ ಹಿಡಿದು ಬರಬೇಕು. ಲೀಗಿನ ಈ ಘೋರಣೆಯೇ ಸದ್ಯಕ್ಕೆ ಬ್ರಿಟಿಷರಿಗೆ ಮಹದಾಶ್ರಯ. ಯುಕ್ತಿಯೊಂದೇ ಜೀವನಾಳವಾಗಿರುವ ಬ್ರಿಟಿಷ್ ಸಾಮ್ರಾಜ್ಯ ನೀತಿಯು ಹೋದಲ್ಲಿ ತನ್ನ ಆಂತ್ಯಕಾಲಕ್ಕೊದಗುವ ಆಸದ್ಧನೆಯಾಗಿ ವಿಷ ಬೀಜವನ್ನು ಬಿತ್ತಿ ಬೆಳೆಯಿಸುವ ಸಂಪ್ರದಾಯವಿದೆ. ಹಿಂದುಸ್ಥಾನದಲ್ಲಿ ಆ ರೀತಿ ಕೂಡಿಸಿಟ್ಟವೆಂದರೆ ಈ ಪಾಕಿಸ್ತಾನ್ ಮನೋವೈಕೃತ್ಯವನ್ನೇ. 'ಹಿಂದುಸ್ಥಾನ'ನಿರುವ ವರೆಗೆ ಬ್ರಿಟಿಷ್ ಅಳ್ವಿಕೆಗವಕಾಶವಿದೆ—ಬ್ರಿಟಿಷರು ಹೊರಡುವ ಕೊತ್ತಿಗೆ 'ಹಿಂದುಸ್ಥಾನ'ವಿಲ್ಲ—ಎಂಬಂತಹ ರೋಕಾಂತ್ಯವು ಲೀಗಿನ ಘೋರಣೆಯ ಬೆಳಕಿನಲ್ಲಿ ಹೊಳೆಯು ಹತ್ತಿದೆ. ಹೇಗಿದ್ದರೂ ಸದ್ಯ ಚುನಾವಣಾ ರಂಗದಲ್ಲಿ 'ಸಾಧಿಸುವ' ಘೋರಣೆಯಿಟ್ಟು ಕೊಂಡಿರುವ ಪಕ್ಷಗಳೆಂದರೆ ಎರಡೇ—ಕಾಂಗ್ರೆಸ್ ಮತ್ತು ಲೀಗ್. ಮಿಕ್ಕವೆಲ್ಲಾ 'ವಿರೋಧಿಸುವ ಪಕ್ಷಗಳು, ಕೆಲವು ಕಾಂಗ್ರೆಸನ್ನು; ಬೇರೆ ಕೆಲವು ಲೀಗನ್ನು.

ಹಿಂದೂ ಮಹಾ ಸಭಾ

ಸದ್ಯದ ಚುನಾವಣೆಯಲ್ಲಿ ಕಾಂಗ್ರೆಸನ್ನು ವಿರೋಧಿಸುತ್ತಿರುವ ಒಂದು ಪಕ್ಷದ ಹೆಸರೆತ್ತಬೇಕಾದರೆ ಅದು ಹಿಂದೂ ಮಹಾಸಭೆ ಆದರೆ, ಕಾಂಗ್ರೆಸಿನ 'ಇದಿರುವಾದಿ' ಎನ್ನಲಾಗುವಷ್ಟು ಉಮೇದ್ವಾರಿಗಳನ್ನು ನಿಲ್ಲಿಸಲು ಮಹಾ ಸಭೆಗಾಗಲಿಲ್ಲ; ಒಬ್ಬೊಬ್ಬನಾಮಪತ್ರ ದಾಖಲ್ಯಾಡಿದ ಹೆಚ್ಚಿನ ಸಭಾಹುರಿಯಾಳುಗಳೂ ಕಾಂಗ್ರೆಸನ್ನು ಆತೀವ್ರವಿರೋಧಿಸುವ ಜಾಣ್ಮೆ ತೋರಿಸುತ್ತಾ ಹಿಂದೆಗೆದಿದ್ದಾರೆ. ಮಹಾ ಸಭೆಯ ಅಧ್ಯಕ್ಷ ಡಾ. ಮುಖರ್ಜಿ, ಭಾಯಿ ಪರಮಾನಂದ ನೊದಲಾದ ಕೆಲವು ಪ್ರಮುಖರು ಮಾತ್ರ ಇನ್ನೂ ಗಟ್ಟಿ ನಿಂತಿದ್ದಾರೆ. ಪಾಕಿಸ್ತಾನಕ್ಕೆ ಅವಳಲಾಗ್ರ ವಿರೋಧವೇ ಮಹಾಸಭೆಯ ಮುಖ್ಯ ಗುರಿ; ಹಿಂದುಗಳ ಹಿತಕ್ಕೆ ಹಾನಿ ಬೀಳದಂತೆ ನೋಡುವದೇ ಅವರ ಘೋರಣೆ. ವಿನೋದದ ವಿಷಯವೆಂದರೆ, ಪೂರ್ವ-ಪಶ್ಚಿಮದಿಕ್ಕು ಹಿಡಿದಿರುವ ಲೀಗ್-ಮಹಾಸಭೆಗಳು ಪರಸ್ಪರ ಒಂದನ್ನೊಂದು ಟೀಕಿಸಿಕೊಳ್ಳುವ ದುರ್ಬುದ್ಧಿ ಸಂಪಾದಿಸಿಲ್ಲ. ಆ ಕಡೆಯಿಂದ ಲೀಗಿನ್ನ, ಈ ಕಡೆಯಿಂದ ಮಹಾ ಸಭೆಯ ಧಾಳಿ ಕಾಂಗ್ರೆಸಿನ ಮೇಲೆಯೇ! ಬೊಂಬಾಯಿಯ ಜಾತೀಯ ಗಲಭೆಯಲ್ಲಿ ಇಕ್ಕಡೆಯಿಂದೇರಿ ಬಂದ ಹಿಂದೂ-ಮುಸಲ್ಮಾನ್ ಪುಂಡರು ಮಧ್ಯ ನಿಂತ ಪೋಲಿಸರ ಮೇಲೆ ಇಬ್ಬರಿಂದಲೂ ಕಲ್ಲೆಸೆದ ಚಿತ್ರದ ವೇಕವ್ಯಾಪೀ ರಾಜಕೀಯ ರೂಸದಂತೆ ಕಾಣುತ್ತಿದೆ ಈ ದೃಶ್ಯ. ಸಭಾ ಸ್ಪರ್ಧಾರಕರು ಪುತದಾರರ ಮುಂದಿಡುತ್ತಿರುವದು ಕಾಂಗ್ರೆಸ್ ಮಾಡಿರುವ ಉಪಕಾರಗಳನ್ನು ಮಾತ್ರ-ತಾವು ಮಾಡಿರುವ ಉಪಕಾರವನ್ನು ಹೇಳಲಿಕ್ಕಿಲ್ಲವಾದ್ದರಿಂದ! ಪಾಕಿಸ್ತಾನವನ್ನು ಹಿಂದೂ ಮಹಾ ಸಭೆ ಕಣ್ಣು ಕೆರಳಿಸಿ ವಿರೋಧಿಸುತ್ತಿದೆಯಾದರೆ ಕಾಂಗ್ರೆಸ್ ಕಾರಣಕೊಟ್ಟು ಪ್ರತಿಭಟಿಸುತ್ತಿದೆ ಇಷ್ಟಕ್ಕಾಗಿ ಮಹಾ ಸಭೆ ಇಂತಹ ರಂಪಾಟವೆಬ್ಬಿಸುತ್ತಿದೆಯೇಕೋ ಅರ್ಥವಾಗುವದಿಲ್ಲ!

ಅ! ಭಾ. ಮುಸ್ಲಿಂ ಪಾರ್ಲಿಮೆಂಟರೀ ಬೋರ್ಡು

ಇದು ರಾಷ್ಟ್ರೀಯ ಮುಸಲ್ಮಾನ್ ಪಕ್ಷಗಳ ಸಂಯುಕ್ತ ಪಕ್ಷ. ಲೀಗನ್ನಿದಿರಿಸುವದಕ್ಕಾಗಿ ಆಹ್ರಾರ್, ಮಜ್ಲಿಸ್, ಜಮಾಯತ್-ಉಲ್-ಉಲೇಮಾ ಮತ್ತಿತರ ರಾಷ್ಟ್ರೀಯ ಮುಸ್ಲಿಂ ಪಕ್ಷಗಳೊಂದಾಗಿ ರೂಪಗೊಂಡಿರುವ ಬೋರ್ಡಿದು. ಹೆಚ್ಚಿನ ಮುಸ್ಲಿಂ ಸ್ಥಾನಗಳಲ್ಲಿ ಲೀಗಿಗೆ ಪ್ರತಿಸ್ಪರ್ಧಿಗಳು ಇವರೇ. ಕೆಲವು ಸ್ಥಾನಗಳಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು,ಮತ್ತೆ ಕೆಲವೆಡೆ ಯಾವ ಪಕ್ಷಕ್ಕೂ ಸೇರದ ಸ್ವತಂತ್ರರು ಇದ್ದಾರೆ. ಈ ಪಕ್ಷ ಸೂಚಿಸಿರುವ ಸ್ಥಾನಗಳನ್ನು ಸಂವಾದಿಸಿ ಕೊಂಡರೆ, 'ನಾನೇ ಮುಸಲ್ಮಾನರ ಏಕ ಮಾತ್ರ ಪ್ರತಿನಿಧಿಯನ್ನು ವೆ ಲೀಗಿನ ಬಡಾಯಿ ಭಂಡಾಗುತ್ತದೆ. ಸರ್ವ ಸಾಧಾರಣ ಕಾಂಗ್ರೆಸಿನದೇ ಧ್ಯೇಯ ಈ ಪಕ್ಷಕ್ಕೂ.

ಕಮ್ಯೂನಿಸ್ಟ್ ಪಕ್ಷ

ಮುಸ್ಲಿಂ ಸ್ಥಾನಗಳಲ್ಲಿ ಲೀಗನ್ನು, ಮುಸಲ್ಮಾನರ ಸ್ಥಾನಗಳಲ್ಲಿ ಕಾಂಗ್ರೆಸನ್ನು ಸಮರ್ಥಿಸಿ, ಸಾಧ್ಯವಿದ್ದಲ್ಲ ಸ್ವಂತ ಉಮೇದ್ವಾರಿಗಳನ್ನು (ಅವಂ ಸಂಖ್ಯೆ ಬೆಬೆಂಳಕೆಯಷ್ಟು) ಮುಂದೊಡ್ಡಿರುವ ಪಕ್ಷ. ಇಂತಹ ಪಂಚಕಜ್ಜಾಯದ ಹೊರತು ಬೇರೆ ಚುನಾವಣಾ ಘೋರಣೆ ಇದಕ್ಕಿಲ್ಲ. ಆದರೆ ಪ್ರಾಂತಿಕ ಚುನಾವಣೆಗಳಲ್ಲಿ ಕೆಲವು ಹೆಚ್ಚಿನ ಸ್ಥಾನಗಳಿಗೆ ಕಮ್ಯೂನಿಸ್ಟ್ ಉಮೇದ್ವಾರಿಗಳಿರಬಹುದು.

ಕಾಖ್ತಾರ್ ಪಕ್ಷ

ಇವರನ್ನು ಮುಸಲ್ಮಾನ್ ಫ್ಲೇಕ್ಸರ ಕಮ್ಯೂನಿಸ್ಟರೆನ್ನಬಹುದು. ಕಾಂಗ್ರೆಸ್-ಲೀಗ್ ಒಟ್ಟುಗೆಬೇಕು, ದಳಿತ ವರ್ಗದ ಉದ್ಧಾರವಾಗಬೇಕು, ಮುಂತಾದ ಅಕಾಲವಾಣಿಗಳನ್ನಾಡುತ್ತಿದೆ. ಬಹುಶಃ ಯಾವ ಪಕ್ಷಕ್ಕೂ ಇದರ ಬೆಂಬಲವಿಲ್ಲ; ಈ ಪಕ್ಷದ ಹುರಿಯಾಳುಗಳಿಗೆ ಎಲ್ಲಿಯೂ ಬೆಂಬಲವಿಲ್ಲ. ಆದರೆ ಗಡಿನಾಡಿನ ಒಂದು ಸ್ಥಾನಕ್ಕೆ ಖಾನ್ ಅಬುಲ್ ಗಫರ್ ಖಾನರ ಪುತ್ರ ನಿಗಿದಿರಾಗಿ ತನ್ನ ಸ್ವಂತ ಉಮೇದ್ವಾರಿಯನ್ನು ನಿಲ್ಲಿಸಿ ಆಶ್ಚರ್ಯ ನಿರ್ಮಿಸಿದೆ.

ಇನ್ನು ಕಾಂ. ರೋಯಿಗಳ 'ಡೆನೊಕ್ರೆಟಿಕ್' ಪಕ್ಷ'ದಂತಹ ಎಲ್ಲರನ್ನೂ ಟೀಕಿಸುವ —ಆದರೆ ಎಲ್ಲಿಯೂ ಸ್ಥಾನ ದೊರೆಯದವರಿದ್ದಾರೆ. ಮದ್ರಾಸಿನ ಜಸ್ಟೀಸ್ ಪಕ್ಷ, ಪಂಜಾಬಿನ 'ಅಕಾಲೀ ಪಕ್ಷ'ದಂತಹ ಸ್ಥಳೀಯ ಹಾಗೂ ಜಾತಿವಾರು ಪಕ್ಷಗಳೂ ಚುನಾವಣಾ ಹೋರಾಟದಲ್ಲಿವೆ

(ಹಿಂದಿನ ಪುಟದಿಂದ)

ದ್ರ ಎಸೆಂಬ್ಲಿಗೆ ತಾಗಲೇ ಇಲ್ಲ.ಆದರೆ ಮಕಾಧಿಕಾರವಿರುವದು ನೂರರಲ್ಲೊಬ್ಬನಿಗೆಮಾತ್ರ ಇಡೀ ದೇಶದಿಂದ ಚುನಾಯಿಸಲ್ಪಡಬೇಕಾದ ಸ್ಥಾನಗಳಿರುವದು 104 ಮಾತ್ರ. ದಕ್ಷಿಣ ಕನ್ನಡದಂತಹ ದೊಡ್ಡ ಜಿಲ್ಲೆಯಲ್ಲಿ ಕೇಂದ್ರ ಎಸೆಂಬ್ಲಿ ಮತದಾರರು ಸುಮಾರು 11ಕ್ಕೆ ಸಾವಿರದಷ್ಟಿದ್ದಾರೆ. ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳಿರುವ ಕುಂದಾಪುರ ವಿಧಾನಸಭೆಯಲ್ಲಿರುವ ಒಟ್ಟು ಮತದಾರರು 39937. ಆದ್ದರಿಂದ ಸಹಜವಾಗಿ ಜನಸಾಮಾನ್ಯರ ಸಂಪರ್ಕವದಕ್ಕಿಲ್ಲ. ಆದರೂ 'ಕೇವಲ ಸ್ವಾತಂತ್ರ್ಯ ಬಯಕೆಯ ಪ್ರದರ್ಶನಕ್ಕಾಗಿ ಅಪೂರ್ಣ,ಅರ್ಥ ಶೂನ್ಯ ಮತ್ತು ನಿರರ್ಥಕನಾದ ಈ ಚುನಾವಣೆಯಲ್ಲಿ ನಾವು ಭಾಗವಹಿಸುವುದೇಕು' ಎಂಬ ಕಾಂಗ್ರೆಸ್ ನಿರ್ಧಾರವನ್ನು ಪ್ರತಿಯೊಬ್ಬನೂ ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬೇಕು.

CANARA BANK LIMITED

(Incorporated in British India. liability of Members Limited.)

(ESTD. 1906 ಸ್ಥಾಪನೆ.)

ANNOUNCEMENT.

We have the pleasure to announce that Branches of the Bank have been opened at

SHOLAPUR, SHIMOGA, SECUNDERABAD and KALYAN (Bombay).

Our MADRAS Office has been opened on

12th November 1945 at 317, Lingi Chetty Street, MADRAS.

To all whom it may concern:—

The aided Elementary School at Salikere near Mabukal referred to in the advertisement in Column 1 at page 8 of the Navayuga dated 1-11-45 has no connection at all with the Milagris Jacobite Syrian Church of Brahmavar.

(Sd) **Rev. Fr. S. C. Luis,**
Vicar, Milagris Jacobite Syrian Church,
BRAHMAVAR.

Udipi, 20-11-45.

Hindu Higher Elementary School,
KALLIANPUR.

WANTED

a Secondary Grade Trained Male or Female for a permanent vacancy in the School.

Apply to—
The Manager,
Hindu Highr Elmntary School
KALLIANPUR.

ನವಯುಗದಲ್ಲೀ
ನಿಮ್ಮ ಜಾಹೀರಾತುಗಳನ್ನು ಕೊಡಿರಿ

The Canara Banking Corporation Limited.

(Incorporated in British India with limited Liability)

Estd 1906

Head Office **UDIPI**, South Kanara

ANNOUNCEMENT

A branch of the bank has been opened at JEW TOWN, MATTANCHERRY, COCHIN, on 7-11-1945.

ಉಡುಪಿ, ಗುರುವಾರ ೨೨-೧೧-'೪೫

ಕಾಂಗ್ರೆಸ್ ತಿಳಿದಿರಲಿ.

ಅನಿರೀಕ್ಷಿತ ಅಧಿಕ ಸಂಖ್ಯೆಯಲ್ಲಿ ದೇಶದ ಎಲ್ಲಾ ಭಾಗಗಳಿಂದಲೂ ಕೇಂದ್ರ ಎಸೆಂಬ್ಲಿಗೆ ಕಾಂಗ್ರೆಸ್ ಹರಿಯಾಳುಗಳು ಆಯಿರೋಧವಾಗಿ ಆರಿಸಿ ಬಂದಿರ್ಯಾಗ ಜನಾನವಣೆಯಿರುವ ಸಿಕ್ಕ ಕಡೆಗಳಲ್ಲೆಯೂ ಕಾಂಗ್ರೆಸೇ ಗೆದ್ದು ಬರುವದು ನಿಸ್ಸಂದೇಹ. ಕಾಂಗ್ರೆಸಿನ ವಿರೋಧಿ ಉಮೇದ್ವಾರಿಗಳಲ್ಲಿ ಹೆಚ್ಚಿನವರಿಗೆ ಎಸೆಂಬ್ಲಿ ನ್ಯಾಸಂವಾಡಿ ಸುವ ಆಸಯಿಂದ ಹೋರಾಡುತ್ತಿಲ್ಲಿ-ತಮ್ಮ ಪ್ರಿಸ್ಟೀಜ್ ಹಣ ಮತ್ತು ಆ ಮೂಲಕ ತಮ್ಮದೊಂದು ಮಾನ ಉಳಿಸಿಕೊಳ್ಳುವ ಒದ್ದಾಟದಲ್ಲಿದ್ದಾರೆ ಸ್ಪಷ್ಟ ದೇಶದ ಆದ್ಯಂತ ಎದ್ದಿರುವ ಕಾಂಗ್ರೆಸ್ ಜಾವನಾತರೆಗಳು ತಮ್ಮೊಡನೆ ಐಕ್ಯವಾಗದ ಕಸಕಡ್ಡಿಗಳನ್ನು ಅಪ್ಪಳಿಸಿ ಬಿಡುವ ರೀತಿ ಅಂತಹದು! ಇದು ಆನಂದದ ಸಂಗತಿ, ಅಭಿಮಾನದ ವಿಷಯ ಆದರೆ ಎಂತಹ ಹೆಗ್ಗಳಿಕೆಯ ಸಂದರ್ಭದಲ್ಲೂ ವಸ್ತು ಸ್ಥಿತಿಯನ್ನು ಮರೆಯ ಬಾರದು ಈ ಚುನಾವಣೆಯ 'ಅಪೂರ್ಣ, ಸ್ವರ್ಣಾ ಆಗಣ್ಯ' ಎಂಬ ಕ್ರಿಸ ದೀ ಮಂತ್ರವು ಇಡೀ ನಮಸಿನಲ್ಲಿರಬೇಕು ಆದರಲ್ಲೂ ಈಗ ನಡೆಯುತ್ತಿರುವದು ಜನತೆಯ ನೂರಲ್ಲೊಬ್ಬನ ಸ್ಪಾತಸಿಧ್ಯ ಮಾತ್ರವಿರುವ ಕೇಂದ್ರ ಎಸೆಂಬ್ಲಿ ಚುನಾವಣೆ ಆದರೆ ಪ್ರತಿಯೊಂದು ಸ್ಥಾನವನ್ನು ಕಾಂಗ್ರೆಸ್ ಆಕ್ರಮಿಸಿ ಕೊಂಡರೂ ಪ್ರಜಾಪ್ರಭುತ್ವದ ನೂರರಲ್ಲೊಂದಂಶ-ಶತಮಾನದ ಕ್ಷಿಂದು ಸಂವತ್ಸರ-ಮಾತ್ರ ಆದಕ್ಕೆ ದೂರಾಂತಾಗುವದು ಈ ಶಕ್ತಿಯ ಒಂ ನಂಶವು ಕೇವಲ ಆಸ್ಪಾಸ್ತಿಗಳಿರುವನು ತ್ರೈ ಇಂಥವರು ಬಹು ಮತದಿಂದ ಕಾಂ ಗ್ರೆಸಿನ ಸ್ಪಾತಿನಿಧ್ಯವನ್ನೊಪ್ಪಿಕೊಳ್ಳಬೇಕಾ ದರೆ ಅದಕ್ಕೆ ಎರಡು ಕಾರಣಗಳಿರಬೇಕು ಮಧ್ಯಮವರ್ಗ ಮತ್ತು ಮೇಲು ವರ್ಗದವರಿಗೂ ಸ್ವಾತಂತ್ರ್ಯಬೇಕಾಗಿದೆ ಎಂಬುದು ಸ್ಪಷ್ಟ ಮತ್ತು ಹಾಗೂ ನಿಜವಾದ ಕಾರಣ ಆದರೂ ಕಾಂಗ್ರೆಸು ಬಡವರಿಂದಲೂ ಜನರ ಪ್ರತಿ ನಿಧಿ ಸಂಸ್ಥೆಯೆಂದು ಈ ಕಾರಣದಿಂದಲೇ ಆರೋಪಿಸಬಹುದು. ಶ್ರೀಮಂತರಿಗೂ ಸ್ವಾತಂತ್ರ್ಯ ಬೇಕಾಗಿದೆ ಎಂಬ ಮೊದಲನೇ ಕಾರಣವು ಆನಂದದಾಯಕವಿದ್ದರೂ ಆಗಣ್ಯ, ಎರಡನೆಯದಾದ ಕಾಂಗ್ರೆಸ್ ಶ್ರೀಮಂತರ ಪ್ರತಿನಿಧಿಯೆಂಬ ಆರೋಪದ ಲ್ಲಿ ಎಳ್ಳಷ್ಟು ಸತ್ಯಾಂಶವಿದ್ದರೂ ಅದು ಮಾತ್ರ ನಿಜಕ್ಕೂ ಅಪಾಯಕರ ಆದ್ದರಿಂದ ಇಂತಹ ದೂರು ತನಗೆ ತಟ್ಟದಂತೆ ಕಾಂಗ್ರೆಸು ಮುಂಜಾಗ್ರತೆ ವಹಿಸಬೇಕಾದುದು ಅತ್ಯಗತ್ಯ ಈ ಬಾರಿ ಆರೋಪಣೆಗಳಿಗವಕಾಶವೂ ಇದೆ. ೧೯೩೭ರ ಮಹಾ ಚುನಾವಣೆಯಲ್ಲಿ ಪ್ರಾಂತಿಕ ಎಸೆಂಬ್ಲಿಗಳಲ್ಲಿ ಕಾಂಗ್ರೆಸಿಗೆ ದೊರೆತ ಸ್ಥಾನಗಳ ದಾಮಾಶಯದಲ್ಲೇ ಕೇಂದ್ರ ಎಸೆಂಬ್ಲಿ ಸ್ಥಾನಗಳು ದೂರೆತಿರಲಿಲ್ಲ ಅಂದರೆ ಸಾಮಾನ್ಯ ಜನರು ಕಾಂಗ್ರೆಸು ತಮ್ಮದೆಂದೊಪ್ಪಿಕೊಂಡಂತೆ ಶ್ರೀಮಂತರೊಪ್ಪಿಗೆ ಕೂಡಲಿಲ್ಲ ಆ ಕಾಲದಲ್ಲಿ ಕಾಂಗ್ರೆಸ್ ಅಳ್ವಿಕೆಯಿಂದ ತಮ್ಮನ್ನು ಪಾರುಮಾಡಬೇಕೆಂದು ಜವಿೀ ನ್ದಿರೇ ಮಾದಲಾದ ಹಳೇ ಹದ್ದಗಳು ವೈಸರಾಯ್ ಮತ್ತು ಬ್ರಿಟಿಷ್ ಸರಕಾರದೊಡನೆ ಮೊರೆಯಿಟ್ಟುದನ್ನು ನೆನಪಾಗುತ್ತಿದೆ ಈ ಬಾರಿ ಅದೇಕೋ ಪರಿಸ್ಥಿತಿ ಬದಲಾಗಿದೆ. ಮುಸ್ಲಿಂ ಲೀಗ್ ಸಂಘಗಳೂ, ಸಾಹುಕಾರ್ ಸಂಸ್ಥೆಗಳೂ ಕಾಂಗ್ರೆಸಿಗೆ ಬೆಂಬಲ ಕೊಟ್ಟಿವೆ. ತಮ್ಮ ಪರಂಪರಾಗತ ಹಕ್ಕು ಬಾಧ್ಯತೆಗಳಿಗೆ!—ಜನಸಾಮಾನ್ಯರ ಕೋಷಣೆಗೆ—ಕಾಂಗ್ರೆಸ್ ಅಳ್ವಿಕೆಯು ಆತಂಕವಾಗಬಾರದೆಂದೇ ತಮಗೆ ದೂರೆತ ಅನುಭವ ಮತ್ತು ಅರ್ಹತೆಗಳಿಂದ ಶ್ರೀಮಂತವರ್ಗಕ್ಕೆ ಸಮಾಧಾನವಾಗಿ ಅವರು ಕಾಂಗ್ರೆಸಿನೊಡನೆ ಸರಿಕೊಂಡಿರಬಹುದೆ! ಕವ್ಯೂನಿಸ್ಟರಂತಹ ಕ್ರಾಂತಿವಾದಿಗಳ ಕೈಯಿಂದ ತಪ್ಪಿಸಿಕೊಳ್ಳುವದಕ್ಕಾಗಿಯೇ ಕಾಂಗ್ರೆಸಿನ ಆಶ್ರಯ ಪಡೆದಿಗಬಹುದು ಇದು ನಿಜವಿದ್ದು—ಕಾಂಗ್ರೆಸಿನಲ್ಲಿ ಇಂತಹ ದುಸ್ಪ್ರೇಷ್ಠಗಾಸ್ಪದವಿರಬಾರದು., ಜನತೆಯ ಕೇಟಗೆಳಿಗೆ ಅದು ಆಶ್ರಯಕೊಡಬಾರದು ಕಾಂಗ್ರೆಸಿನ ಎಸೆಂಬ್ಲಿ ವಿಜಯವು ಸ್ವತ್ಯ ವೆಂದು ಹಿಗ್ಗುವಾಗಲೇ ಆದರೊಳಗೆ ಸೇರಿ ಹೋಗಿರುವ ಸಮಾಜ ಕಂಟಕ ಶ್ರೀಮಂತರನ್ನು ಬಿಡಿಸಿಯೇ ಆದುವಿ ಹಿಡಿಯಬೇಕು ಹೋತು ಆಧರಿಸಿ ನಿಷ್ಪಿಬಾರದು ಎಂದು ಸ್ಪಷ್ಟವಾಗಿ ಎಚ್ಚರಿಸಬೇಕಾಗಿದೆ. ಜನ ಸಾಮಾನ್ಯರ ಸಂಸ್ಥೆಯಾದ ಕಾಂಗ್ರೆಸಿನ ಪ್ರಭಾವಕ್ಕೆ ಈ ವರ್ಗವೊಳಗಾಗಬೇಕಲ್ಲದ ಶ್ರೀಮಂತರ ವರ್ಚಸ್ಸಿನ ಛಾಯೆ ಕೂಡಾ ಕಾಂಗ್ರೆಸಿನ ಮೇಲೆ ಬೀಳಬಾರದೆಂಬ ಮುಂಜಾಗ್ರತೆಯಲ್ಲಿರದಿದ್ದರೆ ಕಾಂಗ್ರೆಸ್ ಫೇಬಿಸಿಸ್ಟ್ ಸಂಸ್ಥೆ'ಯನ್ನಿಸಿ, ಎಲ್ಲಪೂ ಅಡಿ ಮೇಲಾಗಬಹುದು—ಇದೊಂದು ವಿಷಯ ಕಾಂಗ್ರೆಸಿಗರ ನೆನಸಿನಲ್ಲಿರಲಿ. ಜನತೋದ್ಧಾರದ ಗುರಿಯಿಟ್ಟು ಕೊಂಡೇ ಆರಂಭವಾಗಿದ್ದ ಜರ್ಮನಿಯ ನಾಜೀ, ಇಟೆಲಿಯ ಫೇಸಿಸ್ಟ್ ಪಕ್ಷಗಳು ಬರಬರುತ್ತಾ ಶ್ರೀಮಂತ ವರ್ಗದ ಪ್ರಭುವಕ್ಕೊಳಗಾಗಿ ಕೊನೆಗೇ ತಹ ಗತಿಹೊಂದಿದವೆಂಬ ಸ್ಮರಣೆಯಿರಲಿ.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಾಮಾನ್ಯ—ತಾ ೪ರಲ್ಲಿ ಚಿಯರ್‌ಮೆನ್ ಪೈ ಸ್ ಚಿಯರ್‌ಮೆನ್ ಇಬ್ಬರ ಗೈರು ಹಾಜರಿಯಲ್ಲಿ ಎಜ್ಯೂಕೇಟ್ ಶ್ರೀ ನರಸಿಂಹ ವಿರಲು ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು ಪ್ಯಾಕರಾದಿಂದ ನಗರ ಕ್ಷೇತ್ರಕ್ಕೆ ವಿದ್ಯುತ್ತನ್ನು ಒದಗಿಸಲು ಸಾಧ್ಯವಿಲ್ಲವೆಂಬುವನ್ನು ಸೂಚಿಸಿದ ಸರಕಾರೀ ಆರ್ಡರನ್ನು ರಿಕಾರ್ಡು ಮಾಡಲಾಯಿತು. ಆವರೆ ಸರ್ವಾರ್ಥ ಹಾಗೂ ಕಣ್ಣು ಕುಕ್ಕದಂತಹ ಸುಭ್ರ ಬಳಕು ಸಿಕ್ಕುವ ಹಾಗೂ ದಿನಾಲು ಇಪ್ಪತ್ತನಾಲ್ಕು ತಾಸಿಂಗಳ ತನಕ ಸ್ಥಾ ವಿದ್ಯುತ್‌ಶಕ್ತಿ ಮೊರೆಸುವಂತೆ ಇಲೆಕ್ಟ್ರಿಕ್ ಕಂಪೆನಿಗೆ ಸೂಚಿಸಬೇಕಾಗಿ ಸರಕಾರಕ್ಕೆ ವಿನಂತಿಸಲಾಯಿತು ತರಿಗೆಯನ್ನು ಸೇಕಡಾ 1ರಂತೆ ಜಾಸ್ತಿ ಮಾಡಬೇಕಾಗಿ ಸೂಚಿಸಿದ ಆ ಫೀಸು ನೋಟಿಸು, ಈಗ ಬಿಳ್ಳರಿ ಕ್ಲಿಬ್ ಮೊರು ವ ಕಂಪೌಂಡನ್ನು ಮುನಿಸಿಪಲ್ ಆಫೀಸು ಕಟ್ಟಡದ ಸಲುವಾಗಿ ಕ್ರಯಕ್ಕೆ ಪಡಕೊಳ್ಳುವ ಕೆನ್ನುವ ಶ್ರೀ ಆರ್ ಕುಂಜೂರರ ಗೊತ್ತುವಳಿ, ಮೋರ್ದು ಹ್ಯಾಸ್ಕೂಲಿನ ಪರವಾಗಿ ಜಲ್ಲಾ ಬೋರ್ಡಿಗೆ ವರ್ಷಂಪ್ರತಿ ದನ

ಬೋರ್ಡು ಹ್ಯಾಸ್ಕೂಲಿಗೆ— ಈ ಅಧಪೂರು ಮರದ ನೂತನ ಪೀರಾಧಿಕಾರಿಗಳು ವಾನವಿತ್ತ ನಾಲ್ಕು ನೂರು ರೂಪಾಯಿಗಳ ನಿಧಿಯು ಬಡ್ಡಿಯಿಂದ ಆ ಶಾಲೆಯ ಎಸ್. ಎಸ್ ಎಲ್.ಸಿ. ತರಗತಿಯ ಸಂಸ್ಕೃತ ಪರೀಕ್ಷೆಯಲ್ಲಿ ಆತ್ಯಧಿಕ ಮಾರ್ಕುಗಳನ್ನು ಪಡೆದವರಿಗೆ ಪಾರಿತೋಷಕ ಕೊಡಲಾಗುವುದೆಂಬ ತಿಳಿದು ಬರುತ್ತದೆ.

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್—ಇದೇ ಬರುವ ಡಿಸಂಬ್ರ ತಾ. 28ರಿಂದ 31ರ ವರಗೆ ಕರ್ನಾಟಕ ಪ್ರಾಂತ್ಯದ ದಕ್ಷಿಣಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ನಡೆಯಲಿಕ್ಕಿರುವ ಅಖಿಲ ಭಾರತೀಯ ಆಯುರ್ವೇದ ಕಾಂಗ್ರೆಸ್ಸಿನ 34ನೇ ಅಧಿವೇಶನದ ಅಧ್ಯಕ್ಷ ಸ್ಥಾನಕ್ಕೆ ಶ್ರೀಮಾನ್ ಕವಿರಾಜ ಮಾಣಿಪ್ಪ ಕುಮಾರ ಮುಖರ್ಜಿ B A ಅವರು ಚುನಾಯಿತರಾದರು

ಇದರ ಅಂತರ್ಗತ ಸಂಸ್ಥೆಯಾದ ಅಖಿಲ ಭಾರತೀಯ ಆಯುರ್ವೇದ ವಿದ್ಯಾಪೀಠದ ಅಧ್ಯಾಪಕ ಸಮ್ಮೇಲನಕ್ಕೆ ಸಂಸ್ಥಾಪಿಸಿದ್ದ ಸಂಡಿತೋತ್ತಮರಾದ ಶ್ರೀಮಾನ್ ಲಕುಮಿನಾರಯಣ ಶಾಸ್ತ್ರಿ ಹೂಲಿ ಅವರು ಚುನಾಯಿತರಾದರು

ದಕ್ಷಿಣ ಕನ್ನಡದ ಪುರಾತನ ಹಾಗೂ ಪ್ರಸಿದ್ಧ ದೇವಸ್ಥಾನಗಳಲ್ಲೊಂದಾದ

ಹಿರಿಯಡ್ಕ

ಮಹತೋಭಾರ ಶ್ರೀ ವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿ

ಸಂಗ್ರಹದ ಬಗ್ಗೆ ತಾರೀಕು 23—1—1946ರಲ್ಲಿ

ಹಿರಿಯಡ್ಕದಲ್ಲಿ ವೈಭವದ ದಶಾವತಾರ

ಜೋಡಾಟ ಜರಗಲಿದೆ.

—: ಟಿಕೇಟಿನ ದರಗಳು :—

I ಕ್ಲಾಸು	ರೂ. 100	IV ಕ್ಲಾಸು	ರೂ 10
II ,,	,, 50	V ,,	,, 5
III ,,	,, 25	VI ,,	,, 2

ಜೀರ್ಣೋದ್ಧಾರಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಬೇಕಾಗಬಹುದೆಂದು ಅಂದಾಜು ಮಾಡಲಾಗಿರುವುದರಿಂದ ಮಹಾಜನರು ಅತ್ಯಧಿಕ ಟಿಕೇಟುಗಳನ್ನು ಪಡಕೊಂಡು ಈ ಸತ್ಕಾರ್ಯಕ್ಕೆ ಜುದಾರ ಸಹಾಯ ಮಾಡುವಂತೆ ಹಾರೈಸುತ್ತೇನೆ

ಎ. ಎಂ ನಾಗಣ್ಣ ಹೆಗ್ಡೆ,

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್, ಮೆನೇಜಿಂಗ್ ಟ್ರಸ್ಟಿ

ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, ಹಿರಿಯಡ್ಕ, ದ ಕನ್ನಡ.

ಸಹಾಯನೀಡುವುದು ಇತ್ಯಾದಿ ಪ್ರಶ್ನೆಗಳನ್ನು ಬಜೆಟ್ ವಿಮರ್ಶನಿಸುವ ಸಮಯ ಆಲೋಚಿಸುವರೆ ಬಾಕಿ ಬಿಡಲಾಯಿತು

ನಾಟ್ಕ ಕೂಟದಲ್ಲಿ ಡಾ! ನಾಯ್ಕ್ ರ ಸತ್ಕಾರ ಕೂಟ—ಡಾ! ರಾಘವೇಂದ್ರ ನಾಯ್ಕರು ತನಗೆ ನುರಿರು ಪೆಣ್ಣು ಮಕ್ಕಳು ಯುಷ್ಟು ಆ ಎಳಿಕೆ ಪ್ರಾಯ್ಕನೆಯಾಗಿ ಗಡಿ ಕುಗ್ಗು ಜನಿಸಿದೆಂದರೆ ಸಂತೋಷ ಸೂಚನಾರ್ಥವಾಗಿ ಕಳೆದ ಅದಿತ್ಯವಾರ ನಾಟ್ಕ ಕೂಟ ಸಭಾ ಗುಂದಿರದಲ್ಲಿ ಒಂದು ಸತ್ಕಾರ ಕೂಟ ವನ್ನೇರ್ಪಡಿಸಿದರು ಶ್ರೀಗಂಜಿಮಠ ಕೊಚ್ಚಿ ಕಾರ್ ಪದ್ಮನಾಭ ಶೆಣೈ, ಡಾ! ಟಿ ಎಸ್ ಎ ಪೈ, ಆರ್ ಆರ್ ಕಾಂಜೂರು ಮಾದಿಲಾಯ ಪರು ಶ್ರೀ ರಾಮ್ಯರನ್ನು ಎತ್ತಿನಂಡಿಸಿ ಅವರ ಪುತ್ರ ಬಿ ರಮೇಶ ಜಾಲಕಗೆ ರೀಪ್ಪಾರ್ಯು ರಾಶ್ಯ ಗೈವನ್ನು ಕೋಲಿದೆರು ಡಾ! ನಾಯ್ಕ್ ರು ಸಪಾರಿಗೂ ಧನ್ಯವಾದಗಳನ್ನರ್ಪಿಸಿದರು.

ಶ್ರದ್ಧಾವಂತರ ನಿಧನ—ಶ್ರೀಕಲ್ಕ ಟಿ ವೆಂಕಟ್ ಸರತಿಹಾಚಾರ್ಯರು ತನ್ನ 91 ನೇ ವಯಸ್ಸಿನಲ್ಲಿ ಕಳೆದ ಗುರುವಾರ ವೈಷ್ಣವೈಕ್ಯರಾದರಂಬುದು ವಿಷಾದದಿಂದ ತಿಳಿಸಲು ಆಚಾರ್ಯರು ಸ್ವಾರ್ಥತ್ಯರಹಿತ ಕಾಲದ ತನಕವೂ ಸದಾಚಾರ, ಸಚ್ಛಾಸ್ತ್ರನಿರತರಾಗಿದ್ದು ನಿಷ್ಕಾಮಿತ ಸಜ್ಜನಿಕೆಯಿಂದ ಬಾಳಿ ಪಪೆರಿದ್ದರು.

ಡಾ ಎ. ಲಕ್ಷ್ಮೀಪತಿ B.A ,M B.C M , ಅವರು ಯೋಗ, ವ್ಯಾಯಾಮ ಸಂಘಾ ಪರಿಷತ್ತಿನ ಆಧ್ಯಕ್ಷರಾಗಲು ಒಪ್ಪಿರುವರೆ

ವೈದ್ಯ ಗುರು ಸುಮಂತ ನಾರಾಯಣ B A , ತುಂಗಭದ್ರಾ ಎಜ್ಯುಕೇಶನ್ ಸೊಸೈಟಿಯ ಆಜೀವ ಕಾರ್ಯದರ್ಶಿ ಮತ್ತೆ ಸಂಘಾಪನಾ ಪರಿಷತ್ತಿನ ಆಧ್ಯಕ್ಷ ಸ್ಥಾನವನ್ನು ಸ್ವೀಕರಿಸಿರುವರು

ಶಾರೀರಕ, ಮಾನಸಿಕ ಜಾಗೂ ಆಧ್ಯಾತ್ಮಿಕ ಸಂಪತ್ತನ್ನು 40 ರತಮಾನಗಳಿಂದಲೂ ಜನತೆಗೆ ಒಪಿಸಿಕೊಟ್ಟ ಮುಖ ಪ್ರಣಾಳಿಯಾದ ಆಯುರ್ವೇದ ವಿದ್ವಾನ್ಮಹಾಸಮ್ಮೇಳನ ಮತ್ತು ಅಖಿಲ ಭಾರತದ ಸಕಲ ಪ್ರಾಂತಗಳಿಂದಲೂ ಆಯುರ್ವೇದ ವಿದ್ವನ್ಮಹಾಜನಗಳು ನಮ್ಮೂರಲ್ಲಿ ಸೇರಲಿರುವ ಜರಗುವ ಈ ಪರಿಷತ್ತಿಗೆ ಬರಲಿರುವರು

ಪ್ರತಿಯೊಬ್ಬ ಕನ್ನಡಿಗನೂ ರೂ 5 ಆಥ ವಾ ಹೆಚ್ಚಿಗೆ ಕೊಟ್ಟು ಸ್ವಾಗತ ಸಮಿತಿಯ ಸದಸ್ಯರಾಗಿ ನಮ್ಮನ್ನು ಪ್ರೋತ್ಸಾಹಿಸಿ ಈ ಧರ್ಮಕಾರ್ಯದಲ್ಲಿ ಸಹಭಾಗಿಗಳಾಗಬೇಕಾಗಿ ಕೋರುತ್ತೇವೆ.

ಯು ಎ. ಪೈ,
ಜತೆ ಕಾರ್ಯದರ್ಶಿಗಳು

ಸಾಮ್ರಾಜ್ಯಗಳ ಪತನದಿಂದ ಎಲ್ಲೆಲ್ಲೂ ಅಂತರ್ಯುದ್ಧ!

ಪರ್ಶಿಯದಲ್ಲಿ ಹೊಸ ಗೊಂದಲ

ಉತ್ತರ ಇರಾನಿನಲ್ಲಿ ಸರಕಾರದ ವಿರುದ್ಧ ಮಹಾ ಬಂಡಾಯವು ಇದೇ ತಾ.19 ರಲ್ಲಿ ಹೊಸತಾಗಿ ತಲೆಯೆತ್ತಿದೆ. ಉತ್ತರ ಭಾಗದ ಬಝೆುರ್‌ಬಾಯಿ ಝುಸ್ತಾನ್ ಪ್ರಾಂತ್ಯದಿಂದ, ರೈಫಲ್, ಮೆಶಿನ್ ಗನ್ನುಗಳೊಡನೆ ಆಕ್ರಮಿಸುತ್ತಾ ಹೊರಟ ಬಂಡಾಯಗಾರ ದಳವು ಮೂರು ಮುಖ್ಯ ನಗರಗಳ ಪಹರೇ ಸೈನಿಕರನ್ನು ಚಲ್ಲಾಪಿಲ್ಲಿ ಮಾಡಿ ಇರಾನಿನ ರಾಜಧಾನಿ ಟೆಹರಾನಿನ ಕಡೆಗೆ ಮುಂದೊತ್ತಿದೆ. ತಂತೀ, ವಾಹನ ಸಂಚಾರಗಳು ಕಡಿಯಲ್ಪಟ್ಟಿವೆ. ಇದರಲ್ಲಿ ರಷ್ಯದ ಕೈಯಿರಬಹುದೇ ಎಂದು ಲಂಡನ್ನಲ್ಲಿ ತಳಮಳವೆದ್ದಿದೆ ದಂಗೆಯೆದ್ದ ಸ್ಥಳವು ಸೋವಿಯೆಟ್ ಗಡಿಯಲ್ಲಿದೆ. ಇರಾನಿನಲ್ಲಿರುವ ರಶ್ಯ, ಬ್ರಿಟಿಷ್, ಅಮೇರಿಕನ್ ಸೇನೆಗಳನ್ನು ಬಲವ ಭೆಬ್ಬರಿಯಲ್ಲಿ ಹಿಂದೆಗೆಯಬೇಕೆಂಬ ನಿರ್ಧಾರವಾಗಿತ್ತು. ಇರಾನ್ ಸರಕಾರದ ಘೋರಣೆಯು ರಶ್ಯಕ್ಕೆ ಪ್ರತಿಕೂಲವಾಗಿತ್ತು. ಗಲಭೆಯಾದ ಸ್ಥಳದಿಂದ ರಾಜಧಾನಿ ಟೆಹರಾನಿಗೆ, ಪರ್ಶಿಯನ ಸೇನಾನಿಯೊಬ್ಬರು ತಮ್ಮ ವ್ಯಾಪಾರೀ ವಿಮಾನವೊಂದರಲ್ಲಿ ಹೋಗಲು ರಶ್ಯನರು ಅನುಮತಿ ಕೊಡಲಿಲ್ಲ. ಬಂಡಾಯಗಾರರು ಹಲವು ಅಧಿಕಾರಿಗಳನ್ನು ಕೊಂದಿದ್ದಾರೆಯೆಂದೂ ಹೋರಾಟ ಪ್ರಬಲಿಸುತ್ತಿದೆ.

ಜಾವಾದ ಸ್ವಾತಂತ್ರ್ಯ ಸಮರ

ಸಾರಬಾಯಾದಲ್ಲಿ ಬ್ರಿಟಿಷರು ಇಂಡೋನೇಶಿಯರ ಮೇಲೆ ಪ್ರತ್ಯಕ್ಷ ಆಕ್ರಮಣಕಾರ್ಯಾರಂಭಿಸಿದ ಮೇಲೆ ಇಂಡೋನೇಶಿಯನ್ ರಿಪಬ್ಲಿಕನ್ ನಾಯಕ ಡಾ। ಸೋಯಿಕರ್ನೋ ರಾಜೀನಾಮೆ ಕೊಟ್ಟು ಸುತಾನ್ ಶೀರರ ಪ್ರತ್ಯೇಕ ಮಂತ್ರಿಮಂಡಲ ಸ್ಥಾಪನೆಗೊಂಡಿತು. ಸೋಯಿಕರ್ನೋ ರಿಪಬ್ಲಿಕನ್ ಸರಕಾರದ ಅಧ್ಯಕ್ಷರಾಗಿಯೂ ಇದ್ದಾರೆ ಡಾ। ಹಟ್ಟಾ ಉಪಾಧ್ಯಕ್ಷರಾಗಿಯೂ ನಿಶ್ಶಸ್ತ್ರ ದೇಶಪ್ರೇಮಿ ಇಂಡೋನೇಶಿಯನ್ನರನ್ನು ಧ್ವಂಸಮಾಡುತ್ತಾ ಬ್ರಿಟಿಷರು ಸೌರಾಬಯಾ ಬಂದರವನ್ನು ಫಿರಂಗಿಕ್ಕಸಿಸಿಕೊಂಡಿದ್ದಾರೆ. ಇಂಡೋನೇಶಿಯದ ಹೊಸ ಅಧಿಕಾರಿಗಳೂ ಡಚ್ ಮತ್ತು ಬ್ರಿಟಿಷ್ ಪ್ರತಿನಿಧಿಗಳೂ ಸಂಧಾನ ಸಮ್ಮೇಲನ ಸೇರಿದರೂ ಅದು ಪರಾಭವಗೊಂಡಿತು. ಬ್ರಿಟಿಷ್ ಪ್ರತಿನಿಧಿಯು ಸೋಲಿಸರು ಮಕ್ಕಳನ್ನು ಪ್ರಶ್ನಿಸುವಂತೆ ತಮ್ಮನ್ನಾ ಸಮ್ಮೇಲನದಲ್ಲಿ ಸಂಬೋಧಿಸಿದರೆಂದು ಇಂಡೋನೇಶಿಯರ ಪ್ರಧಾನಿ ಶೀರರ ಆಕ್ಷೇಪ. ಉಗ್ರವಾದಿ ಇಂಡೋನೇಶಿಯನ್ ಜಳವಳಗಾರರಿಗೆ ಜಪಾನಿಂದ ಬ್ರಿಟಿಷರನ್ನೋಡಿಸಿಯೇ ಸಿದ್ಧವೆಂದು ಉರಿದೆದ್ದಿದ್ದಾರೆ. 'ಇಂಡೋನೇಶಿಯ ರಾತ್ರಿಯು ಕೊನೆಯ ರಾತ್ರಿ. ನಾಳೆ ಒಂದೋ ಬ್ರಿಟಿಷರನ್ನು ಕೊಲ್ಲುತ್ತೇವೆ; ಇಲ್ಲವೇ ಜಾವಾದಿಂದೋಡಿಸುತ್ತೇವೆ' ಎಂದು ಜಾವಾದ ರಾಷ್ಟ್ರೀಯ ರೇಡಿಯೋ ತಾ. 18ನೇ ರಾತ್ರಿ ಘೋಷಿಸಿದೆ. ರಾಜಧಾನಿ ಬಟಾವಿಯಾ ಮತ್ತು ಸೌರಾಬಾಯಾದ ಮಧ್ಯದಲ್ಲಿರುವ ಪಾಲುಮ್ಬಿಯ ನಗರ ಸಮರಾಂಗ್‌ನಲ್ಲಿ ಇಂಡೋನೇಶಿಯ ತರುಣರು ಸಾಮೂಹಿಕ ಬಂಡಾಯವೆಬ್ಬಿಸಲಿದ್ದಾರೆ. ಅಲ್ಲಿ ಯುರೋಪಿಯನರಿಗೆ ಆಹಾರವೇನೂ ದೊರೆಯದಂತೆ ಒಹಿಷ್ಕಾರ ಬಿದ್ದಿದೆ; ಬ್ರಿಟಿಷರು ಮಾರ್ಷಲ್ ಲಾ ಜ್ಯಾರಿ ಮಾಡಿ ಪ್ರಬಲ ಶಸ್ತ್ರ ಸಜ್ಜಿತೆ ನಡಸಿದ್ದಾರೆ. ಪರಿಸ್ಥಿತಿ ಅತ್ಯಂತ ಭೀಕರವಾಗಿದೆ

ಪೆಲೆಸ್ತೈನಿನಲ್ಲಿ

ಪೆಲೆಸ್ತೈನಿನಲ್ಲಿಗೆ ಯಹೂದಿಗಳನ್ನು ಹೊಗಿಸುವ ಆಂಗ್ಲೋ-ಅಮೇರಿಕನ್ ಯೋಜನೆಯಿಂದಾಗಿ ಅಲ್ಲಿ ಅರಬ್-ಯೆಹೂದೀ ಗೊಂದಲ ಏನಾಗಬೇಡಿಗಾಗಿ ಆಂಗ್ಲೋ ಅಮೆರಿಕನರಜತೆ ಸಮಿತಿಯೊಂದು ನೇಮಿಸಲ್ಪಡುವದು. ಅದು ಎಲ್ಲಾ ವಿಷಯವನ್ನೂ ಪರ್ಯಾಲೋಚಿಸಿ ಬ್ರಿಟಿಷ್–ಅಮೇರಿಕಗಳಿಗೆ ವರದಿಯೊಪ್ಪಿಸಿ ಆನೇಲೆ ತೀರ್ಮಾನವಾಗುವದು ಅದುವರೆಗೆ ತಿಂಗಳಿಗೆ 1500ರಂತೆ ಪೆಲೆಸ್ತೈನಿಗೆ ಯಹೂದಿಗಳು ಪ್ರವೇಶಿಸಲು ಅರಬರು ಸಮ್ಮತಿಸಬೇಕು ಎಂದು ಬ್ರಿಟಿಷರ ಹೊಸ ಘೋರಣೆ. ಇದರಿಂದ ಯೆಹೂದಿಗಳ್ಳ ಉಕ್ಕೇರ್ಪಡೆ. ಪೆಲೆಸ್ತೈನಿನಲ್ಲಿ ಮುಸ್ಲಿಮರು, ಗುಂಡು ಹಾರಾಟ, ದಸ್ತುಗಿರಿಗಳು ನಿತ್ಯದ ಟೆಲ್ ಅವೀವಿನಲ್ಲಿ ಸುಲಿಗೆ ದರೋಡೆಗಳೂ ದೊಡ್ಡ ಪರಿಮಾಣದಲ್ಲಿ ನಡೆದವು ಅರಬರೂ ಈ ತೀರ್ಮಾನದಿಂದ ಸಮಾಧಾನಗೊಂಡಿಲ್ಲ

ಚೈನದ ಅಂತರ್ಯುದ್ಧ

ಚೀನದಲ್ಲಿ ಚಿಯಾಂಗರ ಕೇಂದ್ರ ಸರಕಾರಕ್ಕೂ ಚೀನೀ ಕಮ್ಯೂನಿಸ್ಟ್ ಸೇನೆಗಳಿಗೂ ಸಾರ್ವತ್ರಿಕಭವಾಗಿರುವ ಪ್ರತ್ಯಕ್ಷ ಹೋರಾಟವೀಗ ಉಗ್ರವಾಗಿ ಸಾಗಿದೆ. ಉತ್ತರ ಭಾಗಗಳೆಲ್ಲಾ ಬಹುತೇಕವಾಗಿ ಕಮ್ಯೂನಿಸ್ಟರ ಅಂಕೆಯಲ್ಲಿದ್ದು ಅವರು ದಕ್ಷಿಣಕ್ಕೂ ಮುಂದೊತ್ತಿದ್ದಾರೆ. ಈಗ ರಶ್ಯದ ವಶದಲ್ಲಿದ್ದ ಚಿಯಾಂಗ್-ರಶ್ಯ ಒಪ್ಪಂದದಂತೆ ಇಪ್ಪರಲ್ಲೀ ಚೀನಕ್ಕೆ ಬಿಟ್ಟುಕೊಡಬೇಕಾಗಿರುವ ಮಂಚೂರಿಯದ ದ್ವಾರದಲ್ಲಿ ಕಮ್ಯೂನಿಸ್ಟ್ ಮತ್ತು ಸರಕಾರೀ ಸೇನೆಗಳೊಳಗೆ ತೀವ್ರ ಹೋರಾಟ ನಡೆಯುತ್ತಿದೆ ಕಮ್ಯೂನಿಸ್ಟರ ಕೈಯಿಂದ ಅದರ ಕೆಬ್ಬಾಗಿಲ ಕೋಟೆ ಗಾನ್ ಹಾಯಿಕ್ವಾನನ್ನು ಸರಕಾರೀ ಸೇನೆ ಕಸಗೊಂಡರೂ ಬೇಟ್ಟಕೆದೆಯಿಂದ ಕಮ್ಯೂನಿಸ್ಟರು ಅದನ್ನು ಇದಿರಿಸಿ ಮಂಚೂರಿಯವನ್ನು ತಾವೇ ವಶಪಡಿಸಿಕೊಳ್ಳಬೇಕೆಂಬ ಸಿದ್ಧತೆ ನಡೆಸಿದ್ದಾರೆ. ಫ್ರಾನ್ಸಿನಲ್ಲಿಯೂ ಪ್ರಧಾನಿ ಡಿಗೋಲೆಯವರಿಗೂ ಕಮ್ಯೂನಿಸ್ಟ್‌ಪಕ್ಷಕ್ಕೂ ಅಧಿಕಾರಕ್ಕಾಗಿ ಜಟಾಪಟಿಯಾರಂಭವಾಗಿದೆ.

ಆಟಂ ಬೋಂಬು ಪಕ್ಷಪಾತ

ಅಮೇರಿಕ, ಬ್ರಿಟನ್ ಮತ್ತು ಕೆನಡಾಗಳೊಳಗೊಂದು ತೀರ್ಮಾನವಾಗಿದೆ. ಆಟಂ ವಿಸ ಗುಟ್ಟು ಮತ್ತು ಹತೋಟೆಯ ಹಕ್ಕು ಈ ಮೂರು ರಾಷ್ಟ್ರಗಳಿಗೆ ರಿಸರ್ವ್ ಆಗಿರತಕ್ಕದ್ದೆಂಬುದೇ ಆ ಒಪ್ಪಂದ. ಇದರಿಂದ ರಶ್ಯವು ಕೆರಳಿಗೊಂಡಿದೆ. ರಶ್ಯದ

ಶಂಕರ ಸ್ಥಾಪನೆ— ಸ್ಥಳೀಯ ಸಂಸ್ಕೃತಿಕ ಉನ್ನತಿ ಕ್ಷೇತ್ರದ ಪಾಲು ಸ್ವಾಸಿಯೆನ್ನು ಸಮರ್ಥಿಸಿ ಪೇಜಾವರಾಪ ಪ್ರತ್ಯೇಕ ಸಂಘದ ಹೊಸ ಸ್ವಾಮಿಗಳವರು ತಾ 21ರಲ್ಲಿ ಸಾರ್ವೋದಯಕ್ಕೆ ಸಂಬಂಧಿಸಿ (ಸೂಚನೆ ಗುಪಿಸಿ) ಕೆರೆಯೊಂಡರು. ಶ್ರೀ ಭಲರಾಮರು ಪರಿಸ ಸ್ವಾಮಿಗಳವರು ಕೆಲವು ಸಭೆಯ ಸಂಗ್ರಹಾರಾಂ ಸಂಚಾರಕ್ಕೆಂತೊಳ್ಳಲು ಧರ್ಮ ನಿಧಿಯನ್ನು ಯಾಸಗಳು ಬಹುದಾದ ಪಸ್ತಿಯ ಸರಕೆರೆಯಬಹುದೆಂದು ಸೂಚಿಸಲಾಗಿದೆ

ಭಾವಚಿತ್ರ ಅನಾವರಣ—ಶ್ರೀ ಅನಂತರಾಯ ಸಂಪಗೆ ಪರಿಣಿ ಸ್ವಾಮಿಗಳವರು ತಮ್ಮ ಗುರುಗಳಾದ ತೀರ್ಥರಾಯರ ಶ್ರೀ ಬಂಧ ಪಸ್ಥ ತೀರ್ಥ ಶ್ರೀಗಳವರ ಭಾವ ಚಿತ್ರವನ್ನು ತಾ 20ನೇ ಸಾಯಿ ಶಲಾವೃಂದದಲ್ಲಿ ಅನಾವರಣ ಮಾಡಿದರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 24-11-1945ರಿಂದ

ಲೈಟ್ಸ್ ಫ್ರೊಡಕ್ಷನ್ ನವರ

—: ಮೊಹ್ಬತ್ :—

ರಾಮಾ ಆಪ್ಟೆ, ಸಹರಿ ಸನ್ಯಾಲ್

ನಂತರ:—

ನವಿನ ಪಿಕ್ಚರ್ಸ್‌ನವರ

ದೋ ಸ್ತೆ

ನೂರ್‌ಜಹಾನ್, ಜೋತಿಲಾಲ್.

ಅಖಿಲ ಭಾರತ
ಆಯುರ್ವೇದ ಸಮ್ಮೇಲನ

ಇದೇ ದಶಂಬರ ತಾ. 28ರಿಂದ 31ರ ತನಕ
ಉಡುಪಿಯ ಮಣಿಪಾಲದಲ್ಲಿ

ಕವಿರಾಜ ಮಣೀಂದ್ರ ಕುಮಾರ ಮುಖರ್ಜಿ, ಬಿ. ಎ.
ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಈ ಸಂದರ್ಭದಲ್ಲಿ ಜನಪ್ರಿಯವಾದ
'ಅಂತರಂಗ' ವಾರ ಪತ್ರಿಕೆಯ
ಆಯುರ್ವೇದ
ಸಮ್ಮೇಲನಾಂಕವು

ಆಯುರ್ವೇದಕ್ಕೆ ಸಂಬಂಧಪಟ್ಟ ಮತ್ತು ಇತರವಿವಿಧ
ಲೇಖನಗಳೊಂದಿಗೆ ಪ್ರಕಟವಾಗುವುದು.

ಲೇಖನಗಳು ಸ್ವೀಕರಿಸಲ್ಪಡುವವು

ಜಾಹೀರಾತುದಾರರಿಗೆ ಸುವರ್ಣಸಂಧಿ!

ವಿಶೇಷ ಮಾಹಿತಿಗೆ ಬರೆಯಿರಿ:—
ಮೆನೇಜರ್, ಅಂತರಂಗ, ಉಡುಪಿ.

Advertise in
Antaranga Ayurvedic Congress Supplement.
For rates-Ad. Manager Antaranga, Udipi, S. I.

Notice

ಕುಂದಾಪುರ ಡಿವಿಜನ್ ಕೋರ್ಟಿನಲ್ಲಿ

R. I. A 647/1943
R. L. P. 454/1945

ಆರ್ಬಿದಾರಳು ನಾಗಮ್ಮ ಸೆಟ್ಟಿ ಸೆಲ್ಕಳಿ ಕುಂದಾಪುರ ಸೆಟ್ಟಿರ ಹೆಂಡ್ರಿ. ಸಾಬ್ರ 1ನೇ ಶಿರೂರು ಗ್ರಾಮದಲ್ಲಿರುವವರು.

ಯೆದ್ರಿರು 1 ನೆಯವ್ಯ ಉಮಾ ಒಪ್ಪಿಪುಟ್ಟ ಯೆದ್ರಿನ ಸುಗಂ 2 ನಾರಾಯಣ, 3 ಚಿಕ್ಕಯ್ಯ, 4 ನಾಗಪ್ಪ ಶಿವರು ಹೆಬ್ಬಿನ ಸುಳ್ಳು, ಕುಂದಾಪುರ ತಾಲ್ಲೂತಗ್ಗಸೇ ಗ್ರಾಮ ಇಲ್ಲಿರುವವರು

ಸದ್ರಿ ವ್ಯಪಹಾರಗಾಯಅರ್ಜಿದಾರಳ ತಿಳಿಪ ಪೆದ್ರಿಗೆ ಈ ಸೂಲ್ಕ ತಿ ಮಂಜಸಿ ಸುಪತ್ತೇನುದ್ರೆ

ಮೇಲಿನ ದಿಕ್ಕಿ ಸಮಾಧಾನವ ಬಗ್ಗೆ ಅರ್ಜಿದಾರಳು ನನ್ನ ವಕಾಲ್ತಿನಿಂದ ವಾಕ್ಯ ನೂಡಿದ ಮೇಲಿನ ಅಸ್ಸಾಬ್ಯಾರ ಸ್ಥಳದಲ್ಲಿ ಯೆದ್ರಿರ ಹಕ್ಕಿನ ಸ್ಥಿರಾಸ್ತಿಯನ್ನು ಯೇಲಂ ಪೂಡ್ಸುವರೆ ಜಪ್ತು ಕೂಡಿ ಸದ್ರಿ ಜಪ್ತು ಕುರಿತು ಯೆದ್ರಿರಿಗ ಸ್ತೋ ಲಿರ್ದಾ ಜ್ಯಾರಿ ಬಗ್ಗೆ, ಸದ್ರಿ ಆಮ್ಜಾಶಿಯನ್ನು ತಾ 27-11-45ಕ್ಕೆ ಮೇಲಿನ ಕೋರ್ಟಿನಲ್ಲಿ ತ್ಯಗೆ ಯಿಟ್ಟಿನೆ. ಆ ಕುರಿತು ಆಕ್ಷೇಪನಿದ್ದಲ್ಲಿ ಆ ತಾರೀಕಿಗೆ ಸದ್ರಿ ಕೋರ್ಟಿನಲ್ಲಿ ಜ್ಯಾಹೀರು ನುಡಿಕೊಳ್ಳತಕ್ಕದ್ದು. ತಿಳಿದಿರುವದು.

ಕೆ. ಎಸ್. Kolkebail,
Advocate for Petitioner.

ಮೊಕ್ತೈರ್ ಕುಂದಾಪುರ,
ತಾರೀಕು 20-11-45.

ದಕ್ಷಿಣ ಕನ್ನಡ.

ಕಾರ್ಕಳದಲ್ಲಿ - ಸರದ ಜಯಂತಿ: ತಾ. ೧೪ರಂದು ಸ್ಥಳೀಯ ಕಾಂಗ್ರೆಸಿನ ನೆಲೆಯಲ್ಲಿ ಶ್ರೀ. ಎಂ ಎಸ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಕೂಡಿ ಶ್ರೀ ಗಳಾದ ವಕೀಲ ಪಿ. ನಿ. ಉಪಾಧ್ಯಾಯ, ಕೆ. ನಂಕಟೇರಿ ಪ್ರಭು, ಕೆ. ಶ್ರೀನಿವಾಸ ಜ್ಯೋಶಿ ಮೊದಲಾದವರು ಜವಾಹರಲಾಲರ ಜೀವನ ಮಹತ್ವದ ಕುರಿತು ಮಾತನಾಡಿದರು. ಶ್ರೀ. ಕೇರಳ ರಾಮಚಂದ್ರ ಶೆಣೈಯವರು ಮುಂದಿನ ಚುನಾವಣೆಗಳ ಮಹತ್ವವನ್ನೂ, ಯೋಗ್ಯರಾದವರ ಸ್ಥೇ ಎಸೆಂಬ್ಲಿ ಸಭೆಗಳಿಗೆ ಆರಿಸಿ ಕಳುಹಿಸುವ ಆಗತ್ಯವನ್ನೂ ಹೇಳುತ್ತ, ತಾನು ಹಿಂದೂ ಮಹಾಸಭೆಯ ಒಬ್ಬ ಕಾರ್ಯಕರ್ತನಾಗಿದ್ದರೂ ಕೂಡ, ಹಿಂದೂಸಮಾಜಕ್ಕಾಗಿ ಯಾವತ್ತರದ ತ್ಯಾಗ, ಸೇವೆಯನ್ನೂ ಮಾಡದೆ, ಹಿಂದೂ ಮಹಾಸಭೆಯ ಪ್ರತಿಷ್ಠರ್ಮಗಳಲ್ಲಿ ಲೃಷ್ಟಿ ವಿರೋಧಗಳನ್ನೂ ಇಟ್ಟುಕೊಂಡಿರದೆ, ಕೇವಲ ಸಾರ್ವಜನಿಕರಾಗಿ ಮಹಾಸಭೆಯ ಹೆಸರಿನಲ್ಲಿ ಎಂತ ಹುರಿಯಾಳುಗಳಿಗೆ ತಮ್ಮ ಮತವನ್ನು ಕೊಟ್ಟು, ಮಹಾಸಭಾವಾದಿಗಳು ತನ್ನ ಅಧಿಕಾರದ ಪುರುಷರೋಗ ಮಾಡಿ ದೇಶದ ಭವಿಷ್ಯವನ್ನು ಕೆಡಿಸಬಾರದೆಂದರು. ಮತ್ತು ಎಲ್ಲರೂ ಅಪ್ರತಿನು ತ್ಯಾಗ ಸೇವೆ ಮಾಡಿದ ಕಾಂಗ್ರೆಸಪುರಿಯಾಳುಗಳಿಗಾದರೂ ಮತವಾ ನ ಮಾಡಿ ದೇಶಸ್ವಾತಂತ್ರ್ಯವನ್ನು ಸಾಧಿಸಬೇಕೆಂದರು. ಶ್ರೀ ಆರ್. ದೇವರಾಯ ಕಿಣೈಯವರು ಕಾಂಗ್ರೆಸಿನ ವಿಜಯವೇ ದೇಶದ ಜಯವೆಂದು ಹೇಳಿ ಎಲ್ಲರಿಗೂ ಧನ್ಯವಾದಗಳ ಸ್ವೀತ್ಪಬಳಿಕ ಜೈ ಹಿಂದ್ ಘೋಷಣೆಯೊಂದಿಗೆ ಸಭೆ ಮುಗಿಯಿತು. ಇದೇರಂತೆ ಈ ದಿನ ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ಹಿಂದೀ ತರಗತಿಯಲ್ಲಿಯೂ ಶ್ರೀ ಕಟಪಾಡಿ ಶ್ರೀನಿವಾಸ ತೆಯ್ಯವರ ಭಾಷಣ, ಸಕ್ಕರೆ ಮಿಂಠಾಯಿ ವಿತರಣ ಮೊದಲಾದ ಕಾರ್ಯಕ್ರಮಗಳೊಂದಿಗೆ ಜವಾಹರ ಜಯಂತಿಯು ಯಶಸ್ವಿಯಾಗಿ ಜರಗಿದೆ.

ಪೆರಣಾಲ-ಲಕ್ಷ್ಮೀಪುರ ಎಂಬಲ್ಲಿ ತಾ ೧೪ರಲ್ಲಿ ಉಬ್ರಂಗಳ ನೆಕ್ರಾಜೆ ಮತ್ತು ಕುಂಬಾಡಾಜೆ ಗ್ರಾಮದ ನಿವಾಸಿಕರ ಸಾರ್ವಜನಿಕ ಸಭೆಯು ಮಿ. ಕೆ ಕೆ. ದಿನ್ ಇನರ ಅಧ್ಯಕ್ಷತೆಯಲ್ಲಿ ಸೇರಿ ನೆಹರೆಯರ ಕೂಟ ಸ್ಥಾಪಿಸಲ್ಪಟ್ಟಿತು ಶ್ರೀ. ಯಚ್. ಯಸ್. ನಾರಾಯಣ ಭಟ್ಟರು ಸಭೆಯ ಪರಿಸ್ಥಿತಿಯನ್ನು ನಿವರಿಸಿ ಸ್ರತಿ ಗ್ರಾಮದಲ್ಲಿ ಒಂದೊಂದು ಸಾಚನಾಲಯವನ್ನು ತೆರೆಯಬೇಕಾದ ಮತ್ತು ಐಕ್ಯತೆಯನ್ನು ಗಳಿಸಬೇಕಾದ ಹಾಗೂ ಕರ್ತಾಟಕದಲ್ಲೆಲ್ಲಾ ನೆಲೆತನವನ್ನು ನೆಲೆಯೂರಿಸಬೇಕಾದ ಆವಶ್ಯಕತೆಯನ್ನು ನುಡಿದಟ್ಟು ಮಾಡಿ ಇಂತಹ ಕೂಟಗಳಿಗೆ ಕರ್ನಾಟಕದ ಸಾರ್ವಜನಿಕರ ಸಹಕಾರ ಸಹಾಯ ಮತ್ತು ಸಲಹೆಗಳನ್ನು ಆಪೇಕ್ಷಿಸಿದರು.

ಗಂಗೊಳ್ಳಿ—"South Kanara Soldiers Ajnmen Seamen Welfare Association" ಅವರ ಆಶ್ರಯದಲ್ಲಿ ಗಂಗೊಳ್ಳಿಯಿಂದ ಹೋದ ಸಿಪಾಯಿಯವರ ಕುಟುಂಬದವರಿಗೆ ಸತ್ಕಾರ ಕೂಟವು ಕಳದ ಮಂಗಳವಾರ ತಾ. 13-11-45ರಲ್ಲು ಸಾಯಂಕಾಲ ಶ್ರೀ ಎಚ್. ಎಲ್. ಕಾಮತ್‌ರವರ ಅಧ್ಯಕ್ಷತೆಯಲ್ಲಿ ಸರಸ್ವತಿ ವಿದ್ಯಾಲಯದ ಪಟಾರದಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಸಿಪಾಯಿಯವರ ಕುಟುಂಬದವರಿಗೆ ಉಪಹಾರವಾದ ತರುಣಾಯ ನುಕ್ಕಳಿಗೆ ಆಟಗಳು ನಡೆದವು. ಸಭೆಯಲ್ಲಿ ಶ್ರೀ. ರಾಮಪ್ಪನವರೂ, ಇಲ್ಲಿಯ ಜನಪ್ರಿಯ ತಹಶಿಲ್ದಾರರಾದ ಶ್ರೀ. ನಕ್ಷೇರರವರು ಯಥೋಚಿತ ಭಾಷಣಗಳನ್ನು ನಾಡಿದರು. ಅಧ್ಯಕ್ಷರು ಆಟದಲ್ಲಿ ಮೊದಲು ಬಂದವರಿಗೆ ಇನಾಮುಗಳನ್ನು ಹಂಚಿದರು. ಕಾಲಾ ವಿವ್ಯಾರ್ಥಿಗಳ ವಿನೋದಾವಳಿಗಳು ಆದ ಮೇಲೆ ಎಲ್ಲ ಮಕ್ಕಳಿಗೆ ಸಿಹಿಯಾಯ ಹಂಚಲಾಯಿತು. ತರುಣಾಯ ಸಭೆಯು ಮುಕ್ತಾಯವಾಯಿತು.

ಕಟಪಾಡಿ—ತಾ 16ರಲ್ಲಿ ಪಂ. ಜವಾಹರಲಾಲರ 57ನೇ ವಿನೋತ್ಸವವು ಆಚರಿಸಲ್ಪಟ್ಟಿತು. ಶ್ರೀ.ನಾ. ಪಾಮೋದರ ನಾಯ್ಕರು ಪಂಡಿತರು ದೀರ್ಘಕಾಲ ಬಿಳಲಿಪೊ,ಆಸರಿಗೆ ಆಯುರಾರೋಗ್ಯಗಳನ್ನು ಬೇವರು ದೇವಪಾಲಿಸಲೆಂದೂ ಹೇಳಿ ಪ್ರಾರ್ಥಿಸಿದರು. ತರುಣಾಯ ಸುಭಾಷ ಸೇನಾಧಿಕಾರಿಗಳನ್ನು ಕೂಡಲೇ ಬಿಡುಗಡೆಪ್ಪಲ್ಲ ಪರಿಸ್ಥಿತಿ ವಿರೂಪಕ್ಕೆ ಹೋಗುವದೆಂದೂ, ಮುಂಬರುವ ಚುನಾವಣೆಯಲ್ಲಿ ಸರ್ವರೂ ಕೋಂಗ್ರೆಸಿಗೆ ಸಹಾಯ ನೀಡಬೇಕೆಂದೂ ಕೇಳಿಕೊಂಡರು. ಇಂದೋ ನೆಹರು ಸ್ಕಾಲರ್‌ಷಿಪ್‌ಗಳ ವಿಷಯ ಮಾತಾಡುತ್ತಾ ಅವರ ಧೈರ್ಯ ಸಾಹಸಗಳನ್ನು ಹೊಗಳಿದರು.

ಮಂಗಳೂರು.

ಕಾಂಗ್ರೆಸ್ ಚುನಾವಣಾ ಕಚೇರಿ-ಇದೇ ದರುಬರ ೧೯ನೇ ತಾರೀಕಿಗೆ ಕೇಂದ್ರ ಸ್ಯಾಯವಿಧಾಯಕ ಸಭೆಗೆ ಚುನಾವಣೆಯು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಮಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರತ್ನಾಭರಣ, ಉಡುಪಿ.

ನಡೆಯುತ್ತದೆಪ್ಪೆ. ಈ ಚುನಾವಣಾ ಕಾರ್ಯದಲ್ಲಿ ಭಾಗವಹಿಸಿ ಕೆಲಸಮಾಡಲು ಇಚ್ಛಿಸುವ ಸ್ವಯಂಸೇವಕರ ಹಾಗೂ ಇತರ ಮಹನೀಯರ ಸಾಕಾರ್ಯಕ್ಕಾಗಿ ಜಿಲ್ಲಾ ಕಾಂಗ್ರೆಸು ಕಮಿಟಿಯು ಕೂಡಿಯಾಲ ಬೈಲಲ್ಲಿ ಒಂದು ಚುನಾವಣಾ ಕಚೇರಿಯನ್ನು ತೆರೆದಿದೆ. ಚುನಾವಣೆಗೆ ಸಂಬಂಧಿಸಿದ ಕಳಂ ವಿಷಯಗಳನ್ನು ಪತ್ರ ಮೂಲಕವಾಗಲೀ, ಪ್ರತ್ಯಕ್ಷವಾಗಿಯಾಗಲೀ ಈ ಚುನಾವಣಾ ಕಚೇರಿಯಿಂದ ತಿಳಿಕೊಳ್ಳಬಹುದು. ಜನತೆಯು ಪ್ರಯೋಜನಕ್ಕಾಗಿ ದಿನದ ಎಲ್ಲಾ ಸಮಯದಲ್ಲೂ ಈ ಕಚೇರಿಯು ತೆರೆದಿರಲ್ಪಡುತ್ತದೆ.

ನಾಟಕ ಕಲೆಯ ವಿಜಯ ಧ್ವಜ!

ಬಾಳಿನ ನೆಳಲು ಬೆಳಕುಗಳನ್ನು ಚಿತ್ರಿಸುವ ಅದ್ಭುತರಮ್ಯ ಕಥಾನಕ

ಶ್ರೀ. ಎಂ ನಾರಾಯಣರಾಯರ ನವೀನ ನಾಟಕ

ವಿಷಮ ಜೀವನ

ಮಾಸ್ಟರ್ ದೇವಡಿಗಾರ್ ಮತ್ತು ಪಾರ್ಟಿಯವರಿಂದ

ತಾ. **28 12 45**ನೆ ಶುಕ್ರವಾರ ರಾತ್ರಿ **8 30**ಕ್ಕೆ ಸರಿಯಾಗಿ

ಕಲ್ಬಾದೇವಿ ರೋಡಿನ **ಭಾಂಗವಾಡಿಯ** ರಂಗಭೂಮಿಯ ಮೇಲೆ ಅಭಿನಯಿಸಲ್ಪಡುವುದು.

ಈ ಕೆಳಗಿನಲ್ಲಿ ಟಿಕೇಟುಗಳನ್ನು ಮುಂದಾಗಿ ಪಡೆಯಬಹುದು.

The Eastern Art Studio, 2-22 Gunbow Street, Fort BOMBAY.

H. Rama Rao & Sons, 380 Majestic Mansion, Sandhurst Road, Bombay 4

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms

Please ascertain business particulars from any of our Offices at the above places.

Date 25th April 1945.

ಜಿಲ್ಲಾ ಪ್ರದರ್ಶನ

ದಶಂಬ್ರ ತಾ. 21, 22 & 23ರಲ್ಲಿ ಮುಲ್ಕಿಯಲ್ಲಿ ಜರಗುವುದು

ಜಿಲ್ಲಾ ಕಲೆಕ್ಟರರು ಅಧ್ಯಕ್ಷರಿರುವ ಜಿಲ್ಲಾ ಅಭಿವೃದ್ಧಿ ಸಂಘದ ನೇತೃತ್ವ

ದಲ್ಲಿ ಮುಲ್ಕಿ ಸೆಂಟರಿನಲ್ಲಿ ಯತ್ನಿಸಲ್ಪಡುವ ಗ್ರಾಮಾಭಿವೃದ್ಧಿ

ಕಾರ್ಯದ ಸಹಾಯಾರ್ಥವಾಗಿ

ವ್ಯವಸಾಯ ಮತ್ತು ಗೃಹಕೈಗಾರಿಕೆ

ಪ್ರದರ್ಶನವು ನಡೆಯುವುದು.

ಇದು ಯಶಸ್ವಿಯಾಗುವಂತೆ ಎಲ್ಲರ ಸಹಕಾರವು ಅಗತ್ಯವಿದೆ.

ಕೃಷಿ, ಕೈಗಾರಿಕೆ, ಪಶು, ವೈದ್ಯಕೀಯ, ವಿದ್ಯಾ ವಗೈರೆ ಇಲಾಖೆಗಳೆಲ್ಲವೂ ಮುಖ್ಯ ಭಾಗವನ್ನು ವಹಿಸಿಕೊಳ್ಳುವಂತಿದೆ.

ಜಿಲ್ಲೆಯ ಎಲ್ಲವರಿಗೂ ಬಂದು ನೋಡಿ ತಿಳಿಯಲು ಇದು ಸುಸಂದರ್ಭ.

ಹೆಚ್ಚಿನ ಸೂಚನೆಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುಸುಮ.

ತಾರೀಕು 10-11-41 ಮುಲ್ಕಿ.

ಎಮ್. ಆರ್. ಪೂಂಜ, ಕಾರ್ಯದರ್ಶಿ ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ **ಅಮೋಘ ವಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯತಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ಲ ದಿನ್ನಿನ ಚುಟ್ಟಿಗಳು ಹೆಚ್ಚು ಕಡಿಮೆ ಅಲರ್ಜಿಯವಸ್ತುಗಳಿಗೆ ಬದುವವು. ಆದರೆ ಕೇವಲ ೪ ರಷ್ಯಾಗಳೇ ಒಂದು ಬಾಣಂತಿಯನ್ನೆಳ್ಳ ಸಾಕಾಗುವವು. ವಿಶೇಷ ವಿವರಕ್ಕಾಗಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ಮಂ.ಳ.

ನೋಟೀಸು

ಉಡ್ಪಿ ಡಿ. ಮು ಕೋರ್ಟಿನಲ್ಲಿ

O. P. No. 73/1945

ಎ. ಶಂಕರಿಂಗ್ರಪ್ ಆರ್ಜದಾರರ ಮೇಲ್ಕಂಡ ಆರ್ಜೆ ವಿವಹರಣೆಯಲ್ಲಿ ಹೇಳಿದಂತೆ ಬಾಗೋತ್ತ ಕೇಪಪ್ಪಯನ ವಿಧವೆ ಭೀಮಕ್ಕನು ಮೃತಪಟ್ಟು ಸದ್ರಿಯಪಳು ಅವರ ಸ್ವೋಧನದ ಬಾಬ್ತು ಯೂ ಕೆಳಗೆ ವಿವರಿಸಿದ 1 Indian Post Office Savings Bank, Udipi Sub-Office, 2 Canara Banking Corporation Limited, Udipi; 3 The Karnataka Bank Limited, Udipi ಇವುಗಳಲ್ಲಿ ನಿಕ್ಷೇಪಣಾಗಿ ಯಿಟ್ಟ ಅಸ್ಲುಬಿದ್ದಿ ಆ ವಜು ಸಮೂಲು ಪಡೆಯುವಲೆ ಆರ್ಜಿದಾರನು ಹಕ್ಕುದಾರನಾಗಿ ಆ ಮೇರೆಗೆ ಸದ್ರಿ ಆ ವಜು ಸಮೂಲು ಪಡೆಯುವರೆ ತನಗೆ ಸರ್ಟಿಫಿಕೇಟು ಕೊಡುವಂತೆ ಕೊಟ್ಟ ಸದ್ರಿ ಆರ್ಜಿಯು ತಾರೀಕು 4 12 1945ಕ್ಕೆ ಸದ್ರಿ ಕೋರ್ಟಿನಲ್ಲಿ ತಕ್ಕಾಗೆ ಯಿಟ್ಟುರಿಯವರ ಪ್ರೀದಿ ಆ ಕುರಿತು ಆಕ್ಷೇಪ ಹೇಳತಕ್ಕವರು ಸದ್ರಿ ತನ್ನ ದಿನದ ಸದ್ರಿ ಕೋರ್ಟು ಮುಂದೆ ಸ್ವತಹಾ ಸ ಪ್ಲೀದರ್ ನೊಕಾರತರ ಹಾಜರಾ ಾಗಿ ಹೀರು ಮಾಡಿಕೊಳ್ಳತಕ್ಕದ್ದು.

ತಪ್ಪಿಲು

1. Indain Post Office Saving's Bank, Udipi Sub Office--100—14 -3 Pass book account No 52115 of Mangalore Head Office, Udipi Sub-Office, standing in the name of Bheemakka, widow of Bhagavath Shesha-ppaya. 2. Canara Banking Corporation Limited, Udipi-318 0-0 Deposit receipt No. 44/43 dated 4-5-1943 for rupees 300 0-0 granted to Bheemakka, widow of Bhagavath Sheshappaya. 3. The Karnataka Bank Limited, Udipi—530—0—0 Deposit receipt No 49/43 dated 4-5-43 for rupees 500 0-0 granted to Bheemakka widow of Bhagavath Sheshappaya.

Total Rs. 948-14 3.

P. Padmanabha Rao,
B. A. B. L.,
Vakil for Petitioner.

Udipi. Dated 13-11-45.

ದಕ್ಷಿಣ ಕನ್ನಡ

ಮಂಗಳೂರು

ರಿಕ್ರೂಟಿಂಗ್ ಟೀವ್-(ನಿ) ಮಾನಬಾತೆ) ಮೇಜರ್ ಪಿ. ಗೋಪಾಲಯ್ಯ ರಿಕ್ರೂಟಿಂಗ್ ಆಫೀಸರ್-ಇವರ ಜತೆಗೆ ಮಂಗಳೂರಿಗೆ ಬಂದಿದೆ. ದಶಂಬರ ತಾ. 25ರಂದು ಈ ಟೀಮು ಇಲ್ಲಿಗೆ ಬಂದು 26, 27ರಲ್ಲಿ ಇಲ್ಲಿದ್ದು, ಸಂದರ್ಶನ, ಮಾತುಕತೆ, ಸಿನೆಮಾ ಪ್ರದರ್ಶನ-ಇತ್ಯಾದಿ ಕಾರ್ಯಕ್ರಮಗಳನ್ನು ನಿರವೇರಿಸಿ ತಾ. 28ರಂದು ಬೆಂಗಳೂರಿಗೆ ಹೊರಟುಹೋಗುವುದು.

ನೆಹರು ಜಯಂತಿಇದೇತಾ.೧೪ರಂದು ಸ್ಥಳೀಯ ನಗರ ಕಾಂಗ್ರೆಸ್ ಸಮಿತಿಯವರು 57ನೆಯ ಜನ್ಮದಿನೋತ್ಸವವನ್ನು ಆಚರಿಸಿದರು. ಮುಂಜಾನೆಪ್ರಭಾತಫೇರಿ, ಧ್ವಜವಂದನೆಯಿಂದ ಕಾರ್ಯಕ್ರಮವು ಆರಂಭವಾಯಿತು. ಸಂಜೆ ೫ ಗಂಟೆಗೆ, ಕಾಂಗ್ರೆಸ್ ಕಚೇರಿಯಿಂದ ತ್ರಿವರ್ಣ ಧ್ವಜಗಳಿಂದ ಅಲಂಕರಿಸಿದ ಕುದುರೆ ಗಾಡಿಯೊಂದರಲ್ಲಿ ನೆಹರುಗಳ ಚಿತ್ರ ಪಟವನ್ನಿಸಿ, ಪೆರವಣಿಗೆಯಿಂದ ಮೈದಾನವನ್ನು ಪ್ರವೇಶಿಸಲಾಯಿತು. ದಾರಿಯುದ್ದಕ್ಕೂ ನೆಹರುಗಳ ಪಟದ ಮೇಲೆ ಪುಷ್ಪಹಾರ ಹಾಗೂ ಕೈನೂಲಿನ ಹಾರಗಳ ಮಳೆಗರೆಯಲ್ಪಟ್ಟುತಿತ್ತು.

ಮೈದಾನದಲ್ಲಿ ಶ್ರೀ. ಎಂ. ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಗಳಾದ ರಾಮಕೃಷ್ಣ ನಾವಡ, ರಾಮಕೃಷ್ಣ ನಾಯಕ್ ಮುಂತಾದವರು ಪಂಡಿತಜವಹರರ ವ್ಯಕ್ತಿತ್ವವನ್ನು ವಿವರಿಸಿದರು. ಶ್ರೀ. ಸುಬ್ಬಣ್ಣ ತೆಟ್ಟರು ಮಾತನಾಡುತ್ತ, 'ನೆಹರುಗಳೇಂದರೆ ಕಾಂಗ್ರೆಸ್ ನಿರ್ಮಿಸಿದ ಅಣು ಬಾಂಬು. ಸಾಮ್ರಾಜ್ಯ ಶಕ್ತಿಗಳು ತನ್ನ ಸ್ವಾರ್ಥ ರಕ್ಷಣೆಗಾಗಿ ಒಂದು ಅಣು ಬಾಂಬನ್ನು ನಿರ್ಮಿಸಿವೆ. ಅಪಕ್ಕದಿರಾಗಿ ಈ ಅಣು ಗುಂಡು ಸಿದ್ಧವಾಗಿದೆ' ಎಂದರು. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸಿಗೇ ಎಲ್ಲರೂ ಬೆಂಬಲ ಕೊಡಬೇಕೆಂದರು. ಅಪ್ಪರ್ಣ ಮಳೆ ಬಂದುದರಿಂದ ಸಭೆಯನ್ನು ಕೊನೆಗೆಳಿಸಲಾಯಿತು

ಆಜಾದ್ ಹಿಂದ್ ಸೇನಾ— ದಿನಾಚರಣೆಯನ್ನು ಸ್ಥಳೀಯ ವಿದ್ಯಾರ್ಥಿ ಸಂಘದವರು ತಾ. ೧೭ರಂದು ಆಚರಿಸಿದರು. ಸಂಜೆ ಆಜಾದ್ ಹಿಂದ್ ಸೈನಿಕರನ್ನು ಬಿಡುಗಡೆ ಮಾಡಿರಿ, ಜೈ ಹಿಂದ್ ಇತ್ಯಾದಿ ಉದ್ಘೋಷಗಳನ್ನು ಮೊಳಗುತ್ತ ಮೆರವಣಿಗೆ ಹೊರಟು ಕೇಂದ್ರ ಮೈದಾನದಲ್ಲಿ ಶ್ರೀ. ದಾಮೋದರ ಜಾಳಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ವಿದ್ಯಾರ್ಥಿಗಳಾದ ಶ್ರೀ. ರೆಜಿನಾಲ್ಡ್ ಪಿರೇರಾ, ಶ್ರೀ. ಸೂರ್ಯನಾರಾಯಣ ರಾವ್; ಆಡಿಯೋಡಿ ಇವರು ಆಜಾದ್ ಹಿಂದ್ ಸೈನಿಕರು—ದೇಶಪ್ರೇಮಿಗಳು—ದೇಶದ್ರೋಹಿಗಳಲ್ಲ- ಎಂದು ನಿವರಿಸಿದರು. ಈ ಸೈನಿಕರನ್ನು ಕೋರ್ಟ್ ಮಾರ್ಷಲಿಗೆಳಪಡಿಸದೆ ಬಿಡುಗಡೆ ಮಾಡಬೇಕೆಂದು ಸರಕಾರದೊಡನೆ ಕೇಳಿಕೊಳ್ಳುವ ರಠಾವನ್ನು ಶ್ರೀ. ನರಾಯರು ಮಂಡಿಸಿದರು. ಶ್ರೀ. ಯೋಗೀಶ್ವರ ಹೊಳ್ಳರು ರಠಾವನ್ನು ವಿವರಿಸುತ್ತ ಇಂಗ್ಲಿಷಿನಲ್ಲಿ ಭಾಷಣ ಮಾಡಿದರು. ಶ್ರೀ. ಪಾಲ್ಕರ ರಾಮಯ್ಯ ತುಳು ವಿನಲ್ಲಿಯೂ ಭಾಷಣಗೈದರು. ಕೊನೆಗೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಿಂದೂ ಸೇನೆಯ ಜನನ ಧ್ಯೇಯಗಳನ್ನು ವಿವರಿಸಿದರು.

'ಡ್ರಾಗೆಪ್ಪು ಒಂದೇ ಜನಾಂಗ'— ವೆಂಬ ವಿಷಯದ ಕುರಿತು ಚರ್ಚಾ ಸಭೆಯೊಂದು ಸ್ಥಳೀಯ ಎಸ್. ಆರ್.ಎಸ್.ಹೋಮ್ ವಿದ್ಯಾರ್ಥಿ ಭವನದಲ್ಲಿ ನಡೆಯಿತು. ಎಲೋಷಿಯಸ್ ಕಾಲೇಜ್ ಹೊಸ್ಟೆಲ್ ವಿದ್ಯಾರ್ಥಿಗಳೂ ಚರ್ಚೆಯಲ್ಲಿ ಭಾಗವಹಿಸಿದ್ದರು. ಎಸ್. ಪಿ. ಜೊಸೆಫರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಜಯರಾಮ ಲೆಟ್ಟಿ; ನುಹಾಬಲ ತೆಟ್ಟಮೊಹಲಾಪವರು ಪರವಾಗಿಯೂ; ಕಾಂಚಾರಾಮನ್ ಆಡಿಯೋಡಿ; ಮಾಧವನ್ ಕುಟ್ಟಿ ಮೊದಲಾದವರು ವಿರುದ್ಧವಾಗಿಯೂ ಮಾತನಾಡಿದರು. ಕೊನೆಗೆ ವಿಷಯವು ಓಟಿಗೆ ಹಾಕಲ್ಪಟ್ಟಾಗ 'ಭಾರತ ಒಂದೇ ಜನಾಂಗ' ಎಂದಾಯಿತು

ಜಿಲ್ಲಾ ಬೋರ್ಡು ಸಭೆ— ದ. ಕ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ತಾ 27ನೆ ಮಂಗಳವಾರ ಪೂರ್ವಾಹ್ನ 11ಗಳಿಗೆ ಅವರ ಕಾರ್ಯಾಲಯದಲ್ಲಿ ಜರಗಲಿರುವುದು. ಈ ಮಿಟಿಂಗಿನಲ್ಲಿ ಬೋರ್ಡಿನ 1945-46ನೆ ವರುಷದ ತಿದ್ದಿದ ಮತ್ತು 46-47ನೆ ವರುಷದ ಆಂದಾಜು ಆದಾಯ ವೆಚ್ಚಗಳ ಪರಿಶೀಲನೆಯಾಗುವುದು. 1930ರಮುಂಗಳೂರು ಇಲೆಕ್ಟ್ರಿಕ್ ಲ್ಯಾಸೆನ್ಸ್‌ನ ತಿದ್ದುಪಡಿ ಸೂಚನೆಯು ಸಹ ಈ ಸಭೆಯಲ್ಲಿ ವಿಮರ್ಶಿಸಲಾಗುವುದು.

ಗ್ರಾಮಫೋನ್, ರೇಡಿಯೋ ವಿಕ್ರಯ ಅಧಿಕಾರಿಗಳು— ತಮ್ಮಲ್ಲಿರುವ ಗ್ರಾಮಫೋನ್ ರಿಕಾರ್ಡುಗಳು, ಸೂಜಿಗಳು, ರೇಡಿಯೊ ಸೆಟ್ಟಿನ ಪಾರ್ಟುಗಳು ಯಾವ ಯಾವ ತರಗತಿದ್ದು, ಎಷ್ಟೆಷ್ಟು ಕೈಯಲ್ಲಿ ಸವಿವರಗಳನ್ನು ಸೂಚಿಸುವ ಪಟ್ಟಿಯನ್ನು ತಂತಮ್ಮ ಆಫೀಸುಗಳಲ್ಲಿ ಸರ್ವ ಜನರಿಗೂ ದೃಷ್ಟಿಗೆ ಬೀಳುವ ಸ್ಥಳಗಳಲ್ಲಿ ಹಾಗೂ ಹಾಕಬೇಕಾಗಿದೆಯೆಂದು ಜಿಲ್ಲಾ ಕಮರ್ಶಿಯಲ್ ಟೀಕ್ಸ್ ಆಫೀಸರರ ಪ್ರಕಟಣೆ ಹೊರಬಿದ್ದಿದೆ.

ಕನ್ನಂಗಾಡಿನಲ್ಲಿ ವಿಜಯಾ ಬೇಂಕಿನ ಶಾಖೆಯು— ತಾ 17ರಲ್ಲಿ ಶ್ರೀ. ವಿ. ಆಪ್ಪ ಸ್ವಾಮಿ ಬೆಟ್ಟಿ, ಬಿ. ಎ. ರೆಜಿಸ್ಟ್ರಾರ್ ಡಿಪಾರ್ಟ್‌ಮೆಂಟ್ ಆಫೀಸರ್, ಪುತ್ತೂರು. ಇವರ ನೇತೃತ್ವದಲ್ಲಿ ತೆರೆಯಲ್ಪಟ್ಟಿತು. ರಾವ್ ಬಹದೂರ್ ಕೆ. ಟಿ. ಆಳ್ವರು ಬೇಂಕಿನ ಡೈರೆಕ್ಟರ ಮಂಡಳಿಯ ಪರವಾಗಿ ಸುಸ್ವಾಗತವನ್ನಿತ್ತರು. ಶ್ರೀಗಳಾದ ನಾರಾಯಣದಾಸ್, ಎಡ್ವೋಕೇಟ್, ಮಂಗಳೂರು, ಉಮೇಶರಾವ್, ವಕೀಲ್, ಕಾಸರಗೋಡು, ಪುದುಲೋಕ ಭಟ್, ವಕೀಲ್, ಪುತ್ತೂರು ಮೊದಲಾದವರು ಸಂಘರ್ಷಭರಿತ ಸೂತ್ರಗಳನ್ನಾಡಿ ಶುಭವಿಯು ಜನಪ್ರೀತನಾಗಿ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಕೋರಿದರು. ಜ.ಕ. ಜಿಲ್ಲೆಯು ವಿದ್ಯಾಸ್ಥಳಗಳು, ಬೇಂಕಿಂಗ್ ಸಂಸ್ಥೆಗಳ ವಿಸ್ತರಣೆ ನೋದಲಾದ ವಿಷಯಗಳಲ್ಲಿ ಪುಣ್ಯಾಸು ಪ್ರಾಂತ್ಯದಲ್ಲಿಯೇ ಅಗ್ರಸ್ಥಾನ ಪಡೆದಿದೆ. ನೂತನ ವಿದ್ಯಾಸಂತ ನಾಯಕರುಳ್ಳ ವಿಜಯಾ ಬೇಂಕು ಸಹ ಬೇಕಿನ ಪಾಲುಗಳನ್ನು ಸ್ವಜಾತಿಯಲ್ಲಿದ್ದ ಇತರ ಸಜಾತಿಯವರಿಗೂ ಕೊಡುವರೆ ನಿರ್ಧರಿಸಿದುದು ಬೇಕಿನ ಡೈರೆಕ್ಟರರ ಪುನೋ ವಿಶಾಲತೆಯನ್ನು ಸ್ಪಷ್ಟಪಡಿಸುವಂತಹುದು. ಮದ್ರಾಸ್ ಪ್ರಾಂತದ ಹೊರ ಪ್ರಾಂತಗಳಲ್ಲೂ ವಿಜಯಾ ಬೇಕಿನ ಶಾಖೆಗಳು ತೆರೆಯುವರಾಗಲೆಂದು ಬಯಸಿ ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು. ಉಪಾಹಾರ ಶ್ರೀ. ಕೆ. ಸದಾನಂದ ಹೆಗ್ಡೆ, ಎಡ್ವೋಕೇಟ್, ಮಂಗಳೂರು ಇವರಿಂದ ಧನ್ಯವಾದಾರ್ಪಣೆ ಕಾರ್ಯಕ್ರಮಗಳಿಂದ ಸಭೆಯು ವಿಸರ್ಜನೆಗೊಂಡಿತು.

ಧರ್ಮಸ್ಥಳ- ತ್ರಿವಳಿ ವರ್ಷಾವಧಿಯಂತೆ ಈ ವರ್ಷವೂ ತಾ 30-11 45ನೇ ಬುಧವಾರದಿಂದ 4 12 45 ನೇ ಮಂಗಳವಾರದ ವರೆಗೆ ದೀಪೋತ್ಸವವೂ, ಊರು ಪರ ಊರುಗಳ ಭಾನ ವಿದ್ವಾಂಸರ ಸೇರುವಿಕೆಯಿಂದ ವಿವಿಧ ಮತ ಧರ್ಮ ಸಮ್ಮೇಳನವೂ ನಡೆಯಲಿರುವುದು

ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸ್ ಕಮಿಟಿ-ಕೊಂಗ್ರೆಸ್ ಸಭಸ್ಯರನ್ನು ಸೇರಿಸಿಕೊಳ್ಳುವ ಕಾರ್ಯವು ಈ ತಿಂಗಳ ಅಂತ್ಯದೊಳಗೆ ಮುಗಿಯಬೇಕಾಗಿದೆ. ಹಿಂದೆ ಕೊಟ್ಟ ಪುಸ್ತಕಗಳನ್ನೂ ಅವುಗಳ ಜಾಮೀನು ಹಣವನ್ನೂ ಕೂಡ್ಲೆ ಈ ವಿಚಾರಿಗೆ ಮುಟ್ಟಿಸುವುದು. ಹೆಚ್ಚಿಗೆ ಪುಸ್ತಕಗಳು ಬೇಕಾದಲ್ಲಿ ಮೂರು ಟಪ್ಪಾಲಿಗೇನೇ ತಿಳಿಸಬೇಕು. ಒಟ್ಟು ಪುಸ್ತಕಗಳನ್ನು ಸಾಮಾನು ಪಡೆಯಕೂಡದೆಂದು ಪ್ರಾಂತಿಕ ಕಮಿಟಿಯವರು ನಿರ್ಧರಿಸಿದಾರೆ ಅವ್ಯವಧಿಜವುಗಳನ್ನು ಪೂರಾ ಉಪಯೋಗಿಸಿ ಹೊಸ ಜನರಾ ಮೂಡತಕ್ಕದ್ದು. ಎಂದು ಪ್ರಧಾನ ಕಾರ್ಯದರ್ಶಿ ಶ್ರೀ. ಎಚ್. ನಾರಾಯಣ ರಾಯರು ತಿಳಿಸುತ್ತಾರೆ.

ಕಾರ್ಕಳ

ವರ್ಗದಾರರ ಸಭೆಯು— ತಾ 16ರಲ್ಲಿ ಸಂಜೆ ಎಸ್. ಆರ್ ಎಸ್. ಹೋಮಿನಲ್ಲಿ ಶ್ರೀ. ಕೆ. ಕೃಷ್ಣ ಶೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಬರ್ತ್ ಆಕ್ಟಿ ರಿಜಿಸ್ಟರನ್ನಿಟ್ಟಿರುವಾಲಕು ಅಧಿಕಾರಿಗಳು ಕೈಕೊಂಡ ಫೋರಣೆಯ ರೀತಿ ನೀತಿಗಳನ್ನು ಸೂಕ್ಷ್ಮರೀತಿಯಲ್ಲಿ ಪರಿಶೀಲಿಸಲಾಯಿತು. ಬೇಸಾಯಗಾರರ ಆತ್ಯಾವಶ್ಯಕಗಳಿಗೆ ಬೇಕಾಗುವಷ್ಟು ಸಹ ಬಿಡದೆಯೂ ನಿಷೇಪಾದ ಉತ್ಪತ್ತಿಯಿಸ್ಪೆಂಬುದನ್ನು ವಿಮರ್ಶಿಸದೆಯೂ ಒಂದೇ ಸವನೆ ಸ್ಟೋರುಗಳಿಗೆ ಪಾಪತಿ ಮಾಡಲು ಕೊಟ್ಟ ರಿಕ್ವಿಜಿಶನ್ ನೋಟೀಸುಗಳಿಂದಾಗಿ ಬೇಸಾಯಗಾರರು ಕಂಗೆಟ್ಟಿರುತ್ತಾರೆ. ಆಜಿಕಾರು ವಿಕಾದಲ್ಲಿ ಪರಿಸ್ಥಿತಿ ತೀರಾ ಘನ್ನವಾಗಿದೆ. ಈಗ ಕೊಟ್ಟಿರುವ ರಿಕ್ವಿಜಿಶನ್ ನೋಟೀಸುಗಳನ್ನು ಕಾರ್ಯತಃ ಪಾಲಿಸಲು ಸಾಧ್ಯವಿಲ್ಲವೆಂಬುದನ್ನು ಜಿಲ್ಲಾ ಕಲೆಕ್ಟರರ ಗಮನಕ್ಕೆ ತರಬೇಕೆಂದಾಯಿತು. ತಾಲೂಕು ತಹಶೀಲ್ದಾರರು ಧನಿಗಳಿಗೆ ವಕ್ಕಲುಗಳು ಸಲ್ಲಿಸಬೇಕಾದ ಗೇಣಿ ಬಾಪತಿ ಅಕ್ಕಿಯನ್ನು ಒಯ್ಯಲು ವರ್ಗದಾರರಿಗೆ ಪರ್ಮಿಟುಗಳು ಇನ್ನೂ ಹೊರಡಿಯಲಿಲ್ಲ ರಿಕ್ವಿಜಿಶನ್ ನೋಟೀಸುಗಳಂತೆ ವಕ್ಕಲುಗಳು ಧನಿಗೆ ಕೊಡುವ ಅಕ್ಕಿಯನ್ನು ಸ್ಟೋರುಗಳಿಗೆ ಸಾಗಿಸುತ್ತಿಲ್ಲವಾದರೆ ಇದರಿಂದಾಗಿ ಧನಿಗಳಿಗೂ ತುಂಬಾ ಕಷ್ಟ ನಷ್ಟವುಂಟಾಗಲಿದೆ ಆದುದರಿಂದ ತಾಲೂಕು ತಹಶೀಲ್ದಾರರು ಕೂಡಲೇ ಪರ್ಮಿಟುಗಳನ್ನು ಕೊಡಬೇಕಾಗಿ ಅವರನ್ನು ಏನಂತಿಸಲಾಯಿತು. ಈ ಎಲ್ಲಾ ವಿಷಯಗಳನ್ನು ಜಿಲ್ಲಾ ಕಲೆಕ್ಟರರಿಗೂ ಕುಂದಾಪುರ ಡಿವಿಸನಲ್ ಆಫೀಸರ್, ತಾಲೂಕು ತಹಶೀಲ್ದಾರ್ ಮೊದಲಾದವರಿಗೂ ತಿಳಿಸಬೇಕೆಂದಾಯಿತು.

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?- ಇಲ್ಲ-

ಸಂ... ಸೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಆದು

'ಜುಪಿಟರ್' (ದೇವತೆಗಳ ರಾಜ)ನ ಅನುಗ್ರಹದಿಂದ ಮಾತ್ರಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ

'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ,ಏಜಂಟರು ಮತ್ತು ಒರ್ಗನೈಸ್ಸುರೆರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,

ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache. Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ಪಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರಬೇಕಾದ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 4ರಿಂದ 8ಟೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 2ಟೊಟ್ಟು ಲವಂಗ ಯಾ ಏಲಕ್ಕಿ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ. ದ. ಕ

ಉಡುಪಿ ಸ್ಟಾಕಿಸ್ಟರು.—ಡಾ। ನಾಯಕ್ಸ್ ಕೆನ್ಸಲ್ಟಿಂಗ್ ಕೆಮಿಸ್ಟ್ಸ್ ಎಂಡ್ ಫಾರ್ಮೆಸಿಸ್ಟ್; ಡಾ। ಆರ್. ಎಸ್. ರೆಡ್ಡಿ, ರಥಬೀದಿ; ಡಾ। ಪಿ. ಜಿ. ಆಚಾರ್ಯ ಫಾರ್ಮೆಸಿಸ್ಟ್; ಡಾ। ಕೆ. ಕೇಶವ ಗಿಂಜೆ, L I M ; ಡಾ। ವೆಂಕಟರಾವ್, ಕೂರಡ್ಕಲ್; ಸವಭಾರತ ಬುಕ್ ಡಿಪೊ.

ಮುಟ್ಟಾಗುವಿಕೆ

ಹಲವಿಂಗಳಿಂದ ಕಟ್ಟಾಗಿದ್ದರೂ, ಕಸ್ತದ ಗರ್ಭಧಾರಣೆ ಆಥವಾ ಇನ್ನಾವಕಾರಣವಿದ್ದರೂ— **'ಋಮಾರಿ ಮಾತ್ರೆಗಳು'** ನಿಶ್ಚಿತ ಪರಿಪಕ್ವವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3।- ಕೈವಿಯೊದ ಕೇಸುಗಳಿಗೆ ರೂ. 5- 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4।- (ವಿ. ಪಿ. 12 ಆಣೆ ಆಲಾದುದು.)

Mrs. P. DEVEE,

F. D. S. (A. E.) Tollygunge, Calcutta.

ಖ್ಯಾತಿಸ್ಟ್: ಪಾ ಅಂಬಿನಿ, ಮಂಗಳೂರು

ESTD. 1926

CROWN RUBBER STAMP Co.

MFRS OF RUBBER STAMPS & ENGRAVERS

BALMATTA ROAD MANGALORE S.K.

Approved firm by the Govt. of Mysore
Certified by the Agent of the Govt. of India.

ಕೇಂದ್ರ ಅಸೆಂಬ್ಲಿಯ ಕಾಂಗ್ರೆಸ್ ಹುರಿಯಾಳು

ಶ್ರೀ ಎ. ಕರುಣಾಕರ ಮೇನೋನ್, ಬಿ. ಎ., ಬಿ. ಎಲ್. ರವರ ಸೂಕ್ಷ್ಮ ಪರಿಚಯ

ಇವರು ಮೂಲಬಾದದ ಸುಪ್ರಸಿದ್ಧ ಕುಲೀನ ಮನೆತನದ ಮಾಜಿ ಜಾಹೂರಿನರ ಪುತ್ರ. ವಿದ್ಯೆ ಸಂಪತ್ತು ಬ್ಯಾತಿಗಳಿಂದ ಮೆರೆದ ಕುಟುಂಬಿಕರಿದ್ದು, ತಾನೂ ಅಂತೆಯೇ ಬೆಳಗಿ ೧೯೧೪ರಲ್ಲಿ ಹೈಕೋರ್ಟು ವಕೀಲಿ ಸಾಸು ಮಾಡಿ ವಕೀಲ ವೃತ್ತಿಗೊಂಡು ಸಾರ್ವಜನಿಕ ರಾಷ್ಟ್ರೀಯ ಬೆಳವಣಿಗೆಗೆ ತನುಮನ ಧನಗಳನ್ನು ಅರ್ಪಿಸಿ ತ್ಯಾಗಪೂರ್ವಕವಾದ ಸಮಾಜಸೇವೆಯನ್ನು ಸರ್ವತೋಮುಖವಾಗಿ ಇಂದಿನ ವರಗೆ ಸಾಧಿಸಿರುವ ನಿಷ್ಕಾಪಂತ ದೃಷ್ಟಾಳು. ಸಹಕಾರಿ ಸಂಸ್ಥೆಗಳಲ್ಲಿ ಅಧಿಕಾರ ಸ್ಥಾನಗೊಂಡಿರಲು ಸಂಸ್ಥೆಗಳ ಅಭಿವೃದ್ಧಿಯನ್ನು ಸಾಧಿಸುವುದರೊಂದಿಗೆ ಜನತೆಯ ಪಿತಾನುಕೂಲತೆಗಳನ್ನೂ ಸಾಧಿಸಿದರು. ಕಲ್ಲಿಕೋಟಿಯ ನಗರಸಭೆಯ ಸದಸ್ಯತನದಲ್ಲಿ ದ್ದು ನಾಗರಿಕರ ಸ್ಥಿತಿಸುಧಾರಣೆಯನ್ನು ಹಾಗೂ ಅಲ್ಲಿನ ಕೆಲಸಗಾರರ ಸರ್ವತೋಮುಖ ಸಾಪ ಉನ್ನತಿಗಾರ ಸೇವೆಗೆ ಮೈಯ್ಯೊಡ್ಡಿ ದುಡಿದ ನುಂದಾಳು ವಕೀಲರ ಸಂಘಗಳಲ್ಲಿ ಇವರಿಗೆ ಅಗ್ರಸ್ಥಾನವಿತ್ತು. ಸಾಹಿತ್ಯಮತ್ತು ಪ್ರತ್ರಿಕೋದ್ಯಮಗಳಲ್ಲಿ ಹುರುಪಿನಿಂದ ನುಂಗೊತ್ತಿ ಜನಪ್ರೀತವಾದ ಕೇರಳದ ದೈನಿಕ "ಮಾತೃಭೂಮಿ"ಯ ಪ್ರಮುಖ ಸಂಸ್ಥಾಪಕರಿರುವರು.

ಆದರೆ ೧೯೨೦ರಲ್ಲಿ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಅಸಹಕಾರ ಚಳವಳಿಯು ಪ್ರಾರಂಭವಾಗೊಡನೆ ತಮ್ಮ ವಕೀಲ ವೃತ್ತಿಗೆ ತಿಲಾಂಜಲಿಯನ್ನಿತ್ತರು ಆಂದಿನಿಂದ ಇಂದಿನ ವರಗೆ ಕಾಂಗ್ರೆಸ್ಸಿನ ನಿಶ್ಚಲ ಭಕ್ತರಾಗಿಪ್ಪ ಜನತೆಗೆ ಅವಿಶ್ರಾಂತ ಸೇವೆಯನ್ನು ಸಲ್ಲಿಸುತ್ತಲೇ ಇರುವರು. ದಿರ್ಘಕಾಲದ ವರೆಗೆ ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕೋಶಾಧ್ಯಕ್ಷರಾಗಿದ್ದರು. ೧೯೨೧ರ ಮಾಪಿಳ್ಳೆ ದಂಗೆಯ ೧೯೨೪ರ ಭಯಂಕರ ನರಹಾರಳೆಯ ಸಮಯ ಜನರದಾರುಣ ಸಂಕಟನಿವಾರಣೆಗಾಗಿ ಕಾಂಗ್ರೆಸ್ ಕೈಕೊಂಡ ಕಾರ್ಯಕ್ರಮಗಳಲ್ಲಿ ಬಿಡುವಿಲ್ಲದೆ ದಕ್ಷತೆಯಿಂದ ದುಡಿದು ಸಮಸ್ತ ಜನರ ಪ್ರಶಂಸೆಗಳನ್ನು ಗಳಿಸಿದ್ದಾರೆ. ಕೆಲವು ಪ್ರಾಂತಿಕ ಎಸೆಂಬ್ಲಿ ಚುನಾವಣೆಯಲ್ಲಿ ಇವರು ಮುಲ್ಲಾಪುರಂ ಕ್ಷೇತ್ರದಿಂದ ಆತ್ಯಧಿಕ ಬಹುಮತದಿಂದ ಆರಿಸಿಬಂದಿದ್ದೇ ಇವರ ಜನಪ್ರಿಯತೆಗೆ ಸಾಕ್ಷಿ. ಇವರಿಗೆ ೭೯ ಸಾವಿರ ಮತಗಳು ಬೀಳುವಾಗ ಬಲಾಢ್ಯನೆನಿಸಿದ್ದ ಇವರ ಇದಿರಾಳಿಗೆ ಕೇವಲ ೨ ಸಾವಿರ ಮತಗಳಿಂದಿಗುವುದೂ ಕಷ್ಟವಾಗಿತ್ತು.

೧೯೪೦-೧೯೪೧ರಲ್ಲಿ ನನೆದ ವೈಯುಕ್ತಿಕ ಸತ್ಯಾಗ್ರಹದಲ್ಲಿ ಇವರಿಗೆ ಒಂದು ವರ್ಷದ ಶಿಕ್ಷೆಯೊಂದಿಗೆ ದಂಡನೆಯೂ ಒದಗಿತು. ೧೯೪೨ರಲ್ಲಿ ಇವರನ್ನು ಸರಕಾರವು ಹೊತ್ತ ನೊದಲಲ್ಲೇ ಸೆರೆಯಿಡಿದು ಎರಡೂವರೆ ವರ್ಷಗಳ ತವಕ ಸ್ಥಾನಬದ್ಧ ಕೈದಿಯಾಗಿ ಮಾಡಿತು. ಪ್ರಸಿದ್ಧ ನಾರಾಯಣ ದೇವಪಳ್ಳಿಯ ಹರಿಜನರಿಗೆ ಪ್ರವೇಶದೊರೆಯಲು ಹೂಡಿದ ಜಳವಳಿಯಲ್ಲಿ ಪ್ರಮುಖಪಾತ್ರ ವಹಿಸಿದ ಇವರಿಗೆ ಸೈಲಿನಿಂಬ ಬಿಡುಗಡೆಯೊನೊಡನೆ ಹರಿಜನ ಸೇವಕ ಸಂಘದ ಅಧ್ಯಕ್ಷ ಸ್ಥಾನವು ಅರ್ಪಿಸಲ್ಪಟ್ಟಿತು.

ಜೈಲಿನಲ್ಲಿ ಅಧಿಕಾರಿಗಳ ತಿರುಕುಳಗಳು ಪ್ರಬಲಗೊಂಡಾಗ ಅವನ್ನು ಸಾಮೂಹಿಕವಾಗಿ ಅನ್ನ ಸತ್ಯಾಗ್ರಹದ ಮೂಲಕ ಎದುರಿಸುವ ಪ್ರಸಂಗಗಳಲ್ಲಿ ಇವರ ಕೆಚ್ಚೆದೆಯ ಧೈರ್ಯ ಸ್ಥೈರ್ಯಗಳು ಆದರ್ಶವಾಗಿದ್ದವು. ಟೆನ್ನಿಸ್‌ಕಮಿಟಿ, ಕೋಪರೇಟಿವ್ ಕಮಿಟಿ ಮೊದಲಾದವುಗಳ ಕಾರ್ಯಕಾರೀ ಸದಸ್ಯರಿದ್ದು ಆಸ್ಟಿಯಿಂದ ಇತೀ ಪ್ರಾಂತ್ಯದ ಮುಖ್ಯವಾಗಿ ಪಶ್ಚಿಮ ಕರಾವಳಿಯ ಒಕ್ಕಲುತನ, ಪ್ರಮೇಜೀವಿಗಳ ಬದತನದ ೀಕ್ಷತೆ, ಭೂಕರದಾಯದ ಹಾಗೂ ಜಂಗಲಿ ಕಾನೂನಿನ ಅತಿಕ್ರಮ, ಪಾಣಿಜ್ಯ ನೊದಲಾದ ಆರ್ಥಿಕ ಪರಿಸ್ಥಿತಿ, ನುಂತಾದ ಅನೇಕ ಸಾರ್ವಜನಿಕ ಸಮಸ್ಯೆಗಳನ್ನು ಆಮೂಲಾಗ್ರವಾಗಿ ವ್ಯಾಸಂಗ ಮಾಡಿದ ನುರಿತ, ಜುಂಬಾಳಾದ ಈ ಜನಪ್ರಿಯ ವ್ಯಕ್ತಿ, ತ್ಯಾಗಮೂರ್ತಿ ವೇದಸೇನಾ ಘುರಂಧರರಾದ ಶ್ರೀ ಅಯ್ಯಾಲ್ಕಾರ್ ಕರುಣಾಕರ ಮೇನೋನರನು ನೀಲಗಿರಿ, ಮಲಬಾರು ಪ್ರಕ್ಷಣಕನ್ನಡ ಮತತಾರ ಕ್ಷೇತ್ರದ ಹಕ್ಕುಬಾಧ್ಯತೆಗಳನ್ನು ಚೆನ್ನಾಗಿ ಪ್ರತಿಪಾದಿಸಿ ದುಡಿಯುವ ವರೆಂಬ ಉತ್ಕಟ ಭರವಸೆಯಿಂದ ಕಾಂಗ್ರೆಸ್ ಕಾಲಿಗೆನೆಂಬರ ಬೋರ್ಡಿನವರು ಪುರಿಯಾಳಾಗಿ ನಿಲ್ಲಿಸಿದುದು ಸ್ತುತ್ಯರ್ಹವಾಗಿದೆ.

ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಪರಿಷತ್ತು

ತಾರೀಕು 23-12-45ನೇ ಆದಿತ್ಯವಾರ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಪರಿಷತ್ತು ಮೂಲ್ಕಿಯಲ್ಲಿ ಜರಗಿಸುವುದಾಗಿ ನಿಶ್ಚಿಸಿ, ಮೂಲ್ಕಿಯಲ್ಲಿ ಸ್ಥಾಪಿತವಾದ ಸ್ವಾಗತ ಕಮಿಟಿಯು, ಮೂಲ್ಕಿ ಪ ಆನ್ಪಾಸಿನ ಗ್ರಾಮಾಭಿವೃದ್ಧಿ ಕ್ಷೇತ್ರಕ್ಕೆ ಸೇರಿದ 38 ಗ್ರಾಮಗಳ ಬಂಟರ ಸಮಾಜದ ವಿದ್ಯಾರ್ಥಿ ನಿದ್ಯಾರ್ಥಿನಿಯರಿಗೆ ಸಹಾಯ ಕೊಡಲು ಫಂಡು ಬಂದನ್ನು ನಿರ್ಪಾದಿಸುವುದಾಗಿ ನಿಶ್ಚಿಸಿರುತ್ತಾ ಈ ಕೆಳಗಿನ ಮಹನೀಯರಿಂದ ಕಾಣಿಸಿದ ಸಹಾಯಧನವು ಬಂದಿರುತ್ತದೆ.

1 ಶ್ರೀಗಳಾದ ಅತ್ತಾವರ ತಿಮ್ಮಪ್ಪ ಪೂಂಜರು ರೂ. 200, 2 ಯಂ. ಆರ್. ಪೂಂಜ ಮತ್ತು ಮಕ್ಕಳು 100, 3 ಡಾಕ್ಟರ್ ರಾಮಣ್ಣ ಶೆಟ್ರು ನುಂಡ್ಡೂರು 50, 4 ಕೊಳ್ನಾಡು ಜಾಕೆ ಸಂಜೀವ ಶೆಟ್ರು 50, ಸುಬ್ಬಯ್ಯ ಶೆಟ್ರು ಹಿರೆಮನೆ, ಅ್ಯಕಳ 25, ಪಡುಬಿದ್ರಿ ನಡಿಸಾಲು ಕೃಷ್ಣ ಶೆಟ್ರು 25, ಮೂಲ್ಕಿ ಸಿದ್ಧು ಶೆಟ್ರು 25, ಕಕ್ಕ ರಂಗನಾಥ ಶೆಟ್ರು (ಟ್ರೇಂಚ್ ಮೆನೇಜರ್, ಟ್ರೋಪಿಕಲ್) 25. ಜುಮ್ಲಾ ರೂ. 500.

ಪರಿಷತ್ತಿಗೆ ಇನ್ನು ಕೆಲವು ಮಾತ್ರ ದಿನಗಳ ರುವುದರಿಂದ ಸ್ವಾಗತ ಕಮಿಟಿಯವರು ಕೈಗೊಂಡ ಈ ಮಹತ್ತಾವ ಪುಣ್ಯಕಾರ್ಯಕ್ಕೆ ಬೆಂಬಲವಿತ್ತು ಉದಾರ ಮನಸ್ಸಿನಿಂದ ಸಹಾಯಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಅವಶ್ಯವಿದ್ದಲ್ಲಿಗೆ ನುಂದಿ ಸ್ವಾಗತ ಕಮಿಟಿ ನುಂಬರಬರಿಗಿ ಸೇರಬೇಕಾಗಿಯೂ. ಸೇರಿದ ಪ್ರತಿಯೊಬ್ಬರು ತಮ್ಮು ಸ್ನೇಹಿತರುಗಳಿಂದ ಕನಿಷ್ಠ ರೂಪ್ಯಾ 240ರಿಂದ ರೂಪ್ಯಾ 100, 200ರ ಸಹಾಯವನ್ನು ಸಹಾಯ ಫಂಡಿಗೆ ಸಂಗ್ರಹಿಸಿ ಅನುಕೂಲವಾದೆರೆ ತಾರೀಕು 10-12-45ರ ಒಳಗೆ, ನಂತರ ಪರಿಷತ್ತಿನ ಮುಂಚಿತವಾಗಿ ಕಳುಹಿಸಿಕೊಡಬೇಕಾಗಿಯೂ ಕೇಳಿಕೊಳ್ಳುನೆವು.

ಪರಿಷತ್ತು ತಾ. 23 12 45ನೇ ಆದಿತ್ಯವಾರ ಪೂರ್ವಾಪ್ಹ ಘಂಟೆ 9-30ರಿಂದ ಘಂಟೆ 12 30ರ ತನಕ ಅಗತ್ಯವಾಪಲ್ಲಿ ನಂತರ ನ್ಗೂ ಜರಗುವುದು. ಪರಿಷತ್ತಿನಲ್ಲಿ ಚರ್ಚಿಸಲಿದಲು ಬೇಕೆನ್ನುವ ವಿಷಯಗಳನ್ನು ತಾರೀಕು 10-12-45ರ ಒಳಗೆ ಕಳುಹಿಸಿರಿ.

ಸ್ವಾಗತ ಕಮಿಟಿ ಮೆಂಬರರಾದವರೆಲ್ಲರೂ ತಪ್ಪದೆ ಪರಿಷತ್ತಿಗೆ ಬರಬೇಕಾಗಿರುತ್ತದೆ. ಕಾಲಸ್ಥಿತಿಯಲ್ಲಿ ಮುಂದಾಗಿ ತಿಳಿದು ವಿಳೆವಾರುಗಳು ಮಾಡಬೇಕಾದ್ದರಿಂದ ತಾ. 23-12-45ರಲ್ಲಿ ಬೆಳಗಾತ ಘಂಟೆ 8ರಿಂದ 9ರ ತನಕದ ಕಾಫಿ ಫಲಹಾರಕ್ಕೂ, ಮಧ್ಯಾಹ್ನ 1ರಿಂದ 2ರ ಸಮಯದ ಭೋಜನಕ್ಕೂ, ಬರುವ ಸ್ವಾಗತ ಕಮಿಟಿ ಮೆಂಬರರು ತಾ. 15-12-45ರ ಒಳಗೆ ತಿಳಿಸಿ, ಜಿಲ್ಲಾ ಪ್ರದರ್ಶನವು ದಿನವೇ ತಾ. 21 12-45ಕ್ಕೆ ಆ ಸಮ್ಮಂಧದ ತಮ್ಮ ಹೆಸರ ಟೀಕೀಟನ್ನು ಪಡಿಯುವಂತೆಯೂ ಕೇಳಿಕೊಳ್ಳುನೆವು.

ಎಮ್. ಸಿದ್ದು ಶೆಟ್ಟಿ,
ಸ್ವಾಗತ ಕಮಿಟಿ ಕಾರ್ಯದರ್ಶಿ & ವಿಜಾಸ್ಥಿ,
ಬಂಟರ ಯಾನೆ ನಾಡವರ ಸಂಘದ ಪರಿಷತ್ತು.

ಮುಲ್ಕಿ, ತಾ. 12-11-45.

ಮದರಾಸಿನಲ್ಲಿ ೨೯ನೆಯ ಕನ್ನಡ ಸಾಹಿತ್ಯ ಪರಿಷತ್ತು

-ಈ ಬಾರಿ ಕನ್ನಡ ಸಾಹಿತ್ಯ ಪರಿಷತ್ತು ಮದರಾಸಿನಲ್ಲಿ ವರ್ಷಂಬರ ತಾ. 26, 27, 28 ಈ ಮೂರು ದಿನಗಳಲ್ಲಿ ನಡೆಯಲಿದೆ. ಈ ಮಹೋತ್ಸವಕ್ಕೆ ಶ್ರೀ. ಸಿ ರಾಜಗೋಪಾಲಾಚಾರ್ಯರು ಉಘ್ಘಾಟಕರಾಗಿಯೂ, ಶ್ರೀ. ಟಿ. ಪಿ. ಕೈಲಾಸಂ ಅವರು ಸಮ್ಮೇಲನಾಧ್ಯಕ್ಷರಾಗಿಯೂ, ಶ್ರೀ. ಡಾ. ಯು. ರಾಮರಾಯರು ಸ್ವಾಗತಾಧ್ಯಕ್ಷರಾಗಿಯೂ ದೊರೆತುದು ಮತ್ತೊಂದು ಸಂತೋಷದ ವಿಷಯ. ಕನ್ನಡಿಗರ ಸಾಂಸ್ಕೃತಿಕ ಏಕೀಕರಣವನ್ನೇ ನುುಖ್ಯ ಧ್ಯೇಯವಾಗಿಟ್ಟುಕೊಂಡಿರುವ ಈ ಸಮ್ಮೇಲನದ ಮೂರು ದಿನಗಳ ಕಾರ್ಯಕಲಾಪಗಳಲ್ಲಿ- ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ಕಲಾ ಪ್ರದರ್ಶನ, ಪುಸ್ತಕ ಪ್ರದರ್ಶನ, ಪತ್ರಿಕಾ ಪ್ರದರ್ಶನ, ವಿವಿಧ ವಿನೋದಾವಳಿಗಳು, ನುಂತಾದ ಕಾರ್ಯಭಾಗಗಳು ಬರಲಿವೆ ಇಂದು ಮದರಾಸು ಕನ್ನಡನಾಡಿನಿಂದ ಹೊರಗಿದ್ದು ಇಲ್ಲಿ ಇಂತಹ ಕಾರ್ಯಕಲಾಪಗಳಿಗೆ ಸುಮಾರು ಏಳು ಸಾವಿರ ರೂಪಾಯಿಗಳ ಬರ್ಚು ತಗಲುವದೆಂದು ಅಂದಾಜುಮಾಡಲಾಗಿದೆ. ಹೇಗಿದ್ದರೂ ಮದರಾಸಿನ ಕನ್ನಡಿಗರು ಇತರ ಪ್ರಾಂತದ ಕನ್ನಡಿಗರ ಸಹಾನುಭೂತಿಯನ್ನು ಹಾರೈಸಿ ಕೆಚ್ಚೆದೆಯಿಂದೆ ಪರಿಷತ್ತನ್ನು ಸ್ವಾಗತಿಸಿದ್ದಾರೆ. ಮದರಾಸಿನಂತಹ ಮಹಾ ನಗರದಲ್ಲಿ ಕನ್ನಡ ಬಾವುಟ ಹಾರಿತೆಂದರೆ ಅದು ಇಡಿ ಕನ್ನಡ ನಾಡಿಗೇ ಜೆಮ್ಮೆಯ ವಿಷಯ. ಇದರಿಂದ ನುದರಾಸಿನ ಇತಿಹಾಸದಲ್ಲಿ ಅಪೂರ್ವವಾದ ಈ ಉತ್ಸವವನ್ನು ಯಶಸ್ವಿಗೊಳಿಸಲು ಅಖಿಲ ಕರ್ನಾಟಕದ ಕನ್ನಡಿಗರೆಲ್ಲರೂ ಕೊಡುಗೈಯಿಂದ ನುುಂದೆ ಬಂದು ಕನ್ನಡ ತಾಯಿಯ ಸೇವೆಯಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥಿಸುತ್ತೇವೆ.

ಆಂಧ್ರಾ ನಿವರು:-ಪೋಷಕರು ರೂ. 100 ಅಥವಾ ಹೆಚ್ಚಿಗೆ. ಸದಸ್ಯರು ರೂ. 35 ಅಥವಾ ಹೆಚ್ಚಿಗೆ. ನುಹಿಳಾ ಸದಸ್ಯರು ರೂ. 10 ಅಥವಾ ಹೆಚ್ಚಿಗೆ. ಸಹಾಯಕ ಸದಸ್ಯರು ರೂ. 5 ಅಥವಾ ಹೆಚ್ಚಿಗೆ.

ಸ್ವಾಗತ ಸಮಿತಿ:-ಅಸರೆಬಲ್ ಡಾ. ಯು. ರಾಮರಾವ್, ಸ್ವಾಗತ ಸಮಿತಿ ಅಧ್ಯಕ್ಷರು. ಎಮ್. ನುರಿಯಪ್ಪ ಘಟ್ ನುತ್ತು ಎ. ಶ್ರೀನಿವಾಸರಾವ್, ಕಾರ್ಯದರ್ಶಿಗಳು.

ವಿ. ಸೂ.:-ಪ್ರದರ್ಶನಗಳಲ್ಲಿ ಭಾಗವಹಿಸುವವರೂ, ಸದಸ್ಯತ್ವದ ಚಂದಾಸಾಣವನ್ನು ಕಳುಹುವವರೂ, ತಮ್ಮ ಪ್ರದರ್ಶನದ ವಸ್ತು-ಚಂದಾಸಾಣಗಳನ್ನು ಶ್ರೀ. ಎಮ್. ನುರಿಯಪ್ಪ ಘಟ್, 23 ವಾಲಾಜರೋಡ್ ಮೌಂಟ್, ರೋಡ್, ನುದರಾಸು, ಇವರಿಗೆ ನವಂಬರ ತಾ. 25ರ ಒಳಗೆ ಕಳುಹಬಹುದು.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ 28—8—45ರಲ್ಲಿ ಜರಗಿದ ಅರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ವಿನೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

—ಮಕ್ಕಳನ್ನು ಹಡೆಯುವುದು ಸಾಕು—
ತಾ 25ರಲ್ಲು ಸಂಜೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀಯುತ. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮಲಬಾರಿನ ಸುಪ್ರಸಿದ್ಧ ಕಾಂಗ್ರೆಸ್ ನುಂದಾಳುಗಳಾದ ಜನಾಬ್ ಮಹಮ್ಮದ್ ಅಬ್ದುಲ್ ರಹಿಮಾನ್ ಸಾಹೇಬರ ನಿಧನಕ್ಕಾಗಿ ಸಂತಾಪ ಸೂಚಿಸುನ, ಹಿಂದೀ ರಾಷ್ಟ್ರೀಯ ಸೇನೆಯ ಸಂಬಂಧ ಸಭೆ, ಮೆರವಣಿಗೆ ಪ್ರದರ್ಶನಗಳು ನಡೆಯುವಂತೆ ಜಿಲ್ಲಾ ಕಲೆಕ್ಟರರು ಹಾಕಿಸಿ ಪ್ರತಬಂಧಕಾಜ್ಞೆಯ ನಿಷೇಧ ಸೂಚಿಸುನ, ಈ ಆಜ್ಞೆಯನ್ನು ಸ್ಟೆಸ್ಸು ಪಡಿಸಬೆ ಕೆಲಪೆಡೆ ಪೋಲೀಸರು ನಬ್ಬಾಳಿಕೆಯನ್ನು ಪ್ರಾರಂಭಿಸಿ ಜನತೆಯಲ್ಲಿ ಭಯವನ್ನು ನೂಡಿದುದರೆ ನಿಷೇಧ ನ್ಯಕ್ಕಪಡಿಸುನ, ಕಲ್ಲತ್ತೆಯಲ್ಲಿ ಪಿಯ್ಯಾರ್ಥಿಗಳ ಮೇಲೆ ಸರಕಾರಪ ನಡೆಸಿದ ಗೋಳಿಬಾರಿನ ಬಗ್ಗೆ ದುಃಖ ಪ್ರದರ್ಶಿಸುವ ಹಾಗೂ ಸರಕಾರದ ಪಬ್ಬಾಳಿಕೆಯನ್ನು ತೀವ್ರ ಖಂಡಿಸುವ ನಿರ್ಣಯಗಳಾಯಮವು. ಶ್ರೀಗಳಾವ ಪಾಂಗಾಳ ಲಕ್ಷ್ಮಿನಾರಾಯಣ ನಾಯಕ್, ಕೆ. ವೆಂಕಟೇರ ಪ್ರಭು, ಎನ್. ಉಪೇಂದ್ರ ನಾಯಕ್, ಕೆ. ತಿಮ್ಮಪ್ಪ ಸೆಟ್ಟಿ ಮತ್ತು ಅನ್ಯಕ್ಷ ಮುತ್ತು ಕಾರ್ಯದರ್ಶಿಗಳಿರುವ ಸಮಿತಿಯೊಂದು ಹಿಂದೀ ರಾಷ್ಟ್ರೀಯ ಸೈನ್ಯಕ್ಕೆ ಸಹಾಯವನ್ನು ನೀಡುವ ಸಲುವಾಗಿ ಧನ ಸಂಗ್ರಹಿಸುವರೆ ನೇಮಿಸಲ್ಪಟ್ಟಿತು.

ಕುಂದಾಪುರ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು-

ನೂಸ್ತು ಕಟ್ಟಿಯ ಸಮೀಪಪದಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ದಿ. ೪. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜತೆ ಕಾರ್ಯದರ್ಶಿ ಶ್ರೀ. ಬಿ ಸುಬ್ಬಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ತಾ 24ರಲ್ಲು ಜರಗಿ 1942ರಿಂದ ಈ ವರೆಗಿನ ಕಾಂಗ್ರೆಸ್ ಚಟುವಟಿಕೆಗಳ ವರದಿಯನ್ನು ಮಂಜೂರು ಮಾಡಲಾಯಿತು. ತಾ 21ರಂದ 23ರ ತನಕ ಕುಂದಾಪುರದಲ್ಲಿ ಪೋಲೀಸರು ದಾರಿಯಲ್ಲಿ ಸಂಚರಿಸುತ್ತಿದ್ದ ಪಾದಿ ಧಾರಿಗಳ ಟೊಪ್ಪಿಗಳನ್ನು ತೆಗೆಯಿಸಿ ಅವುಗಳನ್ನು ಹೊಳಿಪಡಿಸುವ ಮತ್ತು ತಾ 23ರಲ್ಲು ಸ್ಥಳೀಯ ಹೈಸ್ಕೂಲು ವಿದ್ಯಾರ್ಥಿಗಳು ಭಾರತೀಯ ರಾಷ್ಟ್ರೀಯ ಸೇನೆಯ ವಿಚಾರಣೆಯ ನಿಷೇಧ ಸೂಚಿಸಾರ್ಥವಾಗಿ ತಾಲೆಗೆ ಮುಷ್ಕರ ಹಾಕಿ ಶಾಂತ ರೀತಿಯಿಂದ ತಾಲೂಕ ಕಂಪೌಂಡಿನಲ್ಲಿ ಸಿಕೆಟಿಂಗ್ ನೂಡುತ್ತಿದ್ದಾಗ ಸಿವಿಲ್ ಪೋಲೀಸ್ ಅಧಿಕಾರಿಯು [illegible] ಒಬ್ಬ ಹುಡುಗನನ್ನು ಹೊರಗೆ ಎಳೆದುಎಂದು ಪಟ್ಟು ಕೊಟ್ಟು ಸ್ಟೇಶನಿನೊಯ್ದು ಸಂಜೆ ಅತನನ್ನು ಬಿಡುಗಡೆ ನೂಡಿದ ಪೋಲೀಸರ ವರ್ತನೆಯನ್ನು ಖಂಡಿಸಿ ಈ ನಿರ್ಣಯಿಸಲಾಯಿತೆಂದೂ ಸರಕಾರದ ದಿಕ್ಕಿಚಿತನ ಘೋರನೆಯಿಂದ ಜನತೆಗೆ ಉಂಟಾದ ಅನ್ಯಾಯವನ್ನು ಅಕ್ಕೆಸ್ಸಿಯುಂಟಾಗಿದೆಯೆಂಬುದನ್ನು ಸರಕಾರದ ಗನುನಕ್ಕೆ ತರುವ ರಪಾಪೂ ನುಂಜೂರಾತಿಯೆಂದೂ ಕಾಂಗ್ರೆಸ್ ಕಮಿಟಿಯ ಜತೆ ಕಾರ್ಯದರ್ಶಿ ಶ್ರೀ ಎ. ಎಸ್. ವಿಠಲ ಸೆಟ್ಟರು ಬರೆಯುತ್ತಾರೆ.

ಶಿರ್ವ- ವಾದ್ಯಾಸ್ ಪ್ಲೊಸ್ಸಿಯರ್ಸ್ ವರ್ಗಸ್ಯಾಜ್ಞಂಗ್ ಸ್ಕೌಟ್ ಕಮಿಶನರ್ ಶ್ರೀ ಸುಬ್ರಹ್ಮಣ್ಯಪುರವರು ತನ್ನ ಸಹಾಯಕರ ಸ್ನೊದಗೂಡಿಕೊಂಡು ತಾ 14-11-45ರಿಂದ 19-11-45ರ ವರೆಗೆ ಮುಂಗಳೂರು ಗವರ್ನ್‌ಮೆಂಟ್ ಹೈ. ಎ. ತರಬೇತಿ ಶಾಲಾ ಬ್ರಹಸ್ಪತಿ ರೋವರ್ ಕ್ರೂವಿನ 46 ನುಂದಿಯನ್ನು ಕ್ಲಬ್ ಮಾಸ್ಟರ್ ತರಬೇತಿಗಾಗಿ ಶಿರ್ವದಲ್ಲಿ ಕ್ಯಾಂಪ್ ಮಾಡಿ [illegible] ತರಬೇತಿಯ ಕಾಲದಲ್ಲಿ ಪಾ. ಯು. ಕುಪ್ಪಣ್ಣಾಚಾರ್ಯರೂ, ಅಲ್ಲಿಯ ನಾಡವ ವಿದ್ಯಾಧರ್ಥಿಕ ಸಂಘದವರೂ ಒಂದೊಂದು ದಿನದ ಭೋಜನೋಪಚಾರಗಳನ್ನಿತ್ತು ಸತ್ಕರಿಸಿದರು.

ಇಲ್ಲಿಯ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ ಹೆತ್ತವರ ಕೂಟದ ಸಭೆಯು ತಾ 24-11-45ರಲ್ಲು ಉಡುಪಿ ರೇಂಜಿನ ಶಾಲಾ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರವರಾದ ಶ್ರೀ. ಕೆ. ಸಂಜೀವ ಭಟ್, ಎಸ್. ಎ. ಎಲ್. ಟಿ [illegible]ನರ ಅಧ್ಯಕ್ಷತೆಯಲ್ಲಿ ಜರಗಿತು. ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದ ಮೇಲೆ ಬಾಲಕ ಬಾಲಕಿಯರ ವಿವಿಧ ವಿನೋದ ಚಟುವಟಿಕೆಗಳಾದುವು.

ರೈತರಿಗೊಂದು ಸೂಚನೆ

ಕೃಷಿ ಇಲಾಖೆಯಿಂದ ತಮಗೆ ಬೇಕಾಗುವ ಸುಧಾರಿತ ಬೀಜ ಮತ್ತು ತರತರದ ಗೊಬ್ಬರಗಳನ್ನು ಪಡಕೊಳ್ಳುವುದಕ್ಕಾಗಿ, ರೈತರಿಗೆ ನಿಬಡ್ಡಿಯಿಂದ 80-0-0 (ಎಂಭತ್ತು) ರೂ ಹಾಯಿಗಳನ್ನು ತಕ್ಕಷ್ಟು ಸಾಲವಾಗಿ ಕೃಷಿ ಇಲಾಖೆಯಿಂದ ಕೊಡಲಾಗುವುದು. ಈ ಸಾಲವನ್ನು ಎರಡು ವರ್ಷಗಳಲ್ಲಿ, ವರ್ಷಕ್ಕೊಂದು ಕಂತಿನಂತೆ ಮರುಪಾವತಿ ನೂಡತಕ್ಕದ್ದು.

ಪ್ರಯೋಸವಿಲ್ಲದೆ ಸುಲಭರೀತಿಯಲ್ಲಿ ಸಿಗುವ ಈ ಸಾಲಗಳನ್ನು ರೈತರೆಲ್ಲರೂ ಪಡಕೊಂಡು, ಸುಧಾರಿತ ಬೀಜ ಮತ್ತು ಗೊಬ್ಬರಗಳನ್ನು ಉಪಯೋಗಿಸಿ, ಹೆಚ್ಚಿನ ಲಾಭ ಪಡೆಯುವ ಈ ಸುಸಂಧರ್ಭವನ್ನು ಸ್ವತಿಯೊಬ್ಬರೂ ಉಪಯೋಗಿಸಿಕೊಳ್ಳಬಹುದು.

ಇಷಲ್ಲದೆ, ರೈತರು ಈ ವರೆಗೆ ಧಾನ್ಯದ ಬೆಳೆಗಳನ್ನು ಬೆಳೆಸದೆ ಗದ್ದೆಗಳಲ್ಲಿ, ಹೊಸತಾಗಿ ಉಪ್ಪು ಹಿತ್ತುವುದಾದರೆ, ಸದ್ರಿ ಗದ್ದೆಗಳಿಗೆ ಬೇಕಾಗುವ ಉದ್ದಿನ ಬೀಜವನ್ನು, ಬಡ ಮತ್ತು ಶ್ರಿಮಂತ ರೈತರೆಂಬ ತಾರತಮ್ಯವಿಲ್ಲದೆ, ಧರ್ಮಾರ್ಥವಾಗಿ ಕೊಡಲಾಗುವುದು. ಹೆಚ್ಚಿನ ವಿವರವನ್ನು ನಿಮ್ಮ ತಾಲೂಕಿನ ಡೆಮೊನ್‌ಸ್ಟ್ರೇಟರುಎಂದ ಬರೆಸಿ ಯಾ ಖುದ್ದಾಗಿ ತಿಳಿದುಕೊಳ್ಳಬಹುದು ಎಂದು ಉಡುಪಿ ಎಗ್ರಿಕಲ್ಚರಲ್ ಡಿಮೋನ್ಸ್ಟೇಟರ್ ಶ್ರೀ. ಕೆ. ಸಂಜೀವ ಶೆಟ್ಟಿರು ತಿಳಿಸುತ್ತಾರೆ.

ಕನ್ನಡ ಸಾಹಿತ್ಯ ಸಮ್ಮೇಳನವು-

ದೆರಂಬರ ತಾ 26ರಂದ 28ರ ತನಕ ಕರ್ನಾಟಕ ಎಮ್. ಸಿ. ಟಿ. ಮುತ್ತಯ್ಯ ಜೆಟ್ಟಿಯಾರರ ಹೈಸ್ಕೂಲ್ ವರಾಂಡದಲ್ಲಿ ಶ್ರೀ. ಟಿ. ಪಿ. ಕೈಲಾಸಂ ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸಮ್ಮೇಳನದ ಉದ್ಘಾಟನೆಯನ್ನು ಡಾ। ಸಿ. ರಾಜಗೋಪಾಲಾಚಾರ್ಯರು ನೆರವೇರಿಸುವರು. ಸಮ್ಮೇಳನಕ್ಕೆ ಬರಲಿರುವವರು ದರಂಬರ ತಾ 10ರೊಳಗಾಗಿ ಪತ್ರ ಮುಖೇನ ತಿಳಿಸಿದರೆ ಸ್ವಾಗತ ಸಮಿತಿಯವರು ಊಟ, ವಸತಿಗಳ ವ್ಯವಸ್ಥೆ ನೂಡುವರು. ಸಮ್ಮೇಳನದ ಸಮಯ ಚಳಿ, ಮಳೆಗಾಲವಾದುದರಿಂದ ಹೋಗತಕ್ಕವರು ಹಾಸಿಗೆ, ಹೊದಿಕೆಗಳನ್ನು ಕೊಂಡು ಹೋಗಬೇಕಾಗುವುದು.

ಉಡುಪಿ.

ರೇಶನಿಂಗ್ ಕಮಿಟಿಯ ಸಭೆಯು

ತಾ 26ರಲ್ಲು ಶ್ರೀ. ಸಿ. ಎನ್. ಪೇಸೊಕಿ, ರೇಶನಿಂಗ್ ಆಫೀಸರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕೂಲಂಕುರ ವಿಚಾರಣೆ ನಡೆಸಿ ಅತ್ಯಗತ್ಯವೆಂದು ತೋರಬಬುದಾದ ಬಿಳಿಗೆ ಅಕ್ಕಿ ಕಾರ್ಡಿನವರಿಗೆ ಪೂರಾ ಬೆಳ್ತಿಗೆ ಅಕ್ಕಿ. ಇತರ ಬೆಳ್ತಿಗೆ ಅಕ್ಕಿ ಕಾರ್ಡಿನವರಿಗೆ ಅರ್ಧಾರ, ಕುಟ್ಟಿಗೆ ಅಕ್ಕಿ ಕಾರ್ಡಿನವರಿಗೆ ನಿಯಮಿತ ಸ್ಕೇಲಿನಂತೆ ಬೆಳ್ತಿಗೆ ಅಕ್ಕಿ ಕೊಡುವಂತೆ ರೇಶನ್ ಅಂಗಡಿಯವರಿಗೆ ರೇಶನಿಂಗ್ ಆಫೀಸರರು ಕೆಂಪಿಟ್ಟ ಸೂಚನೆಗಳನ್ನು ಮಂಜೂರು ಮಾಡಲಾಯಿತು. ರಿಕ್ವಿಜಿಶನ್ ಮಾಡಲ್ಪಟ್ಟ ಭತ್ತದಿಂದ ಮಿಲ್ಲುಗಳಲ್ಲಿ ಅದಷ್ಟು ಬೇಗನೆ ಬೆಳ್ತಿಗೆ ಅಕ್ಕಿ ತಯಾರಿಸುವರೆ ಹಾಗೂ ಕೂಡಲೇ 2000 ಮುಡಿ ಬೆಳ್ತಿಗೆ ಅಕ್ಕಿಯನ್ನು ರೇಶನ್ ಕ್ಷೇತ್ರಕ್ಕೆ ಒದಗಿಸಿಕೊಡಬೇಕೆಂದು ಜಿಲ್ಲಾ ಪೋಲ್ ಸೇಲ್ ಸ್ಟೋರ್ಸಿನ ಅಧ್ಯಕ್ಷರನ್ನು ವಿನಂತಿಸಲಾಯಿತು. ಅವಲಕ್ಕಿ ಸರಬರಾಯಿ ಕುರಿತು ಸಹ ಸರಕಾರಕ್ಕೆ ಪುನಃ ಮಾಡಲಾಯಿತು.

ಅಖಿಲ ಭಾರತೀಯ ಆಯುರ್ವೇದಿಕ್ ಕಾಂಗ್ರೆಸ್ಸು, ಮಂಗಳೂರಲ್ಲಿ ವಿನಂತಿ.

ಅಖಿಲ ಭಾರತೀಯ ಆಯುರ್ವೇದಿಕ್ ಕಾಂಗ್ರೆಸ್ಸಿನ 33 ಮಹಾಧಿವೇಶನಗಳು, ಮೈಸೂರು, ಇಂದೋರು, ಗ್ವಾಲಿಯರ್, ಜಯಪುರ, ಬಿಕಾನರ್, ಜೋಧಪುರ, ರಾಜಕೋಟ ಇತ್ಯಾದಿ ಮಹಾ ರಾಜರ ಪ್ರೋತ್ಸಾಹದಿಂದಾಗಿ ನಡೆದಿರುತ್ತವೆ. ಕಳೆದ ಮಹಾಧಿವೇಶನವು ಆಂಧ್ರವಲ್ಲಿಯ ಬೆಜವಾಡದಲ್ಲಿ ಜರಗಿತು. ಅಲ್ಲಿಯ ಯುವರಾಜರೂ ಶ್ರೀಮಂತರೂ, ಜಮೀನುದಾರರೂ ತಮ್ಮ ತಮ್ಮ ನುನ ಧನವನ್ನು ಆರ್ಪಿಸಿದುದರಿಂದಾಗಿ ಅದು ಯಶಸ್ವಿಯಾಗಿ ಜರಗಿಸಲ್ಪಟ್ಟಿತು.

ಸದ್ಯ ನಡೆಯಲಿರುವ ಈ ಅಧಿವೇಶನಕ್ಕೆ ಸಾಧಾರಣ ರೂ 10,000 ಬೇಕಾಗಬಹುದಾಗಿ ಅಂದಾಜು ಮಾಡಿರುತ್ತದೆ. ಈ ಅಧಿವೇಶನವು ಶ್ರೇಯಸ್ಕರವಾಗಿ ಪರಿಣಮಿಸಿ ಕರ್ನಾಟಕದ ಹೆಸರು ಚಿರಸ್ಥಾಯಿಯಾಗಬೇಕೆಂಬುದೇ ನಮ್ಮ ಆಕಾಂಕ್ಷೆ.

ಒಂದೆಡೆ ಅರವೀ ಸಮುಪ್ರದ ಮನೋಜರವಾದ ದೃಶ್ಯದಿಂದಲೂ ಮತ್ತೊಂದೆಡೆ ಪಶ್ಚಿಮ ಘಟ್ಟಗಳನೋಟದಿಂದಲೂ ಶೋಭಿಸುವ ಆಧುನಿಕ ಪಲ್ಲೆಯೊಂಪರಲ್ಲಿ ಈ ಮಹಾ ಅಧಿವೇಶನವು ಜರಗುವದೇ ಈ ವರ್ಷದ ಕಾಂಗ್ರೆಸ್ಸಿನ ವೈಶಿಷ್ಟ್ಯ. ಇಂತಹ ಮಹತ್ಕಾರವಾದ ಸಮಾರಂಭಗಳನ್ನು ಪಲ್ಲೆಗಳಲ್ಲಿಯೇ ಜರಗಿಸಿ ಗ್ರಾಮೋದ್ಧಾರ ಕಾರ್ಯಗಳನ್ನು ಮಾಡುವರೆ ಇದೀಗ ಆದರ್ಶ ಸ್ಥಳವಾಗಿರುವದು. ಭರತ ಖಂಡವು ರಸ್ಸು ಸ್ವಾತಂತ್ರ್ಯವನ್ನು ಅನತಿದೂರದಲ್ಲಿಯೇ ಗಳಿಸುವ ಸುಚಿಹ್ನೆಗಳು ತಲೆದೋರುತ್ತಿರುವ ಸಮಯುಆಯುರ್ವೇದವು ತನ್ನ ಅಡಿಯನ್ನು ಮುಂದಿಡುವದು ಶ್ರೇಯಸ್ಕರವು.

ನಮ್ಮಿ ಕರ್ನಾಟಕ ಪ್ರಾಂತ್ಯವು ಬೊಂಬಾಯಿ ಸಂಸ್ಥಾನದ ಧಾರವಾಡ, ಬೆಳಗಾಂ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳಿಂದಲೂ, ಮದ್ರಾಸು ಸಂಸ್ಥಾನದ ಬಳ್ಳಾರಿ, ಅನಂತಪುರ ಮತ್ತು ಮಂಗಳೂರಿನಿಂದಲೂ, ಹೈದರಾಬಾದಿನ ಕುಲಬರ್ಗ ಮತ್ತು ರಾಯಚೂರು ಮತ್ತು ಮೈಸೂರು, ಸಾಂಗಲಿ, ಮಿರಾಜ, ಜನುಖಂಡಿ, ಕೊಲ್ಹಾಪುರ, ಕುರುಂದವಾಡ ಮತ್ತು ರಾಮದುರ್ಗ ಅಲ್ಲದೆ ಕೊಡಗು ಜಿಲ್ಲೆಯಿಂದಲೂ ಕೂಡಿರುವ ಪ್ರದೇಶವಾಗಿರುತ್ತದೆ.

ಇದೇ ಬರುವ ದರಂಬರದ ಅಂತ್ಯದ ವಾರದಲ್ಲಿ ನೆರವೇರಲಿರುವ ಈ ಅಧಿವೇಶನಕ್ಕೆ ಯಾವತ್ತು ರಾಜರು, ಜಮೀನುದಾರರು, ಸಾಹುಕಾರರು, ವೈಶ್ಯರು, ಡಾಕ್ಟರರು, ಮಹಾರಥಿಕರು, ಧರ್ಮ ಗುರುಗಳೂ ತನ್ನ ಯೋಚಿತ ದ್ರವ್ಯ ಸಹಾಯವನ್ನಿತ್ತು, ಕಾಂಗ್ರೆಸ್ಸಿನ ಜಯ ಪ್ರಾಪ್ತಿಯನ್ನು ಬಯಸಬೇಕಾಗಿ ಆಪೇಕ್ಷೆ.

ಸ್ವಾಗತ ಸಮಿತಿಯ ಸದಸ್ಯರಾಗಿ ೨೬೬ನು ಪಪಯ ಮಾಸ್ಯಾ ೬ನ್ನು ತೆತ್ತು ನೆಂಬರರಾಗಿ ಬಹುದು. ಅಯುರ್ವೇದದ ಪ್ರಗತಿಯನ್ನು ಬಯಸುವವರು ಸ್ವಾಗತ ಸಮಿತಿಯ ಸದಸ್ಯರಾಗಿ ಸೇರಲೇಬೇಕಾಗಿ ಕೋರಿಕೆ.

ಕನ್ನಡಿಗರೇ, ಅಖಿಲ ಕರ್ನಾಟಕದ ಕೇವಲ ಹಳ್ಳಿಯೊಂದರಲ್ಲಿ ಸ್ವದನು ಜಾರಿ ಜರಗಲಿರುವ ಈ ಅಧಿವೇಶನದ ಕಾರ್ಯವು ಜಯಪ್ರದವಾಗುವಂತೆ ನಿಮ್ಮ ಸಹಕಾರ ಉತ್ಸಾಹ ಮತ್ತು ಪ್ರೋತ್ಸಾಹನೆಗಳನ್ನಾಧರಿಸಿದೆ. ಕರ್ನಾಟಕದಲ್ಲಿಯಾ ನ ಆಸುಪಾಸಿನಲ್ಲಿರುವ ಕನ್ನಡಿಗರೆಲ್ಲರೂ ಈ ಸುಸಕಾರ್ಯಕ್ಕೆ ನುಂದೆ ಬಂದು ಯಥಾಮತ ದ್ರವ್ಯ ಸಹಾಯವನ್ನು ಮಾಡುವಂತೆ ನಮ್ಮ ವಿನಂತಿ. ಶ್ರೇಯಸ್ಕರವಾದ ಈ ಕಾರ್ಯಕ್ಕೆ ಅನ್ಯ ವಿಧಗಳಲ್ಲಿ ಸಹಕಾರವಸ್ಸೀಯುವ ಅಪೇಕ್ಷೆಯುಳ್ಳವರು ನಮಗೆ ಬರೆದು ಅವರ ಸೇವೆಯನ್ನು ಸಲ್ಲಿಸಬಹುದು.

ಅಧಿವೇಶನದ ಸಮಯ ಸುತ್ತಿಕ್ಕಿತ ಸ್ವಯಂ ಸೇವಕರ ವಳಗಳು ಬೇಕಾಗಿವೆ. ಈ ಭಾಗದಲ್ಲಿ ಸಾಕಷ್ಟು ತರಬೇತಿಯನ್ನು ಪಡೆದು ಮಾಹಿತಿಯಿರುವ ಬೇರೆ ಬೇರೆ ಧಾಷೆಗಳ ಜ್ಞಾನವಿರುವ ಎಳೆಯರೂ ಹಳೆಯರೂ ಬೇಕಾಗಿದ್ದಾರೆ. ಉತ್ಸಾಹಿಗಳೂ, ಆಯುರ್ವೇದ ಪ್ರೇಮಿಗಳೂ ಕೆಳಗಣ ವಿಳಾಸಕ್ಕೆ ಬರೆಯಬಹುದು.

ಸ್ವಾಗತ ಸಮಿತಿ ಕಚೇರಿ } **ಯು. ಎ. ಹೈ,**
ಮಣಿಪಾಲ. } ಜತೆ ಕಾರ್ಯದರ್ಶಿ

ಜಿಲ್ಲಾ ಪ್ರದರ್ಶನ

ದಶಂಬ್ರ ತಾ. 21, 22 & 23ರಲ್ಲಿ ಮುಲ್ಕಿಯಲ್ಲಿ ಜರಗುವುದು

ಜಿಲ್ಲಾ ಕಲೆಕ್ಟರರು ಅಧ್ಯಕ್ಷರಾಗಿರುವ ಜಿಲ್ಲಾ ಆಳಿವೃದ್ಧಿ ಸಂಘದ ನೇತೃತ್ವದಲ್ಲಿ ಮುಲ್ಕಿ ಸೆಂಟರಿನಲ್ಲಿ ಯತ್ಕಿಸಲ್ಪಡುವ ಗ್ರಾಮೋಭವೃದ್ಧಿ ಕಾರ್ಯದ ಸಹಾಯಾರ್ಥವಾಗಿ

ವ್ಯವಸಾಯ ಮತ್ತು ಗೃಹಕೈಗಾರಿಕೆ

ಪ್ರದರ್ಶನವು ನಡೆಯುವುದು.

ಇದು ಯಶಸ್ವಿಯಾಗುವಂತೆ ಎಲ್ಲರ ಸಹಕಾರವು ಅಗತ್ಯವಿದೆ.

ಕೃಷಿ, ಕೈಗಾರಿಕೆ, ಪಶು, ವೈದ್ಯಕೀಯ, ವಿದ್ಯಾ ವರ್ಗೈರೆ ಇಲಾಖೆಗಳೆಲ್ಲವೂ ಮುಖ್ಯ ಭಾಗವನ್ನು ವಹಿಸಿಕೊಳ್ಳುವಂತಿದೆ.

ಜಿಲ್ಲೆಯ ಎಲ್ಲವರಿಗೂ ಬಂದು ನೋಡಿ ತಿಳಿಯಲು ಇದು ಸುಸಂದರ್ಭ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:

ತಾರೀಕು 10-11-45 ಮುಲ್ಕಿ. } ಎಮ್. ಆರ್. ಪೂಂಜ, ಕಾರ್ಯದರ್ಶಿ, ಗ್ರಾಮೋಭವೃದ್ಧಿ ಕಮಿಟಿ, ಮುಲ್ಕಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಎಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟುಗುತ್ತಾರೆ. ಆಲ್ಲದೆ ಸ್ತ್ರೀಯಲ ಬಿಳಿಶೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಎಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಕ್ಕಿ:— ಹರವೀಪಲ್ಲೆ ಬಡಬೇಕು. ೬ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧೫ಆಣೆ.

ಮಾಲಕರು:— ಹಾಲಪ್ಪ ಭಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ವಿಜಯಪುರ:— ಹುಬ್ಬಳಿ ಧಾರವಾಡ,— ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ಧಾರವಾಡ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋದಿಯಲ್ಲಿ:— ಹುಂಚರವಾಡಿ ಸಿದ್ಧೇಶ್ವರ. ಡಾವಣಗೇರಿ:— ಡಾವಣಗೇರಿ ಪ್ರೆಸ್ಸು, ಎರ್. ಎಲ್. ಕೆವಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ದಕ್ಷಿಣ ಕನ್ನಡ

ಮಂಗಳೂರು

ಬಟ್ಟೆಗಳನ್ನು–ಕೊಂಡುಕೊಳ್ಳುವ ವಿಚಾರದಲ್ಲಿ ಪ್ರಾಂತಿಕ ಟೆಕ್ಸ್‌ಟೈಲ್ ಕಮಿಶನರರು ಅನುಸರಿಸುತ್ತಿರುವ ಕಾರ್ಯ ನೀತಿಯ ನಿಷೇಧ ಸೂಚಿಸುವ ಸಲುವಾಗಿ ಸ್ಥಳೀಯ ಬಟ್ಟೆ ವ್ಯಾಪಾರಿಗಳು ತಾ. ೧೫, ೧೬ರಲ್ಲಿ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು.

ನೆಹರುಗಳ ಜನ್ಮ ದಿನವು– ಸ್ಥಳೀಯ ಸೆಕ್ರೆಡ್ ಹಾರ್ಟ್ಸ್ ಹೊಸ್ಪೆಲ್ ಯೂನಿಯನಿನ ಆಶ್ರಯದಲ್ಲಿ ಕಳೆದ ತಾ. ೧೪ರಂದು ಜರಗಿತು. ಶ್ರೀ: ಸಿ. ಬಿ. ಜೊಸೆಫರು ಅಧ್ಯಕ್ಷತೆ ವಹಿಸಿದ್ದರು. ಶ್ರೀ: ಗುಂಡ ಕೆ. ಸಿ ಜಕಾರಿಯಸ್, ಎ. ಜೆ. ಪಿಂಟೊ, ಎಲ್. ಮೆಂಡೋನ್ಸ ಮೊದಲಾದವರು ಭಾಷಣಮಿತ್ತರು

ದ. ಕ. ಜಿಲ್ಲಾ ಟ್ರೇಡ್ ಯೂನಿಯನ್–ಕೌನ್ಸಿಲಿನ ಸಭೆಯು ತಾ. ೧೪ರಂದು ಕೌನ್ಸಿಲಿನ ಅಧ್ಯಕ್ಷಸ್ಥಾನದಲ್ಲಿ ಉಪಾಧ್ಯಕ್ಷರಾದ ಶ್ರೀ: ಎಸ್. ಎನ್. ಹೊಳ್ಳ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ, ಬಂಟ್ವಾಳ, ಕಾಂಞಂಗಾಡು ಮುಂತಾದ ಹೊರ ಸ್ಥಳಗಳಿಂದ ಪ್ರತಿನಿಧಿಗಳು ಬಂದಿದ್ದರು. ದ್ವಿತೀಯ ಜಿಲ್ಲಾ ಮಜೂರ ಸಮ್ಮೇಳನದ ಲೆಖ್ಖ ಪತ್ರಗಳನ್ನು ಕಾರ್ಯದರ್ಶಿಗಳು ಸಭೆಯ ಮುಂದಿಟ್ಟಾಗ, ಅದು ಸರ್ವಾನುಮತದಿಂದ ಮಂಜೂರಾಯಿತು. ಇತ್ತ ಒಂದು ವರ್ಷದಿಂದ ಜಿಲ್ಲೆಯ ಮಜೂರರು ಕೇಳುತ್ತಿರುವ ಬೋನಸು ಹಾಗೂ ಇತರ ಕೇಳಿಕೆಗಳನ್ನು ಸಂಪಾದಿಸಿಕೊಳ್ಳುವ ವಿಚಾರದಲ್ಲಿ ಆಗತ್ಯವಿದ್ದಲ್ಲಿ ಮುಷ್ಕರವ ವರೆಗೂ ಮುಂಮನವರಿಯುವಂತೆ ಕಾರ್ಯಕ್ರಮಗಳನ್ನು ಕೈಕೊಳ್ಳುವ ಬಗ್ಗೆ ಶ್ರೀ: ಎಸ್. ಎನ್ ಹೊಳ್ಳ, ಶ್ರೀ: ಬಿ. ವಿ ಕಕ್ಕಿಲ್ಲಾಯ, ಶ್ರೀ: ಎ. ಕೃಷ್ಣ ಶೆಟ್ಟಿ, ಸಿಂಪ್ಸನ್ ಸೋನ್ಸ್, ಬಿ. ವಾಸಪ್ಪ, ಯಂ. ಮಂಜು, ಕೆ. ಕೇಶವ ಕಾಖರ್ತ್ ಇವರನ್ನೊಳಗೊಂಡ ಸಮರ ಸಮಿತಿಯು ರಚಿಸಲ್ಪಟ್ಟಿತು. ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ಚುನಾವಣೆಯ ಘೋರಣೆಯ ಕುರಿತು ಚರ್ಚೆಯಾದ ನಂತರ ಸಭೆಯು ಮುಂದಿನ ಸಾರ್ವಜನಿಕ ಸಭೆ ಜರಗಿತು. ಶ್ರೀ: ಎ. ಕೃಷ್ಣ ಶೆಟ್ಟಿ ಅವರು ಅಧ್ಯಕ್ಷತೆ ವಹಿಸಿದ್ದರು. ಕೌನ್ಸಿಲಿನ ಕಾರ್ಯದರ್ಶಿಗಳಾದ ಶ್ರೀ: ಬಿ. ವಿ. ಕಕ್ಕಿಲ್ಲಾಯರು ಈ ದಿನ ಬೆಳಿಗ್ಗೆ ಜರಗಿದ ಕೌನ್ಸಿಲಿನ ಸಭೆಯಲ್ಲಿ ಜೋನಸ್ಸಿನ ಕುರಿತಾದ ತೀರ್ಮಾನವನ್ನು ವಿವರಿಸಿದರು. ಶ್ರೀ: ಎಸ್. ಎನ್. ಹೊಳ್ಳರು ಮಜೂರರು ತಮ್ಮ ಮುಂದಿನ ಸಮರಕ್ಕಾಗಿ ಸಿದ್ಧರಾಗಬೇಕೆಂದರು

ಸ್ಥಳೀಯ ಕನ್ಸ್ಯೂಮರ್ಸ್– ಕಾರ್ಯಾಲಯ ಮುಖಂಡರು ತಾ. ೨೮ರಂದು ಸಭೆ ಸೇರಿ ಮುಂಬರುವ ಚುನಾವಣೆಯಲ್ಲಿ ತನ್ನು ಘೋರಣೆಯನ್ನು ಹೀಗೆ ಮಂಡಿಸಿರುವರು. ೧ ಕೇಂದ್ರ ಅಸೆಂಬ್ಲಿಯ ಚುನಾವಣೆಯಲ್ಲಿ ಕಾಂಗ್ರೆಸ್ ನವ್ತು ಲೀಗ್ ಪಕ್ಷಗಳಿಂದ ನಿಂತಿರುವ ಉಮೇದ್ವಾರರಿಗೆ ಓಟು ಕೊಡಬೇಕು; ಈ ಎರಡು ಪಕ್ಷಗಳು ಒಟ್ಟಾಗಿ ಜನರ ಹಿತಕ್ಕಾಗಿ ನ್ಯಾಯವಿಧಾಯಕ ಸಭೆಗಳಲ್ಲಿ ದುಡಿಯಬೇಕು. ೨ ಮುಂಬರುವ ಪ್ರಾಂತಿಕ ಅಸೆಂಬ್ಲಿ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಕಾಂಗ್ರೆಸ್ ಲೀಗ್–ಕಮ್ಯೂನಿಸ್ಟ್ ಐಕ್ಯದ ಘೋರಣೆಯ ಆಧಾರವ ಹೇಲೆ ಉಮ್ಮೇದ್ವಾರನೊಬ್ಬನನ್ನು ಹೊರತಡಿಸಬೇಕೆಂಬ 'ಅಜಾಮ್ ಖಿಂದ್' ದಲ್ಲಿ ವಿಚಾರವಾಗಿ ಸಭೆಮೆರವಣಿಗೆಗಳ ಮೂಲಕ ಪ್ರದರ್ಶನಗಳನ್ನು ಸಿಳಳರ ಮೇರೆಗೆ ನಗರದಲ್ಲಿ ತಡೆಯಲಾಗಿದೆ. ಸರಕಾರದ ಈ ಪ್ರಜಾಪ್ರಭುತ್ವ ವಿರೋಧಿ ಘೋರಣೆಯನ್ನು ಈ ಸಭೆಯು ಖಂಡಿಸುತ್ತದೆ.

ಕೇಂದ್ರ ಅಸೆಂಬ್ಲಿಯ–ನಮ್ಮ ಕ್ಷೇತ್ರದ ಕಾಂಗ್ರೆಸ್ ಉಮೇದ್ವಾರರಾದ ಶ್ರೀ: ಎ. ಕರುಣಾಕರ ಮೆನನ್ ಇವರು ಬಿ. ಎ. ಪರೀಕ್ಷೆಯಲ್ಲಿ ಎಲ್ಲ ವಿಷಯದಲ್ಲಿಯೂ ಶ್ರೀ: ಎ. ಬಿ. ಶೆಟ್ಟಿರವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತ ಕೇರಳ, ತಮಿಳ್ನಾಡು ಮತ್ತು ಕರ್ನಾಟಕ ಈ ಎಲ್ಲೂರು ಕ್ರಾಂತೀಯ ಪಾರ್ಲಿಮೆಂಟರಿ ಸಮಿತಿಗಳು ತನ್ನನ್ನು ಉಮೇದ್ವಾರನನ್ನಾಗಿ ಆರಿಸಿವೆ, ಮಲಬಾರು ಏಳಿಗೆ ಮತ್ತು ದ. ಕ ಈ ಜಂಟಿ ಜಿಲ್ಲೆಗಳನ್ನು ಸಮಾನವಾಗಿ ಪ್ರತಿನಿಧೀಕರಿಸಲು ಯತ್ನಿಸುವೆನು ಎಂದರು,

ಅಪಾಲಭಾರತ ಅಡಿಕೆ ಸಮ್ಮೇಳನವು–ಪರಂಬರ್ ತಾ. ೨೮ ಮತ್ತು ೨೯ರಂದು ಪೆಪಮೊಗ್ಗೆಯಲ್ಲಿ ಶ್ರೀ: ಹಸೂಡಿ ನೆಂಕಟ ಶಾಸ್ತ್ರಿಗಳವರ ಸಾಹಿತ್ಯ ಭವನದಲ್ಲಿ ಜರಗುವುದು. ಕೇಂದ್ರ ಶಾಸನಸಭೆಯ ಸೂಜಿ ಉಪಾಧ್ಯಕ್ಷರಾದ ಶ್ರೀಮಾನ್ ಅಬಿಲಜಿದ್ರವ್ವಾರವರು ಅಧ್ಯಕ್ಷರಾಗಲು ವಿಯಬಿಟ್ಟು ಒಪ್ಪಿರುಕ್ಕಾರೆ. ಕೇಂದ್ರ ಶಾಸನಸಭೆಯ ಸದಸ್ಯರಾದ ಶ್ರೀಮಾನ್ ಎನ್. ಜಿ. ರಂಗರವರು ಸಮ್ಮೇಳನದ ಆರಂಭೋತ್ಸವವನ್ನು ನಡೆಸುವರು

ಅ. ಭಾ. ಜೇನು ವ್ಯವಸಾಯ–ಗಾರರ ಎಂಟನೆಯ ಪರಿಷತ್ತು ಮತ್ತು ಈ ವ್ಯವಸಾಯಕ್ಕೆ ಸಂಬಂಧಪಟ್ಟ ಪ್ರದರ್ಶನವು ಬರುವ ಪರಂಬರ ತಾ. ೨೮ರಂದು ಕೆನರಾ ಹ್ಯಸ್ಕೂಲಿನಲ್ಲಿ ಜರಗಲಿವೆಯೆಸ್ಸೆ. ಪರಿಷತ್ತನ್ನು ಉದ್ಘಾಟಿಸಲು ರಾ. ಬಾ ಎನ್. ರಾಘವೇಂದ್ರ ರಾವ್, ಕೃಷಿಇಲಾಖೆಯ ಜತೆಡೈರೆಕ್ಟರ್ ಇವರು ಒಪ್ಪಿರುವರು ಸಮ್ಮೇಳನದ ಸ್ವಾಗತ ಸಮಿತಿಯ ಸಭೆಯೊಂದು ಇದೇ ತಾ. ೨೮ರಂದು ಸಂಜೆ ೫ಗಂಟೆಗೆ ತಮ್ಮ ಮನೆಯಲ್ಲಿ ಜರಗುವುದೆಂದೂ ಜೇನು ವ್ಯವಸಾಯದಲ್ಲಿ ಆಸಕ್ತ ಇರುವವರೆಲ್ಲರೂ ಆಂದು ಆಗಮಿಸಲು ಕೋರಬಹುದೆಂದೂ ಸ್ವಾಗತ ಸಮಿತಿಯ [illegible] ಕಾರ್ಯದರ್ಶಿ ಶ್ರೀ: ಕೃಷ್ಣಯ್ಯರವರು ತಿಳಿಸುತ್ತಾರೆ.

ಕುಂದಾಪುರ–ಇದೇ ತಾ. ೨೦ನೆಯ ಮುಂಜಾನೆಯಿಂದ ಇಲ್ಲಿಯ ಪೊಲೀಸ್ ಕಾನ್‌ಸ್ಟೇಬಲರು ಕೆಲವರು ಕೈಯಲ್ಲಿ ಬಾಥಿಯನ್ನು ಹಿಡಿದುಕೊಂಡು ತಮ್ಮ ವಿಚಿತ್ರ ಬೇಡಿಕೆಯಿಂದ ದಾರಿಹೋಕರಾದ ಸಭ್ಯ ಮನುಷ್ಯರಿಗೆ ತೊಂದರೆ ಕೊಡುತಿದ್ದಾರೆಂಬ ತಕರಾರುಗಳನ್ನು ಕೆತ್ತು ನೆಲಕ್ಕೆ ಸೆಮೆ ತುಳಿಯುತ್ತಾರೆ. ಅಧಿಕಾರಿಗಳು ಇವರ ಮಂಡೇಕಗಳನ್ನು ನಿರ್ಲಿಪ್ತಸಬೇಕು ಎಂಬ ಅಭಿಪ್ರಾಯವ ಜಾರ್ತಿಯೊಂದು ಕುಂದಾಪುರದ ರಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ: ಕೆ. ಮಹಾಬಲಶೆಟ್ಟಿ ಇವರ ಕಚೆಯಿಂದ ನಮಗೆ ಬಂದಿರುತ್ತದೆ.

ದ. ಕ. ಜಿಲ್ಲೆಯ ಕೇಂದ್ರ ಎಸೆಂಬ್ಲಿ ಮತದಾರರಲ್ಲಿ ವಿನಂತಿ

"ನಾನು ಇತ್ತಲಾಗೆ ಜಿಲ್ಲೆಯ ಕೆಲಸ್ಥಳಗಳಿಗೆ ಹೋದಾಗ ಜನ ಸಾಮಾನ್ಯರಲ್ಲಿ ಕೊಂಗ್ರೆಸ್ಸಿನ ಕುರಿತು ಕಂಡುಬಂದ ಸ್ವಾಭಾವಿಕವಾದ ಅಭಿಮಾನ, ಗೌರವ ಮತ್ತು ವಿಶ್ವಾಸವನ್ನು ಕಂಡು ತುಂಬಾ ಸಂತೋಷಗೊಂಡೆ.

"ಇದೇ ದರಂಬರ ತಾ. ೨೬ಕ್ಕೆ ನಡೆಯಲಿರುವ ಕೇಂದ್ರ ಎಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಜೆಂಬಲ ಕೊಡಲು ಮೂಲೆಯ ಹಳ್ಳಿಗಳಿಂದಲೂ ಅನೇಕ ಮಂದಿ ಉತ್ಸಾಹಿಗಳು ತಾವಾಗಿ ಮುಂದೆ ಬಂದು ಓಟರರ ಪಟ್ಟಿ ಮತ್ತು ಇತರ ಆನುಭವಗಳನ್ನು ಹೃದಯಪಟ್ಟಿ ಪಡೆದುಕೊಂಡು ಕಾಂಗ್ರೆಸ್ಸಿನ ಚುನಾವಣೆ ಕಾರ್ಯದಲ್ಲಿ ನೆರವಾಗುತ್ತಿರುವುದು ಅಭಿಮಾನದ ವಿಷಯವಾಗಿರುತ್ತದೆ. ಕೊಂಗ್ರೆಸ್ಸಿನ ಪರ್ಚಸ್ಸು ಮತ್ತು ಶಕ್ತಿಯು ಹಳ್ಳಿ ಹಳ್ಳಿಗಳಲ್ಲಿಯೂ ಜನತೆಯಲ್ಲಿ ದೃಢವಾಗಿ ಬೇರೂರಿರುವುದು ಎಂಬುದಕ್ಕೆ ಇದೇ ಸಾಕ್ಷಿ. ಇನ್ನು ಮುಂದೆ ನನ್ನ ಮುಂದಿರುವ ಸಮಯ ಬಹಳ ಕಡಿಮೆ. ನನ್ನ ಅನಾರೋಗ್ಯದ ನಿಮಿತ್ತ, ಜಿಲ್ಲೆಯ ಉಳಿದ ಕಡೆಗಳಲ್ಲಿ ಸಂಚರಿಸಲೂ ಆನಾನುಕೂಲವಾಗಿದೆಯೆನ್ನುವ ವಿಷಾದಪಡುತ್ತೇನೆ.

"ಆದರೆ, ಕಾಂಗ್ರೆಸ್ಸಿನ ಕೆಲಸವು ಯಾವನೋ ಒಬ್ಬ ವ್ಯಕ್ತಿಯ ಅನುಕೂಲತೆಯ ಮೇಲೆ ಹೊಂದಿಕೊಂಡಿರುವುದಿಲ್ಲ ಎಂಬುದನ್ನು ಕೂಡಾ ನಾನು ಚೆನ್ನಾಗಿ ಬಲ್ಲೆ. ಜಿಲ್ಲೆಯಲ್ಲಿ ಕಾಂಗ್ರೆಸ್ಸು ಸಂಸ್ಥೆಯ ಮೇಲಿರುವ ಪೂರ್ಣ ವಿಶ್ವಾಸವನ್ನು ನೈಕ್ಷ್ಯಗೊಳಿಸುವ ಸರ್ವ ಭಾರವು ಜನತೆಯನ್ನೇ ಹೊಂದಿಕೊಂಡಿದೆ. ಆದ್ದರಿಂದ ಮತದಾರರೆಲ್ಲಾ ಪ್ರಯಾಣ ತೊಡಕು, ನಾಪತನಗಳ ಕೊರತೆಯೇ ಮೊದಲಾದ ಯಾವ ತೊಂದರೆಗಳನ್ನು ಗಣಿಸದೇ ಕೆಲಸಗಾರರಿದ್ದರೂ ಆವರಿಗಾಗಿಯೂ ಕಾದಿರದೇ ಪ್ರತಿಯೊಬ್ಬರೂ ತನ್ನ ತನ್ನ ಸ್ವಂತದ ಪೋಲಿಂಗ್ ಸ್ಟೇಷನಿಗೆ ಹೋಗಿ ಓಟನ್ನು ತಪ್ಪದೇ ಕಾಂಗ್ರೆಸ್ ಮುರಿಯಾಳು ಶ್ರೀ. ಎ. ಕರುಣಾಕರ ಮೇನನ್ ಇವರಿಗೇನೇ ಕೊಡಬೇಕೆಂದು ಅಗ್ರಹದ ವಿನಂತಿ ಇದೆ" ಎಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ. ಯು. ಶ್ರೀನಿವಾಸ ಮಲ್ಯ ಇವರು ತಿಳಿಸುತ್ತಾರೆ.

ನಿರ್ಬಂಧಕಾಜ್ಞೆ–ಎ.ಎಸ್. ಎ. ಸಂಬಂಧದ ದ. ಜಿಲ್ಲೆಯಲ್ಲಿ ಸಭೆ, ಮೆರವಣಿಗೆಗಳ ಮೇಲೆ ಇದೇ ತಾ 19ರಿಂದ ಎರಡು ತಿಂಗಳ ತನಕ ನಡೆಯಕೂಡದಾಗಿ ಬಲ್ಲಾ ಕಲೆಕ್ಟರರು 144ನೆ ಸೆಕ್ಷನ್ ಜ್ಯಾರಿ ಮಾಡಿ ನಿರ್ಬಂಧಕಾಜ್ಞೆಯನ್ನು ಹೊರಡಿಸಿರುತ್ತಾರೆ.

ಮುಟ್ಟಾಗುವಿಕೆ

ಹಲವಿಂಗಳಿಂದ ಕಟ್ಟಾಗಿದ್ದರೂ, ಕಸ್ತೂರಿ ಗರ್ಭಧಾರಣೆ ಆಥವಾ ಇನ್ನಾವಕಾರಣವಿದ್ದರೂ— **'ಕುಮಾರಿ ಮಾತ್ರೆಗಳು'** ನಿಶ್ಚಿತ ನಿರುದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3!- ಶೈವಿಸಿರಿಂದ ಕೇಸುಗಳಿಗೆ ರೂ. 5. 6ತಿಂಗಳ ಬರ್ತಾ ಕಂಟ್ರೋಲಿಗೆ ರೂ. 4!- (ವಿ. ಪಿ. 12 ಆಣೆ ಅಲಾಯಿದ.)

Mrs. P. DEVEE,

F. D. S. (A. B.) Tollygunge Calcutta.

ಸ್ಟಾಕಿಸ್ಟ್: ಪಾ ಕಂಪೆನಿ ಮಂಗಳೂರು

The Vijaya Bank Ltd., Udipi.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಉಡುಪಿ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಆಡವಿನ ಮೇಲೆ ಪಡಕೊಂಡ ಸಾಲವನ್ನು ಮರುಪಾವತಿ ಸೂಡದೆ ಬಡ್ಡಿ ಸಹಾ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ನೆಡ್ರಿಯವರಿಗೆ ಬಿಟ್ಟು ನೋಟೀಸು ಕೆಲವರಿಗೆ ಜ್ಯಾರಿ ಆಗದೆ ವಾಪಾಸು ಬಂದಿರುವುದರಿಂದಲೂ ಈ ಮೂಲಕ ಜಾಹೀರು ನೂಡಿಕೊಳ್ಳುವುದೇನಿಂದರೆ ಸದ್ರಿ ನಗಗಳನ್ನು ತಾ. 13 12 1945ನೇ ಗುರುವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ನೂಡಲಾಗುವುದು. ಏಲಂ ಆದೇ ದಿವಸ ಸಂಪೂರ್ಣ ಆಗದಿದ್ದರೆ ಬೇಂಕಿಗೆ ಯುಕ್ತಕೆಂಡ ದಿನಕ್ಕೆ ಮುಂಬಡವಿಸಲಾಗುವುದು. ತಿಳಿದಿರುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊತ್ತ
1) 105 39	ಪೈ. ಶಂಕರ್ಯ ಹೆಗ್ಡೆ, ಬಾಪು ಶೆಟ್ಟಿ ಮಗ, ಹೊಸ ಮನೆ, ಬಿಡಾಕಾಡು, ಉಪರ್ಪಾಳ ಪೋಸ್ಟು.	90 0 0
2) 220/39	ಕೆ ನಂದ್ಯಪ್ಪ ಹೆಗ್ಡೆ, ಶೀನಪ್ಪ ಹೆಗ್ಡೆರ ಮಗ, ಕುಕ್ಕೆ ಪಳ್ಳಿ ಗ್ರಾಮ, ಪೆರ್ಡೂರು ಪೋಸ್ಟು.	11 0 0
3) 188/40	ಮೋರ್ಜ ಮೆಸರ್ಸ್ ವಿಲಿಯಮ್ಸ್ ಮೇರಿ ಮಗ, ಪ್ರಾಪ್ರೈಟರ್, ಸಿ. ಪಿ. ಸಿ. ಲಿಮಿಟೆಡ್, ಉಡುಪಿ	8 0 0
4) 201/41	ಶೀನ ಶೆಟ್ಟಿ, ಒಕ್ಕಿ ರತ್ತಿ ಮಗ, ಅಂಬ್ಲಪಾಡಿ ಬೈಲು ಮನೆ, ಉಡುಪಿ ಪೋಸ್ಟು.	12 0 0
5) 250/41	ಅಮಪ್ಪಾಡಿ ಜ್ಯಾರಿ, ಮಮಪ್ಪಾಡಿ ಜ್ಯಾರಿ ಮಗ, ತಾರೂರು, ಪಣಂಬೂರು ಪೋಸ್ಟು.	7 0 0
6) 91 42 3	ಅನಂತಕೃಷ್ಣ ರಾವ್ ಗಡಿಪರ್, ಲಕ್ಷ್ಮೀನಾರಾಯಣ ರಾಯರೆ ಮಗ, ಬ್ರಹ್ಮಗಿರಿ, ಉಡುಪಿ ಪೋಸ್ಟು.	69 0 0
7) 220 42 3	ಕೊರಗ ಶೆಟ್ಟಿ, ಸೇಂಕಪ್ಪ ಶೆಟ್ಟಿ ಅಳಿಯ, ಚಿಟ್ಟಾಡಿ ಗ್ರಾಮ, ಉಡುಪಿ ಪೋಸ್ಟು.	50 0 0
8) 56/43 4	ಗರಿಯ ನೆಂಪ್ತಿ, ಬಾಬು ಪೂಜಾರಿ ಅಳಿಯ, ಕೊಂಗ್ರ ಪಾಡಿ ಗ್ರಾಮ, ಉಡುಪಿ ಪೋಸ್ಟು.	13 0 0
9) 69 43 4	ಗುಯ ನೆಂಪ್ತಿ, ಬಾಬು ಪೂಜಾರಿ ಅಳಿಯ, ಕೊಂಗ್ರ ಪಾಡಿ ಗ್ರಾಮ, ಉಡುಪಿ ಪೋಸ್ಟು.	15 0 0
10) 122/43-4	ಜೇಂಬ ಪೂಜಾರಿ, ಬಬ್ಬು ಪೂಜಾರಿ ಅಳಿಯ, ನಂಬ್ರ 76ರೆ ಬಡಗುಬೆಟ್ಟು ಗ್ರಾಮ, ಉಡುಪಿ ಪೋಸ್ಟು.	50 2 0

Office of the Bank, Udipi, 26-11-'45

K. Nanjyappa Shetty,
Agent, Udipi Office.

CHAMPAES

Snow & Castrex

(SoleDistribuiers for (India.)

Prop: K. G. NAYAK,

Santhekatte, UDIPI, S K

ಜಿಲ್ಲಾ ಭೂಮಾಲಿಕರ ಸಂಘದ ನಿರ್ಧಾರಗಳು.

ಜಿಲ್ಲಾ ಭೂಮಾಲಿಕರ ಸಂಘದ ಆಡಳಿತ ಸಮಿತಿಯ ಸಭೆಯೊಂದು ಕಳೆದ ತಾ. ೧೧ ರಂದು ಶ್ರೀ। ಕೆ. ಟಿ. ಅಳ್ವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭವಲ್ಲಿ ಸಂಘದ ಉಪಾಧ್ಯಕ್ಷ ಶ್ರೀ. ಕೆ. ಸಮಾಶಿನ ಆಡಿಗರು, ಹಾಗೂ ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಧರ್ಮಪತ್ನಿ ಶ್ರೀಮತಿ ದೇವಿ–ಇವರಿಬ್ಬರ ಮರಣಕ್ಕಾಗಿ ಮೌನಪ್ರಾರ್ಥನೆ ಸೂಚಕ ನಿರಾವು ಮಾನ್ಯವಾಯಿತು.

I. ಪಿಲಿಕ್ ಸರ್ವಿಸ್ ಕಮಿಶನರು ನುಂಗ ಳೂರಿಗೆ ಬಂದಿದ್ದಾಗ ಈ ಸಂಘದ ಪರವಾಗಿ ತನಗನ್ನು ಕಂಡಿದ್ದ ಶಿಷ್ಟಮಂಡಲಿಯ ಬೇಡಿಕೆಗೆ ಜಿಲ್ಲೆಕೊಡಲಿಲ್ಲ; ಜಿಲ್ಲೆಯಲ್ಲಿ ಅನುಸರಿಸಲಾಗುತ್ತಿರುವ ಆಕ್ಟಿ ಬತ್ತ ಸಂಗ್ರಹಣ ನಿರ್ಧಾಜಸವನ್ನು ಟೀಕಿಸಿ, ಕೇಂದ್ರ ಹಾಗೂ ಪ್ರಾಂತೀಯ ಸರಕಾರಕ್ಕೆ ಸಂಘದ ಜತೆ ಕಾರ್ಯದರ್ಶಿಗಳು ಮಾಡಿಕೊಂಡ ಮನವಿಯೂ ಗಮನಿಸಲ್ಪಡಲಿಲ್ಲ. ಆಲ್ಲನ ಜಿಲ್ಲೆಯಲ್ಲಿ ಅಧಿಕಾರಿಗಳು ಪಸಿಸಿರುವ ಈ ಕೆಳಗಿನ ಸಂಗ್ರಹಣ ನಿರ್ಧಾಜನವನ್ನು ಖಂಡಿಸುವ ನಿರಾವುಗಳು ಮಾನ್ಯವಾದುವು:

೧. ಸಮೀಪದ ಫಸಲಿಯ ಆಕ್ಟಿ ಬತ್ತ ಸಂಗ್ರಹಣದ ನಿರ್ಧಾಯಲ್ಲಿ, ಅಧಿಕಾರಿಗಳು ತಮ್ಮಿಚ್ಛೆ ಬಂದಂತೆ ನಿರ್ಧರಿಸುವ ಉಳಿತಾಯದ ಅಂದಾಜಿನ ನಿರ್ಣಾರದಲ್ಲಿ. ಆಕ್ಷೇಪಣೆಯನ್ನೆತ್ತಲು ಸಾಧ್ಯವಿಲ್ಲ.

೨. ಒಕ್ಕಲಿನ ಆಥವಾ ಧನಿಯ ಯಾವ ಹಿತವನ್ನು ಗಮನಿಸದೆ ಗೇಣಿಯ ಅಂದಾಜನ್ನು ಆಕ್ಟಿಯನ್ನೂ ತಾವೇ (ಅಧಿಕಾರಿಗಳೆ) ನಿರ್ಧರಿಸಲು ಮಾಡಿಕೊಂಡು, ಧನಿಗೆ ಯಾವ ನೋಟೀಸನ್ನೂ ಕೊಡದೆ ಆಕ್ಟಿಯ ಮೌಲ್ಯವನ್ನೂ ಒಕ್ಕಲಿನ ವರವೇ ಕೊಡುವರು.

೩ ಸಂಗ್ರಹಣಾಜ್ಞೆಯ ನಿಯಮಗಳನ್ನೂ ಅತಿಕ್ರಮಿಸಿ ಚೇರಾಯಗಾರರ ಸ್ವಂತ ಉಪಯೋಗಕ್ಕೆ ಬೇಕಾದುದನ್ನು ಸರಿಯಾಗಿ ಎಣಿಸದೆ ಅಧಿಕ ರಿಕ್ವಿಸಿಶನ್ ಮಾಡಿ ಆ ಮೇಲೆ ತನ್ನ ಆಕ್ಟಿಗೆ ಹೆಚ್ಚಿನ ಬೆಲೆಕೊಟ್ಟು ಸ್ವೋರಗಳಂತೆ ಪಡೆದುಕೊಳ್ಳುವಂತೆ ಆಸಿಗೆ ಕಾರ್ಡು ಕೊಡಿಸುವರು; (ಕಳೆದ ಜಾರಿ ಪೊಲೀಸ್ ದಾಳಿ ನಡೆಸಿ ಎಸ್ಟು ಹೆಚ್ಚಿನ ಸಂಗ್ರಹಣಾಗಿದೆಯೊ, ಅಸ್ಟೇ ಆಂಶ ಆಕ್ಟಿಯನ್ನು 'ಸಿ' ಕಾರ್ಡಿನ ಮೂಲಕ ಬೇಸಾಯಗಾರರಿಗೆ ಮರಿತ್ತಿ ಪಂಚಳಾಗಿವೆ).

೪. ಐದು ಎಕ್ರೆ ಜಮೀನಿನ ಸಾಗುವಳಿಯ ಸರ್ವೀಸಿನ ಬಗ್ಗೆ ನಾಲ್ಕು ಮುಂಡಿ ಆಕ್ಟಿ ಐದು ಮಿ ಪೆನ್ನು ೨ ಮುಂಡಿಗೆ ಇಳಿಸಲಾಗಿದೆ. ಇದು ನನ್ನ [illegible]

ನೋಟೀಸು

ಉಡ್ಪಿ ತಾಲೂಕು ಪೆಜಮಂಗಡಿಯ ಗ್ರಾಮದ ಸೂರಾಲು ಅರಮನೆಯವಲ್ಲಿನ ಸೂರಾಲು ನಾಗೇಂದ್ರ ತೋಳಾರ್ತಿ ಮೊನ್ನೆಗ ಚಂದ್ರಶೇಖರಯ್ಯನು ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನಂದರೆ:

ತಾ. 8-8-55ನೆಲ್ಲು ರಿಜಿಸ್ಟ್ರಿಸಿರಿ ನನ್ನ ಕುಟುಂಬಪೋಷಣಾದ ಕರಾರು ಪ್ರಕಾರ ನನ್ನ ಕುಟುಂಬಕ್ಕೆ ಇದುವರೆಗೆ ಇಪ್ಪ ಸಾಲ ಪರಿಹಾರಕ್ಕೆ ಸಾನು ತಕ್ಕ ಪರ್ಯಾಯಮಾಡಿರುತ್ತೇನೆ. ನನ್ನ ಕುಟುಂಬವ ಆಸ್ತಿಗಳನ್ನು ಸದ್ರಿ ಕರಾರು ಪರ್ತ ಪ್ರಕಾರ ಸ್ವಕ್ಕಪ್ರತ್ಯೇಕ ಸಂಪೂರ್ಣಗೊಂಡಿರುತ್ತೇನೆ. ಇನ್ನು ನಮ್ಮ ಕುಟುಂಬಕ್ಕೆ ಯಾವುದೋ ಸಾಲ ಮಾಡುವ ಗರ್ಜಿ ಇಲ್ಲ. ಕುಟುಂಬಾರ್ಥದ ಆಸ್ತಿಜಾಣಾಜ್ಞಾನಿಯಿಂದಾಗಲಿ ಕುಟುಂಬ ಜವಾಬ್ದಾರಿಯಿಂದಾಗಲೀ ಸಾಲ ಮಾಡುವರೆ ನನ್ನ ಕುಟುಂಬದವರಿಗೆ ಬೊಬ್ಬಿಬ್ಬರಿಗೆ ಅಂದಜೆ ಕುಟುಂಬದ ಹಿರಿಯ ಪೂಂಜರಿಂಗಾಗಲಿ ಇತರರಿಗಾಗಲಿ ಹಕ್ಕಿರುವುದಿಲ್ಲ. ಇದಕ್ಕೆ ವಿರೋಧವಾಗಿ ಯಾರಾದರೂ ನನ್ನ ಕುಟುಂಬದಿಂದ ನನ್ನ ಕುಟುಂಬವ ಹಿರಿಯರಾಗಲಿ ಕಿರಿಯರಿಂಗಾಗಲಿ ಸಾಲ ಕೊಟ್ಟರೆ ಅದು ನನ್ನ ಕುಟುಂಬಕ್ಕೆ ಬಾಧಿಸಲಿಕ್ಕಿಲ್ಲ.

Camp Udipi
24—11—45

ಚಂದ್ರಶೇಖರಯ್ಯ
ಸೂರಾಲು ಅರಮನೆ

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945.

ಗೆನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೬ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸಿಉಪ್ಪಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕ್ರೂ. ೫ ಪೋಸ್ಟ ಚಾರ್ಜ ೦ ಆಣೆ.

ವಿಳಾಸ:— ಗದಗ:–ಗದಗ ಫಾರ್ಮಸಿ, ಹುಬ್ಬಳ್ಳಿ:–ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿಪ್ರೇಸ್. ಶಕ್ತ್ಯನುವಾಹಾರ ಮಾಡತಕ್ಕ ಮಾಲಿಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

ಬೇಕು ಎಂದು ಸರಕಾರದೊದನ ವಿನಂತಿಸಿಕೊಳ್ಳುವ, ತಾಲೂಕು ವರ್ಗವಾರರ ಸಮಿತಿಗಳನ್ನು ಬಲಪಡಿಸಬೇಕೆಂದು ವರ್ಗವಾರರೊಡನೆ ವಿನಂತಿಮಾಡಿಕೊಳ್ಳುವ ನಿರಾವುಗಳನ್ನು ಶ್ರೀಮಂತ ಡಿ. ಮಂಜಯ್ಯ ಹೆಗ್ಗಡೆ, ಕೆ. ಟಿ. ಅಳ್ವ, ಎ. ಬಿ. ಶೆಟ್ಟಿ, ಎಸ್. ಕೃಷ್ಣ ಭಟ್, ಕೆ. ಪಿ. ಕೇಶವಗಿರಿ ಪ್ರಭು ಮತ್ತು ಜತೆ ಕಾರ್ಯದರ್ಶಿಗಳನ್ನೊಳಗೊಂಡ ಶಿಷ್ಟಮಂಡಲಿಯೊಂದು ಕಲೆಕ್ಟರರನ್ನು ಕಂಡು, ಆಕ್ಟಿಯ ಪರ, ಅಧಿಕ ರಿಕ್ವಿಸಿಶನಿಂಗ್, ಜುರು ಮಾನೆ, ಶಿಕ್ಷೆಗಳ ವಿಚಾರವಾಗಿ ನಿವೇದಿಸಿಕೊಳ್ಳಲು ನಿರ್ಧರಿಸಲಾಯಿತು.

ಬಿ ಲ್ಲವರ ಎಸೋಸಿಯೇಶನ್, ಮುಂಬಾಯಿ–

ಇ ಜಿ ಸ ಹದಿಮೂರನೇ ಸಾಂವತ್ಸರಿಕೋತ್ಸವವು ತಾ 16-11-45ರಲ್ಲಿ ಶ್ರೀಮಂತ ಬಸಪ್ಪಣ್ಣ ಭೂಪು ರೆಡ್ಡಿಯವರ ಸಭಾಧ್ಯಕ್ಷತ್ವ ಸ್ಥಾನದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಬೇರೆ ಬೇರೆ ಸಂಘ ಸಂಸ್ಥೆಗಳಿಂದಲೂ, ಶ್ರೀಮಂತರಿಂದಲೂ ಇನ್ನಿತರರಿಂದಲೂ ಹರಿಸಿ ಬಂದ ಪತ್ರಗಳನ್ನೂ ಆಂತೆಯೇ ಕಳುಹಿಸಿಕೊಟ್ಟ ಧನ ಸಹಾಯವನ್ನೂ ಓದಿಹೇಳಲಾಯಿತು. ಎಸೋಸಿಯೇಶನಿನ ಸಂಕ್ಷಿಪ್ತ ಚರಿತ್ರೆಯನ್ನೂ ಓದಿ ಹೇಳಿದ ನಂತರ ಸಭಿಕರುಗಳ ಪೈಕಿ ಶ್ರೀಯುತರುಗಳಾದ ಕೆ. ಯಸ್. ಗಾಯಿತೊಂಡೆ, ಟಿ. ಯಸ್. ಹೆಗ್ಡೆ ಅಡ್ವಕೇಟ್ಸ್, ಯಸ್. ಬಾಟೀಲ್, ಯಂ. ಎಂ., ಹಿಮೋರಕಿ, ಮೆನನ್, ಕೆ. ಪಿ. ಸೀರ್, ಯಸ್. ಪಿ. ಪಡುಬಿದ್ರಿ, ಯು. ಆರ್ಜಾನನ್, ರಾ. ಶ್ರೀ. ಕಸ್ತೂರಿ, ಮತ್ತು ಪಿ. ಯೆಲ್. ಕೋಟ್ಯಾನ್ ರವರು ಎಸೋಸಿಯೇಶನ ಉದ್ದೇಶಗಳನ್ನು ಕೊಂಡಾಡಿ ಭಾಷಣಮಾಡಿದರು. ಅಧ್ಯಕ್ಷರು ಶ್ರೀಮಂತ ಭೂನಾರಿಡ್ಡಿಯವರು ಎಸೋಸಿಯೇಶನ್ ಸಾರ್ವಜನಿಕರಿಗೆ ಸೈಯ್ಯುವ ಸಹಾಯ, ಬೆಂಬಲ, ಪ್ರೋತ್ಸಾಹ ಸಮೂಹೋದ್ಧಾರಕಾರ್ಯ ಹಾಗೂಯೇ ವಿದ್ಯೆ, ಕೈಗಾರಿಕೆಗಳಿಗೆ ಕೊಡುವ ಸಹಾಯ ಮತ್ತು ಪ್ರೋತ್ಸಾಹ ಕರ್ನಾಟಕಕ್ಕೆ ಬಯಸುವ ಭಾವೀ ಕಲ್ಯಾಣವನ್ನು ಕೊಂಡಾಡಿ ರೂಪಾಯಿ 1001 (ಒಂದು ಸಾವಿರದ ಒಂದು) ಧನ ಸಹಾಯವನ್ನಿತ್ತು ತನ್ನ ಚಿಕ್ಕ ತರಪ ಜೊಕ್ಕ ಭಾಷಣದಿಂದ ಸಭಿಕರನ್ನು ಆನಂದಗೊಳಿಸಿದರು. ಕರ್ನಾಟಕದ ವ್ಯಾಪಾರಿಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದು ವರ್ತಕ ವಿಭೂಷಣ ಆಂತೆಯೇ ಎಣ್ಣೆ ಕಾರಖಾನೆಗಳ ರಾಜನೆಂಬ ಬಿರುದನ್ನೂ ಪಡೆದ ಶ್ರೀಮಂತ ಬಸಪ್ಪಣ್ಣ ಭೂಮರೆಡ್ಡಿಯವರಿಗೆ ಧನ್ಯವಾದವನ್ನರ್ಪಿಸಿ "ಕರ್ನಾಥಿ" ಎಂಬ ಸುಕಾರಿಕ ನಾಟಿಕ ನಂತರ ಸಾಂತರು ಗೀತಾಮೊದಲಿನ ಸಭಾಕಾರ್ಯವಾಯಿತು.

ಮದ್ರಾಸಿನಲ್ಲಿ ಕೊಟ್ಟಿಕಾರ್ ಬಾಲಕೃಷ್ಣ ಪೈ ದಂಪತಿಗಳಿಗೆ ಸತ್ಕಾರ–

ಮದ್ರಾಸಿನ ಹೊಟೆಲು ಉಡಾ ಲಂಡ್ಸ್‌ನಲ್ಲಿ ಕಳೆದ ತಾ 18ನೇ ಶ್ರೀವಾರದಂದು ಶ್ರೀಮಂತ ಎ. ಶಾಂತ ನೂರ್ತಿ ನಾಯಿಡು, ಎಡ್ವೋಕೇಟ್ ಮತ್ತು ಎಸ್. ಸೂರ್ಯ ನಾರಾಯಣ, ಮೆನೇಜರ್, ಬ್ಯಾಂಕ್ ಆಫ್ ಇಂಡಿಯಾ ಇವರು ಜೊಂಟಾಯಿ ಲ್ಯಾಂಡ್ ಎಸ್ಟೇಟ್ಸ್ ಕಂಪೆನಿಯ ಮಜಸ್ಸಿ ಡೈರೆಕ್ಟರ್ ಶ್ರೀ. ಕೊಟ್ಟಿಕಾರ್ ಬಾಲಕೃಷ್ಣ ಪೈಯ ನವಿಗೂ ಆವರ ಸಪ ಧರ್ಮಿಣಿಯರಿಗೂ ಔತಣ ಸತ್ಕಾರವನ್ನಿತ್ತು ಗೌರವಿಸಿದರು 25 ಮಂದಿ ಆಧ್ಯರು ಈ ಸತ್ಕಾರ ಕೂಟದಲ್ಲಿ ಭಾಗವಹಿಸಿದ್ದರು. ಕೋರ್ಪರೇಶನಿನ ಡಿಪ್ಯುಟಿ ಮೇಯರ್ ಶ್ರೀ ಗೋಪಾಲ ಮೆನನ್‌ರವರು ಆತಿಥಿಯ ಗುಣಗಳನ್ನು ಹೊಗಳಿ ಕೊಟ್ಟು ಕೊಟ್ಟಿಕಾರ್ ಬಂಧುಗಳು ಜೀವ ವಿಮಾ ಕ್ಷೇತ್ರದಲ್ಲಿ ಮಾಡಿದ ಪ್ರಶಂಶನೀಯ ಕಾರ್ಯಗಳನ್ನೆತ್ತಿ ವರ್ಣಿಸಿದರು. ಶ್ರೀಗಳಾದ ಸಂಜೀವ ಕಾಮತ್, ಬಿ. ಎ. ಸೈ ಮೊದಲಾದವರ ಸಂದರ್ಭೋಚಿತ ಭಾಷಣಗಳಾದ ನಂತರ ಸತ್ಕಾರಕೂಟ ತೊನೆಗೊಂಡಿತು.

(೧೦ನೇ ಪುಟದಿಂದ ಮುಂದುವರಿದುದು.)

ಳಾದ ಕಾಂಗ್ರೆಸ್ ಮಂತ್ರಿಗಳು ಶಿಕ್ಷಣ ವಿಧಿಸುವಂತಹ ಕಾನೂನುಗಳನ್ನು ಅಶ್ರಯಿಸ ಬಾರದು ಎಂಬ ಸೂಚನೆಗಳು ಬರುತ್ತಿವೆ. ಕಾಂಗ್ರೆಸಿನಿಂದ ಅಂಗೀಕೃತವಾಗಿರುವ ಅಹಿಂಸೆಯ ಕುರಿತು ನನ್ನ ಅಭಿಪ್ರಾಯ ಅದಲ್ಲ. ಹಿಂಸೆಯ ಪ್ರೇರಣೆಯನ್ನಾಗಲೀ ಉದ್ದೇಶಪೂರ್ವಕವಾದ ಹಿಂಸೋತ್ತೇಜಕ ಭಾಷಣಗಳನ್ನಾಗಲೀ ಅವರು ಗಡೆಗಣಿಸಿ ಬಿಡಬಾರದು" ಎಂದು 1937ನೇ ಅಕ್ಟೋಬರದ 'ಹರಿಜನ'ದಲ್ಲಿ ಗಾಂಧಿಜೀ ಬರೆದರು.

ಮಂತ್ರಿಗಳಿಗೆ ನುನೋಕಾಂತಿಯಿರಲಿಲ್ಲ.

ಇನ್ನು, ಕಾಂಗ್ರೆಸ್ ಮಂದಿಯು ಅಮಿತೋತ್ಸಾಹಗಳಿಂದಾಗಿಯೂ ಕಾಂಗ್ರೆಸ್ ಮಂತ್ರಿಗಳ ಕೆಲಸ ಕಷ್ಟವಾದುದಿದೆ. ಕಾಲೇಜು ಯುನಿವರ್ಸಿಟಿ ಕಟ್ಟಡ, ಪ್ರಯಾಣಿಕರ ಬಂಗಲೆ, ಸರಕಾರೀ ಮತ್ತು ಲೋಕಲ್ ಬೋರ್ಡುಗಳ ಸರ್ವ ಕಟ್ಟೋಣಗಳ ಮೇಲೂ ತ್ರಿವರ್ಣಧ್ವಜ ಹಾರಬೇಕೆಂದು ಅವರ ಒತ್ತಾಯ. ಇದನ್ನೂ ಎಸೆಂಬ್ಲಿಯ ಆರಂಭದಲ್ಲಿ 'ವಂದೇ ಮಾತರಂ' ಹಾಡುವದನ್ನೂ ಬೇರೆಯವರು ಅಕ್ಷೇಪಿಸಿದರು. ಈ ಆಕ್ಷೇಪಗಳಿಗೆಗಳೇ ಬೆಲೆ ಬಂತು. ಇದರಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸಿಗರು ಅಸ್ವಾಭಾವಿಕ ನಿರ್ಬಂಧಗಳನ್ನು ಹೇರುತ್ತಾರೆಂಬ ಆರೋಪವು ಕಾಂಗ್ರೆಸಿಗರಿಂದಲೇ ಬರಹತ್ತಿತು. ಇಷ್ಟೇ ಅಲ್ಲ, ಅಲ್ಲಲ್ಲಿ ತಲೆಯೆತ್ತುತ್ತಿದ್ದ ಜಾತೀಯ ಗಲಭೆಗಳು ಕಾಂಗ್ರೆಸ್ ಮಂತ್ರಿಗಳನ್ನು ಮನೋನಿಮ್ಮದಿಯಲ್ಲಿರಲು ಕ್ಷಣಕಾಲ ಬಿಡಲಿಲ್ಲ. '1937ನೇ ಒಕ್ಟೋಬರ್ ಪ್ರಾರಂಭದಿಂದ 1939ನೇ ಸೆಪ್ಟೆಂಬರ್ ಅಂತ್ಯದ ವರೆಗೆ ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಒಟ್ಟಿಗೆ 57 ಭಯಂಕರ ಜಾತೀಯ ಗಲಭೆಗಳು ನಡೆದುವು' ಎಂದು ಪ್ರೊಫೆಸರ್ ಕೊಪ್ಲಾಂಡರು ಬರೆದಿದ್ದಾರೆ. ಆ ಸೈಕಿ ಬಿಹಾರಿನಲ್ಲಿ 15, ಸಂಯುಕ್ತ ಪ್ರಾಂತ್ಯದಲ್ಲಿ 14, ಮಧ್ಯ ಪ್ರಾಂತ್ಯದಲ್ಲಿ 11, ಮದ್ರಾಸಿನಲ್ಲಿ 8, ಬೊಂಬಾಯಿಯಲ್ಲಿ 7, ಒರಿಸ್ಸಾದಲ್ಲಿ 1, ಗಡಿನಾಡಿನಲ್ಲಿ 1 ಈ ಗಲಭೆಗಳಲ್ಲಿ ಜಮಿಂಗೊಂತ 1700 ಮಂದಿಯಲ್ಲಿ 130 ಮಂದಿ ಮಡಿದಿದ್ದರು. ಇದೇ ಅವಧಿಯಲ್ಲಿ ಕಾಂಗ್ರೆಸೇತರ ಪ್ರಾಂತ್ಯಗಳಲ್ಲಿ 28 ಭೀಕರ ಜಾತೀಯ ಗೊಂದಲಗಳು ನಡೆದಿದ್ದುವು. ಪಂಜಾಬಿನಲ್ಲಿ 17, ಬಂಗಾಳವಲ್ಲಿ 7, ಅಸ್ಸಾಮಿನಲ್ಲಿ 3, ಸಿಂಧಿನಲ್ಲಿ 1. ಇವುಗಳಲ್ಲಿ 300 ಮಂದಿ ಜಮಿಂಗೊಂಡು 36 ನುಂದಿ ಮಡಿದಿದ್ದರು. ಕೊಲೆ, ಡಗಾಕೃತ್ಯ, ಸುಲಿಗೆ, ರಕ್ತಪಾತಗಳನ್ನು ಈ ಗೊಂದಲಗಳು ನಿರ್ಮಿಸಿದ್ದುವು. ಜಬ್ಬಲ್‌ಪುರ, ಅಲಹಾಬಾದ್, ಕಾಶಿ, ಗಯಾ, ಬಿಹಾರ್, ತೋಲಾಪುರ, ಬೊಂಬಾಯಿ, ಮದ್ರಾಸ್ ಗಳೇ ಇವುಗಳ ಕ್ಷೇತ್ರಗಳು.

ಶ್ರಮಜೀವಿಗಳ ವಿರೋಧ

ಕೆಲಸಗಾರರು ಕೂಡಾ ಕಾಂಗ್ರೆಸ್ ಸರಕಾರಗಳ ಮೇಲೆ ದಯೆ ತೋರಲಿಲ್ಲ. ಗಾಂಧಿಜೀಯ ಕೈಯೊಳಗಿದ್ದ ಅಹಮ್ಮದಾಬಾದಿನ ಟ್ರೇಡ್ ಯೂನಿಯನ್ನನ್ನು ಕಮ್ಯೂನಿಸ್ಟರು ವಶಪಡಿಸಿಕೊಂಡು 1937ರಲ್ಲಿ ಅಹಮದಾಬಾದ್ ಕೆಲಸಗಾರರ ಮುಷ್ಕರ (ಗಲಭೆಯಿರಲಿಲ್ಲ) ನಡೆಯಿತು. ಕೊನೆಗದು ತೀರ್ಮಾನಗೊಂಡಿತು. ಕಾನ್‌ಪುರ ಬೊಂಬಾಯಿಗಳಲ್ಲಂತೂ ಆಪಾಯಕಾರೀ ಗೊಂದಲಗಳೆದ್ದುವು. ಆಕಸ್ಮಿಕವುಷ್ಕರಗಳನ್ನು ನಿಲ್ಲಿಸಲು ಬೊಂಬಾಯಿ ಸರಕಾರವು ಕೂಲಂಕುಶ ವಿಚಾರಣೆಯ ನಂತರ ಪಾಸ್ ಮಾಡಿದ 'ಟ್ರೇಡ್ ಡಿಸ್ಪ್ಯೂಟ್ಸ್ ಏಕ್ಟ್' ನ ವಿರುದ್ಧ ಬೊಂಬಾಯಿ ಕೆಲಸಗಾರರು ನಡೆಸಿದ ವ್ಯಾದರ್ತನವು ಮಹತ್ತರವಾದುದು. ಬೊಂಬಾಯಿಯ 77 ಮಿಲ್ಲುಗಳ ಪೈಕಿ 17ರಲ್ಲಿ ಮುಷ್ಕರ ನಡೆಯಿತು. ಆದರೆ ಕಾಂಗ್ರೆಸ್ ಸರಕಾರವು ವಜ್ರಹಸ್ತದಿಂದ ಈ ಗೊಂದಲಗಳನ್ನು ನಿಲ್ಲಿಸಿಬಿಟ್ಟಿತು. 1937 ಮತ್ತು 38ರಲ್ಲಿ ಕಾನ್ಪುರದಲ್ಲಿ ಪುನಃ ಮುಷ್ಕರಗಳೆದ್ದು ಕೊನೆಗೊಂದು ತೀರ್ಮಾನಮಾಯಿತು ಬಿಹಾರಿನಲ್ಲಿ ಕಿಸಾನ್ ಚಳವಳವು ಅತ್ಯುಗ್ರವಾಗಿ ನಡೆದು ಸೂರೆ ಸುಲಿಗೆ, ಬೆಳೆಗಳ ನಾಶ ಕೂಡ ನಡೆಯಿತು. ಸಂಯುಕ್ತಪ್ರಾಂತ್ಯದಲ್ಲೂ ಇದೇ ಹಾಡು ಹಬ್ಬು ವಕ್ಕಲುಗಳು ಗೇಣಿ ನಿರಾಕರಣಾ ಚಳವಳ ಹೂಡಿದರು. ಅಂತ್ಯದಲ್ಲಿ ಎಲ್ಲವೂ ಒಂದಲ್ಲೊಂದು ತೀರ್ಮಾನ ಕಂಡವು.

ಕೈದಿಗಳಿಗಾಗಿ ಗವರ್ನರ ಕೂಡನೆ ಜಟಾಪಟಿ

ಮದ್ರಾಸ್ ಮತ್ತು ಬೊಂಬಾಯಿಯ ಲ್ಲಿದ್ದ ಪ್ರತಿಯೊಬ್ಬ ರಾಜಕೀಯ ಕೈದಿಯನ್ನು ಬಿಟ್ಟಿಸ್ವರಕ್ಕೆ ಬಿಹಾರಿನಲ್ಲಿಂದು 12, ಸಂಯುಕ್ತ ಪ್ರಾಂತ್ಯದಲ್ಲಿ 1೦ನೆಯ ದಿ ಮತ್ತೂ ಬಂಧನದಲ್ಲಿದ್ದರು. ಇವರಲ್ಲಿ ಕೆಲವರು ಉಪವಾಸ ವ್ರತ ಕೈಕೊಂಡರು. ಈ ಸಂಬಂಧವಾಗಿ ಅವರೆಡು ಪ್ರಾಂತ್ಯಗಳ ಗವರ್ನರ್ ಮತ್ತು ಕಾಂಗ್ರೆಸ್ ಮಂತ್ರಿಗಳೊಳಗೆ ಜಟಾಪಟಿಗೆ ಮೊದಲಾಯಿತು. ಕೂಡಲೇ ಈ ಜಗಳದ ನಡುವೆ ವೈಸರಾಯಿ ಕಾಣಿಸಿಕೊಂಡು ಇದು ತನ್ನ ವಿಶೇಷಾಧಿಕಾರ ಪ್ರಯೋಗಿಸಬೇಕಾದ ಸ್ಥಿತ್ಯೆಯೆಂದೂ, ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯದ ಎಲ್ಲಾ ಕೈದಿಗಳನ್ನು ಬಿಟ್ಟರೆ, ಹಿಂಸಾತ್ಮಕ ಬಂಧಿತರಿರುವ ನೆರೆಯ ಪ್ರಾಂತ್ಯಗಳಾದ ಬಂಗಾಳ ಮತ್ತು ಪಂಜಾಬುಗಳ ಮೇಲೂ ಅದರ ಪರಿಣಾಮವಾಗುವದೆಂದೂ ಕಾಂಗ್ರೆಸ್ ಮಂತ್ರಿಗಳನ್ನು ಆಕ್ಷೇಪಿಸಿದರು. ಆದರೆ ಸಾರ್ವಜನಿಕರಿಂದ ಕಾಂಗ್ರೆಸ್ ಸರಕಾರಗಳು ತಮ್ಮ ಕರ್ತವ್ಯ ಮಾಡಲಿಲ್ಲವೆಂಬ ಆರೋಪ ಬಂತು. ನಿರ್ಬಂಧಿತರ ಬಿಡುಗಡೆಗೆ ಗವರ್ನರರು ಸಮ್ಮತಿ ಕೊಡಲಿಲ್ಲವಾದ್ದರಿಂದ ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯಗಳ ಮಂತ್ರಿಗಳು ರಾಜೀನಾಮೆ ಕೊಡುವ ಸಂದರ್ಭ ತಲೆದೋರಿತು. ಈ ಪ್ರಶ್ನೆಯು ಹರಿಪುರ ಕಾಂಗ್ರೆಸಿನ ಮುಂದೆ ಬಂದಾಗ ವೈಸರಾಯಿ ಹಾದಿಗೆ ಬಂದರು. ಅಂತೂ 1938ನೇ ಮಾರ್ಚಿಯೊಳಗೆ ಒಬ್ಬನ ಹೊರತು ಮಿಕ್ಕೆಲ್ಲರ ಬಿಡುಗಡೆಯಾಯಿತು.

ಗವರ್ನರ್ ಮತ್ತು ಕಾಯಂ ಕಾರ್ಯದರ್ಶಿಗಳ ಕೈವಾಡ

ಕಾಂಗ್ರೆಸಿನ ಈ ಹೊಸ ಮಂತ್ರಿಗಳ ಮುಂದೆ ಮತ್ತೊಂದು ಪ್ರಬಲತಂಕವಿದ್ದಿತು. ತನಗೆ ಯೋಗ್ಯವೆಂದು ತೋರಿದರೆ ಅಥವಾ ತನ್ನ ತೀರ್ಮಾನಾನುಸಾರ ವರ್ತಿಸುವ ವಿಶೇಷಾಧಿಕಾರವು ಗವರ್ನರರಿಗೆ ಕೇಗೂ ಇದ್ದದ್ದೇ. ಆದಕ್ಕೆ ಜತೆಯಾಗಿ, [illegible] ಜೊತೆಗೆ ಮತ್ತು ಸಾಸನ ಬದ್ಧವಾಗಿ ಪ್ರಶ್ನಾತೀತ ಅಧಿಕಾರವಿದ್ದ ಕಾಯಂ ಕಾರ್ಯದರ್ಶಿಗಳು ಈ ಮಂತ್ರಿಗಳ ಬೆಂಗಡೆಯಲ್ಲಿದ್ದರು. ಮಂತ್ರಿಗಳ ಬೆನ್ನಹಿಂದೆ, ಗವರ್ನರರ ಚಿತ್ತಾನುಸಾರ ಕಾರ್ಯ ನಿರ್ವಹಿಸುವ ಅಧಿಕಾರಿಗಳಿದ್ದರು. ಪ್ರತಿಯೊಂದು ಆಜ್ಞೆಯನ್ನೂ ತಮ್ಮ ಸಹಿಯಿಂದ ಹೊರಡಿಸುವ ಅಧಿಕಾರ ಅವರದಾಗಿತ್ತು. ಆದರೆ ಬೊಂಬಾಯಿ ಕಾಂಗ್ರೆಸ್ ಮಂತ್ರಿಗಳು ಈ ಕುರಿತೊಂದು ಒಡಂಬಡಿಕೆ ಮಾಡಿಕೊಳ್ಳಲು ಸಮರ್ಥರಾದರು. ಗವರ್ನರರನ್ನು ಕಂಡು ಬಂದ ಕಾರ್ಯವರ್ತೆಯು ತಮ್ಮೊಳಗಿನ ಸಂಭಾಷಣೆಯ ಸಾರಾಂಶವನ್ನು ಅರಿದು ತಂದಿಡಬೇಕೆಂಬುದಕ್ಕೆ ಅಪ್ಪಿಯವರೊಪ್ಪಿದರು. ತಾನು ಯಾವುದೊಂದು ಕಾರ್ಯಕ್ಕೆ ಮನಸ್ಸು ಮಾಡುವ ನೊದಲು ಮಂತ್ರಿಗಳೊ ತನೆ ಸರ್ಯಾಲೋಚಿಸಿಕೊಳ್ಳುವೆನೆಂದು ಗವರ್ನರರೂ ಸಮ್ಮತಿಸಿದರು ಒಂದು ಶಿಸ್ತು ಜ್ಯಾರಿಯ ವಿಷಯದಲ್ಲಿ ಮಂತ್ರಿಗಳು ಒಮ್ಮುಖದ ಅಭಿಪ್ರಾಯದಿಂದಿದ್ದು, ಸರ್ವ ಸಮ್ಮತಿಯ ಶಿಫಾರಸೊಂದನ್ನು ಮಾಡಿದರೆ, ಗವರ್ನರರು ಅದಕ್ಕನುಗುಣವಾಗಿ ಆಜ್ಞೆದೆ, ಅನ್ಯಥಾ ವರ್ತಿಸಕೂಡದೆಂಬುದು ನಿಜ. ಹೀಗಿದ್ದರೂ ಮದ್ರಾಸಿನಲ್ಲೊಂದು ವಿಚಿತ್ರ ನಡೆದಿದ್ದುದನ್ನು ಗಮನಿಸಬೇಕು. ಚೆಟ್ಟಿಪಾಲಾಸಾ ಫೇಕ್ಟರಿಯಲ್ಲಿ ನಡೆದಿದ್ದ 'ಸ್ವಸ್ಥಾನ ಮುಷ್ಕರ'ದಲ್ಲಿ ಕೆಲಸಗಾರರಿಗೆ ಎಚ್ಚರಿಕೆ ಕೊಡದೆ ಗುಂಡು ಹಾರಿಸಿದ್ದ ಹೊಣೆಯು ವಿಶಾಖ ಪಟ್ಟಾಮಿನ ಜಿಲ್ಲಾ ಕಲೆಕ್ಟರದೆಂದು ವಿಚಾರಣಾ ಸಮಿತಿಯೊಂದರ ತೀರ್ಮಾನವಾಗಿತ್ತು. ಅದಕ್ಕಾಗಿ ಅವರ ಮೇಲೆ ಗವರ್ನರರು ಶಿಸ್ತು ಜ್ಯಾರಿ ಮಾಡಿದುದೆಂದರೆ ವಿಶಾಖ ಪಟ್ಟಾಮಿನಿಂದ ಊಟಕಮಂಡಿಗೆ ವರ್ಗಾಯಿಸಿದುದು. (ಇದು ನಿಜಕ್ಕೂ ಒಂದು ಬಹುಮಾನ ಹೊರತು ಶಿಕ್ಷೆಯಲ್ಲ!) ತನ್ನ ಕೊನೆಯ ಸರ್ವೀಸಿನಲ್ಲಿದ್ದ ಆಗಿನ ಊಟಕಮಂಡಿನ ಕಲೆಕ್ಟರರು ಇದನ್ನು ನಿವೇದಿಸಿದಾಗ, ಅಪರಾಧಿ ಕಲೆಕ್ಟರರನ್ನು ಪ್ರಾಂತ್ಯದ ಎರಡನೇ ಉತ್ತಮ ಜಿಲ್ಲೆಯೆನ್ನಿಸಿದ ಮಲಬಾರಿಗೆ ವರ್ಗವೆಂದಾಯಿತು. ಅಲ್ಲಿಂದಲೂ ಇದೇ ಆಕ್ಷೇಪ ಬಂದಾಗ ಮತ್ತೊಂದು ಶೈಸ ಜಿಲ್ಲೆಯಾದ ಬ್ಯಾರಿಗೆ ಕಳುಹಿಕೊಟ್ಟರು.

ಇಂತಹ ಅಡಚಣೆಗಳ ಮತ್ತು ಆತಂಕಗಳ ನಡುವೆ ಸಿಕ್ಕಿಕೊಂಡು ಕಾಂಗ್ರೆಸ್ ಮಂತ್ರಿಗಳು ತಮ್ಮ ಸಾಮಾಜಿಕ, ಆರ್ಥಿಕ ಮತ್ತು ರೈತ್ವಾರಿ ಸುಧಾರಣೆಗಳ ಯೋಜನೆಯನ್ನು ಮುಂದೊತ್ತಬೇಕಾಗಿತ್ತು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕಾರಿಯೂ ಪ್ರೈವೆಟ್ ವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾನಂತರ ಸಂಭವಿಸುವ ಹೊಗಳಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಏಕ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನ ಕಾಮೇಶ್ವರಿ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಸುತ್ತು ಜನನೇಂದ್ರಿಯದ ಶಕ್ತಿಹೀನತೆ, ಏದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉದ್ರೇಕ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ತಲ್ಲು 1ರ 10-0-0, ¼ ರಾತ್ತಲ್ಲು 3-1-0, ½ ರಾತ್ತಲ್ಲು 3-12-0.

ಎಲ್ಲಾ ಸಮಸ್ತ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ಸಮಸ್ತಗಳು ಔಷಧಿಗಳಿಗೆ ದೊರೆಯುತ್ತವೆ. ಕ್ಯಾಟಲಾಗ್ ಬರಬೇಕಾದಲ್ಲಿ ರೋಗಕ್ಕೆ ಸಕ್ಕತ್ತಾದ ಔಷಧಿ ರವಾನೆಯಾಗಲಿ. (1) ಉಡುಪಿ ವಿಜಯವಿಠಲ: —ನವಭಾರತ ಬುಕ್ ಡಿಪೋ, (2) ಬೊಂಬಾಯಿ ವಿಜಿಂದರು: ಪೂಲ್ಯುಲರ್ ಸ್ಟೋರ್ಸ್, ಕೆಮಿಸ್ಟ್183, ಸುಪಾರಿಬಾಗ್ ರೋಡ್, ಜಿ. ಐ. ಪಿ ರೈಲ್ವೆ, ವರ್ಕ್ ಶಾಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ನಿರ್ವಹಿಸುತ್ತಿರುವ ಈ ಬ್ಯಾಂಕು ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ತಕ್ಕಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಧ್ಯೇಯೋದ್ದೇಶವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	...	...	0	6 0
2.	ಸಾಮುದ್ರಿಕ ಶಾಸ್ತ್ರ	....	...	0	8 0
3.	ಬಾಲ ರಾಮಾಯಣ	...	....	0	5 0
4.	ಸುಕನಾ ಚರಿತ್ರೆ	....	....	0	5 0
5.	ಕೊಳಲು ಕೃಷ್ಣ	....	....	0	8 0
6.	ಗುರುಹಿರಿಯರಲ್ಲಿ ಅವನತಿ	....	....	0	8 0
7.	ದ್ವೈತಮತ ಖಂಡನೆ	....	....	0	6 0
8.	ಧರ್ಮಸಂಕಟ	....	....	0	4 0
9.	ಪೂರೂರವ	....	....	0	8 0
10.	ನಿರ್ದಯ ಜ್ಞಾನ	...	...	0	8 0
11.	ವಿದ್ಯಾರಣ್ಯ ಕಾವ್ಯಂ	....	....	1	0 0
12.	ಚಂದ್ರಗುಪ್ತ ಚಕ್ರವರ್ತಿ	....	....	1	0 0
13.	ಸ್ವದೇಶಿ	....	....	0	4 0
14.	ಹರಿಜನ ಸೇವೆ	....	....	0	4 0
15.	Gauthama the Buddha		....	0	8 0
16.	ಪ್ರಾರ್ಥನೆ	..	....	0	2 0
17.	ಖಂಡೀ ಪಹಲಿ ಪೋತಿ	....	....	0	2 0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೋಕಣಿ ಭಾಷಾ ಪುರಾಣಗ್ರಂಥ)			0	4 0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, **ಉಡುಪಿ.**

ನೂತನ ಪುಸ್ತಕಗಳು

ತುಳು ಸಾಹಿತ್ಯ1	....	....	1	0	0
ಕೃಷ್ಣರಾಜ ಪರಂಗೊ	....	....	1	0	0
ತುಳುವಾಲ ಬಲಿಯೇಂದ್ರ	....	....	0	4	0
ಅಳಿಯ ಸಂತಾನದ ಕಟ್ಟಾದ ಗುಟ್ಟು		....	0	8	0
ಕಾಪಿಗೆ	....	....	0	8	0
ತುಳು ವ್ಯಾಕರಣ	...	....	1	0	0
ಮುದ ಮಾಳತ್ತ್ ಮದಾ ಮಾಯೆ		....	0	4	0
ಜನಮರ್ಲ್	....	....	0	12	0
ತುಳು ಸವ್ಯಸಾಚಿಕೆ	....	....	0	2	0
ಬಂಗಾರ್ದಂಗಿದ ಕತೆ	....	....	0	2	0
ಮಿತ್ಯ ನಾರಾಯಣ ಕತೆ	....	....	0	1	0
ಸತೀ ಕಮಲೆ	....	....	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ

ಹಳೆಗನ್ನಡದ ಸುಂದರ ಕಾವ್ಯ

ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, ಉಡುಪಿ.

ಬೆಲೆ: **3—0—0**

(ದಪ್ಪವಾದ ಹೊದಿಕೆಯುಳ್ಳದ್ದು)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಪಿ. ಎ. ಪೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ

ನಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಪ್ರತಿ ಪ್ರತಿಗೆ ರೂ. 0—1—6



ನವಯುಗ

ವರ್ಷ ೨೫ ವಾರ ೧೪ ಪ್ರತಿ ಗುರುವಾರ ಹೊರಡುವ ಗಾಣ್ಮೀಯ ವಾರಪತ್ರಿಕೆ. [Vol. 25 No. 14

Founder. SRI A. B. SHETTY.

ಉಡುಪಿ • 6—12—1945 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಚಿಕೆ ರೂ. 0—1—6.

ಅಮೃ ಕಾಂಜನ

ಕಲಿಪೀಡನೆ, ಕಿರಿ. ವೇದನೆ, ಉಳುಕು ಕ.ತ್ತಿಗೆ, ಧೂಜ, ಹುಣ್ ವೇದನೆಗಳಿಗೂ ವಿಶೇಷವಾಗಿ ಪ್ರಾಯೋಗಿಕ ಪ್ರಯೋಜನಕಾರಿಯಾಗಿ ಕಂಡುಬಂದಿರುವ ಬೇರೆ ವಿಷಮುಂಡಾದ ಬೆಸೆ ಪಕ್ಷವಾತ ನೋವಿನ ನೋವಲಾದ ಎಲ್ಲಾ ರೋಗಗಳಿಗೂ ಉಪಯೋಗಿಸಬಹುದಾದ್ದು.

REGD.

ಅಮೃಕಾಂಜನ ಲಿಮಿಟೆಡ್.

ಮುದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

POLICYHOLDERS' OWN COMPANY.

Policy-holders are the sole owners of a Mutual Company, they alone share in the profits of the Company and "Canara Mutual" is such a Company Its aim is to render the highest type of Life Assurance service to its Policy-holders. With such an aim, the Company has progressed on very sound lines and made a name in the Indian Insurance World. All this is owing to the co operation of the public with the Company. "Canara Mutual" has also become a Synonym for "Prompt Settlement"

THE CANARA MUTUAL ASSURANCE COMPANY, LTD.,

(UDIPI, S. India.)

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಆದು

'ಜುಪಿಟರ್' ದೇವತೆಗಳ ರಾಜ)ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ

'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ,ವಿಜಂಟರು ಮತ್ತು ಓರ್ಗನೈಸರುಂಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,

ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ವಿಜಂಟರ್.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

1944ರ ಹೊಸ ವ್ಯವಹಾರವು 2½ ಕೋಟಿಗೂ ಮಿಕ್ಕಿದೆ.

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ ನಿಮಾ ಸಂಸ್ಥೆಗಳ್ಲೊಂದು

ಸ್ಥಾಪನೆ] **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** [1910

ದಕ್ಷಿಣ ಭಾರತದ ಚೀಫ್ ವಿಜಂಟರು.

ಕಳೆದ 35 ವರುಷಗಳಲ್ಲಿ—ಯುದ್ಧ ಮತ್ತು ಕಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾತಿಗಳಿಗೆ ಲಾಭಕಾರಿಯಾಗುವಂತೆ ಸಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—**53,00,000.**

KOCHIKAR BROTHERS, LTD.

Central Office:—**UDIPI.** S. K.

Mangalore O Calicut O Bangalore O Madras O Madura O Trivandrum O Bombay

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nauses.

BHUVANENDRA PRODUCTS LTD., Kalapadi.

'ಭುವನೇಂದ್ರ'

ಚಂದ್ರಮಸ್ ಸಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8 ಹೊಟ್ಟು, ಸಣ್ಣವಕ್ಕಳಿಗೆ 10ರಿಂದ 2ಹೊಟ್ಟು ಅವರವರ ಜೂ ಸಿಸುವ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಾಲಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ,ದ. ಕ.

ಉಡುಪಿ ಸ್ಯಾಕ್ಸೆರು. ಡಾ. ಪಾಯಕ್ಕೆಕನ್ಸ್‌ಲೈಂಗ್ ರೂಮ್ಸ್‌ವೆಂಡ್ ಫಾರ್ಮೆಸಿ; ಶ್ರೀ ಅರ್. ಎಸ್. ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ ಫಾರ್ಮೆಸಿ; ಡಾ. ಕೆ. ಕೇಶವ ಗಿರಿಪೈ, L I M; ಡಾ ಮೆಂಕಟರಾಯ್, ಕೊರಡ್ಡಲ್, ನನಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank

at

KANHANGAD

on 17-11-1945, by

Sri B. Appaswamy Chetty, B. A., R. D O, Puttur.

A branch of the Bank will be opened at MERCARA shortly.

The Vijaya Bank Limited.

Head Office:- MANGALORE.

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,

ಪ್ರೊಪ್ರೈಟರ್.

'ಆದಾಯ ಹಿಂಡು' ಸೂರೆಖೋರ

(ವಿಶೇಷ ಹೆಮ್ಮೆಗಾರರಿಂದ)

● ಈ ಬರೆಹಗಾರರೊಂದು ಸ್ವಪ್ನಚಿತ್ರ ಬಿಡಿಸಹತ್ತಿದ್ದಾರೆ. ಬ್ರಿಟಿಷ್ ● ಸರಕಾರದ ಬದಲು ಸ್ವದೇಶೀ ಸರಕಾರವಿರುತ್ತಿದ್ದರೆ.....ಆದರೆ ಸುಭಾಷ್ ಚಂದ್ರ ಬೋಸರ 'ಆಜಾದ್ ಹಿಂದ್' ಸರಕಾರದ ಬದಲಿಗೆ ದುಭಾಷ್ ಚಂದ ಮೋಸದ 'ಆದಾಯ ಹಿಂಡು' ಸೂರೆಖೋರರನ್ನು ಕೋರ್ಟಿಗೆಳೆಯುತ್ತಿತ್ತು-'ಜೈ ಹಿಂದ್' 'ದಿಲ್ಲಿ ಚಲೋ' ಘೋಷಣೆಗಳ ಕಂಠಹಿಸುಕುವ ಬದಲಿಗೆ ಜೀವನಾವಶ್ಯಕ ಸಾಮಾಗ್ರಿ ಕೇಳಬಂದವರಿದಿರು 'ಕೈ ಹಿಂದ್' 'ಇಲ್ಲ ಚಲೋ' ನಾಲರನ್ನೆ ಹಿಡಿದು ಹಿಂಸಿಸುತ್ತಿತ್ತು—ಘಾನನಾಜ್, ಸೈಗಾಲ್, ಧಿಲ್ಲನ್ನರ ಬದಲಿಗೆ ಹಣವಜಾ, ಸೈ-ಗಾಳಿ, ಇಲ್ಲನ್ನುವವರೇ ಇಂದಿನ ಆಪರಾಧಿಗಳಾಗಿ ನಿಲ್ಲಬೇಕಾಗಿತ್ತು—ಎಂದೆಲ್ಲಾ ಏನೇನೋ ಅಣಕಿಸಿದ್ದಾರೆ. ನವ ಧಿಲ್ಲಿಯ ವಿಚಾರಣೆ ಮುಗಿಯುವ ಮೊದಲೇ—ಹೆಚ್ಚೆಂದರೆ ಇನ್ನೆರಡು ವಾರಗಳೊಳಗೆ—ಈ ಸ್ವಪ್ನಲೋಕದ ಮೊಳಪ್ಪವು ಮುಗಿಯಲಿದೆ.

ಒಂದು ತಿರುಗ ಮುರುಗ

(ಮೇಲಿನ ಜನರಾಳು ಬಹಳಲಂಡರ ಅಧ್ಯಕ್ಷತೆಯಲ್ಲಿ ಕೋರ್ಟು ಮಾರ್ಶಲ್ ಜಡ್ಜರುಗಳೆಲ್ಲಾ ಮಂಡಿಸಿದ್ದಾರೆ. ಡಿಫೆನ್ಸ್ ವಕೀಲರಾಗಿ ನಿಜ ಬಹುದೂರ, ಜನಾಹಾರ ನೆಗಳು, ಆಸೆ ಪೋಲಿ, ಲಾಭ ಬಾಯಿ ದೋಷಾಯಿ ಮೊದಲಾದವರು ತಮ್ಮಾಸನಗಳಲ್ಲಿ ರಾಜಸುತಿದ್ದಾರೆ. ಫಿಲೋಪಿಗಳಾದ ಕೆಲಸಗಾರ ಹಣವಜಾ, ಕೆ. ಸೈ-ಗಾಳ, ಕೆ. ಇಲ್ಲನ್ನು ಇವರನ್ನು ಕರೆಯಲಾಯಿತು, ಹೆಡ್ಡಕಾಟು ಜನರಾಳು ಕೋರ್ಟ್ ನಲ್ಲಿ ಮಂಡಿಸಿದ ಆರೋಪಿಗಳ ಮೇಲಿನ ದೋಷಾರೋಪಣೆ (Indictment)—

ಆರೋಪ—ಅಪರಾಧಿಗಳು ಸರಕಾರದ ಕಣ್ಣುತಪ್ಪಿಸಿ, ನಿಯಂತ್ರಣ ಕಾನೂನಿಗೂ ದೇಶರಕ್ಷಣಾ ಶಾಸನಕ್ಕೂ ವಿರುದ್ಧವಾಗಿ 'ಆದಾಯ ಹಿಂಡು' ಸೂರೆಖೋರ ಸ್ಥಾಪಿಸಿ ದೇಶದಲ್ಲಿ ಆಹಾರಾಭಾವವುಂಟಾಗಲು ಮೂಲಕಾರಣರಾಗಿದ್ದಾರೆ. ಬಂಗಾಳ ಪೊಂದರಲ್ಲೇ ಸುಮಾರು ೨ ಲಕ್ಷ ಜನರು ಆಹಾರವಿಲ್ಲದೆ ನರಳಿನರಳಿ ಸಾಯುವಂತಾಯಿತು ಇದೀ ದೇಶದ ಒಟ್ಟು 10ಕೋಟಿ ಮಂದಿಯಲ್ಲಿ ಹಸಿವು ಪೀಡೆಯಿಂದ ೫೧ ಕೋಟಿ ಅರೆಜೀವವಾಗಿದ್ದರೆನ್ನಬಹುದು. ೫೦ ಕೋಟಿ ಅರ್ಧಜೀವನಾಗುವದೆಂದರೆ ೧೫೨ ಕೋಟಿ ಪ್ರಾಣಗಳ ನಾಶವಾಗಿ ಹೋದಂತೆಯೇ. ಹೀಗೆ ಎಲ್ಲವನ್ನೂ ಜುಮ್ಲಾ ಮಾಡುವಾಗ ಸುಮಾರು 20ಕೋಟಿ ಪ್ರಾಣಿಗಳನ್ನು ತೆಗೆದ ಅಪರಾಧವು ಇಂದಿನ ಆರೋಪಿಗಳ ತಲೆಯ ಮೇಲಿದೆ ಈ ಅಪರಾಧಿಗಳು ದುಭಾಷ್ ಚಂದ ಮೋಸರ ನಾಯಕತ್ವದಲ್ಲಿ 'ಆದಾಯ ಹಿಂಡು' ಸೂರೆಖೋರ ರಚಿಸಿಕೊಂಡು ಇಡೀ ದೇಶದ ಸಂಪತ್ತನ್ನು ತಮ್ಮ ಲಾಭಕ್ಕಾಗಿ ಹಿಂಡಿದ್ದಾರೆ. ಇವರ ನಾಯಕ ದುಭಾಷ್ ಚಂದನೆಂದರೆ ಎರಡು ವಿಧದ ಭಾಷೆ, ಎರಡು ವಿಧದ ಪೋಷಾಕ್, ಎರಡು ವಿಧದ ಲೆಕ್ಕಪತ್ರ ಗಳನ್ನು ಚಂದನಾಗಿ ಕಪ್ಪು ಮಾರ್ಕೆಟ್ ನಾಡುತಿದ್ದ [illegible]ಣಿ. ಆವ ನೀಗ ಕಾಣೆಯಾಗಿರುವುದರಿಂದ ಅವನ ಸಹಾಯಕರಾದ ಈ ಆರೋಪಿಗಳನ್ನು ಮಾತ್ರ ಕೋರ್ಟಿಗೆಳೆಯಬೇಕಾಯಿತು. ಪ್ರಥಮಾರೋಪಿ ಹಣವಜಾ ಆದಾಯ ಹಿಂಡು ಸೂರೆಖೋರದ್ದೊಂದು ಆಧಾರ ಸ್ತಂಭ; ಗಿರಾಕಿಗಳು ಎಷ್ಟೇ ಹಣ ಕೊಟ್ಟರೂ ಇವ ಬೇಳುವ ಧಾರಣೆಯಿಂದ ಅಣೆಲ್ಲಾ ನಜಾ ಆಗುತಿದ್ದುವು ಅರ್ಧಾರ್ ನಿಯಂತ್ರಿತ ಬೆಲೆಯ ನಾಲ್ಕಡಿಯಷ್ಟು ವಸ್ತುವೈವಿಧ್ಯವನ್ನು ಪಡಕೊಂಡು ಈತ ಕಪ್ಪು ಮಾರ್ಕೆಟ್ ಸಾಗಿಸಿದ್ದ. ಎರಡನೇ ಆರೋಪಿ ಸೈ-ಗಾಳ. ಸೈ- ಅವನೆಂದರೆ ಜವತೆಯ ಕಂಠಕ್ಕೆ ಗಾಳವಾಗಿಯಂತೆ ಲಂಚವಿಟ್ಟು ವಹಿವಾಟು ನಡೆಸುತಿದ್ದವ. ಮೂರನೇ ಆಸಾಮಿ 'ಇಲ್ಲನ್ನು'; ಈತ ಗಿರಾಕಿಗಳು ಬಂದು ನಿಶ್ಚಿತ ಬೆಲೆಗೆ ಯಾವ ಸಾಮಾನು ಕೇಳಿದರೂ ಇಲ್ಲ ಅನ್ನುವನು. ಜನಹಿತ ಸಾಧಕ ಸರಕಾರದ ಬದಲಿಗೆ ತಮ್ಮ ಆದಾಯ ಹಿಂಡು ಸೂರೆಖೋರ ಸ್ಥಾಪಿಸಬೇಕಂಬುದೇ. ಈ ಸಂಗಡಿಗರ ಉದ್ದೇಶ. 'ಕೈ ಹಿಂದ್' (ನಿಯಂತ್ರಣ ಬೆಲೆಗೆ ಸಾಮಾನು ಕೇಳುವವರು ಬಂದಾಗ ಕೈ ಹಿಂದೆ ಇರಬೇಕೆಂಬುದೇ ಅದರ ತಿರುಳು) 'ಇಲ್ಲ, ಚಲೋ' (ಜೀವನಾವಶ್ಯಕ ಸಾಮಾಗ್ರಿ ಕೇಳಲು ಬಂದವರಿಗೆ 'ಇಲ್ಲ ನಡೀ' ಎಂದರ್ಥ) ಎಂಬುದೇ ಈ ಪಕ್ಷದ ಘೋಷಣೆಗಳು. ಕೋಟಿಗಟ್ಟಿ ಜನರ ಪ್ರಾಣಹಾನಿಗೆ ಇವರು ಕಾರಣರಾಗಿರುವದರಿಂದ ದೇಹರಕ್ಷಣಾ ಶಾಸನದ ಸಾವಿರಾರು ಕಲಮುಗಳನ್ವಯವೂ, ತಮ್ಮ ದೇಶಬಂಧುಗಳನ್ನು ಕರಗಿಸಿ ಕೊರಗಿಸಿ ತಮ್ಮ ಸ್ವಂತ ಲಾಭಕ್ಕಾಗಿ ಬ್ಲೇಕ್ ಮಾರ್ಕೆಟ್ ಮಾಡಿದ್ದರಿಂದ ಮಾನುಷತ್ವ ಪಾಲನಾ ಕಾನೂನಿನ ಮೂಲ ಸೆಕ್ಶನಿನಂತೆಯೂ ಅಪರಾಧಿಗಳಾಗಿದ್ದಾರೆ. ನಾನೀಗ ಈ ಆರೋಪಗಳ ರುಜುವಾತಿಗಾಗಿ ಸಾಕ್ಷಿಗಾರರನ್ನು ಕರೆಯುತ್ತೇನೆ.

೧. ಕುಳವಾರು ನಾಗನ ಸಾಕ್ಷ್ಯ

ನನಗೆ ರೇಶನ್ ಕಾರ್ಡು ಇರಲಿಲ್ಲ. ಆ ಕಾರ್ಡು ಕೇಳಲು ಹೋದಾಗ ಅಧಿಕಾರಿಗಳು ನನ್ನಿಂದ 'ವಾರ್ ಫಂಡಿ'ಗೆ ಹಣ ಕೇಳಿದರು-ಅಷ್ಟು ಹಣ ನನ್ನೊಡನರಲಿಲ್ಲವಾದ ಕಾರಣ ಕಾರ್ಡು ಸಿಗಲಿಲ್ಲ. ಆಮೇಲೆ ಬ್ಲಾಕ್ ಮಾರ್ಕೆಟ್ ನಲ್ಲಿ ಅಕ್ಕಿ ಕೊಳ್ಳಲು ಹೋದೆ. ಅಲ್ಲಿ ಅಕ್ಕಿ ಮಾರುತ್ತಾರೆಂದೂ ಅಧಿಕಾರಿಗಳು ಅವರನ್ನು ತಂಕಿಸುವದಿಲ್ಲವೆಂದೂ ಕೇಳಿದ್ದೆ. ತಾಯಿಯು ಪ್ರಾಣವುಳಿಸಬೇಕೆಂದು ಮನೆಯಲ್ಲಿದ್ದ ಚಿನ್ನಾಭರಣಗಳನ್ನು ಒತ್ತೆಯಿಟ್ಟು ದುಭಾಷಚಂದರಲ್ಲಿಗೆ ಹೋದೆ. ಅಲ್ಲಿ ಹಣ ವಜಾ, ಸೈಗಾಳ, ಮತ್ತು ಇಲ್ಲನ್ನು ಇದ್ದರು. ಆವರು ನಾನು ಬಂದ ಉದ್ದೇಶವನ್ನು ಕೇಳಿ 'ಸ್ಪೋರಿಗೆ ಹೋಗದೆ ಇಲ್ಲೇಕೆ ಬಂದೆ?' ಎಂದು ಗದರಿಸಿದರು. ಕೆ. ಇಲ್ಲನ್ನು 'ಇಲ್ಲಿ ಅಕ್ಕಿಯೇ ಇಲ್ಲ' ಅಂದ. ಕೊನೆಗೆ ನಾನು ಬಹಳ ಬೇಡಿಕೊಂಡು ಹಣ ಎಷ್ಟಾದರೂ ಕೊಡುತ್ತೇನೆ ಎಂದ ಮೇಲೆ ಸೈಗಾಳ 'ಸೈ' ಎಂದ. ಹಣ ವಜಾ ಐದು ಸೇರು ಅಕ್ಕಿ ಕೊಟ್ಟು 9-15-6 ಪೈ ಕೊಡು ಎಂದ ಕೊಟ್ಟು ಅಕ್ಕಿ ಪಡಕೊಂಡು ಬಂದೆ.

ಲಾಭಬಾಯಿ ದೋಷಾಯಿಗಳ ಉಡ್ಡಸವಾಲು

ಲಾಭಬಾಯಿ—'ನೀವುಸ್ಪೋರಿಗೆಹೋಗಬೇಕು. ಇಲ್ಲಿ ಅಕ್ಕಿ ಇಲ್ಲ' ಎಂದು ಹಣವಜಾ, ಸೈಗಾಳ ಮತ್ತು ಇಲ್ಲನ್ನು ಹೇಳಿದುನೇಲೂ ಅಕ್ಕಿ ಕೊಡಲೇ ಬೇಕೆಂದು ನೀವು ಒತ್ತಾಯಿಸಿದುದರಿಂದ ನೀನೇ ಕಳ್ಳ ಸಂತೆ ನಡೆಸಿದಂತಾಯಿತೆಂಬುದು ನಿಮಗೆ ಗೊತ್ತಿದೆಯೆ?

ನಾಗ—ಮುದಿ ತಾಯಿ ಸಾಯುವದನ್ನು ನೋಡಲಾರದೆ ಹಾಗೆ ಬೇಡಬೇಕಾಯಿತು. ೫ ಸೇರಕ್ಕಿಗೆ ೨ ರೂಪಾಯಿ ಬಿಲ್ಲರೆ ಕೊಟ್ಟವನು ನಾನೇ ಆದ್ದರಿಂದ ನಾನು ಕಳ್ಳ ವ್ಯಾಪಾರ ಮಾಡಿ ಲಾಭ.....

ಲಾಭಬಾಯಿ—ಲಾಭದ ಪ್ರಶ್ನೆ ಇಲ್ಲಿ ಬರಲಿಲ್ಲ. ಕಳ್ಳ ವ್ಯಾಪಾರ ಮಾಡಿದವರಾರು ಎಂಬುದೇ ಪ್ರಶ್ನೆ. ನಿಮಗೆ ಅಲ್ಲಿಂದ ಅಕ್ಕಿ ತರಬೇಕಾಗಿತ್ತು; ಮತ್ತು ನೀವಾಗಿ ಹೋಗಿ ಪ್ರಥಮತ: ಅಕ್ಕಿ ಕೊಡಬೇಕೆಂದು ಕೇಳಿದಿರಿ: ಅಲ್ಲವೆ?

ನಾಗ—ಮನೆಯಲ್ಲಿ ತಾಯಿ.....

ಲಾಭಬಾಯಿ—ನನ್ನ ಪ್ರಶ್ನೆಗೆ ಹೌದು ಅಥವಾ ಅಲ್ಲ ಎಂದಿಷ್ಟೇ ಹೇಳಿದರೆ ಸಾಕು.

ನಾಗ—ಹೌದು.

ಲಾಭಬಾಯಿ—ದುಭಾಷಾ ಚಂದರೊಡನೆ ಅಕ್ಕೇ ವ್ಯಾಪಾರ ನಡೆಸುವದು ನಿಯಂತ್ರಣ ಶಾಸನಕ್ಕೆ ವಿರುದ್ಧವೆಂಬುದು ನಿಮಗೆ ಗೊತ್ತಿದೆಯೆ?

ನಾಗ—ಗೊತ್ತಿದೆ. ಆದರೆ ಊಟಕ್ಕಿಲ್ಲದೆ ಸಾಯುವಾಗ.....

ಲಾಭಬಾಯಿ—ಸಾಕ್ಕು,ಅಲ್ಲಿಗೇ ನಿಲ್ಲಿಸಿ. ನಾನೀಗ ಪ್ರಶ್ನಿಸಿದುದು ನೀವು ಮಾಡಿದ ಕೆಲಸವನ್ನು ಮಾತ್ರ; ಅದರ ಕಾರಣವನ್ನು ನಾನು ಕೇಳಲಿಲ್ಲ. ಕಾನೂನು ಹೇಗಿದೆ ಎಂದು ಗೊತ್ತಿದ್ದೂ ನೀವು ಕಳ್ಳ ವ್ಯಾಪಾರ ಮಾಡಿದಿರಿ?

ನಾಗ—(ನಿರುತ್ತರ)

ಲಾಭಬಾಯಿ—ನೀವು ೫ ಸೇರು ಅಕ್ಕಿ ಅಲ್ಲಿಂದ ತಂದದ್ದು ಹೌದಷ್ಟೇ ಹೌದಿನ್ನಿ.

ನಾಗ—ಹೌದು.

ಹೆಡ್ಡುಕಾಟು ಜನರಾಳುವಿನ ಉರುಸವಾಲು

ಹೆ. ಕಾ—ನೀವು ೫ ಸೇರು ಅಕ್ಕಿಗೆ ೨-15-೦ ಕೊಟ್ಟೆನೆಂದಿರಲ್ಲ? ಅಕ್ಕಿ ಸೇರಿಗೆರುವ ಕಂಟ್ರೋಲ್ ಧಾರಣೆಗಿಂತ ಎಷ್ಟು ಹಣ ಹೆಚ್ಚಿಗೆ ಕೊಟ್ಟಂತಾಯಿತು?

ನಾಗ—ಈಗಲೂ ನನ್ನ ಮನಸ್ಸನ್ನದು ಕೊರೆಯುತ್ತಿದೆ. ೪-೬-೦ ಪೈ ಆವರು ನನ್ನಿಂದ ಹೆಚ್ಚಿಗೆ ಪಡಕೊಂಡಿದ್ದಾರೆ.

(ಉಳಿದ ಪುಟ ನೋಡಿರಿ)



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣ ವ್ಯಾಪಾರಾಯರ್,
ರಥಬೀದಿ, ಉಡುಪಿ.

1000's SAVED
MARGARET'S
FITS CURE
Stops children's fits in 3 minutes.
Ask your chemist for a box.
Sole Agents :
BRIGHTSTAR AGENCIES,
Hospital Rd, Udipi, S. K.

CANARA BANK LIMITED
(Incorporated in British India, liability of Members Limited.)
(ESTD 1906 ಸ್ಥಾಪನೆ.)

ANNOUNCEMENT.

We have the pleasure to announce that Branches of the Bank have been opened at
SHOLAPUR, SHIMOGA, SECUNDERABAD and KALYAN (Bombay)

Our MADRAS Office has been opened on
12th November 1945 at 517, Lingi Chetty Street, MADRAS.

ಅ. ಹಿಂ. ಫೌಜಿನ ವಿಚಾರಣೆಯ ಕುರಿತು ಸರಕಾರದ ಹೇಳಿಕೆ!

ಕೋರ್ಟು ವಿಚಾರಣೆಯಲ್ಲಿ ಪೂರ್ವ ನಿರ್ಧಾರವಿಲ್ಲ.

ಪಾತಕವಿಚಾರೋಪದ ೨೦ರಷ್ಟೇ ಮಂದಿಗೆ ಕೋರ್ಟು ಮಾರ್ಶಲ್

ಭಾರೀ ಔದಾರ್ಯದ ಈ ಕಾರ್ಯವನ್ನು ಸಾರ್ವಜನಿಕರು ಸಮರ್ಥಿಸಬೇಕಂತೆ!

ಶ್ರೀಜಾದ್ ಹಿಂದ್ (I. N. A.) ಫೌಜಿನ ಕುರಿತು ನವಂಬರ್ 30ರಲ್ಲಿ ಹೊರಟ ಸರಕಾರೀ ಪ್ರಕಟಣೆಯ ಸಾರಾಂಶ ಹೀಗಿದೆ:—

೮ 60000 ಮಂದಿ

ಹಿಂದೀ ಸೇನೆಯಲ್ಲಿದ್ದ ಸುಮಾರು 60 ಸಾವಿರ ಮಂದಿ ಯುದ್ಧ ಕೈದಿಗಳಾಗಿ ಜಪಾನರಿಗೆ ದೊರೆತಿದ್ದರು. ಆ ಪೈಕಿ 40 ಸಾವಿರ ಮಂದಿ ಕೊನೆಯ ವರೆಗೂ ಅ. ಹಿ. ದಳಕ್ಕೆ ಸೇರದೆ, ಹಿಂದೀ ಸರಕಾರದ ವಿಧೇಯತಾ ಪ್ರತಿಜ್ಞೆಗನುಸಾರವಾಗಿ ನಡೆದು ಕೊಂಡರು. ಬಹು ಮುಖದ ಪ್ರಚಾರದಿಂದಾಗಲೀ, ಕೆಲವು ಸಂದರ್ಭಗಳಲ್ಲಿ ತಮಗಾಗುತ್ತಿದ್ದ ಆನಶನ ಪೀಡೆ, ಅತ್ಯಾಚಾರಗಳಿಂದಾಗಲೀ, ಅವರು ಎಳ್ಳಷ್ಟು ಕದಲದೆ, ಏಕಾಗ್ರತೆ ಮತ್ತು ದೃಢತೆಯ ಒಂದು ಉತ್ತಮ ಮಾದರಿಯಾಗಿ ನಿಂತರು. ಇದ್ಯ ಅತ್ಯಂತ ಸ್ತುತ್ಯವಾದುದು. ಉಳಿದ 20 ಸಾವಿರ ಮಂದಿ ಆಜಾದ್ ಹಿಂದ್ ಫೌಜಿಗೆ ಸೇರಿಕೊಂಡರು. ಈ ಪೈಕಿ 6000ಕ್ಕೂ ಮಿಕ್ಕಿದವರು ಇನ್ನೂ ಭಾರತಕ್ಕೆ ಬಂದಿಲ್ಲ; ಸುಮಾರು 1000 ಮಂದಿಯ ಪತ್ತೆಯೇ ಆಗಿಲ್ಲ. ಅಂತೂ ಈಗ ಭಾರತದಲ್ಲಿರುವ 14000 ಮಂದಿಯಲ್ಲಿ ಸುಮಾರು 2½ ಸಾವಿರ ಜನರು ಮಿಕ್ಕ ಯುದ್ಧ ಕೈದಿಗಳಂತೆಯೇ, ಅಲ್ಲಲ್ಲಿರುವಾಗ ನೈರಿಗೆ ಸಹಾಯ ಕರಂತೆ ತೋರಿಸಿ, ಅದೇ ರೀತಿ ಪುನಃ ತಮ್ಮ ಮೂಲ ಸೇನೆಗೇನೇ ಬಂದು ಸೇರಿದ್ದರಿಂದ ದೋಷ ಮುಕ್ತತೆ ಪಡೆದಿದ್ದಾರೆ.

5000 ಎಂದಿಗೆ ವಿಶೇಷ ರಿಯಾಯಿತಿ!

ಮತ್ತುಳಿಯುವ 11500 ಮಂದಿಯಲ್ಲಿ ಸಾಧಾರಣ 6000 ಮಂದಿ ನೈರಿಗಳ ಪ್ರಚಾರಕ್ಕೆ ಮನಸೋತು ಅಥವಾ ಜುಲುಮೆ ಅತ್ಯಾಚಾರಗಳಿಂದ ಹದಕ್ಕೆ ಬಂದು, ಅದೇ ತಮಗುಳಿದಿರುವ ಸದ್ಧಾರಿಯೆಂಬ ಭಾವನೆಯಿಂದ ಆಜಾದ್ ಹಿಂದ್ ಫೌಜಿಗೆ ಸೇರಿದವರು. ಇವರು ಎಂತಹ ಪರಿಸ್ಥಿತಿಗೊಳಗಾಗಿ ಹಾಗೆ ಮಾಡಿದ್ದರೆಂಬ ಕಡೆಗೇನೇ ಹಿಂದೀ ಸರಕಾರವು ಲಕ್ಷ್ಯ ಕೊಟ್ಟಿದೆ. ನೈರಿಯ ಸೇನೆಗಳು ದಿಗ್ವಿಜಯ ಪಡೆಯುತ್ತಿದ್ದ ಆ ಕಾಲದಲ್ಲಿ–ವಿರೋಧಿಗಳ ಪ್ರಚಾರದ ಹೊರತು ಬೇರೆ ವಾರ್ತೆಯೇ ಮೊರೆಯದಿದ್ದಾಗ–ಪರಿವರ್ತನೆಗೊಂಡವರಿವರು. ಸಾಮಾನ್ಯ ಸ್ಥಿತಿಯಂತಾದರೆ ಸರ್ವರಾಷ್ಟ್ರಗಳಲ್ಲಾಡುವ ಕಾನೂನಿನ ಪ್ರಕಾರ ಮರಣ ಶಿಕ್ಷೆ ಕೊಡಬೇಕಾದಂತಹ ಕೃತಿ ನಾಪರಾಧಗಳನ್ನು ಇವರು ಮಾಡಿದ್ದರೂ, ಇಂಥವರನ್ನು ದಯೆ ಮತ್ತು ಔದಾರ್ಯದಿಂದ ಕಾಣಬೇಕೆಂದೇ ಅದಿಯಿಂದಲೂ ಹಿಂದೀ ಸರಕಾರ ನಿರ್ಧರಿಸಿದೆ. ಈ ಉದ್ದೇಶವನ್ನು ಅಗೋಸ್ತು 27ರಲ್ಲೇ ಪ್ರಕಟಿಸಲಾಗಿದೆ. ಇವರು ನಮ್ಮ ಸೇನೆಗಿದಿರಾಗಿ ಶಸ್ತ್ರ ಧರಿಸಿ ಹೋರಾಡುತ್ತಿದ್ದ ಇಡೀ ಅವಧಿಯಲ್ಲಿ, ಅವರು ಜಾಪಾನರಿಗೆ ಕೈದಿಗಳಾಗಿ ದೊರೆತವರೆಂದೇ ಭಾವಿಸಿ, ಅಂಥವರ ಕುಟುಂಬಗಳಿಗೆ ತಪ್ಪದೆ ವೇತನಗಳನ್ನು ಕೊಡುತ್ತಾ ಬಂದಿದ್ದೆವು. ಈ ಕುಟುಂಬ ವೇತನಗಳನ್ನು ಇನ್ನಾ ದರೂ ಜಜ್ಜಿ ಮಾಡುವಂತಿಲ್ಲ. ನೈರಿಯ ಕೈಯಿಂದ ತಪ್ಪಿದ ದಿವಸದಿಂದ ಹಿಡಿದು, ಮತ್ತೊಂದು 42 ದಿನಗಳ ಸಸಂಬಳ ರಜೆ ಸಮೇತ ಅವರೆಲ್ಲರಿಗೂ ಸಂಬಳ ಕಟ್ಟಿಸಿ, ತಮ್ಮಸ್ಥಂತ ಹಳ್ಳಿಗಳಲ್ಲಿ ವಾಸಿಸುವದಕ್ಕೋ ಬೇರೆ ಉದ್ಯೋಗ ಹುಡುಕುವದಕ್ಕೋ ಅನುಕೂಲ ಮಾಡಿಕೊಡುತ್ತೇವೆ. ಇಂಥವರ ಸಂಬಂಧವಾಗಿ ಕೋರ್ಟು ತೀರ್ಮಾನವಾಡೊಡನೆಯೇ ಅವರನ್ನೆಲ್ಲಾ ಬಿಡಲಾಗುವದು.

5500 ಮಂದಿಗೆ ಡಿಸ್‌ಮಿಸ್!

ನುತ್ತಿ ಉಳಿಯುವದು 5500 ಮಂದಿ ಮಾತ್ರ. ಈ ಪೈಕಿ 1700 ಮಂದಿಯ ಪ್ರಥನ ವಿಚಾರಣೆಯೇ ಮುಗಿದಿಲ್ಲ. ಉಳಿದ 3800 ಜನರು, ಭಾರತಾಶ್ರೆಮಿಸುವಂತೆ ಜಪಾನರಿಗೆ ಸಹಾಯಮಾಡಬೇಕೆಂಬ ಸ್ಪಷ್ಟ ಉದ್ದೇಶ ಕಟ್ಟಿಕೊಂಡೇ ಆ ಸೈನ್ಯಕ್ಕೆ ಸೇರಿದ್ದರೆಂದು ನಂಬಲಾಗಿದೆ. ಅವರ ಉದ್ದೇಶ ಫಲಿಸುತಿದ್ದರೆ ಹಿಂದುಸ್ಥಾನವು ಜಾಪಾನರ ಆಧೀನವಾಗುತಿತ್ತು. ಈ ಪೈಕಿ ಹಲವರು ತಮ್ಮ ಸ್ವದೇಶಬಂಧುಗಳ ಪ್ರಾಣಾಪಹಾರೋದ್ದೇಶದಿಂದ ಶಸ್ತ್ರಧಾರಿಗಳಾಗಿ ಹೋರಾಟಕ್ಕೆ ಬಂದಲ್ಲೇ ಬಂಧಿಸಲ್ಪಟ್ಟಿದ್ದರು. ತಾವೆಂತಹ ಕೃತ್ಯ ಮಾಡುತಿದ್ದೇನೆಂಬ ತಿಳುವಳಿಕೆ ಇವರೆಲ್ಲರಿಗಿದ್ದರೂ, ಚತುರ ದುರ್ಜೋಧೆಯ ಪರಿಣಾಮದಿಂದಾಗಿ ಅಧಿಕ ಸಂಖ್ಯಾಕರಿಗೆ (ಎಲ್ಲರಿಗಿಲ್ಲ) ಜಪಾನರು ಭಾರತವನ್ನಾಶ್ರಮಿಸಿಕೊಂಡಿಲ್ಲ ಎಂತಹ ರಕ್ಷಪಾತ ಹಾಗೂ ದುರಂತಗಳೊದಗುವವೆಂಬ ಜ್ಞಾನವೇ ಇರಲಿಲ್ಲ. ಇದ್ದರಿಂದ ಈ ವಿಭಾಗದ ಹೆಚ್ಚಿನವರಿಗೂ ದಯೆದಾನ ಮಾಡಬೇಕೆಂಬುದೇ ಮೊದಲಿನಿಂದಲೂ ಹಿಂದೀ ಸರಕಾರದ ಉದ್ದೇಶವಿತ್ತು. ಅಂಥವರನ್ನು ಸೇನೆಯಿಂದ ತೆಗೆದುಹಾಕಲಾಗುವದು; ಅವರ ಸಂಬಳವನ್ನೂ ಜಡ್ತಿ ಮಾಡಲಾಗುವದು. ಆದರೆ ಇವರು ಯುದ್ಧ ಕೈದಿಗಳಾಗಿದ್ದರೆಂದು ಭಾವಿಸಿ ಇವರ ಕುಟುಂಬಗಳಿಗೆ ಕೊಟ್ಟಿದ್ದ ಗೌರವ ವೇತನಗಳಿಗೆ ಬಾಧೆಯಿಲ್ಲ. ಇಂತಹ ಸೈನಿಕರ ಮೇಲೆ ಬೇರೆ ಕಾರ್ಯಾಚರಣೆಯನ್ನೂ ಕೈಕೊಳ್ಳುವದಿಲ್ಲ.

ಸ್ವಲ್ಪ ಮಂದಿಯ ವಿಚಾರಣೆಯನ್ನು ಸಾರ್ವಜನಿಕರು ಸಮರ್ಥಿಸಬೇಕು!

ಮೇಲಿನ ವರ್ಗದವರ ಪೈಕಿ ಅತ್ಯಲ್ಪ ಮಂದಿ, ಯುದ್ಧ ಕೈದಿಗಳಾಗಿದ್ದ ಅಥವಾ ಆಜಾದ್ ಹಿಂದ್ ಫೌಜಿನ ಸದಸ್ಯರಾಗಿದ್ದ ತಮ್ಮ ದೇಶಬಾಂಧವರ ಕೊಲೆಯೇ ಮೊದಲಾದ ಪಾತಕಿಕ ಕೃತ್ಯಗಳನ್ನು ಮಾಡಿದ್ದರೆಂಬುದಕ್ಕೆ ರುಜುವಾತುಗಳಿವೆ ಇಂತಹ ಕೃತ್ಯಗಳು ಎಲ್ಲಾ ನಾಗರಿಕ ಜನತೆಗೂ ತಿರಸ್ಕರಣೀಯವಾಗಿವೆ. ಈ ರೀತಿಯ ಅಪರಾಧಗಳನ್ನು ಮಾಡಿದ್ದರೆಂಬ ಕುರಿತು ಪ್ರತ್ಯಕ್ಷ ಸಾಕ್ಷ್ಯಗಳಿರುವ ಜನರನ್ನು ಕೂಡಾ ವಿಚಾರಣೆಗೆಳೆಯದೆ ಬಿಟ್ಟರೆ ಸರಕಾರದ ತಪ್ಪಾಗುವದು. ಬೇರೆಲ್ಲರನ್ನೂ ಬಿಟ್ಟು ಕೇವಲ ಇಂಥವರನ್ನೇ ಕೋರ್ಟು ಮಾರ್ಶಲ್ ವಿಚಾರಣೆ ನಡಿಸಲಾಗುವದಾದ್ದರಿಂದ, ತಮ್ಮ ಈ ನಿರ್ಧಾರವನ್ನು ಸಾರ್ವಜನಿಕರು ಸಮರ್ಥಿಸುವರೆಂದು ಸರಕಾರಕ್ಕೆ ನಂಬಿಕೆಯಿದೆ ಈಗ ನಡೆಯುತ್ತಿರುವ ಅಥವಾ ಇನ್ನು ನಡೆಯಲಿರುವ ಕೋರ್ಟು ಮಾರ್ಶಲ್ ವಿಚಾರಣೆಗಳ ಯಾವುದೇ ತೀರ್ಪಾದರೂ ಸಾಗರೀಕ ನಡತೆಯ ಶಾಸನಗಳಿಗೆ ವ್ಯತಿರಿಕ್ತವಾಗುವದೋ ಎಂಬ ವಿಮರ್ಶೆಯ ಕಡೆಗೆ ಯೋಗ್ಯ ಅಧಿಕಾರಿಗಳು ತಕ್ಕ ನಿಗಾ ಇಟ್ಟುಕೊಂಡಿಲಿದ್ದಾರೆ. ವಿಚಾರಣೆಗೊಳಗಾಗದವರ ಕುರಿತು ತೀರ್ಮಾನವಾದ ಕೂಡಲೇ ಅದನ್ನು ತಿಳಿಸಿ, ಅವರ ಮಿತ್ರರ ಕುಟುಂಬಿಕರ ಹಾಗೂ ಮಿತ್ರರ ಆತುರವನ್ನು ಶಮನಿಸಲಾಗುವದು; ತಮ್ಮ ಸಂಬಂಧಿಕರಿಗೆ ಸುದ್ದಿ ಸೂಚನೆ ಕೊಡುವ ಅನುಕೂಲತೆಗಳನ್ನೂ ಅಂತಹ ಜನರಿಗೀಯಲಾಗುವದು. ಆದೇ ರೀತಿ ವಿಚಾರಣೆಗೆ ಗುರಪಡಿಸುವವರ ಹೆಸರುಗಳನ್ನೂ ನಿರ್ಧಾರವಾದೊಡನೆಯೇ ಪ್ರಕಟಿಸಲಾಗುವದು.

ಸುಮಾರು ಇಪ್ಪತ್ತೇ ಜನರ ವಿಚಾರಣೆ

ಅಪರಾಧಿಗಳ ಮೇಲಿನ ಆರೋಪಗಳನ್ನು ಮುಂಚಾಗಿ ಪ್ರಕಟಿಸಿದಲ್ಲಿ, ಅಂತಹ ಆರೋಪಣೆಗಳು ಅಪರಾಧಿಗಳ ಸ್ವರಕ್ಷಣಾವಾದಕ್ಕೆ ತೊಂದರೆ ಕೊಡಬಹುದೆಂಬ ಕಾರಣದಿಂದ ಸರಕಾರವು ಕೈ ಹಿಂದೆಳೆದಿದೆ. ಆರೋಪಿಗಳ ಸ್ವರಕ್ಷಣೆಗೆ ಎಲ್ಲಾ ವಿಧದ ಸೌಕರ್ಯವಿರುವಂತೆಯೂ, ನಿಷ್ಪಕ್ಷಪಾತವಿಚಾರಣೆಯಾಗುವಂತೆಯೂ ಸರಕಾರವು ಸಾಧ್ಯವಿದ್ದುದನ್ನೆಲ್ಲಾ ಮಾಡುತ್ತಿದೆ— ಮುಂದಕ್ಕೂ ಮಾಡಲಿದೆ, ಒಂದು ನ್ಯಾಯ ಸ್ಥಾನದ ತೀರ್ಥನೆಯು ಎಂತಹ ಸಂದರ್ಭದಲ್ಲಾದರೂ, ಮೊದಲೇ ಮಾಡಿಟ್ಟ ತೀರ್ಮಾನವಾಗುವಂತಿಲ್ಲವೆಂಬುದನ್ನು ಎತ್ತಿ ಹೇಳಲಿಚ್ಚಿಸುತ್ತೇನೆ. ಆದ್ದರಿಂದ ವಿವಿಧಾಭಿಪ್ರಾಯ ಕಟ್ಟಿಕೊಂಡಿರುವ ಎಲ್ಲಾ ಜನರಿಗೂ ಒತ್ತಿ ತಿಳಿಸುವದೇನೆಂದರೆ 50ರಷ್ಟೂ ಆಗದ ಈ ಕೇಸುಗಳಲ್ಲಿ ಪ್ರತಿಯೊಂದೂ ಪೂರ್ಣ ರುಜುವಾಗುವ ವರೆಗೆ ಯಾರೂ ಮುಂದಾಗಿ ಒಂದು ತೀರ್ಮಾನವನ್ನು ಕಟ್ಟಿಕೊಳ್ಳಬಾರದು. ಎಲ್ಲಾ ಪೂರ್ವ ತೀರ್ಪನೆಗಳು ಮುಗಿಯದೆ ವಿಚಾರಣೆಗೊಳಗಾಗುವವರ ಸಂಖ್ಯೆಯೆಷ್ಟು ಎಂಬುದನ್ನು ತಿಳಿಸುವದು ಅಸಾಧ್ಯ. ಆದರೆ ಆ ಸಂಖ್ಯೆ 50ರ ವರೆಗೇರುವದು ಅಸಂಭವ; ಬರೀ 20 ಆಗಬಹುದು. ಮೇಲ್ಗತಿ ನಮೂದಿಸಿದಂತೆ ಪಾತಕಿಕ ಕೃತ್ಯಗಳನ್ನು ಮಾಡಿದ ಆರೋಪ ಬಿದ್ದವರನ್ನು ಮಾತ್ರವೇ ವಿಚಾರಣೆಗೊಳಪಡಿಸಲಾಗುವದು.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ–ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾನೀಯಗಳ ತಯಾರಿಕೆಗಳ – ವಿದ್ಯುದ್ದೀಪ, ರೇಡಿಯೋಗಳ ಅಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,

Balmatta Road, Mangalore.

CHAMPAE'S

Snow & Lastrex

(Sole Distributers for (India.)

Prop: K. G. NAYAK,

Santhekatte, UDIPI, S. K.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೊಸಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

'ನಾನು ದೇಶಬಿಟ್ಟು ಬಂದುದೇಕೆ—

ಹಿಂದೀ ಸ್ವಾತಂತ್ರ್ಯ ಸಮರದ ದ್ವಿತೀಯರಂಗ ತೆರೆಯುವದಕ್ಕೆ

ಸುಭಾಸರು ತಾ. ೯–೭–೪೩ರಲ್ಲಿ ಸಿಂಗಾಪುರದ ಪ್ರಚಂಡ ಸಭೆಯಲ್ಲಿತ್ತ ಭಾಷಣ.

"ಸಹೋದರಿಯರೇ, ಸಹೋದರರೇ, ಈ ದಿನ ನೀವು ನನಗಿತ್ತ ಅಪೂರ್ವ ಹಾಗೂ ಅತ್ಯುತ್ಸಾಹದ ಸ್ವಾಗತಕ್ಕಾಗಿ ಮುಂದಾಗಿ ನನ್ನ ಅಭಿವಂದನೆಗಳಿರಲಿ. ತಮ್ಮಲ್ಲಿರುವ ದೇಶಾಭಿಮಾನವನ್ನು ಸ್ಪಷ್ಟಪಡಿಸಲು ಇಷ್ಟೊಂದು ಅಧಿಕ ಸಂಖ್ಯೆಯಿಂದ ನೆರೆದುಬಂದ ನನ್ನ ಭಗಿನಿಯರಿಗಂತೂ ನನ್ನ ವಿಶೇಷ ಧನ್ಯವಾದಗಳಿವೆ. ಮುಂದಿನ ಹೋರಾಟದಲ್ಲಿ ಸ್ಯೋನಾನ್ ಮತ್ತು ಮಲಯಿಯಲ್ಲಿರುವನನ್ನ ದೇಶಬಾಂಧವರು ಅಗ್ರಗಣ್ಯ ಭಾಗವಹಿಸುವರೆಂಬ ನಂಬಿಕೆಯನ್ನು ಇಂದಿನ ನೋಟವು ಹುಟ್ಟಿಸಿದೆ. ಒಂದು ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಕೋಟೆಯಾಗಿದ್ದುದು ಇಂದು ಭಾರತ ರಾಷ್ಟ್ರೀಯತೆಯ ಚಕ್ರಬಿಂಬ್ಸವಾಗಿ ಮಾರ್ಪಟ್ಟಿದೆ.

ನಾನೇಕೆ ಬಂದೆ ಗೊತ್ತೆ?

ಎರಡನೆಯದಾಗಿ, ನಾನು ಇಲ್ಲಿಗೇಕೆ ಬಂದೆ–ಸ್ವಂತ ಮನೆ ಮತ್ತು ಸ್ವದೇಶವನ್ನು ಬಿಟ್ಟು ಪ್ರತಿಯೊಂದು ವಿಧದ ಅಪಾಯವೂ ತುಂಬಿದ್ದ ಈ ಪ್ರಯಾಣ ಕೈಕೊಳ್ಳುವಂತೆ ನನ್ನನ್ನು ಹುರಿದುಂಬಿಸಿದು ದಾವುದು-ಎಂಬುದನ್ನು ಪೂರ್ಣ ಯಥಾರ್ಥತೆಯಿಂದ ನಿಮ್ಮ ಮುಂದಿಡಲಿಚ್ಛಿಸುತ್ತೇನೆ. 1921ರಲ್ಲಿ ವಿದ್ಯಾರ್ಥಿಯಲ್ಲಿದ್ದ ದ್ವಾರ ದಾಟಿದಂದಿನಿಂದ ಇದು ವರೆಗೂ ಸ್ವಾತಂತ್ರ್ಯ ಚಳವಳದಲ್ಲಿ ಪ್ರತ್ಯಕ್ಷ ಕಾರ್ಯಭಾಗಿಯಾಗಿದ್ದ ನಿಮ್ಮನುಷ್ಯ ನಾನು ಎಂಬುದು ನಿಮಗೆಲ್ಲಾ ಗೊತ್ತಿದೆ. ಕಳದ ಎರಡು ದಶಮಾನಗಳ ಸ್ಮತಿಯೊಂದು ಕಾಯಿದೇಭಂಗ ಚಳವಳದಲ್ಲೂ ನಾನಿದ್ದೆ. ಅಷ್ಟೇ ಅಲ್ಲ; ಅಹಿಂಸಾತ್ಮಕ ಅಥವಾ ಹಿಂಸಾತ್ಮಕನಾದ, ಗುಪ್ತ ಕ್ರಾಂತಿಕಾರಿ ಚಳವಳಗಳಲ್ಲಿ ನನ್ನ ಕೈವಾಡವಿದೆ ಎಂಬ ಅನುಮಾನಕ್ಕೊಳಗಾಗಿ ವಿಚಾರಣೆಯಿಲ್ಲದ ಬಂಧನಗಳನ್ನೂ ಮೇಲಿಂದ ಮೇಲೆ ಅನುಭವಿಸಿದ್ದೆ; ಅವೆಲ್ಲವುಗಳ ಗಾಢ ಪರಿಚಯ ನನಗಿದೆ. ನಾನು ಸಂಪಾದಿಸಲು ಶಕ್ತನಾದಂತಹ ಬಹುಮುಖದ ಅನುಭವವುಳ್ಳ ಬೇರೊಬ್ಬ ರಾಷ್ಟ್ರೀಯ ಮುಖಂಡನೇ ಭಾ[illegible]ನೆಂದು ಎತ್ತಿಹೇಳಲಿಚ್ಛಿಸುತ್ತೇನೆ. ಇದರಲ್ಲಿ ಆತ್ಮಪ್ರಶಂಸೆಯಾಗಲೀ ಅಹಂಕಾರವಾಗಲೀ ಇಲ್ಲದೆ ಕಂಠೋಕ್ತವಾಗಿ ಹೇಳಬಲ್ಲೆ. ಭಾರತದೊಳಗಡೆಯಿಂದ ನಾನಿಷ್ಟೇಕ್ಷಿಪ್ರತ್ವದಲ್ಲಿ ಸಿದರೂ ಬ್ರಿಟಿಷರನ್ನು ನಮ್ಮ ದೇಶದಿಂದ ಹೊರದಬ್ಬಲು ಸಾಧ್ಯವಿಲ್ಲವೆಂದೇ ಇಷ್ಟೆಲ್ಲಾ ಅನುಭವಗಳ ಬಲದಿಂದ ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ. ನಮ್ಮ ಜನತೆಯ ಸ್ವಾತಂತ್ರ್ಯ ಸಾಧನೆಗೆ ದೇಶದೊಳಗಡೆಯ ಹೋರಾಟಕ್ಕಿಂತೆ ಬಲಿಷ್ಠವಾಗುತಿದ್ದರೆ, ಅನಿವಾರ್ಯವಾಗಿ ಇಂತಹ ಅವಕಾಶ ಹಾಗೂ ಗಂಡಾಂತರಗಳನ್ನು ತಿರಸ್ಕರಿಸಹಿಸಿಕೊಳ್ಳಲು ನಾನೇನೂ ತಲೆತಿರುಕನಲ್ಲ.

ದ್ವಿತೀಯರಂಗ ತೆರೆಯಲು ಬಂದೆ.

ಸಾರಾಂಶವಿಷ್ಟೆ: ದೇಶದೊಳಗಡೆಯಲ್ಲಿ ನಡೆಯುತ್ತಿರುವ ಹೋರಾಟವನ್ನು ಹೊರಗಡೆಯಿಂದ ಸಮರ್ಥಿಸಬೇಕೆಂದು ನಾನು [illegible] ಬಿಟ್ಟುಬಂದೆ. ಹೊರಗಡೆಯಿಂದ ಈ ಸಹಾಯ ಸಂಗ್ರಾಮವಾದ ವಿಸಹ ಹಿಂದೂಸ್ಥಾನವನ್ನು ಸತಂತ್ರ ಗೊಳಿಸಲು ಯಾರೊಬ್ಬನಿಂದಲೂ ಸಾಧ್ಯವಿಲ್ಲ. ಮೇಲಾಗಿ, ದೇಶದೊಳಗಿನ ರಾಷ್ಟ್ರೀಯ ಹೋರಾಟಕ್ಕೆಗ ಅತ್ಯಗತ್ಯವಾಗಿ ಬೇಕಾಗಿರುವ ಈ ಹೊರಗಿನ ಸಾಹಾಯ ವೆಂಬುದು ವಸ್ತುತಃ ಅತ್ಯಲ್ಪ. ಯಾಕೆಂದರೆ ಈಗ ಆಕ್ಸಿಸ್ ರಾಷ್ಟ್ರಗಳಿದಿರಲ್ಲಿ ಬ್ರಿಟಿಷರಿಗಾಗಿರುವ ಸೋಲು ಅಂತಹದ್ದು. ಈ ಸೋಲಿನಿಂದಾಗಿ ಬ್ರಿಟಿಷರ ಶಕ್ತಿ ಮತ್ತು ವರ್ಚಸ್ಸು ಪೂರ್ತಿ ಮಣ್ಣುಪಾಲಾಗಿರುವದರಿಂದ ನಮ್ಮ ಕಾರ್ಯವು ಅತ್ಯಂತ ಸುಲಭವಾಗಿದೆ. ಸ್ವದೇಶದಲ್ಲಿರುವ ನಮ್ಮ ಬಾಂಧವರಿಗೀಗ ನೈತಿಕ ಬೆಂಬಲ ಮತ್ತು ಕಾರ್ಯಕಾರೀ ಸಹಾಯದ ಪರಮಾವಧಿ ಆಗತ್ಯವಿದೆ. ಮಿತ್ರರೇ, ಈಗ ಇವೆರಡು ಉದ್ದೇಶಗಳು ಫಲಿಸಿವೆಯೆಂದು ಹೇಳುವ ಸ್ಥಿತಿಯಲ್ಲಿ ನಾನಿಲ್ಲೇನೆ. ಹೊರಗಿದ್ದುಗೊಂಡು ಎಲ್ಲವನ್ನೂ ಪ್ರತ್ಯಕ್ಷ ಪರಾಂಬರಿಸಿದ್ದೇನೇ; ಯುದ್ಧ ನಿರತ ರಾಷ್ಟ್ರಗಳ ಸ್ಥಿತಿಗತಿ ಹೇಗಿದೆ ಎಂಬುದನ್ನು ಅಭ್ಯಾಸಿಸಿ ತಿಳಿದಿದ್ದೇನೆ ಆ ಮೂಲಕ ಆಂಗ್ಲೋ-ಅಮೇರಿಕನ್ ಸಾಮ್ರಾಜ್ಯವಾದದ ಅಂತ್ಯ ಸಮೀಪದಲ್ಲಿದೆ ಎಂಬುದನ್ನು ನಿರ್ಧರಿಸಿದ್ದೇನೆ. ಈ ಸುದ್ಧಿಯನ್ನು ನಾನು ನನ್ನ ದೇಶ ಭಾಂದವರಿಗೆ ರವಾನಿಸಿದ್ದೇನೆ. ಇಡೀ ಪ್ರಪಂಚದಲ್ಲಿರುವ ನನ್ನ ಸ್ವದೇಶ ಬಂದುಗಳೀಗ ಜಾಗ್ರತೆಗೊಂಡು ರಾಷ್ಟ್ರೀಯ ಹೋರಾಟದಲ್ಲಿ ತಂತಮ್ಮ ಪಾಲುಗಳನ್ನು ವಹಿಸಿಕೊಳ್ಳಲು ಆತುರಿಸುತಿದ್ದಾರೆ ಎಂಬುದನ್ನು ತಿಳಿದು ಅತ್ಯಾನಂದಗೊಂಡಿದ್ದೇನೆ. ಸತಂತ್ರ ಭಾರತವನ್ನು ಕಾಣುವ ಯಥಾರ್ಥ ಬಯಕೆ ಆಕ್ಸಿಸ್ ರಾಷ್ಟ್ರಗಳಿಗೂ ಇದೆಯೆಂಬುದನ್ನೂ, ಭಾರತೀಯರು ಬಯಸಿದರೆ ತಮ್ಮಿಂದಾಗುವ ಸಹಾಯ ಸಲ್ಲಿಸಲು ಅವು ತಯಾರಿನೆ ಎಂಬುದನ್ನೂ ತಿಳಿದು ಆ ಕಡೆಗೂ ಕೃತಜ್ಞನಾಗಿದ್ದೇನೆ.

ಸಹಾಯ ಪಡೆಯಕೂಡದೇಕೆ?

ಹೊರವಲಯಗಳಲ್ಲಿರುವ ಹಿಂದೀಯರಲ್ಲಿ, ಭಾರತವು ಸ್ವತಂತ್ರವಾಗಬೇಕೆಂದು ಬಯಸದ ಹಾಗೂ ಸ್ವಾತಂತ್ರ್ಯ ಸಮರಕ್ಕೆ ಸಹಾಯ ಸಲ್ಲಿಸಲೊಪ್ಪದ ಒಬ್ಬ ಗಂಡಾಗಲೀ ಒರ್ವ ಹೆಣ್ಣಾಗಲೀ ಇರಬಹುದೆಂದು ನಾನು ನಂಬಲಾರೆ. ಆಕ್ಸಿಸ್ ರಾಷ್ಟ್ರಗಳ ಧೋರಣೆಯ ಕುರಿತು ಯಾರಿಗಾದರೂ ಸಂದೇಹವಿದೆಯಾದರೆ, ಇಡೀ ಪ್ರಪಂಚದಲ್ಲಿ ನಮ್ಮ ಸ್ವದೇಶ ಬಾಂಧವರ ನಂತರ ನಮಗಿರುವ ಆಪ್ತ ಮಿತ್ರರೆಂದರೆ ಅವರೇ ಎಂಬುದನ್ನು ಬೇಕಾದಷ್ಟು ರುಜುವಾತು ಕೊಟ್ಟೇ ನಾನು ಅಂಧವರಿಗೆ ಸುಲಭದಲ್ಲಿ ಮುಂದಟ್ಟುಮಾಡಿಕೊಡಬಲ್ಲೆ. ನಾನು ಕೇಳಿಕೊಳ್ಳುತ್ತೇನೆ-ನನ್ನ ಮಾತಿನ ಮೇಲೆ ನಂಬುಗೆಯಿಡಿ. ನನ್ನ ದೇಶ ಹಿತಕ್ಕೆ ದ್ರೋಹಮಾಡಬಲ್ಲ ಮನುಷ್ಯ ನಾನೆಂದು ಹೇಳುವಂತಹ ಎದೆಗಾರಿಕೆ ನನ್ನ ವೈರಿಗಳಲ್ಲಿ ಕೂಡಾ ಇರಲಾರದು ನನ್ನ ನೀತಿಭಂಗ ಮಾಡಲು, ನನ್ನನ್ನು ಪುಸಲಾಯಿಸಲು, ನನ್ನನ್ನು ಮರುಳು ಮಾಡಲು ಬ್ರಿಟಿಷ್ ಸರಕಾರದಿಂದಲೇ ಆಗದಿರುವಾಗ ಪ್ರಪಂಚದ ಮತ್ತೊಂದು ಶಕ್ತಿಯಿಂದ ಅದೆಂದಿಗೂ ಆಗದು. ಆದ್ದರಿಂದ, ಬ್ರಿಟಿಷ್ ಸಾಮ್ರಾಜ್ಯದಿದಿರಿನ ಹೋರಾಟದಲ್ಲಿ ಹೊರಗಿನ ಸಹಾಯ ನಿಮಗೆ ಬೇಕಾಗಿದ್ದರೆ ಆಕ್ಸಿಸ್ ರಾಷ್ಟ್ರಗಳು ನಿಮ್ಮ ಬೆಂಬಲಕ್ಕೆವೆ ಎಂಬ ನನ್ನ ಮಾತಿನ ಮೇಲೆ ವಿಶ್ವಾಸವಿಡಿ. ಆದರೆ ಹೊರಗಿನವರ ಸಹಾಯ ಬೇಕು ಅಥವಾ ಬೇಡ ಎಂದು ನಿರ್ಧರಿಸಬೇಕಾದವರು ನೀವೇ. ಯಾರ ಸಹಾಯವೂ ಇಲ್ಲದೇನೇ ನೀವದನ್ನು ಸಾಧಿಸಬಲ್ಲಿರಾದರೆ ಭಾರತಕ್ಕೆ ಅದೇ ಉತ್ತಮ ವಿಧಾನ. ಹೀಗೆನ್ನುವಾಗ ನಾನು ಮತ್ತೊಂದು ವಿಷಯವನ್ನೂ ಹೇಳಬೇಕಾಗಿದೆ. ಆ ಸರ್ವತ್ರಾಣಿ ಬ್ರಿಟಿಷ್ ಸರಕಾರವು ದೀನಸ್ಯಾಣಿಯಂತೆ ಸಹಾಯ ಭಿಕ್ಷೆ ಬೇಡುತ್ತಾ, ಪ್ರಪಂಚದ ಮೂಲೆಮೂಲೆ ಸುತ್ತುತ್ತಿರುವಾಗ–ದಾಸ್ಯಬಂಧಿತ ಹಾಗೂ ಬರಗಾಲ ಪೀಡಿತ ಭಾರತೀಯರೊಡನೆ ಕೂಡಾ ಅಂಗಲಾಚುತ್ತಿರುವಾಗ–ಅನಿವಾರ್ಯ ಅವಶ್ಯಕತೆಯೊದಗಿದರೆ ನಾವು ಹೊರಗಿನವರ ಸಹಾಯ ಪಡೆಯುವದರಲ್ಲಿ ಏನೂ ತಪ್ಪಿಲ್ಲ.

ಘಂಟಾಘೋಷವಾಗಿ ಸಾರುತ್ತೇನೆ

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಅನಿರ್ಣೀವ, ನುಲುಜ್ಜೆತ್ತಿ, ಬೆನ್ನುಸೊಂಟು, ಕಾಯಿಲೆ ಉಳದ್ರ ಮೊದಲಾದವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ತ್ರಿ 1ರ 10-0-0, ½ ರಾತ್ತ್ರಿ 5-4-0, ¼ ರಾತ್ತ್ರಿ 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ದಿವಸಗಳಿಗೆ ದೊರೆಯಲ್ಕೆವೆ. ಕ್ಯಾಲೆಂಡರಿಗೆ ಬರವಣಿಗೆ ಕಳುಹಿಸಿದ ಕೆಲವು ದಿವಸಗಳಲ್ಲಿ ಕಳುಹಿಸಲಾಗುವುದು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸಕ್ಕರ್ಲಾರುಗಳೂ ಪ್ರೇಕಟಿ ವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ಬೈಂಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ರತಿಸುಖ ಸಾಧನಗಳು



ಅನೇಕರು ಕೆಟ್ಟ ಸ್ತ್ರೀ ಸ್ನೇಹಿಗಳು ಆಗುವುದಕ್ಕೂ ಮತ್ತು ಅನಾಚಾರಕ್ಕೂ ವ್ಯಸನಕ್ಕೂ ಗುರಿ ಆಗುವರು. ಆದರಿಂದ ಸ್ತ್ರೀಸ್ನೇಹಿಗಳು ಯಾವುವು ಸೇವಿಸಬಾರದೆಂಬ ಸಕ್ಕರ್ಲಾರುಗಳು ಈ ವಿಷಯಕ್ಕೆ ಬಹುಮಾನ ಕೊಡುವರು. ಈ ಚೀಟಿ ಬಂದ ಸಮಯದಲ್ಲಿ ಉಪಯೋಗಿಸುವದರಿಂದ ಸ್ತ್ರೀಲಾಭವನ್ನು ಕೊಡುವುದು. ರಕ್ಷಣೆಗೆ ಅತಂಕವಿಲ್ಲ. ಮೋಸಹೋಗದ ಹೆದರಿಕೆ ಯಿಲ್ಲ. ಗರ್ಭಾಧಾನದ ಭಯವಿಲ್ಲ.

ಗಂಡಸರ ಮುದ್ರೆಯ ರಬ್ಬರ್ ಚೀಲ 1 ಕ್ಕೆ 8-0.
ಹೆಂಗಸರ ಮುದ್ರೆಯ ರಬ್ಬರ್ ಚೀಲ 1 ಕ್ಕೆ 8-0.

ಪಿ. ಮುರಾಲ್ ಟ್ರೇಡಿಂಗ್ ಕಂಪನಿ (N)
ನಂ 275/ಪಿ. ಬ್ರೈನ್ ಬಜಾರು ರೋಡು 12 ಚಿಟ್ಟೂ. ಜಿ. ಟಿ. ಮದ್ರಾಸು

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,
UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	... ...	0	6 0
2.	ಸಾಮುದ್ರಿಕ ಶಾಸ್ತ್ರ	....	0	8 0
3.	ಬಾಲ ರಾಮಾಯಣ	....	0	5 0
4.	ಸುಕನ್ಯಾ ಚರಿತ್ರೆ	....	0	5 0
5.	ಕೊಳಲು ಕೃಷ್ಣ	....	0	8 0
6.	ಗುರುಪೀಠಗಳ ಅವನತಿ	....	0	8 0
7.	ದ್ವೈತಮತ ಖಂಡನೆ	....	0	6 0
8.	ಧರ್ಮಸಂಕಟ	....	0	4 0
9.	ಸೂರೂರವ	....	0	8 0
10.	ನಿಶ್ಚಯ ಜ್ಞಾನ	... ...	0	8 0
11.	ವಿದ್ಯಾರಣ್ಯ ಕಾವ್ಯಂ	....	1	0 0
12.	ಚಂದ್ರಗುಪ್ತ ಚಕ್ರವರ್ತಿ	....	1	0 0
13.	ಸ್ವದೇಶಿ	....	0	4 0
14.	ಹರಿಜನ ಸೇವೆ	....	0	4 0
15.	Gauthama the Buddha	....	0	8 0
16.	ಪ್ರಾರ್ಥನೆ	....	0	2 0
17.	ಹಿಂದೀ ಪಹಲಿ ಪೋತಿ	....	0	2 0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)		0	4 0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	....	....	1	0 0
ಕೃಷ್ಣರಾಜ ಪರ್ಯಂಗೊ	....	....	1	0 0
ತುಳುನಾಲ ಬಲಿಯೇಂದ್ರ	....	....	0	4 0
ಆಳಿಯ ಸಂತಾನದ ಕಟ್ಟ್ಪದ ಗುಟ್ಟು		....	0	8 0
ಕಾಪಿಗ್	....	....	0	8 0
ತುಳು ವ್ಯಾಕರಣ	....	....	1	0 0
ಮುದ್‌ಮಾಳತ್ತ್ ಮುದ್‌ಮಾಯಿ		....	0	4 0
ಜನಮರ್ಲ್	....	....	0	12 0
ತುಳು ಪದ್ಯಮಾಲಿಕ್	....	....	0	2 0
ಬಂಗಾರ್ದಂಗಿದ ಕತೆ	....	....	0	2 0
ಮಿತ್ಯ ನಾರಾಯಣ ಕತೆ	....	....	0	1 0
ಸತೀ ಕಮಲೆ	....	....	0	12 0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ. ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳೆಗನ್ನಡದ ತಿಳಿನುಡಿಯ ರಸಗಬ್ಬ
ಹಳೆಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, **ಉಡುಪಿ.**

ಬೆಲೆ: **3—0—0**
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪಿ. ಎ. ಪೈ ಬ್ರದರ್ಸ್, ಉಡುಪಿ.
ಸಚಿತ್ರ ಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಪ್ರತಿಯೊಂದಕ್ಕೆ ರೂ. 0—1—6



ವರ್ಷ ೨೫] ಪ್ರತಿ ಗುರುವಾರ ಹೊರಡುವ ಗಾತ್ರೀಯ ವಾರಪತ್ರಿಕೆ. [Vol. 25
ವಾರ ೧೫] Founder: SRI A. B. SHETTY. [No. 15

ಉಡುಪಿ • 13—12—1945 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಖ್ಯೆಗೆ ರೂ. 0—1—6.

ಅಮೃತಾಂಜನ.
ತಲೆನೋವನ್ನು, ತಿರಿ,
ನೋವನ್ನೆ, ಉಳಾಯಿ
ಶ.ತ್ತಿಗೆ, ಭುಜ,
ಹಲ್ಲು ನೋವಿನೆಗಳ
ಗೂ ಎದೆನೋವಿ.
ಗಾಯಗಳು ಬಾತ.
ಕಂಪ್ಯುತ್ತಿಯು, ಚೇಳು,
ವಿಷಮುಂಡಿಯ ಬೇ.
ಕಚ್ಚಿದಾಕ್ಷ ಮೊದಲಿನ
ನೋವಿಗಾಲಿ ಎಲ್ಲ
ರೋಗಗಳಿಗೂ ಸಹ
ಹಳ್ಳಿಹಳ್ಳಿಯಲ್ಲಿ ಮತ್ತು ಸಣ್ಣ ಸಣ್ಣ ಪಟ್ಟಣಗಳಲ್ಲಿ ಸಿಕ್ಕುತ್ತದೆ.
REGD.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

POLICYHOLDERS' OWN COMPANY.

Policy-holders are the sole owners of a Mutual Company, they alone share in the profits of the Company and "Canara Mutual" is such a Company. Its aim is to render the highest type of Life Assurance service to its Policy-holders. With such an aim, the Company has progressed on very sound lines and made a name in the Indian Insurance World All this is owing to the co-operation of the public with the Company. "Canara Mutual" has also become a Synonym for "Prompt Settlement".

THE CANARA MUTUAL ASSURANCE COMPANY, LTD.,
(UDIPI, S. India.)

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಅದು
'ಜುಪಿಟರ್' ದೇವತೆಗಳ ರಾಜ)ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ
'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ, ಏಜಂಟರು ಮತ್ತು ಓರ್ಗನೈಸರುಗಳಾಗುವವರೂ
ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

1944ರ ಹೊಸ ವ್ಯವಹಾರವು 2½ ಕೋಟಿಗೂ ಮಿಕ್ಕಿದೆ.

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ
ದೊರಕಿಸಿಕೊಡುವ ಅಗ್ರಗಣ್ಯ ಹಿಂದೀ ವಿಮಾ ಸಂಸ್ಥೆಗಳ್ಲೊಂದು

ಸ್ಥಾಪನೆ] **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** [1910

ದಕ್ಷಿಣ ಭಾರತದ ಚೀಫ್ ಏಜಂಟರು.

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಕಾಂತಿ ಕಾಲಗಳಲ್ಲಿ—ನಾವು
ನಮ್ಮ ಗಿರಾತಿಗಳಿಗೆ ಲಾಭಕಾರಿಯೂಗುವಂತೆ ಪಲ್ಲಿಸಿರುವ
ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರಪಲ್ಲಿ ಪೂರ್ತಿಗೊಳಿಸಿದ ವಿಮಾ
ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.
Central Office:—**UDIPI**. S. K.
Mangalore ○ Calicut ○ Bangalore ○ Madras ○ Madura ○ Trivandrum ○ Bombay

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ
ಪ್ರತಿಯೊಬ್ಬನೂಡನಿರತಳ್ಳ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 80ಹೊಟ್ಟು, ಸಣ್ಣ ಮಕ್ಕಳಿಗೆ 10ರಿಂದ 20ಹೊಟ್ಟು ಲವಂಗ ಯಾ ಏಲಕ್ಕಿ
ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ
ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಪೆಷಲಿಸ್ಟರು:—ಡಾ॥ ಪಾಯಸ್ ಕನ್ಸಲ್ಟಿಂಗ್ ರೂಮ್ಸ್, ಎಂಡ್ ಫಾರ್ಮೆಸಿ,
ಶ್ರೀ ಆರ್. ಎಸ್. ಶೆಣೈ, ರಥಬೀದಿ; ಡಾ॥ ಸಿ. ಜಿ. ಆಚಾರ್ಯ ಫಾರ್ಮೆಸಿ; ಡಾ॥ ಕೆ. ಶೇಷ
ಗಿರಿ ಪೈ, L. L. M; ಡಾ॥ ವೆಂಕಟರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೋ.

ANNOUNCEMENT

We have pleasure to announce the opening of a branch of the Bank

at

KANHANGAD

on 17-11-1945, by

Sri B. Appaswamy Chetty, B. A., R. D. O., Puttur.

A branch of the Bank will be opened at MERCARA shortly.

The Vijaya Bank Limited.
Head Office:- MANGALORE.

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ
ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧ
ದಿಂದಲೂ ಬೆಂಬಲನಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ
ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತ
ವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಪಲ್ಲಿಸಲು ಮಹಾ
ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನಿಯುವರೆಂದು
ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಮೇಲಿನ ಜನರಾಳು ಬಹಳ ಲಂಡರ ಅಧ್ಯಕ್ಷತೆಯಲ್ಲಿ ಸೇರಿದ-ಹಣವಜಾ, ಸೈಗಾಳ, ಇಲ್ಲನ್ನುವವರು ಆರೋಪಿಗಳಾಗಿ ನಿಂತ-ನಿಜ ಬಹುದೂರ, ಜನಾಪಾರ ನಿಗಳು, ಆಸೆ ಪೋಲಿ, ಲಾಭಬಾಯಿ ದೋಷಾಯಿ, ಮೊದಲಾದವರು ಆರೋಪಿ ವಕೀಲರಾಗಿ ಕುಳಿತ-ಸರಕಾರೀ ವಕೀಲರಾಗಿ ಹೆಡ್ಡುಕಾಟು ಜನರಾಳು ವ್ಯವಹರಿಸಿದ-ಕೋರ್ಟು ಮಾರ್ಶಲ್ ವಿಚಾರಣೆಯಲ್ಲಿ—

೩ನೇ ಸರಕಾರೀ ಸಾಕ್ಷಿ ಕುಳಿವಾರು ಸೇಸಿಯ ಹೇಳಿಕೆ

ನಾನು ಕೆಲವು ವರುಷಗಳಲ್ಲಿ ವಿಶೇಷ ಕಾಯ ಕಷ್ಟದಿಂದ ಸುಮಾರು 7 ಸಾವಿರ ರೂಪಾಯಿ ಕೂಡಿಸಿಟ್ಟಿದ್ದೆ. ಆ ಎಲ್ಲಾ ಹಣವೂ ಕಳದ ಎರಡು ಮೂರು ವರುಷಗಳಲ್ಲಿ ದುಬಾಷ್ ಚಂದ ಮೋಸರನ್ನು ಸೇರಿದೆ. ನಾನೀಗ ಚಿಕ್ಕಾಸಿಗೆ ಗತಿಯಿಲ್ಲದವಳಾಗಿದ್ದೇನೆ. ಒಂದು ಸೇರಕ್ಕಿಗೆ ಸರಾಸರಿ ಒಂದು ರೂಪಾಯಿಯಂತೆಯೂ, ಬಿಮಿಣಿ ಎಣ್ಣೆ ಬಾಟ್ಲಿಗೆ ಸರಾಸರಿ 1-2-0ಯಂತೆಯೂ, ಸಕ್ಕರೆ ರಾತ್ರಿಗೆ 1-0-9ಪೈಯಂಯೂ ಈ ಹಣವಾಜಾ, ಸೈಗಾಳ, ಇಲ್ಲನ್ನುವವರು ನನ್ನಿಂದ ಪಡಕೊಂಡಿದ್ದಾರೆ. ನಾನು ಅವರ ಅಂಗಡಿಯ ಕಾಯಂ ಗಿರಾಕಿ. ಜೀವನಾವಶ್ಯಕ ಮಿಕ್ಕ ಸಾಮಾನುಗಳನ್ನು ಒಂದಕ್ಕೆ ನಾಲ್ಕರಂತೆ ಬೆಲೆಕೊಟ್ಟು ನಾನು ಅವರ ಅಂಗಡಿಯಿಂದಲೇ ತರಬೇಕಾಗಿತ್ತು. ಈ ವ್ಯಾಪಾರದಿಂದ ನನ್ನ ಹಣವೆಲ್ಲಾ ಖಾಲಿಯಾಗಿ ಕೊನೆಕೊನೆಗೆ ಊಟಕ್ಕಿಲ್ಲದ ದೆಸೆಯಿಂದ 38 ರಾತ್ರಿ ಭೂರ ಕಳಕೊಂಡಿದ್ದೇನೆ. ಹೀಗೇನೇ ಆದರೆ ಇನ್ನು ಸ್ವಲ್ಪ ಸಮಯದೊಳಗೆ ನಾನು ಸಾಯುವದು ಖಂಡಿತ.

ಲಾಭಬಾಯಿ ದೋಷಾಯಿಗಳ ಆಡ್ಡ ಸವಾಲು

ಲಾಭಬಾಯ—ನೀನು ಆರೋಪಿಗಳ ಅಂಗಡಿಯ ಕಾಯಂ ಗಿರಾಕಿಯೆಂದು ಯೇ ಳಿದಿಯಲ್ಲಾ? ಹಾಗೆಯೇ ನೀನು ಕಾಯಂ ಗಿರಾಕಿಯಾಗಿರುವ ಮಿಕ್ಕವರ ಹೆಸರನ್ನೂ ಹೇಳಬಹುದೆ?

ಸೇಸಿ—[illegible]ಸರು.....ಆದರೆ ಕೆಲವನ್ನು, ನಾಗಯ್ಯ, ಹೆಮ್ಮೆದೆ, ಆಂತೋಸಿ.....

ಲಾಭಬಾಯಿ—ಸ್ಟಾಪ್ಸ್ಟಾಪ್. ಅದನ್ನು ನಾನು ಕೇಳಿದ್ದಲ್ಲ; ದುಬಾಷ್ ಚಂದರಲ್ಲಿ ಮಾಡಿದಂತೆಯೇ ಬೇರೆ ಯಾರಾರಲ್ಲಿ ಕಾಯಂ ವ್ಯಾಪಾರ ನೀನು ಮಾಡಿದ್ದೀಯೆಂದು ನನ್ನ ಪ್ರಶ್ನೆ.

ಸೇಸಿ—ವ್ಯಾಪಾರದ ಮಾತೆ? ಅದನ್ನು ನಾನು ಹಣವಜಾ, ಸೈಗಾಳ, ಇಲ್ಲನ್ನುವ

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾ ಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಮ್ಮಿ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವೆನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ಒಂದು ತಿಂಗಳ ಮುರಗ.

ಸ್ವದೇಶೀ ಸರಕಾರವಿರುತಿದ್ದರೆ—

'ಆದಾಯ ಹಿಂಡು' ಸೂರೆಖೋರ

★

—ನಿಶೇಷ ಹೆಮ್ಮೆಗಾರನಿಂದ—

(ಕಳೆದ ಸಂಚಿಕೆಯಿಂದ ಮುಂದುವರಿದುದು)

○

ವರೆ ಅಂಗಡಿಯಲ್ಲಿ ಮಾತ್ರ ಮಾಡುತ್ತಿದ್ದುದು.

ಲಾಭಬಾಯಿ—ಅಕ್ಕಿ, ಬಿಮಿಣಿ ಎಣ್ಣೆ, ಸಕ್ಕರೆ ಇತ್ಯಾದಿ ಸಾಮಾನುಗಳನ್ನು ರೇಶನ್ ಕಾರ್ಡು ಮೂಲಕ ಪಡೆಯದೆ ನೀನು ಆರೋಪಿಗಳ ಅಂಗಡೀ ವ್ಯಾಪಾರ ಇಟ್ಟು ಕೊಂಡುದೇಕೆ?

ಸೇಸಿ—ರೇಶನ್ ಕಾರ್ಡಿಗಾಗಿ ಶ್ಯಾನುಭಾಗರಲ್ಲಿಗೆ ಹೋದೆ. ಅವರು ನನ್ನಿಂದ 10 ರೂಪಾಯಿ ತೆಗೆದುಕೊಂಡು ಹತೇರ ಲ್ಲಿಗ ಕಳುಹಿದರು. ಹತೇರಲಿಗೆ.....ಅವರು ಹೇಳಿದಂತೆ ನಾನು ಕೇಳಿರಲಿಲ್ಲವೆಂದು ಮೊದಲೇ ಕಣ್ಣಿದ್ದುದ್ದರಿಂದ 'ನಿನ್ನ ಮನೆಯಲ್ಲಿ ಅಕ್ಕಿ ದಾಸ್ತಾನಿದೆ' ಎಂದು ಹೇಳಿ ಕಾರ್ಡು ಕೊಡಲೊಪ್ಪಲಿಲ್ಲ. ಮಾತ್ರವಲ್ಲ, ಪೋಲೀಸರ ಸಮೇತ ಮೇಲಧಿಕಾರಿಗಳನ್ನು ತರಿಸಿ ನನ್ನ ಮನೆಯಲ್ಲಿ ಜಡ್ತಿ ಮಾಡಿಸಿ, ಇದ್ದ ಎರಡೂವರೆ ಪಾವಕ್ಕಿಯನ್ನು ಕೊಂಡು ಹೋದರು. ಆ ಮೇಲೆ ರೇಶನ್ ಕಾರ್ಡಿಗಾಗಿ ಮಣಿಗಾರರನ್ನೂ ತದನಂತರ ತಹಶೀಲ್ದಾರರನ್ನೂ ಭೇಟಯಾದೆ. ಅವರು "ನಿನ್ನೊಡನೆ 10 ಸಾವಿರದ ಗಂಟುಂಟಂತೆ. ಅದನ್ನು ಒಳಗಿಟ್ಟು ಕಳ್ಳರು ಕೊಂಡುಹೋಗುವದಕ್ಕಿಂತ ವಾರ್‌ಫಂಡಿನಲ್ಲಿ ಇಟ್ಟರೆ..." ಇತ್ಯಾದಿ ಬೋಧನೆಗೇನೇ ತೊಡಗಿದರು. 'ಬದಲಿಗೆ ನನಗೇನು ಕೊಡುತ್ತೀರಿ?" ಎಂದು ಕೇಳಿದೆ. 'ಈಗ ಹಣ ಬಂದುದಕ್ಕೆ ಒಂದು ಸರ್ಟಿಫಿಕೇಟು ಕೊಡುತ್ತೇವೆ. ಕಡೆಗೆ ನಿನ್ನ ದುಡ್ಡು ಬಡ್ಡಿ ಸಮೇತ ಸಿಕ್ಕುತ್ತದೆ" ಎಂದು ಹೇಳಿದರು. ನಾಳೆ ಯಾರೋ ಏನೋ, ಸದ್ಯ ನಾನು ದೇಹ ಸವೆಯಿಸಿ ಮಾಡಿದ ಹಣದ ಬದಲಿಗೆ ಒಂದು ತುಂಡು ಕಾಗದ ಮಾತ್ರ ಎಂದಾದೊಡನೆ ನನ್ನ ಜೀವ ಹಾರಿತು. "ನಾಳೆ ಬರುತ್ತೇನೆ" ಎಂದು ಹೇಳಿ ಬಂದವಳು ಆ ಮೇಲೆ ಮರಳಿ ಹೋಗದೆ, ದುಬಾಷ ಚಂದರ ವ್ಯಾಪಾರವನ್ನೇ ಪ್ರಾರಂಭಿಸಿದೆ.

ಲಾಭಬಾಯಿ—ಆ ಹಣ ನಿನ್ನ ಗಂಡ ನಿಂದ ನಿನಗೆ ದೊರೆಯಿತೆ?

ಸೇಸಿ—ಅಲ್ಲ, ಗಂಡ ಸತ್ತಮೇಲೆಯೇ ನಾನು ಮಾಡಿದ ಸಂಪಾದನೆ ಅದು

ಲಾಭಬಾಯಿ-ಯಾವ ವ್ಯಾಪಾರದಿಂದ?

ಸೇಸಿ—ನನ್ನಂತಹ ಜೆಂಗಸು ವ್ಯಾಪಾರವಾಡುವದೇನು? ಕಾಯ ಕಷ್ಟದಿಂದ.

ಲಾಭಬಾಯಿ—ಕೆಲಸಮಾಡಿ ಅಷ್ಟು ಹಣ ಕೂಡಹಾಕಿದಿ?

ಸೇಸಿ—ಕೆಲಸ ಅಂದರೆ.....ಏನೇ ಇರಲಿ-ಅನು ನನ್ನ ಸ್ವಂತ ಸಂವಾದನೆ.

ಲಾಭಬಾಯಿ—ಹೋ, ಹಾಗೆ! ಕಾಯ ಕಷ್ಟ ಮಾಡಿ! ಇರಲಿ, ಆರೇಳು ಸಾವಿರ ರೂಪಾಯಿಗಳೂ ಅಕ್ಕಿ, ಎಣ್ಣೆ, ಸಕ್ಕರೆಗೆ ಳಿಗೇನೇ ಹೋಯಿತೆ?

ಸೇಸಿ—ಹೌದಯ್ಯಾ. ರೂ. 1-2-0 ರಂತೆ ದಿನಕ್ಕೊಂದು ಬಾಟ್ಲಿ ಬಿಮಿಣಿ ಎಣ್ಣೆ ತಂದರೆ ಮೂರು ವರುಷಗಳಲ್ಲಿ ಎಣ್ಣೆಗೇ ಎಷ್ಟು ಹೋಯಿತು ನೋಡಿ!

ಲಾಭಬಾಯಿ-ಹ್ಞೂಂ! ಎಣ್ಣೇ ಖರ್ಚು ಆಸ್ಟಿತ್ತು! ಆಗಲಿ, ಅಷ್ಟು ಖರ್ಚು ಇರುವ ಹೊತ್ತಿನಲ್ಲೇ ಆದರೆ ಹತ್ತು ಮಡಿ ಸಂಪಾದನೆಯಿರಲಿಲ್ಲವೆ?

ಸೇಸಿ—ಇಲ್ಲ; ಹಣ ಕೊಡತಕ್ಕವರೆಲ್ಲಾ ಮೋಸ ಕೊಟ್ಟಿದ್ದರು.

ಲಾಭಬಾಯಿ—ನಿನ್ನ ಗೃಹಚಾರ! ಹಾಗಾದರೆ ನೀನು ಈ ಸಾಕ್ಷಿಗೆ ಬರುವ ಮೊದಲೇ ಮೋಸ ಕೊಟ್ಟವರ ಮೇಲೆ ಫಿರ್ಯಾದಿಗೇಕೆ ಹೋಗಲಿಲ್ಲ?

ಸೇಸಿ—ಅವರ ಮೇಲೆ ಫಿರ್ಯಾದಿಮಾಡಲು ಮನಸ್ಸು ಬರಲಿಲ್ಲ. ಏನೋ ಅವರ ವರ ಋಣದಲ್ಲಿದ್ದುದನ್ನು.....

ಲಾಭಬಾಯಿ—ನಿನ್ನ ಯೋಗ ಕ್ಷೇಮ ವಿಚಾರಿಸಲು ನಾನಿಲ್ಲಿ ನಿಂತಿಲ್ಲ. ನಾನು ಕೇಳಿದ್ದಕ್ಕೆ ಉತ್ತರ ಕೊಟ್ಟರೆ ಸಾಕು. ಬಿಡ್ಡರ್ ಮದನನಿಗೂ ನಿನಗೂ ಸ್ನೇಹಾಚಾರವಿದೆಯೆ?

ಸೇಸಿ—ಸ್ನೇಹಾಚಾರವೆಂದರೆ?

ಲಾಭಬಾಯಿ—ಸ್ನೇಹಾಚಾರವೆಂದರೇನೆಂಬುದೇ ನಿನಗೆ ಗೊತ್ತಿಲ್ಲ, ಅಲ್ಲವೆ? ಬಿಡ್ಡರ್ ಮದನ ನಿನ್ನ ಮನೆಗೆ ರಾತ್ರಿ ಹಗಲು ಬಂದು ಹೋಗುತಿದ್ದಾನೆಯೆ? ಹಾಗು ಅಥವಾ ಇಲ್ಲ ಎಂದಿಷ್ಟೇ ಹೇಳಿದರೆ ಸಾಕು.

ಸೇಸಿ—ಹೌದು.

ಲಾಭಬಾಯಿ—ನಿನ್ನಲ್ಲಿದ್ದ ಸುಮಾರು ಏಳು ಸಾವಿರ ರೂಪಾಯಿಗಳಲ್ಲಿ ಮೂರು ಸಾವಿರದಷ್ಟು ಸಟ್ಟಾಕಟ್ಟಿ ಹೋದುದು ನಿಜವೆ?

ಸೇಸಿ—ಒಮ್ಮೊಮ್ಮೆ ಹೋಗಿದೆ, ಕೆಲವು ವೇಳೆ ಸಿಕ್ಕಿದೆ. ಅದು ಇಷ್ಟೇ ಎಂದು ನೆನಗೆ ಲೆಕ್ಕವಿಲ್ಲ.

ಲಾಭಬಾಯಿ—ಅಂತೂ ಬಿಡ್ಡಿನಿಂದಾಗಿ ಅಂದಾಜು ಸುಮಾರು 3000ದಷ್ಟು ನಿನಗೆ ನಷ್ಟವಾಗಿರಬಹುದು.

ಸೇಸಿ— ಅದನ್ನು ನಾನು ಲೆಕ್ಕ ಇಟ್ಟಲ್ಲ.

ಲಾಭಬಾಯಿ—ಬೇಡ,ಉಳಿದ 4000 ರೂ.ಗಳನ್ನು ಮೊನ್ನೆ 68 ಬಂದ ದಿನ ಮದನ ನಿನ್ನಿಂದ ಸಾಲ ಪಡೆದುಕೊಂಡದ್ದು ನಿಜವೆ?

ಸೇಸಿ—(ಮೌನ)

ಲಾಭಬಾಯಿ—ಇದು ಕೋರ್ಟು. ನೀನು ಕೊಡಲಿಲ್ಲವಾದರೆ ಇಲ್ಲವೆಂದೇ ಹೇಳು. ಆದರೆ ಇಲ್ಲ ಇಲ್ಲವೆಂದು ಹೇಳಿದ ನೇಲೆ ಮತ್ತೆ ಅವನಿಂದ ಹಣ ಕೇಳುವ ಅಧಿಕಾರ ನಿನಗಿಲ್ಲವೆಂಬುದನ್ನು ತಿಳಿದುಕೋ.

ಸೇಸಿ—ಹೌದು, ಕೊಟ್ಟಿದ್ದೆ.

ಲಾಭಬಾಯಿ—ಹೀಗೆ ನಿನ್ನ ಆರೇಳು ಸಾವಿರ ರೂಪಾಯಿಗಳೂ ಬಿಡ್ ಮತ್ತು ಬಿಡ್ಡರರಿಗೆ ಹೋಗಿನೆ ಹೊರತು ಆರೋಪಿಗಳ ಅಂಗಡಿಗೆ ಹೋಗಿಲ್ಲ.

ಸೇಸಿ—ಆ ಆರೇಳು ಸಾವಿರ ನಾನು ಮೊದಲೇ ಕೂಡಿಸಿಟ್ಟಿದ್ದುದು. ಇವರ ಅಂಗಡೀ ವ್ಯಾಪಾರ ನಡೆಸುತಿದ್ದ ಅವಧಿಯು ಒಳ್ಳೇ ಹಣ ಚಲಾವಣೆಯಿದ್ದ ಸಮಯವಾದ್ದರಿಂದ ಆಗಲೂ ನಾನು ಆರೇಳು ಸಾವಿರ ಸಂಪಾದಿಸಿದ್ದೆ. ಆ ಹಣವನ್ನೆಲ್ಲಾ ಇವರ ಅಂಗಡಿಗೇನೇ ಹಾಕಿದ್ದೇನೆ.

ಲಾಭಬಾಯಿ—ಆ ಕುಳವಾರುಗಳೆಲ್ಲಾ ನಿನಗೆ ಮೋಸ ಕೊಟ್ಟರೆಂದು ನೀನು ಈಗ ತಾನೇ ಹೇಳಿದಿ!

ಸೇಸಿ—(ನಿರುತ್ತರ)

(೧೧ನೇ ಪುಟ ನೋಡಿರಿ)

CANARA BANK LIMITED

Incorporated in British India. liability of Members Limited.)
(ESTD. 1906 ಸ್ಥಾಪನೆ.)

ANNOUNCEMENT.

We have the pleasure to announce that Branches of the Bank have been opened at **SHOLAPUR, SHIMOGA, SECUNDERABAD and KALYAN** (Bombay).

Our MADRAS Office has been opened on **12th November 1945 at 317, Lingi Chetty Street, MADRAS.**

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರ್ಯರ್,
ರಟ್ಟಾಡಿ, ಉಡುಪಿ.

ಭಾರತಾಂಬೆಯು ಬಂಧಮುಕ್ತತೆಯೇ ನಮ್ಮ ಗುರಿ!

ಸ್ವಾತಂತ್ರ್ಯ ಸಮರದಲ್ಲಿ ಬಂದು ದನ್ನನುಭವಿಸಲು ತಯಾರು!

ಕೆಂಪುಕೋಟೆಯೊಳಗಡೆಯಿಂದ ಆಜಾದ್ ಹಿಂದ್ ತ್ರಿನಾಯಕರ ಗರ್ಜನೆ!

ನುಂದುವಂಪಟ್ಟ ಕೆಪ್ಟನ್ ಶಾನವಾಜ್, ಕೆಪ್ಟನ್ ಸೆಹ್ಗಾಲ್, ಲೆಫ್ಟನೆಂಟ್ ಧಿಲ್ಲೋನರ ವಿಚಾರಣೆಯು ತಾ. 6ಕ್ಕೆ ರಂಭವಾಗಬೇಕಾಗಿದ್ದುದು ತಾ. 7ಕ್ಕೆ ವ್ಯಾ ರಂಭಿಸಿತು. ಪ್ರಧನುಃ ಸರಕಾರೀ ಕಡೆಯ ಕೊನೆಯ ಸಾಕ್ಷಿಯಾಗಿ, ಕೆ. ಸೆಹ್ಗಾಲರು ಸೆರೆ ಸಿಕ್ಕಿದ್ದ ಲೆಫ್ಟನೆಂಟ್ ಕರ್ನಲ್ ಕಿಟ್ಸನರ ವಾಗ್ಮೂಲವಾಯಿತು. ಈ ವೊಕದ್ದಮೆಯ ಹೇಳಿಕೆಗಳಲ್ಲಿ ಹೆಸರು ಬಂದಿದ್ದ ಇತರ ಹಲವು ಸಾಕ್ಷಿಗಾರರನ್ನು ಇಕರಿಯುವ ಇಚ್ಛೆ ತನಗಿಲ್ಲವೆಂದು ಎಡ್ವೊಕೇಟ್ ಜನರಲರಂದುದರಿಂದ, ವೊಕದ್ದಮೆಯ ಪರವಾದ ಸಾಕ್ಷ್ಯಗಳು ಅಲ್ಲಿಗೆ ಮುಗಿದುವು. ಆ ಮೇಲೆ ಮೂವರು ಆರೋಪಿಗಳು—ಜೈಹಿಂದ್ ತ್ರಿಶೂಲವೆನ್ನಬಹುದಾದ ಆ ತ್ರಿಮೂರ್ತಿಗಳು—ಬೇರೆ ಬೇರೆಯಾಗಿ ತಮ್ಮ ಹೇಳಿಕೆಯನ್ನೋದಿದರು. ಇದನ್ನಾಲಿಸುವ ಆತುರದಿಂದ ಆ ದಿನ ಕೋರ್ಟಿನಲ್ಲಿ ಪ್ರೇಕ್ಷಕರ ಸಂಖ್ಯೆ ವಿಶೇಷವಿತ್ತು.

ಕೆಪ್ಟನ್ ಶಾನವಾಜರ ಹೇಳಿಕೆ

ಕೋರ್ಟ್ ಮಾರ್ಶಲಿನಿಂದಾಗಲೀ, ಇ ನ್ನಾವುದೇ ಕೋರ್ಟಿನಲ್ಲಾಗಲೀ ವಿಚಾರ ನೆಗೊಳಗಾಗುವಂತಹದೇನನ್ನೂ ತಾನು ಮಾಡಿಲ್ಲ. ಮಾತೃಭೂಮಿಯ ಬಂಧ ನಿಮೋಚನೆಗಾಗಿ ಹೋರಾಟ ಹೂಡಿದ ಆಜಾದ್ ಹಿಂದ್ ತಾತ್ಕಾಲಿಕ ಸರಕಾರದ ಕ್ರಮಬದ್ಧ ಸೇನೆಯ ಓರ್ವ ಸದಸ್ಯನಾಗಿ ತಾನು ಹೋರಾಟ ಭಾಗಿಯಾದುದು ನಿಜ. ಮಹಮ್ಮದ್ ಹುಸ್ಸೇನನಿಗೆ ಮರಣ ಶಿಕ್ಷೆ ಕೊಡಿಸಿದ್ದೆನೆಂಬ ತನ್ನ ಮೇಲಿನ "ರೋಪ ಸುಳ್ಳು-ಎಂದು ಶಾನವಾಜರು ತನ್ನ ಮೇಲಿನ ಎರಡು ಆರೋಪಗಳನ್ನೂ ಅಲ್ಲಗಳೆದಿದ್ದಾರೆ.

ದೇಶಕ್ಕಾಗಿ ಸರ್ವವನ್ನೂ ಒತ್ತೆಯಿಟ್ಟಿದ್ದೇನೆ

"ನಾನು ಆಜಾದ್ ಹಿಂದ್ ಫೌಜಿಗೆ ಸೇರುವ ಸಿದ್ಧ . ಮಾಡಿದಾಗಲೇ ನನ್ನ ಸರ್ವಸ್ವವನ್ನೂ-ನನ್ನ ದೇವ, ನನ್ನ ಮನೆ, ನನ್ನ ಕುಟುಂಬ ಮತ್ತದರ ರಾಜಭಕ್ತಿ ಸಂಪ್ರದಾಯವನ್ನು-ಸಮರ್ಪಿಸಲು ನಿಶ್ಚೈಸಿದ್ದೆ. ನನ್ನ ಹಾದಿಗಡ್ಡಬಂದರೆ ನನ್ನೊಡ ಹುಟ್ಟಿದವನೊಡನೆ ಕೂಡಾ ಕಾದಾಡುವ ಸಂಕಲ್ಪ ಮಾಡಿದ್ದೆ. 1944ರಲ್ಲಿ ನಡೆದ ಹೋರಾಟದಲ್ಲಿ ನಾವಿಬ್ಬರೂ ಮುಖಾ ಮುಖಿ ಹೋರಾಡಿದ್ದೆವು. ಅವ ಜಖಂ ಗೊಂಡಿದ್ದ ಚಿನ್ ಗುರ್ತುಗಳಲ್ಲಿ ನನ್ನ ದಾ ಯಾದಿ ಮತ್ತು ನಾನು ಸುಮಾರು ಎರಡು ತಿಂಗಳ ವರೆಗೆ ದಿನಂಪ್ರತಿ ಹೋರಾಟ ನಡಿಸಿದ್ದೆವು. ರಾಜಭಕ್ತಿಯೋ ದೇಶಭಕ್ತಿಯೋ ಎಂಬೊಂದೇ ಪ್ರಶ್ನೆಯು ನಮ್ಮಿಬ್ಬರ ನಡುವೆ ಇದ್ದುದು. ನನ್ನ ದೇಶಕ್ಕೆ ನನ್ನನ್ನು ನಾನು ಅರ್ಪಿಸಿಕೊಳ್ಳುತ್ತೇನೆಂಬ ವಾಗ್ದಾನವನ್ನು ನೇತಾಜಿಗೆ (ಸುಭಾಸ್) ನಾನು ಕೊಟ್ಟಿದ್ದೇನೆ.

ದ್ರೋಹಿ ಹುಸ್ಸೇನ್

ನಾನು ಕೊಲೆಗೆ ಪ್ರೋತ್ಸಾಹ ಕೊಟ್ಟಿದ್ದೇನೆಂಬ ಪ್ರೊಸಿಕ್ಯೂಶನ್ ವಾದ ಸತ್ಯ ವೆಂದಿಟ್ಟುಕೊಂಡ ಪಕ್ಷದಲ್ಲಿಯೂ, ನನ್ನ ಮೇಲೆ ಯಾವುದೇ ಅಪರಾಧದ ಹೊರೆ ಬೀಳುವಂತಿಲ್ಲ. ಮಹಮ್ಮದ್ ಹುಸ್ಸೇನನು ಸ್ವಯಂ ಪ್ರೇರಣೆಯಿಂದ ಆ. ಹಿಂ. ಫೌಜಿಗೆ ಸೇರಿದವನಿದ್ದು ಆದರೆ ಶಿಸ್ತುಕ್ರಮ ಗಳಿಗೆ ಕಟ್ಟು ಬದ್ಧವನು. ಅಂದವನು ಅ ತ್ಯಂತ ಸಂಧಿಗ್ಧ ಕಾಲದಲ್ಲಿ ತಾನು ತಪ್ಪಿಸಿ ಕೊಳ್ಳಲು ನೋಡಿದ್ದ; ಬೇರೆಯವರನ್ನೂ ತಪ್ಪಿಸಿಕೊಳ್ಳುವಂತೆ ಪುಸಲಾಯಿಸಿದ್ದ. ಆತನನ್ನು ಪ್ರಯತ್ನದಲ್ಲಿ ಜಯಶೀಲನಾಗು ತಿದ್ದರೆ ನನ್ನ ಕೈಕೆಳಗಿನ ಸೇನಾವಾರ್ತೆಗಳ ನ್ನೆಲ್ಲಾ ಬ್ರಿಟಿಷರಿಗೆ ಕೊಡುತಿದ್ದ. ಇದ ರಿಂದ ನಮ್ಮ ಸರ್ವನಾಶವಾಗಿ ಹೋಗು ತಿತ್ತು. ಎಲ್ಲಾ ನಾಗರಿಕ ರಾಷ್ಟ್ರಗಳ ಸೇ ನಾ ಶಾಸನಗಳಂತೆಯೂ ಆ.ಹಿಂ. ಫೌಜಿನ ಕಾಯಿದೆಯನ್ವಯವೂ ಇಂತಹ ಭಯಂಕ ರಾಪರಾಧಕ್ಕೆ ಮರಣ ಶಿಕ್ಷೆಯೇ ವಿಧಿ. ಆದ ರೂ ವಸ್ತುಶಃ ನಾನವನಿಗೆ ಮರಣದಂಡನೆ ವಿಧಿಸಿದ್ದೂ ಇಲ್ಲ; ನನ್ನ ಆಜ್ಞಾನುಸಾರ ಆತನು ಗುಂಡಿಗಾಹುತಿಯಾದನೆಂಬುದೂ ಸುಳ್ಳು. ಮಹಮ್ಮದ್ ಹುಸೇನ್ ಮತ್ತು ಅವನ ಅಸೂಯಾಯಿಗಳನ್ನು ಪ್ರಥಮತಃ ನನ್ನ ಮುಂದೆ ಹಾಜರುಪಡಿಸಿದ್ದರು. ಅವ ರ ವಶ ಅಪರಾಧಗಳ ವರದಿಗಳೇನೂ ಇರ ಲಿಲ್ಲ. ನಾನು ಹುಸ್ಸೇನನನ್ನು ಕರಿಣವಾಗಿ ಖಂಡಿಸಿ, ಆತ ಗುಂಡಿಟ್ಟು ಕೊಲ್ಲುವಂತ ಹ ಅಪರಾಧಿಯೆಂದು ಹೇಳಿದ್ದೆ ಮಾತ್ರ. ಅಂತೂ ನಾನಾ ವಿಷಯವನ್ನು ಅಲ್ಲಿಗೇ ಬಿಟ್ಟು, ಮತ್ತೊಮ್ಮೆ ನನ್ನ ಮುಂದೆ, ಆಪ ವಾ ಇಂತಹ ಅಪರಾಧಗಳನ್ನು ಎರಡನೇ ಬಾರಿ ಮಾಡಿದವರನ್ನು ವಿಚಾರಿಸುವ ಅಧಿ ಕಾರ ಪಡೆದಿದ್ದ ರೆಜಿಮೆಂಟಲ್ ಅಫೀಸರರ ಸನುಷ್ಠಮ ಇವರನ್ನು ಹಾಜರುಪಡಿಸಿ ರೆಂದು ಹೇಳಿಬಿಟ್ಟಿದ್ದೆ. ಮತ್ತೊಮ್ಮೆ ನನ್ನ ಮುಂದೆ ಅದು ಬಂದುದೇ ಇಲ್ಲ. ಎರಡನೇ ಬಾರಿ ಅಂತಹ ಸಂದರ್ಭ ಬಾರದುದೇ ಇದಕ್ಕೆ ಕಾರಣವಿರಬಹುದು.

ನೇತಾಜಿ ಸುಭಾಸ್

ಭಾರತದಲ್ಲಿರುವಾಗ ನಾನೆಂದೂ ಸು ಭಾಸರನ್ನು ನೋಡಿದ್ದಿಲ್ಲ. ಅಲ್ಲಿಯ ಆವರ ಚಟುವಟಿಕೆಗಳ ಕುರಿತು ನನಗೇನೂ ಗೊ ತ್ತಿದ್ದದೂ ಇಲ್ಲ. ಆದರೆ ಮಲಯದಲ್ಲಿ ನಾನವರ ಹಲವು ಭಾಷಣಗಳನ್ನು ಕೇಳಿ ದ್ದೆ; ಅವು ನನ್ನ ಮೇಲೆ ಆಗಾಧ ಪರಿಣಾ ಮವನ್ನುಂಟುಮಾಡಿದುವು. ಅವರ ವ್ಯಕ್ತಿ ತ್ವ ಮತ್ತು ಭಾಷಣಗಳು ನನ್ನ ಏಲಿಗೆ ಮೋಹನಾಸ್ತ್ರಗಳಾದುವು ಎಂದರೆ ತಪ್ಪಲ್ಲ. ಭಾರತದ ನಿಜವಾದ ಚಿತ್ರವನ್ನು ಅವರು ನಮ್ಮ ಮುಂದಿಟ್ಟರು. ನಾನು ನನ್ನ ಜೀ ವನದಲ್ಲಿ ಪ್ರಥಮ ಬಾರಿ ಓರ್ವ ಭಾರತೀ ಯನ ದೃಷ್ಟಿಯಿಂದ ಭಾರತವನ್ನು ಕಂಡೆ. ಅವರ ನಿಷ್ಪಾಕ್ಷಿಪ್ತ ಬುದ್ಧಿ, ನವ್ಯ ದೇಶದ ಮೇಲೆ ಅವರಿಗಿದ್ದ ನಿಸ್ಸೀಮ ಭಕ್ತಿ, ಅವರ ಯಥಾರ್ಥತೆ, ಜಪಾನರ ಅಭಿಪ್ರಾಯಕ್ಕೆ ತಲೆಬಾಗಲೊಪ್ಪದ ಅವರ ಧಿಕ್ಕಾರ ನನ್ನ ಹೃದಯದಲ್ಲಿ ಗಾಢ ಮೊಹರೊತ್ತಿದುವು. ನಮ್ಮಿಚ್ಛೆಯಿರಲಿ, ಇಲ್ಲದಿರಲಿ, ಜಾಪಾನ ರಿಂತೂ ಖಂಡಿತವಾಗಿಯೂ ಹಿಂದುಸ್ಥಾನ ದೊಳಗೆ ನುಗ್ಗುತಿದ್ದಾರೆಂದವರಿಗೆ ಮನ ವರಿಕೆಯಾಗಿತ್ತು. ಒಹುತೇಕವಾಗಿ ಯು ದ್ಧವು ಹಿಂದುಸ್ಥಾನದೊಳಗಡೆಗೆ ಹೋಗ ಲಿದೆ ಎಂದು ನಾನೂ ತಿಳಿಕೊಂಡೆ. ಜಾ ಪಾನ್ ಧಾಳಯನ್ನು ತಡೆಗಟ್ಟುವ ಶಕ್ತಿ ಬ್ರಿಟಿಷ್ ಸೇನೆಗಿದೆ ಎಂದು ನನಗೆ ನಂಬಿಕೆ ಯಿರಲಿಲ್ಲ. ನಾನು ಮಲಯಾಕ್ರಮಣವ ನ್ನು ಕಂಡಿದ್ದೆ; ಆ ದುರದೃಷ್ಟವು ಭಾರತ ಕ್ಕೊದಗುವದು ನನಗೆ ಬೇಡವಾಗಿತ್ತು. ಮಲಯದಲ್ಲಿ ಸಹಾಯಶೂನ್ಯ ಯುದ್ಧ ಕೈದಿಯಾಗಿ ಬಿದ್ದಿರುವದಕ್ಕೆಂತ, ಕೈಯ ಲ್ಲೊಂದು ರೈಫಲ್ ಹಿಡಿದುಕೊಂಡರೆ ನಾನು ಭಾರತೀಯರ ಸೊತ್ತು, ಪ್ರಾಣ ಮತ್ತು ಮಾನವನ್ನು ಉಳಿಸುವ ಉಪಕಾರಿಯಾಗಬಲ್ಲೆನೆಂದು ನನಗನ್ನಿಸಿತು. ಆ ಹಿಂ. ಫೌಜಿಗೆ ಸೇರಿಸಿಕೊಳ್ಳುವಾಗ, ಜಾ ಪಾನರು ಅಯೋಗ್ಯ ವರ್ತನೆಗಿಳಿದರೆ ಅ ದನ್ನು ಕೂಡ ಇದಿರಿಸತಕ್ಕವರನ್ನು ಮಾ ತ್ರ ನಾನು ಕರಕೊಂಡೆ.

ಒತ್ತಾಯದ ಅಗತ್ಯವೇನಿತ್ತು?

ಕಷ್ಟ ಸಹನೆ, ತ್ಯಾಗಬುದ್ಧಿಯವರು ಮಾತ್ರ ಸೇನೆಗೆ ಸೇರತಕ್ಕದ್ದೆಂಬ ನೇತಾ ಜಿಯ ಎಚ್ಚರಿಕೆಯನ್ನೂ, ಒತ್ತಾಯದಿಂದ ಸೇರಿಸುವಂಥವರಿಗೇನೇ ತಾನು ಶಿಕ್ಷೆಯ ಬೆದರಿಕೆ ಹಾಕಿದ್ದುದನ್ನೂ ಶಾನವಾಜರು ವಿವರಿಸಿ ಹೀಗಂದಿದ್ದಾರೆ: "ದೂರ ಪ್ಯಾಚ್ಯ ದಲ್ಲಿ ದಾರಿದ್ರ್ಯಪೀಡಿತ ಸಾವಿರಾರು ಹಿಂ ದೀಯರ ಉತ್ಸಾಹಗಳನ್ನು ನಾನು ಸ್ವತಃ ಈ ಕಣ್ಣುಗಳಿಂದ ಕಂಡಿದ್ದೇನೆ. ಅವರು ತಮ್ಮ ಸರ್ವಸ್ವವನ್ನೂ ಆ. ಹಿಂದಿಗೆ ಅರ್ಪಿ ಸಿ, ಕುಟುಂಬ ಕುಟುಂಬವೇ ಆಜಾದ್ ಹಿಂ ದ್‌ಗೆ ಸೇರಿ,ರಾಷ್ಟ್ರಹಿತಕ್ಕಾಗಿ ತಾವು ಫಕೀ ರರಾಗಿ ಹೋದರು. ನಮಗೊಬ್ಬಯೋಗ್ಯ ನಾಯಕನಿದ್ದಾನೆ ಎಂದು ನನಗೆ ಗೊತ್ತಿ ತ್ತು. ನಿಶ್ಶಸ್ತ್ರರಾದ, ನಿರಾಧಾರಿಗಳಾದ, ದಾರಿದ್ರ್ಯಪೀಡಿತರಾದ ಮಿಲಿಯಾವಧಿ ಭಾರತೀಯರ ಹೆಸರು ಹೇಳಿ ಅವರ ಬಿ ಡುಗಡೆಗಾಗಿ ವ್ಯಾಜ್ಯಾರ್ಪಣೆ ಮಾಡಲು ಮುಂದೆ ಬನ್ನಿರೆಂದು ನೇತಾಜಿ ಕರೆದಾಗ, ಕಷ್ಟೊಂದನ್ನು ನಿರಾಕರಿಸಲು ಮಾನವಂತ ನಾದ ಒಬ್ಬ ಹಿಂದೀಯನಿಗೆ ಸಾಧ್ಯವೇ ಇರಲಿಲ್ಲ. ಬ್ರಿಟಿಷರಿಂದ ನಿರ್ದಾಕ್ಷಿಣ್ಯ ಸು ಲಿಗೆಗೆ ಬಲಿಯಾಗುತ್ತಿರುವ—ಈ ಸೂರೆ

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur **B. S. Sawkar**, B.A. L.L. B., *Chairman.* — **A. S. Kini**, *Managing Director.*

ದಿ ಯುನೈಟೆಡ್ ಕರ್ನಾಟಕ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ಧಾರವಾಡ

THE UNITED KARNATAK INSURANCE Co Ltd DHARWAR

ಹೆಚ್ಚಿನ ಮಾಹಿತಿಗಾಗಿ ಬರೆಯಿರಿ—

Organising Office:- **Court Road, UDIPI.**

These enterprises of young men of Mangalore are worth your notice:

1 "The Badavara Bandhu"
2 The Badavara Bandhu Printing Press, Ltd
3 Sri Narayan Guru Press
4 Sri Narayan Guru Bank Ltd
5 The Badavara Bandhu Orphanage Trust.
6 My Stores
7 The South Kanara Fish Industries, Ltd,
8 The Karnataka Theatres, Ltd
9 Junasons, Ltd.
10 The Vijaya Stores, Ltd etc. etc.

PATRONISE INDIAN INDUSTRY.

ಬೇಕಾಗಿದ್ದಾರೆ

ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಟ್ರಾಕ್ಟರರೂ ಕೂಲಿಯಾಳುಗಳನ್ನು ಒದಗಿಸಿ ಕೊಡಬಲ್ಲವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗೆ ಉತ್ಕೃಷ್ಟ ಸವ ಲತ್ತುಗಳು ಕೊಡಲಾಗುವುದು.

ಇಂದೇ ಬರೆಯಿರಿ—

ಬಾಕ್ಸ್ ನಂಬ್ರ 5, c/o 'ನವಯುಗ' ಉಡುಪಿ, (ದ. ಕ.)

'ಅಲ್ಲಿ ನಮ್ಮನ್ನು ಬಿಟ್ಟೋಡಿಬಂದವರಿಗೆ ಇಲ್ಲಿ ವಿಚಾರಿಸುವ ಹಕ್ಕೆಲ್ಲಿಂದ?'

ಯು ಸುಲಭವಾಗಬೇಕೆಂಬುದಕ್ಕಾಗಿಯೇ ಉದ್ದೇಶಪೂರ್ವಕ ಅವಿದ್ಯಾವಂತರಾಗಿ ಆ ಜ್ಞಾನಿಗಳಾಗಿ ಇಡಲ್ಪಟ್ಟರುವ–ಮಿಲಿಯಾವಧಿ ಹಸಿವು ಪೀಡಿತರ ಸ್ಮರಣೆ ಬಂದಾಗ ಭಾರತದ ಆಳ್ವಿಕೆಯ ಪದ್ಧತಿಯ ಮೇಲೆ ನನ್ನ ದ್ವೇಷ ಕಟ್ಟುಗ್ರವಾಗಿ ಬೆಳೆಯಿತು. ಈ ಪದ್ಧತಿಯು ಅನ್ಯಾಯವನ್ನು ಧರಿಸಿದೆ ಎಂದು ತೋರಿದ ನಾನು ಈ ಅನ್ಯಾಯ ನಿವಾರಣೆಗಾಗಿ ನನ್ನ ಸರ್ವಸ್ವವನ್ನೂ—ನನ್ನ ಪ್ರಾಣ, ನನ್ನ ಮನೆ, ನನ್ನ ಕುಟುಂಬ ಮತ್ತುದರ ಸಂಪ್ರದಾಯಗಳನ್ನು–ಬಲಿಕೊಡುವ ನಿರ್ಧಾರಮಾಡಿದೆ ನಿಮ್ಮ ಮತ್ತು ನನ್ನ ದೇಶಬಾಂಧವರ ಲಕ್ಷ್ಯಕ್ಕೆ ತರಲಿಚ್ಛಿಸುತ್ತೇನೆ-ಆಜಾದ್ ಹಿಂದ್ ಫೌಜ್ ಇದರಿಸಿದಂತಹ ಸಂಕಷ್ಟಗಳನ್ನನುಭವಿಸಲು ಒಂದು ಯಾಂತ್ರಿಕ ದಳಕ್ಕೆಉಥವಾಗೊಂಬೆ ಸೇನೆಗೆ ಎಂದೆಂದಿಗೂ ಅಸಾಧ್ಯ. ನಾವು ಕೇವಲ ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವು".

ಕೆಪ್ಟನ್ ಸೆಹ್ಗಾಲನ ಹೇಳಿಕೆ

ಆಜಾದ್ ಹಿಂದ್ ಫೌಜಿನ ಧ್ಯೇಯೋದ್ದೇಶ, ಧ್ಯೇಯ ಮತ್ತು ಅದರ ಸ್ವಯಂ ಪ್ರೇರಣಾ ಸ್ವರೂಪಗಳ ಕುರಿತು ಕೆಪ್ಟನ್ ಸೆಹ್ಗಾಲರ ಹೇಳಿಕೆಯೂ ಶಾನವಾಜರ ಜಾಗ್ಗೂಲದಂತೆಯೇ ಇತ್ತು. 1942ನೇ ಫೆಬ್ರವರಿ 17ರಲ್ಲಿ ಸಿಂಗಾಪುರದಲ್ಲಿ ಸೋತಾಗ ಬ್ರಿಟಿಷ್ ಸೇನಾನಿಯು ಹಿಂದೀ ಯೋಧರನ್ನು ಜಾಪಾನಿಗೊಪ್ಪಿಸಿಕೊಟ್ಟ ದೃಶ್ಯವನ್ನು ಹೃದ್ರಾವಕವಾಗಿ ವರ್ಣಿಸಿ ಸೆಹ್ಗಾಲರಂದಿದ್ದಾರೆ—

'ಕುರಿಹಿಂಡಿನಂತೆ ಮಾರಿಬಿಟ್ಟರು!'

"ಬ್ರಿಟಿಷ್ ಪ್ರತಿನಿಧಿಯಾಗಿ ಲೆ. ಕರ್ನಲ್ ಹಂಟ್ ಹಿಂದೀ ಅಧಿಕಾರಿಗಳನ್ನೂ ಸೈನಿಕರನ್ನೂ ಕುರಿ ಹಿಂಡು ಎಂಬಂತೆ ಜಾಪಾನಿಗೊಪ್ಪಿಸಿಬಿಟ್ಟ. ಇದು ಅಸಹನೀಯ ಘಿಡೆತದಂತೆ ನಮ್ಮೆಲ್ಲರ ಮನ ನೋಯಿಸಿತು. ವ್ಯಕ್ತ ಪ್ರಕಟಕೂಲಗಳ ಇದಿರಲ್ಲಿ ಅಸಾಧಾರಣ ಧೈರ್ಯದಿಂದ ಹೋರಾಡಿದ್ದ ಹಿಂದೀ ಸೇನೆಗೆ ಬ್ರಿಟಿಷ್ ಹ್ಯಾಕಮಾಂಡ್ ಮಾಡಿದ ವ್ಯತ್ಯಯಕಾರ ವೆಂದರೆ ಅವರನ್ನೆಲ್ಲಾ ಪೂರ್ತಿಯಾಗಿ ಜಾಪಾನಾ ದಯಾ ಯಾಚನೆಗೆ ಒಪ್ಪಿಸಿ ಕೊಟ್ಟು ಓಡಿಹೋದುದು. ಬ್ರಿಟಿಷ್ ಸಿಂಹಾಸನಕ್ಕೂ ನಮಗೂ ಇದ್ದ ಎಲ್ಲಾ ಸಂಬಂಧಗಳನ್ನೂ ಬ್ರಿಟಿಷ್ ಸರಕಾರವು ಈ ರೀತಿ ತಾನಾಗಿ ಕಡಿದುಕೊಂಡಿತೆಂದೂ ಆ ಕುರಿತಿದ್ದ ಎಲ್ಲಾ ಬಾಧ್ಯತೆಗಳಿಂದಲೂ ಈ ಮೂಲಕ ನಮ್ಮನ್ನು ಬಿಡುಗಡೆ ಮಾಡಿತೆಂದೂ ನಾವು ಭಾವಿಸಿದೆವು. ನಮ್ಮ ರಕ್ಷಣಾ ಭಾರವಾಹುದನ್ನೂ ವಹಿಸಲಾರದ ಬ್ರಿಟಿಷ್ ಸಿಂಹಾಸನವು ಇತ್ಯಾದಿ ಸಂಬಂಧವನ್ನೂ ನಮ್ಮಿಂದ ಆಜೀಕ್ಷಿಸಲಾರದೆಂದು ನಾವು ಯಥಾರ್ಥವಾಗಿ ನಂಬಿದ್ದೆವು" ಎಂದು ಸೆಹ್ಗಾಲರು ಮಾರ್ಮಿಕವಾಗಿ ನುಡಿದಿದ್ದಾರೆ. ಭಾರತದಲ್ಲಿ 1942ರಲ್ಲಿ ನಡೆದ ಅಗೋಸ್ತು ಗೊಂದಲ ಮತ್ತು ಸರಕಾರೀ ದಬ್ಬಾಳಿಕೆಯ ವಾರ್ತೆಗಳ ನ್ನೆಲ್ಲಾ ಬ್ರಿಟಿಷ್ ವಾರ್ತಾವಾಹಿಗಳು ಗಪ್‌ಚಿಪ್ ಮಾಡಿದ್ದರೂ, ಆಕ್ಸಿಸ್ ಮತ್ತು ಗುಪ್ತ ರೇಡಿಯೋ ಸ್ಟೇಶನುಗಳಿಂದ ತಮಗೆ ನಿಜವಾರ್ತೆ ದೊರೆಯುತಿತ್ತೆಂದೂ, 1857ರ ದಂಗೆ ಪುನಃ ಎದ್ದಿತೆಂದು ತಾವೆಲ್ಲರೂ ಭಯಾವೇಗಗೊಂಡಿದ್ದೆವೆಂದೂ ಸೆಹ್ಗಾಲರಂದಿದ್ದಾರೆ. 'ಅದರಿಂದಾಗಿ-"ನಾವು ಬಿಟ್ಟುಬಂದ ನಮ್ಮ ಸಂಬಂಧ ಸಾಮೀಪ್ಯ ಮತ್ತು ಹೃದಯ ಸಾಮೀಪ್ಯವಿದ್ದವರ ಕುರಿತು ಆತುರವೂ, ನಮ್ಮ ದೇಶವನ್ನು ವಜ್ರಮುಷ್ಟಿಯಿಂದ ದಾಸ್ಯದಲ್ಲಿಡಲು ನೋಡುತ್ತಿರುವ ಬ್ರಿಟಿಷ್ ಸಾಮ್ರಾಜ್ಯವಾದದ ಮೇಲೆ ಕಟ್ಟುಗ್ರ ದ್ವೇಷವೂ ನಮ್ಮಲ್ಲಿ ಸಹಜವಾಗಿ ಮೊಳೆಯಿತು. ಆಗಲೇ ಜಾಪಾನರ ಧಾಳಿಯನ್ನು ತಿರುಗುವ ಸಾಮರ್ಥ್ಯ ಬ್ರಿಟಿಷ್ ಸೇನೆಗಿಲ್ಲ ನೆಂಬ ಸಂದೇಹವೂ ಮೂಡಿತು. ಸುಸಂಘಟಿತ ಮತ್ತು ಸಶಸ್ತ್ರ ಸೇನೆ ತಯಾರಾಗಿ ಜಾಪಾನರೊಂದಿಗೆ ಹಿಂದುಸ್ಥಾನದೊಳಕ್ಕೆ ನುಗ್ಗಿ ಪ್ರಜಲಿತ ವಿದೇಶಿ ಸರಕಾರದೊಡನೆ ಹೋರಾಡುವದು; ಮತ್ತದೇ ಸಮಯದಲ್ಲಿ ದೇಶಬಾಂಧವರಿಗೆ ಜಾಪಾನರಿಂದ ಹಾನಿಯಾಗದಂತೆಯೂ, ಬ್ರಿಟಿಷ್ ಬದಲಿಗೆ ಜಾಪಾನರ ಆಳ್ವಿಕೆ ನೆಲೆಯೂರದಂತೆ ನೋಡುವದು, ಹೊರತು ಬೇರೆ ಉಪಾಯವಿಲ್ಲವೆಂದು ನಮಗೆ ಹೊಳೆದು ಹೀಗೆ ಮಾಡಿದೆವು" ಎಂದು ಸೆಹ್ಗಾಲರ ವಾಗ್ಮೂಲ.

ದೇಶಕ್ಕಾಗಿ ಬಂದುದನ್ನನುಭವಿಸಲು ಸಿದ್ಧನೇ.

"ಜಾಪಾನರು ಕೊಡುವ ಕಷ್ಟದ ಬೆದರಿಕೆಯಿಂದಾಗಲೀ ವ್ಯಕ್ತಿಗತ ಲಾಭೋದ್ದೇಶದಿಂದಾಗಲೀ ನಾನು ಆಜಾದ್ ಹಿಂದ್ ಫೌಜಿಗೆ ಸೇರಿದ್ದಲ್ಲ. 1942ನೇ ಸೆಪ್ಟೆಂಬರಿನಲ್ಲಿ ಅ. ಹಿಂ. ಕೆಪ್ಟನ್‌ನಾಗಿ ನಾನು ಪಡೆಯುತಿದ್ದ ಸಂಬಳ ತಿಂಗಳಿಗೆ 80 ಡೋಲರ್ ಮಾತ್ರ. ನಾನದನ್ನು ಬಿಟ್ಟರು ತಿದ್ದರೆ 120 ಡೋಲರುಗಳ ಮಾಸಿಕ ವೇತನ ದೊರೆಯುತಿತ್ತು. ಪೂರ್ಣ ದೇಶಾಭಿಮಾನದಿಂದಲೇ ನಾನು ಆಜಾದ್ ಹಿಂದ್ ಫೌಜಿಗೆ ಸೇರಿದೆ" ಎನ್ನುತ್ತಾ ತಾನು ಮತ್ತು ತನ್ನ ಕಡೆಯ 600 ಮಂದಿ 'ಯುದ್ಧ ಕೈದಿ'ಗಳಾಗುವದಾದರೆ ಮಾತ್ರ ಶರಣು ಬರುವೆನೆಂದು ಬ್ರಿಟಿಷ್ ದಳಪತಿಗೆ ತಿಳಿಸಿದ್ದೆವೆಂದೂ, ಅದಕ್ಕೆ ಆಕ್ಷೇಪ ವಿನಹಾ ಒಪ್ಪಿಗೆ ದೊರೆತುದರಿಂದಲೇ ಶರಣಾದೆವೆಂದೂ ಶರಣಾದ ಬಳಿಕ ತಮ್ಮನ್ನು ಯುದ್ಧಕೈದಿಗಳಂತೆಯೇ ಕಂಡಿದ್ದಾರೆಂದೂ ಕೆಪ್ಟನ್ ಸೆಹ್ಗಾಲರಂದಿದ್ದಾನೆ. ತನ್ನ ಮೇಲಿನ ಕೊಲೆಯ ಪ್ರೇರಣೆಯ ಆರೋಪಕ್ಕೆ ಕೆಪ್ಟನ್‌ನ ಉತ್ತರ ಹೀಗೆ:-"ಚಾರ್ಜ್ ಶೀಟ್‌ನಲ್ಲಿರುವಂತೆ, ವಿಚಾರಣೆಯಿಂದ ಅಪರಾಧಿಗಳೆಂದು ರುಜುವಾತಾದ ನಾಲ್ವರು ಸಿಪಾಯಿಗಳಿಗೆ ನಾನು ಮರಣದಂಡನೆ ವಿಧಿಸಿದ್ದು ನಿಜ. ಆದರೆ ಆ ಶಿಕ್ಷೆಯನ್ನು ಜಾರಿಮಾಡಿದ್ದಿಲ್ಲ. ಇದೇ ತೀರ್ಪು ಹೊಂದಿದ್ದ ಮಿಕ್ಕ ಕೆಲವರಂತೆ ಇವರೂ ಕೂಡಾ, ತಮ್ಮ ಕೃತ್ಯಕ್ಕಾಗಿ ಪಶ್ಚಾತ್ತಾಪ ಸೂಚಿಸಿ ಮುಂದೆ ದುರ್ವರ್ತನೆಗಿಳಿಯುವದಿಲ್ಲವೆಂಬ ಭರವಸೆ ಕೊಟ್ಟು ಕ್ಷಮಿಸಲ್ಪಟ್ಟಿದ್ದರು ಮಿಕ್ಕವರಿಗೂ ಪರಾರಿ ಬುದ್ಧಿ ಹುಟ್ಟದಂತೆ ಪ್ರಚಾರಕ್ಕಾಗಿ ಈ ಮರಣ ಶಿಕ್ಷೆಯ ಸುದ್ದಿ ಹಬ್ಬಿಸಿದ್ದುದು ನಿಜ. ಒಂದೊಮ್ಮೆಗೆ ಆ ಶಿಕ್ಷೆ ಜಾರಿಯಾಗಿದ್ದರೂ ಪ್ರಪಂಚದ ಪ್ರತಿಯೊಂದು ಕಡೆಯ ನಾಗರಿಕ ಸರಕಾರಗಳ ಸೇನಾಶಾಸನದಂತೆ ಇಂತಹ ಪ್ರಾಯಶ್ಚಿತ್ತ ಮಾಡುವದು ಅಪರಾಧವೇನೂ ಅಲ್ಲ".

ಒಂದು ಉದ್ದೇಶ ಫಲಿಸಿದೆ

"ಆಜಾದ್ ಹಿಂದ್ ಫೌಜ್ ತನ್ನ ಮುಖ್ಯೋದ್ದೇಶವಾದ ಭಾರತವನ್ನು ಸ್ವತಂತ್ರಗೊಳಿಸುವದನ್ನು ಸಾಧಿಸಲಾರದೆ ಹೋದರೂ, ಅದರ ಒಂದು ಗುರಿ ಸಿದ್ಧಿಸಿದೆ ಎಂದು ನಮ್ಮಲ್ಲಿ ಪ್ರತಿಯೊಬ್ಬನಿಗೂ ಸಮಾಧಾನವಿದೆ. ಅದೆಂದರೆ, ಎಲ್ಲಾ ಆಕ್ರಮಣಗಾರರಿಗಿದಿರಾಗಿ ಮಲಯ, ಬರ್ಮ ಮತ್ತು ದಕ್ಷಿಣ ಪೂರ್ವ ಏಸ್ಯಾದ ಸರ್ವ ಕಡೆಗಳಲ್ಲಿರುವ ಭಾರತೀಯರ ಪ್ರಾಣ, ಸೊತ್ತು ಮತ್ತು ಮಾನರಕ್ಷಣೆ ಮಾಡುವದು. ಈ ವಿಚಾರಣೆ ಪ್ರಾರಂಭವಾದ ಮೇಲೆ ರಂಗೂನಿನ ಇಂಡಿಯನ್ ಕ್ರಿಶ್ಚಿಯನ್ ಸಂಘದ ಅಧ್ಯಕ್ಷರಿಂದಲೂ ಬರ್ಮದ ಭಾರತೀಯ ಸಂಘದ ಅಧ್ಯಕ್ಷರಿಂದಲೂ ನನಗೆ ಬಂದಿರುವ ತಂತಿಗಳೇ ಈ ಮಾತಿಗೆ ಪುಷ್ಟೀಕರಣೆ ಕೊಡುವ ದೃಷ್ಟಾಂತಗಳು".

ಲೆಫ್ಟನೆಂಟ್ ಧಿಲ್ಲೋನನ ಹೇಳಿಕೆ

"ಡೆಹ್ರಾಡನ್ನಿನಲ್ಲಿರುವ ಇಂಡಿಯನ್ ಮಿಲಿಟರಿ ಎಕೆಡೆಮಿಯ ಚಿಟ್ಟೋಡೆ ಹಾಲಿನಲ್ಲಿ ಈ ಕೆಳಗಿನ ವಾಕ್ಯಗಳು ಕೆತ್ತಲ್ಪಟ್ಟಿವೆ:-ಪ್ರಥಮತಃ ಸದಾಕಾಲ ಹಾಗೂ ಸರ್ವ ಸಂದರ್ಭಗಳಲ್ಲೂ ನೋಡಬೇಕಾದುದು ನಿನ್ನ ರಾಷ್ಟ್ರದ ಗೌರವ, ಕಲ್ಯಾಣ

ಓಂ

॥ತ್ರೈವ್ಯಾಘ್ರ ಚಾಮುಂಡಿ ಪ್ರಸನ್ನ॥

ಮಂಗಳೂರು ತಾಲೂಕು ಇನ್ನಾ ಗ್ರಾಮದ ಮಡ್ಯಣ್ಣಾಕರೆಯ ನ್ಯಾಳ್ಕ ಚಾಮುಂಡಿ ದೈವಸ್ಥಾನದಲ್ಲಿ ವರ್ಷಂಪ್ರತಿ ಆಗುತ್ತಿದ್ದ ಪಿಲಿಚಂಡಿ ಕೋಲ ಎಂಬ ನೇಮವು ಇದೇ ಧನುರ್ಮಾಸದ ಬಹುಳ ಪಂಚಮಿ ರವಿವಾರ ದಶಂಬರ ತಾ. 23-12-45ಕ್ಕೆ ಪೂರ್ವ ಕಟ್ಟಳೆಯಂತೆ ನಡದು ಬರುವದರಿಂದ ಸದ್ರಿ ನೇಮುಕ್ಕೆ ಪೂರ್ವಾರಭ್ಯದಿಂದ ಬಂದು ನೆರೆಯುತ್ತಿರುವ ಭಜಕ ಸಮುದಾಯಕ್ಕೆಲ್ಲರೂ ವಿಶೇಷ ಸಮುದಾಯದಿಂದ ಬಂದು ನೆರೆದು ಈ ನೇಮವನ್ನು ಚಂದಗಾಣಿಸಿ ಕೊಡಬೇಕೆಂದು ಅಪೇಕ್ಷಿಸುವ,

ಇನ್ನಾ ಬಗ್ಗರ ಗುತ್ತು ಚಾಂದು ಶೆಟ್ಟಿ. ಇನ್ನಾ ಮಡ್ಡ ಜ್ಞಾಗುತ್ತು

ದಾಸು ಶೆಟ್ಟಿ.

ESTD. 1926

CROWN RUBBER STAMP Co.

MFRS OF RUBBER STAMPS & ENGRAVERS

BALMATTA ROAD MANGALORE S.K.

Approved firm by the Govt. of Mysore Certified by the Agent of the Govt. of Ceylone Indian.

The Vijaya Bank, Limited.

NOTICE

Notice is hereby given that the XIV Ordinary General Meeting of the Share-holders of the Bank will be held at the Registered Office of the Bank Kadri-road, Mangalore on Sunday the 30th December, 1945, at 2 P.M. to transact the following business:—

1. To receive and consider the Directors Report and audited balance sheet and Profit & Loss account for the year ended 30–9–'45, and to declare a dividend,

2. To elect Directors in place of those retiring.

3. To appoint Auditor or Auditors for the current year and fix his or their remuneration.

4. To transact any other business which may be brought before the meeting with the permission of the Chairman.

5 The register of Members and Share transfer books of the Bank will remain closed from 25th December 1945 to 15th January 1946, both days inclusive,

(by order)

MANGALORE 10-12-1945

(Sd.) B. Mahabala Shetty

SECRETARY

ಮತ್ತು ರಕ್ಷಣೆ, ಎರಡನೆಯದಾಗಿ ನಿನ್ನ ನಾಯಕತ್ವದಲ್ಲಿರುವ ಜನರ ಅನುಕೂಲತೆ, ಭದ್ರತೆ ಮತ್ತು ಹಿತಸಾಧನೆ. ಸದಾಕಾಲ ಮತ್ತು ಸರ್ವ ಸಂದರ್ಭಗಳಲ್ಲೂ ಕಟ್ಟಳೆಯೆಂದರೆ ನಿನ್ನ ಸ್ವಂತ ಅನುಕೂಲತೆ ಮತ್ತು ಭದ್ರತೆ'. ಈ ನೀತಿಯೋಧೆಯನ್ನು ಕಣ್ಣು ಮುಂದಿಟ್ಟುಕೊಂಡೇ ನಾನು ಇಂದೀ ಸೇನೆಯ ಅಧಿಕಾರಿಯಾಗಿದುಡಿದಿದ್ದೆ" ಎನ್ನುತ್ತಾ ಲೆಫ್ಟನೆಂಟ್ ಥಿಲ್ಲೋನನು ಸಿಂಗಾಪುರದಲ್ಲಿ ಬ್ರಿಟಿಷರು ತಮ್ಮನ್ನು ನಡುನೀರಿನಲ್ಲಿ ಕೈಬಿಟ್ಟು ಓಡಿದುದನ್ನು ವರ್ಣಿಸಿದ್ದಾನೆ. ತಾನು ಕೆಪ್ಟನ್ ಮೋಹನ ಸಿಂಗರ ನಾಯಕತ್ವದಲ್ಲಿದ್ದ ಪ್ರಥಮ ಆಜಾದ್ ಹಿಂದ್ ಫೌಜಿಗೆ ಸೇರಿದುದು-ಭಾರತವನ್ನು ದೀರ್ಘಾವಧಿ ದಾಸ್ಯದಲ್ಲಿಟ್ಟ ಬ್ರಿಟಿಷರು, ದೇಶದ ಸರ್ವ ಸೊತ್ತು ಮತ್ತು ಜನರನ್ನು ಸ.ಲಿದರೂ ಅದರ ರಕ್ಷಣೆಯ.ನ್ನು ಅಸಡ್ಡೆಮಾಡಿದುದರಿಂದ ತನ್ನಲ್ಲಿ ದ್ವೇಷ ಮೊಳೆತುದು-ಇಂತಹ ದುಸ್ವಾರ್ಥಿ, ದುರ್ಬಲ ಬ್ರಿಟಿಷ್ ಆಳ್ವಿಕೆಯನ್ನೂ ಸಂದರ್ಭ ಬಂದರೆ ಜಾಪಾನರನ್ನೂ ಇದಿರಿಸುವ ಉದ್ದೇಶದಿಂದ ತಾವು ಹೋರಾಡಿದುದು-ಮೊದಲಾದುವನ್ನೆಲ್ಲಾ ಸ್ಪಷ್ಟ ಮಾಡಿ ಹೇಳಿದ್ದಾನೆ.

ಭಾರತಮಾತೆಯ ಕರೆ

"ಭಾರತಮಾತೆಯ ಕರೆ ನನಗೆ ಕೇಳಿ ಬಂತು; ನಾನದಕ್ಕೆ ಹೊಂಗುಟ್ಟಲು ನಿರ್ಧರಿಸಿ ನನ್ನ ಸರ್ವಸ್ವದೊಡದೆ ಮೋಹನ ಸಿಂಗನ ದಳ ಸೇರಿದೆ. ಅದೇ ಉದ್ದೇಶದಿಂದ ಸುಭಾಸ್ ನಾಯಕತ್ವದ ದ್ವಿತೀಯ ಆಜಾದ್ ಹಿಂದ್‌ನಲ್ಲಿಯೂ ದುಡಿದೆ" ಎಂದಿದ್ದಾನೆ. ಜುಲುಮೆ, ಅತ್ಯಾಚಾರಗಳಿಂದ ಸೈನಿಕರನ್ನು ಸೇರಿಸಿಕೊಳ್ಳುತಿದ್ದರೆಂಬ ಆರೋಪವನ್ನು ಕಂಠೋಕ್ತವಾಗಿ ಅಲ್ಲಗಳೆದು ಥಿಲ್ಲೋನ್ ಹೇಳಿದ್ದಾನೆ: "ವಸ್ತುಶಃ ಜುಲುಮೆಯಿಂದ ಅಥವಾ ಪೀಡಿಸಿ ಜನರನ್ನು ಸೇರಿಸಿಕೊಳ್ಳುವ ಅಗತ್ಯ ಎಳ್ಳಷ್ಟೂ ನಮಗಿರಲಿಲ್ಲ. ನಮ್ಮಲ್ಲಿ ಯಾವಾಗಲೂ ಸ್ವಯಂಸೇವಕರ ಉಳಿತಾಯವು ಅಧಿಕ ಸಂಖ್ಯೆಯಲ್ಲಿ ಇತ್ತು. ಶಸ್ತ್ರೋಪಕರಣಗಳ ಅಭಾವವಿದ್ದುದರಿಂದ ಈ ಹೆಚ್ಚಿನಂಶಕ್ಕೆ ತರಬೇತಿ ಕೊಡುವದಾಗಲೀ ಶಸ್ತ್ರಾಸ್ತ್ರ ಪೊದಗಿಸುವದಾಗಲೀ ನಮ್ಮಿಂದ ಅಸಾಧ್ಯವಾಗಿದ್ದುದರಿಂದ ಆ ಜನ ಉಳಿದೇ ಇತ್ತು", ತಮ್ಮಲ್ಲಿ ಭಿನ್ನ ರೀತಿಯ ಆರೈಕೆಯ ಕ್ರಮವೇನೂ ಇರಲಿಲ್ಲ. ತಪ್ಪಿಸಿಕೊಳ್ಳಲು ನೋಡಿದ ನಾಲ್ವರು ಅಪರಾಧಿ ಸೈನಿಕರಿಗೆ ಸೇನಾ ಶಾಸನಾನುಸಾರ ತಾನು ಮರಣಶಿಕ್ಷೆ ಕೊಟ್ಟುದ್ದು ನಿಜ: ಆದರೆ ಡಿವಿಜನಲ್ ಸೇನಾನಿ ಅದನ್ನು ತಗ್ಗಿಸಿದ್ದರಿಂದ ಅವರನ್ನು ಇದುವರೆಗೂ ಗುಂಡಿಗಾಹುತಿ ಕೊಡಲಿಲ್ಲ—ಎಂದಿದ್ದಾನೆ ಥಿಲ್ಲೋನ್.

ದೇಶಪ್ರೇಮವೊಂದೇ ಹೇತು

"ರಾಷ್ಟ್ರಸ್ವಾತಂತ್ರ್ಯಕ್ಕಾಗಿ ಸರ್ವವಿಧದ ಕಷ್ಟಸಹನೆ ಮತ್ತು ಮರಣಕ್ಕೆ ಸಿದ್ಧರಿದ್ದವರನ್ನು ಮಾತ್ರ ನಾವು ಸೇನೆಗೆ ಸೇರಿಸಿಕೊಳ್ಳುತಿದ್ದೆವು, ಮಿಯಿಂಗಿಯಾನ್ ರಣರಂಗಕ್ಕೆ ಹೊರಡುವಾಗ ಈ ನಿರ್ಧಾರಕ್ಕೆ ಅಸಮರ್ಥತೆ ಸೂಚಿಸಿದ 200 ಮಂದಿಯನ್ನು ರಂಗೂನಿನಲ್ಲಿ ನಾನೇ ಬಿಟ್ಟು ಹೋಗಿದ್ದೆ. ಕೆಲವು ವಾರಗಳ ವರೆಗೆ ನಾನು ವೈರಿ ಸೇನಾವ್ಯೂಹಕ್ಕೆ ಎರಡೇ ಮೈಲು ಸಮೀಪದ ಮುಂಭಾಗದಲ್ಲಿದ್ದೆ. ಆಗ ಕೂಡ ನನ್ನ ವರಲ್ಲಿ ಯಾರೊಬ್ಬನೂ ವೈರಿ ಕಡೆಗೆ ಸೇರಿ ಇಜ್ಜಿಯ ಸುದ್ದಿ ಬಿಟ್ಟುದಿಲ್ಲ. ಹಲವು ಬಾರಿ 20ರಿಂದ 30 ಘಂಟೆಗಳ ವರೆಗೂ ಒಂದೇ ಒಂದು ತಟಕು ನೀರಿಲ್ಲದೆ, ಎರಡುಮೂರು ದಿನಗಳ ತನಕ ಒಂದೇ ಒಂದು ತುತ್ತು ಆಹಾರವಿಲ್ಲದೆ ಸ್ವತಃ ನಾನೇ ದುಡಿದಿದ್ದೆ. ಬ್ರಿಗೇಡ್ ಕಮಾಂಡರ್ ಆಗಿದ್ದ ನನ್ನ ಅವಸ್ಥೆಯೇ ಹೀಗಿರುವಾಗ ನನ್ನ ಜನರು ಇದಕ್ಕಿಂತಲೂ ಹೆಚ್ಚಿನ ಕಷ್ಟಗಳಿಗೊಳಗಾಗಿರಬೇಕು. ಆದರೂ ಅವರು ನನ್ನ ಬಿಟ್ಟು ಬಿಡಲಿಲ್ಲ. ಲಾಭೋದ್ದೇಶದಿಂದ ಆಥವಾ ಜುಲುಮೆಯಿಂದ ಸೇರಿದವರು ಹೀಗೆಂದೂ ಮಾಡಲಾರರು" ಎನ್ನುತ್ತಾ ಥಿಲ್ಲೋನ್ ತಾನೇನೇ ಮಾಡಿದ್ದರೂ ಆಜಾದ್ ಹಿಂದ್ ತಾತ್ಕಾಲಿಕ ಸರಕಾರದ ಆಜ್ಞಾನುಸಾರವಾಗಿ ಮಾಡಿದ್ದೆನಾದ್ದರಿಂದ ಬ್ರಿಟಿಷ್ ಸರಕಾರದ ಯಾವ ಕಾನೂನೂ ತನ್ನ ವಿಚಾರಣೆ ಲಗಾವಾಗದು ಎಂದು ವಾದಿಸಿದ್ದಾನೆ. "ಭಾರತದ ಪಟ್ಟಣಗಳ ನಾಗರೀಕರ ಮೇಲೆ ಬೋಂಬುಧಾಳಿ ಮಾಡದಂತೆ ಜಾಪಾನರನ್ನು ಸಮಜಾಯಿಸಲು ನಾನು ರಕ್ತನಾದೆ. ಪೂರ್ವ ಏಸ್ಯಾದ ಭಾರತೀಯರು ಆಜಾದ್ ಹಿಂದ್ ಕಮಗೆ ಮಾಡಿದ ಉಪಕಾರ ಸ್ಮರಣೆಯಾಗಿ ಆ ಸ್ವತಂತ್ರ ಭಾರತದ ತಾತ್ಕಾಲಿಕ ಸರಕಾರಕ್ಕೆ ಕೋಟಿಕೋಟಿ ರೂಪಾಯಿಗಳ ಸಹಾಯ ಸಲ್ಲಿಸಿದ್ದರು" ಎಂದು ಥಿಲ್ಲೋನಿನ ವಾಗ್ಮೂಲ.

ಆರೋಪಿಗಳ ಪರವಾಗಿ ಜಪಾನೀ ಸಾಕ್ಷಿಗಳು

ಆರೋಪಿಗಳ ಹೇಳಿಕೆಯಾದ ಮೇಲೆ ಡಿಫೆನ್ಸ್ ಕಡೆಯಿಂದ ಇಬ್ಬರು ಜಪಾನೀ ಅಧಿಕಾರಿಗಳು ಸಾಕ್ಷ್ಯವಿತ್ತರು-ಜಪಾನೀ ವಿದೇಶ ಆಫೀಸಿನ ಸಾಬುರೋ ಒಹ್ಟಾ ಮತ್ತು 1942ನೇ 44ರ ವರೆಗೆ ವಿದೇಶ ಉಪಮಂತ್ರಿಯಾಗಿದ್ದ ಮಾಬ್ಲುಷಿ ಶಿಗೆಮಿತ್ಸು ಇಬ್ಬರೂ, ಸುಭಾಸರ ಆಜಾದ್ ಹಿಂದ್ ಸರಕಾರವನ್ನು ಒಂದು ಸ್ವತಂತ್ರ ಸರಕಾರವಾಗಿ ಜಾಪಾನರೊಪ್ಪಿಕೊಂಡುದನ್ನು ಸ್ಪಷ್ಟೀಕರಿಸಿ, ಆ ಸಂಬಂಧದ ದಾಖಲೆಗಳನ್ನೊಪ್ಪಿಸಿಕೊಂಡರು. ಎಡ್ವೋಕೇಟ್ ಜನರಲರ ಪ್ರಶ್ನೆ ಸವಾಲಿಗೆ ಕೊಟ್ಟ ಉತ್ತರದಲ್ಲಿ ಮಾಬ್ಲುಷಿಯವರು "ತಪ್ಪಸುಯುದ್ಧ ಪ್ರಯತ್ನಗಳಿಗೆ ಸಹಾಯ.ಕವಾಗುವದೆಂಬ ಕಾರಣದಿಂದ ಜಾಪಾನು ಒಪ್ಪಿಗೆಕೊಟ್ಟುದು" ಎಂದೆಸ್ಪಿದರು. ಭೂಲಾಭಾಯಿಗಳ ಮರು ಸವಾಲಿಗೆ "ಹಿಂದುಸ್ಥಾನವನ್ನು ಸ್ವತಂತ್ರಗೊಳಿಸುವದೇ ಜಪಾನರ ಯುದ್ಧಗುರಿಯಾಗಿತ್ತು" ಎಂದು ಮೇಲಿನ ವಾಕ್ಯಕ್ಕೆ ಯೋಗ್ಯ ಮಕುಟವಿಟ್ಟರು. 1943ನೇ ನವಂಬರಿನಲ್ಲಿ ಟೋಕಿಯೋದಲ್ಲಿ ಸೇರಿದ್ದ ಪೂರ್ವ ಆಸ್ಯಾ ರಾಷ್ಟ್ರಗಳಸಮ್ಮೇಲನದಲ್ಲಿ 'ಹಿಸ್ ಎಕ್ಸೆಲೆನ್ಸಿ' ಸುಭಾಸರ ಸ್ವತಂತ್ರ ಸರಕಾರಕ್ಕೂ ಹಿಂದುಸ್ಥಾನದ ಪೂರ್ಣ ಸ್ವಾತಂತ್ರ್ಯಕ್ಕೂ ಒಪ್ಪಿಗೆಕೊಟ್ಟು ಜಪಾನೀ ಪ್ರಧಾನಿ ಹಿಡೆಕಿ ಟೋಜೋ ಮಾಡಿದ್ದ ಭಾಷಣದ ಪ್ರತಿಯನ್ನು ಕೋರ್ಟಿಗೆ ಹಾಜರುಪಡಿಸಲಾಯ್ತು.

ಎರಡನೇ ಅ. ಹಿಂ. ಕೋರ್ಟ್ ಮಾರ್ಶಲ್

ಆ. ಹಿಂ. ಫೌಜಿನ ಮತ್ತೊಬ್ಬ ಕೆಪ್ಟನರಾದ ಬಹಾದ್ದೂರ್‌ರನ್ನು ವಿಚಾರಿಸಲು ದ್ವಿತೀಯ ಕೋರ್ಟು ಮಾರ್ಶಲ್ ಬ್ರಿಗೇಡಿಯರ್ ಕಾರ್ಯಪ್ಪ (ಭಾರತೀಯ ಸೈನ್ಯದ ಅಧ್ಯಕ್ಷತೆಯಲ್ಲಿ ಇದೇ ತಾ. 13ರಲ್ಲಿ ನವ ಢಿಲ್ಲಿಯ ಕೆಂಪು ಕೋಟೆಯಲ್ಲಿ ಆರಂಭವಾಗಿ, ಚಕ್ರವರ್ತಿಗಳ ವಿರುದ್ಧ ಯುದ್ಧ ಸಾರಿದ ಮತ್ತು ಕೊಲೆಯನ್ನು ಪ್ರೋತ್ಸಾಹಿಸಿದ ಆರೋಪಗಳನ್ನು ಪ್ರೊಸಿಕ್ಯೂಟರ್ ಮೇಜರ್ ಸುರಿಬಾರು ಓದಿ ಹೇಳಿದೊಡನೆ ಭೂಲಾಭಾಯಿ ದೇಸಾಯಿಗಳೊಂದು ಆಕ್ಷೇಪನೆತ್ತಿದರು. ಆರೋಪಿಯು ಚಿತ್ಕಾಲ್ ಸಂಸ್ಥಾನದ ಮೆಹ್ತಾರರ ತಮ್ಮನಾದ್ದರಿಂದ ಬ್ರಿಟಿಷ್ ಪ್ರಜೆಯಲ್ಲ, ಬ್ರಿಟಿಷ್ ಪ್ರಜೆಯಾಗಿರದವರು ಹೊರದೇಶಗಳಲ್ಲಿ ಮಾಡಿದ ಕಾರ್ಯಗಳ ತನಿವಿ ಮಾಡುವ ಅಧಿಕಾರ ಈ ಕೋರ್ಟಿಗಿಲ್ಲವೆಂಬುದೇ ದೇಸಾಯಿಗಳ ಕಡೆ. ಇದನ್ನು ಅಲ್ಲಿಯೇ ಉಕ್ತರಿಸಲಾಗದ ಸರಕಾರೀ ವಕೀಲರು ಕ್ಷಮಾಯಾಚನೆಯೊಡನೆ ಎರಡೆರಡು ಬಾರಿ ಅವಧಿ ಕೇಳಿ ಕೊನೆಗೆ ಅಕ್ಷೇಪವು ಅಸ್ಪಷ್ಟವಿದೆಯೆಂದರು. ಕೋರ್ಟು ಕನ್ವೀನರರಿಗೆ ತೀರ್ಪಿನ ಅಧಿಕಾರ ಕೊಟ್ಟಿತು. ಕನ್ವೀನರರ ಅಭಿಪ್ರಾಯದಂತೆ ಈ ಕೋರ್ಟಿಗೆ ತನಗೆ ವಿಚಾರಣಾಧಿಕಾರವಿದೆಯೆಂದು ತಿಳಿಸಿ ಅಕ್ಷೇಪವನ್ನು ತಿರಸ್ಕರಿಸಿತು. ಆ ಮೇಲೆ ಆರೋಪಿ ವಕೀಲರ ಕಡೆಯಿಂದ ಡಾ! ಕಟೆಜುರವರು ಮೂರು ವಾರಗಳ ಅವಧಿ ಕೇಳಿದಂತೆ ಸರಕಾರೀ ವಕೀಲರ ಆರೋಪಣೆಗಳನ್ನು ಕೇಳಿದ ಮೇಲೆ ಕೋರ್ಟು ೩ ವಾರ ಮುಂದುವರಿಯಿತು.

(ಎನೇ ಪುಟ ನೋಡಿರಿ)

ಕೆಂಪ್ಸಕೋಟೆ ತೀರ್ಪಿನ ಕೊನೆಯ ಅಧಿಕಾರ ಜ. ಅಚಿನ್‌ಲೆಕ್‌ರಿಗೆ

BANK WITH THE LARGEST CONNECTIONS ON THE WEST COAST

OFFERS:-

EFFICIENT PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd.

ESTD 1925

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ, ಮಂಗಳೂರು.

ನೋಟೀಸು

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ಇದೇ ದಶಂಬರ ತಾ. 23ನೇ ಆದಿತ್ಯವಾರ ಬೆಳಿಗ್ಗೆ ಘಂಟೆ 9 30ಕ್ಕೆ ಶ್ರೀ ಕೆ ಜಗನ್ನಾಥ ಬಲ್ಲಾಳ್, ವಕೀಲ್, ಉಡುಪಿ, ಇವರ ಅಧ್ಯಕ್ಷತೆಯಲ್ಲಿ ಮುಲ್ಕಿ ಮಿರಸ್ ಶಾಲೆಯಲ್ಲಿ ಜರಗುವದೆಂದು ಈ ಮೂಲಕ ತಿಳಿಸಿಬುದೆ. ಎಲ್ಲಾ ಸೆಂಬರರೂ ಯಶಸ್ವಿಯಾಗಿ ಸಭೆಗೆ ಬರಬೇಕಾಗಿ ವಿನಂತಿ.

ಮಂಗಳೂರು, ತಾ. 1 12 45

ಕೆ. ಸದಾನಂದ ಹೆಗ್ಡೆ, ಎಡ್ವೋಕೇಟ್, ಕಾರ್ಯದರ್ಶಿ.

ತಾ 22 12 45ನೇ ರವಿವಾರ ಸಾಯಂಕಾಲ ಘಂಟೆ 6 30ಕ್ಕೆ ಕಾರ್ಯನಿರ್ವಾಹಕ ಕಮಿಟಿಯ ಸಭೆ ಜರಗಲಿದೆ.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಫಾನೀಯಗಳ ತಯಾರಿಕೆಗಳ — ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಸಾರ್ಟ್ ನುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ

ಪಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,

Balmatta Road, Mangalore.

CHAMPAE'S

Snow & Lastrex

(Sole Distributers for India.)

Prop: K. G. NAYAK,

Santhekatte, UDIPI, S. K.

The Canara Banking Corporation Limited.

((Incorporated in British India, with limited Liability.)
Estd: 1906
Head Office: **UDIPI**, South Kanara.

ANNOUNCEMENT

A branch of the bank has been opened at JEW TOWN, MATTANCHERRY, COCHIN, on 7-11-1945.

ನವಯುಗ

ಉಡುಪಿ, ಗುರುವಾರ ೧೩-೧೨-'೪೫

ಪೋಲಿಸ್ ಅತಿರೇಕಗಳು

ಸಾಮಾನ್ಯ ಕಾಲಗಳಲ್ಲಿದ್ದ ನಾಗರಿಕ ವ್ಯಕ್ತಿ ಸ್ವಾತಂತ್ರ್ಯಗಳಿಗೆ, ಯುದ್ಧಾರಂಭದಿಂದ ತೊಡಗಿ ಇದು ವರೆಗೂ ಪ್ರತಿಬಂಧಕಗಳಿವೆ. ಇವುಗಳಲ್ಲಿ ಕೆಲವು ನಿರ್ಬಂಧಗಳು ಅನಿರ್ವಾಹವಿರಬಹುದು; ಇನ್ನು ಹಲವು ಅನಗತ್ಯವಿವೆ. ಈ ಅವಧಿಯಲ್ಲಿ ಮಿತಿಮೀರಿದ ಸ್ವಾತಂತ್ರ್ಯಗಳನ್ನು ಕೊಂಡವರೇನಿದರೆ ಪೋಲಿಸರು-ಇದು ಕೂಡಾ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವೆಂದು ಒಪ್ಪುತ್ತೇನೆ; ಆದರೆ ಹೆಚ್ಚಿನ ವೇಳೆ ಅವು ಅನಗತ್ಯ ಮಾತ್ರವಲ್ಲ, ಅತಿರೇಕಕ್ಕೂ ಹೋಗಿವೆ! ಕಾಲಕಳೆದಂತೆ ಮಿಕ್ಕ ತೊಂದರೆ ಒಂದೊಂದಾಗಿ ಜಾರಿ ಹೋಗುವ ಆಶೆಯಿದೆ; ಆದರೆ 'ಪೋಲಿಸ್ ಮನೋವೃತ್ತಿ' ಸುಧಾರಿಸಿದ ವಿನಹ ಈ ಸಂಕಷ್ಟಕ್ಕ್ಯಾಂದು ದಡ ಕಾಣುವದಿಲ್ಲ ಎಬಾರಿ ಪೀಠವೇರಿದೊಡನೆ 'ನನ್ನನ್ನು ನೋಡುವಂತೆಯೇ ಪೋಲಿಸರನ್ನೂ ನೋಡಿರಿ' ಎಂದ ರಾಜಾಜೀ ಕಾಂಗ್ರೆಸ್ ಸರಕಾರ ಮತ್ತೊಮ್ಮೆ [illegible] ಈ ಸೌತಪೀಡೆ ನಿವಾರಣೆಯಾಗದು. ಸರಿಯಂತ್ರಣೆಯಲ್ಲಿಗಾಗಿರುವ ರಾಷ್ಟ್ರಪೊಂದು ಸ್ವತಂತ್ರವಾಗಬಹುದು-ಈ ಮಾರ್ಪಾಟಿದ ವೇಳೆ ಕಾನೂನುಕಟ್ಟಳೆ, ಅಧಿಕಾರ ಕ್ರಮಗಳಲ್ಲಿ ಮಾರ್ಪಾಟವಾಗದಿದ್ದರೂ ಪ್ರತ್ಯೇಕವಾದ ಧೋರಣೆ,ಭಾವನೆಗಳಿಂದಾಗಿ ಸ್ಥಿತಿಮಾರ್ಪಡಬಹುದು. ಯಾವ ಸರಕಾರ ಬಂದರೂ ಪೋಲೀಸು ದಳಬೇಕು; ಕಾಯದೇಕ್ರಮಗಳಿರಬೇಕು; ಮಾರ್ಪಡಬೇಕಾದುದು ಮನೋವೃತ್ತಿ ಮಾತ್ರ. ಸದ್ಯ ರಾಜಕೀಯದಂತೆಯೇ ಜನರ ನೈತಿಕ, ದೈನಿಕಾಚರಣೆಗಳಿಗೂ ಪೋಲಿಸ್ ರಾಹುಬಡಿದ ದೂರುಗಳನ್ನು ಕೇಳುತಿದ್ದೇನೆ ದ.ಕ.ಜಿಲ್ಲೆಯ ಹಲವು ಕಡೆಗಳಿಂದ ಪೋಲಿಸ್ ವಿಶೇಷಾಚರಣೆಗಳ ವಾರ್ತೆ ಬರುತ್ತಿದೆ. ನೊನ್ನೆಯ ಅಧಿವೇಶನದಲ್ಲಿ ಜಿಲ್ಲಾ ಬೋರ್ಡು ಕೂಡಾ ಈ ಕುರಿತು ನಿವೇದ ಸೂಚಿಸಿದೆ. ವಿಷ್ಟೂ ವಿಲ್ಲದ, ಸಂಸ್ಕಾರವಿಲ್ಲದ, ಕಾಡು ಮನೋವೃತ್ತಿಯೇ ಕೊಲೆ, ಕಳವು, ದರೋಡೆಗಳಿಗೆ ಹೇತು ಸಾಮಾನ್ಯ ಪೋಲೀಸರು ಹಾಗೂ ಅಧಿಕಾರಿಗಳು ಇಂತಹ ಅತಿಕ್ಲಿಷ್ಟ, ಅಸಂಸ್ಕೃತ ವರ್ಗದಿಂದಲೇ ಆರಿಸಲ್ಪಡುವವರು. ಆ ಮೇಲೆ ಅವರಿಗೆ ದೊರೆಯುವ ಶಿಕ್ಷಣವಾದರೂ ದೇಹ ವ್ಯಾಯಾಮ ವರ್ಗಕ್ಕೆ ಸೇರುವಂತಹದು ಹೊರತು ಬುದ್ಧಿ ಸಂಸ್ಕಾರದ್ದಲ್ಲ. ಇಂಥವರ ಮೇಲೆ ಅಧಿಕಾರವುಳ್ಳ ಹೆಚ್ಚೋಟಿಯಿಲ್ಲದಿದ್ದರೆ ಅನರ್ಥಗಳುಂಟಾಗುವದು ಸ್ವಾಭಾವಿಕ. ಕಳವು, ಕೊಲೆ, ತಕ್ಷೀರುಮಾಡಬಲ್ಲ ಕೇಡಿಗಳು ಜನರಲ್ಲಿ ಸೇ. 5 ಮಂದಿಯಿದ್ದರೆ 95 ಮಂದಿ ಸಂಭಾವಿತರಿದ್ದಾರೆ. ಆದರೆ ಪೋಲೀಸ್ ಮನೋವೃತ್ತಿಯಿಂದಾಗಿ ಈ 5 ಮಂದಿ ಕೇಡಿಗಳ ಅಪರಾಧಗಳಿಗಾಗಿ, ಸಂಭಾವಿತ ವರ್ಗಕ್ಕೆ ಸೇರಿದ 15 ಮಂದಿಯಾದರೂ ಪೀಡೆಯನುಭವಿಸಬೇಕಾಗುತ್ತದೆ. ಪತ್ತೇಕಾರ್ಯಗಳಿಗೂ ಕಾನೂನುಬದ್ಧ ಶ್ರಮನಿಯಮಗಳಿವೆ; ಅಂತಹ ಇತಿಮಿತಿಗಳನ್ನು ಮೀರಿದರೆ, ಪೋಲಿಗಳಿಂದ ಒಂದು ಅನ್ಯಾಯವಾದ ಕಡೆಯಲ್ಲಿ ಪೋಲೀಸರಿಂದ ನಾಲ್ಕು ಅನ್ಯಾಯಗಳಾಗುವದು ಸಂಭವನೀಯ. ಹೈಕೋರ್ಟುಗಳು ಹಲವು ಬಾರಿ ಪೋಲಿಸ್ ನ್ಯಾಯಶೋಧ ಮಾಡಿ 'ಬೇಲಿಯೇ ಹೊಲಮೆದ್ದ' ಅನ್ಯಾಯಗಳನ್ನು ಖಂಡಿಸಿವೆ. ಈ ಕುರಿತು ಮೇಲಧಿಕಾರಿಗಳು ಕಣ್ಣು ತೆರೆಯಬೇಕೆಂದೇ ನಮ್ಮ ವಿಜ್ಞಾಪನೆ. ಪೋಲಿಸ್ ಅತಿರೇಕಗಳ ಕುರಿತು ಜಿಲ್ಲೆಯ ಬೇರೆ ಬೇರೆ ಕಡೆಗಳಿಂದ ವಿವಿಧ ಕಾರಣಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರುಗಳು ಹೋಗಿವೆ ಎಂದು ಕೇಳಿದ್ದೇವೆ. ಕಾನೂನು ಪಾಲಕರ ಕೈಯಿಂದ ಕಾನೂನನ್ನು ರಕ್ಷಿಸಲಿ ಎಂದು ನಾವೂ ಒತ್ತಿ ಹೇಳುತ್ತೇವೆ

ಅಖಿಲಭಾರತ ಆಯುರ್ವೇದ ಕಾಂಗ್ರೆಸು

ವಾರ್ಷಿಕಾಧಿವೇಶನವು ಕಾರ್ತಿಕ 28-12-45ರಿಂದ 31-12-45ರ ವರೆಗೆ ಉಡುಪಿ ಬಳಿಯ ಮಣಿಪಾಲದಲ್ಲಿ ಜರಗಲಿದೆ. ಪ್ರಾಂತಿಕವಾಗಿ ಅಖಿಲ ಕರ್ನಾಟಕಕ್ಕೆ-ಜಿಲ್ಲಾ ವಾರಾಗಿ ದಕ್ಷಿಣ ಕನ್ನಡಕ್ಕೆ-ಸ್ಥಳೀಯವಾಗಿ ಉಡುಪಿಗೆ ದೊರೆತ ಅಪೂರ್ವ ಸುಯೋಗವಿದು. ಅದನ್ನು ಇಯತ್ತೀಲಗೊಳಿಸಿ, ತಮ್ಮ ಘನತೆಯನ್ನು ಹೆಚ್ಚಿಸುವ ಜವಾಬ್ದಾರಿಯು ಈ ಕಡೆಯವರ ಮೇಲಿದೆ. ಆಯುರ್ವೇದದಂತಹ ಭಾರತದ ಸಂಪತ್ತಿಗೆ ಸಂಬಂಧಪಟ್ಟ ವಿಶೇಷಾಧಿವೇಶನವು ದೇಶದೊಂದು ಮೂಲೆಯಲ್ಲಿ ನೆರವಾಗಲೇ ಇ ಸ್ಥಳಕ್ಕೆ ಪ್ರಾಮುಖ್ಯತೆ ಬಂತು, ಜತೆಯಲ್ಲಿ ಜವಾಬ್ದಾರಿಯೂ ಹೆಚ್ಚಿತು. ಅದು ವಿಜಯಯಾಡಿ ಪರಿಮಾಣದಲ್ಲೇ ಕನ್ನಡಿಗರ ಕೀರ್ತಿ ಬೆಳೆಯಬೇಕು. ಅಖಿಲ ಕರ್ನಾಟಕ ಆಯುರ್ವೇದ ತಜ್ಞರು ಮತ್ತು ಅಭಿಮಾನಿಗಳು ಮಾತ್ರವಲ್ಲ; ಪ್ರತಿಯೊಬ್ಬ ಕನ್ನಡಿಗನೂ ಆಯುರ್ವೇದ ಕಾಂಗ್ರೆಸಿನ ಸ್ವಾಗತ ಸಮಿತಿಯೊಡನೆ ಸರ್ವ ವಿಧದಿಂದ ಸಹಕರಿಸಿ ಅದನ್ನು ಜಯಶೀಲಗೊಳಿಸಲಿ ಎಂದು ಆಶ್ವಾಸಿಸುತ್ತೇವೆ

ಕರ್ನಾಟಕ ಸಾಹಿತ್ಯ ಸಮ್ಮೇಲನವು

ಇವೇ ದಶಂಬರ್ ತಾ.26, 27, 28 ರಲ್ಲಿ ಮದ್ರಾಸಿನಲ್ಲಿ ಜರಗಲಿವೆ. ಮದ್ರಾಸ್ ಸಮ್ಮೇಲನದಲ್ಲಿ ಒಂದು ವೈಶಿಷ್ಟ್ಯವಿದೆ ಸದ್ಯ ಕನ್ನಡದ ಕರೆ ಮಾರ್ದನಿಗೊಡುವಷ್ಟಿಲ್ಲ; ಮದ್ರಾಸಿನಂತಹ ಪ್ರಾಮುಖ್ಯ ನಗರಗಳಲ್ಲಿ ಸಾಹಿತ್ಯ ಸಮ್ಮೇಲನವನ್ನು ಸೇರಿಸಿ, ಕನ್ನಡ ವಾಗ್ದೇವಿಯ ಝೇಂಕಾರವನ್ನು ಎಲ್ಲರಿಗೂ ಕೇಳಿಸುವಂತೆ ಗುವದು ಅಗತ್ಯ. ಕರ್ನಾಟಕವೇ ಒಂದು ಪ್ರಾಂತ್ಯವಾಗಿಲ್ಲ; ಮದ್ರಾಸ್ ಕರ್ನಾಟಕ ಕೈಸೇರುವಂತಹದಲ್ಲ. ಆದರೆ ಕರ್ನಾಟಕದ ಕೂಗು ಕನ್ನಡಿಗರೂ, ಕರ್ನಾಟಕಕ್ಕೆ ಸಹಾಯವಾಗಬೇಕಾದವರೂ ಇರುವಲ್ಲಿಗೆಲ್ಲಾ ಮುಟ್ಟಬೇಕು. ಮದ್ರಾಸ್ ಸಮ್ಮೇಲನವು ಈ ದೃಷ್ಟಿಯಿಂದ ಪ್ರಾಮುಖ್ಯವಿದೆ. ಎಲ್ಲಾ ಕನ್ನಡಿಗರೂ ಮದ್ರಾಸ್ ಸಾಹಿತ್ಯ ಸಮ್ಮೇಲನದಲ್ಲಿ ಭಾಗವಹಿಸಿ ಅದರ ಪೂರ್ಣ ವಿಜಯವನ್ನು ಸಾಧಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಜಿಲ್ಲಾ ಗ್ರಾಮಾಭಿವೃದ್ಧಿ ಪ್ರದರ್ಶನವು

ಮೂಲ್ಕಿಯಲ್ಲಿ ತಾ. 21-12-45 ರಿಂದ 23-12-45ರ ವರೆಗೆ ಜರಗಲಿದೆ. ಇಂತಹ ಪ್ರದರ್ಶನಗಳ ಅವಶ್ಯಕತೆಯನ್ನು ಬೇರೆ ಹೇಳಬೇಕಾಗಿಲ್ಲ; ಅದು ಗ್ರಾಮಸಹಜಕಾರಕವಿಲ್ಲದ ಆತ್ಮಗತವಾಗಿರುವ ವಿಷಯ ಬೇಸಾಯ ಮತ್ತು ಹಳ್ಳೀ ಕೈಗಾರಿಕೆಗಳೇ ದೇಶದ ಜೀವಾಳ. ದಕ್ಷಿಣ ಕನ್ನಡದಲ್ಲಿ ಈ ಮುಖ್ಯಪ್ರಶ್ನೆಯು ಅಲಕ್ಷಿಸಲ್ಪಟ್ಟಿರುವಾಗ, ಇಂತಹ ಉಪಯುಕ್ತ ಪ್ರಯತ್ನಕ್ಕಿಳಿದ ಮೂಲ್ಕಿಯ ಸ್ವಾಗತ ಸಮಿತಿಯನ್ನು ಅಭಿನಂದಿಸಬೇಕು. ದಕ್ಷಿಣ ಕನ್ನಡದ ಗ್ರಾಮೋದ್ಧಾರಾಕಾಂಕ್ಷಿಗಳು, ವಿಶೇಷತಃ ಗ್ರಾಮಸ್ಥರು ಈ ಪ್ರಯತ್ನಾರ್ಯಕ್ಕೆ ಸರ್ವವಿಧದಿಂದ ನೆರವಾಗಲೆಂದು ಹಾರೈಸುತ್ತೇವೆ.

ನುಂಗಲೊರು

ಭತ್ತ, ಅಕ್ಕಿ ಒಪ್ಪಿಸುವ ಅವಧಿ ಮುಂದರಿಸಲಾಗುವುದಿಲ್ಲ- ಹೊಸದು ಗರ್ ಸರ್ ತಾಲೂಕು ವಿನಹಾ ಇತರ ಸ್ಥಳಗಳಲ್ಲಿ 2ನೆ ಮತ್ತು ಕಡೆ ಕಂತಿಗೆ ಸಂಬಂಧಪಟ್ಟ ಭತ್ತ ಅಕ್ಕಿ ಒಪ್ಪಿಸುವ ಅವಧಿ ತಾ. 15-12-'45ನ್ನು ಯಾವ ಕಾರಣದಿಂದಲೂ ಮುಂದರಿಸಲಾಗುವುದಿಲ್ಲವೆಂದೂ ತದನಂತರ ಒಪ್ಪಿಸುವುದಕ್ಕೆ ಮುಂದಿ 1ರ ಒಂದು ರೂಪಾಯಿಯಂತೆ ಕಡಿಮೆ ಕೊಡಲಾಗುವುದೆಂದೂ ಜಿಲ್ಲಾ ಕಲೆಕ್ಟರರ ಸರ್ಕಾಲರು ಜಾಹೀರುಪಡಿಸುತ್ತದೆ.

ಗುರುಪುರ-ಶ್ರೀ ವರದರಾಜ ವೆಂಕಟರಮಣ ದೇವರ ಸನ್ನಿಧಿಯಲ್ಲಿ ತಾ. 15-12-45 ನೇ ಶನಿವಾರ ಪದ್ಮತಿಯಂತೆ 'ಅಹೋ ರಾತ್ರಿ ಭಜನೆ'ಯೊಂದಿಗೆ 'ಗೀತಾ ಜಯಂತಿ ಮಹೋತ್ಸವ'ವು ಶ್ರೀ ದುರ್ಗಾರಾಮ ದಾಲ ಪರಿವಾಸರವರ ಅಧ್ಯಕ್ಷತೆಯಲ್ಲಿ ಜರಗುವುದು.

ನೋಟೀಸು

ಶ್ರೀ ಹರಿಹರೇಶ್ವರ ಮಹಾದೇವಾಲಯ ಶ್ರೀವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿ

ಯ ಸಲುವಾಗಿ ಟೀಕೆಟುಗಳ ಮೂಲಕ ತಾ. 23—1—46 ಕ್ಕೆ ಜರಗಿಸಬೇಕಾಗಿದ್ದ **ಜೋಡಾಟವನ್ನು ಎಂಟರ್‌ಟೈನ್‌ಮೆಂಟ್ ಟೀಕ್ಸಿನ ತೊಂದರೆಯಿಂದಾಗಿ ರದ್ದುಮಾಡಿಯಲಾಗಿದೆ.**

ಆಂತೂ ತಾ. 6—2—46ಕ್ಕೆ ಪ್ರಚಂಡ

ಜೋಡಾಟ ಮಾಡಿಸುವದಾಗಿ

ನಿಶ್ಚಯಿಸಿರುತ್ತದೆ.

ಎಲ್ಲರಿಗೂ ಸುಸ್ವಾಗತವಿದೆ.

ಎ. ಎಂ. ನಾಗಪ್ಪ ಹೆಗ್ಡೆ,
ಮೆನೇಜಿಂಗ್ ಟ್ರಸ್ಟಿ-
ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, ಹಿರಿಯಡ್ಕ, ದ. ಕನ್ನಡ.

ಉಡುಪಿ.

ಸ್ವೀಕಾರ-ರಥಬೀದಿಯ ಮೆಜಿಸ್ಟಿಕ್ ಪೈಸ್ಸಿನಸರಂದ ಮುದ್ರಿಸಲ್ಪಟ್ಟ 1946-47ನೆ ಇಸವಿಯ ಅವ್ಯಯ ಸಂಪತ್ಪತ್ರಿಕೆ ಪಂಚಾಂಗವನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ. ಈ ಉಪಯುಕ್ತ ಪಂಚಾಂಗದ ಬೆಲೆ ಐದಾಣೆ.

ಸಾರ್ವಜನಿಕ ಸಭೆ-ಇದೇ ತಾ 11 ನೇ ಆದಿತ್ಯವಾರ ನೇಯಿಗೆ ಮತ್ತು ಬೀಡಿ ಮಜೂರ ಸಂಘದ ಆಶ್ರಯದಲ್ಲಿ ಕೆಲಸಗಾರಮೆರವಣಿಗೆಯಾಗಿ ರಥಬೀದಿಯಲ್ಲಿ ಸಾರ್ವಜನಿಕ ಸಭೆ ಸೇರಿತು. ದ. ಕ. ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಕಾಂತಾರಾಮ ಪೈ ಮತ್ತು ಕೆ. ರಾಘವನ್‌ರು, ಮಜೂರ ಬೀಡಿ ಕೆಗಳ ಕುರಿತು ಭಾಷಣವಿತ್ತರು.

ಕಟಪಾಡಿ-ಏಣಗುಡ್ಡೆ ಗ್ರಾಮದ ಕಡೆ ಕೋಡಿಯಲ್ಲಿ ಉಡುಪಿ ಪೋಲೀಸ್ ಅಧಿಕಾರಿಯೊಬ್ಬರು ಪೋಲೀಸ್ ಮತ್ತಿತರರೊಂದಿಗೆ ರಾತ್ರಿ ಹೊತ್ತು ದೋಣಿ ನಡಿಸಿ ತಮ್ಮ ಮೇಲೆ ಅತಿಕ್ರಮ ನಡಿಸಿದರೆಂದು ಮೇಲಧಿಕಾರಿಗಳಿಗೆ ಸಂಬಂಧಪಟ್ಟವರ ಮೂರು ಹೋಗಿದೆಯೆಂದೂ ಆ ಸಂಬಂಧದ ಒಂದು ಫಿರ್ಯಾದಿ ಉಡುಪಿ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ದಾಖಲಾಗಿದೆಯೆಂದೂ ತಿಳಿದು ಬರುತ್ತದೆ.

ದೇಶ -- ವಿದೇಶ

ಕಲ್ಕತ್ತದಲ್ಲಿ ಪ್ರಮುಖರು

ಇದೇ ತಾ. 6ರಿಂದ ಕಲ್ಕತ್ತದಲ್ಲಿ ಮೌಲಾನಾ ಅಜಾದರ ಮನೆಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸೇರಿದೆ. ಕೆಲವು ದಿನಗಳ ಮೊದಲೇ ಕಲ್ಕತ್ತಕ್ಕೆ ಹೋಗಿ ಸೋದೇಪುರ ಆಶ್ರಮದಲ್ಲಿ ಉಳಿದಿದ್ದ ಮಹಾತ್ಮಾ ಗಾಂಧಿಯವರು ನಾಲ್ಕು ದಿನ ಗವರ್ನರ್ ಕೇಸಿಯವರೊಡನೆ ಸಂಭಾಷಿಸಿದರು. ಆ ಮೇಲೆ ಕೇಸಿಯವರ ಅಪೇಕ್ಷೆಯಂತೆ ಅಜಾದ್, ನೆಹರು, ವಲ್ಲಭಾಯಿಗಳಿಗೆ ಗವರ್ನರ್ ಸಂಭಾಷಣೆಯಾಯಿತು. ಇದೇ ತಾ. 10ರಲ್ಲಿ ವೈಸರಾಯೀ ವೇವೆಲರು ಕಲ್ಕತ್ತಕ್ಕೆ ಬಂದು ಅಲ್ಲಿಯ ಎಸೋಸಿಯೇಟೆಡ್ ಚೇಂಬರ್ಸ್ ಓಫ್ ಕಾಮರ್ಸ್‌ನ ವಾರ್ಷಿಕಾಧಿವೇಶನದಲ್ಲಿ ಭಾಷಣವಿತ್ತು, ದೇಶದ ಪರಿಸ್ಥಿತಿಯನ್ನು ವಿವರಿಸಿ ಪ್ರಮುಖರ ಸಹಕಾರವನ್ನು ವಿನಂತಿಸಿಕೊಂಡರು. ಅಂದೇ ಅಪರಾಹ್ನ ಗಾಂಧೀ-ವೇವೆಲ್ ಭೇಟಿ ನಡೆಯಿತು.

ಸಂಧಾನ ಮಾತುಕತೆಯಿಲ್ಲ

ಬಂಗಾಳ ಗವರ್ನರ್, ವೈಸರಾಯಿ, ಮತ್ತು ಕಾಂಗ್ರೆಸ್ ಪ್ರಮುಖರ ಮಾತುಕತೆಗಳ ಕುರಿತು ನಾನಾ ಊಹಾಪೋಹಗಳಿದ್ದರೂ 'ಸದ್ಯ ಬಂದು ಪಕ್ಷ ಕೊಡನೆ ಸಂಧಾನ ನಡಿಸುವ ಇಚ್ಛೆ ನಮಗಿಲ್ಲ. ಚುನಾವಣೆ ಮುಗಿಯದೆ ಸಂಧಾನ ಮಾತುಕತೆಯಿಲ್ಲ' ಎಂದು ನವಢಿಲ್ಲಿಯಿಂದ ಹೊರಟ ಸರಕಾರೀ ಪ್ರಕಟಣೆ ಭ್ರಮನಿರಸನ ಮಾಡಿದೆ; ಮುಸ್ಲಿಂಲೀಗಿನವರನ್ನು ಸಂತೈಸಿದೆ. ಸುಭಾಸ್‌ಸೇನೆಗೆ ಪ್ರಮುಖರೀಯುತ್ತಿರುವ ಪ್ರೋತ್ಸಾಹದಿಂದ ಮನನೊಂದ ಅಧಿಕಾರಿಗಳು ಈ ಮಾತುಕತೆಗಿಳಿದರೆಂದು ನಂಬಬಹುದು. ಕಲ್ಕತ್ತದಲ್ಲಿ ಅಜಾದ್ ಹಿಂದ್ ಫೌಜಿನ ನಾರಾಯಣಂಭಕ್ಕಾಗಿ 2 ಲಕ್ಷಕ್ಕೂ ಮಿಕ್ಕಿದ ಪ್ರಚಂಡ ಸಭೆಯಲ್ಲಿ ನೆಹರು ಮತ್ತು ವಲ್ಲಭಾಯಿಗಳು ಸ್ಫೂರ್ತಿದಾಯಕ ಭಾಷಣವಿತ್ತರು. ಎಲ್ಲೆಲ್ಲೂ ಬಹಿಷ್ಕಾರವಿರುವಾಗ ಕಲ್ಕತ್ತೆದ ಈ ಪ್ರಚಂಡ ಸಭೆಯೊಂದು ಸೋಜಿಗ!

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಪ್ರಾಂತಿಕ ಚುನಾವಣಾಘೋಷಣೆಗಳನ್ನು ತಯಾರಿಸಿ ಚರ್ಚಿಸುತ್ತಿದೆ. ಈ ಘೋಷಣೆಯು ಗಾಂಧೀತತ್ವಮತ್ತು ನೆಹರೂ ಸಮಸಾವಾದದ ಸಮ್ಮಿಶ್ರಣವಾಗಿದೆ. ರೈತೋದ್ಧಾರ, ಸಾಮೂಹಿಕ ವ್ಯವಸಾಯಕ್ರಮ, ಪ್ರಾಮುಖ್ಯ ಉದ್ಯಮಗಳ ರಾಷ್ಟ್ರೀಕರಣ ಮೊದಲಾದ ಹಲವು ಕ್ರಾಂತಿಕಾರೀ ಬದಲಾವಣೆಗಳು ಈ ಘೋಷಣೆಯಲ್ಲಿವೆ. ತಮಿಳುನಾಡು ಕಾಂಗ್ರೆಸ್ ಕಮಿಟಿಯ ಒಂದು ಶಿಷ್ಟಮಂಡಲ ಅಲ್ಲಿಗೆ ಹೋಗಿದೆ. ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡು ತನ್ನ ಕಾರ್ಯಕ್ರಮಗಳ ಪರ್ಯಾಲೋಚನೆಯಲ್ಲಿದೆ ಸಿಂಧ್, ಪಂಜಾಬ್ ಮೊದಲಾದ ಕೆಲವು ಪ್ರಾಂತ್ಯಗಳಿಗೆ ಕಾಂಗ್ರೆಸ್ ನೇಮಕಗಳನ್ನು ಮಾಡಿದೆ. ಮಲಯ ಬರ್ಮಗಳ ಹಿಂದೀಯರ ಸ್ಥಿತಿಪರ್ಯಾಲೋಚನೆಗಾಗಿ ನೆಹರುಗಳನ್ನು ಕಳುಹಿಸಲು ವರ್ಕಿಂಗ್ ಕಮಿಟಿ ನಿರ್ಧರಿಸಿದೆ. ದೇಶದ ಪ್ರಾಂತಿಕ ಒಳಜಗಳಗಳ ತೀರ್ಮಾನಕ್ಕಾಗಿ ಬೇರೆ ಬೇರೆ ಪ್ರಮುಖರು ಸ್ವತಃ ಹೊರಡಲಿದ್ದಾರೆ.

ಕೇಂದ್ರ ಚುನಾವಣೆಯಲ್ಲಿ

ಮಧ್ಯ ಪ್ರಾಂತ್ಯದಾಕಡೆಯ ಜಮೀನ್ದಾರ್ ಮತ್ತು ಇನಾಮ್ದಾರರ ಎರಡು ಸ್ಥಾನಗಳಲ್ಲೂ ಪಂಜಾಬಿನ ಎರಡು ಸಿಖ್ ಸ್ಥಾನಗಳಲ್ಲೂ ಕಾಂಗ್ರೆಸ್ ಉಮೇದ್ವಾರಿಗಳು ಸೋತಿದ್ದಾರೆ. ಮಿಕ್ಕ ಎಲ್ಲಾ ಸ್ಥಾನಗಳೂ ಕಾಂಗ್ರೆಸಿಗೆ ದೊರೆತುವೆನ್ನೆ ಬಹುದು. ಮುಸ್ಲಿಂ ಸ್ಥಾನಗಳಲ್ಲಿ ಒಂದನ್ನು ಬಿಟ್ಟು ಮಿಕ್ಕೆಲ್ಲಾ ಕಡೆಗಳಲ್ಲೂ ಲೀಗ್ ಉಮೇದ್ವಾರಿಗಳು ಗೆದ್ದಿದ್ದಾರೆ.

ವಿದೇಶ ವಾರ್ತೆಗಳು

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಕೂಲಿಗಾರ ಸರಕಾರದ ಮೇಲೆ ಚರ್ಚಿಲ್ ಪಕ್ಷ ತಂದ ಅವಿಶ್ವಾಸ್ತಿರಣವು ಬಿದ್ದು ಹೋಯಿತು. ಚರ್ಚಿಲ್ಲರ ಮೇಲೆ ವ್ಯಂಗ್ಯ ವಾಗ್ಬಾಣ ಹೊಡೆದ ಪ್ರಧಾನಿ ಆಟ್ಲಿಯವರ ಭಾಷಣ ಬಹಳವಾಗಿ ಶ್ಲಾಘನೆ ಪಡೆಯಿತು. ಇಂತಾದಿನಲ್ಲಿ ರಶ್ಯದ ಒತ್ತಡದಿಂದಾಗಿ ಸರಕಾರೀ ಘೋಷಣೆ ಅಡಿಮೇಲಾಗಿ ಅಲ್ಲಿ ಸೋವಿಯೆಟ್ ಆಂಕೆ ಬೀಳಹತ್ತಿದೆ. ಇಂಗ್ಲಾಂಡು ಅಮೇರಿಕಗಳು ಗಾಬರಿಗೊಂಡಿವೆ ಚೀನದ ಆಂತರ್ಯುದ್ಧ ಪ್ರಬಲಿಸಿ ಅಲ್ಲಿಯೂ ರಶ್ಯ-ಅಮೇರಿಕಗಳ ಮನಸ್ತಾಪ ಬೆಳೆದಿದೆ. ಜಾವಾದ ಸ್ವಾತಂತ್ರ್ಯ ಸಮರವೂ ಬ್ರಿಟಿಷರ ಸೇನಾ ಹೊಡೆತಗಳಾಯಪ್ರಕಾರ ಸಾಗಿವೆ

ಪಾರ್ಲಿಮೆಂಟ್ ಸದಸ್ಯರ

ಶಿಷ್ಟಮಂಡಲವೊಂದು ಹಿಂದುಸ್ಥಾನಕ್ಕೆ ಈ ತಿಂಗಳಲ್ಲೇ ಹೊರಟು ಇಲ್ಲಿಯ ಧುರೀಣರೊಡನೆ ವಿಚಾರ ವಿನಿಮಯ ನಡೆಸಲಿದೆ. ಇದು ಅನಧಿಕೃತ ವಿಮರ್ಶಕ ಮಂಡಲಿಯಿರುವದರಿಂದ ಕೇವಲ ಕಾಲ ವಿಳಂಬದಾಟವೆಂದು ಹಿಂದೀ ಪ್ರಮುಖರು ನಿವೇದಿಸಿದ್ದಾರೆ. 'ಹಿಂದೀ ಸ್ವಾತಂತ್ರ್ಯದ ದಿನ ನಿಶ್ಚಯ ಮಾಡದ ಸರಕಾರದ ವರ್ತನೆ ಖಂಡನೀಯ' ಎಂದು ಪಾರ್ಲಿಮೆಂಟಿನ ಕೂಲಿಗಾರ ಸದಸ್ಯರಾದ ಮೇಜರ್ ಎ. ಎಲ್, ಸ್ಯಾಮೊಂಡ್ಸರು ಟೀಕಿಸಿದ್ದಾರೆ.

ಇಂಗ್ಲಾಂಡಿಗೆ ಅಮೇರಿಕದ ಸಾಲ

ಅಮೇರಿಕವು ಬ್ರಿಟನಿಗೆ 4400 ಮಿಲಿಯ ಡೋಲರುಗಳ ಸಾಲ ಕೊಡುವ ಒಪ್ಪಂದವಾಗಿದೆ. ಇದಕ್ಕೆ ಅನುಗುಣವಾಗಿ ಬ್ರಿಟನು ಭಾರತಕ್ಕೆ ಸಲಾಯಿಸಬೇಕಾಗಿರುವ ಸ್ಟರ್ಲಿಂಗ್ ಸಾಲಗಳಲ್ಲೊಂದು ಭಾಗವನ್ನು ರಕ್ಷಣಾವೆಚ್ಚಿನವಾಗಿ ಗಣಿಸಿ ವಜಾ ಪಡಿಸಲಾಗುವದೆಂದೂ, ಉಳಿದ ಆಂಶಗಳ ಕುರಿತು ದೀರ್ಘ ವಾಯಿದೆಗಳ ಸಂದಾಯ ಇತ್ಯಾದಿ ಕಣ್ಣುಮುಚ್ಚಾಲೆಯಾಟ ನಡೆಯುವದೆಂದೂ ತಿಳಿದುಬರುತ್ತದೆ. ಭಾರತೀಯ ಆರ್ಥಿಕ ತಜ್ಞರೆಲ್ಲಾ ಆಂಗ್ಲೋ-ಅಮೆರಿಕನ್ ಸಾಲ ಒಪ್ಪಂದ ಮತ್ತು ಭಾರತದ ಮೇಲೆ ಆದರಿಂದಾಗುವ ಪರಿಣಾಮಗಳನ್ನು ಖಂಡಿಸಿದ್ದಾರೆ.

(ನವೇ ಪುಟದಿಂದ ಮುಂದುವರಿದುದು.)

ಕೋರ್ಟು ಮಾರ್ಶಲ್ ತೀರ್ಪಿನ ವಿಧಾನ

ಐ. ಹಿಂ. ಫೌಜಿನ ಮೇಲಿನ ಪ್ರಥಮ ಮೊಕದ್ದಮೆಯು ಇಂದು ದ್ವಿತೀಯಾಂಕಕ್ಕೆ ಬಂದಿದೆ ಇದರ ಫಲಿತಾಂಶವೇನು ಎಂಬ ಕುರಿತು ದೇಶದಲ್ಲೆದ್ದಿರುವ ಆತುರವು ಅದಮ್ಯವಾದುದು ಸಾಮಾನ್ಯ ಕ್ರಿಮಿನಲ್ ಕೋರ್ಟುಗಳಿಗೂ ಮಿಲಿಟರಿ ಕೋರ್ಟುಗೂ ಸರ್ವ ವಿಧಾನಗಳಲ್ಲೂ ವೈತ್ಯಾಸವಿದೆ. ಕೆಂಪು ಕೋಟೆಯ ಮೊಕದ್ದಮೆಗಳ ವಿಚಾರಣೆ ಮುಗಿದ ಮೇಲೆ 5ರಿಂದ 7 ದಿನಗಳ ಒಳಗೆ ತೀರ್ಪಾಗಬೇಕು. ಸಾಮಾನ್ಯ ಕೋರ್ಟುಗಳಲ್ಲಿ ವಿಚಾರಣೆ ಮುಗಿದ ಮೇಲೆ ತೀರ್ಪನ್ನು ಅಲ್ಲಿಯೇ ಜಾಹೀರಾಗಿ ಓದಿಹೇಳುವ ಕ್ರಮವಿದೆ. ಕೋರ್ಟು ಮಾರ್ಶಲಿನ ತೀರ್ಮಾನವನ್ನು ಕೋರ್ಟಿನಲ್ಲಿ ತಿಳಿಸುವಂತಿಲ್ಲ. ತೀರ್ಪೇನಾಯಿತೆಂಬುದು ಹಲವು ದಿನಗಳ ವರೆಗೂ ಗುಟ್ಟಿನಲ್ಲೇ ಇರಬಹುದು. ಕೋರ್ಟು ಮಾರ್ಶಲ್ ವಿಚಾರಣೆ ಮುಗಿದ ಮೇಲೆ ಆದರ ಎಲ್ಲಾ ರಿಕಾರ್ಡುಗಳನ್ನೂ, ದೃಢೀಕರಣಾಧಿಕಾರಿಯು ಕಾನೂನು ಸಲಹಗಾರರಿಗೆ ಒಪ್ಪಿಸಬೇಕು. ಈ ಕಾಯಿದೇ ಪಂಡಿತರು ಅವುಗಳನ್ನು ಪರೀಕ್ಷಿಸಿ ಅವೆಲ್ಲಾ ಕಾನೂನುಬದ್ಧವಾಗಿ ಸರಿಯೋ ತಪ್ಪೋ ಎಂಬುದನ್ನು ದೃಢೀಕರಣಾಧಿಕಾರಿಗೆ ವರದಿಮಾಡುವರು. ಆ ಮೇಲೆ ದೃಢೀಕರಣಾಧಿಕಾರಿ ಎಲ್ಲವನ್ನೂ ಪರೀಕ್ಷಿಸುವರು. ಅಜಾದ್ ಹಿಂದ್ ಫೌಜಿನ ಎಲ್ಲಾ ವಿಚಾರಣೆಗಳ ದೃಢೀಕರಣಾಧಿಕಾರಿಯೆಂದರೆ ಭಾರತದ ಸರ್ವ ಸೇನಾನಿ ಜನರಲ್ ಆಚಿನ್‌ಲೆಕ್. ಕೋರ್ಟು ಮಾರ್ಶಲ್ ಕೊಟ್ಟ ಶಿಕ್ಷೆಯನ್ನು ಹೆಚ್ಚಿಸುವ ಅಧಿಕಾರ ಇವರಿಗಿಲ್ಲ. ಆದರೆ ಆ ಶಿಕ್ಷೆಯನ್ನು ತಗ್ಗಿಸ.ವ, ಮೈದುಗೊಳಿಸುವ ಅಥವಾ ಪೂರ್ತಿ ರದ್ದುಗೊಳಿಸುವ ಅಧಿಕಾರ ಜನರಲ್ ಆಚಿನ್‌ಲೆಕರಿಗಿದೆ. ಸರ್ವಸೇನಾನಿಯ ಕೊನೆಯ ತೀರ್ಮಾನವನ್ನು ಕೊಡಲೇ ಅಪರಾಧಿಗಳಿಗೆ ಸಂಬಂಧಪಟ್ಟ ಸೇನಾಧಿಕಾರಿಗಳ ಮೂಲಕ ತಿಳಿಸಲಾಗುವದು. ಜನರಲ್ ಆಚಿನ್‌ಲೆಕರು ಸಹೃದಯಿಯೆಂಬ ಪ್ರತೀತಿಯಿದೆ. ಇತ್ತೀಚೆಗೆ ಪಂಡಿತ ನೆಹರುಗಳು ಅವರೊಡನೆ ಸಂಭಾಷಿಸಿದ್ದರು.

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಪ್ರಥಮ ಪ್ರಯತ್ನ!

ಇದೇ ದಶಂಬರ ತಾ. 25ರಿಂದ ಉಡುಪಿಯ ಮಣಿಪಾಲ ಎಜ್ಯುಕೇಶನಲ್ ಸೆಂಟರಿನಲ್ಲಿ ಜರಗಲಿರುವ

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್

ಮಹಾ ಸಮ್ಮೇಲನದ ಸುಗ್ಗಿಂದರ್ಭದಲ್ಲಿ ಅಖಿಲ ಕರ್ನಾಟಕದ ಜನಪ್ರಿಯ ವಾರಪತ್ರಿಕೆ

'ಅಂತರಂಗ'ದ ಆಯುರ್ವೇದ ಸಮ್ಮೇಲನಾಂಕ

ಎಂಬ ವಿಶೇಷ ಸಂಚಿಕೆಯು ಪ್ರಕಟವಾಗುವುದು.

ಅಖಿಲಭಾರತ ಖ್ಯಾತಿಯ ಲೇಖಕ ವರ್ಗ!

ಆಯುರ್ವೇದದ ಬಗ್ಗೆ ಅಧಿಕಾರಪೂರ್ಣವೂ ವಿಚಾರ ಪ್ರಚೋದಕವೂ ಆದ ಲೇಖನಗಳು!

ಕನ್ನಡಿಗರಿಗೆ ಈ ವರೆಗೆ ಯಾರೂ ಆರ್ಪಿಸದ ಹೊಸ ವರ್ಷದ ಹೊಸ ನೂರಾರಿಯು ಕಾಣಿಕೆ.

ಪ್ರತಿ ಡಾಕ್ಟರು, ವೈದ್ಯರಷ್ಟೇ ಅಲ್ಲ-ಪ್ರತಿಯೊಬ್ಬ ಕನ್ನಡಿಗನೂ ಸಂಗ್ರಹಿಸತಕ್ಕ ಅತ್ಯಮೂಲ್ಯ ಸಂಚಿಕೆ

ನೂರಾರು ಪುಟಗಳು! ಹಲವಾರು ಚಿತ್ರಗಳು!

ಇಷ್ಟಿದ್ದರೂ ಬೆಲೆ ಬರೇ ಒಂದು ರೂಪಾಯಿ, ಮಾತ್ರ.

ಈ ತಿಂಗಳಾಂತ್ಯದೊಳಗೆ ಒಂದು ರೂಪಾಯಿಯ ಪೋಸ್ಟಲ್ ಆರ್ಡರು ಯಾ ಮನಿಆರ್ಡರು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಜಾಹೀರಾತುಗಳು ತಾ-20ರ ತನಕ ಮಾತ್ರ ಸ್ವೀಕರಿಸಲ್ಪಡುವವು

ಮೆನೇಜರ್, 'ಅಂತರಂಗ' ವಾರಪತ್ರಿಕೆ, ಉಡುಪಿ, ದ.ಕ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **13-12-1945**ರಿಂದ

ವಿಷ್ಣು ಚಿತ್ರ

ರಾಣಿ ಸಾಹೀಬ್

ರಾಜಕುಮಾರಿ, ಊರ್ವಿಳಾ, ಸೆನ್ಸೇಷನ್

ಬರುವ ಚಿತ್ರ—

ಶಕುಂತಲಾ

ದಕ್ಷಿಣ ಕನ್ನಡ

ಮಂಗಳೂರು

ಮಂಗಳೂರಿನ ಹೆಮ್ಮೆಗೆ–ಕ್ಷೇತ್ರದಲ್ಲಿ ಮನ ಬೇಸಾಯಗಾರರು, ತಮ್ಮ ಉಳಿಕೆಯ ಅಕ್ಕಿ ಭತ್ತವನ್ನು ತಾ. 31--11--45ರೊಳಗೆ ಬಂದರದ ರಬಿಂ ಸಹಕಾರಿ ಭಂಡಸಾಲೆಗೆ ಸಾಗಿಸತಕ್ಕದ್ದೆಂದು ಈ ಮೊದಲು ಪ್ರಕಟಿಸಲಾಗಿತ್ತು. ಹೆಚ್ಚಿನ ಬೇಸಾಯಗಾರರು ಅಕ್ಕಿಯನ್ನೇ ಒಪ್ಪಿಸಲು ಇಷ್ಟಪಟ್ಟು ಆ ಬಗ್ಗೆ ಸಮಯವನ್ನು ಕೇಳಿರುವುದರಿಂದ, ತಾ. 15-12-45ರ ವರೆಗೆ ಅಕ್ಕಿಯನ್ನು ಸ್ವೀಕರಿಸಲಾಗುವುದು. ಎರಡು ಮುಡಿ ಭತ್ತಕ್ಕೆ ಒಂದು ಮುಡಿ ಅಕ್ಕಿಯಂತೆ ಎಣಿಸಲಾಗುವುದು. ತಾ.15ರ ವರೆಗೂ ಅಕ್ಕಿಯನ್ನು ತಂದೊಪ್ಪಿಸದಿದ್ದರೆ ಆ ಬಳಿಕ ಅಂತರ ಮೇಲೆ ಖಟ್ಲೆ ಹೂಡಲು ತಕ್ಕ ಕಾರ್ಯಕ್ರಮ ಕೈಕೊಳ್ಳಲಾಗುವುದು ಎಂದು ರೇಶನಿಂಗ್ ಆಫೀಸರ್ ಶ್ರೀ. ಸುಂದರರಾಯರು ಸ್ಪಷ್ಟಪಡಿಸುತ್ತಾರೆ.

ನಿಯಂತ್ರಣ ಹೋಯಿತು–ನಿತರಣಾ ನಿಯಂತ್ರಣದಿಂದ, ಇಂಡಿಯಾ ಸರಕಾರದವರು ಈ ಕೆಳಗಿನ ಸರಕುಗಳನ್ನು ತಾ. 1 12-45ರ ಆಪ್ಪನೆಯಂತೆ, ವಿನಾಯಿತಿಪಡಿಸಿರುವರು: ಸ್ಲೇಟುಕಡ್ಡಿ, ಬೂಟ್ ಮತ್ತು ಲೋಹದ ಪೊಲಿಶ್, ಸ್ಪೀಲ್ ಪೆನ್ನುಗಳು, ಸ್ಟೌಂಟನ್ ಪೆನ್ನುಗಳು ಮತ್ತು ಅದರ ಉಪಕರಣಗಳು, ಎನಾಮಲ್ ಸರಕುಗಳು, ಸೀಮೆಯೆಣ್ಣೆ ದೀಪಗಳು, ಮೊಟಲುಗಳು, ಲಿಫ್ ಪಾಸ್ಟರುಗಳು, ನಾಯಲ್‌ಲೆಸ್ ವಿಸೀವಿಂಗ್ ಸೆಟ್ಟುಗಳು, ಕಪ್ಪೆರ್, ಟೈಪ್‌ರೈಟರ್ ರಿಬ್ಬನುಗಳು, ಪಾಯಿಂಟೆಸ್ ಬಲ್ಬುಗಳು, ಫೋಟೋಗ್ರಾಫಿ ನೆಗೆಟೀವ್ ಮತ್ತು ಪ್ರಿಂಟಿಂಗ್ ಪೇಪರುಗಳು, ಗೋದಿ ಗಡಿಯಾರಗಳು -ಟೈಮ್ ಎಕ್ಸುಗಳು-ನಾಟಾಗಳು ಮತ್ತು ಅದರ ಉಪಕರಣಗಳು, ಕೆಟ್ಟಿಜ್ಜುಗಳು. ಸಿಗಾನಿ ಸಾಮಾನು, ಕನ್ನಡಕದ ಫ್ರೇಮುಗಳು, ಕನ್ನಡಕದ ಹರಳುಗಳು ಮತ್ತು ಅವಕ್ಕೆ ಸಂಬಂಧಿಸಿದ ಇತರ ಸಾಮಾನುಗಳು, ಸೆನಿಟರಿ ಫಿಟ್ಟಿಂಗ್ಸ್, ಆಟದ ಸಾಮಾನುಗಳು, ಕರ್ಪೂರ, ಧರ್ಮಾಸ್. (ಈ ಮೇಲಿನ ಸಾಮಾನುಗಳಲ್ಲಿ ಹಲವು, ಧಾರಾಳವಾಗಿ ದೊರೆಯುವಲ್ಲಿರುವ ಕಾರಣ, ಆವುಗಳನ್ನು ಮೇಲಿನ ಆರ್ಡರಿನಿಂದ ವಿನಾಯಿತಿಪಡಿಸಲಾಗಿದೆ; ಅಂದರೆ, ಕಂಟ್ರೋಲರ್ ಜನರಲ್ ಆಫ್ ಸಿವಿಲ್ ಸಪ್ಲಾಯಿಸ್, ಮುಂಬಯಿ, ಇವರಿಗೆ ಹೊಸಲು ತಿಳಿಸದೆ ಇವುಗಳನ್ನು ವಿಕ್ರಯಿಸಬಹುದು. "ಹೋರ್ಡಿಂಗ್ ಎಂಡ್ ಪ್ರೊಫಿಟಿಯರಿಂಗ್ ಪ್ರಿವೆನ್ಷನ್ ಆರ್ಡಿನೆನ್ಸ್, ೧೯೪೫" ಈ ಕಾನೂನು ಮಾತ್ರ ಜಾರಿಯಲ್ಲಿದೆ.)

ವಿಷಮ ಜ್ವರ ಹೆಚ್ಚಿದೆ–ನಗರದಲ್ಲಿ ಸಾಮಾನ್ಯ ರೋಗರುಜೆಗಳಲ್ಲದೆ, ವಿಷಮ ಜ್ವರವು ಎಲ್ಲ ಸಾರ್ವಜನಿಕರಲ್ಲಿಯೂ ಹರಡಿರುವ ಸರಬಿಯಿದೆ. ನಾಲ್ಕೈದು ವಿಷಮ ಜ್ವರದ ರೋಗಿಗಳಿದ್ದ ಮನೆಗಳೂ ಉಂಟು. ವಿಷಮ ಜ್ವರ ನಿವಾರಕ ಔಷಧ ಪಾಕಿಸಿಕೊಳ್ಳುವಂತೆ ಆರೋಗ್ಯಾಧಿಕಾರಿಗಳು ಪ್ರಚಾರ ನಡೆಸಿ, ಯತ್ನಿಸುವುದೂ, ಜನರು ಅನುಸರಿಸ ಬೇಕಾದ ಸಾಮಾನ್ಯ ಆರೋಗ್ಯ ಸೂತ್ರಗಳನ್ನು ಸುಲಭ ರೀತಿಯಲ್ಲಿ ಪ್ರಕಟಣೆಗಳ ಮೂಲಕ ಕೊಡುವುದೂ ಅವಶ್ಯವಿದೆ.

ವಿದ್ಯಾರ್ಥಿಗಳ ಶಾಲಾ ಫೀ–ಸ್ಥಳೀಯ ಸಂಸ್ಥೆಗಳ ಇನ್ಸ್‌ಪೆಕ್ಟರರ ಸೂಚನೆಯಂತೆ ಜಿಲ್ಲಾ ಬೋರ್ಡ್ ಬಜೆಟ್ ಕನಿಬಿಯ ಅನುಮೋದನೆಯೊಡನೆ, ಬೋರ್ಡಿನ ಅಡಳಿತದಲ್ಲಿರುವ ಹೈಸ್ಕೂಲುಗಳಲ್ಲಿನ ವಿದ್ಯಾರ್ಥಿಗಳ ಫೀಯನ್ನು ಈ ಕೆಳಗಿನಂತೆ ತಿದ್ದಲಾಗಿದೆ. (೧) ಬರುವ ವರ್ಷ ಜೂನ್ ತಿಂಗಳಿಂದ, ವಿದ್ಯಾರ್ಥಿಗಳ ಫೀಯಲ್ಲಿ, ಕಂತಿನಲ್ಲಿ ನಾಲ್ಕು ಆಣೆಗಳಂತೆ ಹೆಚ್ಚಿಸುವುದು (೨) ಹೈಸ್ಕೂಲುಗಳಲ್ಲಿನ ಮತ್ತು ಇನೇ ವಿದ್ಯಾರ್ಥಿಗಳನ್ನು ಒಂದೊಂದಾಗಿ ಪರಿಶೀಲಿಸಿ, ಮುಚ್ಚುವುದು. (೩) ಹೈಸ್ಕೂಲುಗಳನ್ನು ಸರಕಾರಕ್ಕೆ ಒಪ್ಪಿಸುವುದು. (೪) ಹೈಸ್ಕೂಲು ವಿದ್ಯಾರ್ಥಿಗಳ ಪ್ರವೇಶ ಪಾಸಲನ್ನು ಎಂಟಾಣೆಯಿಂದ ರೂ. ೧ಕ್ಕೆ ಹೆಚ್ಚಿಸುವುದು. (೫) ಲೆಬರೇಟರಿ ಪಾಸಲನ್ನು ರು. ೭ರಿಂದ ರೂ. ೪ಕ್ಕೆ ಏರಿಸುವುದು. (೬) IV ಫಾರ್ಮಿನಿಂದ VI ಫೋರ್ಮ್ ವರೆಗಿನ ಲೈಬ್ರರಿ ಫೀಯನ್ನು ಒಂದೂವರೆ ರೂಪಾಯಿಯಿಂದ ರೂ ೩ಕ್ಕೆ ಹೆಚ್ಚಿಸುವುದು.

ಪುತ್ತೂರು–ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಉತ್ಸವದ ಸಮಯದಲ್ಲಿ, ಕಳೆದ ಮಂಗಳವಾರ ರಾತ್ರೆ ಒಬ್ಬನು ಹಿರ್ಮಹುಡುಗಿಯ ಅಪಹರಣಕ್ಕೆ ಮಾಡಲು ಯತ್ನಿಸಿದನೆಂಬ ಆರೋಪದಲ್ಲಿ ಪೋಲೀಸರಿಂದ ವಿಚಾರಣೆಗೊಳಪಡಿಸಲ್ಪಟ್ಟನು. ಸ್ಪೇಷನರಿ ಸಬ್ ಇನ್ಸ್‌ಪೆಕ್ಟರಿಟರು ಆಪರಾಧಿಗೆ ರೂ. 40-ಜುಲ್ಮಾನೆ ವಿಧಿಸಿದರೆಂದು ತಿಳಿಯಲಾಗಿದೆ.

ಉಪ್ಪಿನಂಗಡಿ–ಇಲ್ಲಿಗೆ ಸಮೀಪವಿರುವ ನೆಲ್ಯಾಡಿ ಮಿಲಿಟರಿ ಶಿಬಿರದ ಮೇಲೆ ಹಾರಾಡುತ್ತಿದ್ದ ವಿಮಾನವೊಂದು ಕಳೆದ ಬುಧವಾರ ಕುಂತೂರು ಎಂಬಲ್ಲಿ ಮುರಿದು ಬಿದ್ದು, ಇಬ್ಬರು ವಿಮಾನ ಚಾಲಕರಿಗೆ ಪೆಟ್ಟಾಗಿದೆಯೆಂದೂ, ಆವರನ್ನು ಮಿಲಿಟರಿ ಆಸ್ಪತ್ರೆಗೆ ಸಾಗಿಸಿದರೆಂದೂ ಪ್ರಕಟವಾಗಿದೆ.

ಧನ ಸಹಾಯ–ಪ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ವಾರ್ಷಿಕ ಪರಿಷತ್ತು ಸಂಬಂಧ ವಿರ್ಪಡಿಸಿದ ಸ್ವಾಗತ ಕವಿಟಿಗೆ ಧನ ಸಹಾಯವಿತ್ತ ಮಹನೀಯರುಗಳ ಹೆಸರು ಸುತ್ತು ಪೊಬಲಗು–ಮುಂದರಿಸಿದು ದು–1. ಶ್ರೀ ಎಸ್. ಎಮ್. ಆಡ್ಯಂತಾಯರು ಮದ್ರಾಸು 50-0-0. 2. ಶ್ರೀ. ಎನ್. ಕೃಷ್ಣ ಸೆಟ್ಟು ಮುಂಡ್ಕೂರು ನಡಿಗುತ್ತು 50-0-0. 3. ಅದ್ವೆ ಚೀಂಕ್ರ ಗುತ್ತು ಸೇಸು ಸೆಟ್ಟು 50-0-0. 4. ಚಿತ್ತಾಪು ಲೋಕಯ್ಯ ನಾಯ್ಕರು, ದುರ್ಗಾ ಪರ್ಸ್ ಬೆಂಗಳೂರು 30-0-0 5. ಬಾಬ್ಬಾಣ ಕೋಡಣ್ಣ ಅಳ್ವರು 25-0-0. 6. ನಡಿಸಾಲು ಕೆಂಗಡ ಗುತ್ತು ಮಹಾಬಲ ಸೆಟ್ಟು 25-0 0. 7. ಶಮಂತೂರು ಹದ್ದ ಸೆಟ್ಟು 25—0—0. ಜುಮ್ಲಾ-255—0—0.

ಉಡುಪಿ ನೇಯಿಗೆ ಕೆಲಸಗಾರ ಸಂಘದ ಕಾರ್ಯಕಾರೀ ಸಮಿತಿಯು ತಾ. 6-12-45ಕ್ಕೆ ಸಂಘದ ಕಾರ್ಯಾಲಯದಲ್ಲಿ ಸೇರಿತು. ನೂಲಿನ ಅಭಾವದಿಂದಾಗಿ ಹಲವು ಮಜೂರರು ಸಿರುದ್ಯೋಗಿಗಳಾಗಬೇಕಾದುದನ್ನು ಸಂಘವು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಅವರಿಂದ ಅಸಡ್ಡೆ ಮಾಡಿರುವುದಕ್ಕಾಗಿ ವಿಷಾದ ಸೂಚಿಸಿ, ಉಡುಪಿಗೆ ಕೂಡಲೇ ನೂಲು ಸರಬರಾಯಿಯಾಗಬೇಕೆಂದು ಕೇಳುವ ನಿರಾವಾಯಿತು. ಹಾಸು ತೀರಿ ರಜೆ ನಡೆಯುವ ಸಮಯದ ಸಂಬಳವು ಮಜೂರರಿಗೆ ದೊರೆಯಬೇಕು; ಹಾಸು ಹರಿ ಮಾಡಿದ್ದಕ್ಕೆ ಕೂಲಿ ದೊರೆಯಬೇಕು; ಗಂಜಿ ಹಾಕುವ ಬ್ರೆಶ್‌ಗಳನ್ನು ಮಾಲಿಕರೇ ಒದಗಿಸಿ ಕೊಡಬೇಕು ಎಂದು ಕೇಳಿಕೊಳ್ಳುವ ನಿರ್ಧಾರವಾಯಿತು.

ಬಿರುದುಗಳು–ಇಲ್ಲಿಯ ವಿಶ್ವನ್ ಹೈಸ್ಕೂಲಿನ ಪಂಡಿತರಾದ ಶ್ರೀ. ಕೆ. ವೆಂಕಟರಾಮಾಚಾರ್ಯ, ವಿದ್ವಾನ್ ಇವರಿಗೆ ಅಯೋಧ್ಯೆಯ "ಅಖಿಲ ಭಾರತೀಯ ರಾಜ ವಿದ್ವನ್ಮಾನ್ಯ ಸಂಸ್ಕೃತ ಕಾರ್ಯಾಲಯ"ವು "ಸಾಹಿತ್ಯ ರತ್ನ" ಎಂಬ ಬಿರುದನ್ನೂ ಬೋರ್ಡಾ ಹೈಸ್ಕೂಲಿನ ಪಂಡಿತ ವಿದ್ವಾನ್, ಶ್ರೀ. ಪಿ. ಕುಪ್ಪಣ್ಣಾಚಾರ್ಯರಿಗೆ "ಸಾಹಿತ್ಯಾಲಂಕಾರ" ಎಂಬ ಬಿರುದನ್ನೂ ಕೊಟ್ಟು ಗೌರವಿಸಿರುವರು.

ತಾ.1-12-45ನೇ ದಿನ ಕಲಾ ವೃಂದದಲ್ಲಿ ಭಂಡಾರಿಕೆರೆ ಮಠಾಧೀಶರಾದ ವಿದ್ಯಾಮಾನ್ಯ ತೀರ್ಥ ಶ್ರೀಯವರು ಮತ್ತು ಪೇಜಾವರ ಮಠೀಯ ವಿಶ್ವೇಶ ತೀರ್ಥ ಶ್ರೀಯವರು ಸಭೆ "ಸ್ವಧರ್ಮಾಭಿಮಾನ" ಎಂಬೀ ವಿಷಯದ ಕುರಿತು ಭಾಷಣವಿತ್ತರು.

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ. ಹೆಚ್ಚಿನ ವಿವರಗಳಿಗೆ

ಅತ್ತೂರು ವಾಸುದೇವ ಉಡುಪ

ಸಂಪಾದಕ

ಶ್ರೀ ರವಿಪ್ರಸಾದ ಜ್ಯೋತಿಷಾಲಯ

ಕೊಯಂಬುತ್ತೂರು

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಆರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1-8-0 ಮಾತ್ರ.

ಬೈಡು ಮಾಡಿದ ಪ್ರತಿಯೊಂದು ಸಂಪುಟಕ್ಕೆ ರೂ. 2/-

ಹೆಚ್ಚಿನ ವಿಚಾರಕ್ಕೆ ಬರೆಯಿರಿ—

ಬಾಲಚಂದ್ರ ಆಫೀಸು, ಉಡುಪಿ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಲೈಸಿ ತಯಾರಿಸಲ್ಪಟ್ಟ

ಅಮೋಘ ವಾವ ಮಧುರದ್ರವ ರಸಾಯನ.

ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ತರು ಮಾಡಲ್ಪಟ್ಟಿದೆ.)

ಲ ಬಿಸ್ನೆನ್ ಪಬ್ಲಿಸಿಟಿಗಳು ಹೆಚ್ಚು ಳಿತಿರುವುದಕ್ಕೆ ಅವರಿಗೆ ಕೇವಲ ಳ ರೂಪಾಯಿಗಳೇ ಒಂಭತ್ತು ಬಾಣಂತಿತನಕ್ಕೆ ಸಾಕಾಗುವುದು. ವಿಶೇಷ ವಿವರಗಳಿಗೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ಮ.ಕ.**

ನಾಟಕ ಕಲೆಯ ವಿಜಯ ಧ್ವಜ!

ಬಾಳಿನ ನೆಳಲು ಬೆಳಕುಗಳನ್ನು ಚಿತ್ರಿಸುವ ಅದ್ಭುತರಮ್ಯ ಕಥಾನಕ

ಶ್ರೀ. ಎಂ ನಾರಾಯಣರಾಯರ ನವೀನ ನಾಟಕ

ವಿಷಮ ಜೀವನ

ಮಾಸ್ಟರ್ ದೇವಡಿಗಾರ್ ಮತ್ತು ಪಾರ್ಟಿಯವರಿಂದ

ತಾ. **28-12 45**ನೆ ಶುಕ್ರವಾರ ರಾತ್ರಿ **8 30**ಕ್ಕೆ ಸರಿಯಾಗಿ

ಕಲ್ಬಾದೇವಿ ರೋಡಿನ **ಭಾಂಗನವಾಡಿಯ** ರಂಗಭೂಮಿಯ ಮೇಲೆ ಅಭಿನಯಿಸಲ್ಪಡುವುದು.

ಈ ಕೆಳಗಿನಲ್ಲಿ ಟಿಕೇಟುಗಳನ್ನು ಮುಂದಾಗಿ ಪಡೆಯಬಹುದು.

The Eastern Art Studio, 2-22 Gunbow Street, Fort BOMBAY.

H. Rama Rao & Sons, 380 Majestic Mansion, Sandhurst Road, Bombay 4

ಮುಟ್ಟಾಗುವಿಕೆ

ಹಲವಿಂಗಳಿಂದ ಕಟ್ಟಾಗಿದ್ದರೂ, ಶಿಷ್ಟದ ಗರ್ಭಧಾರಣೆ ಆಥವಾ ಇನ್ನಾವಕಾರಣದಿಂದಿದ್ದರೂ— **'ಕಾಮಾರಿ ಮಾತ್ರೆಗಳು'** ನಿಶ್ಚಿತ ನಿರುಪದ್ರವ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯುಗೊಡುವುದು; ಬೇಕಾಬಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3|- ಕೈಯಿಂದ ಕೇಸುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಆಲಾಯಿದೆ.)

Mrs. P. DEVEE,

F. D. S. (A. E.) Tollygunge, Calcutta.

ಸ್ಟಾಕಿಸ್ಟ್: ಸಾ ತಂಪನಿ, ಮಂಗಳೂರು

—ಮಕ್ಕಳನ್ನು ಹಡೆಯುವುದು ಸಾಕು—

ಅತಿಕ್ಕ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೆರಗು, ಪ್ರದರದೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧-೪ಆಣೆ.

ಮಾಲಕರು:—**ಹಾಲಪ್ಪಾ ಹಕೇರಪ್ಪಾ ಡಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ರಾಮಸಿ,—ಹುಬ್ಬಳ್ಳಿ, ಗದಗ್, ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ್ ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಕ್ಲೋರ್ಕ್. ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್, ಆರ್. ಎಲ್. ಕಮಲಾಪುರ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಜಿಲ್ಲೆ ವರ್ತಮಾನ

ದ. ಕ. ಜಿಲ್ಲಾ ಯುಕ್ತಗಾನ ಕಲಾ ವಿದರ ಕರ್ನಾಟಕ ಸಂಚಾರ- ನವಂಬ್ರ ತಾ 30ರಲ್ಲಿ ಬಳ್ಳಾರಿಯಲ್ಲಿ 'ಶ್ರೀ ಕೃಷ್ಣ ಸಂಧಾನ'-'ಭೀಷ್ಮ ಪರ್ವ', ತಾ 1ರಲ್ಲಿ ರಾಯದುರ್ಗದಲ್ಲಿ 'ತರಸೇತು ಬಂಧನ', ಪ್ರಸಂಗಗಳಾದುವು. ತಾ 2ರಲ್ಲಿ ಬಳ್ಳಾರಿಯಲ್ಲಿ ಕರ್ನಾಟಕ ವಿಕೀಕರಣದ ಕುರಿತು ಶ್ರೀಗಳಾದ ಎಸ್. ಎಸ್. ಕಲ್ಲೆ, ಬಾಲಕೃಷ್ಣರಾವ್ ರೇವಣ, ಸಿದ್ಧಯ್ಯನವರ ಭಾಷಣಗಳಾದುವು. ರಾತ್ರಿ ಸ್ಥಳೀಯ ಪ. ಕ. ಜಿಲ್ಲಾ ಸಂಘದವರ ಭೋಜನ ಸತ್ಕಾರವಿತ್ತು. ತಾ 3ರಲ್ಲಿ ಎಮಿಗನೂರಲ್ಲಿ 'ಕರ್ಣ-ಪರ್ವ' ತಾ 4ಕ್ಕೆ ಅದೋನಿಯಲ್ಲಿ 'ವಾಲಿವಧೆ', ತಾ 5ರಲ್ಲಿ ರಾಯಚೂರಲ್ಲಿ 'ತರಸೇತು ಬಂಧನ', ನಡೆಯಿತು. ಮರುದಿನ ತುಂಗಭದ್ರೆಯ ಪ್ರೇಮ ವಿದ್ಯಾಪೀಠದಲ್ಲಿ ಉಳಿದು ಆತ್ರಮದ ಭಜನಾ ಕೂಟದಲ್ಲಿ ಭಾಗವಹಿಸಿದರು. 'ಸುಭದ್ರಾ ಕಲ್ಯಾಣ'ದ ಶ್ರೀ ಕೃಷ್ಣ ಬಲರಾಮರ ಸಂವಾದವೂ ನಡೆಯಿತು. ಬಿಜಾಪುರ, ಯಸ್ತಿ, ಧಾರವಾಡಗಳ ಕಾರ್ಯಕ್ರಮ ಮುಗಿಸಿಕೊಂಡು ತಾ 11ಕ್ಕೆ ಮಂಗಳೂರಿಗೆ ಹೊರಡುವರು.

ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ ಮಣಿಪಾಲ-ಇದೇ ತಾ 28 ರಲ್ಲಿ ಸಾಯಂ ಘಂಟೆ 5ಕ್ಕೆ ಇಲ್ಲಿ ನಡೆಯುವ ಅಖಿಲ ಭಾರತ ಆಯುರ್ವೇದ ಮಹಾ ಸಮ್ಮೇಲನದ ಸಮಯ ಯೋಗ ವ್ಯಾಯಾಮ ಸಂಘಾಶಾ ಪರಿಷತ್ತು ಜರಗಲಿದೆ. ಅಖಿಲ ಕರ್ನಾಟಕದಲ್ಲಿಯ ವ್ಯಾಯಾಮ ವಿಶಾರದರು, ಯೋಗಾಭ್ಯಾಸಿಗಳು ತಮ್ಮ ಅನುಪಮ ಪ್ರದರ್ಶನಗಳನ್ನು ತೋರಿಸಿ ಜನತಾ ಸೇವೆ ಮಾಡಲಿಚ್ಛಿಸುವವರು ಮುಂದಾಗಿ ತಿಳಿಸಿದಲ್ಲಿ ತಕ್ಕ ವಿಚಾರ ಮಾಡಲಾಗುವುದು, ಅವರವರ ಪಾಂಡಿತ್ಯಕ್ಕನುಗುಣವಾಗಿ ಪ್ರಶಸ್ತಿ ಪತ್ರ, ಬಹುಮಾನ, ಪೆದಲುಗಳ ವ್ಯವಸ್ಥೆ ಮಾಡಲಾಗಿದೆ ಎಂದು ಜತೆ ಕಾರ್ಯದರ್ಶಿಗಳಾದ ಶ್ರೀ. ಯು. ಎ. ಪೈಗಳು ತಿಳಿಸುತ್ತಾರೆ.

ನೀತಾನೆ-ಇಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಜಾತ್ರೆಯು ಈ ವರ್ಷ ತಾ 15ರಿಂದ 26ರ ತನಕ ಜರಗುವುದು. ತಾ 23ಕ್ಕೆ ಪಾಠೋಪಕರಣ ವಿತರಣೆ ಸಮಾರಂಭವಿದೆ.

ಬ್ರಹ್ಮಾವರ-ತಾ 15-9-1945ಲ್ಲಿ ಬ್ರಹ್ಮಾವರದ ಸ್ಥಳೀಯ ಮಹನೀಯರ ಮಹಾ ಸಭೆಯು ಡಾಕ್ಟರ್ ಶ್ರೀ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಬ್ರಹ್ಮಾವರದಲ್ಲಿ ಒಂದು ಹ್ಯಾಸ್ಕೂಲನ್ನು ತೆರೆಯಬೇಕಾಗಿ ಸರ್ವಾನುಮತದಿಂದ ನಿರ್ಣಯವಾಯಿತು. ಆ ಕ್ಷಣ ಮಹಾಶಯರು ರೂ. 25,000ದ ಭಂಡವಾಳವನ್ನು ಸ್ಥಳೀಯ [illegible] ಮಣಿಪಾಲ ಎಕೇಡಮಿಯಿಂದ ಹ್ಯಾಸ್ಕೂಲನ್ನು ತೆರೆಯುವುದಾಗಿ ಆಶ್ವಾಸನೆಯನ್ನಿತ್ತರು. ಮುಂದೆ ಧನ ಸಂಗ್ರಹದ ಬಗ್ಗೆ ರಚನೆಯಾದ ಕಾರ್ಯಕಾರಿ ಸಮಿತಿಯು ತಾ25-11-45 ರಿಂದ ಧನ ಸಂಗ್ರಹಯದ ಕಾರ್ಯವನ್ನಾರಂಭಿಸಿರುತ್ತದೆ. ರೂ. 8000/ರಷ್ಟು ವಾಗ್ದಾನವಾಗಿದೆ.

ಕುಂದಾಪುರ-ಕಳೆದ ತಾರೀಕು 3ರಂದು ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟರು ಮತ್ತು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರರು, ಇಲ್ಲಿಯ ಪೋಲೀಸರು ನಾಗರಿಕರಿಗೂ ವಿದ್ಯಾರ್ಥಿಗಳಿಗೂ ಮಾಡಿದ ಅನ್ಯಾಯ ಅಪಮಾನಗಳ ಕುರಿತು ವಿಚಾರಣೆ ನಡಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜತೆ ಕಾರ್ಯದರ್ಶಿ, ಶ್ರೀ. ಬಿ. ಸುಬ್ಬಣ್ಣ ಶೆಟ್ಟರು ಹಾಜರಿದ್ದು ನಾಗರಿಕರಿಗೂ, ವಿದ್ಯಾರ್ಥಿಗಳಿಗೂ ಆದ ಅಪಮಾನದ ಕುರಿತು ಅಧಿಕಾರಿಗಳಿಗೆ ತಿಳಿಸಿದರು. ತಾ. 4 ರಂದು ನಾಗರಿಕರಲ್ಲಿ ಕೆಲವರು, ವಿದ್ಯಾರ್ಥಿಗಳಲ್ಲಿ ಕೆಲವರು, ಸ್ಪೇಷನಿಗೆ ಹೋಗಿ ತಮಗೆ ಆಪಮಾನ ಪಡಿಸಿದ ಪೋಲೀಸರನ್ನು ಅಧಿಕಾರಿಗಳಿಗೆ ಗುರುತಿಸಿದರು.

ಅಖಿಲ ಭಾರತ ಆಡಿಕೆ ಸಮ್ಮೇಳನ-ದಕಂಬರ ತಾ. 8 ಮತ್ತು 9ರಂದು ಶಿವಮೊಗ್ಗೆಯಲ್ಲಿ ಜರಗಲಿದೆಯಷ್ಟೆ. ಈ ಸಮ್ಮೇಲನದಲ್ಲಿ ಆಡಿಕೆಯ ಮೇಲಣ ಸುಂಕವನ್ನು ತೆಗೆದುಹಾಕುವಂತೆ ಒತ್ತಾಯಪಡಿಸುವ ಮತ್ತು ಭಾರತದಲ್ಲಿ ಬೆಳೆಯುವ ಆಡಿಕೆಗೆ ಹೆಚ್ಚು ಪ್ರೋತ್ಸಾಹ ಕೊಡುವುದರ ಸಲುವಾಗಿ ಭಾರತದ ಹೊರಗಿನಿಂದ ಬರುವ ಆಡಿಕೆಯ ಸೀಲೆ ತೆರಿಗೆಯನ್ನು ಹೆಚ್ಚಿಸುವಂತೆ ಒತ್ತಾಯಪಡಿಸುವ ಇತ್ಯಾದಿ ಉದ್ದೇಶಗಳನ್ನು ಸಾಧಿಸಲಾಗುವುದು.

ಬೊಂಬಾಯಿ

ಶ್ರೀ ಗಂಗಾ[illegible] ಸ್ಮಾರಕ ಫಂಡು, ಮಿತ್ರ ಪಟ್ಟಿ-ಇದರ ಸಹಾಯದಿಂದ ನಡೆಸಲ್ಪಡುವ ಸಾರ್ವಜನಿಕ ಧರ್ಮಾರ್ಥ ಹಿಂದೀ ರಾತ್ರಿ ಶಾಲೆಯ ಮತ್ತು ವಾಚನಾಲಯದ ಪ್ರಥಮ ವಾರ್ಷಿಕ ಸಭೆಯು ತಾ 2-12-45 ರಲ್ಲಿ ಶ್ರೀ. ಯಂ. ವಾಸುದೇವ ರಾವ್ ಯಂ. ಎ ಯಲ್.ಟಿ. ಆವರ ಅಧ್ಯಕ್ಷತೆಯಲ್ಲಿ ರಾತ್ರಿ ೮ಲಾ ೪ವರೆದಲ್ಲಿ ರಚಿಸಿದ ಭವ್ಯ ಮಂಟಪದಲ್ಲಿ ಜರುಗಿತು. ಮುಳ್ಕಲಕ್ಷ್ಮೀ ನಾರಾಯಣ ಪೈಯರ ಸ್ವಾಗತ ಭಾಷಣನಾದ ಬಳಿಕ ರಾತ್ರಿ ಶಾಲೆಯ ಪ್ರತಿ ವಿದ್ಯಾರ್ಥಿಗಳಿಗೆ ಸಂಘದಿಂದ ಕಯಾರಿಸಿದ ಅಂಗಿ, ಇಜಾರು, ಟೊಪ್ಪಿಗೆಗಳನ್ನು ಅಧ್ಯಕ್ಷರು ಸ್ವಪಸ್ತದಿಂದ ಹಂಚಿ ಕೊಟ್ಟರು. ಸ್ವಾಗತ ಭಾಷಣ, ಅಧ್ಯಕ್ಷ ಭಾಷಣಗಳ ಮೇಲೆ ಶ್ರೀ. ಬೊಮ್ಮಯ್ಯ ಕರ್ಕೇರರು 100/ರೂ. ಕೊಟ್ಟು ಪೋಷಕ ವರ್ಗಕ್ಕೆ ಸೇರಿದರು. ಶ್ರೀ ಬೋಳಾರು ಹರಿದಾಸ್ ನಾರಾಯಣ ಕರ್ನಿಕರಿಂದ 'ಮೀರಾಬಾಯಿ' ಹರಿಕಥೆ ನಡೆಯಿತು.

ಅಖಿಲ ಕರ್ನಾಟಕ ವಿಕೀಕರಣ-ಸನ್ಮೇಳನದ 10ನೆಯ ಅಧಿವೇಶನವು ಜನವರಿ ಮೂರನೆಯ ವಾರದಲ್ಲಿ ಬೊಂಬಯಿಯಲ್ಲಿ ಜರಗಲಿದೆಯಷ್ಟೆ. ಈ ಸಮ್ಮೇಳನದ ಉಪ್ಪಾಟಕರಾಗಲು ಸರ್ದಾರ್ ವಲ್ಲಭಭಾಯಿ ಪಟೇಲರು ಒಪ್ಪಿರುವರು. ಶ್ರೀ. ಸಿ. ರಾಜಗೋಪಾಲಾಚಾರಿ ಅವರನ್ನು ಅಧ್ಯಕ್ಷರಾಗಲು ವಿನಂತಿಸಿಕೊಳ್ಳಲಾಗಿದೆ.

AGAINST DIABETES
&
all its dreadful results
Consult Specialists:
Dr. Alvas' Research Institute, FAJIR
S. KANARA.

Notice

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

O. S. 361/1945.

ವಾದಿ ಸೌಕೂರು ಮೋನಪ್ಪ ಸೆಟ್ಟಿ.

ಮತ್ತು

ಪ್ರತಿವಾದಿಯು B. N. ರಾಮಚಂದ್ರಯ್ಯ ಸಹಾ.

ಸದ್ರಿ ದಾವೆಯಲ್ಲಿ 2ನೇ ಪ್ರತಿವಾದಿ B. N. ಪದ್ಮನಾಭಯ್ಯ ಮರ್ಚಂಟ್ ತುಮ್ಮೂರು ಮತ್ತು 4ನೇ ಪ್ರತಿವಾದಿ B. N. ಕುಪ್ಪಣ್ಣಯ್ಯ. P. W. D. ಕಂಟ್ರಾಕ್ಟರ್ ತುಮ್ಮೂರು ಕೂಡಾ ಎರಡು ಜನರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ-

ನೀವು ವಗೈರೇರ ಮೇಲೆ ಪಾದಿ ದಾಕ್ಲು ಮಾಡಿದ ಮೇಲಿನ ದಾವೆ ತಾ. 29-12-45 ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತನ್ಸಿಗೆ ಯಿತೋನಾಗಿದೆ ಎಂಬ ಸಂಸ್ತಿ ಈ ಮೂಲಕ ತಿಳಿಸೋನಾಗಿದೆ. ಆ ಪ್ರೇಪ ಯಿದ್ದರೆ ಜಾಹೀರು ಮಾಡಿಕೊಳ್ಳ ತಕ್ಕದ್ದು.

B. S. Shetty, B.A.B.L.
Vakil for Plaintiff.
Coondapoor

ಗ್ರಾಮಾಭಿವೃದ್ಧಿ ಕಾರ್ಯದ ಸಹಾಯಾರ್ಥವಾಗಿ
ಜಿಲ್ಲಾ ಮಾಜಿ ಸರ್ವೀಸ್‌ಮೆನ್ಸ್ ಅಸೋಸಿಯೇಶನಿನ ಆಶ್ರಯದಲ್ಲಿ
ಜರಗುವ

ಜಿಲ್ಲಾ ಪ್ರದರ್ಶನ, ಮುಲ್ಕಿ

ಕಾರ್ಯಕ್ರಮ.

21-12-45—ಬುಧವಾರ ಪೂರ್ವಾಹ್ನ ಘಂಟೆ 10ಕ್ಕೆ ಪ್ರದರ್ಶನದ ಉದ್ಘಾಟನೆ; ರಾ. ಬ. ಪಿ. ರಾಮದಾಸ್, ಬಿ. ಎ., ಜಿಲ್ಲಾ ಕಲೆಕ್ಟರ್‌ರಿಂದ. ಅಪರಾಹ್ನ ಘಂಟೆ 6ಕ್ಕೆ ತಾಳಮದ್ದಳೆ.

22-12-45—ಶನಿವಾರ ಅಪರಾಹ್ನ ಘಂಟೆ 3ಕ್ಕೆ ಮುಲ್ಕಿ ಕೊ.ಒಪರೇಟಿವ್ ಸ್ಟೋರ್ಸ್ ಲಿಮಿಟೆಡ್, ನಂಬ್ರ L440ರ ವರ್ಷಾವಧಿ ಮಹಾಸಭೆ. ಅಪರಾಹ್ನ ಘಂಟೆ 4ಕ್ಕೆ ಸ್ಪೋರ್ಟ್ಸ್ ಡೇ. ಅಧ್ಯಕ್ಷರು: ಶ್ರೀ. ಕೃಷ್ಣಪ್ಪ, ಎಮ್. ಎ., ಎಲ್. ಬಿ., ಅಪರಾಹ್ನ ಘಂಟೆ 8ಕ್ಕೆ ದಶಾವತಾರ ಆಟ. ರಾಮಂರಾಜ್ಯ: ಕಟ್ಟೀಲು ದೇವಸ್ಥಾನ ಮೇಳದವರು. ಈ ಎರಡು ದಿನಗಳಲ್ಲಿ ಪ್ರದರ್ಶನಕ್ಕೆ ನಾಲ್ಕಾಣೆ ಟಿಕೇಟುಗಳ ಮೂಲಕ ಪ್ರವೇಶ.

23-12-45—ಆದಿತ್ಯವಾರ ಪೂರ್ವಾಹ್ನ ಘಂಟೆ 8 ರಿಂದ 12 ರ ವರೆಗೆ: VIನೇ ನೇ ವರ್ಗ ವ 1ನೇ ಥಾರ್ಮಸ್ ಮೇಲ್ಪಟ್ಟ ತರಗತಿಯ ಮುಕ್ಕಳು ಆಯಾ ಶಾಲೆಯ ಮುಖ್ಯೋಪಾಧ್ಯಾಯರ ಕಾನೂ ಪಡೆದು ತಂಡವಾಗಿ ಬಂದಲ್ಲಿ ಫ್ರೀಯಾಗಿ ಪ್ರದರ್ಶನಕ್ಕೆ ಬಿಡಲ್ಪಡುವರು. ಟೋಸರ್ ಎಲಿಮೆಂಟರಿ ಶಾಲೆಯವರು ಕೆಳಗಿನ ವಿಳಾಸಕ್ಕೆ ಬರೆದು ಅವರ ಒಪ್ಪಿಗೆ ಪಡಕೊಂಡಲ್ಲಿ ಶಾಲಾ ಮಕ್ಕಳನ್ನು ಫ್ರೀಯಾಗಿ ಪ್ರದರ್ಶನಕ್ಕೆ ಬಿಡಬಹುದು. ಅಪರಾಹ್ನ ಘಂಟೆ 3ರಿಂದ 5ರ ವರೆಗೆ ಮಹಿಳೆಯರ ಕೂಟ. ಫ್ರೀಯಾಗಿ ಪ್ರದರ್ಶನಕ್ಕೆ ಬಿಡಲ್ಪಡುವರು. ಅಪರಾಹ್ನ ಘಂಟೆ 4ಕ್ಕೆ, ಗ್ರಾಮಾಭಿವೃದ್ಧಿ ದಿವಸ: —ಗ್ರಾಮಸ್ಥರಿಗೆ ಪ್ರಯೋಜನಕರವಾದ ಚಿಕ್ಕ ಭಾಷಣಗಳು ಮತ್ತು ಇನಾಮು ಹಂಚೋಣ. ಈ ಸಭೆಗೆ ಮಹಿಳೆಯರಿಗೆ ಸುಸ್ವಾಗತವಿರುವುದು. ಅಧ್ಯಕ್ಷರು: ರಾವ್ ಬಹದ್ದೂರ್ ಕೆ. ಬಿ. ಅಳ್ವ, ರಿಟಾಯರ್ಡ್ ಡಿಪ್ಯುಟಿ ಜೈಲರ್, ಆಫ್ ಎಗ್ರಿಕಲ್ಚರಲ್, ಪ್ರೆಸಿಡೆಂಟ್, ಬಂಟರ ಯಾನೆ ನಾಡವರ ಸಂಘ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಎಲ್ಲರೂ ಬಂದು ಭಾಗಿಗಳಾಗುವುದು ಗ್ರಾಮಾಭಿವೃದ್ಧಿ ಕಾರ್ಯಕ್ಕೆ ಉತ್ತೇಜನಕರವಾಗುವುದು.

ಬರಲು ಆನಾನುಕೂಲವಾಗುವಲ್ಲಿ ಸಂದೇಶ ವ ಪಂತಿಗೆಗಳು ಸ್ವೀಕಾರವಿರುವುದು.

ಮುಲ್ಕಿ,
ತಾ. 5-12-45 } ಎಮ್. ಆರ್. ಪ್ರೊಂಜ,
ಸಕ್ರೆಟರಿ, ಗ್ರಾಮಾಭಿವೃದ್ಧಿ ಕಮಿಟಿ, ಮುಲ್ಕಿ.

ವಿ. ಸೂ.-ಪ್ರದರ್ಶನವು ಎಲ್ಲಾ ದಿವಸಗಳಲ್ಲಿಯೂ ಅಪರಾಹ್ನ ಘಂಟೆ 5-30ರ ತನಕ ತೆರೆದಿಡಲ್ಪಡುವುದು. ಘಂಟೆ 12 ರಿಂದ 2ರ ತನಕ ವಿರಾಮ.

The Pangal Nayak Bank Limited.

(Incorporated in 1920.)
Registered Office Court Road, UDIPI.
Branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ತೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಗು ಅಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಕ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ತಿ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂದಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೯ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಹಾವಣಗೇರಿ:ಹಾವಣಗೇರಿವೈನ್ಸ್. ಪತ್ರವ್ಯವಹಾರ ಮಾಡತಕ್ಕ ವಿಳಾಸ.

ದೇವಣಸಿದ್ದಪ್ಪ ಹಾಲಪ್ಪ ಹಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.
Ayurveda Oushadalaya, GADAG.

ಕಳೆದ 3—4 ವಾರಗಳಿಂದ ಸ್ವಾಗತ ಕಮಿಟಿಯವರ ಅನಿಶ್ಚಾಂತ ಪರಿಶ್ರಮದಿಂದ ಸರಕಾರಿ ಆಸ್ಪತ್ರೆಯ ಬಳಿಯಲ್ಲಿರುವ ವಿಶಾಲ ಮೈದಾನದಲ್ಲಿ ವಿಶೇಷ ಸಂಭ್ರಮದಿಂದ ಹೋಲಿನ ಸಮ್ಮೇಲನದ ಏರ್ಪಾಡುಗಳು ನಡಿಯುತ್ತಿದ್ದವು. ದೊಡ್ಡ ಮನೆ ಸಂಕು ಶೆಟ್ರು ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದರು. ಸ್ವಾಗತ ಕಮಿಟಿಯ ಕಾರ್ಯದರ್ಶಿ ಬಿ. ಕೃಷ್ಣಯ್ಯ ಹೆಗ್ಡೆರವರ ನೇತೃತ್ವದಲ್ಲಿ ಸಭಾ ಮಂಟಪವು ತಳಿರು ತೋರಣಗಳಿಂದ ಕಂಗೊಳಿಸುತ್ತಿತ್ತು.

ಕಾರ್ಯಕ್ರಮದಂತೆ ನಿನ್ನೆ ಪ್ರಾತಃಕಾಲ 6-30ಕ್ಕೆ ಸರಿಯಾಗಿ ನಿರೀಕ್ಷಿತ ಅಧ್ಯಕ್ಷರಾದ ಶ್ರೀ. ಬೀದಿನ ಮಂಜಪ್ಪ ಭಂಡಾರಿಗಳ ಕಾರು ಕಡವಿನ ಬಳಿ ಬಂದೇ ಬಂತು. ಸ್ವಾಗತ ಕಮಿಟಿಯವರೂ ಇತರ ತಾಲೂಕುಗಳಿಂದ ಚಿತ್ತೈಸಿದ ಪ್ರತಿನಿಧಿಗಳೂ ಸಮ್ಮೇಲನಾಧ್ಯಕ್ಷರನ್ನು ಎದುರ್ಗೊಂಡು ತೋರಣಗಳಿಂದ ಅಲಂಕರಿಸಿದ ಪಟ್ಟಣದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಬಂದು ಘಂಟೆ 10ಕ್ಕೆ ಸರಿಯಾಗಿ ಸಭಾ ಮಂಟಪವನ್ನು ಪ್ರವೇಶಿಸಲಾಯಿತು.

ಸಭಾ ಮಂಟಪದ ಮಗ್ಗುಲಲ್ಲಿ ಉತ್ತಮೋತ್ತರದ ಓಟದ ಕೋಣಗಳ, ಛಲೋ ಗಾಡಿ ಎತ್ತುಗಳ, ಒಳ್ಳೇ ನಮೂನೆಯ ಆಂಕದ ಕೋಳಿಗಳ ಪ್ರದರ್ಶನದ ಏರ್ಪಾಡೂ ಯಶಸ್ವಿಯಾಗಿ ನಡೆದಿತ್ತು.

ಈ ಸಮಾರಂಭಕ್ಕೆ ಇಡೀ ಜಿಲ್ಲೆಯಿಂದ ಆಳಿಯಕಟ್ಟಿನ ಎಲ್ಲಾ ಜಾತಿಯ 150ಕ್ಕೆ ಸಿಕ್ಕಿದ ಪ್ರತಿನಿಧಿಗಳು ನೆರೆದಿದ್ದರು. ಪ್ರೇಕ್ಷಕ ವೃಂದದಿಂದ ಜಪ್ಪರವು ಕಿಕ್ಕಿರಿದಿತ್ತು.

ಘಂಟೆ 11ಕ್ಕೆ ಉಪಹಾರಾನಂತರ ಸಮ್ಮೇಲನದ ಮುಂದಿನ ತರಬಹುದಾದ ವಿಷಯಗಳ ಕುರಿತು ಚರ್ಚಿಸಿ ಅವಶ್ಯಕ್ಕಳ್ಳ ಕಾರ್ಯಕ್ರಮವನ್ನು ರಚಿಸಲಾಯಿತು.

ಮಧ್ಯಾಹ್ನ ಭೋಜನಾನಂತರ ಘಂಟೆ 3ಕ್ಕೆ ಸರಿಯಾಗಿ ದೇವರ ಪ್ರಾರ್ಥನೆಯಿಂದ ಸಮ್ಮೇಲನದ ಕಾರ್ಯಪ್ರ ಸ್ಥಾರಂಭವಾಯಿತು. ಸಮ್ಮೇಲನದ ಅಧ್ಯಕ್ಷರಾದ ಶ್ರೀ. ಮಂಜಪ್ಪ ಭಂಡಾರಿಗಳು [ಆಗ್ರಾಸನವನ್ನಲಂಕರಿ

ಅಖಿಲ ಅಳಿಯ ಸಂತಾನ ಕುಟುಂಬಗಳ ಆಡಳಿತೆದಾರರ ಪ್ರಥಮ ಸಮ್ಮೇಲನ,

ಬಾರಕೂರು.

(ಕಾಲ್ಪನಿಕ)

ಸಿದ ನಂತರ ಸ್ವಾಗತಾಧ್ಯಕ್ಷರಾದ ಶ್ರೀ. ಸಂಕು ಶೆಟ್ರು ತಮ್ಮ ಭಾಷಣವನ್ನು ಓದಿ ಹೇಳಿದರು.

ಮಾನ್ಯ ಅಧ್ಯಕ್ಷರೇ! ಸಭ್ಯ ಬಂಧು ಭಗಿನಿಯರೇ! ನಮ್ಮ ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ ಈ ಸಮ್ಮೇಲನಕ್ಕೆ ದಯಮಾಡಿ ಬಂದಿರುವ ಅತಿಥಿಗಳನ್ನು ಸ್ವಾಗತಿಸುವದು ನನ್ನ ಪಾಲಿಗೆ ಸೇರಿದೆ. ನಾವೆಲ್ಲರೂ ಒಂದೇ ಕಟ್ಟಿಗೆ ಒಳಪಟ್ಟವರು. ಆದುದರಿಂದ ನಾನೆಲ್ಲರೂ ಒಂದೇ ಬಳಗದವರು ಮತ್ತು ಒಂದೇ ಕಟ್ಟಿನ ಬಂಧುಗಳು. ಜಿಲ್ಲೆಯಲ್ಲೆಲ್ಲೆಯಲ್ಲೂ ಚದರಿರುವ ತಮ್ಮೆಲ್ಲರನ್ನು ಇಂದು ಈ ಸಮಾರಂಭದಲ್ಲಿ ಸ್ವಾಗತಿಸಿ ಒಂದೆಡೆ ನೋಡುವ ಭಾಗ್ಯವನ್ನು ದೇವರೇ ಕರುಣಿಸಿದ್ದಾಗಿರುತ್ತದೆ.

ಇಂದಿನ ಈ ಸಮ್ಮೇಲನವನ್ನು ಜರಗಿಸಿದ ಕಾರಣವು ತಮ್ಮೆಲ್ಲರಿಗೆ ತಿಳಿದೇ ಇದೆ. ನಾವು ನಮ್ಮ ಹಿರಿಯರ ತಲತಲಾಂತರಗಳಿಂದ ಆಚರಿಸಿಕೊಂಡು ಬಂದ ಅಳಿಯಕಟ್ಟು ಈಗ ಅಳಿಯ ಹೋಗುವ ಕಾಲ ಸನ್ನಿಹಿತವಾಗಿದೆ. ಕುಟುಂಬದ ಕಲಹಗಳಿಂತೂ ಈಗ ಪರಮಾವಧಿಗೆ ಮುಟ್ಟಿವೆ. ಆಳಿಯ ಸಂತಾನದ ಕುಟುಂಬಗಳಲ್ಲಿ ಸುಖ ಶಾಂತಿ ನೆಮ್ಮದಿ ಬಿಂಬುದು ಕನಸಿನಲ್ಲೂ ಸಿಗದಂತಾಗಿದೆ. ಜಿಲ್ಲೆಯ ಯಾವ ಭಾಗದಲ್ಲಿ ನೋಡಿದರೂ ಕುಟುಂಬದೊಳಗೆ ಕಲಹ, ದರೋಡೆ, ಖೂನಿ ಸಹಾ ನಡಿಯುತ್ತಿರುವುದು ಸದಾ ಕೇಳುತ್ತಿರುತ್ತೇವೆ.

ನಮ್ಮ ಜಿಲ್ಲೆಯ ಯಾವ ಶಿವಿಲ್ ಕೋರ್ಟ್ ನಲ್ಲಿ ನೋಡಿದರೂ ಆಳಿಯ ಸಂತಾನ ಕುಟುಂಬದ ಆಸ್ತಿನಾರ್ಥ ದಾವೆಗಳು ಒಂದರ ಮೇಲೊಂದು ದಾಖಲಾಗುತ್ತಿರುತ್ತವೆ. ಆದರಿಂದಾಗಿ ಆಳಿಯ ಕಟ್ಟಿನ ಸಂಪತ್ತು ಸೂರೆಯಾಗ ಹತ್ತಿದೆ. ಯಾವ ಕುಟುಂಬದಲ್ಲಿಯಾ ನೀತಿಗೆ ನ್ಯಾಯಕ್ಕೆ ಹಾಗೂ ಪಂಚಾತಿಕೆಯ ತೀರ್ಮಾನಗಳಿಗೆ ಬಾರದೆ ಕೋರ್ಟಗೇನೇ ಹೊಡುವುದನ್ನು ನೋಡಿದರೆ ನಿಷಾದವೆನಿಸುತ್ತದೆ.

ಇಂಥ ಅಶನಾರ್ಥ ದಾವೆಗಳಲ್ಲಿ ಸುರಿಕ್ಷಿತರೂ, ಬಡನ ಬಲ್ಲಿದರೂ ಕೋರ್ಟಿನಲ್ಲಿ ಬಿದ್ದು ನರಳುವುದು ನೋಡಿದರೆ ಆಳಿಯ ಸಂತಾನದ ಆಳಿಗಾಲದ ಕೊನೆಯ ಅಂಕವು ಸನ್ನಿಹಿಸಿದಂತೆ ತೋರುತ್ತದೆ.

ಆಳಿಯ ಸಂತಾನದ ಹಲವು ಕುಲೀನ ಕುಟುಂಬಗಳ ಆಡಳಿತೆಯು ಕೋರ್ಟು ರಿಸೀವರ ಕೈಸೇರಿದೆ. ಅವರ ಪುಟ್ಟುವಳ್ಳಿ ಪಸೂಲು ಮಾಡುವುದು, ತೀರ್ವೆ ಕೊಡುವುದು, ವಿನಿಯೋಗ ಮಾಡಿಸುವುದು, ಕಂಬಳ ಮಾಡಿಸುವುದು, ಮತ್ತು ಕುಟುಂಬದ ಹಿರಿಯರು ಮೃತವಾದರೆ ಅವರ ಉತ್ತರ ಕ್ರಿಯೆ ಸಹಾ ಕೋರ್ಟು ರಿಸೀವರೇ ನಡಿಸಬೇಕಾಗಿರುತ್ತದೆ.

ಮುಂದೆ ಇಂಥ ಅನರ್ಥಗಳು ಸಂಭವಿಸ ಬಹುದೆಂದು ನಮ್ಮ ಸಮಾಜದ ಮುಂದಾಳುಗಳೂ, ಸಮಾಜ ಸುಧಾರಕರೂ ಕೆಲವು ವರುಷಗಳ ಪೂರ್ವದಲ್ಲೇ ತಿಳಿದುಕೊಂಡು ನಮ್ಮ ಆಳಿಯ ಸಂತಾನ ಕಟ್ಟಿನಲ್ಲಿ ಅವಶ್ಯಕ್ಕಳ್ಳ ಸುಧಾರಣೆಯನ್ನು ತರುವುದಕ್ಕಾಗಿ ಒಂದು ಬಿಲ್ಲನ್ನು ತಯಾರಿಸಿ ಜನರ ಅಭಿಪ್ರಾಯ ತಿಳಿಯುವದಕ್ಕಾಗಿ ಒಂದು ಬಿಲ್ಲಿನ ಪ್ರತಿಗಳನ್ನು ಕಳುಹಿಸಲ್ಪಟ್ಟಿತು. ಆಗ ಆಳಿಯ ಸಂತಾನದ ಆಡಳಿತದಾರರಾದ ನಾವೆಲ್ಲರೂ ಸೇರಿ, ನಮಗೆ ಸುಧಾರಣೆ ಬೇಡ. ನಮ್ಮ ಹಳೆಯ ಕಟ್ಟು ಇದ್ದ ಹಾಗೆ ಇರಲಿ. ಅದನ್ನು ಮುಟ್ಟಬಾರದೆಂದು ಆಕಾಶ ಪಾತಾಳ ಒಂದಾಗುವಂತೆ ಕೂಗಿ ಕೊಂಡೆವು. ಮಾತ್ರವಲ್ಲ,ದೊರೆತನಕ ದೊರು ಎಂಬಂತೆ ಗವರ್ನರರ ಸಮಕ್ಷಸುದ ನರೆಗೂ ನಮ್ಮದೊಂದು ತಂಡ ಹೋಗಿ ಆ ಬೀಲು ಮುಂದೆ ಬಾರದಂತೆ ಮಾಡಿದೆವು. ಈ ಸಂಗತಿಯನ್ನು ಇಲ್ಲಿ ಹೇಳಲು ವ್ಯಸನವಾಗುತ್ತದೆ (ಚಪ್ಪಾಳೆ)

ಈಗೀಗ ಆಳಿಯ ಸಂತಾನ ಆಡಳಿತದಾರರ ಸರ್ವಾಧಿಕಾರತ್ವವು ಏನೂ ಸಾಗುವದಿಲ್ಲ. ಆಶನಾರ್ಥ ದಾವೆಗಳೆಂಬುದು ನಮ್ಮ ಮನೆತನಗಳಿಗೆ ಆಟಂ ಬಾಂಬಿನಂತೆ ಸರ್ವ ನಾಶಕ್ಕೆ ಕಾರಣವಾಗಿದೆ. ಹಲವು ಕುಟುಂಬಗಳಲ್ಲಿ ಶಿವಿಲ್ ದಾವೆಗಳಿಂದ ಹಣವು ನೀರಿನಂತೆ ವ್ಯಯವಾಗುವುದನ್ನು ನೋಡಿದರೆ ವ್ಯಸನವಾಗುತ್ತದೆ. ಉಳಿದ ಕೆಲವು ಕುಟುಂಬಗಳಲ್ಲಿ ಆಶನಾರ್ಥ ಕೊಡಬೇಕಾಗಿ ವಕೀಲ್ ರಿಜಿಸ್ಟ್ರಿ ನೋಟೀಸು ಬಂದಿರುತ್ತದೆ. ಮತ್ತೂ ಉಳಿದ ಅಲ್ಪ ಸ್ವಲ್ಪ ಮನೆಗಳಲ್ಲಿ ಇಂದೆಲ್ಲದಿದ್ದರೆ ನಾಳೆಯೇ ರಿಜಿಸ್ಟ್ರಿ ನೋಟೀಸು ಬರಬಹುದು. ಇದೊಂದು ಸಾಂಕ್ರಮಿಕ ರೋಗದಂತೆ ಆಳಿಯ ಕಟ್ಟಿನಲ್ಲಿ ಹರಡಿದೆ.

ಈಗ ನಮ್ಮಲ್ಲಿ ಮನೆ ಮಾಡಿಕೊಂಡಿರುವ ಅನರ್ಥ ಪರಂಪರೆಗಳಿಂದ ಪಾರಾಗುವುದಕ್ಕೆ ಹಾಗೂ ಮುಂದಿನ ಸುಗಮವಾದ ಮಾರ್ಗವನ್ನು ತೋರಿಸುವಂತೆ ತಮ್ಮೆಲ್ಲರನ್ನು ಕೇಳಿಕೊಳ್ಳುವುದೇ ಈ ಸಮ್ಮೇಲನದ ಮುಖ್ಯ ಉದ್ದೇಶವಾಗಿರುತ್ತದೆ.

ಇಲ್ಲಿ ನೆರೆದ ಹಿರಿಯರೂ, ಕಿರಿಯರೂ, ಸುಶಿಕ್ಷಿತರೂ, ಸಮಾಜ ಸುಧಾರಕರೂ ತಮ್ಮ ಅಮೂಲ್ಯ ಸೂಚನೆ ಸಲಹೆಗಳಿಂದ ನಮ್ಮ ಆಳಿಯ ಸಂತಾನದ ಮಹಾ ಮಹಾ ಮನೆತನಗಳು ಈಗ ಶಿಕ್ಕರುವ ಸಂಕಷ್ಟಗಳಿಂದ ಬಿಡುಗಡೆ ಹೊಂದಿ ಬಾಳಿ ಬದುಕುವಂತೆ ಉತ್ತಮವಾದ ಪಾದಿಯನ್ನು ತೋರಿಸಬೇಕೆಂದು ಪುನ: ಪ್ರಾರ್ಥಿಸಿ ನೈಮುಗಿದು ಬೇಡಿಕೊಳ್ಳುತ್ತೇನೆ. (ಚಪ್ಪಾಳೆ)

(ಮುಂದುವರಿಯುವುದು.)

ಬೊಂಬಾಯಿ.

ಪಾಠಶಾಲೆ ಮತ್ತು ಮಕ್ಕಳ್ಬಾಗ ಳ ವಿಕೀಕರಣ—ಭರತ ಖಂಡದಲ್ಲಿ ಭಾರತೀಯರ ವಿದ್ಯಾಭ್ಯಾಸ ಪ್ರಸಾರದ ಸಲುವಾಗಿ ಗ್ರಾಮ ಗ್ರಾಮಗಳಲ್ಲೂ ವಿದ್ಯಾಶಿಲಯಗಳು ಸ್ಥಾಪಿಸಲ್ಪಡುತ್ತಿವೆ ದೇವ ನಾಗರೀಲಿಪಿಯ ಪಾಠ ಶಾಲೆಗಳೂ ಮುಕ್ಕರ್ಜಿಗಳೂ ಶಕ್ತಿ ಮೀರಿ ಜನತೆಯಲ್ಲಿ ಆಕ್ಷರತೆಯ ಪ್ರಚಾರ ಕಾರ್ಯವನ್ನು ಮಾಡುತ್ತಿವೆ. ಆದರೆ ಇವುಗಳಲ್ಲಿ ಸಂಘಟನಾ ಶಕ್ತಿ ಬಿಲ್ಲ. ಈ ಪಾಠಶಾಲೆಗಳ ಆಧ್ಯಾಪಕರ ಸ್ಥಾನ ಮಾನಗಳು, ಹಕ್ಕು ಬಾಧ್ಯತೆಗಳೇ ಮೊದಲಾದುವನ್ನು ಕೇಳುವವರಿಲ್ಲವಾಗಿದೆ. ಆಪದೇಂದಲೇ ಅಖಿಲ ಭಾರತ ವಿದ್ಯಾ ಸಂಘವು ಸ್ಥಾಪಿಸಲ್ಪಟ್ಟಿದೆ. ಹಳ್ಳಿ ಪಳ್ಳಿಗಳ ಪಾಠಶಾಲೆಯವರು ತಂತಮ್ಮ ಸಂಘಗಳನ್ನು ಸ್ಥಾಪಿಸಿಕೊಂಡು ಕೇಂದ್ರ ಸಂಘದೊಡನೆ ಸಂಯೋಜಿಸಲ್ಪಡಬೇಕು. ಆಗತಾನೆ ಕೇಂದ್ರ ಸಂಘಕ್ಕೆ ಜೆಂಬಲ ದೊರೆತು ಅಧ್ಯಾಪಕರ ನ್ಯಾಯಪಾದ ಕೇಳಿಕೆಗಳನ್ನು ಸರಕಾರದ ಮುಂದಿಡಲು ಸಾಧ್ಯವಾಗುವುದು. ಶಿಕ್ಷೋನುಜೆ, ನಿವಾಸ್, ತೀರ್ಥ, ಆಚಾರ್ಯ, ಶಾಸ್ತ್ರಿ ಇತ್ಯಾದಿ ಪದವೀಧರರಿಗೆ ಮೆಟ್ರಿಕ್ ಪಾಸಾಪದವರೆಗೆಯೇ ಮತದಾನವೀಯಲು ಅಧಿಕಾರ ದೊರಕುವಂತೆ ಮಾಡುವುದೂ ಕೇಂದ್ರ ಸಂಘದ ಪ್ರಾಮುಖ್ಯ ಧ್ಯೇಯಗಳಲ್ಲೊಂದಾಗಿದೆ. ಇವೆಲ್ಲಾ ಧ್ಯೇಯಗಳು ಕಾರ್ಯತ ಪರಿಣಮಿಸಬೇಕಾದರೆ ಗ್ರಾಮ, ತಾಲೂಕು, ಜಿಲ್ಲಾ, ಪ್ರಾಂತ್ಯ ಹಾಗೂ ಕೇಂದ್ರ ಸಂಘಗಳ ಏಕೀಕರಣವಾಗಲೇಬೇಕು. ಇದರ ಸಲುವಾಗಿ ಪಾಠಶಾಲಾಧಿಕಾರಿಗಳು ಗಮನವೀಯಬೇಕು. ಹೆಚ್ಚಿನ ಮಾಹಿತಿಯನ್ನೇ ಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯ ಬಹುದು:-ಪಂಡಿತ. ಪಿ. ಎಲ್. ಶ್ಯಾಸುಛಾಗ, ಜತೆ ಕಾರ್ಯದರ್ಶಿ, ಪಾಠಶಾಲಾ ಮತ್ತು ಮಕ್ಕಜಾ ಶಾಖಾ, ಅಖಿಲ ಭಾರತ ವಿದ್ಯಾ ಪರಿಷತ್ತು, ಫ್ಲಾಟ್ ನಂಬ್ರ 48, ಸಾಂತಾ ಕ್ರೂಜ್, ಈಸ್ಟ್, ಬೊಂಬಾಯಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ,ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರಿದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ಕುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾತುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಕೀಸ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉದ್ರೇಕ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ರಿ 1ರ 10-0-0, ½ ರಾತ್ರಿ 5-4-0, ¼ ರಾತ್ರಿ 2-12-0.

ಎಲ್ಲಾ ಸಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಕ್ಷಬೀದಿ ಹಂಬ್ರಿ, 10 ಮಂಗಳೂರು.

ಎಲ್ಲಾ ಸಮಾನೆಯ ಔಷಧಿಗಳಿಗೆ ದೊರೆಯ ಕ್ಕವೆ, ಇಲ್ಲಿ ಕಂಡ್ರಿ ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನ್ಸಿಲಾಗುವುದು.

(1) ಉಡುಪಿ ವಿಜಂಟರು:—ನವಭಾರತ ಬುಕ್ ಡಿಪೊ,
(2) ಬೊಂಬಾಯಿ: ವಿಜೆಂಟರು:- ಪೂರ್ಸ್ಟಲರ್ ಸ್ಟೋರ್ಸ್, ಕೆಪಿಸ್ಟ್ 183, ಪುರಾರಿಬಜಾರ್ ರೋಡ್, ಜೆ. ಎ. ಪಿ ರೈಲ್ವೆ, ವರ್ಲಿ ರೋಡ್ ಎದುರುಗಡೆ, ಪರೇಲ್. (3) ಆವರ್ಲ್ ಸ್ಟೋರ್ಸ್, ಕೆಪಿಸ್ಟ್, ಡಿ. ಪಿ. ಪಿ. ಮೋಟಿಂಗಾ.

ಸೂಚನೆ

ಕೊಲೆಕಾಡಿ ವಿದ್ಯಾಪ್ರಚಾರಿಣೀ ಪಾಠ ಶಾಲಾ

ಹಳೆ ವಿದ್ಯಾರ್ಥಿ ಸಂಘ.

" ಸಂಘೇ ಶಕ್ತಿ: ಕಲೌಯುಗೇ "

ಸಹೋದರ ಸಹೋದರಿಯರೇ!

ನಾವು ಅಡಿಮಿ ವಿದ್ಯಾರ್ಥಿಗಳು, [illegible] ನಮ್ಮ ಕೊಲೆಕಾಡಿ ವಿದ್ಯಾಪ್ರಚಾರಿಣೀ ಪಾಠ ಶಾಲೆಯಲ್ಲಿ ಹಳೆ ವಿದ್ಯಾರ್ಥಿ ಸಂಘವು—ಸ್ಥಾಪಕರು ರಕ್ಷಕರು, ಆಶ್ರಯದಾತರು ಪೋಷಕರು, ಹಿತಚಿಂತಕರು, ಸದಸ್ಯರು ಎಂಬೀ ಐದಾರು ತರಗತಿಯ ಮೆಂಬರ ಶ್ರೇಣಿಯಿಂದೈಕ್ಯವಾಗಿ,—ಒಕ್ಕಟ್ಟು, ಒಡಮಿದ್ಯಾರ್ಥಿಗಳ ವಿದ್ಯಾರ್ಜನೆಗೆ ಸಹಾಯ, ಪಾಠಶಾಲಾಭ್ಯುದಯಕ್ಕಾಗಿ ಪಾಠತೋಷಕ, ಉಚಿತ ವಾಚನಾಲಯ ಹಾಗೂ ಪುಸ್ತಕ ಭಂಡಾರ, ಲೇಖನ ಪತ್ರಿಕೆಗಳು, ಆಟಗಳು ಮತ್ತು ದಿನಾಚರಣೆ ಎಂಬ ಹಲವಾರು ಸದುದ್ದೇಶಗಳನ್ನು ನೆರವೇರಿಸಲು ಸ್ಥಾಪನೆಯಾಗಿರುವುದು. ಆದ ಪ್ರಯುಕ್ತ ಸ್ಥಳೀಯ, ಪರಸ್ಥಳೀಯ ಹಳೆ ವಿದ್ಯಾರ್ಥಿಗಳೂ ಮತ್ತು ವಿದ್ಯಾಭಿಮಾನಿಗಳೂ ಕೂಡಾ ಈ ಸಂಘದಲ್ಲಿ ಸದಸ್ಯರಾಗಿ ಗಳುಗಿ, ಸಂಘದ ಯಾವದಾದೊಂದು ತರಗತಿಯ ಮೆಂಬರರಾಗಿ ಸೇರಿ, ಉದಾರ ಮನಸ್ಸಿನಿಂದ ಯಾವ ರೂಪದಲ್ಲಾದರೂ ಸಂಘಕ್ಕೆ ಸಹಾಯವನ್ನು ತೆತ್ತು, ಸಂಘದ ಏಳಿಗೆಯನ್ನು ಹಾರೈಸಬೇಕಾಗಿ ಕೋರುವ,

ಟಿ. ಬಾಲಕೃಷ್ಣ ಶೆಟ್ಟಿ,
ಗೌರವ ಕಾರ್ಯದರ್ಶಿ.

(೨೦ ಪುಟದಿಂದ ಮುಂದುವರಿಯುವುದು)

ಹೆಡ್ಡು ಕಾಟು ಜನರಾಳುವಿನ ಮುರು ಸವಾಲು

ಸರಕಾರೀ ವಕೀಲ—ನೀನು ಬಿಡ್ ಕಟ್ಟುತಿದ್ದುದು ಮದನನಲ್ಲಿಯೆ?

ಸೇಸಿ—ಹೌದು.

ಸ. ವ—ಅವನಿಗೂ ನಿನಗೂ ಸ್ನೇಹಾಚಾರವಿರುವುದರಿಂದ ನಿನ್ನ ಹಣವನ್ನೆಲ್ಲಾ ಅವನೇ ಕಟ್ಟುತಿದ್ದ ಹೊರತು ನೀನು ಕೊಡುತ್ತಿರಲಿಲ್ಲ.

ಲಾಭಬಾಯಿ—ನಾನೀ ಪ್ರಶ್ನೆಯನ್ನು ಆಕ್ಷೇಪಿಸುತ್ತೇನೆ. ನನ್ನ ನುರಿತ ಮಿತ್ರಂದು ಕಲಿಸುವಿಕೆ ಹೊರತು ಪ್ರಶ್ನೆಯಲ್ಲ.

ಸ. ವ—ನಾನು ನಿನ್ನನ್ನು ಪ್ರಶ್ನಿಸುತಿದ್ದೇನೆ. ನೀನು ಕೊಡುವ ಬಿಡ್ ನಂಬ್ರದ ಚೀಟಿಯೊಂದಿಗೆ ಹಣವನ್ನೂ ಕೊಡುತಿದ್ದಿಯಾ? ಚೀಟಿಯನ್ನು ಮಾತ್ರ ಮದನನಿಗೆ ಕೊಡುತಿದ್ದಿಯಾ?

ಸೇಸಿ—ಚೀಟಿಯನ್ನು ಮಾತ್ರ ಕೊಡುತಿದ್ದೆ.

ಸ. ವ—ನೀನು ಕಟ್ಟಿದ ನಂಬ್ರ ಬಂದಾಗಲೆಲ್ಲಾ 'ವಿನ್' ಆದ ಹಣವನ್ನು ಮದನ ನಿನಗೆ ಕೊಡುವಿದ್ದ.

ಸೇಸಿ—ಹೌದು.

ಸ. ವ—ಹೀಗೆ ಬಿಡ್ ಕಟ್ಟಿ ಹೋದ ಹಣದ ನಷ್ಟ ನಿನಗಾಗುತಿದ್ದಿಲ್ಲ-ಅದು ಮದನನ ಜಾಲಿಗೆ ಬೀಳುತಿತ್ತು. ಆದರೆ ನಿನ್ನ ನಂಬ್ರ ಬಂದಾಗಲೆಲ್ಲಾ ಆದರ ಹಣ ನಿನಗೇನೇ ಸಿಗುತಿತ್ತು.

ಸೇಸಿ—ಹೌದು.

ಸ. ವ—ಇದರಿಂದ ನಿನಗೆ 4000 ರೂ ವಾಯಿ ಮುನಾಫೆ ಆಗಿರಬಹುದು.

ಸೇಸಿ—ಆಗಿರಬಹುದು

ಸ. ವ—ಹೀಗಾಗಿ, ಇತ್ತೀಚೆಗೆ ಮದನ ನಿನ್ನಿಂದ ನಾಲ್ಕು ಸಾವಿರ ರೂಪಾಯಿ ಕೊಂಡುಹೋಗಿದ್ದರೂ ನಿನ್ನೊಟ್ಟಿನೆ ಆರೇಳು ಸಾವಿರ ರೂಪಾಯಿ ಉಳಿತಾಯ ಇತ್ತು.

ಸೇಸಿ—ಹೌದು.

ಸ. ವ—ಅದೆಲ್ಲಾ ಹಣವಜಾ, ಸೈಗಾಳ, ಇಲ್ಲನ್ನುವವರ ಲಂಗಡಿಯಲ್ಲಿ ಕಳ್ಳ ವ್ಯಾಪಾರ ಮಾಡಿ ವಿಚಾರಯಿತು

ಸೇಸಿ—ಹೌದು.

ಸ. ವ—ಈಗ ನಿನ್ನ ತೂಕವೆಷ್ಟು?

ಸೇಸಿ—96 ಪೌಂಡು.

ಸ. ವ—ಇವರ ಅಂಗಡಿಯಲ್ಲಿ ವ್ಯಾಪಾರ ನಡಿಸುವ ಮೊದಲು?

ಸೇಸಿ—132 ಪೌಂಡು.

ಸ. ವ—ನಿನ್ನ ಗಂಡನಿದ್ದಾಗಿನ ತೂಕ?

ಸೇಸಿ—88 ಪೌಂಡು.

ಸ. ವ—ಸರಿ. ನೀನಿನ್ನು ಹೋಗಬಹುದು.

(ಕೋರ್ಟು ಸರಕಾರೀ ಪರವಾಗಿ ಇತರ ಸಾಕ್ಷಿಗಾರರ ವಿಚಾರಣೆ ಆನಂತ್ಯವೆಂದು ತೀರ್ಮಾನಿಸಿ ಮೂವರು ಆರೋಪಿಗಳ ಮೇಲೂ 'ಚಾರ್ಜ್ ಶೀಟ್' ಜಾಕೆದ ಮೇಲೆ ಡಿಫೆನ್ಸ್ ಸಾಕ್ಷಿಗಾರರನ್ನು ಕರೆಯಲಾಯಿತು).

೧೫ನೇ. ಡಿ. ಸಾಕ್ಷಿ, ಕಲ್ಲಿಟ್ಟರ್ ವಿ. ಕೆ. ಕನಿಳನ್ ಸಾಹೇಬನ ಹೇಳಿಕೆ

ದುಭಾಷಾಕಾಂದ ಮೋಸರೂ ಅವರ ಅನುಯಾಯಿಗಳಾದ ಹಣವಜಾ, ಸೈಗಾಳ ಇಲ್ಲನ್ನುವವರೂ ದೇಶೋದ್ಧಾರಕವಾದ ನುಷ್ಯ ಕಾರ್ಯಾದವು ಅಸಕ್ತಿ ತಲೆದೂರುವಾಗ ಅದಕ್ಕೆ ಸಹಾಯಕವಾದ ಸಹಾಯಿಗಳಲ್ಲಿ ನಿರತರಾಗಿದ್ದವರು. ಕೆಲವು ಸಾಮಾನ್ಯಗಳ ವ್ಯಾಪಾರ ನಡಿಸಲು ಸರಕಾರದ ಕ್ರಮಬದ್ಧ ಅಧಿಕಾರಿಗಳು ಅವರಿಗೆ ಲೈಸನ್ಸ್, ಪರ್ಮಿಟುಗಳನ್ನು ಕೊಟ್ಟಿದ್ದರು. ಅವರು ಸಾಮಾನು ಕೊಟ್ಟು ಗಿರಾಕಿಗಳಿಗೆಲ್ಲಾ ಬಿಲ್ಲು ಅಥವಾ ರಶೀದಿ ಕೊಡುವ ಕ್ರಮವಿಟ್ಟುಕೊಂಡಿದ್ದರು. ಅಕ್ಕಿ ವ್ಯಾಪಾರದ ಅಧಿಕಾರ ಅವರಿಗಿರಲಿಲ್ಲ; ಅವರು ಅಕ್ಕಿ ಮಾರುತಿದ್ದುದೂ ಇಲ್ಲ. ಆಯಾಯ ವಿಭಾಗಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಅವರ ಎಲ್ಲಾ ಪಹಿವಾಟುಗಳ ಕ್ರಮಬದ್ಧ ತನಿಖೆ ನಡಿಸಿ ಎಲ್ಲವೂ ಸರಿಯಿವೆ ಎಂದು ಆಗಾಗ ವರದಿ ಮಾಡಿದ್ದುದು ದಾಖಲೆಯಲ್ಲಿವೆ. ತಮ್ಮ ಪ್ರಾಮಾಣಿಕತೆ, ಔದಾರ್ಯಗಳಿಂದಾಗಿ ಈ ಕಂಪೆನಿಯವರಿಗೆ ಹಿಸ್ ಮೆಜೆಸ್ಟಿ ಸರಕಾರದ ಶಿಫಾರಸುಗಳೂ, ಬಹುಮಾನಗಳೂ ಕೊಡಲ್ಪಟ್ಟಿವೆ. ಕೆಲವನ್ನು ನನ್ನ ಸ್ವಹಸ್ತದಿಂದ ಕೊಟ್ಟಿದ್ದೇನೆ. ಅಂದಿನ ಆತಿಪ್ರಸರಣ ಯುಗದಲ್ಲಿ ದುಭಾಷ್ ಚಂದ ಎಂಡ್ ಕೋ.ರಿಂದ ಆಗಿರುವ ಆರ್ಥಿಕ ಸಹಾಯ ಮತ್ತು ವ್ಯವಸ್ಥೆಯು ಅತಿ ಹೆಚ್ಚಿನದೆನ್ನುತ್ತೇನೆ. ಇಂಥವರ ಸಹಾಯಬಲದಿಂದಲೇ ಹಿಸ್ ಮೆಜೆಸ್ಟಿ ಸರಕಾರಕ್ಕೆ ತನ್ನ ಯುದ್ಧ ಕಾರ್ಯಗಳನ್ನು ಮುಂದೊತ್ತಲು ಸಾಧ್ಯವಾಯಿತು; ಅದೇ ಸಮಯದಲ್ಲಿ ಹಣಗಳಿಸಿದ್ದವರ ಸ್ಥಿತಿಯ ವ್ಯವಸ್ಥೆ ಹೇಗಿರಬೇಕೆಂಬುದಕ್ಕೆ ಈ ಕಂಪೆನಿಯೊಂದು ಮಾದರಿಯಾಗಿಯೂ ಇತ್ತು. ಮತ್ತು ಹಲವರ ಹಣವು 'ಸೇವಿಂಗ್ಸ್' ವ್ಯವಸ್ಥೆಯಲ್ಲಿರುವಂತೆ ಮಾಡಿದ ಆಪತ್ಕಾಕ್ಷ ಸತ್ಕಾರ್ಯವೂ ಇವರದೇ ಎಂದು ನಾನು ಪ್ರಬಲವಾಗಿ ಹೇಳುತ್ತೇನೆ.

ಹೆಡ್ಡು ಕಾಟು ಜನರಾಳುವಿನ ಅಡ್ಡ ಸವಾಲು

ಸರಕಾರೀ ವಕೀಲ—ನೀವು ಈ ಜಿಲ್ಲೆಗೆ ಕಲ್ಲಿಟ್ಟರ್ ಆಗಿದ್ದಿರಿ, ಆಲ್ಲವೇ?

ಕಲ್ಲಿಟ್ಟರ್—ಹೌದು.

ಸ. ವ—ಜಿಲ್ಲಾ ಕಲ್ಲಿಟ್ಟರ್ ಆಗಿದ್ದ ನೀವು ಈ ರೀತಿ ದುಭಾಷ್ ಚಂದ್ ಎಂಡ್ ಕೋ. ದಂತಹ ಒಂದು ವ್ಯಾಪಾರೀ ಸಂಸ್ಥೆಯ ಏಕಟ ಪರಿಚಯವನ್ನು ಹೇಗೆ ಸಂಪಾದಿಸಿದಿರಿ?

ಕಲ್ಲಿಟ್ಟರ್—ಅವರು ಮೂರು ಲಕ್ಷ ರೂಪಾಯಿಕ್ಕೆ 'ಯುದ್ಧ ಸಹಾಯ' 'ವಾರ್ ಬೋಂಡ್' 'ಸೇವಿಂಗ್ಸ್ ಸರ್ಟಿಫಿಕೇಟು' ಇತ್ಯಾದಿಗಳಲ್ಲಿ ಹಣ ಹಾಕಿ ನನ್ನ ಲಕ್ಷ್ಯಕ್ಕೆ ತಂದಿದ್ದರು. ಯುದ್ಧ ನಿಧಿಕಾಗಿದ ಮೆಡ್ಲ್, ಸರ್ಟಿಫಿಕೇಟು ಇತ್ಯಾದಿಗಳನ್ನು ಅವರಿಗೆ ಕೊಡುವ ಸಂದರ್ಭವೂ ನನಗೆ ಆಗಾಗ ಬಂದಿದ್ದುದರಿಂದ.

ಸ. ವ—ಕಲ್ಲಿಟ್ಟವರೇ, ಆರೋಪೀ ಕಂಪೆನಿಯು ಅಂದಿನ ಸರಕಾರಕ್ಕುಂತಹ ಸಹಾಯ ಸಲ್ಲಿಸಿದ್ದಂತೆಯೇ ಸರಕಾರದ ಅಂಗವಾದ ನಿಮಗೂ ಸಹಾಯ ಮಾಡಿದ್ದಿತೆಂದು ನಾನು ಸೂಚಿಸಬಹುದೆ?

ಕಲ್ಲಿಟ್ಟರ್—ನಾನಿದನ್ನು ಪ್ರಬಲವಾಗಿ ಆಕ್ಷೇಪಿಸುತ್ತೇನೆ.

(ಮುಂದುವರಿಯುವುದು)

1000's SAVED
MARGARET'S
FITS CURE
Stops children's fits in 3 minutes.
Ask your chemist for a box.
Sole Agents:-
BRIGHTSTAR AGENCIES,
Hospital Rd., Udipi, S. K.

ಉಡುಪಿಯ 'ಕಿರಿಯರ ಪ್ರಪಂಚ'ದ
ನೋಡಿದರೆ ಬಿಡದಿರುವ ಪುಸ್ತಕಗಳು.

● ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳಿಂದ—

ಅನ್ನದೇವರು ಮತ್ತು ಇತರ ಕಥೆಗಳು ಬೆಲೆ ೧-೦-೦
ವಿಚಾರಕ್ರಾಂತಿಯನ್ನುಂಟುಮಾಡುವ ೧೪ ಸಣ್ಣ ಕತೆಗಳ ಸಂಗ್ರಹ.

● ಶ್ರೀ. ಕೆ. ವಿ. ಶೆಣೈ, ಬಿ. ಎ., ಎಲ್. ಟಿ. ಯವರಿಂದ—

ನಗೆನೋಟಗಳು ಬೆಲೆ ೨-೦೪-೦
ನಮ್ಮೆದ ಮನವನ್ನು ತಣಿಸಿ ವಿನೋದದೊಡನೆ ಏನೇಕವನ್ನೂ ಉಂಟು ಮಾಡುವ ೧೧ ಜೀವನ ಚಿತ್ರಗಳ ಸಂಗ್ರಹ.

● ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರಿಂದ—

ಮೂರು ಪ್ರಹಸನಗಳು ಬೆಲೆ ೦-೧೪-೦
ಓದಿದರೂ ಅಭಿನಯಿಸಿದರೂ ಸ್ವಾರಸ್ಯವಾಗಿ ತೋರುವ ನಗದವರನ್ನೂ ನಗಿಸುವ ಮೂರು ಪ್ರಹಸನಗಳ ಸಂಗಹ.

ಭಾರತೀಯ ಕತೆಗಳು ಬೆಲೆ ೦-೧೪-೦
ಶ್ರೀ ಎ.ಎಸ್. ಪಿ. ಐಯ್ಯರ್, ಎಂ. ಎ., ಐ. ಸಿ. ಯಸ್., ಇವರ Tales of Ind ಕಥಾವಳಿಯ ಅನುವಾದ.

ನಂದಾದೀಪ ಬೆಲೆ ೦-೧೦-೦
ಬೋಧಪ್ರದವಾದ ೧೧ ಸಾಮಾಜಿಕ ಕಥೆಗಳ ಸಂಗ್ರಹ.

● ಶ್ರೀ. ಕೆ ಕೆ. ಶೆಟ್ಟರಿಂದ—

ಪ್ರೇಮವಿಜಯ ಬೆಲೆ ೦-೧೫-೦
ಕ್ರಾಂತಿಕಾರಕ, ಹೃದ್ಯಾವಕ, ವಿಚಾರಪ್ರಚೋದಕ ನಾಟಕ.

ದೇಶಭಕ್ತ ಬೆಲೆ ೧-೪-೦
ರಾಜಕೀಯ ಸಾಮಾಜಿಕ ನಾಟಕ. ಹೊಸ ಪ್ರಯೋಗ.

ಸನ್ಯಾಸಿಯ ಸೋಗಿನಲ್ಲಿ ಬೆಲೆ ೦-೮-೦
ವೇಶ್ಯಾಪುತ್ರಿಯ ಜೀವನ ಚಿತ್ರವನ್ನೂ ಸನ್ಯಾಸಿಯ ಗುಟ್ಟನ್ನೂ ನಿರ್ದಾಕ್ಷಿಣ್ಯವಾಗಿ ಚಿತ್ರಿಸುವ ನವೀನ ಸಾಮಾಜಿಕ ಕಾದಂಬರಿ

ಪುರುಷ ವಧು ಬೆಲೆ ೦-೪-೦
ಮುದುಕನ ಮನುವೆಯ ಭ್ರಾಂತಿನಿರಸನಗೊಳಿಸುವ ಪ್ರಹಸನ.

ಹೆಂಡ್ತಿಗಂಡನಾದರೆ? ಬೆಲೆ ೦-೪-೦
ಮಾರ್ಮಿಕವಾಗಿ ಸ್ತ್ರೀಸ್ವಾತಂತ್ರ್ಯ ಪ್ರತಿವಾದಿಸುವ ಪ್ರಹಸನ.

ವ್ಯಭಿಚಾರಿಣಿ ಯಾರು? ಬೆಲೆ ೦-೧೨-೦
ಮಾನವಂತಪನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನು ಹೃದಯಭೇದಕವಾಗಿ ಚಿತ್ರಿಸುವ ಸಾಮಾಜಿಕ ನಾಟಕ.

ಮುಂದಿನ ದೇವರು ಬೆಲೆ ೧-೩-೦
ಹಿಂದಿನ, ಇಂದಿನ ಮತ್ತು ಮುಂದಿನ ಸಮಾಜವ್ಯವಸ್ಥೆಯನ್ನು ವಿಚಾರಪೂರ್ಣವಾಗಿ ಸೂಕ್ಷ್ಮವಾಗಿ ವಿವರಿಸುವ ಪ್ರಬಂಧ.

ಕುಶಲವ ಬೆಲೆ೧-೫-೦
ಶಿಕ್ಷಣ ಕ್ರಮವಲ್ಲಿ ಸುಧಾರಣೆ ಸೂಚಿಸುವ ನವ ಪೌರಾಣಿಕ ನಾಟಕ.

ಸಂಶಯಶಾಚಿ ಬೆಲೆ ೦-೮-೦
ಅಳಿಯಕಟ್ಟಿನ ಸದ್ಯದ ನಡವಳಿಕೆಯ ದುಷ್ಪರಿಣಾಮವನ್ನು ಚಿತ್ರಿಸಿ ಸಮಾಜದೇಳಿಗೆಯ ಮಾರ್ಗ ಸೂಚಿಸುವ ನಾಟಕ.

● ಶ್ರೀ. ಕೆ. ಹೊನ್ನಯ್ಯ ಶೆಟ್ಟರಿಂದ—

ಸ್ವತಂತ್ರ ಜೀವನೋಪಾಯ ಬೆಲೆ ೦-೩-೦
ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪ್ರಹಸನ.

ನಾಡಕತೆಗಳು (ವಿವಿಧ ಕತೆಗಾರರಿಂದ) ಬೆಲೆ ೦-೩-೦
ಸಮಾಜದ ನೈಜಚಿತ್ರಗಳನ್ನೊಳಗೊಂಡ ಕತಾಸಂಪ್ರಹ.

ಕಾವ್ಯ ಸಾಮ್ರಾಜ್ಯ (ವಿವಿಧ ಕವಿಗಳಿಂದ) ಬೆಲೆ ೧-೦-೦
ಕನ್ನಡ ಸಾಹಿತ್ಯಕ್ಕೆ ರತ್ನ ಪ್ರಾಯವಾದ ಆಧುನಿಕ ಕವಿತೆಗಳ ಸಂಗ್ರಹ

● ಶ್ರೀ. ಯಸ್. ವೆಂಕಟರಾಜರಿಂದ—

ರಂಗಭೂಮಿ ಬೆಲೆ ೦-೮-೦
ಆಪಾತ್ರರು 'ರಂಗಭೂಮಿ'ಯ ಸೇವೆಗೆ ಹೊರಟರೆ ಆಗುವ ದುಷ್ಪರಿಣಾಮವನ್ನು ತೋರಿಸುವ ವಿನೋದಪರ ನಾಟಕ.

ಆಕಾಶಗಂಗೆ ಬೆಲೆ ೧—೧೨—೦
೨೦ ಉತ್ತಮ ಕತೆಗಳ ಸಂಗ್ರಹ.

● ಶ್ರೀ. ಎಸ್. ಎಲ್. ಸುಬ್ರಹ್ಮಣ್ಯರಿಂದ—

ಸೇವಾಪಥ ಬೆಲೆ ೦-೮-೦
ಶೇಟ್ ಗೋವಿಂದದಾಸರ ಹಿಂದೀ ನಾಟಕದ ಅನುವಾದ. ಆಧುನಿಕ ರಾಜಕೀಯ ವಾತಾವರಣದಿಂದ ಕಲ್ಪಿತವಾದ ಸಾಮಾಜಿಕ ನಾಟಕ.

ನಾರೀ ಹೃದಯ (ಕಥಾ ಸಂಗ್ರಹ) ಬೆಲೆ ೦-೧೪-೦
ಸ್ವರ್ಗೀಯ ಪ್ರೇಮಮಂದಿರ ಧರ್ಮಪತ್ನಿ ಶ್ರೀಮತಿ ಶಿವರಾಣಿ ದೇವಿಯರ ನಾರೀ ಹೃದಯವನ್ನು ಸೂಚಿಸುವ ಹಿಂದೀ ಕತೆಗಳ ಅನುವಾದ

● ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರಿಂದ—

ಪ್ರಕಾಶ (ಅನುವಾದ) ಬೆಲೆ ೨-೦-೦
ಶೇಟ್ ಗೋವಿಂದ ದಾಸರ ರಾಜಕೀಯ ಸಾಮಾಜಿಕನಾಟಕ.

● ವಿವಿಧ ಕತೆಗಾರರಿಂದ—

ಮಧುವನ ಬೆಲೆ ೩-೦-೦
25 ಕತೆಗಳ ಅತ್ಯಪೂರ್ವ ಕತಾ ಸಂಗ್ರಹ.

● ಶ್ರೀ. ಎಂ. ವಿ. ಹೆಗ್ಡೆಯವರಿಂದ—

ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು ೦—೧೨—೦
ದಶಾವತಾರಗಳ ಕುರಿತು ಒಂದು ವಿಡಂಬನೆ.

ಪ್ರತಿಗಳಿಗೆ ಬರೆಯಿರಿ:— ಕಿರಿಯರ ಪ್ರಪಂಚ, ಉಡುಪಿ
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,

Sri Ramakrishna Buildings,
UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.
ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	...	...	0	6 0
2.	ಸಾಮುದ್ರಿಕ ಶಾಸ್ತ್ರ	....	...	0	8 0
3.	ಬಾಲ ರಾಮಾಯಣ	....	....	0	5 0
4.	ಸುಕನಾ ಚರಿತ್ರೆ	....	....	0	5 0
5.	ಕೊಳಲು ಕೃಷ್ಣ	....	....	0	8 0
6.	ಗುರುಪೀಠಗಳ ಅವನತಿ	....	....	0	8 0
7.	ಪ್ರೇತಮತ ಖಂಡನೆ	....	....	0	6 0
8.	ಧರ್ಮಸಂಕಟ	....	....	0	4 0
9.	ಪೂರೂರವ	....	....	0	8 0
10.	ಸಿಶ್ಚಯ ಜ್ಞಾನ	...	...	0	8 0
11.	ವಿದ್ಯಾರಣ್ಯ ಕಾವ್ಯಂ	....	....	1	0 0
12.	ಚಂದ್ರಗುಪ್ತ ಚಕ್ರವರ್ತಿ	....	....	1	0 0
13.	ಸ್ವದೇಶಿ	....	....	0	4 0
14.	ಹರಿಜನ ಸೇವೆ	....	....	0	4 0
15.	Gauthama the Buddha	....		0	8 0
16.	ಪ್ರಾರ್ಥನೆ	...	....	0	2 0
17.	ಹಿಂದೀ ಪಹಲಿ ಪೋತಿ	....	....	0	2 0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಸಾ ಪುರಾಣಗ್ರಂಥ)			0	4 0

ಹಿಂದುಸ್ಥಾನ್ ಪಬ್ಲಿಸಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

[illegible] ಪುಸ್ತಕಗಳು

ತುಳು ಸಾಹಿತ್ಯ1	....	....	1	0	0
ಕೃಷ್ಣರಾಜ ಪರ್ವಂಗೊ	....	....	1	0	0
ತುಳುವಾಲ ಬಲಿಯೇಂದ್ರ	....	....	0	4	0
ಅಳಿಯ ಸಂತಾನದ ಕಟ್ಟ್ಪದ ಗುಟ್ಟು		....	0	8	0
ಕಾನಿಗೆ	....	...	0	8	0
ತುಳು ವ್ಯಾಕರಣ	....	....	1	0	0
ಮದ್‌ಮಾಳತ್ತ್ ಸುದ್‌ಮಾಯೆ		....	0	4	0
ಜನಮರ್ಲ್	....	....	0	12	0
ತುಳು ಪದ್ಯಮಾಲಿಕೆ	....	....	0	2	0
ಬಂಗಾರ್ದಂಗಿದ ಕತೆ	....	....	0	2	0
ಮಿತ್ಯ ನಾರಾಯಣ ಕತೆ	....	....	0	1	0
ಸತೀ ಕಮಲೆ	....	....	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ. ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳಿಗನ್ನಡದ ತಿಳಿನುಡಿಯ ರಸಗಬ್ಬ
ಹಳಿಗನ್ನಡದ ಸುಂದರ ಕಾವ್ಯ
ಪೊನ್ನ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಸಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.

ಬೆಲೆ: **3—0—0**
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪಿ. ಎ. ಪೈ ಬ್ರದರ್ಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಸಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

RegdNo. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ

ಮಾದರಿಯ ಸಚಿತ್ರ

ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಪ್ರತಿ ಪ್ರತಿಗೆ ರೂ. 0—1—6



ವರ್ಷ 25] ಪ್ರತಿ ಗುರುವಾರ ಹೊರಡುವ ಸ್ಥಾನೀಯ ವಾರಪತ್ರಿಕೆ. [Vol. 25
ವಾರ 01] Founder: SRI A. B. SHETTY. [No. 16

ಉಡುಪಿ • 20—12—1945 • ಮಂಗಳೂರು.

ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಚಿಕೆ ರೂ.0—1—6.

ಅಮೃತಾಂಜನ.

ಕಲವೇದನೆ, ಶಿರೋ, ವೇದನೆ, ಉಳುಕು ಶ..ತ್ತಿಗೆ, ಘುಜ, ಸಲ್ಲು ವೇದನೆಗಳ [illegible] ಘಾಯಗಳು [illegible] ಕೊಲ್ಬುವುದು, ಬೇಗ. ವಿಷ ಮುಂತಾದ ಬೇನೆ ಪಕ್ಷವಾತ ಮೊದಲು ಮೊದಲಾದ ಎಲ್ಲ ರೋಗಗಳಿಗೂ ಸಿದ್ಧ.

REGD.

ಹಚ್ಚಿ, ಹುಳುಕಿದ್ದಿ ಮದ್ದು ಸಹ ನಮ್ಮಲ್ಲಿ ಸಿಗುತ್ತದೆ.

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

POLICYHOLDERS' OWN COMPANY.

Policy-holders are the sole owners of a Mutual Company; they alone share in the profits of the Company and "Canara Mutual" is such a Company. Its aim is to render the highest type of Life Assurance service to its Policy-holders. With such an aim, the Company has progressed on very sound lines and made a name in the Indian Insurance World. All this is owing to the co-operation of the public with the Company. "Canara Mutual" has also become a Synonym for "Prompt Settlement".

THE CANARA MUTUAL ASSURANCE COMPANY, LTD.,
(UDIPI, S. India.)

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?—ಇಲ್ಲ—

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಪುನುಷ್ಯರಿಂದ ಅಸಾಧ್ಯ; ಆದು

'ಜುಪಿಟರ್' ದೇವತೆಗಳ ರಾಜ) ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ

'ಜುಪಿಟರ್'ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ,ಏಜಂಟರು ಮತ್ತು ಓರ್ಗನೈಝುರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

1944ರ ಹೊಸ ವ್ಯವಹಾರವು 2½ ಕೋಟಿಗೂ ಮಿಕ್ಕಿದೆ.

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯರಿಂದೀ ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** 1910

ದಕ್ಷಿಣ ಭಾರತದ ಚೀಫ್ ಏಜಂಟರು.

ಕಳೆದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ಗಿರಾಕಿಗಳಿಗೆ ಲಾಭಕಾರಿಯಾಗುವಂತೆ ಪಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—53,00,000.

KOCHIKAR BROTHERS, LTD.
Central Office:—**UDIPI**, S. K.
Mangalore ○ Calicut ○ Bangalore ○ Madras ○ Madura ○ Trivandrum ○ Bombay

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for Diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂಡನಿರತಳ್ಳ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ಂದ 8ಬೊಟ್ಟು, ಸಣ್ಣಮಕ್ಕಳಿಗೆ 10ಂದ 2ಬೊಟ್ಟು ಲವಂಗ ಯಾ ಏಲಾಜಿ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹೆಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಥಾನಿಕರು:—ಡಾ। ನಾರಾಯಣ್ ಕೆನ್ಸ್‌ಲ್ಟಿಂಗ್ ರೂಮ್ಸ್, ಎಂಡಾ ಫಾರ್ಮಸಿ; ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಯ, ಫಾರ್ಮಸಿ; ಡಾ। ಕೆ। ಶೇಷ ಗಿರಿ ಪೈ, L I, M.; ಡಾ। ವೆಂಕಟರಾವ್, ಕೊರಂಗ್ರಪಾಡಿ; ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank

at

KANHANGAD

on 17-11-1945, by

Sri B. Appaswamy Chetty, B. A., R. D. O., Puttur.

A branch of the Bank will be opened at MERCARA shortly.

The Vijaya Bank Limited.
Head Office:— MANGALORE

ಉಡುಪಿ ಬೋರ್ಡಿಂಗ್

ಎಂಡ್

ಲೋಜಿಂಗ್ ಮಧುರಾ.

ತಾ. 28—8—45ರಲ್ಲಿ ಜರಗಿದ ಆರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಸಲ್ಲಿಸಲು ಮಹಾಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ಅಖಿಲ ಭಾರತ ಆಯುರ್ವೇದ ಸಮ್ಮೇಲನ

ಲೇಖಕರು:—
ಶ್ರೀ ಎಚ್. ಟಿ. ರಾಮಚಂದ್ರಾಚಾರ್ಯ, ಆಯುರ್ವೇದ ವಿದ್ವಾನ್,
ಹೆಜಮಾಡಿ, ದ. ಕ.

ಶ್ರೀ ಪರಮಾತ್ಮನನ್ನು ಸಾಧಾರಣ ಶಿಲ್ಪಿಯೆಂದೇಳಲಾಗದು. ಆತನು ಅಭೂತಪೂರ್ವ ಶಿಲ್ಪಿಯು. ಕಾರಣ ಪ್ರಪಂಚದಲ್ಲಿ ಹುಟ್ಟಿ ಬೆಳೆದಿರುವ ಈ ಮಾನವ ಸಮುದಾಯದಲ್ಲಿ ಒಬ್ಬನ ರೂಪವು ಇನ್ನೊಬ್ಬನ ರೂಪದಂತಿಲ್ಲ ಅತ್ಯಲ್ಪವಾದರೂ ಸರಿಯೆ; ಏನಾದ ರೊಂದಿಷ್ಟು ವ್ಯತ್ಯಾಸವು ಇದ್ದೇ ಇದೆ. ಇದರಿಂದ ಆ ಜಗತ್ಕರ್ತನ ಕೌಶಲ್ಯವನ್ನು ಬಾಯಿ ತುಂಬ ಹೊಗಳಿದರೂ ಅತಿಶಯೋಕ್ತಿಯಾಗದು. ಹೀಗೆ ಆತನಿಂದ ಸೃಷ್ಟಿಸಲ್ಪಟ್ಟ ಮಾನವ ಲೋಕದಲ್ಲಿ ಭಿನ್ನ ಭಿನ್ನ ರೂಪವು ಕಾಣಿಸಿಕೊಳ್ಳುವಂತೆಯೇ ವಿದ್ಯೆಬುದ್ಧಿಗಳಲ್ಲಿಯೂ ಒಂದಲ್ಲ ಒಂದು ಭೇದವು ಗೋಚರವಾಗುತ್ತಲೇ ಇದೆ. "ನಹಿ ಸರ್ವಃ ಸರ್ವಂಜಾನಾತಿ" ಎಂಬಂತೆ ಎಲ್ಲರೂ ಎಲ್ಲವನ್ನೂ ತಿಳಿದಿರಲಾರರು. ಒಬ್ಬನ ಬುದ್ಧಿಗೆ ಒಂದು ಭಾವವು ಸರಿಯೆಂದು ಹೊಳೆದರೆ ಅದೇ ಇನ್ನೊಬ್ಬನಿಗೆ ವಿಪರ್ಯಸ್ತವಾಗಿ ಪರಿಣಮಿಸುವುದು. ಇದು ಒಬ್ಬನೇ ಒಬ್ಬ ಸಾಮಾನ್ಯ ವ್ಯಕ್ತಿಯನ್ನುದ್ದೇಶಿಸಿ ಹೇಳುವ ಮಾತಲ್ಲ. ಶಾಸ್ತ್ರ ಪ್ರವರ್ತಕರು ಮೊದಲಾಗಿ ಪ್ರತಿಯೊಬ್ಬರಲ್ಲಿಯೂ ಭಾವಾಂತರಗಳು ಉದಿಸುತ್ತವೆ. ಜ್ಯೋತಿಶ್ಶಾಸ್ತ್ರವನ್ನೇ ತೆಗೆಸಲೇ? ವರಾಹಮಿಹಿರ, ಕಾಶ್ಯಪ, ವಿಶ್ವಾಮಿತ್ರ, ಯವನ, ಸತ್ಯಾಚಾರ್ಯ, ಗಾರ್ಗ್ಯ, ಮಾಧವಾಚಾರ್ಯ ಮೊದಲಾದವರು ತಮ್ಮ ತಮ್ಮ ಅಭಿಪ್ರಾಯ ಭೇದಗಳನ್ನು ವಿಶದೀಕರಿಸಿದ ಹಾಗೆ ತೋರಿಬರುತ್ತದೆ. ವ್ಯಾಕರಣವನ್ನು ಪರಿಗ್ರಹಿಸಲೇಗೆ? ಪಾಣಿನಿ, ವರರುಚಿ, ಪತಂಜಲಿ, ಗಾಲವ, ಶಾಕಟಾಯನ, ಭಾಕಲ್ಯ, ಸ್ಫೋಟಾಯನ ಮೊದಲಾದ ಮತಾಂತರಗಳು ತಲೆಯೆತ್ತಿ ಕಾಣುತ್ತಿವೆ. ಸ್ಮೃತಿಗಳಿಗೆ ಕೊರತೆಯಿಲ್ಲ? ವಸಿಷ್ಠ, ಪರಾಶರ, ಮನು, ಬೃಹಸ್ಪತಿ, ಯಾಜ್ಞವಲ್ಕ್ಯ, ದೇವಲ, ಅಂಗಿರಾ, ಅಪಸ್ತಂಭ, ಗೌತಮಾದಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ತೋರ್ಪಡಿಸಿರುವರು. ಹೀಗೆಯೇ ಇನ್ನುಳಿದ ಶಾಸ್ತ್ರಗಳಲ್ಲಿಯೂ ಅನೇಕರು ಅನೇಕಾಭಿಪ್ರಾಯಗಳನ್ನು ಸೂಚಿಸಿರುವರು. ತನ್ಮಧ್ಯೆ ಆಯುರ್ವೇದದಲ್ಲಿಯೂ ಸಹ ಮತಾಂತರಗಳಿಲ್ಲದಿಲ್ಲವೆಂದಿಲ್ಲ. ಇಷ್ಟೇ ಇತ್ಯು. ಉದಾಹರಣಾರ್ಥವಾಗಿ ಒಂದೆರಡು ಸಂದರ್ಭಗಳನ್ನಿಗ ನಿರೂಪಿಸುವೆನು.

ಉತ್ಪನ್ನವಾಗುವ ಗರ್ಭದಲ್ಲಿ ಪೃಥಮತಃ ಯಾವ ಅಂಗವು ಉದ್ಭವಿಸುವುದು? ಎಂಬ ವಿಷಯವಾಗಿ ಶೌನಕ, ಕೃತವೀರ್ಯ, ಪಾರಾಶರ್ಯ, ಮಾರ್ಕಂಡೇಯ, ಸುಭೂತಿ, ಗೌತಮ ಪ್ರಭೃತಿಗಳು ಒಂದೊಂದು ಅಭಿಪ್ರಾಯವನ್ನು ಮುಂದಿಟ್ಟು ಹಾಗೂ ಅವೆಲ್ಲವನ್ನೂ ಖಂಡಿಸಿ ಧನ್ವಂತರಿಯು ಸಿದ್ಧಾಂತವನ್ನು ಹೊರಗೆಡವಿದ ಹಾಗೂ ಸುಶ್ರುತ ಸಂಹಿತೆ (ಶಾರೀರ ಅಧ್ಯಾಯ ೩)ಯಲ್ಲಿ ಸ್ಪಷ್ಟವಾಗಿ ತೋರುತ್ತದೆ.

ಮನುಷ್ಯನ ಮತ್ತು ರೋಗಗಳ ಉತ್ಪತ್ತಿ ಹೇಗೆ? ಎಂಬುದನ್ನುದ್ದೇಶಿಸಿ ಕಾಶಿ ರಾಜನು ಪ್ರಶ್ನೆ ಮಾಡಿದ ಹಾಗೂ ಅದಕ್ಕೆ ಮೌದ್ಗಲ್ಯ, ಶರಲೋಮಾ, ವಾರ್ಯೋವಿದ, ಹಿರಣ್ಯಾಕ್ಷ, ಕುಶಿಕ, ಶೌನಕ, ಭದ್ರಕಾಶ್ಯ, ಭರದ್ವಾಜ, ಕಾಂಕಾಯನ, ಆತ್ರೇಯಾದಿಗಳು ತಮ್ಮ ತಮ್ಮ ಅಭಿಪ್ರಾಯವನ್ನು ಮುಂದಿಟ್ಟು ಸಾಧಿಸಿದ ಹಾಗೂ ಅವರೊಳಗೆ ವಾದ ವಿವಾದಗಳು ಬೆಳೆಯುತ್ತಿರಲು ಕೊನೆಗೆ ಪುನರ್ವಸು ಋಷಿಯು ತೀರ್ಮಾನಿಸಿದ ಹಾಗೂ ಚರಕ ಸಂಹಿತೆ (ಸೂತ್ರ ಅ. ೫೫)ಯಿಂದ ವ್ಯಕ್ತವಾಗುತ್ತದೆ.

ಚೈತ್ರ ರಥವನದಲ್ಲಿ ಅನೇಕ ಮಹರ್ಷಿಗಳು ಸಭೆ ಸೇರಿದ್ದರೆಂದೂ ಆ ಸಭೆಯಲ್ಲಿ "ರಸಗಳೆಷ್ಟು"? ಎಂಬುದಾಗಿ ಚರ್ಚೆಯಾಯಿತೆಂದೂ, ಕೊನೆಗೆ ಪುನರ್ವಸುವು—"ಆರೇ ರಸಗಳು" ಎಂದು ನಿರ್ಧಾರ ಮಾಡಿದನೆಂದೂ ಸಹ ಅದೇ ಚರಕ ಸಂಹಿತೆ (ಸೂತ್ರ. ಅ. ೨೬)ಯಲ್ಲಿ ವಿಶದೀಕರಿಸಲ್ಪಟ್ಟಿದೆ.

ಈ ಎಲ್ಲಾ ಸಂದರ್ಭಗಳನ್ನು ವಿಮರ್ಶಿಸುವಾಗ ಪೂರ್ವ ಕಾಲದಲ್ಲಿ ಸಹ ಬಹು ಮಂದಿ ವಿದ್ವಾಂಸರು ಏಕತ್ರ ಸಭೆ ಸೇರಿ ಒಬ್ಬ ಮಹನೀಯನ ಅಧ್ಯಕ್ಷತೆಯಲ್ಲಿ ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರೆಂಬುದು ಸ್ಪಷ್ಟವಾಗದೆ ಇರದು. ಇರಲಿ; ಇದು ಹಿಂದಿನ ವಿಚಾರವಾಯಿತು. ಪ್ರಸ್ತುತ ಕಾರ್ಯರಂಗಕ್ಕೀಗ ಇಳಿಯುವ.

ನಾವಂತೂ ಜ್ಞಾನಭೂಯಿಷ್ಠರಾದ ಅಂಥ ಮಹನೀಯರು ಲೋಕೋಪಕಾರದ ಸಲುವಾಗಿ ಬರೆದಿರುವ ಹಲವು ಗ್ರಂಥಗಳಿಂದ ಅಲ್ಪ ಸ್ವಲ್ಪ ಜ್ಞಾನವನ್ನು ಸಂಗ್ರಹಿಸಿದವರಾಗಿದ್ದೇವೆ. ನಮಗೆ ತಿಳಿಯದ ಅಥವಾ ಸಂದೇಹಾಸ್ಪದವಾದ ಅಥವಾ ವಿಪರ್ಯಸ್ತವಾಗಿ ಎಂದರೆ ಒಂದರ ಬದಲಿಗೆ ಇನ್ನೊಂದಾಗಿ ತಿಳಿಯಲ್ಪಟ್ಟರುವ ವಿಷಯಗಳೆಷ್ಟೋ ಇರಬಹುದು. ಇವೆಲ್ಲವೂ ಕೂಲಂಕುಷವಾಗಿ ನಿರ್ಧರಿಸಲ್ಪಡಬೇಕಾಗಿದ್ದರೆ ಅಪಾರ ವಿದ್ವದ್ವರ್ಗದ ಸಭೆಯನ್ನು ಕೂಡಿಸಿ ಚರ್ಚಿಸಿದ ವಿನಹ ಬೇರೆ ಮಾರ್ಗವಿಲ್ಲ. ಏತಾದೃಶ ಸಂದರ್ಭವೊಂದು ನಮ್ಮ ಕರ್ನಾಟಕಕ್ಕೆ ಆದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಗೆ, ಇನ್ನೂ ಸ್ಪಷ್ಟವಾಗಿ ನಾಮತಃ ನಿರ್ದೇಶಿಸುವುದಾದರೆ—ಶ್ರೀ ಕೃಷ್ಣನ ಸಾನ್ನಿಧ್ಯದಿಂದ ಪರಮ ಪವಿತ್ರವಾದ ಉಡುಪಿ ಪಟ್ಟಣದ ಉತ್ಸವಗರವಾದ ಮಣಿಪಾಲಕ್ಕೆ ಬಂದೊದಗಿದೆಯೆಂಬುದು ಬಹು ಸಂತೋಷ. ಮೂಡುತ್ತಿರುವ ಸೂರ್ಯನ ಎಳೆ ಬಿಸಿಲು ತಾಗಿ ಹೊಂಬಣ್ಣ ಬಳಿದು ಶಂಗೊಳಿಸುತ್ತಿರುವ ಉದಯಾಚಲದಂತೆ ಮಣಿಪಾಲವೆಂಬುದು ಈ ಮಹಾ ಸಭೆಯಿಂದ ಇನ್ನಷ್ಟು ಬೆಳಗಿ ಶೋಭಿಸಲೇ ಬೇಕು ಎಂಬುದೇನೂ ಅತ್ಯುಕ್ತಿಯಲ್ಲ.

ಇಂಥ ಮಹಾ ಸಭೆಯಲ್ಲಿ—ಪ್ರಸಿದ್ಧ ವಿದ್ವಾಂಸರ ಮುಖಗಳನ್ನು ನೋಡಿ ಆನಂದ ಪಡುವುದೊಂದು. ಅವರ ವಾಕ್ಚಾತುರ್ಯವನ್ನು ನೋಡಿ ಬೆರಗಾಗಿ ತಮ್ಮಲ್ಲಿರಬಹುದಾದ ಅಲ್ಪ ವಿದ್ವತ್ತ್ವದ ಮದವನ್ನು ತೊಲಗಿಸಿಕೊಳ್ಳುವುದಿನ್ನೊಂದು; ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿ ಉಳಿದವರ ಮೆಚ್ಚಿಗೆಗೆ ಪಾತ್ರವಾಗುವುದು ಮತ್ತೊಂದು; ಆಯುರ್ವೇದ ರಾಷ್ಟ್ರ ಸಭೆಯ ಅಂಗವಾಗಿ ಏರ್ಪಡಿಸಿರುವ ಪ್ರದರ್ಶನಾಲಯದಲ್ಲಿ—ಮಹಾ ಜನರ ಇದಿರಿಗೆ ವಿಸ್ತಾರವಾಗಿ ತೋರ್ಪಡಿಸಿರುವ ನೂರಾರು ಗಿಡಮೂಲಿಕಾ-ಖನಿಜ ದ್ರವ್ಯ-ಸಿದ್ಧೌಷಧ ಯೋಗ-ಪಂಚಕರ್ಮಾದಿಗಳ ಪ್ರತ್ಯಕ್ಷೀಕರಣ-ಯಂತ್ರ-ಶಸ್ತ್ರ-ಮುದ್ರಿತವಾದ ಆಧುನಿಕ ಪುಸ್ತಕ-ಸಂಶೋಧನೆಯಿಂದ ನಿರ್ಧರಿಸಲ್ಪಟ್ಟ ಪ್ರಯೋಗ—ಇವೇ ಮೊದಲಾದವುಗಳ ಅನೇಕ ಅನುಭವಗಳನ್ನು ಸಂಗ್ರಹಿಸಿ ತಮ್ಮ ಜ್ಞಾನ ಭಂಡಾರವನ್ನು ತುಂಬಿಸಿಕೊಳ್ಳುವುದು ಮಗದೊಂದು; ಇಂತು ಬಗೆ ಬಗೆಯ ಕಾರ್ಯಸಾಧನೆಗಳಿದ್ದರೂ ಇವೆಲ್ಲವುಗಳಿಗಿಂತಲೂ ಮಿಗಿಲಾದುದೇ "ತದ್ವಿದ್ಯ ಸಂಭಾಷಾ ಪರಿಷತ್" ಎಂಬುದು. ಇದನ್ನು ಚರಕ ಸಂಹಿತೆಯು—(ವಿಮಾನ ಸ್ಥಾನ ಅ. ೮. ವಾಕ್ಯ ೧೪) ಬಹಳವಾಗಿ ಪ್ರಶಂಸಿಸಿದೆ:- ಈ ಪರಿಷತ್ತಿನಲ್ಲಿ ಜ್ಞಾನಿಗಳು ಅನ್ಯೋನ್ಯ ಇದಿರಾಡುವುದರಿಂದ ಸಂತೋಷನವಾಗುವುದು. ಒಮ್ಮೆ ಕೇಳಿ ತಿಳಿದುಕೊಂಡಿದ್ದರೂ ಇನ್ನೂ ಸಂಶಯಪಡುತ್ತಿರುವವನಿಗೆ-ಪುನಃ ಕೇಳುವುದರಿಂದ ಅತನ ಸಂದೇಹವು ಅಳಿಯುವುದು. ಕೇಳಿ ತಿಳಿದು ನಿರ್ಧರಿಸಿಕೊಂಡಿದ್ದರೂ ಮತ್ತೂಮತ್ತೂ ಉತ್ಸಾಹವೇರುವುದು. ಆ ವರೆಗೆ ಕೇಳಿ ತಿಳಿಯದುವನ್ನು ಅಲ್ಲಿ ತಿಳಿದಂತಾಗುವುದು. ತನ್ನನ್ನು ಆಶ್ರಯಿಸುತ್ತಿರುವ ಶಿಷ್ಯನಿಗೆ ಗುರುವು—ರಹಸ್ಯವಾದ ಸಮ್ಮತವಾದ ವಿಷಯವನ್ನೇನನ್ನು ಕ್ರಮದಿಂದ ಉಪದೇಶಿಸುವನೋ ಅದು ಅನ್ಯೋನ್ಯವಾಗಿ ಚರ್ಚಿಸಲ್ಪಟ್ಟು ಅದರ ಸಾರವನ್ನು ಗ್ರಹಿಸಿದಂತಾಗುವುದು". ಈ ಎಲ್ಲಾ ಕಾರಣಗಳಿಂದಾಗಿ ಈ ಪರಿಷತ್ತನ್ನು ವಿದ್ವಾಂಸರು ಬಹು ಶ್ಲಾಘಿಸುತ್ತಾರೆ.

"ಇಂದು ಮಣಿಪಾಲದಲ್ಲಿ ಆಯುರ್ವೇದ ವಿಜ್ಞಾನ ಭಂಡಾರದ ಬಾಗಿಲು ತೆರೆದಿದೆ. ಔದಾತೀನ್ಯವನ್ನು ತೊರೆದು ಗ್ರಾಹಕರು ಬೇಕಾದುದನ್ನು ಆರಿಸಿ ತೆಗೆದುಕೊಳ್ಳಬಹುದು."

CANARA BANK LIMITED
(Incorporated in British India, liability of Members Limited.)
(ESTD. 1906 ಸ್ಥಾಪನೆ.)

ANNOUNCEMENT.

We have the pleasure to announce that Branches of the Bank have been opened at
SHOLAPUR, SHIMOGA, SECUNDERABAD and KALYAN (Bombay)

Our MADRAS Office has been opened on
12th November 1945 at 317, Lingi Chetty Street, MADRAS.

ಇಂದ್ರಭವನ ಕಾಫಿ ಹೊಟೆಲ್
ಬಲ್ಮಠ * * * * ಮಂಗಳೂರು.
ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ವಾನೀಯಗಳ ತಯಾರಿಕೆಗಳ—ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.
ಟೀಸಾರ್ಟ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ
ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.
Indra Bhawan Coffee Hotel,
Balmatta Road, Mangalore.

ಜಾಪಾನಿನ ಮಾಜಿ ಪ್ರಧಾನಿ ಪ್ರಿನ್ಸ್ ಕೊನೊಯಿಯ ಆತ್ಮಹತ್ಯೆ.

ಕಳದ 25 ವರುಷಗಳ ಜಾಪಾನ್ ಆಳ್ವಿಕೆಯಲ್ಲಿ, ಬೋಳ ಪ್ರಾಮುಖ್ಯ ಮಹತ್ವಾರ್ಯಗಳ ದೆಸೆಯಿಂದಾಗಿ ಜಗದ್ವ್ಯಾಪಿ ಕೀರ್ತಿಪಡೆದ ಪ್ರಧಾನ ಮಂತ್ರಿಗಳೆಂದರೆ ಇಬ್ಬರು. ಜನರಲ್ ಟೋಜೋ ಮತ್ತು ಪ್ರಿನ್ಸ್ ಕೊನೊಯಿ. ಮೊದಲನೆಯವರು ಜಾಪಾನ್‌ನ್ನು ಯುದ್ಧಕ್ಕೆಳಿಸಿದವರು. ಎರಡನೆಯವರು ಅದಕ್ಕೆ ಪೂರ್ವರಂಗ ತಯಾರಿಸಿಕೊಟ್ಟವರು. ಹಾಗೂ 'ಚೀನಾ ಸನ್ನಿವೇಶ'ವನ್ನು ಅರಂಭಿಸಿದವರು. ಆದರೆ ಕಾಲ ಮಹಾತ್ಮೆ ಎಷ್ಟು ಅಗಾಧವಾದುದು! ಟೋಜೋ ಆತ್ಮಹತ್ಯೆಗಾಗಿ ಪ್ರಯತ್ನಿಸಿ ಉರಿವಿಷ ನುಂಗಿದರೂ ಅಮೇರಿಕನ್ ವೈದ್ಯರ ಪ್ರಯತ್ನದಿಂದ ಬದುಕಿದ; ಕೊಲೆ ಮಾಡಲ್ಪಡುವದಕ್ಕಾಗಿಯೇ ಸಾಯದೆ ಉಳಿದ. ಕೊನೊಯಿ ಮಾತ್ರ ಆ ಕಾರ್ಯದಲ್ಲಿ ಜಯಶೀಲನಾದ. ಇದೇ ತಾ. 16ರಲ್ಲಿ ಆತ್ಮಹತ್ಯೆಮಾಡಿಕೊಂಡು ಅಮೆರಿಕಾನರ ಕೈಯಿಂದ ಪಾರಾದ!

ರಾಜಳುವರೆ ಕೊನೊಯಿ

ಸಾಯುವಾಗ ಕೊನೊಯಿಯ ಪ್ರಾಯ 54. ಜಾಪಾನಿನ ಅತ್ಯುಚ್ಚ ಕುಟುಂಬ ಪೊಂದರಲ್ಲಿ ಅವನ ಜನನವಾಗಿತ್ತು. ಮೂರು ಬಾರಿ ಜಾಪಾನಿನ ಪ್ರಧಾನಿ ಪಟ್ಟಕ್ಕಾತ ಏರಿದ್ದ. ಟೋಜೋ ಪಟ್ಟಕ್ಕೆ ಬಂದು ಸರ್ಲ್‌ಹಾರ್ಬರ್ ಧಾಳಿ ನಡಿಸುವ ವರೆಗೂ ಜಾಪಾನಿನ ಪ್ರಧಾನ ಮಂತ್ರಿಯಾಗಿದ್ದವನು ಇವನೇ. ಚೀನಾ ಯುದ್ಧ ಸಾಗಿಸಿದ ಪೂರ್ಣ ಜವಾಬ್ದಾರಿಯನ್ನು ಈತನೇ ವಹಿಸಿಕೊಂಡಿದ್ದಾನೆ. ಈತನು ಪ್ರಥಮ ಬಾರಿ ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲೇ ಚೀನಾ ಯುದ್ಧಾರಂಭವಾದುದು. 'ಚಿಯಾಂಗ್ ಕೈಶೇಕನೊಡನೆ ಸಂಧಾನವಿಲ್ಲ' ಎಂಬುದೇ ಪ್ರಿನ್ಸ್ ಕೊನೊಯಿಯ ಘೋಷಣೆಯಾಗಿತ್ತು. ಎರಡನೇ ಬಾರಿ ಪ್ರಧಾನಿಯಾದಾಗ ಜಾಪಾನಿನಲ್ಲಿ ಏಕ ಪಕ್ಷ, ಜರ್ಮನಿ ಇಟಲಿಗಳೊಡನೆ ಒಪ್ಪಂದ ಮತ್ತು ಜಾಪಾನರಿಗೆಲ್ಲಾ ಸೇನಾ ತರಬೇತಿಯನ್ನು ಈತ ಸಾಧಿಸಿದ್ದ. ಜಾಪಾನಿನ ಈಗಿನ ಮಂಡಲದಲ್ಲಿಯೂ ಖಾತೆಯಿಲ್ಲದ ಓರ್ವ ಮಂತ್ರಿಸ್ಥಾನದಲ್ಲೇ ಕೊನೊಯಿಯಿದ್ದ. ಯುದ್ಧ ಬರ್ಖಾಸ್ತು ಕಾನ್ಸಿಲಿನ ಓರ್ವ ಸದಸ್ಯ ಸ್ಥಾನವೂ ಅತನಿಗಿದ್ದಿತು.

ಕೊನೊಯಿಗೆ ಕೊನೆಗಾದುದೇನು?

ತಾನು ಜಾಪಾನಿನಲ್ಲೊಂದು ಹೊಸ ರಾಜಕೀಯ ಚಳವಳವನ್ನು ಹೂಡುವಂತೆಯೂ ಜಾಪಾನೀ ರಾಜ್ಯ ಘಟನೆಗೊಂದು ತಿದ್ದು ಪಡಿತರುವಂತೆಯೂ ಜ. ಮೆಕರ್ಥರರು ತನಗೆ ಸೂಚಿಸಿದ್ದರಿಂದು ಪ್ರಿನ್ಸ್ ಕೊನೊಯಿ ಹೇಳಿದನೆಂದು ಇತ್ತೀಚೆಗೊಂದು ವದಂತಿ ಹಬ್ಬಿತ್ತು. ಜನರಲ್ ಮೇಕರ್ಥರರು ಅದನ್ನು ಬಹಿರಂಗವಾಗಿ ಅಲ್ಲಗಳೆದು ಜಾಪಾನೀ ಪ್ರಜೆಗಳ ದೃಷ್ಟಿಯಲ್ಲಿ ಕೊನೊಯಿಯ ತೇಜೋವಧೆ ಮಾಡಿದ್ದರು. ಇತ್ತೀಚೆಗೆ ಜಾಪಾನಿನಲ್ಲೆಲ್ಲಾ ಕೊನೊಯಿ ಅಪ್ರಿಯ ಮನುಷ್ಯನಾಗಿದ್ದ. ಈತ ಯುದ್ಧಾಪರಾಧಿಯೆಂಬ ಅನುಮಾನ ಬಂದು 10 ದಿನಗಳೊಳಗೆ ಟೋಕಿಯೋದ ಹೊರವಳಯದಲ್ಲಿರುವ ಸುಗಮಾ ಜೈಲಧಿಕಾರಿಗಳಿಗೆ ವಶವಾಗಬೇಕೆಂದು ಕೊನೊಯಿಯ ಮೇಲೆ ಮೇಕರ್ಥರರ ಆಜ್ಞೆ ಜ್ಯಾರಿಯಾಗಿತ್ತು. ಆ ವಾಯಿದೆ ತಾ. 16ನೇ ಮಧ್ಯ ರಾತ್ರಿ ವರೆಗಿತ್ತು. ಆದರೆ 16 ಹಿಡಿಯುವ ರಾತ್ರಿಯಲ್ಲೇ ಈತ ವಿಷಪಾನ ಮಾಡಿ ಎಲ್ಲಾ ಸಮಸ್ಯೆಯಿಂದಲೂ ಪಾರಾಗಿ ಹೋದ.

ತಾ. 16ನೇ ಮುಂಜಾನೆ

6 ಘಂಟೆಗೆ ಕೊನೊಯಿಯ ಹೆಂಡತಿ ಗಂಡ ಮಲಗಿದ್ದ ಕೋಣೆಗೆ ಹೋದಾಗ ಅಲ್ಲೊಂದು ದೀಪ ಆಗಲೂ ಉರಿಯುತಿತ್ತು. ಹಾಸಿಗೆಯಲ್ಲಿ ಕೊನೊಯಿ ಸುಖನಿದ್ರೆಯಲ್ಲಿರುವಂತೆ ಕಂಡು ಬಂದುದರಿಂದ ಆಕೆ ಹಿಂದಿರುಗುವುದರಲ್ಲಿದ್ದಳು. ಅಷ್ಟರಲ್ಲಿ ನೆಲದ ಮೇಲೆ ಖಾಲಿಯಾಗಿ ಬಿದ್ದಿದ್ದ ವಿಷದ ಬಾಟ್ಲಿಯೊಂದು ಅವಳ ದೃಷ್ಟಿಗೆ ಬಿತ್ತು. ಆಕೆ ಕೂಡಲೇ ಅತನ ಕಾರ್ಯದರ್ಶಿ ಉಶಿಬಾನಿಗೆ ಕರೆ ಕಳುಹಿಸಿದಳು. ಆತ ಬಂದು ನೋಡಿದಾಗ ಕೊನೊಯಿ ಸಜೀವದಲ್ಲಿರುವಂತೆ ಕಂಡು ಬಂದರೂ ಪರೀಕ್ಷಿಸಿ ಅದು ಶವವೆಂಬುದನ್ನು ಕೂಡಲೇ ತಿಳಿದ ಇಡೀ ಕೋಣೆಯನ್ನು ಹುಡುಕಿದರೂ ಆತನು ಬರೆದಿಟ್ಟ ಪತ್ರವಾಗಲೀ ವಿಲ್‌ನಾಮೆಯಾಗಲೀ ಸಿಕ್ಕಿಲಿಲ್ಲವಂತೆ ಆ ರಾತ್ರಿ ಕೊನೊಯಿ ತನ್ನ ಆಪ್ತಮಿತ್ರರೊಡನೆಯೂ, ಆಗ ತಾನೇ ಅಮೇರಿಕದಿಂದ ಮರಳಿದ್ದ ತನ್ನ ಸಹೋದರ ವಿಸ್ಕೌಂಟ್ ಹಿಡೆನಾರೋ ಕೊನೊಯಿಯೊಡನೆಯೂ ಸುಖಸಲ್ಲಾಪ ನಡೆಸಿ ಬೀಳ್ಕೊಟ್ಟಿದ್ದ ಅವನು ತನ್ನ ಜೀವಮಾನದಲ್ಲಿ ಕೊನೆಯ ಭೇಟಿ ಕೊಟ್ಟುದೆಂದರೆ ತನ್ನ 22 ವರುಷದ ಪುತ್ರ ಮಿಟ್ಟಿಟಾಕಾನಿಗೆ. ಎಲ್ಲರು ಹೋದ ಮೇಲೂ ತಂದೆ-ಮಗ ಬಹಳ ಹೊತ್ತು ಮಾತಾಡಿಕೊಂಡು ಕುಳಿತಿದ್ದರು. ನುರು ದಿನ ಅಮೇರಿಕಾನರಿಗೆ ಸೆರೆಸಿಕ್ಕ ಬೇಕಾದ ಸಂಗತಿಯನ್ನು ತನ್ನ ಮಗ ಪ್ರಸ್ತಾಪಿಸಿದಾಗ ಕೊನೊಯಿ ಏನೊಂದೂ ಉತ್ತರ ಕೊಡಲಿಲ್ಲವಂತೆ; ತಾನು ಆ ರಾತ್ರಿ ವಿಷಪಾನ ಮಾಡಿಕೊಳ್ಳುವೆನೆಂಬ ಸಂದೇಹ ಕೊಡಾಬಾರದೆಂತೆ ಆತ ನಿಶ್ಚಲ ಬುದ್ಧಿಯಿಂದಿದ್ದನಂತೆ.

ಜಾಪಾನಿನಲ್ಲೇನು ನಡೆಯುತ್ತಿದೆ?

ದಿನಹೋದಂತೆ ಮೇಕರ್ಥರರ ವಜ್ರಮುಷ್ಠಿ ಬಿಗಿಯಾಗುತ್ತಾ ಬರುತ್ತಿರುವಂತೆ ಕಾಣುತ್ತಿದೆ. ಹಲವು ಜಾಪಾನ್ ಪ್ರಮುಖರು ಯುದ್ಧಾಪರಾಧಿಗಳಾಗಿ ಕಠಿಣ ಭವಿಷ್ಯವನ್ನು ಇರಿನುನೋಡುತಿದ್ದಾರೆ. ಚಕ್ರವರ್ತಿ ಹಿರೋಹಿಟೋ ರಾಜಿ ಕೊಡುವರೆಂಬ ದಟ್ಟ ವದಂತಿ ಹಬ್ಬಿದೆ. ಜಾಪಾನ್ ಪೈಶಿಪ್ಸ್ಯವು ಲವಲೇಶವೂ ಉಳಿಯದಂತೆ ಮಾಡಿ, ಅಲ್ಲಿ ವಾಶ್ಚಾತ್ಯ ಸದ್ಧತಿಯನ್ನು ಸಂಪೂರ್ಣವಾಗಿ ತುರುಕಿಸುವ ಪ್ರಯತ್ನ ನಡೆದಿದೆಯೆಂಬುದು ನಿಸ್ಸಂದೇಹ. ಇದಕ್ಕೆ ಹಿರೋಹಿಟೋ ಒಂದು ಸ್ಪಬಲಾತಂಕ. ಆದರೆ ಖಾಡಾಖಾಡಿಯಿಂದ ಆತನನ್ನು ಪೀಠದಿಂದ ತಳ್ಳಿದರೆ ಜಾಪಾನರ ಮೇಲೆ ವಿಶೇಷ ಪರಿಣಾಮವಾಗ ಬಹುದು. ಆದ್ದರಿಂದ ತೆರೆಯಮರೆಯಿಂದ ಚಿವುಟಿಯೇ ಚಕ್ರವರ್ತಿಯನ್ನು ಪೀಠದಿಂದ ದೆಬ್ಬಿಸುವ ಪ್ರಯತ್ನ ನಡೆಯುತ್ತಿದೆ. ಬದಲಿಗೆ 15 ವರುಷದ ರಾಜಕುವರಪ್ಪಿಗೆ ಕಿರೀಟವಿಡುವ ಯೋಚನೆಯಿದೆಯಂತೆ. ಈ ರಾಜಪುತ್ರ ಏಕಾಂತ ಜೀವಿ; ತನ್ನ ಸೇವಕರೊಡನೆ ಕೂಡ ಮನಬಿಚ್ಚಿ ಮಾತಾಡುವವನಲ್ಲ; ಈತನನ್ನು ಅಮೇರಿಕಕ್ಕೆ ತಂದು ಶಿಕ್ಷಣ ಕೊಡಿಸಿ ಎಲ್ಲವನ್ನೂ ಅನುಕೂಲ ಮಾಡಿಕೊಳ್ಳಬೇಕೆಂಬಬಯಕೆ ಅಮೆರಿಕಾನರಿಗಿರುವಂತಿದೆ. ಇದರೆ ಇವ್ವರವರೆಗೆ ಹಿರೋಹಿಟೋ ಸಿಂಹಾಸನ ತ್ಯಾಗಮಾಡಿಲ್ಲ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗಂಗುಳಿಗೆ ಮಧ್ಯಾಹ್ನ ಗಂಗುಳಿಗೆ, ಸಂಜೆಗೆ ಗಂಗುಳಿಗೆಯಂತೆ ಊಟದ ಮೊದಲು ತೆಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧೫ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳಿ ಫಾರ್ಮಸಿ—ಕುಬ್ಬಳಿ, ಗದಗ್ ಬಾಗಲಕೋಟೆ ಧಾರವಾಡ, ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ್. ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

1000's SAVED

MARGARET'S

FITS CURE

Stops children's fits in 3 minutes.

Ask your chemist for a box.

Sole Agents:-

BRIGHTSTAR AGENCIES,

Hospital Rd., Udipi, S. K.

ಶ್ರೀ. ಬಿ. ವೆಂಕಟ್ರಾಯ

ಬಾಳಿಗ, ಮಂಗಳೂರು,

ಮಾಜಿ ಎಂ. ಎಲ್. ಎ,

ಇವರ

ವಿಯೋಗ ಸ್ಮರಣೆ.

(ಶ್ರೀ. ಎ. ಬಿ. ಶೆಟ್ಟರಿಂದ)

ಶ್ರೀ. ಬಿ. ವೆಂಕಟ್ರಾಯ ಬಾಳಿಗರಿಗೆ ನಿನ್ನೆ (ತಾ. 16-12-45ರಲ್ಲಿ) ಒದಗಿದ ಅಕಾಲ ನಿಧನವು ಅವರ ಬಂಧು-ಮಿತ್ರರಿಗಾದ ಶೋಚನೀಯ ನಷ್ಟ ಮಾತ್ರವಲ್ಲ; ಇಡೀ ಜಿಲ್ಲೆಗಾಗಿರುವ ಹಾನಿ. ದಿವಂಗತರು ನಮ್ಮ ಕಾಲದ ಉತ್ತಮ ಸಿವಿಲ್ ವಕೀಲರಾಗಿದ್ದರು. ವಿದ್ವಮ್ಮಾನಗಳನ್ನು ಅಮೂಲಾಗ್ರವಾಗಿ ಕರಗತಮಾಡಿಕೊಳ್ಳಬಲ್ಲ ತಲ್ಲೀನತೆ ಮತ್ತು ಕಾನೂನು ಕಾಯಿದೆಗಳ ಗಾಢ ಜ್ಞಾನದೊಂದಿಗೆ ಅವರ ಸಮರ್ಥವಾದ ವಾದ ಪ್ರತಿಭೆಯೂ ಸೇರಿ ವಕೀಲರ ಪಂಗ್ತಿಯಲ್ಲಿ ಶ್ರೀ ಬಾಳಿಗರಿಗೆ ಅಗ್ರಗಣ್ಯ ಸ್ಥಾನ ದೊರಕಿಸಿಕೊಟ್ಟಿದ್ದುವು. ತನ್ನ ಕಕ್ಷಿಗಾರರ ನೇಲೆ ದಯೆ ಮತ್ತು ಒಲವುಳ್ಳ ವಕೀಲರಾಗಿದ್ದರವರು. ಹುರುಳಿಲ್ಲದ ದಾವೆಗಳನ್ನು ಅವರೆಂದೂ ಪ್ರೋತ್ಸಾಹಿಸಿದವರಲ್ಲ. ಆರಿಸಿ ತೆಗೆದ ದಾವೆಗಳನ್ನು ಮಾತ್ರ ಅಂಗೀಕರಿಸಿಕೊಳ್ಳುವದು ಅವರ ಕ್ರಮವಾಗಿತ್ತು. ಅವರಿಗೆ ಬಿಡುವಿಲ್ಲದ ವಕೀಲೀ ಉದ್ಯೋಗವಿದ್ದರೂ ಮಂಗಳೂರು ನಗರ ಸಭೆಯ ಸದಸ್ಯನಾಗಿ, ಕೊನೆಗದರ ಅಧ್ಯಕ್ಷನಾಗಿ ಸಾರ್ವಜನಿಕ ಸೇವೆಮಾಡುವ ಸಂದರ್ಭಗಳನ್ನವರು ಬಿಟ್ಟಿರಲಿಲ್ಲ. 1937ರಲ್ಲಿ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯ ಸದಸ್ಯನಾಗಿ ಅವರು ಪ್ರಾಂತಿಕ ರಾಜಕೀಯ ರಂಗದಲ್ಲೂ ಪ್ರವೇಶಿಸಿದ್ದರು. ಜನತೆಯ ಪ್ರತಿಯೊಂದು ವರ್ಗ ಮತ್ತು ಜಾತಿಯ ಬೆಂಬಲದಿಂದ ಅವರು ಆ ಚುನಾವಣೆಯಲ್ಲಿ ಪಡೆದಿದ್ದ ಅಮೋಘ ವಿಜಯವೇ ಶ್ರೀ. ಬಾಳಿಗರ ಜನಪ್ರಿಯತೆಗೊಂದು ನಿದರ್ಶನ ಅವರು ಕಾಂಗ್ರೆಸ್ ಪಕ್ಷದ ವಿಧೇಯ ಸದಸ್ಯರಾಗಿದ್ದರಲ್ಲದೆ, ಕಾಂಗ್ರೆಸ್ ಅಜ್ಞೆಯನ್ನು ಶಿರಸಾವಹಿಸಿ 1940ರಲ್ಲಿ ಸತ್ಯಾಗ್ರಹವನ್ನೂ ಹೂಡಿದ್ದರು. ತಿರುಚಿನಾಪಳ್ಳಿ ಜೈಲಿನಲ್ಲಿರುವಾಗ ಮಿಕ್ಕ ಕೈದಿಗಳಿಗೆ ಶ್ರೀ. ಬಾಳಿಗರೊಂದು ಮಾದರಿ. ಆಲ್ಲಿದ್ದ ತನ್ನ ನಿಶ್ಶರು ಮತ್ತು ಅನುಯಾಯಿ ಬಂಧಿಗಳಿಗೆಲ್ಲಾ ಅವರು ಉಪಕಾರಿಯಾಗಿದ್ದರಲ್ಲದೆ ಅವರಲ್ಲಿ ಹಲವರು ಸ್ವತಃ ಬಾಳಿಗರೇ ಸಾಕಮಾಡಿಕೊಟ್ಟ ಪುಸ್ತಿಹಿತಿಂಡಿಗಳನ್ನು ಬಹುಬಾರಿ ಸವಿದಿದ್ದರು. ವ್ಯಕ್ತಿಶಃ ಶ್ರೀ. ಬಾಳಿಗರು ತನ್ನೆಲ್ಲಾ ವ್ಯವಹಾರಗಳಲ್ಲೂ ಸ್ವಸ್ಥವಾದಿ ಮತ್ತು ಖಂಡಿತ ಚಂಡೆಯವರು; ಶುದ್ಧಾಂತಃಕರಣ ಹಾಗೂ ತಾನು ಆಡುವ ಮತ್ತು ಮಾಡುವ ಪ್ರತಿಯೊಂದರಲ್ಲೂ ಪೂರ್ಣ ಯಥಾರ್ಥತೆಯುಳ್ಳವರಾಗಿದ್ದರು ಇಂಥವರಿಗೆ ಎಲ್ಲಿಯೂ ಯಾರೊಬ್ಬ ವೈರಿಯೂ ಇಲ್ಲದಿದ್ದುದೊಂದು ಸೋಜಿಗವಲ್ಲ. ಈ ಸಜ್ಜನ ಹಾಗೂ ಯಥಾರ್ಥವಾದಿಯ ಸ್ಮರಣೆಯು ದೀರ್ಘಕಾಲ ನಮಗೊಂದು ಪ್ರೇರಣೆಯಾಗಿರಲಿ; ಮತ್ತೀ ಸಮಸ್ಯಾತ್ಮಕ ಜೀವನ ಒಲೆಯಲ್ಲಿ ಸಿಕ್ಕಿರುವ ನಮಗೆ ಅದು ಮಾರ್ಗದರ್ಶಿಯಾಗಲಿ!

ಕೆಂಪುಕೋಟೆ ಪ್ರಥಮ ವಿಚಾರಣೆಯ ಕೊನೆಯ ಅಂಕ.

ಬಂಗಾಳದ ಬರಗಾಲ ಪೀಡಿತರಿಗೆ ಸುಭಾಸರು ನೀಡಿದ ೧೦೦೦೦೦ ಟನ್ ಅಕ್ಕಿಯನ್ನು ಸರಕಾರ ನಿರಾಕರಿಸಿದ್ದಿತು!

ಕೆಂಪು ಕೋಟೆ ವಿಚಾರಣೆಯಲ್ಲಿ ಕೆಪ್ಟನ್ ಶಾನವಾಜ್, ಕೆಪ್ಟನ್ ಸೆಹ್ಗಾಲ್ ಮತ್ತು ಲೆಫ್ಟನೆಂಟ್ ಧಿಲ್ಲೋನರ ಪರವಾಗಿ ಡಿಫೆನ್ಸ್ ಸಾಕ್ಷ್ಯವಿತ್ತ ಜಾಪಾನಿನ ಒಹ್ವಾ ಮತ್ತು ಮಾಟ್ಸುಮೋಟೋರ ನಂತರ ಬೇರೆ ಕೆಲವು ಜಾಪ್ ಪ್ರಮುಖರ ವಾಗ್ಮೂಲವಾಯಿತು.

ಜಾಪಾನೀ ಸಾಕ್ಷ್ಯಗಳು

ಜಾಪಾನಿನ ವಿದೇಶೀ ಖಾತೆಯ ಉಸ ಮಂತ್ರಿಯಾಗಿದ್ದರೆ ನ್ಸುಸವಾಡಾ, ಮತ್ತು ಅಜಾದ್ ಹಿಂದ್ ಸರಕಾರಕ್ಕೆ ರಾಯ ಭಾರಿಯಾಗಿ ಜಾಪಾನ್ ಸರಕಾರದಿಂದ ರಂಗೂನಿಗೆ ಕಳುಹಿಸಲ್ಪಟ್ಟಿದ್ದ ಟೆ. ಹಾಚಿಯಾರು ವಾಗ್ಮೂಲವಿತ್ತರು. ತಾನು ಪ್ರಥಮ ಬಾರಿ ಕೆಲವು ಕಾರಣಗಳಿಂದ ಸರಕಾರದ ಅಧಿಕಾರಪತ್ರವಿಲ್ಲದೇನೇ ರಂಗೂನಿಗೆ ಬಂದಾಗ ಸುಭಾಸರು ಸ್ವತಂತ್ರ ಸರಕಾರದಧಿಪತಿಯ ಘನತೆಗೆ ತಕ್ಕಂಬೆ ತನಗೆ ಭೇಟಿ ಕೊಡಲು ನಿರಾಕರಿಸಿದ್ದನ್ನು ಹಾಚಿಯಾ ವಿವರಿಸಿದರು. ಆ ಮೇಲಿನ ಸಾಕ್ಷ್ಯಿಯೆಂದರೆ 19-44ರಲ್ಲಿ ಇಂಫಾಲಿನ ಯುದ್ಧ ಯೋಜನೆ ತಯಾರಿಸಿದವರೂ, ಜಾಪಾನೀ ಮತ್ತು ಅಜಾದ್ ಹಿಂದ್ ಸೇನೆಗಳೊಂದಿಗೆ ಭಾರತದ ಗಡಿಯೊಳಗೆ ಅಂದು ನುಗ್ಗಿ ಬಂದವರೂ ಆಗಿದ್ದ ಮೇಜರ್ ಜನರಲ್ ಕಟಕುರಾನವ್ದು. ಪುಷ್ಟ ಕಾಯದ, ಗರ್ವ ಗಾಂಭೀರ್ಯ ಮುಖ ಮುದ್ರೆಯ ಕಟಕುರಾ ನಿರರ್ಗಳ ಜಾಪಾನೀ ಭಾಷೆಯಲ್ಲಿ ಮೇಲ್ವರ್ಜೆಯ ರೀತಿಯಿಂದ ಹೇಳಿಕೆ ಕೊಡುವ ದೃಶ್ಯವು ಜಡ್ಜರಿಗೂ ಪ್ರೇಕ್ಷಕರಿಗೂ ಮನ ಮೋಹಕವಾಗಿ ಮತ್ತು ಕೆಲಪೊಮ್ಮೆ ವಿನೋದಮಯಿಯಾಗಿತ್ತು. ಜಾಪಾನೀ ಸೇನೆಯೂ ಸುಭಾಸ್ ಸೇನೆಯೂ ಪ್ರತ್ಯೇಕಾಧಿಕಾರದಡಿಯಲ್ಲಿ ಭಾರತ ನುಗ್ಗಿದ್ದುವು. ಭಾರತವನ್ನು ಸ್ವತಂತ್ರಗೊಳಿಸುವದೋದೇ ಸುಭಾಸ್ ಸೇನೆಯ ಗುರಿಯಾಗಿತ್ತು. ಜಾಪಾನರು ಭಾರತದಲ್ಲಿ ಬ್ರಿಟಿಷರೊಡನಲ್ಲದೆ ಹಿಂದೀಯರೊಡನೆ ಹೋರಾಡಬಾರದೆಂದೂ ಹಿಂದುಸ್ಥಾನದಲ್ಲಿ ತಾವು ಹಿಡಿದು ಳಿಸಿ ಂದ ಸ್ಥಳ ಮತ್ತು ಸಾಮಾನುಗಳನ್ನು ಜಾಪಾನು ಜ್ ಹಿಂದ್ ತಾತ್ಕಾಲಿಕ ಸರಕಾರಕ್ಕೊಪ್ಪಿಸ ತಕ್ಕು ದ್ದೆಂದೂ ನಿರ್ಧಾರವಾಗಿತ್ತೆಂದು ಕಟಕುರಾ ಸ್ಪಷ್ಟಪಡಿಸಿದರು.

ಬೋಸ್ ಸರಕಾರೀ ಮಂತ್ರಿಗಳ ಹೇಳಿಕೆ

ಸುಭಾಸ್ ಸರಕಾರದ ಸದಸ್ಯರಾಗಿದ್ದ ಶ್ರೀ. ಎಸ್. ಎ. ಅಯ್ಯರರು ಸಾಕ್ಷ್ಯವೀಯುತ್ತಾ 1943ರ ಅನ್ನಾಭಾವದ ವೇಳೆ 1 ಲಕ್ಷ ಟನ್ ಅಕ್ಕಿಯನ್ನು ಬಂಗಾಳಕ್ಕೆ ಕಳುಹಿಕೊಡುವೆನೆಂದು ಸುಭಾಸ್ ಸರಕಾರ ಭಾರತ ಸರಕಾರಕ್ಕೆ ಸೂಚಿಸಿತು. ಆದರೆ ಆ ದಾನವನ್ನು ಹಿಂದೀ ಸರಕಾರ ನಿರಾಕರಿಸಿತೆಂಬುದನ್ನು ಬೆಳಕಿಗೆ ತಂದರು. ಆ ಜಾದ್‌ಹಿಂದ್ ಸರಕಾರದ ಮತ್ತೊಬ್ಬ ಸಚಿವ್ಯರಾದ ಕರ್ನಲ್ ಲೋಕನಾಥನರು, ರಂಗೂನನ್ನು ಜಾಪಾನರನ್ನಾಕ್ರಮಿಸಿದಾಗ ಸುಮಾರು 10 ಸಾವಿರ ಹಿಂದೀಯರನ್ನು ಕೊಂದಿದ್ದರು. ತಮ್ಮ ಜನರಿಗಂತಹದರ ರದೃಷ್ಟವು ಮತ್ತೊಮ್ಮೆ ಒದಗದಂತೆ ನೋಡುವ ಹೊಣೆ ಹೊರಿಸಿ ತಮ್ಮನ್ನು ಸುಭಾಸರು ಅಲ್ಲಿ ನಿಲ್ಲಿಸಿದ್ದರೆಂದರು. ಆ ಕಡೆಯಲ್ಲಿದ್ದ ಭಾರತೀಯ ಸ್ವತಂತ್ರ ಲೀಗಿನಲ್ಲಿ 7½ ಲಕ್ಷ ಸದಸ್ಯರಿದ್ದರು; ಅಂದ ಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಅಜಾದ್‌ಹಿಂದ್ ಸರಕಾರಕ್ಕೊಪ್ಪಿಸಲಾಗಿತ್ತು, ಮುಂತಾದ ಹಲವು ಗುಪ್ತ ಹಾಗೂ ಪ್ರಾಮುಖ್ಯ ವಾರ್ತೆಗಳೂ ಅವರ ಹೇಳಿಕೆಯಿಂದ ಹೊರಸಿಡಿದುವು. ಬರ್ಮದಲ್ಲಿ ಇಂಜಿನೀಯರಿಂಗ್ ಕಂಟ್ರಾಕ್ಟರ್ ಮತ್ತು ಧೂಪದ ಮರಗಳ ವ್ಯಾಪಾರಿಯಾಗಿದ್ದು ಆ ಮೇಲೆ ಅಜಾದ್‌ಹಿಂದ್ ಬೇಂಕಿನ ಡೈರೆಕ್ಟರರಾಗಿದ್ದ ಶ್ರೀ, ದಿನಾನಾಥರ ಸಾಕ್ಷ್ಯವಾಯಿತು. ಸುಭಾಸರ ಅಜಾದ್ ಹಿಂದ್ ಬೇಂಕಿಗೆ ಬರ್ಮದಲ್ಲಿ 15ಕೋಟಿ, ಮಲಯದಲ್ಲಿ ಸುಮಾರು 5 ಕೋಟಿ ರೂ. ಗಳ ಸಂಗ್ರಹವಾಗಿತ್ತು. ಬೇಂಕಿಗಿತ್ತ ಈ ಮೊಬಲಗಲ್ಲದೆ ಖಾಸಗೀ ಜನರ ಡಿಪೋಸಿಟ್ ಸುಮಾರು 40 ಲಕ್ಷ ರೂ. ಗಳಿದ್ದುವು. ಬೇಂಕ್ 1944ನೇ ಎಪ್ರಿಲ್‌ನಿಂದ 1945ನೇ ಮೇ ವರೆಗೆ ನಡೆಯಿತು. ಆ ಮೇಲೆ ಬ್ರಿಟಿಷ್ ಸೇನಾಧಿಕಾರಿಗಳು ಅದಕ್ಕೆ ಬೀಗ ಮುದ್ರೆ ಹಾಕಿ ಮುಚ್ಚಿದರು. ಹೀಗೆ ಮುಚ್ಚಲ್ಪಡುವಾಗ ಬೇಂಕಿನಲ್ಲಿದ್ದ ಡಿಪೋಸಿಟ್ ಮೊಬಲಗು 35 ಲಕ್ಷಸಮ್ಮ ಮಾತ್ರ ಎಂದರು ದಿನಾನಾಥ್ ಸುಮಾರು 50 ಚದರ ಮೈಲು ವಿಸ್ತೀರ್ಣದ ಭೂಮಿಯೊಂದನ್ನು ಬೇಂಕಿನ ಶಾಖೆ ನಡೆಸುತ್ತಿತ್ತೆಂದೂ ಆಜಾದ್‌ಹಿಂದ್ ಅಸ್ಪತ್ರೆ, ಕಾರ್ಖಾನೆಗಳು ಮತ್ತು ತರಬೇತಿ ಕೇಂದ್ರಗಳು ಜರಗುತಿದ್ದುವೆಂದೂ ಅವರು ತಿಳಿಸಿದರು. ಆ ಮೇಲೆ ಅ. ಹಿಂ. ಫೌಜಿನ ಲೆಫ್ಟನೆಂಟ್ ಹವಿಲ್ದಾರ್ ತಿವಸಿಂಗ್ ಮತ್ತು ಬರ್ಮದಲ್ಲಿ ಅ. ಹಿಂ. ಫೌಜಿನ ಮಂಡಲಾಧಿಪತಿಯಾಗಿದ್ದ ಕೆಪ್ಟನ್ ಆರ್ಶಾದರ ವಿಚಾರಣೆಯಾಯಿತು. ಬಿ. ಎನ್. ನಂದು ಮತ್ತು ಲೆ. ಕ. ಇ. ಕೆ. ಸ್ಯಾನ್ಯಾಯರರ ನಾಮ ಮಾತ್ರ ಸಾಕ್ಷ್ಯಗಳಾಗಿ ಅಲ್ಲಿಗೆ ಡಿಫೆನ್ಸ್ ಸಾಕ್ಷ್ಯಗಳು ಮುಗಿದುವು.

ನೊಕದ್ದನೆಯ ಅಂದಾಜು ರೂಪ.

ಭುಲಾಭಾಯಿ ಸಮಿತಿಯ ಮೂಲಕ 112 ಮಂದಿ ಸಾಕ್ಷಿಗಾರರನ್ನು ಬಯಸಿದ್ದಿತು. ಆ ಸೈಕೆ 70 ಮಂದಿಯೊಡನೆ ಪರ್ಯಾಲೋಚನೆಯನ್ನೂ ನಡೆಯಿಸಿತ್ತು. ಆದರೆ ಕೊನೆಗೆ ಅವರಲ್ಲಿ 11 ಮಂದಿಗಿಂತ ಹೆಚ್ಚಿನವರಿಗೆ ಭುಲಾಭಾಯಿಗಳೇ ಸಮ್ಮನ್ಸ್ ಮಾಡಿಸಲಿಲ್ಲ. ಇದಕ್ಕೆ ಕಾರಣವೆಂದರೆ ಸರಕಾರದ ಪರವಾಗಿ ಸಾಕ್ಷ್ಯವಿತ್ತಿದ್ದ 28 ಮಂದಿಯ ಹೇಳಿಕೆಗಳೂ ತಮ್ಮ್ಯಉದ್ದೇಶವನ್ನು ಸಾಧಿಸಿಕೊಟ್ಟಿವೆ ಎಂಬ ದೇಸಾಯಿಗಳ ಅಭಿಮತ. ದಶಂಬರ್ ತಾ. 17ನೇ ಸೋಮವಾರಕ್ಕೆ ಡಿಫೆನ್ಸ್ ಮುಖ್ಯ ವಕೀಲರಾದ ಭುಲಾಭಾಯಿಗಳ ವಾದ ನಡೆಯುವದು. ಆ ಮೇಲೆ ಎಡ್ವೊಕೇಟ್ ಜನರಲ್ ಸರ್. ನೋವಿರ್ವಾನ್ ಇಂಜಿನೀಯರರು ಅದಕ್ಕೆ ಸ್ಪಷ್ಟವಾದ ಹೂಡುವರು. ಇವೆರಡು ನಾಲ್ಕೂ ದಿನಗಳಲ್ಲಿ ಮುಗಿಯಬಹುದು. ಮತ್ತೊಂದು ದಿನವು ಜಡ್ಜ್ ಎಕ್ಸ್‌ಹೊಕೇಟರು ಜಡ್ಜ್ ಮಂಡಲಕ್ಕೆ ಮುಕ್ತಾಯ ಸಲಹೆ ಕೊಡಲು ಬೇಕಾಗಬಹುದು. ಅಂತೂ ಈ ವಾರದಲ್ಲಿ ಅಜಾದ್ ಹಿಂದ್ ಫೌಜ್ ನಾಯಕರ ಪ್ರಥಮ ವಿಚಾರಣೆ ಕೊನೆಗೊಳ್ಳಲಿದೆ

ಮೂರನೇ ಅ. ಹಿಂದ್ ಕೋರ್ಟ್ ಮಾರ್ಶಲ್

ಅ. ಹಿಂ. ಸೇನಾನಾಯಕರಲ್ಲೊಬ್ಬರಾದ ಕೆಪ್ಟನ್ ಬರ್ಹಾನುದ್ದೀನರ ವಿಚಾರಣೆಗಾರಂಭಿಸಿದ ಬ್ರಿಗೇಡಿಯರ್ ಕಾರ್ಯಪ್ಪನವರ ಅಧ್ಯಕ್ಷತೆಯ ದ್ವಿತೀಯ ಕೋರ್ಟ್ ಮಾರ್ಶಲ್ ಡಿಫೆನ್ಸ್ ಬೇಡಿಕೆಯಂತೆ ಮೂರುವಾರ ಮುಂದುವರಿದಿದೆ ತಾನೆ? ಸುಬೇದಾರ್ ಶಿಂಗಾರಾ ಸಿಂಗ್ ಮತ್ತು ಜಮೇದಾರ್ ಫಾಟೇಖಾನರ ವಿಚಾರಣೆಗಾಗಿ ತೃತೀಯ ಕೋರ್ಟ್ ಮಾರ್ಶಲ್ ಬ್ರಿಗೇಡಿಯರ್ ಓಕಲ್ಲಾಘನರ ಅಧ್ಯಕ್ಷತೆಯಲ್ಲಿ ಕೆಂಪು ಕೋಟೆಯಲ್ಲಿ ತಾ. 15ರಲ್ಲಿ ಪ್ರಾರಂಭಿಸಿತು. ಆರೋಪಿಗಳಿಬ್ಬರೂ ಮೊದಲು ಪಂಜಾಬ್ ಸೇನಾದಳದೊಂದಕ್ಕೆ ಸಂಬಂಧಿಸಿದವೆಂದು ಆ ಮೇಲೆ ಅಜಾದ್ ಹಿಂದ್ ಫೌಜಿಗೆ ಸೇರಿದವರು. ಸುಬೇದಾರ್ ಸಿಂಗಾರಾ ಸಿಂಗರು ಅತ್ಯೆತ್ತರದ ಗಟ್ಟಮುಟ್ಟಿನ ದೃಢಕಾಯರು; ಕೋರ್ಟಿಗೆ ಹಾಜರಾದಾಗ ತನ್ನ ಸುತ್ತಮುತ್ತಣವರಿಗಿಂತ ಎತ್ತರ ನಿಲುವಿಕೆಯು ಅವರ ದೃಶ್ಯವು ಎಲ್ಲರನ್ನಾಕರ್ಷಿಸಿತು. ಆರೋಪಿಗಳನ್ನು ಕೋರ್ಟಿಗೆ ತಂದು ಆರೋಪಣೆಗಳನ್ನೋದಿದೊಡನೆ ಆಪಾದಿತರ ವಕೀಲ ಡಾ. ಕಟಜುರವರು ಒಂದು ಆಕ್ಷೇಪವನ್ನೆತ್ತಿದರು. ಮೂರು ವರುಷಗಳ ವಾಯಿದೆ ಮೀರಿದ ಅಪರಾಧಗಳಿಗಾಗಿಯೂ ಕೋರ್ಟು ಮಾರ್ಶಲಿಗೆಳೆಯುವ ಹಕ್ಕನ್ನು ಕೊಡಲು ಈ 1ವರುಷ ಒಕ್ಕೂಟರನ್ನೆಲ್ಲಿ ಜ್ಯಾರಿಗೆ ತಂದ ಓರ್ಡಿನೆನ್ಸ್‌ನ್ನು ಹೊರಡಿಸುವ ಅಧಿಕಾರ ಗವರ್ನರ್ ಜನರಲರಿಗಿಲ್ಲ ಆ ಓರ್ಡಿನೆನ್ಸನ್ನು ಅಧಂಸಿರುವ ಈ ಮೊಕದ್ದಮೆ ಸಿಂಧುವಲ್ಲವೆಂಬುದೇ ಡಾ. ಕಟಜುಗಳ ಆಕ್ಷೇಪ. ಇದನ್ನು ಮೊಕದ್ದಮೆಯ ವಕೀಲ ಮಿ. ಕೋರ್ಡಿನ್ ನೋಡರು ಪ್ರತಿಭಟಿಸುತ್ತಾ ಓರ್ಡಿನೆನ್ಸ್ ರಚಿಸುವ ಗವರ್ನರ್ ಜನರಲರ ಅಧಿಕಾರವು ಪ್ರಶ್ನಾತೀತವಾದುದೆಂದರು ಇಬ್ಬರ ವಾದ ಪ್ರತಿವಾದಗಳಲ್ಲೂ ಸ್ಪಷ್ಟ ಭಿನ್ನಾಭಿಪ್ರಾಯಗಳು ಬಂದಿದ್ದುವು. ಮುಂದಿನ ಹೇಳಿಕೆಗಾಗಿ ಈ ಕೋರ್ಟ್ ತಾ 17ನೇ ಸೋಮವಾರಕ್ಕೆ ಮುಂದುವರಿಯಿತು.

ಪಾರ್ಲಿಮೆಂಟ್ ಸದಸ್ಯರ ವಿನಂತಿ

"ಭಾರತ ರಾಷ್ಟ್ರೀಯ ಸೇನಾ ನಾಯಕರ ವಿಚಾರಣೆಯನ್ನೇ ಬಿಟ್ಟುಬಿಡಬೇಕು. ಸದ್ಯದ ಸರಕಾರವು ಆ ತನಪಿ ನಡೆಸಲು ತಕ್ಕುದಾಗಿಲ್ಲ. ಕಲ್ಕತ್ತಾ, ಬೊಂಬಾಯಿ ತುತ್ಕಿತರ ಕಡೆಗಳಲ್ಲಿ ನಡೆದ ಪ್ರದರ್ಶನಗಳೂ ಇಡೀ ಹಿಂದುಸ್ಥಾನದ ಮನೋಗತಿಯೂ ಸ್ಪಷ್ಟವಾಗಿ ಸೂಚಿಸುವಂತೆ ನಾವು ಅಪರಾಧಿಗಳೆಂದು ಗಣಿಸಿರುವ ಅವರನ್ನೇ ಹಿಂದೀಯರು ಅತ್ಯುಚ್ಚ ವರ್ಗದ ದೇಶ ಭಕ್ತರೆಂದು ಗಣಿಸಿದ್ದಾರೆ. ಅವರ ದೃಷ್ಟಿಯಲ್ಲಿ ಕೆಂಪು ಕೋಟೆಯಲ್ಲೀಗ ವಿಚಾರಣೆಗೆ ಸಿಕ್ಕಿರುವದು ಬ್ರಿಟಿಷ್ ಸರಕಾರ ಹೊರತು ಅಜಾದ್ ಹಿಂದ್ ಯೋಧರಲ್ಲ. ಪಾರ್ಲಿಮೆಂಟ್ ಸದಸ್ಯರ ಶಿಷ್ಟ ಮಂಡಲವು ಸೌಹಾರ್ದ ನಿರ್ಮಾಣಕಯ್ಕೂ ಹಿಂದುಸ್ಥಾನಕ್ಕೆ ಹೊರಡಲಿರುವ ಈ ಕಾಲದಲ್ಲಿ—ಪ್ರಾಂತೀಕ ಜನಾನವಣೆಗಳು ನಡೆಯುತಿರುವ ಈ ಅವಧಿಯಲ್ಲಿ—ಹಿಂದೀಯರಲ್ಲಿ ಇಂತಹ ಕಠೋರ ಭಾವನೆಯನ್ನು ನಿರ್ಮಿಸಬೆಕೆಸುವದು ಹಿತಕರವಲ್ಲ" ಎಂದು ಪಾರ್ಲಿಮೆಂಟ್ ಸದಸ್ಯರಾದ ಸೊಬ್ಟೀ, ಕೋವೆ, ದೇವಿನ್, ಮಿಲ್ನಿಂಗ್ಟನ್ ಮೊದಲಾದವರೊಂದು ವಿಜ್ಞಾಪನೆ ಹೊರಡಿಸಿದ್ದಾರೆ.

These enterprises of young men of Mangalore are worth your notice:

1 "The Badavara Bandhu"
2 The Badavara Bandhu Printing & Press, Ltd,
3 Sri Narayan Guru Press
4 Sri Narayan Guru Bank Ltd
5 The Badavara Bandhu Orphanage Trust,
6 My Stores.
7 The South Kanara Fish Industries, Ltd.
8 The Karnataka Theatres, Ltd
9 Jayasons, Ltd,
10 The Vijaya Stores, Ltd. etc. etc.

PATRONISE INDIAN INDUSTRY.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಆನೋಫ ವಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ಈ ಔಷಧಿಗಳು ಹೆಚ್ಚು ಕಡಿಮೆ ಅಳತೆಯಸಗಳಲ್ಲಿ ಬರುವವು. ಆಂದರೆ ಕೇವಲ ೪ ರೂಪಾಯಿಗಳ ಒಂದು ಬಾಣಂತಿಯನ್ನೆ ಸಾಕಾಗುವುದು. ವಿಶೇಷ ವಿವರಕ್ಕಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೮ ಕೊಡಿಯಾಲಬೈಲು, ಮ. ಕ.

ವಿಶೇಷ ಪ್ರಚಾರದಲ್ಲಿರುವ ಕೆಲವು ಆಯುರ್ವೇದೀಯ

ಔಷಧಗಳು

— ದೊರೆಯುತ್ತವೆ —

ನವಧಾರತ್ನ ಪುಸ್ತಕ ಭಂಡಾರ,
: ಉಡುಪಿ :

The Canara Banking Corporation Limited.

((Incorporated in British India, with limited Liability.)

Estd: 1906.

Head Office: **UDIPI**, South Kanara.

ANNOUNCEMENT

A branch of the bank has been opened at JEW TOWN, MATTANCHERRY, COCHIN, on 7-11-1945.

ಉಡುಪಿ, ಗುರುವಾರ ೨೦-೧೨-'೪೫

ಅಹಿಂಸಾತತ್ವ.

ಈ ತಿಂಗಳ ತಾ. 5ರಿಂದ 11ರ ವರೆಗಿನ ಒಂದು ವಾರ ಕಲ್ಕತ್ತೆಯಲ್ಲಿ ಸೇರಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮಂಜೂರು ಮಾಡಿಕೊಂಡ ನಿರ್ಧಾರಗಳು ಸದ್ಯಸ್ಥಿತಿಯಲ್ಲಿ ಪ್ರಾಮುಖ್ಯವಿವೆ. ತನ್ನ ಅಹಿಂಸಾ ತತ್ವವನ್ನು ಅದು ಪುನಃ ಸಮರ್ಥಿಸಿಕೊಂಡಿದೆ. ಕಾಂಗ್ರೆಸು 1920ರಿಂದಲೂ ಅಹಿಂಸಾಚರಣೆಗೆ ಕಟ್ಟು ಬಿದ್ದಿರುವ ಸಂಸ್ಥೆ; ಹೀಗೆ ನೀತಿಗೆ ಪ್ರಾಮುಖ್ಯತೆ ಕೊಡುವ ಒಂದು ರಾಜಕೀಯ ಪಕ್ಷ ಪ್ರಪಂಚದಲ್ಲೇ ಬೇರೊಂದಿಲ್ಲ. 'ಶಾಂತವಾದ ಹಾಗೂ ನ್ಯಾಯ ಪೂರ್ಣ ಹಾದಿಯಿಂದ ಭಾರತದ ಪೂರ್ಣ ಸ್ವಾತಂತ್ರ್ಯಗಳಿಸುವ' ಕರ್ತವ್ಯವನ್ನೊಪ್ಪಿಕೊಳ್ಳದವನು ಕಾಂಗ್ರೆಸಿನ ಪ್ರಾಥಮಿಕ ಸದಸ್ಯನಾಗಲಾರ. ಕಲ್ಕತ್ತಾ ಸಭೆಯು ಇದನ್ನೇ ಸಮರ್ಥಿಸಿಕೊಂಡಿದೆ ಯಾದರೂ ಸದ್ಯ ಸ್ಥಿತಿಯಲ್ಲಿ ಅದು ಅನಿವಾರ್ಯ ಪುನರುಕ್ತಿಯನ್ನಿಸಿಲ್ಲ; ಮಾಂಗಲ್ಯ ಸೂತ್ರವು ಪುಷ್ಪಹಾರಗಳಿಂದಲೂ ಹೂಗಿದು ಹೋದರೆ ಅದು ಕಳೆದು ಹೋದಂತಲ್ಲವೇನೋ ನಿಜ. ಆದರೆ ಅದನ್ನೆತ್ತಿ ಪ್ರದರ್ಶಿಸಿ ಸಂದೇಹ ನಿವಾರಿಸುವ ಸಂದರ್ಭವೊಮ್ಮೊಮ್ಮೆ ಬರುತ್ತದೆ. ಕಾಂಗ್ರೆಸಿಗೂ ತನ್ನ ಅಹಿಂಸಾ ಧೋರಣೆಯನ್ನು ಈ ರೀತಿ ಎತ್ತಿ ತೋರಿಸಬೇಕಾಗಿ ಬಂತು. ಕಾರಣವೆಂದರೆ ಪ್ರಕೃತ ಭಾರತೀಯ ಮನೋರಂಗದಲ್ಲುಂಟಾಗಿರುವ ಕ್ರಾಂತಿ. ಆಜಾದ್ ಹಿಂದ್ ವಿಚಾರಣೆಯು ಭಾರತೀಯರ ರಕ್ತ ಕುದಿಸಿದೆ. ಸುಭಾಸ್ ಚಳವಳದಲ್ಲಿದ್ದ ದೇಶಾಭಿಮಾನ, ಜಾತೀಯ ಐಕ್ಯತೆ, ತ್ಯಾಗ ಸಹನಾದಿ ಸದ್ಗುಣಗಳು ಭಾರತ ಸ್ವಾತಂತ್ರ್ಯ ಚಳವಳಕ್ಕೆ ಬಾಸಿಂಗ ಕಟ್ಟಿವೆ. 'ಸಿ ಪಾಯಿ ದಂಗೆ'ಯ ಕಾಲದ ಕಟ್ಟಾಳುತನ, 1920ರ ಹಿಂದೂ ಮುಸ್ಲಿಂ ಐಕ್ಯತೆ, ಶಿವಾಜಿ ಕಾಲದ ಧೀರೋದಾತ್ತ ನಾಯಕತ್ವಗಳನ್ನು ನಾವು 'ಆಜಾದ್ ಹಿಂದ್'ನಲ್ಲಿ ಕಂಡೆವು-ಆದರೆ ದೂರದಿಂದ! ದೇಶದ ಹೊರಗೆ ಸುಭಾಸ್ ಪೌರೋಹಿತ್ಯವಲ್ಲಿ ಇಂತಹ ಪವಿತ್ರವಾದ ಭಾರತ ಯಜ್ಞವೊಂದು ನಡೆಯುತ್ತಿದೆ ಎಂಬ ಊಹೆ ಒಂದು ವಂಚಕ್ಕೆ ಮೊದಲು ಹಿಂದೀ ಧುರೀಣರಿಗೆ ಕೂಡಾ ಬಂದಿರಲಿಲ್ಲ. ಕೆಂಪು ಕೋಟೆ ವಿಚಾರಣೆಯೊಂದಲ್ಲವಾದರೆ ಆಜಾದ್ ಹಿಂದ್ ವೀರರು—ಉಚ್ಚ ವರ್ಗದ ದೇಶಪ್ರೇಮಿಗಳು-ಮಿಕ್ಕವರ ಮಾತಿರಲಿ, ತಮ್ಮ ದೇಶಬಾಂಧವರ ಎಂತೆಂತಹ ಸಂದೇಹಗಳಿಗೆ ಗುರಿಯಾಗುತ್ತಿದ್ದರೋ! ಅದಕ್ಕಾಗಿ ಕೆಂಪು ಕೋಟೆ ಯನ್ನು ಅಭಿನಂದಿಸಬೇಕು. ನಾಳೆ ಆದು ಜ್ವಾಲಾಮುಖಿಯನ್ನು ಕಾರಬಹುದು—ಆದರೆ ಇಂದು ನವೀನ ರಾಷ್ಟ್ರ ಭಕ್ತಿ ಪ್ರವಾಹದ ಉಗಮ ಸ್ಥಾನವಾಗಿ ಆದು ರಾಜಿಸುತ್ತದೆ. ಅಲ್ಲಿ ಸ್ವಾತಂತ್ರ್ಯ ಭಾವನೆಯ ಪ್ರಕಟನಾಲಯದ ಕೆಲಸವಾಗಿದೆ. ಅದರಿಂದು ಮಾತು. ಆಜಾದ್ ಹಿಂದ್ ಮತ್ತು ಕಾಂಗ್ರೆಸಿನ ಧ್ಯೇಯವೊಂದೇ ಆಗಿದ್ದರೂ ಆಚರಣೆಯಲ್ಲಿ ವ್ಯತ್ಯಾಸವಿದೆ. ಬಂಜರು ಬಿದ್ದಿರುವ ಸ್ವಾತಂತ್ರ್ಯ ರಂಗದ ಕಡೆಗೆ 'ಆಜಾದ್ ಹಿಂದ್' ಕಡಿದು ಬಿಟ್ಟ ಕಾಲುವೆಯಂತೆ ಧಾವಿಸಿ ಬಂತು; ಮಧ್ಯದಲ್ಲೇ ಕಣಿವೆಗಿಳಿಸಲ್ಪಟ್ಟಿತು. ಕಾಂಗ್ರೆಸು ಆ ಬಂಜರು ಸ್ಥಳವಲ್ಲಿರುವ ಬಾವಿ; ಅದರ ನೀರನ್ನು ಏತದಿಂದೆತ್ತಿಯೇ ಬಂಜರನ್ನು ಉದ್ಯಾನಮಾಡಬೇಕು. ಆಜಾದ್ ಹಿಂದ್ ಪ್ರವಾಹದ ಸೆಳೆತ—ಹಿಂಸೆ—ಇಲ್ಲಿಲ್ಲ; ಆದ್ದರಿಂದ ಹಿಂಸಾಚರಣೆ ತನ್ನದಲ್ಲವೆಂದು ಕಾಂಗ್ರೆಸು ಈ ಕಾಲದಲ್ಲಿ ಮತ್ತೊಮ್ಮೆ ನೆನಪುಮಾಡಬೇಕಾಯಿತು. ದೀರ್ಘ ಕಾಲದಿಂದ ಬಂಜರು ಬಿದ್ದಿರುವ ಈ ಸ್ಥಳಕ್ಕೆ ಪ್ರವಾಹದ ನೀರೇ ಬೇಕಲ್ಲದೆ ಮೊಗೆತದಿಂದದು ಚಿಗುರುವುದು ಸಾಧ್ಯವೇ?—ಈ ಪ್ರಶ್ನೆಗುತ್ತರ ಸಿಕ್ಕುವದಿಲ್ಲ. ಆದರೆ ವಸ್ತುತಃ ಕಾಂಗ್ರೆಸಿನೊಳಗೆ ಅಂತಹ ಸೆಳೆತವನ್ನುಹುಟ್ಟಿಸುವದು ಅಸ್ವಾಭಾವಿಕ. ಮಾತ್ರವಲ್ಲ, ಪಂಡಿತನೆಹರುಗಳು ಕಲ್ಕತ್ತಾ ಭಾಷಣದಲ್ಲದಂತೆ ವೈಜ್ಞಾನಿಕ ವಿಧ್ವಂಸಕೋಪಕರಣಗಳು ಹೇರಳವಿರುವ ಒಂದು ಪ್ರಮುಖ ರಾಷ್ಟ್ರದಿದಿರಲ್ಲಿ ಅಮೂಲಾಗ್ರ ಸಂಘಟನೆಯಿಲ್ಲದ ಹಿಂಸಾಚರಣೆ ವ್ಯವಹಾರ್ಯವೂ ಅಲ್ಲ. ಆದ್ದರಿಂದ ಪ್ರಕೃತ ಕಾಂಗ್ರೆಸ್ ವಾದವನ್ನೊಪ್ಪಲೇಬೇಕು.

ದಿವಂಗತ

ಶ್ರೀ. ಬಿ. ವಿ. ಬಾಳಿಗರು

ವಕೀಲ್ ಶ್ರೀ. ಬಿ. ವೆಂಕಟ್ರಾಯ ಬಾಳಿಗ (ಮಾಜಿ ಕಾಂಗ್ರೆಸ್ ಎಂ. ಎಲ್. ಎ.) ಇವರ ನಿಧನದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯು ತನ್ನ ಸುಪುತ್ರರಲ್ಲೊಬ್ಬನ ವಿಯೋಗ ಮುಖತ್ಕೇಡಾಗಿದೆ. 1937ರ ಪ್ರಾಂತಿಕ ಚುನಾವಣೆಯಲ್ಲಿ ನಾಲ್ವರು ಯೋಗ್ಯ ಕಾಂಗ್ರೆಸ್ ಉಮೇದ್ವಾರಗಳನ್ನು -ಎಸೆಂಬ್ಲಿ ಕಾಂಗ್ರೆಸ್ ಪಕ್ಷದಲ್ಲಿ ಗಣ್ಯತೆ ಪಡೆಯಬಲ್ಲ ಸಮರ್ಥರನ್ನು-ಆರಿಸಿ ತಳುಹಿಸುವ ಸುಯೋಗ ಬೆಲ್ಲಿಗೊದಗಿದ್ದಿತು; ಮರು ಚುನಾವಣೆಯ ಸಂದರ್ಭದಲ್ಲೇ ಆ ವರಲ್ಲೊಬ್ಬನನ್ನು ಕಳಕೊಳ್ಳುವ ಆಪತ್ತು ಬಂದಿದೆ. ಶ್ರೀ. [illegible] ಪ್ರಸಿದ್ಧ ವಕೀಲರಾಗಿದ್ದರು; ಅಭ್ಯಾಸ, ಪರಿಶ್ರಮ, ವಸ್ತು ಸ್ಥಿತಿಯ ಜ್ಞಾನ, ವಾಗ್ಪಟುತಿಭೆ ಇತ್ಯಾದಿಗಳಿಂದ ಸಮರ್ಥರೆನ್ನಿಸಿಕೊಂಡಂತೆಯೇ, ಕರ್ತೃ ಸ್ವಚ್ಛ, ಉದಾರ, ವಿಶಾಲ ಮನೋವೃತ್ತಿಯಿಂದ ಸಜ್ಜನರನ್ನಿಸಿದ್ದರು; ಕೊನೆಗೆ ಇನ್ನೆಲ್ಲಾ ಯೋಗ್ಯತೆಗಳಿಗೂ ಕಾಂಗ್ರೆಸ್ ಭಕ್ತಿಯ ಮಕುಟವೇರಿಸಿಕೊಂಡು ರಾಜಿಸಿದ್ದರು. ಇಂತಹ ಯೋಗ್ಯತೆಯ ಇದಿರಲ್ಲಿ ಜಾತಿ, ಮತ್ತವರ್ಗ ಭೇದಗಳುಳಿಯನೆಂಬುದನ್ನು ಎಸೆಂಬ್ಲಿ ಚುನಾವಣೆಯಂತಹ ಯೋಗ್ಯ ಸಂದರ್ಭದಲ್ಲಿ ಪ್ರದರ್ಶಿಸಲೂ ಶಕ್ತರಾಗಿದ್ದರು. ಈ ಬಾರಿಯ ಪ್ರಾಂತಿಕ ಚುನಾವಣೆಯ ಸೂತ್ರಧಾರಿಗಳ ಮತ್ತು ಜಿಲ್ಲೆಯ ಜನತೆಯ ಕಣ್ಮುಂದೆ ಈ ಆದರ್ಶ ವಿರಲಿ ಎಂದು ಹಾರೈಸಿ, ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಸಂಬಂಧಿಕರೊಡನೆ ಸಹಾನುತಾಪ ಪಡುತ್ತೇವೆ.

ವಿದೇಶ ವಾರ್ತೆ.

ಕ್ರಿಸ್ಟೀಯ ವಿದೇಶ ಮಂತ್ರಿಗಳ [illegible] ಸಮ್ಮೇಲನವು ಇದೇ [illegible] ಮೋಸ್ಕೋದಲ್ಲಿ ಪ್ರಾರಂಭವಾಗಿ, ಅಮೇರಿಕದ ಸ್ಟೇಟ್ ಸೆಕ್ರಿಟರಿ ಮಿ. ಜೇಮ್ಸ್ ಬೈರ್ನೆಸ್, ಬ್ರಿಟನಿನ ವಿದೇಶ ಮಂತ್ರಿ ಮಿ. ಬೆವಿನ್ ಮತ್ತು ರಶ್ಯದ ವಿದೇಶ ಮಂತ್ರಿ ಮೊಲಟವರು ತಮ್ಮ ಸಹಾಯಕರೊಂದಿಗೆ ಗಾಢ ಗುಪ್ತ ಸಂಭಾಷಣೆಗಳಲ್ಲಿ ನಿರತರಾಗಿದ್ದಾರೆ. ಪರ್ಶಿಯಾ, ಚೀನಾ, ಇಂಡೋನೇಶಿಯಾ ಮತ್ತು ಯುರೋಪಿನ ರಾಷ್ಟ್ರಗಳಲ್ಲಿ ಈ ಮುಖ್ಯ ಮೂರು ರಾಷ್ಟ್ರಗಳ ಧೋರಣೆಯ ಕುರಿತು ನಿರ್ಧಾರಕ್ಕೆ ಬರಬೇಕೆಂಬುದೇ ಸಮ್ಮೇಲನದ ಧ್ಯೇಯ. ಪೂರ್ವ ಮುಗಿಯುವ ಮೊದಲು ವಿಸ್ತಾರ ವಾರ್ತೆ ದೊರೆಯುವಂತಿಲ್ಲವೆಂದು ಪತ್ರಿಕಾ ಸ್ವತಂತ್ರಿಗಳಿಗೆ ತಿಳಿಸುತ್ತಾ "ಈ ಸಮ್ಮೇಲನಗಳೆಂದರೆ ಕೇವಲ ವರ್ತಮಾನ ಪತ್ರಿಕೆಗಳ ತಲೆಬರಹಗಳಲ್ಲ" ಎಂದು ಬೆವಿನರಂದಿದ್ದಾರೆ.

ನೋಟೀಸು

ಶ್ರೀ ಹಿರಿಯಡಕ ಮಹತೋದಾರ ಶ್ರೀವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿ

ಯ ಸಲುವಾಗಿ ಟಿಕೇಟುಗಳ ಮೂಲಕ ತಾ. 23—1—46 ಕ್ಕೆ ಜರಗಿಸಬೇಕಾಗಿದ್ದ ಜೋಡಾಟವನ್ನು ಎಂಟರ್ಟೈನ್‌ಮೆಂಟ್ ಟೇಕ್ಸಿನ ತೊಂದ್ರೆಯಿಂದಾಗಿ ರದ್ದುಮಾಡಿಯಿದೆ.

ಅಂತೂ ತಾ. 6—2—46ಕ್ಕೆ ಪ್ರಚಂಡ

ಜೋಡಾಟ ಮಾಡಿಸುವದಾಗಿ

ನಿಶ್ಚಯಿಸಿರುತ್ತದೆ.

ಎಲ್ಲರಿಗೂ ಸುಸ್ವಾಗತವಿದೆ.

ಎ. ಎಂ. ನಾಗಣ್ಣ ಹೆಗ್ಡೆ,

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್; ಮೆನೇಜಿಂಗ್ ಟ್ರಸ್ಟಿ

ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, ಹಿರಿಯಡ್ಕ, ದ ಕನ್ನಡ.

ಪ್ರಕಟಣೆ

ಮಂಗಳೂರು ಡಿ. ಮು. ಕೋರ್ಟಿನಲ್ಲಿ

ಕ್ರೆಪು ವ್ಯಾಜ್ಯ ನಂ. 322/45

ಬಾಣೀರಘಿ ಅನ್ನು —ವಾದಿ.

ಮೂಮು ಸೆಟ್ಟಿ ಕೂಡಾ —ಪ್ರತಿವಾದಿರು.

1 ಮೂಮ ಸೆಟ್ಟಿ, ನಕ್ಕ ಸೆಟ್ಟಿ ಅಳಿಯ ಮತ್ತು 2 ತಾಪ್ತ ಸೆಟ್ಟಿ. ಮೂಮ ಸೆಟ್ಟಿ ಮಗ. ಮುಂಗ್ಲೂರು ತಾಲ್ಲೂ ದೇಲಂತಬೆಟ್ಟು ಗ್ರಾಮ ಪೆ ನಿವಾಸಿಕರು. ಇವರಿಗೆ—

ಕೈಜೇತನಲ್ಲಿ ಕಾಣಿಸಿರುವ ಅಸ್ತಿ ಸ್ವಾಧೀನತೆಗೂ ಗೇಣಿ ಬಾಕಿಗೂ ವಾದಿಯು ನಿಮ್ಮ ಮೇಲೆ ದಾವಿಲು ಮಾಡಿರುವ ಮೇಲೆ ಹೇಳಿದ ದಾವೆಯು ನಿಮಗೆ ಅಬ್ಬರು ನೋಟೀಸು ಬಗ್ಗೆ ಇದೇ ತಾ.27-12-45ಕ್ಕೆ ಇತ್ಯರ್ಥವಿದೆ. ಆ ದಿನ ನೀವು ಸದ್ರಿ ಕೋರ್ಟಿನಲ್ಲಿ ಬೆಳಿಗ್ಗೆ 10-30 ಘಂಟೆಗೆ ಹಾಜರು ಆಗಿ ಉಪಹರಿಸುವರೆ ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದೆಂದು ಕೋರ್ಟು ಹುಕುಂ ನೀಲೆಗೆ ಈ ಮೂಲಕ ನಿಮಗೆ ತಿಳಿಯಪಡಿಸಿರುತ್ತದೆ.

ಕೆ. ಸೂರ್ಯನಾರಾಯಣ ಅಡಿಗ,

ವಾದಿ ಕಡೆ ಎಡ್ವೊಕೇಟ್.

ಮಂಗಳೂರು, 11-12-45.

ಇರಾನಿನಲ್ಲಿ ರಶ್ಯದ ಕೈವಾಡ

ರಶ್ಯದ ಬೆಂಬಲದಿಂದ ಇರಾನಿನಲ್ಲೆದ್ದ ಪ್ರಜಾಸತ್ತಾ ಪಕ್ಷದ ಸೇನೆಯು ಉತ್ತರ ಪ್ರಾಂತ್ಯವಾದ ಆಝರ್‌ಬಿಯಾಜಾನನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿದೆ. ಅಲ್ಲಿಯ ರಾಜಧಾನಿ ಟೇಬ್ರಿಝ್ ಮತ್ತು 40 ಮುಖ್ಯ ಪಟ್ಟಣಗಳನ್ನು ಪ್ರಜಾಪ್ರಭುತ್ವ ಪಕ್ಷೀಯರು ವಶಪಡಿಸಿಕೊಂಡಿದ್ದಾರೆ. ಈ ಕಡೆಗೆ ಮುಂದೊತ್ತಿ ಬಂದ ಪರ್ಶಿಯದ ಸರಕಾರೀ ಸೇನೆಗಳನ್ನು ಕೆಂಪು ಸೇನೆಯು ತಡೆದು ಹಿಂದಕ್ಕೆ ಕಳುಹಿಸಿವೆ. ಇರಾನಿನಲ್ಲೀಗ ರಶ್ಯ, ಅಮೇರಿಕ, ಇಂಗ್ಲಾಡುಗಳ ಸೇನೆಗಳಿವೆ. ಪೂರ್ವ ಒಪ್ಪಂದದಂತೆ ಅವು ಇವ್ವರಿಂದಲೇ ಇರಾನ್ ಬಿಟ್ಟು ಹೋಗಬೇಕಾಗಿತ್ತಾದರೂ ರಶ್ಯವಷ್ಟಕ್ಕೊಪ್ಪಿಲ್ಲ ರಶ್ಯದ ಸೇನೆ ಹಿಂದೆಗೆಯುವಿಕೆ ತಾವಲ್ಲಿಂದ ಮುರಳಲು ಅಂಗ್ಲೋ-ಅಮೆರಿಕಾನರು ತಯಾರಿಲ್ಲ. ಪರ್ಶಿಯದಲ್ಲೊಂದು ಪಕ್ಷಕ್ಕೆ ಬೆಂಬಲವಾಗಿ ಸರಕಾರೀ ಸೇನೆಯನ್ನು ಆತಂಕಿಸಿದ ರಶ್ಯದ ಧೋರಣೆಗೂ ಅಂಗ್ಲೋ-ಅಮೆರಿಕಾನರ ವಿರೋಧವಿದೆ. ಆದ್ದರಿಂದ ವಿದೇಶೀ ಮಂತ್ರಿಗಳ ಪರಿಷತ್ತಿ

ದೇಶ-ವಿದೇಶ

ನಲ್ಲಿ ಮುಖ್ಯವಾಗಿ ಈ ವಿಷಯವು ಚರ್ಚಿಸಲ್ಪಡಲಿದೆ

ಚೀನದ ಆಂತಃಕಲಹ

ಚಿಯಾಂಗ್ ಕೈಶೇಕರ ಚೀನೀ ರಾಷ್ಟ್ರೀಯ ಸರಕಾರಕ್ಕೂ, ಕಮ್ಯೂನಿಸ್ಟ್ ಸೇನೆಗಳಿಗೂ ಚೀನದಲ್ಲೆಲ್ಲಿದ್ದಿರುವ ಕಾಳಗ ದೃಢವಾಗಿ ಸಾಗುತ್ತಲೇ ಇದೆ. ಕಮ್ಯೂನಿಸ್ಟರು ಸಿಧಾನ ವಿಜಯಗಳನ್ನು ಪಡೆಯುತ್ತಾ ಹೋಗುತಿದ್ದಾರೆ. ಚಿಯಾಂಗರಿಗೆ್ಅಮೇರಿಕವೂ, ಕಮ್ಯೂನಿಸ್ಟರಿಗೆ ರಶ್ಯವೂ ಬೆಂಬಲವಾಗಿವೆಂಬುದೊಂದು ಬಹಿರಂಗದಲ್ಲಿರುವ ಗೂಢ. ಚೀನೀಯ ಅಂತಃಕಲಹ ನಿಲ್ಲಲೇ ಬೇಕೆಂದು ಅಧ್ಯಕ್ಷಟ್ರುಮೇನರೀಗ ಉದಾರ ಹೇಳಿಕೆಯೊಂದನ್ನಿತ್ತು, ಅಲ್ಲಿ ರಾಜೀ ವ್ಯಯತ್ನ ಮಾಡಲು ಜನರಲ್ ಮಾರ್ಶಲರ ಅಧ್ಯಕ್ಷತೆಯಲ್ಲಿ ಸ್ವತಿನಿಧಿ ಮಂಡಲವೊಂದನ್ನು ಚೀನಕ್ಕೆ ಬೀಳ್ಕೊಟ್ಟಿದ್ದಾರೆ. ಚೀನವು ಕಮ್ಯೂನಿಸ್ಟ್ ಆಂಕೆಯೊಳಗಾಗದಿರೆ ದೂರ ಪ್ರಾಂತ್ಯದ ಅಮೇರಿಕನ್ ಹಿತ ಸಂಬಂಧಗಳಿಗೆ ಹಾನಿಯಿದೆಯಾದ್ದರಿಂದ ಚಿಯಾಂಗ್ ಕೈಶೇಕರನ್ನು ಸರ್ವ ವಿಧದಿಂದ ಸಮರ್ಥಿಸಿ ಕಮ್ಯೂನಿಸ್ಟ್ ಪ್ರಭಾವಕ್ಕೆ ತಡೆ ಹಾಕುವದೇ ಇವೆಲ್ಲವುಗಳ ಗೂ ಧ್ಯೇಯ. ಚೀನೀ ಸರಕಾರಕ್ಕೆ ಶಸ್ತ್ರೋಪಕರಣ, ಸಾಮಾಗ್ರಿ ಮುತ್ತು ತರ ಬೇಕಿ ಮುಂತಾದ ಸರ್ವ ಸಹಾಯವಿತ್ತಿರುವ ಅಮೇರಿಕವು ಇನ್ನು ಹಿಂದೆಗೆಯದೆ ಇಂಡೋನೇಶಿಯದಲ್ಲಿ ಬ್ರಿಟಿಷರು ಮಾಡುತ್ತಿರುವಂತೆ ಚೀನದಲ್ಲಿ ಪ್ರತ್ಯಕ್ಷ ರಂಗಕ್ಕೆ ಳಿಯುವದು ಸಂಭವನೀಯ.

ಜಾವಾದಲ್ಲಿ ಬ್ರಿಟಿಷ್ ಅತಿರೇಕಗಳು

ಇಂಡೋನೇಶಿಯನ್ ರಾಷ್ಟ್ರೀಯ ವಾದಿ ಉಗ್ರಗಾಮಿಗಳು ಗೊರಿಲ್ಲಾ ಮಾದರಿಯ ಸಾಹಸಗಳನ್ನು ಪ್ರದರ್ಶಿಸುತ್ತಲೇ ಇದ್ದಾರೆ. ಇದಕ್ಕೆ ಪ್ರತೀಕಾರವೆಂದು ಬ್ರಿಟಿಷರು ಜಾವಾದ ಹಳ್ಳಿ ಹಳ್ಳಿಗಳನ್ನೇ ಧ್ವಂಸ ಮಾಡತೊಡಗಿದ್ದಾರೆ. ಬ್ರಿಟಿಷ್ ಸೇನೆಗಳು ಅಧಿಕಾಧಿಕವಾಗಿ ಜಾವಾಕ್ಕೆ ಸರಬರಾ ' ಗುತ್ತಿವೆ. ಜಾವಾದಲ್ಲಿರುವ ತಮ್ಮ 27 ಸೇನಾ ಘಟಕಗಳಿಗೆ ಟೀಂಕು ಮತ್ತು ಫಿರಂಗಿಗಳ ಸರ್ವ ಸಲಕರಣೆಯೊದಗಿಸಿ ಇಂಡೋನೇಶಿಯನರನ್ನು ಸದೆಬಡಿಯಬೇಕೆಂಬ ಕೆಚ್ಚಿನಿಂದ ಡಚ್ಚರಿದ್ದಾರೆ.

ಪೆಲಸ್ತೈನಿನಲ್ಲಿ

ಅರಬ—ಯೆಹೂದೀ ಜಗಳವು ದಿನದಿಂದ ದಿನಕ್ಕೆ ಪ್ರಬಲಿಸುತ್ತಿದೆ. ಇನ್ನು ಯೆಹೂದಿಗಳಾದರೂ ಪೆಲಿಸ್ತೈನಿನೊಳಗೆ ಪ್ರವೇಶಿಸದಂತೆ ಮಾಡುವದಕ್ಕಾಗಿ ಇಲ್ಲಿಯ ಯೆಹೂದಿಗಳ ಮೇಲೆಲ್ಲಾ ಸಂಪೂರ್ಣ ಆರ್ಥಿಕ ದಿಗ್ಬಂಧನ ಹಾಕಿ ಬಹಿಷ್ಕರಿಸುವ ಯೋಜನೆಯನ್ನು ಅರಬ್ ಲೀಗ್ ತಯಾರಿಸಿದೆ. ಈ ಬಹಿಷ್ಕಾರವು ಜನವರಿ 10ಂದ ಜಾರಿಗೆ ಬರುವದು. ಪ್ರತಿಯೊಂದು ಅರಬ ರಾಷ್ಟ್ರವೂ ಪೆಲೆಸ್ತೈನ್ ಯೆಹೂದಿಗಳಿಗೆ ಪ್ರಯಾಣವಿಸಬಂಧಿ ಸದ- ನಿಧದ ಬಹಿಷ್ಕಾರ ಹಾಕುವ ನಿರ್ಧಾರವಾಗಿದೆ

ಪಂಡಿತ ನೆಹರುಗಳ ಬಿರುಗಾಳಿ ಸಂಚಾರ

ಪಂಡಿತ ನೆಹರುಗಳೀಗ ಅಸ್ಸಾಮು ಸಂಚಾರದಲ್ಲಿದ್ದಾರೆ.ನೆಹರು ಸ್ಪರ್ಶದಿಂದ ಅಲ್ಲಿ ಜೀವನವೆದ್ದಿದೆ. ಅಸ್ಸಾಮುಗಡಿಯೊಳಗೆ ಕಾಲಿರಿಸಿದ ಪ್ರಥಮ 14 ಘಂಟೆಗಳಲ್ಲಿ 14 ಸಭೆಗಳಲ್ಲಿ 100000 ಮಂದಿ ಹಳ್ಳಿಗರಿಗೆ ಅವರು ಭಾಷಣವಿತ್ತರು. 160 ಮೈಲುದ್ದದ ಪ್ರಯಾಣದಲ್ಲಿ ಅವರು ಮೂರು ಬಾರಿ ಕಾರು ಬದಲಾಯಿಸಬೇಕಾಯಿತು. ಮೂರನೇ ಕಾರಿನ ಪೆಟ್ರೋಲು ಮುಗಿದು ತಾನು ಸೇರಬೇಕಾದ ಸ್ಥಳಕ್ಕೆ 60 ಮೈಲು ದೂರದಲ್ಲೇ ಕೆಡ್ಡು ಹೊಡೆಯುವ ಸಂದರ್ಭವೊದಗಿದಾಗ ಆ ಹಾದಿಯಲ್ಲಿ ಜನರನ್ನು ತುಂಬಿಕೊಂಡ ಲೋರಿಯೊಂದು ಸಿಕ್ಕಿತು. ಪಂಡಿತಜೀಯ ದರ್ಶನಾಕಾಂಕ್ಷೆಗಳಾಗಿ ಹೊರಟಿದ್ದವರ ಲೋರಿಯದು. ಅವರು ತಮ್ಮ ಪೆಟ್ರೋಲನ್ನು ಕೊಟ್ಟು ಪಂಡಿತರ ಪ್ರಯಾಣವನ್ನು ಸುಗಮಗೊಳಿಸಿದರು.

ಬ್ರಿಟಿಷರು ಹೊರಡುವ ವರೆಗೂ 'ಕ್ವಿಟ್ ಇಂಡಿಯಾ'

'ಬ್ರಿಟಿಷರು ಹೊರಡುವವರೆಗೂ ನಮ್ಮ 'ಕ್ವಿಟ್ ಇಂಡಿಯಾ' ಮೂಲಮಂತ್ರ ಪಠನೆ ನಿಲ್ಲದು' 'ಥಿಲ್ಲಿ ಚಲೋ' ಘೋಷಣೆಯ ಅರ್ಥವೆಂದರೆ ಥಿಲ್ಲಿಯು ಜನಾಭಿಪ್ರಾಯ ಕ್ಕೊಳಗಾಗಬೇಕೆಂಬುದೇ 'ಮೂರು ವರು ಷಗಳೊಳಗೆ ಇಲ್ಲಿ ಬ್ರಿಟಿಷ್ ರಾಜ್ಯವಿಲ್ಲ ವೆಂದಾಗುವದು. ಹಿಂದೂ ರಾಜ್ಯ ಅಥವಾ ಮುಸ್ಲಿಂ ರಾಜ್ಯವೂ ಆಗುವಂತಿಲ್ಲ. ಎಲ್ಲರ ರಾಜ್ಯವಾಗುವದು' 'ಸ್ವಾತಂತ್ರ್ಯ ಹೋರಾಟದ ಸೈನಿಕ ಭಂಗಿಯಲ್ಲಿ ಎದ್ದು ನಿಲ್ಲಿರೆಂದು ತನ್ನ ಪುತ್ರರಿಗೆಲ್ಲಾ ಭಾರತಾಂಬೆಯ ಕರೆಯಿದೆ; ಅವರನ್ನು ಸಮಜಾಯಿಸಿ ಕುಳ್ಳಿರಿಸಿದುದು ಇನ್ನು ಕಾಕು' ಇತ್ಯಾದಿ ಸ್ಫೂರ್ತಿದಾಯೀ ಮಾತುಗಳಿಂದ ಪಂಡಿತ ನೆಹರುಗಳು ಜನತೆಯನ್ನು ಹುರಿದುಂಬಿಸುತ್ತಾ ಹೋಗುತ್ತಿದ್ದಾರೆ. ಅಲ್ಲಲ್ಲಿ ಅವರಿಗೆ ನಿಧಿ ಸಮರ್ಪಣೆಯಾಗುತ್ತಿದೆ.

ಬಂಧನದಲ್ಲಿದ್ದ ಅ. ಹಿಂ. ಸೈನಿಕರಿಗೆ ಗುಂಡಿನೆಸೆತ

ಬಂಗಾಳದ ನೀಲಗಂಜ್ ಬಂಧನ ಶಿಬಿರದಲ್ಲಿದ್ದ ಸುಬಾಸ್ ಸೈನಿಕರ ಮೇಲೆ ಸೆಪ್ಟೆಂಬರ್ 26ರಲ್ಲಿ ಗುಂಡು ಹಾರಿಸಿ, ಇಬ್ಬರು ಅಲ್ಲಿಯೇ ಮಡಿದು 12 ಮಂದಿ ಜಖಂಗೊಂಡು, ಅವರಲ್ಲಿಯೂ ಮೂರು ಮಂದಿ ಮರುದಿನ ಮಡಿದ ಹೃದ್ರಾವಕ ಘಟನೆಯನ್ನು ನೊನ್ನೆ ತಾನೇ ಬಿಡುಗಡೆಗೊಂಡ 80 ಮಂದಿ ಅ. ಹಿಂ. ಸೈನಿಕರು ಪತ್ರಿಕೋದ್ಯಮಿಗಳಿಗೆ ವರ್ಣಿಸಿದ್ದಾರೆ. ಅವರು ಹೇಳುವ ಕಥೆ ಹೀಗಿದೆ:—ಆ ಶಿಬಿರದಲ್ಲಿ 1024 ಕೈದಿಗಳಿದ್ದರು. ಎಂದಿನಂತೆ ಆ ದಿನವೂ ರಾತ್ರಿ 10 ಘಂಟೆಗೆ ಶಿಬಿರದ ದೀಪಗಳಾರಿದವು. ಕೈದಿಗಳೆಲ್ಲಾ ಮಲಗಲು ಹೋಗಹತ್ತಿದರು. ಅಷ್ಟರಲ್ಲಿ ಒಬ್ಬ ಅಧಿಕಾರಿ ಸರಿಗೇ ಬೇಲಿಯಿಂದ ಹಾರಿ ಒಳಗೆ ಬಂದು ಹೇಯ ಶಬ್ದಗಳಿಂದ ಬೈಯುತ್ತಾ 5 ಮಿನಿಟಿನೊಳಗೆ ಎಲ್ಲರೂ ಒಳ ಸೇರಬೇಕೆಂದಾಜ್ಞಾಪಿಸಿದ. ಎಲ್ಲರೂ ಆಜ್ಞೆಯನ್ನಂಗೀಕರಿಸಿದರು. ಅಷ್ಟರಲ್ಲಿ ಆ ಪಾಯು ಶಿಳ್ಳೂ ಹೊರಗಡೆಯಲ್ಲಿ ಓಡಾಡುವ ಶಬ್ದವೂ ಕೇಳಿಬಂತು. ಈ ನಡುವೆ ಆ ದೇ ಅಧಿಕಾರಿಯು ಗೆನ್, ರೈಫಲ್, ಸಿಸ್ಟೂಲುಧಾರಿಗಳಾದ ಇತರ 50 ಮಂದಿಯೊಂದಿಗೆ ಪುನಃ ಒಳಗೆ ನುಗ್ಗಿ ಬಂದು ಅಜಾದ್ ಹಿಂದ್ ಕೈದಿಗಳ ಮುಂಭಾಗದಲ್ಲಿ ಗುಂಡೆಸಲು ತಯಾರಾಗಿ ನಿಂತ. ಆತನು ಮಲೆಯಾಳಿ ಭಾಷೆಯಲ್ಲಿ "ಈ ಸೂಳೇ ಮಕ್ಕಳಿಗೆ ಹೊಡಿಯಿರಿ ಗುಂಡು" ಎಂದಾಗ ಆ ಭಾಷೆಯಲ್ಲಿದ್ದವರಲ್ಲೊಬ್ಬ ಕೈದಿ ವಿಶೇಷ ಮನನೊಂದುಕೊಂಡ. ಕೈದಿಗಳನ್ನು ಬೆದರಿಸುವದಕ್ಕಾಗಿ, ಹೀಗೆ ಮಾಡಿ ಆಕಾಶಕ್ಕೆ ಗುಂಡು ಹಾರಿಸಿ ಹೋಗುವ ಕ್ರಮ ಈ ಮೊದಲೂ ಇತ್ತಾದ್ದರಿಂದ ಈ ಬಾರಿಯೂ ಕೈದಿಗಳಿದನ್ನು ಗಣಿಸಲಿಲ್ಲ. ಪ್ರಥಮತಃ ಆ ಜವರೆಲ್ಲಾ ಆಕಾಶಕ್ಕೇನೇ ಗುಂಡು ಹಾರಿಸಿದರು. ಆದರೆ ಆ ಅಧಿಕಾರಿ ಕೈದಿಗಳಿಗೇನೇ ಗುಂಡಿಡಲು ಆಜ್ಞಾಪಿಸಿದ. ಗುಂಡು ಹಾರಹತ್ತಿದ ಶಬ್ದ ಕೇಳಿದೊಡನೆ ಈ ಬಂಧಿತವೀರರೆಲ್ಲಾ 'ನೇತಾಜೀ ಕೀ ಜೈ' ಎನ್ನುತ್ತಾ ನೀಟಾನೀಟ ನೆಲದಲ್ಲಿ ಮಲಗಿ ಬಿಟ್ಟರು. 5 ಮಿನಿಟು ಗುಂಡು ಹಾರಿತು. ಎದ್ದು ನೋಡುವಾಗ ಇಬ್ಬರು ಮಡಿದು 12 ಮಂದಿ ಜಖಂಗೊಂಡಿದ್ದರು. ಗುಂಡೆಸೆದವರು ಹಿಂದಿರುಗಿ ಹೋಗುತಿದ್ದರು ಕೊನೆಗೆ ಚಿಕಿತ್ಸೆ ನಡೆದು ಮರುದಿನ ಮೂವರು ಸತ್ತರು. ಉಳಿದವರಿಗೆ ಒಂದು ತಿಂಗಳಿಗೂ ಮಿಕ್ಕಿ ಚಿಕಿತ್ಸೆ ನಡೆಯಿತು. ಸತ್ತವರಲ್ಲಿ ನಾಲ್ವರು ದಕ್ಷಿಣ ಹಿಂದುಸ್ಥಾನದವರು. ಇದಾಗಿ ಎರಡು ದಿನಗಳ ನಂತರ ಬಂದ ಮರಾಟಾ ಕೆಪ್ಪನ ನೊಬ್ಬನು, ಆ ಗುಂಡೆಸೆತಕ್ಕಾಗಿ ಪಶ್ಚಾತ್ತಾಪ ಸೂಚಿಸಿ ಅದನ್ನು ಮರೆಯಬಹುದೇಕೆಂದು ಅಜಾದ್ ಹಿಂದ್ ಬಂಧಿತರನ್ನು ಕೇಳಿಕೊಂಡ. 'ಅದು ಮರೆಯುವ ವಿಷಯವಲ್ಲ' ಎಂದು ಇವರು ಉತ್ತರಿಸಿದರು. ಆ ಗುಂಡೆಸೆದ ಅಧಿಕಾರಿಗಳ ಮತ್ತು ಸೋಲ್ಜರರ ಮೇಲೆ ಯೋಗ್ಯ ಪ್ರಾಯಶ್ಚಿತ್ತ ಕೈಕೊಳ್ಳಲಾಗುವದೆಂದು ಈ ಅಧಿಕಾರಿ ಹೇಳಿದ. ಆ ಅಪರಾಧಿಗಳೀಗ ಕೋರ್ಟು ಮಾರ್ಶಲ್ ವಿಚಾರಣೆಯಲ್ಲಿದ್ದಾರಂತೆ.

ಕನ್ನಡ ಪತ್ರಿಕಾಪ್ರಪಂಚದಲ್ಲಿ ಪ್ರಥಮ ಪ್ರಯತ್ನ!

'ಅಂತರಂಗ'ದ

ಆಯುರ್ವೇದ ಸಮ್ಮೇಲನಾಂಕ

ಈ ತಿಂಗಳಾಂತ್ಯದಲ್ಲಿ ಪ್ರಕಟವಾಗುವುದು.

ಅಖಿಲಭಾರತ ಖ್ಯಾತಿಯ ಲೇಖಕ ವರ್ಗ!

ಕನ್ನಡಿಗರಿಗೆ ಈ ವರೆಗೆ ಯಾರೂ ಅರ್ಪಿಸದ ಹೊಸ ವಸ್ತುವಿನ ಹೊಸ ಮಾದರಿಯ ಕಾಣಿಕೆ.

ವೃತಿ ಡಾಕ್ಟರ, ವೈದ್ಯರಷ್ಟೇ ಅಲ್ಲ—ವ್ರತಿಯೊಬ್ಬ ಕನ್ನಡಿಗನೂ ಸಂಗ್ರಹಿಸತಕ್ಕ ಅತ್ಯಮೂಲ್ಯ ಸಂಚಿಕೆ.

ನೂರಾರು ಫುಟಗಳು! ಹಲವಾರು ಚಿತ್ರಗಳು!!

ಇಷ್ಟಿದ್ದರೂ ಬೆಲೆ ಬರೇ ಒಂದು ರೂಪಾಯಿ ಮಾತ್ರ.

ಈ ತಿಂಗಳಾಂತ್ಯದೊಳಗೆ ಒಂದು ರೂಪಾಯಿಯ ಪೋಸ್ಟಲ್ ಆರ್ಡರು ಯಾ ಮನಿಯಾರ್ಡರು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ಮೆನೇಜರ್, 'ಅಂತರಂಗ' ವಾರಪತ್ರಿಕೆ, ಉಡುಪಿ, ದ.ಕ.

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur B. S. Sawkar, B.A. L.L. B.,
Chairman.

A. S. Kini,
Managing Director.

ದಿ ಯುನೈಟೆಡ್ ಕರ್ನಾಟಕ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಧಾರವಾಡ

THE UNITED KARNATAK INSURANCE Co Ltd DHARWAR

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ—

Organising Office:— Court Road, UDIPI.

ತಿರುಗ ಮುರುಗ
'ಆದಾಯ ಹಿಂದು ಸೂರೆಹೋದ' ವಿಚಾರಣೆಯನ್ನು ಇನ್ನೊಂದು ವಾರಕ್ಕೆ ಮುಂದರಿಸಿಯಿದೆ.

ಸನಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಅಖಿಲ ಭಾರತ ಆಯುರ್ವೇದಿಕ್ ಕಾಂಗ್ರೆಸ್ ಅಧಿವೇಶನ, ಮಣಿಪಾಲ.

ಉಡುಪಿ-

ಕಾರ್ಯಕ್ರಮ.

ತಾ. 28-12-45 ಘಂಟೆ 3ಕ್ಕೆ ವೈದ್ಯರತ್ನ ಜಿ. ಶ್ರೀನಿವಾಸ ಮೂರ್ತಿಯವರಿಂದ ವಸ್ತು ಪ್ರದರ್ಶನ ಪಾರಂಭೋತ್ಸವ, ಡಾ! ಪಿ. ಎಸ್. ಈಶ್ವರ ಭಟ್ಟರ ಸ್ವಾಗತ ಭಾಷಣ, 5 ಘಂಟೆಗೆ ಬಿಷನ್ ರತ್ನ ಎ. ಲಕ್ಷ್ಮಿಪತಿಯವರ ನೇತೃತ್ವದಲ್ಲಿ ಯೋಗ ವ್ಯಾಯಾಮ ಸಂಭಾಷ, 9 ಘಂಟೆಗೆ ವಿದ್ಯಾ ಸೀರದ ಕಾರ್ಯನಿರ್ವಾಹಕ ಮಂಡಳಿಯ ಸಭೆ, 10 ಘಂಟೆಗೆ ಮಹಾ ಮಂಡಳದ ಸಭೆ.

ತಾ 29-12-45 ಪೂರ್ವಾಹ್ನ ಘಂಟೆ 8 ಕ್ಕೆ ಮೆರವಣಿಗೆ, 9 ಘಂಟೆಗೆ ಧನ್ವಂತರಿ ಧ್ವಜಾರೋಹಣ, ಆಯುರ್ವೇದಾಚಾರ್ಯ ಪಂಡಿತ ಶಿವರಾಮ ಶರ್ಮರಿಂದ, ಮಧ್ಯಾಹ್ನ 3 ಘಂಟೆಗೆ ಶ್ರೀ। ಎ. ಲಕ್ಷ್ಮೀನಾರಾಯಣರಾಯರ ಸ್ವಾಗತ ಭಾಷಣ. ತದನಂತರ ಶ್ರೀ। ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಸ್ವಾಮಿಗಳವರಿಂದ ಮಹಾ ಅಧಿವೇಶನ ಉದ್ಘಾಟನಾ ಸಮಾರಂಭ. ಆ ಬಳಿಕ ಕವಿರಾಜ ರಾಜ ವೈದ್ಯ ಮಹೀಂದ್ರ ಕುಮಾರರ ಅಧ್ಯಕ್ಷ ಭಾಷಣ, 5 ಘಂಟೆಗೆ ಶಿಕ್ಷ ಸಮ್ಮೇಳನ ವೈದ್ಯ ಭೂಷಣ ಎಮ್ ವಿ. ಶಾಸ್ತ್ರಿಯವರ ನೇತೃತ್ವದಲ್ಲಿ. ಪ್ರಾರಂಭೋತ್ಸವ ಮಂಗಳೂರು ಟೋರ್ಡ್ ಬಿಶೋಪರಿಂದ, ರಾತ್ರಿ 9 ಘಂಟೆಗೆ ಶಿಕ್ಷ ಸಮ್ಮೇಳನದ ವಿಷಯ ನಿಯಾಮಕ ಸಭೆ. 10 ಘಂಟೆಗೆ ಮಹಾ ಅಧಿವೇಶನದ ವಿಷಯ ನಿಯಾಮಕ ಸಭೆ.

30-12-45 ಬೆಳಿಗ್ಗೆ 9 ಘಂಟೆಗೆ ಅಖಿಲ ಭಾರತ ವಿದ್ಯಾ ಸೀರ ಸ್ನಾತಕ ಸಮ್ಮೇಳನ ಶ್ರೀ ಗಂಗಾಧರ ವಿಷ್ಣು ಪುರಾಣಿಕರ ಅಧ್ಯಕ್ಷತೆಯಲ್ಲಿ. 10 ಘಂಟೆಗೆ ಶ್ರೀಮತಿ ಲಕ್ಷ್ಮಿ ಜಾಯಿ ತಾರಾನಾಥರ ನೇತೃತ್ವದಲ್ಲಿ ಕುಮಾರ ಭೃತ್ಯ ಸಂಭಾಷಾ, 11 ಘಂಟೆಗೆ ಶಾಯ ಚಿಕಿತ್ಸಾ ಸಂಭಾಷಾ, ವೈದ್ಯಗುರು ಆರ್. ಕೆ. ವಲ್ಪೇಕರ್ ನಾಯಕತ್ವದಲ್ಲಿ. ಮಧ್ಯಾಹ್ನ 3 ಘಂಟೆಗೆ ದರ್ಶನ ಸಂಭಾಷಾ, ಆಯುರ್ವೇದ ವಿದ್ವಾನ್ ನಂಜುಂಡ ಸ್ವಾನಿಯವರ ನೇತೃತ್ವದಲ್ಲಿ. 5 ಘಂಟೆಗೆ ಸಲ್ಯ ಶಾಲಕ್ಯ ಚಿಕಿತ್ಸಾ ಸಂಭಾಷಾ ಶ್ರೀ. ಎನ್. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ. 8 ಘಂಟೆಗೆ ಅಖಿಲ ಭಾರತ ಆಯುರ್ವೇದ ವಿದ್ಯಾ ಪೀಠ ಸ್ನಾತಕ ಸಭೆಯ ನುಕ್ತಾಯ ಕೂಟ.

31-12-45 ಬೆಳಿಗ್ಗೆ 9 ಘಂಟೆಗೆ ಭಷಗಾ ಬಾರ್ಯ ಕವಿರಾಜ ಆರುಟಿಸ್ ಜುಜು ಮ್ಹಾರ್ ಅವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಆಯುರ್ವೇದ ಪತ್ರಿಕೋದ್ಯೋಗಿಗಳ ಸಮ್ಮೇಳನ ಮತ್ತು ತ್ರಿದೋಷ ಸಂಭಾಷಾ, ವೈದ್ಯ ರಾಜ ಪಂಡಿತ ವಿಶ್ವನಾಥ ದ್ವೈವೇದಿ ಆಯುರ್ವೇದಾಚಾರ್ಯರ ಅಧ್ಯಕ್ಷತೆಯಲ್ಲಿ. 11 ಘಂಟೆಗೆ ಅಖಿಲ ಭಾರತ ಆಯುರ್ವೇದ ಫಾರ್ಮಸಿ ಕಾನ್ಫರೆನ್ಸು, ಮಧ್ಯಾಹ್ನ 5 ಘಂಟೆಗೆ ಅಖಿಲ ಭಾರತ ಆಯುರ್ವೇದ ಶಿಕ್ಷಕ ಸಮ್ಮೇಳನ, 6.30ಕ್ಕೆ ಅಖಿಲ ಭಾರತ ಆಯುರ್ವೇದ ಮಹಾ ಸಮ್ಮೇಳನ ಸಮಾಪ್ತಿ ಅಧಿವೇಶನ, ವೈದ್ಯಾವತಂಶ ಪುರುಷೋತ್ತಮ ಸಮಾರಾಮ ಶಾಸ್ತ್ರಿಯವರ ನೇತೃತ್ವದಲ್ಲಿ.

ಕರ್ನಾಟಕ ಸಂಘ-ದ ಕಾರ್ಯವಾಹೀ ಸಮಿತಿಯು ತಾ 9ರಲ್ಲಿ ಸೇರಿ, ಶ್ರೀಗಳಾದ ಎನ್. ರಾಜಗೋಪಾಲಕೃಷ್ಣ ರಾವ್ ಅಧ್ಯಕ್ಷ, ಬೈಲೂರು ವಾಸುದೇವ ರಾವ್ ಉಪಾಧ್ಯಕ್ಷ, ಬಿ. ರಾಮಕೃಷ್ಣಾಚಾರ್ ಪ್ರಧಾನ ಕಾರ್ಯದರ್ಶಿ, ಬಿ. ವಿ. ಕೆದಿಲಾಯ ಸಾಹಿತ್ಯ ಕಾರ್ಯದರ್ಶಿ, ಆರ್. ಆರ್. ಕುಂಜೂರು ಕಲಾ ಕಾರ್ಯದರ್ಶಿಗಳಾಗಿ ನರ್ವಾನುಮತದಿಂದ ಆರಿಸಲ್ಪಟ್ಟರು.

ಗೀತಾ ಜಯಂತಿ-ಕರ್ನಾಟಕ ಸಂಘದ ವತಿಯಿಂದ ತಾ 16ನೇ ಆದಿತ್ಯವಾರ ಸಂಜೆ ೫ ಗಂಟೆಗೆ ಕೆನರಾ ಶಾಲೆಯಲ್ಲಿ ಶ್ರೀ. ಪಿ. ಶ್ರೀನಿವಾಸ ಪಟ್ಟರ ಅಧ್ಯಕ್ಷತೆಯಲ್ಲಿ ಗೀತಾ ಸಭೆ ಸೇರಲಿದೆ. ಅಧ್ಯಕ್ಷರೂ ಶ್ರೀ. ಪಿ. ಸುಬ್ರಹ್ಮಣ್ಯ ತಂತ್ರಿಗಳೂ ಗೀತೆಯ ವಿಷಯವಾಗಿ ಉಪನ್ಯಾಸವಿತ್ತಾರು. ಶ್ರೀ. ಎನ್. ರಾಜಗೋಪಾಲಕೃಷ್ಣರಾಯರು ಪದ್ಯರೂಪೀ ಗೀತೆಯ ಪಾಠನ ಮಾಡಿದರಲ್ಲದೆ ಧನ್ಯವಾದಗಳನ್ನರ್ಪಿಸಿದರು. ಕಲಾವ್ಯಂದವ ನೇತೃತ್ವದಲ್ಲಿಯೂ ತಾ 15 ನ ಗೀತೋಪನ್ಯಾಸಗಳಾದುವು.

ಸರ್ಜನ್ ಜನರಲ್-ರವರು ಉಡುಪಿಗೆ ಸಂದರ್ಶಿಸಿ ಕ್ಷಯರೋಗ ಆಸ್ಪತ್ರೆ ತೆರೆಯುವಂತೆ ಮಾಡಿಸಲು ಯೋಗ್ಯ ಸ್ಥಳವೋ ಎಂದು ಪರಿಶೀಲಿಸಿಕೊಂಡು ಹೋಗಿರುವರು. ಡಾ। ಮೂಧನ ವೈಗಳು ಅವರಿಗೆ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು.

ನಗರ ಸಭೆಯು- ಚೆಯರ್‌ಮೆನ್ ಶ್ರೀ। ಎ.ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಸ್ಯಾಕಲ್ ಟೇಕ್ಸ್ ಅರ್ಧ ವರುಷಕ್ಕೆ ರೂಪ್ಯಾ 1 14 0 ಇದ್ದುದನ್ನು ರೂಪಾಯಿ ಎರಡಕ್ಕೆ ನಿರ್ಣಯಿಸಿತು. ಮುಂದಿನ ಎಪ್ರಿಲ್ ತಿಂಗಳಿಂದ ಈ ತೆರಿಗೆಯು ಜಾರಿಗೆ ಬರಲಿರುವುದು. 1944-45ರ ತಿದ್ದಿದ ಹಾಗೂ 1945 46ರ ಅಂದಾಜು ಬಜೆಟು ಮಂಜೂರಾಯಿತು.

ಭತ್ತ ಮುಹೂರ್ತ-ನುಂದಿನ ಪರ್ಯಾಯ ಪೀಠವನ್ನೇರಲಿರುವ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರ ಪರ್ಯಾಯ ಮಹೋತ್ಸವದ ಪೂರ್ವ ಸಿದ್ಧತೆಯ ಕೆಲಸಗಳಿಗಾಗಿ ಮೊನ್ನೆ ಸೋಮವಾರ ತಾ 13ರಲ್ಲು ಜರಗಿತು. ಶ್ರೀ ಕೃಷ್ಣಾಪುರ ನುರಿಪೀ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ಬಂಗಾರದ ಪಾಲಕಿಯನ್ನು ತ್ತು ಸಹಕರಿಸಿದ್ದರು.

NOTICE

ಆರ್ಯಪು ಮುನ್ಸಿಪ್ ಕೋರ್ಟು ಪ್ರೆಸಿಡೆಂಟರು ತಿಳಿಯಪಡಿಸುವಂತೇನೆಂದರೆ:-

ವ್ಯಾಜ್ಯ ನಂಬ್ರ 6/45.

ಕೆ. ಸೋಮಪ್ಪ ಶೆಟ್ಟಿ ಏತಪ್ಪ ಶೆಟ್ಟಿ, ಅಳಿಯ. ಕೈಕ್ಕಾತ ಒಳಮುಗ್ರು ಗ್ರಾಮ —ವಾದಿ.

ಮಾಡ್ಮದೆ ಬ್ಯಾರಿ ನುತ್ತು ಹುಸಕುಂಞ ಬ್ಯಾರಿ. ಸ್ಮೈದುಕುಂಞ ಬ್ಯಾರಿ ಮಕ್ಕಳು,ಪಂಜಾಗಿಲಿನಲ್ಲಿ. ಒಳಮುಗ್ರು ಗ್ರಾಮದಲ್ಲಿರುವವರು. —ಪ್ರತಿವಾದಿರು.

ಮೇಲ್ಕಂಡ ವ್ಯಾಜ್ಯದಲ್ಲಿ 2ನೇ ಪ್ರತಿವಾದಿ ಹುಸಕುಂಞ ಬ್ಯಾರಿಗೆ 3ಥಪೆ ಕೈಪೇತು ನಕ್ಲು ಮತ್ತು ನೋಟೀಸು ಜ್ಯಾರಿಗೆ ಕೊಟ್ಟಾಗ್ಯೂ ಆತನು ಬೇಕೆಂತಲೇ ತಪ್ಪಿಸಿಕೊಳ್ಳುತ್ತಾನಾಗಿತಿಳಿದುಬಂದದ್ರಿಂದ ನಮ್ಮ ನವಯುಗ ಜೇಸರನಲ್ಲಿ ಈ ವಿಷಯವನ್ನು ಪ್ಲೈಸ್ ಮಾಡುವದಲ್ಲದೆ ಮೇಲೆ ತೋರುವ ವ್ಯಾಜ್ಯವನ್ನು ಇದೇ ಸಂಟ್ಯಾತ್ ಕೋರ್ಟಿನಲ್ಲಿ ತಾ 22-12-45ನೇ ಆದಿತ್ಯವಾರ ಸಂಟೆ 2ಕ್ಕೆ ತನ್ನಿಗೆ ಇಷ್ಟೆರುತ್ತದೆಂತಲೂ ಆತನು ಆ ದಿವಸ ಹಾಜರಾಗಿ ಆವನ ಆಗತ್ಯವಾದ ಉದಾಹರಣೆ ಕೊಡಬೇಕು. ಇದಕ್ಕೆ ತಪ್ಪಿದ್ರೆ ಆತನ ಗೈರ್ ಹಾಜರಿಯಲ್ಲಿ ಸದ್ರಿ ವ್ಯಾಜ್ಯವನ್ನು ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾದೀತೆಂದು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವಂತೆ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

K. Shantiraga Hegde.

ಆರ್ಯಾಪು ಮುನ್ಸಾತ್ ಜೋರ್ಡ್ ಪ್ರೆಸಿಡೆಂಟ್

ಪ್ರಕಟಣೆ

ಕೊಲೆಕಾಡಿ ವಿದ್ಯಾಪ್ರಚಾರಿಣೀ ಪಾಠಶಾಲಾ

ಹಳೆ ವಿದ್ಯಾರ್ಥಿ ಸಂಘ.

। ಸಂಘೇ ಶಕ್ತಿ. ಕಲೌಯುಗೇ ।

ಸಹೋದರ ಸಹೋದರಿಯರೇ!

ನಾವು ಆದಿಮ ವಿದ್ಯೆಯನ್ನು ಪಡೆದ ನಮ್ಮ ಕೊಲೆಕಾಡಿ ವಿದ್ಯಾಪ್ರಚಾರಿಣೀ ಪಾಠಶಾಲೆಯಲ್ಲಿ ಹಳೆ ವಿದ್ಯಾರ್ಥಿ ಸಂಘವು—ಸ್ಥಾಪಕರು, ರಕ್ಷಕರು, ಆಶ್ರಯದಾತರು, ಪೋಷಕರು, ಹಿತಚಿಂತಕರು, ಸದಸ್ಯರು ಎಂಬೀ ಐದಾರು ತರಗತಿಯ ಮೆಂಬರರ ಪ್ರೀತಿಯಿಂದ ದೈನ್ಯವಾಗಿ,—ಒಕ್ಕಟ್ಟು, ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆ ಸಹಾಯ, ಪಾಠಶಾಲಾಭ್ಯುದಯ ಪಾರಿತೋಷಕ, ಉಚಿತ ಪಾಚನಾಲಯ ಹಾಗೂ ಪುಸ್ತಕ ಭಂಡಾರ, ಲೇಖನ ಪತ್ರಿಕೆಗಳು, ಆಟಗಳು ಮತ್ತು ಇನಾಚರಣೆ ಎಂಬ ಹಲವಾರು ಸದುದ್ದೇಶಗಳನ್ನು ನೆರವೇರಿಸಲು ಸ್ಥಾಪಿಸಲ್ಪಟ್ಟ ಸಂಘ. ಆದ್ದರಿಂದ ಸ್ಥಳೀಯ, ಪರಸ್ಥಳೀಯ ಹಳೆ ವಿದ್ಯಾರ್ಥಿಗಳೂ ಮತ್ತು ವಿದ್ಯಾಭಿಮಾನಿಗಳೂ ಕೂಡಾ ಈ ಸಂಘದಲ್ಲಿ ಸಹಭಾಗಿಗಳಾಗಿ. ಸಂಘದ ಯಾ ನದಾದೆಡೆಯೊಂದು ತರಗತಿಯ ಮೆಂಬರರಾಗಿ ಸೇರಿ, ಉದಾರ ಮನಸ್ಸಿನಿಂದೆ ಯಾನ ರೂಪ ದಲ್ಲಾದರೂ ಸಂಘಕ್ಕೆ ಸಹಾಯವನ್ನು ತೆತ್ತು, ಸಂಘದ ಏಳಿಗೆಯನ್ನು ಹಾರೈಸಬೇಕಾಗಿ ಕೋರುವ,

ಟಿ. ಬಾಲಕೃಷ್ಣ ಶೆಟ್ಟಿ,
ಗೌರವ ಕಾರ್ಯದರ್ಶಿ.

NOTICE

IN THE COURT OF THE DISTRICT MUNSIF OF MANGALORE.

O. S No. 271 of 1945

Between:-

B. F. Lobo —Plaintiff.

and

Veeramma and others —Defendants.

To Defendants Nos:

3 Kalyani, daughter of Veeramma. 15 Bamu; daughter of Maire. 18 Manjunatha son of Bamu 20 Sundari, daughter of Muthamma. 24 Krishna. 26 Doomanna alias Devanna 27 Pandu.

Defendants 24 to 27 are the children of Laxmi 3rd difendant resides at Palimar, 15, 18, 24 to 27 resides in Puttu Prabhu's Lane, Mangalore Town and the 20th defendant resides in Hoige Bazaar, Mangalore Town.

Please take notice that the above suit filed by the plaintiff for recovery of Rs. 160-3-2 being the arrears of rent and for possession of the properties on the ground that the lease-hold has been forfeited on account of non-payment of rent as per the terms of the mulgeni deed dated 15-3-1867 executed by Sanna Thyampanna Shetty, the predecessor-in-title of your family will come on for hearing on 1-1-1946 in the above Court at 11 A. M. You may appear either in person or by a pleader on the said date failing which the same will be decided in your absence

Mangalore, 18-12-1945 } *M. K. Kamath.* Vakil for Plaintiff.

BANK WITH THE LARGEST CONNECTIONS ON THE WEST COAST.

OFFERS:-

EFFICIENT, PROMPT & COURTEOUS

SERVICE OF EVERY TYPE

OPEN AN ACCOUNT

with

The Canara Industrial & Banking Syndicate Ltd

ESTD 1925

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 22-11-1945ರಿಂದ

ನ್ಯೂ ಥಿಯೇಟರಿನಲ್ಲಿ

ಅಶಿತ್ ಭರಣ & ಭಾರತಿದೇವಿ.

ವಾಪಾಸ್

ನಂತರ— ಲಡಾಯಿ—ಕೆ—ಬಾದ್

ನವಯುಗ ಚಿತ್ರ

ಬರುತ್ತದೆ:—ಕನ್ನಡ ಪುಲ್ವಾದಾ

NAVAYUGA

The Leading Kannada weekly

Published every Thursday

The best medium for advertisement of every kind

For advt. rates:-

The advt. Manager

Navayuga Udipi.

ದಕ್ಷಿಣ ಕನ್ನಡ

ಮಂಗಳೂರು.

ದಕ್ಷಿಣಕನ್ನಡ, ನೀಲಗಿರಿ, ಮಲಬಾರು ಜಿಲ್ಲೆಗಳ ಕ್ಷೇತ್ರದಿಂದ ಕೇಂದ್ರ ಎಸೆಂಬ್ಲಿಗೆ ಕಾಂಗ್ರೆಸ್ ಹುರಿಯಾಳಾಗಿ ನಿಂತ ಶ್ರೀ. ಎ. ಕರುಣಾಕರ ಮೆನೊನ್‌ರವರು 14,819 ಮತಗಳನ್ನು ಪಡೆದು ಪ್ರಚಂಡ ಬಹುಮತದಿಂದ ಆರಿಸಲ್ಪಟ್ಟಿರುವರು. ಇವರ ಎದುರಾಳಿ ಹಿಂದೂ ಮಹಾ ಸಭೆಯ ಪ್ರತಿನಿಧಿ ಶ್ರೀ ನಾಗರಾಜಯ್ಯನವರಿಗೆ 217 ವೋಟುಗಳು ದೊರೆತು ಸೆಕ್ಯೂರಿಟಿ ಹಣವನ್ನು ಸಹ ಕಳಕೊಳ್ಳಬೇಕಾಯಿತು.

ಬಂಟರ ಯಾನೆ ನಾಡವರ ಪರಿಷತ್ತು, ಮೂಲ್ಕಿ—ಸಂಘದ ಮೆಂಬರರಾಗಿಸ್ತು ರೂ. 5-ನ್ನು ತೆತ್ತು ಪ್ರತಿನಿಧಿಗಳಾಗಿ ಬರುವವರಿಗೆ ಮಾತ್ರ ತಾ. 22-12-1945ನೇ ರಾತ್ರಿ ಭೋಜನ ಮ ಉಳಕೊಳ್ಳುವ ವ್ಯವಸ್ಥೆ ಇದೆ. ಪ್ರತಿನಿಧಿಗಳಲ್ಲದವರು ಬೆಡ್ಡಿಂಗ್ ತರಬೇಕಾಗಿದೆ. ತಾ. 23-12-1945ನೇ ದಿನ ಗಂತ ಕಾಫಿ ಫಲಾಹಾರ ಮತ್ತು ಮಧ್ಯಾಹ್ನದ ಭೋಜನವು ಪ್ರತಿನಿಧಿಗಳು ಮತ್ತು ನೆಂಬರರಿಗೆ ಅನುಕೂಲ ಗೊಳಿಸಲ್ಪಡುವುದಾದರೂ, ಎಲ್ಲವರೂ ತಮ್ಮ, ತಮ್ಮ ಹೆಸರನ್ನು ಮುಂದಾಗಿ ಕೊಡುವುದು ಕಾಲ ಸ್ಥಿತಿಯಲ್ಲಿ ಆಗತ್ಯವಿದೆ. ಸಮಾಜದ ಯಾವೊಬ್ಬರು ರೂ. 5, 10, 15, 25 ಕೊಟ್ಟು ಸ್ವಾಗತ ಕಮಿಟಿಯ ಮೆಂಬರರಾಗಿ ಪ್ರೋತ್ಸಾಹಿಸಬೇಕಾಗಿ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಶಿರ್ವ—ಇಲ್ಲಿಯ ಜಿ. ಯನ್. ವಿದ್ಯಾವರ್ಧಕ ಸಂಘದವರು ಬೊಂಬ್ಬಾಯತ್ತ ಕೆರೆ ಹಣ ಸಂಗ್ರಹಿಸಲು ಹೋದಲ್ಲಿ ತಮ್ಮ ತಮ್ಮ ಧನ ಸಹಾಯದೊಂದಿಗೆ ಸಂಘದ ಭಾವೀ ನೀಲ್ಮೆಯನ್ನು ಬಯಸಿ ಶ್ರೀಗಳಾದ ಶಿರ್ವ ವಾಗಭವ ಶ್ಯಾನುಭೋಗರು, ಸೂಡ ವೀರಪ್ಪ ಸೆಟ್ಟಿ, ಮರ್ಣೆ ವೀರ ಸೆಟ್ಟಿ, ಪಾಡೂರು ರಾಜು ಸೆಟ್ಟಿ, ಕಲ್ಲುಟ್ಟೆ ವಿಟ್ಟಲ ಸೆಟ್ಟಿ, ಕುತ್ಯಾರು ಮಹಮ್ಮದ ಸೆಟ್ಟಿ, ಕುತ್ಯಾರು ನಂದಪ್ಪ ಸೆಟ್ಟಿ, ಅತ್ತೆ ನರ್ಸು ಸೆಟ್ಟಿ, ಶಿರ್ವ ನಾಗಪ್ಪ ಸೆಟ್ಟಿ, ಮೊದಲಾದ ಹಲವು ಮಹನೀಯರು ಉದಾರ ಹಸ್ತದಿಂದ ಪ್ರೋತ್ಸಾಹಿಸಿರುವರು. ಸದ್ರಿ ಮಹನೀಯರೆಲ್ಲರಿಗೂ, ಸಂಬಂಧಪಟ್ಟವರು ಕೃತಜ್ಞತೆಯನ್ನರ್ಪಿಸುತ್ತಾರೆ

ಮುಬ್ಬಾಡಿ—ತಾ. 10-12-45ರಲ್ಲಿ ಇಲ್ಲಿಯ ಜೂ. ಎ. ಶಾಲೆಯಲ್ಲಿ ಜೆ. ಜೂ ಎಜ್ಯುಕೇಶನಲ್ ಆಫೀಸರ್. ಶ್ರೀ. ರಾಮರಾಯರ ಅಧ್ಯಕ್ಷತೆಯಲ್ಲಿ ಮಾಕ್ಷಳ ಕಂಗಿ

ವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲ್ಪಟ್ಟಿತು.

ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಳನವು—ಇದೇ ದಶಂಬರ ತಿಂಗಳ 3 ಮತ್ತು 4 ತಾರೀಕುಗಳಲ್ಲಿ ಬಹು ಯಶಸ್ವಿಯಾಗಿ ಜರಗಿತು. ಸಮ್ಮೇಳನದ ಆರಂಭೋತ್ಸವವನ್ನು ಭಂಡಾರ ಕೇರಿ ಮನೆಯ ಸ್ವಾಮಿಗಳವರು ನೆರವೇರಿಸಿದರು. ಮೈಸೂರು ಮಹಾರಾಜಾ ಕಾಲೇಜಿನ ತತ್ವ ಶಾಸ್ತ್ರ ಅಧ್ಯಾಪಕರಾದ ಶ್ರೀ ನಾನ್ ಎಂ. ಯಮುನಾಚಾರ್ಯರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಂಸಾರ ಸ್ವರೂಪ ನಿರೂಪಣ, ನೇತರ ಉಪಾಸನೆಯ ಉದ್ದೇಶ, ವೈಯ್ತ-ಅದ್ವೈತ ವಿಶಿಷ್ಟಾದ್ವೈತ ಜೈನ ದರ್ಶನ, ಕ್ರೈಸ್ತ ಧರ್ಮ ತತ್ವಗಳ ಆಧಾರದಲ್ಲಿ ಧಾರ್ಮಿಕ ಉಪನ್ಯಾಸಗಳು ನಡೆದವು. ಸಮ್ಮೇಳನಾಂತ್ಯದಲ್ಲಿ ಶ್ರೀ ಮೂನ್ ಡಿ. ಮಂಜಯ್ಯ ಹೆಗ್ಗಡೆಯವರು ಧನ್ಯವಾದ ಗಳನ್ನರ್ಪಿಸಿದರು. ವಿವಿಧ ಧರ್ಮಗಳು ಪರಮಾತ್ಮನ ಕುರಿತು ಏನು ಸಾರುತ್ತವೆ ಎಂಬುದನ್ನು ಜನ ಸಾಮಾನ್ಯರಿಗೂ ತಿಳಿಯುವಂತೆ ಇಂತಹ ಉತ್ಸವ ಸಮಾರಂಭಗಳಲ್ಲಿ ವ್ಯವಸ್ಥೆ ಮಾಡಿದ ಧರ್ಮಸ್ಥಳ ಹೆಗ್ಗಡೆಯವರ ಮೇಲ್ಪಂಕ್ತಿ ಇತರ ಧರ್ಮ ಸಂಸ್ಥೆಗಳಿಗೆ ಮಾದರಿಯಾಗಿದೆ.

ಶಿವಮೊಗ್ಗಾ—ಆಯಿಲ್ ಭಾರತ ಆಡಿಕೆ ಬೇಸಾಯಗಾರರ ಪರಿಷತ್ತು ತಾ 8, 9ರಲ್ಲಿ ಶಿವಮೊಗ್ಗೆಯಲ್ಲಿ ಶ್ರೀ. ಡಿ. ಪಿ. ಕರಮರಕರರ ಅಧ್ಯಕ್ಷತೆಯಲ್ಲಿ ಜರಗಿತು. ಆಡಿಕೆಯ ಮೇಲೆ ಹೊರಿಸಿದ ಆಮ್ಯಾರಿ ಸುಂಕ ಹಾಗೂ ಈ ಕೃಷಿಯ ಮೇಲೆ ಹೊರಿಸಲಾಗಿರುವ ನಿರ್ಬಂಧವು ಆಕ್ರಮವಾದುದು. ಕೇಂದ್ರ ಸರಕಾರ ಹಾಗೂ ಮೈಸೂರು, ತಿರುವಾಂಕೂರು ಕೊಚ್ಚಿ ಮೊದಲಾದ ಸಂಸ್ಥಾನಿಕ ಸರಕಾರಗಳು ಈ ಸುಂಕವನ್ನು ಈಗಿದಿಗಲೆ ಕೊನೆಗೊಳಿಸಬೇಕೆನ್ನುವ ಹೊರ ದೇಶದ ಆಡಿಕೆಯ ಮೇಲೆ ಸರಕಾರವು ಸುಂಕವನ್ನು ಪಾಕ ಬೇಕೆನ್ನುವ, ಹಿಂದೀ ಸರಕಾರ ಹಾಗೂ ಇತರ ಸಂಸ್ಥಾನಿಕ ಸರಕಾರಗಳೂ, ಆಡಿಕೆಯ ವೈದ್ಯಕೀಯ ಹಾಗೂ ಮತ್ತಿತರ ಗುಣಗಳ ಶೋಧನೆಗೆ ವ್ಯವಸ್ಥೆ ಪಡಿಸಬೇಕೆನ್ನುವುದೇ ಮೊದಲಾದ ನಿರ್ಣಯಗಳು ಪಾಸಾದುವು.

ಬೊಂಬಾಯಿ—ಇಲ್ಲಿಯ ಮೊಗವೀರ ಮಹಾ ಜನ ಸಂಘದಿಂದ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥವರು ಕೊಂಡುಹೋದ ಹಣದ ಲೆಕ್ಕ, ಜರಗಿ ಇತ್ಯಾದಿ ವಿವರಗಳನ್ನು ಕಳುಹಿಸಿದೆ ಇದ್ದು ಬೊಂಬಾಯಿಯ ಮೊಗವೀರ ಬಂಧುಗಳಿಗೆ ತುಂಬಾ ಆನ್ಯಾಯ ಮಾಡಿದಂತಾಗಿರುವದೆಂಬ ಆರ್ಥವುಳ್ಳ ಹಾಗೂ ದಕ್ಷಿಣ ಕನ್ನಡ ಮೊಗವೀರ ಮಹಾ ಜನ ಸಂಘದವರು ಇನ್ನೊಮ್ಮೆ ಕಮಿಟಿ ನೇಮಿಸಿ ಬೊಂಬಾಯಿಗೆ ಕಳುಹಿಸುವುದು ನ್ಯಾಯವೆಂದೂ ಸೂಚಿಸುವ ದೀರ್ಘ ಪತ್ರವೊಂದು ಪ್ರಕಟಿಸಿ ಬಗ್ಗೆ ನಮ್ಮಿಚೆಗೆ ಬಂದಿದೆ. ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ. ಸಂ. ನಂ.

ಮುಂಬಯಿಯಲ್ಲಿ ಕನ್ನಡನಾಟಕ—ತಾ. 28-12-1945ನೇ ಶುಕ್ರವಾರ ರಾತ್ರಿ 8-30ಕ್ಕೆ ಕಲ್ಬಾದೇವಿ ರೋಡಿನ ಭಾಂಗವಾಡಿಯ ರಂಗಭೂಮಿಯಲ್ಲಿ ಶ್ರೀ. ಎಂ. ನಾರಾಯಣರಾಯರಿಂದ ಬರೆಯಲ್ಪಟ್ಟ ಎಷಮ ಜೀವನ ಎಂಬ ನವೀನ ನಾಟಕವು ಮಾಸ್ಟರ್ ದೇವಡಿಗಾರ್ ಮತ್ತು ಪಾರ್ಟಿಯವರಿಂದ ಮುಂಗಳೂರು ಆನಂದ ಸಂಗೀತ ವಿದ್ಯಾಲಯದ ಸಹಾಯಾರ್ಥವಾಗಿ ಕಲಾ ಪೂರ್ಣವಾಗಿ ಅಭಿನಯಿಸಲ್ಪಡುವುದು.

ಉಡುಪಿ.

ಎಳ್ಳಸೇ—ಹೆಂಗಸರ ಮಿಶನ್ ಹಾಸ್ಪಿಟಲಿನಲ್ಲಿ ಕಳೆದ ಆದಿತ್ಯವಾರ ಸ್ಯಾರಂಭಿಸಲಾಯಿತು.

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ನೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜಿ ವ್ಯಾಸಾಚಾರ್ಯ,
ರಕ್ಷಣಿ, ಉಡುಪಿ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

The Pangal Nayak Bank Limited.
(Incorporated in 1920.)
Registered Office Court Road, UDIPI.
Branches at— **Udipi, Mangalore, Katapadi, Kanhangad, Kinnigoli, Nileshwar and Surathkal** South Canara.

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945.

ಗನೋರಿಯಾ ಪರಮಾರೋಗೆ ಉಷ್ಣ ರೋಗಕ್ಕೆ ಔಷಧ
೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ನೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಷಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮೆಣಸಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟೆ ಚಾರ್ಜ ೬ ಆಣೆ.

ವಿಳಾಸ:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ:ಡಾವಣಗೆರೆ ಮೈಸೂರ್. ಶತ್ರುವೈದ್ಯರ ಮಾತಿಕತ್ತೆ ಮೂಲಕರ ವಿಧಾನ.

ರೇವಣಸಿದ್ದಪ್ಪ ಹಾಲಪ್ಪ ಡಾವಣಗೆರೆ,
ಆಯುರ್ವೇದ ಔಷಧಾಲಯ. ಗದಗ.
Ayurveda Oushadalaya. GADAG.

PROHIBITORY ORDER.

IN THE COURT OF THE DISTRICT MUNSIFF AT PUTTUR, S. KANARA.

R. E. P. No. 247/1945 in O. S. 1216/1105 of Trivendrum Temporary Addl. Dt. Munsif's Court and A. S. 53/1108 of Travancore High Court.

Hearing date 8-1-1946.

Akkaradesi Samudyam, Mithranandapuram, represented by Upparnam GoVindan Subrayan Potti. —Petitioner.

and

1 Edapadi Padmanabhan Subrayan Potti. 2 Subrayan Ramachandran Potti.

—Respondents

Both residing at Chinnachalai Banglow, Chengazhassari Pakuty.

To,

The above named respondents:-

Whereas you have failed to satisfy a decree passed against you on 14-12-31 in O. S. 1216/1105 in favour of plaintiff for Rs. 1322-1-7 etc.,. It is ordered that you, the said defendants, be and are hereby prohibited and restrained, until further orders of this court, from transferring or charging the property specified in the schedule hereunto annexed, by sale, gift or otherwise, and that all persons be, and are hereby, prohibited from receiving the same by purchase, gift or otherwise,

Schedule of property:—ಪು. ಕ. ಪುತ್ತೂರು ತಾಲ್ಲು ನಂ. 27ನೇ ಕೊಕ್ಕಡ ಗ್ರಾಮದ ನಂ. 3ನೇ ಪಟ್ಟಿಗೆ ವಟ್ಟದ ಸರ್ವೆ ನಂಬ್ರ 43 4, 46/2, 52/2, 120/4, 120/6, 127/8,9,10, 134/7, 39/2, 121/2, 125/1, 127/13, 187/12, 138/2A ನೇ ಸರ್ವಾಧಿ ಆಸ್ತಿ ಪ ಇದ್ದಲ್ಲಿ ಎದ್ರೀಂಗೆ ಇರುವ ವಿಶಿಷ್ಟ right, title and interest ಸಹಾ ಆಗಿರುತ್ತದೆ.

By order of the Court.

Puttur, 14-12-1945 } *M. Sadashiva Rao,* Pleader for Petr.

AGAINST DIABETES
&
all its dreadful results
Consult Specialists:
Dr. Alvas' Research Institute, FAJIR
S. KANARA.



Approved firm by the Govt. of Mysore
Certified by the Agent of the Govt. of Cylone Indian.

ಅಖಿಲ ಭಾರತ ಸಂತಾನ ಕುಟುಂಬಗಳ ಆಡಳಿತೆದಾರರ ಪ್ರಥಮ ಸಮ್ಮೇಲನ, ಬಾರಕೂರು

(ಕಾಲ್ಪನಿಕ)

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಸಮ್ಮೇಲನದ ಅಧ್ಯಕ್ಷರ ಭಾಷಣ

ಬಂಧುಭಗಿನಿಯರೇ,

ಈ ನೇಳೆ ಎಲ್ಲೆಲ್ಲೂ ಹಲವು ತರದ ಸಮ್ಮೇಲನ, ಪರಿಷತ್ತು, ಮಹಾಸಭೆಗಳು ಜರಗುವ ಈ ಕಾಲದಲ್ಲಿ ನಮ್ಮ ಈ ಸಮ್ಮೇಲನವನ್ನು ಏರ್ಪಡಿಸಿದುದು ಕಾಲೋಚಿತವಾಗಿದೆ. ನಮ್ಮ ಆಳಿಯಕಟ್ಟಿನ ಮೂಲಸ್ಥಾನವಾದ ಈ ಬಾರಕೂರಿನಲ್ಲಿಯೇ ನಮ್ಮ ಸಮ್ಮೇಲನವು ಸೇರಿದುದು ಸ್ತುತ್ಯಕರ. ಈ ಪಟ್ಟಣವು ತನ್ನ ಗತ ವೈಭವವನ್ನು ಸ್ಮರಿಸುವಂತೆ ನಮ್ಮ ಕಟ್ಟುಂ ಅಂದಿನ ಉನ್ನತಿಯನ್ನು ನೆನಸಬೇಕಲ್ಲದೆ ಇಂದು ಈಗೀಗ ಜನರಿಗೆ ಅದೊಂದು ಬಂಧನವಾಗಿ ಪರಿಣಮಿಸಿದೆ. ಈ ಬಂಧನವಾದದ ಪಾರಾಗುವಂತೆ ಡಾತೊರೆಯುವುದು ಸೋಜಿಗವಲ್ಲ. ಯಾವದೊಂದು ಪದ್ಧತಿಯು-ಆಚರಣೆಯು-ಸಮಾಜದಲ್ಲಿ ನಡೆದು ಬಂದ ರೂಢಿಯು ಎಬ್ಬೇ-ಪುರಾತನವಿದ್ದಿರಲಿ, ನಮ್ಮ ಹಿರಿಯರು ಉಚಿತವೆಂದೇ ಭಾವಿಸಿರಲಿ, ಅದು ಈಗಿನ ಕಾಲಕ್ಕೆ ತಕ್ಕುದಲ್ಲವೆಂದು ಕಂಡು ಬಂದರೆ ಅದನ್ನು ಕಿತ್ತೊಗೆದು ಬಿಡುವದೇ ನವನವಾಗರಿಕತೆಯ ಹಾಗೂ ನನಯುಗದ ಸಿದ್ಧಾಂತವು.

ನಮ್ಮ ಕಟ್ಟು ವಿಜಾತೀಯವಾದುದು. ಸ್ವಭಾವ ವಿರುದ್ಧವಾದುದು. ಆದರೆ ನ್ಯಾಪಕತೆಯೂ ಒಂದೆರಡು ಜಿಲ್ಲೆಯಲ್ಲಿ ಮಾತ್ರ. ಹುಟ್ಟು ನಾಲ್ಕಾರು ಸನೂಜಗಳವರು ಮಾತ್ರವೇ ಆಚರಿಸುವದು. ಪರುಪಕ್ಷಿಗಳು ತಮ್ಮ ಮರಿಗಳನ್ನು ಪ್ರೀತಿಸುತ್ತವೆ. ಮಾನವನಾಗಿ ಹುಟ್ಟಿ ತಂ, ಸಹೋದರಿಯರ ಮಕ್ಕಳನ್ನು ಪ್ರೀತಿಸುತ್ತಾ ಇರುವುದು ಎಂದು ಎಷ್ಟುಕಾಲ ನಿರ್ಬಂಧದಲ್ಲಿ ನಡೆಯಬಹುದು?

ಆದರೆ ಸಭಾ ಮಹನೀಯರಲ್ಲಿ ಹಲವರು ಸೂಚಿಸಿದಂತೆ ಒಮ್ಮೆಗೇನೇ ಆಳಿಯಕಟ್ಟು ತೆಗೆದು ಮಕ್ಕಳ ಕಟ್ಟನ್ನು ಮಾಡಿಬಿಡುವದೆಂದರೆ ಅದೊಂದು ಸಲ್ಲುವನ ಪ್ರದರ್ಶನ (ಟ್ರಾನ್ಸಫರ್ ಸಿನರಿ) ಮಾಡುವುದು ಆಗದೆ ನೂತು. ಹಲಕೆಲವು ಸುಧಾರಣೆ ತುಂಬಿ ಕೆಲವು ಕಾಲದ ನಂತರ ಮಕ್ಕಳ ಸಂತಾನದ ಮುಟ್ಟಿಕೈ ಮುಟ್ಟುವಂತೆ ಮಾಡುವುದೊಳ್ಳೇದೆಂಬುದು ನನ್ನ ಅಭಿಪ್ರಾಯ.

ಕುಟುಂಬದ ಆಸ್ತಿಯ ಹಂಚುವಿಕೆಯಲ್ಲಿ ಹಲವರು ಹಲವು ತರದ ಅಭಿಪ್ರಾಯವನ್ನು ಸೂಚಿಸಿದರು. ಇವರಲ್ಲಿ ಅನೇಕರು ತಮ್ಮ ಸ್ವಂತ ಮನೆಯ ಇಲ್ಲವೆ ತನ್ನ ಹೆಂಡತಿ ಪಕ್ಕಳ ಮನೆಯನ್ನು ಮಾದರಿಯಾಗಿಟ್ಟು ಕೊಂಡು ಆದಕ್ಕನುಕೂಲವಾಗಿ ಹೇಳಿದಂತೆ ಕಾಣುತ್ತದೆ. ನನ್ನ ಸುಧಾರಣೆಯು ಆಳಿಯ ಕಟ್ಟಿನವರೆಲ್ಲರಿಗೂ ಅನ್ವಯಿಸುವಂತಿರಬೇಕಾದುದರಿಂದ ಇಲ್ಲಿ ಸ್ವಂತ ವಿಷಯಕ್ಕೆ ಗಮನ ಕೊಡಬೇಕಾದ ಸನುಸ್ಯೆಯೇ ಇಲ್ಲ.

ಆಸ್ತಿಯ ವಿಭಾಗ ಮತ್ತು ಅಕನಾರ್ಥ ಹೊಂದುವಲ್ಲಿ ಬರ್ಚು, ಪರಿಶ್ರಮ, ಕಡಿಮೆ ಬೀಳುವಂತಾಗಬೇಕು. ಈಗಿನ ತೊಂದರೆ ಗಳಿರಬಾರದು ಕುಟುಂಬದ ಹಿರೇ ಹೆಂಗೆಸಾದ ತಾಯಿಯ ಕಾಲದಲ್ಲಿ ಮಕ್ಕಳು ಪಾಲು ಕೇಳುವಮೆ ಸರಿಯೋಗುವದಿಲ್ಲ. ಅವಶ್ಯಕ ಕಂಡರೆ ಅಕನಾರ್ಥ ಪಡೆಯಬಹುದು. ನನ್ನ ಮನುಮೆಯು ಕಾಯಿದೆಯಿಂದ ನಿರ್ಧಾರವಾಗ ಬೇಕು. ಗಂಡನ ಸ್ವಂತ ಸಂಪಾದನೆಯನ್ನು ಹೆಂಡತಿಗೆ ಮೊದಲಾಗಿ ಕೊಡದಿದ್ದರೆ ಆದರಲ್ಲಿ ಪಾಲು ಹೆಂಡತಿಮಕ್ಕಳಿಗೆ ಸೇರುವಂತಾಗ ಬೇಕು.

ನಮ್ಮಲ್ಲಿ ಎಂದಕ್ಷಿಣದು ಹಜ್ಜಳದಿಂದ ಬಲು ಕಷ್ಟಕ್ಕೀಡಾಗಿದ್ದೇವೆಂಬುದು ನಿಜ. ಇದರಿಂದ ಎಷ್ಟೋ ಬಾಲಕಿಯರು ಅವಿವಾಹಿತರಾಗಿ ಬಾಳಬೇಕಾಗಿ ಬಂದಿದೆ. ನಮ್ಮಲ್ಲಿ ಬಹಳ ವೈ ಹೆಚ್ಚಾಗಿದೆ. ಇದುದೆ ರಿಂದ ನಮ್ಮ ವಿವಾಹದ ಪೂರ್ವಕ್ಕೆ ಸಿಸ್ತು ಸುವದೊಂದೇ ಮಾರ್ಗ ನನಗೆ ಹೊಳೆಯು ತ್ತದೆ. ನನ್ನ ಸಮಾಜದ ರೀತಿನೀತಿಗಳಂತೆ ನಡಿಯುವ ಉತ್ತರ ಕನ್ನಡದ ನಾಡವರಲ್ಲಿ ಹಾಗೂ ದಕ್ಷಿಣದ ಮಲಬಾರಿನ ನಾಯರರು, ನಂಬಿಯೂರರಲ್ಲಿ ಸಮ್ಮಂಧ ಬೆಳೆಸುವಂತಾದರೆ ಜೀಕಾದಷ್ಟು ವರರು ಸಿಕ್ಕ ವರದಕ್ಷಿಣೆಯ ಕಾಟವು ಕಡಿಮೆಯೋಗಬಹುದೆಂದು ನನ್ನ ಅಭಿಪ್ರಾಯ. ಇದಕ್ಕೆ ಸಮಾಜದ ಸಮ್ಮತಿ ಮತ್ತು ಕಾಯಿದೆಯ ಬೆಂಬಲವೂ ದೊರಕು ವಂತಾಗಬೇಕು.

ಮುಖ್ಯವಾಗಿ ನಮ್ಮ ಆಳಿಯ ಸಂತಾನದ ತರುಣ ಸ್ಥಂದದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಬಂಧುಗಳೇ, ನೀವು ನಿಮ್ಮ ಕುಟುಂಬದ ಆಸ್ತಿಯನ್ನು ನಗಣಿ ಕಾಲಹರಣ ಮಾಡಬಾರದು. ಆದು ಹಲವರ ಹಕ್ಕಿನದು. ನೀವು ವಿದ್ಯೆಯನ್ನು ಕಲಿತು ವ್ಯೆಗಾರಿಕೆ, ಕೃಷಿ, ವ್ಯಾಪಾರ ಮೊದಲಾದವುಗಳಿಂದ ಸ್ವತಂತ್ರ ಜೀವನೋಪಾಯದ ಸೌರ್ಗವನ್ನು ಪಡುಕೆ ತನ್ಮೂಲಕ ನಿಮ್ಮ ಭಾವೀ ಉನ್ನತಿಯನ್ನು ಹೊಂದಬೇಕಾಗಿರುವದೆ.

ಬಂಧುಗಳೇ ನಮ್ಮ ಆಳಿಯ ಕಟ್ಟಿನಲ್ಲಿ ಅವಶ್ಯವಿರುವ ಸುಧಾರಣೆಯನ್ನು ತರುವುದ ಕ್ಕಾಗಿ, ಕೂಡಲೇ ಸಮಾಜ ಸುಧಾರಕರೂ ಮುಂದಾಳುಗಳೂ ಜೀಕಾದ ಕಾರ್ಯಕ್ರಮ ವನ್ನು ಕೈಕೊಂದು ಪುಸೂದೆಯನ್ನು ರಚಿಸ ಜೀಕಂತಲೂ ಆಳಿಯ ಸಂತಾನದವರೆಲ್ಲರೂ ತಮ್ಮ ಬೆಂಬಲ ಸಹಕಾರವನ್ನು ನೀಡಿ ಆದಷ್ಟು ಬೇಗ ಆದು ಸರಕಾರದ ಮಂಜೂರಾತಿ ಪಡೆದು ಅಚರಣೆಯಲ್ಲಿ ಬರುವಂತೆ ಪ್ರಯತ್ನಿಸ ಜೀಕಾಗಿಯೂ ಜೀಡಿಕೊಂಡು ನನ್ನ ಭಾಷಣ ವನ್ನು ಕೊನೆಗಾಣಿಸುತ್ತೇನೆ. (ಚಪ್ಪಾಳೆ)

ಸ್ವಾಗತ ಕಮಿಟಿಯ ಕಾರ್ಯದರ್ಶಿಗಳಾದ ಶ್ರೀ ಕೃಷ್ಣಯ್ಯ ಹೆಗ್ಡೇರವರು, ಸಭಾಧ್ಯಕ್ಷರಿಗೂ, ಬಂದ ಅತಿಥಿಗಳಿಗೂ ಧನ್ಯವಾದವನ್ನು ಅರ್ಪಿಸಿದ ನಂತರ ಸಭೆಯು ಚದರಿತು.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಪ್ಪದ ಗರ್ಭಧಾರಣೆ ಆಥವಾ ಇನ್ನಾವಕಾರಣವಿದ್ದರೂ— 'ಋತುಮತಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯುತೊಡಗುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ. 3!- ಕೈಮಿಂದ ಕೇಸುಗಳಿಗೆ ರೂ. 5. 6ಕಂಗಳ ಬರ್ತ್ ಕಂಟ್ರೋಲಿಗೆ ರೂ. 4!- (ವಿ. ಪಿ. 12 ಆಣೆ ಆಲಾಯಿದೆ.)

Mrs. P. DEVEE,

F. D. S. (A. E.) Tollygunge, Calcutta.

ಸ್ಟಾಕಿಸ್ಟ್: ಸಾ ಕೆಂಪೆನ್ಸ್, ಮಂಗಳೂರು

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕು ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಜೀಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎವೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉದ್ರೆ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು.

ರಾತ್ಲು 1ರ 10-0-0, ½ ರಾತ್ಲು 5-4-0, ¼ ರಾತ್ಲು 2-12-0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ; 10 ಮಂಗಳೂರು

ಎಲ್ಲಾ ನಮೂನೆಯ ಔಷಧಗಳೂ ದೊರೆಯಲ್ಪಡುತ್ತವೆ. ಕ್ಯಾಲೆಂಗಿ ಬರದಲ್ಲಿ ರೋಗಕ್ಕೆ ತಕ್ಕಹಾದ ಔಷಧಿ ರವಾನಿಸಬಹುದು. (1) ಉಡುಪಿ ವಿಜಯರು:— ನವಶಾರತ ಟ್ರಾಕ್ ವಿಲ್ಸ್, (2) ಬೊಂಬಾಯಿ ವಿಜಯರು: ಪೂಪ್ಯುಲರ್ ಸೆಲ್ಲರ್ಸ್, ಕೆಮಿಸ್ಟ್ಸ್183, ಸುಖಾಬಿಬಾಗ್ ರೋಡ್, ಜಿ. ಐ. ಪಿ ರೈಲ್ವೆ, ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸೆಲ್ಲರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಬೇಕಾಗಿದ್ದಾರೆ

ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಪ್ಯಾಷ್ಕರರೂ ಕೂಲಿಯಾಳುಗಳನ್ನೆನ್ನು ಒದಗಿಸಿ ಕೊಡಲಿನವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗೆ ಉತ್ತಮ ಸವಲತ್ತುಗಳು ಕೊಡಲಾಗುವುದು.

ಇಂದೇ ಒರೆಯಿರಿ—

ಬಾಕ್ಸ್ ನಂಬ್ರ 5, c/o 'ನವಯುಗ'

ಉಡುಪಿ, (ದ. ಕ.)

ಅವಿಲ ಕರ್ನಾಟಕದಲ್ಲಿ ಪ್ರಸಿದ್ಧೀಕೃತ್ತವಾದ ಪಂಚಾಂಗವೆಂದರೆ—

ಉಡುಪಿ ಪಂಚಾಂಗ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ. ಜೆಚ್ಚಿನ ವಿಷಯಗಳಿಗೆ

ಅತ್ತೂರು ವಾಸುದೇವ ಉಡುಪ

ಸಂಪಾದಕ

ಶ್ರೀ ರಮಿಪ್ರಸಾದ ಜ್ಯೋತಿಷಾಲಯ

ಕೊಯಂಬತ್ತೂರು

CHAMPAES

Snow & Lastrex

(SoleDistributers for India.)

Prop: K. G. NAYAK,

Santhekatte, UDIPI, S. K.

Consult us when you deal in Properties or Shares, insure life or belongings

We will guide you to your advantage

The General Investment & Commercial Corporation, Ltd.,

Sri Ramakrishna Buildings,

UDIPI, S. I.

SHARE BROKERS : : : : FIRE & LIFE INSURANCE AGENTS.

PROPRIETORS OF:

(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು

ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.

ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	...	...	0	6 0
2.	ಸಾಮುದ್ರಿಕ ಶಾಸ್ತ್ರ	....	...	0	8 0
3.	ಬಾಲ ರಾಮಾಯಣ	....	....	0	5 0
4.	ಸುಕನಾ ಚರಿತ್ರೆ	....	....	0	5 0
5.	ಕೊಳಲು ಕೃಷ್ಣ	....	....	0	8 0
6.	ಗುರುಪೀರಗಳ ಅವನತಿ	....	....	0	8 0
7.	ದ್ವೈತಮತ ಖಂಡನೆ	....	....	0	6 0
8.	ಧರ್ಮಸಂಕಟ	....	....	0	4 0
9.	ಪೂರೂರವ	....	....	0	8 0
10.	ನಿಶ್ಚಯ ಜ್ಞಾನ	...	...	0	8 0
11.	ವಿದ್ಯಾರಣ್ಯ ಕಾವ್ಯಂ	....	....	1	0 0
12.	ಚಂದ್ರಗುಪ್ತ ಚಕ್ರವರ್ತಿ	....	....	1	0 0
13.	ಸ್ವದೇಶ	....	....	0	4 0
14.	ಹರಿಜನ ಸೇವೆ	....	....	0	4 0
15.	Gauthama the Buddha	....		0	8 0
16	ಪ್ರಾರ್ಥನೆ	....	....	0	2 0
17.	ಹಿಂದೀ ಪಹಲಿ ಪೋತಿ	....	....	0	2 0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)			0	4 0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,

ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	....	....	1	0 0
ಕೃಷ್ಣರಾಜೆ ಪರ್ಸಂಗೊ	....	....	1	0 0
ತುಳುವಾಲ ಬಲಿಯೇಂದ್ರ	....	....	0	4 0
ಅಳಿಯ ಸಂತಾನದ ಕಟ್ಟ್ಪದ ಗುಟ್ಟು		....	0	8 0
ಕಾನಿಗೆ	....	....	0	8 0
ತುಳು ವ್ಯಾಕರಣ	....	....	1	0 0
ಮದ್‌ವಾಳತ್ತ್ ಮದ್‌ಮಾಯೆ		....	0	4 0
ಜನಮರ್ಲ್	....	....	0	12 0
ತುಳು ಪದ್ಯಮಾಲಿಕೆ	....	....	0	2 0
ಬಂಗಾರ್ದಂಗಿದ ಕತೆ	....	....	0	2 0
ಮಿತ್ಯ ನಾರಾಯಣ ಕತೆ	....	...	0	1 0
ಸತೀ ಕಮಲೆ	....	....	0	12 0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಕೆ. ಎ. ವೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳಿಗನ್ನಡದ ತಿಳಿನುಡಿಯ ರಸಗಬ್ಬ

ಹಳಿಗನ್ನಡದ ಸುಂದರ ಕಾವ್ಯ

ಪೊಪ್ಪ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.

ಬೇಕಾದವರು

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ

ಚಿತ್ತರಂಜನ ಭವನ, ಉಡುಪಿ.

ಬೆಲೆ: **3—0—0**

(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಕೆ. ಎ. ವೈ ಬ್ರದರ್ಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ, ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

RegdNo. M. 3618. SILVER JUBILEE YEAR. ರಜತೋತ್ಸವದ ವರ್ಷ. Estd. 1921 ಸ್ಥಾಪನೆ.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಪ್ರತಿ ಪ್ರತಿಗೆ ರೂ. 0—1—6

ವರ್ಷ 25] ಪ್ರತಿ ಗುರುವಾರ ಹೊರಡುವ ನಾಡ್ಕೀಯ ವಾರಪತ್ರಿಕೆ. [Vol. 25
ವಾರ 52] Founder: SRI A. B. SHETTY. [No. 17
ಉಡುಪಿ • 27—12—1945 • ಮಂಗಳೂರು.
ವಾರ್ಷಿಕ ಚಂದಾ ರೂ. 4—8—0, ಪ್ರತಿ ಸಂಚಿಕೆ ರೂ. 0—1—6.

ಅಮೃತಾಂಜನ.
ಕರೆದೆನೆ, ತಿರಿ, ವೇದನೆ, ಉಳುಕು ಶ.ತ್ತಿಗೆ, ಘಟ, ಹಲ್ಲು ನೇವದನೆಗಳಿಗೆ ಎದನೇವು, ಸ್ನಾಯು ಸೆಳೆತ, ಕೊಳೆ ಇದು, ಬೆಂಕಿ ಬಿಸಿ ಮುಂತಾದ ಬೇನೆ ಕಷ್ಟವಾಪ್ತ ನೋವಿನೆ, ನೋವಿರದ ಎಲ್ಲಾ ರೋಗಗಳಿಗೂ
REGD. ಪಥ್ಯ,ಹುಳುಕ್ಕಿಲ್ಲ ಮತ್ತು ಸಕ ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

POLICYHOLDERS' OWN COMPANY.

Policy-holders are the sole owners of a Mutual Company, they alone share in the profits of the Company and "Canara Mutual" is such a Company Its aim is to render the highest type of Life Assurance service to its Policy-holders. With such an aim, the Company has progressed on very sound lines and made a name in the Indian Insurance World. All this is owing to the co-operation of the public with the Company "Canara Mutual" has also become a Synonym for "Prompt Settlement".

THE CANARA MUTUAL ASSURANCE COMPANY, LTD.,
(UDIPI, S. India.)

The Jupiter General Insurance Co., Ltd.,

ಮಹಾ ರಣ ಮುಗಿಯಿತು. ಮರಣವೂ ಮುಗಿಯಿತೆ?-ಇಲ್ಲ-

ಸಮರ ಗೆದ್ದರೂ ಸಾವನ್ನು ಗೆಲ್ಲುವದು ಮನುಷ್ಯರಿಂದ ಅಸಾಧ್ಯ; ಅದು **'ಜುಪಿಟರ್'** ದೇವತೆಗಳ ರಾಜ)ನ ಅನುಗ್ರಹದಿಂದ ಮಾತ್ರ ಸಾಧ್ಯ!

ಆದ್ದರಿಂದ ಭಾರತದ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದಾದ **'ಜುಪಿಟರ್'**ನಲ್ಲೇ ವಿಮೆ ಇಳಿಸಿರಿ.

ವಿಮೆಯಿಳಿಸುವವರೂ,ವಿಜಂಟರು ಮತ್ತು ಏರ್ಗನೈಝುರರಾಗುವವರೂ ಕೂಡಲೇ ಬರೆಯಿರಿ:—

ಪಿ. ಡಿ. ನನಯ, ಉಡುಪಿ,
ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಏಜಂಟ್.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

The Bombay Life Assurance Co., Ltd.

(ESTD: 1908)

1944ರ ಹೊಸ ವ್ಯವಹಾರವು 2½ ಕೋಟಿಗೂ ಮಿಕ್ಕಿದೆ.

ಅತಿ ಹೆಚ್ಚಿನ ಆದಾಯಗಳನ್ನು, ತೀರಾ ಕಡಿಮೆ ವ್ಯಯದಿಂದ ದೊರಕಿಸಿಕೊಡುವ ಅಗ್ರಗಣ್ಯರಿಂದೀ ವಿಮಾಸಂಸ್ಥೆಗಳಲ್ಲೊಂದು

ಸ್ಥಾಪನೆ] **ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್** [1910

ದಕ್ಷಿಣ ಭಾರತದ ಚೀಫ್ ಏಜಂಟರು.

ಕಳದ 35 ವರುಷಗಳಲ್ಲಿ—ಯುದ್ಧ ಮತ್ತು ಶಾಂತಿ ಕಾಲಗಳಲ್ಲಿ—ನಾವು ನಮ್ಮ ನಿಷ್ಠಾವಂತಿಕೆಗೆ ಲಾಭಕಾರಿಯಾಗುವಂತೆ ಪಲ್ಲಿಸಿರುವ ಸಮಾಧಾನಕರ ಸೇವೆಗಾಗಿ ಹೆಗ್ಗಳಿಕೆಪಡುತ್ತೇವೆ.

1944ರಲ್ಲಿ ನಮ್ಮ ಕ್ಷೇತ್ರದಲ್ಲಿ ಪೂರ್ತಿಗೊಳಿಸಿದ ವಿಮಾ ಉದ್ಯೋಗದ ದಾಖಲೆ.—**53,00,000.**

KOCHIKAR BROTHERS, LTD.
Central Office:—**UDIPI.** S. K.
Mangalore ○ Calicut ○ Bangalore ○ Madras ○ Madura ○ Trivandrum ○ Bombay

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Kaiapadi.

'ಭುವನೇಂದ್ರ'
ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ.

ದೊಡ್ಡವರಿಗೆ 40ರಿಂದ 8ಹೊಟ್ಟು, ಸಣ್ಣಮಕ್ಕಳಿಗೆ 10ರಿಂದ 2ಹೊಟ್ಟು ಲವಂಗ ಯಾ ಏಲಕ್ಕಿ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯಾಕ್ಕ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಪೆಷಲಿಸ್ಟರು:—ಡಾ। ನಾರಾಯಣ್ ಕನ್ಸಲ್ಟಿಂಗ್ ರೂಮ್ಸ್,ಎಂಡ್ ಫಾರ್ಮೆಸಿ; ಡಾ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮೆಸಿ; ಡಾ। ಕೆ। ಶೇಷ ಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಡಲ್; ನವಭಾರತ ಬುಕ್ ಡಿಪೊ.

ANNOUNCEMENT

We have pleasure to announce the opening of a branch of the Bank

at

KANHANGAD

on 17-11-1945, by

Sri B. Appaswamy Chetty, B. A., R. D. O., Puttur

A branch of the Bank will be opened at MERCARA shortly.

The Vijaya Bank Limited.
Head Office:- **MANGALORE.**

ಉಡುಪಿ ಬೋರ್ಡಿಂಗ್
ಎಂಡ್
ಲೋಜಿಂಗ್ ಮಧುರಾ.

ತಾ. 28—8—45ರಲ್ಲು ಜರಗಿದ ಅರನೆ ಹುಟ್ಟುಹಬ್ಬದ ಸಮಾರಂಭದ ಸಂತೋಷ ಕಾಲದಲ್ಲಿ ನಮಗೆ ಸಕಲ ವಿಧದಿಂದಲೂ ಬೆಂಬಲವಿತ್ತು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇದಕ್ಕಿಂತಲೂ ದ್ವಿಗುಣಿತವಾಗಿ ನಮ್ಮ ಸೇವೆಯನ್ನು ಹೊಸ ವರುಷದಲ್ಲಿ ಪಲ್ಲಿಸಲು ಮಾಡಾ ಜನರು ಉದಾರ ಸಹಕಾರ ಪ್ರೋತ್ಸಾಹಗಳನ್ನೀಯುವರೆಂದು ನಿರೀಕ್ಷೆ.

ಎಲ್. ನರಸಿಂಗ ರಾವ್,
ಪ್ರೊಪ್ರೈಟರ್.

ರಾಜಾಜಿ ನಾಯಕತ್ವ ಅನಿವಾರ್ಯವೆ?

ಶ್ರೀ. ಕೆ. ಆರ್. ಕಾರಂತರ ಖಂಡತುಂಡ ಅಭಿಪ್ರಾಯ.

ರಾಜಾಜೀ ನಾಯಕತ್ವ ಬೇಕು-ಬೇಡ ಎಂಬ ಎಳೆದಾಟದಿಂದ ಮದ್ರಾಸ್ ಪ್ರಾಂತ್ಯದ ಕಾಂಗ್ರೆಸ್ ರಂಗದಲ್ಲಿ ಬಲವಾದ ಗಡಬಡವೆದ್ದಿದೆ. ಜಗಳ ತೀರ್ಮಾನಕ್ಕಾಗಿ ಕಾರ್ಯಕಾರೀ ಸಮಿತಿಯ ರಾಯಭಾರಿಯಾಗಿ ಬಂದ ಮಿ. ಅಸಫ್ ಅಲಿಗಳು ಮದ್ರಾಸಿನಲ್ಲಿ ನಾಲ್ಕೈದು ದಿನವಿದ್ದು, ತಮಿಳುನಾಡು-ಮಾತ್ರವಲ್ಲ, ಇಡೀ ಮದ್ರಾಸ್ ಪ್ರಾಂತ್ಯದ ಕಾಂಗ್ರೆಸಿಗರ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜಾಜೀ ಪ್ರಧಾನಿತ್ವದಲ್ಲಿ ಕಾಂಗ್ರೆಸ್ ಎಂ. ಎಲ್. ಎ. ಮತ್ತು ಕೆಲಕಾಲ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿದ್ದ ನಮ್ಮ ಜಿಲ್ಲೆಯ ಶ್ರೀ. ಕೆ. ಆರ್. ಕಾರಂತರ ಅನುಭವಗಳಿಗೆ ಬೆಲೆಯಿದೆ. ಈ ಲೇಖನದ ಬಹ್ವಂಶವನ್ನು ಹೆಚ್ಚಿನವರ ಮನಸ್ಸಾಪ್ಪೆಯೊಪ್ಪಬಹುದು; ಆದರೆ ಮದ್ರಾಸ್ ನಾಯಕತ್ವವು ರಾಜಾಜಿಯ ಕೈತಪ್ಪುವ ಆಶೆ ಕಡಿಮೆ. ನಾಳೆ ತಾವೂ ಮೂಗೊಡ್ಡಬೇಕಾದ ಕಡಿವಾಣವನ್ನೇ ಇಂದು ಯಮಪಾಕವೆಂದು ಜರೆಯುವದು ಕ್ಷೇಮಕರವಲ್ಲ—ಎಂಬ ಜಾಗ್ರತೆಯಲ್ಲಿರುವವರೇ ಹೆಚ್ಚಿಗೆ. ಶ್ರೀ. ಕಾರಂತರು ಈ ಎಚ್ಚರಿಕೆಗಿಂತ ಹೆಚ್ಚಿನ ಎದೆಗಾರಿಕೆ ಪ್ರದರ್ಶಿಸಿದ್ದಾರೆ. 'ತಮಿಳು ನಾಡು ಕಾಂಗ್ರೆಸಿಗರಲ್ಲಿ ವಿನಂತಿ'ಯಾಗಿ 'Indian Express' ನಲ್ಲಿ ಆಜಾದ ಪ್ರಕಟಿಸಿದ ಲೇಖನವನ್ನು ಇಲ್ಲಿ ಭಾಷಾಂತರಿಸಿ ಕೊಡಲಾಗಿದೆ.

ಮೂರುದಿನ ಮದ್ರಾಸಿನಲ್ಲಿದ್ದು, ಮಿ. ಆಸಫ್ ಅಲಿಗಳಿಗೆ ಆಗಮನಕ್ಕೆ ಹೇತುವಾದ ತಮಿಳುನಾಡಿನ ಅಭಿಪ್ರಾಯ ಭೇದಗಳ ಕುರಿತು ಹಲವು ಮಿತ್ರರೊಡನೆ ಸಂಭಾಷಿಸಿದ ಬಳಿಕ ಓರ್ವ ದಕ್ಷಿಣ ಕನ್ನಡಿಗನಾದ ನಾನು ಈ ಸಂಬಂಧದಲ್ಲಿ ಪಟ್ಟಿರುವ ಅಭಿಪ್ರಾಯಗಳಿಗೇನಾದರೂ ಮೌಲ್ಯತೆಯಿದೆಯಾದರೆ ಅವುಗಳನ್ನಿಲ್ಲಿ ಮುಂದಿಡಲಿಚ್ಛಿಸುತ್ತೇನೆ ತಮಿಳುನಾಡಿನೊಳಗಿನ ವಿವಿಧಾಭಿಪ್ರಾಯಗಳನ್ನು ವಿಕೇಕರಿಸುವದೊಂದೇ ಮಿ. ಆಸಫ್ ಅಲಿ ರಾಯಭಾರಿತ್ವದ ಉದ್ದೇಶವಾಗಿದ್ದರೆ ಅದು ಕೇವಲ ಪ್ರಾಂತಿಕ ಪ್ರಶ್ನೆ; ನೆನ್ನೆಯಂತಹ ಹೊರಗಿನವನಿಗೆ ಅದರೊಡನೆ ಹೆಚ್ಚಿನ ಸಂಬಂಧವಿಲ್ಲ. ಆದರೆ ರಾಜಾಜಿ ಕಡೆಯವರು ಆವರನ್ನು ಮತ್ತೊಮ್ಮೆ ಪಕ್ಷನಾಯಕನಾಗಿಯೂ, ಪುನಃ ಮದ್ರಾಸಿನ ಪ್ರಧಾನ ಮಂತ್ರಿಯಾಗಿಯೂ ಪ್ರತಿಷ್ಠಿಸಲು ಚಳವಳಿ ಹೂಡಿರುವರೆಂಬುದು ಪತ್ರಿಕೆಗಳಿಂದ ಕಂಡುಬರುತ್ತಿದೆ. ಇದು ಮಾತ್ರ ಇಡೀ ಮದ್ರಾಸ್ ಪ್ರಾಂತ್ಯದಲ್ಲಿರುವವರಿಗೆ ಸ್ಪಷ್ಟವಾಗಿ ಸಂಬಂಧಿಸಿರುವ ವಿಷಯ ಆದ್ದರಿಂದ ಈ ಕುರಿತು ನನ್ನ ಅಭಿಪ್ರಾಯವನ್ನು ಮುಂದಿಡುವದು ಅಪ್ರಸ್ತುತವಾಗದೆಂದು ನಂಬುತ್ತೇನೆ.

ರಾಜಾಜಿಯಿಲ್ಲದೆ ನಡೆಯದೆ?

ಪ್ರಧಾನಿತ್ವಕ್ಕೆ ರಾಜ ಜಿ, ಆಥವಾ ಇನ್ನಾವನೇ ಒಬ್ಬನಿಲ್ಲದೆ ಹೋದರೆ ನಿರ್ವಾಹವಿಲ್ಲವೆಂದು ನೆನೆಸುವದು ಸಂಪೂರ್ಣ ತಪ್ಪು. ಬಹುಶಃ ರಾಜಾಜೀ ಅಶ್ರಯ ವಿನಹ ತಮ್ಮಿಳುನಾಡಿನ ಅನುಯಾಯಿಗಳು ಕೆಲವರು "ರಾಜಾಜಿಯ ನಂತರ ಅಧವಾ ಅವರ ವಿನಹಾ ಪ್ರಲಯವೇ ಸರಿ" ಎಂದು ಬೊಬ್ಬಿಡುತಿದ್ದಾರೆ. ನಾವು,—ಮುಖ್ಯತಃ ಕಾಂಗ್ರೆಸಿಗರು—ಪ್ರಾಂತ್ಯದಲ್ಲಿ ಹಾಗೂ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಪ್ರಯತ್ನಿಸುತ್ತಿದ್ದೇವಲ್ಲದೆ, ನಿರಂಕುಶಾಡಳಿತೆ ಅಧವಾ ಹೇಸಿಸ್ಟ್ ರಾಜ್ಯಭಾರಕ್ಕಾಗಿ ಅಲ್ಲವೆ ' ನ್ನ ನಂಬಿಕೆ. ಆದ್ದರಿಂದ ಯಾರೊಬ್ಬನೂ ಅನಿವಾರ್ಯ ವ್ಯಕ್ತಿಯಲ್ಲ; ಮತ್ತು ಹಾಗಿರಕೂಡದು. ನಿದರ್ಶನಕ್ಕಾಗಿ ಭೂಲಭಾಯಿಗಳಿಲ್ಲದಿರುವುದರಿಂದ ಕೇಂದ್ರ ಎಸೆಂಬ್ಲಿಯಲ್ಲಿ ವಿರುದ್ಧ ಪಕ್ಷವೇ ಇಲ್ಲದಂತಾಯಿತೆಂದೂ ಕಾಂಗ್ರೆಸ್ ಪಕ್ಷವು ಮೂಲೆ ಪಾಲಾಯಿತೆಂದೂ ಹೇಳಬಹುದೇ? ಸಂದರ್ಭಾನುಸಾರವಾಗಿ ಯೋಗ್ಯ ನಾಯಕನೊಬ್ಬನನ್ನು ಆ ಪಕ್ಷವು ಆರಿಸಿಕೊಳ್ಳಬೇಕು; ಆರಿಸಿಕೊಳ್ಳಲಿದೆ ಅದೇ ರೀತಿ ರಾಜಾಜಿಯಿಲ್ಲದೆ ಹೋದರೆ ನಮ್ಮ ಪ್ರಾಂತ್ಯವೇ ಸಿಡಿದು ಚೂರಾದೀತೆಂದು ನೆನೆಸುವದು ತಪ್ಪು. ಯಥಾರ್ಥವಾದಿ ಸಾಮಾನ್ಯ ಮತ್ತು ಸಮರ್ಥನಾದ ಯಾವನೇ ಒಬ್ಬನಿಂದ ಆಡಳಿತೆ ನಡಿಸ ಬದು ಸಾಧ್ಯವಿದೆ.

ನಿರಂಕುಶವಾದಿ

ಇನ್ನೂ ಹೇಳುವದಾದರೆ, ಪ್ರಾಯಶಃ ರಾಜಾಜಿಯಂಥಹ ವಿಪರೀತ ಬುದ್ಧಿವಂತರೇ ಕಂಟಕಪ್ರಾಯರು ಪ್ರಧಾನಿಯಾಗಿ ಜಡ್ಡಾಗಿ ಕೂಡಾ ತನ್ನ ಹೆಚ್ಚಿನ ಅನುಯಾಯಿಗಳ ಶಕ್ತಿಯ ಮೇಲೆ ಅವರಿಗೆ ವಿಶ್ವಾಸವಿರಲಿಲ್ಲ; ಕಾಂಗ್ರೆಸ್ ಎಸೆಂಬ್ಲಿ ಸದಸ್ಯರ ಮೇಲಂತೂ ಅದು ಮತ್ಸರ್ಯ ಕಡಿಮೆ. ಅವರು ಬುಡದಿಂದ ಹುದಿಯುವರೆಗೂ ನಿರಂಕುಶ ಪ್ರಭುತ್ವವಾದಿ. ಓರ್ವ ಭೂರಿತೇಯನಲ್ಲಿರುವ ಆಡಳಿತೆಯ ಶಕ್ತಿಯ ಮೇಲೆ ಅವರಿಗೆ ನಂಬಿಕೆ ಕಡಿಮೆ; ಯುರೋಪಿಯನ್ ಕಾರ್ಯದರ್ಶಿಗಳು ಮತ್ತು ಆಫೀಸರರ ಆಡಳಿತಾಧ್ಯತೆಯ ಮೇಲೆಯೇ ಅತಿರೇಕ ವಿಶ್ವಾಸ. 1937ರ ಚುನಾವಣೆಯ ನೇ ಕಾಂಗ್ರೆಸು ಜನತೆಯ ಮುಂದಿಟ್ಟಿದ್ದ ತತ್ವಗಳೂ ಕಾರ್ಯಕ್ರಮಗಳೂ ರಾಜಾಜಿಯಿಂದ ತುಚ್ಛೀಕರಿಸಲ್ಪಟ್ಟದ್ದುವು.(ಸರಕಾರೀ ಕಾರ್ಯ ನಿರ್ವಾಹಕ ಖಾತೆ ಮತ್ತು ನ್ಯಾಯ ಖಾತೆಯನ್ನು ವಿಭಾಗಿಸುವುದ ಕ್ಕೆ ಅವರೊಡ್ಡಿದ ವಿರೋಧ; ಕಾಂಗ್ರೆಸ್ ಚುನಾವಣಾ ಕಾರ್ಯಕ್ರಮದಲ್ಲಿ ಕಿತ್ತೊಗೆಯತಕ್ಕದೆಂದು ಸೂಚಿಸಿದ್ದ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಕಾನೂನನ್ನೇ ಅವರು ಕಾರ್ಯತಃ ಜ್ಯಾರಿಗೆ ತಂದುದು ಇತ್ಯಾದಿ ಇತ್ಯಾದಿಗಳೇ ನಿದರ್ಶನ) ಘೋರಣೆಯಲ್ಲಾಗಲೀ ಶಾಸನಸಭಾ ಕಾರ್ಯಗಳಲ್ಲಾಗಲೀ ಅವರು ತನ್ನ ಅನುಯಾಯಿಗಳ ಅಭಿಪ್ರಾಯ ಕೇಳಿದುದು ಅಪರೂಪ ಪಕ್ಷದೊಳಗೆ ಸ್ವತಂತ್ರ ಚರ್ಚಗಾಸ್ಪದವನ್ನೇ ಅವರು ಕೊಟ್ಟವರಲ್ಲ. ಬದಲಿಗೆ ಶಿಸ್ತುಜ್ಯಾರಿಯ ಭಯದಿಂದ ಸದಸ್ಯರು ಬಾಯಿ ಮುಚ್ಚಿಕೊಳ್ಳಬೇಕಾಗಿತ್ತು. ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಸದಸ್ಯರು ತಮ್ಮ ಅಭಿಪ್ರಾಯವನ್ನು ಮುಂದಿಡುವದಸಾಧ್ಯವಾಗಿತ್ತು; ಪಕ್ಷದ ಸಭೆಯಲ್ಲಿ ಕೂಡಾ ಅದನ್ನು ಸೂಚಿಸುವ ಅವಕಾಶವು ಅವರಿಗಿರಲಿಲ್ಲ. ಈ ಕೆಳಗಿನ ಎರಡು ಕಾರಣಗಳಿಂದಾಗಿ ರಾಜಾಜೀ ಹೀಗೆಲ್ಲಾ ಮಾಡಲು ಶಕ್ತರಾಗಿದ್ದರು:—1 ಆ ಕಾಲದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇವರಿಗಿತ್ತಿದ್ದ ಸಂಪೂರ್ಣ ಬೆಂಬಲ. ಆದರಲ್ಲೂ ಮಹಾತ್ಮಾಜೀಯ ಮನಸ್ಸಿನ ಮೇಲೆ ಇವರ ಬುದ್ಧಿವಂತಿಕೆಗಿದ್ದ ಹಿಡಿತ. 2 ದುರ್ದೈವವಶಾತ್, ಆದರೆ ವಸ್ತುತಃ ಸರ್ವಸಾಮಾನ್ಯವಾಗಿ ಎಸೆಂಬ್ಲಿ ಕಾಂಗ್ರೆಸ್ ಸದಸ್ಯರಿಗೆ ದಾಮಾಶಯ ಕ್ಕಿಂತ ಕಡಿಮೆ ಅನುಭವವಿದ್ದುದು. ಈ ದೌರ್ಬಲ್ಯದ ದೆಸೆಯಿಂದ ರಾಜಾಜಿಯ ಸ್ವೇಚ್ಛಾಧಿಕಾರವನ್ನು ಇದಿರಿಸುವ ಧೈರ್ಯ ಇವರಿಗಿಲ್ಲದೆ ಹೋದುದು.

ಇದು ಎರಡು ವರುಷಕ್ಕೂ ಮಿಕ್ಕಿದ ಅವಧಿಯ ಸಾಮಾನ್ಯ ಚಿತ್ರ. ಹೀಗೆಂದ ಮಾತ್ರಕ್ಕೆ ಸರ್ವಾಧಿಕಾರಿಗಳಲ್ಲಿ ಸಹಜವಾಗಿರತಕ್ಕ ಕಲವು ವಿಶಿಷ್ಟಯೋಗ್ಯತೆಗಳು ರಾಜಾಜಿಯಲ್ಲಿರಲಿಲ್ಲವೆಂಬ ಅಭಿಪ್ರಾಯವಲ್ಲ. ಅವರು ಅತ್ಯಂತ ಚತುರ ಮತ್ತು ಶಕ್ತಿವಂತರಿದ್ದಾರೆ. ಅವರ ಪಾನ ನಿಷೇಧ ಕಾರ್ಯಕ್ರಮವು ಒಂದು ಮಹತ್ತಾದ ಸಾಧನೆ.

ರಾಜೀನಾಮೆ ಕೊಟ್ಟ ಮೇಲೆ

ಆದರೆ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಟ್ಟಂದಿನಿಂದ-ವಿಶೇಷತಃ 1942 ನೇ ಎಪ್ರಿಲಿನಲ್ಲಿ ಕ್ರಿಪ್ಸ್ ರಾಯಭಾರಿತ್ವ ನೆಡೆದಾಭ್ಯ---ಅದರಲ್ಲೂ ಮುಖ್ಯವಾಗಿ 1942ರ ಆಗೋಸ್ತಿನ ನಂತರ ನೆಡೆದ ಘಟನೆಗಳು ಎಲ್ಲವನ್ನೂ ತೊಳೆದು ತೋರಿಸಿದ ಬಳಿಕವೂ ಪುನಃ ಪ್ರಾಂತ್ಯದ ನಾಯಕತ್ವ ಮತ್ತು ಪ್ರಧಾನಿ ಪಟ್ಟದ ಆ ಹಳೆಯ ಸ್ಥಾನಕ್ಕೇನೇ ರಾಜಾಜಿಯನ್ನು ತರಬಹುದೆಂದು ಯಾರಾದರೂ ಬಯಸುವದು ಶುದ್ಧ ಹುಚ್ಚಾಟವೇ ಸರಿ. 1941ನೇ ಜನವರಿಯಾರಭ್ಯ ಅವರ ಚಟುವಟಿಕೆಗಳೆಂದರೆ ಕಾಂಗ್ರೆಸು ಮತ್ತು ರಾಷ್ಟ್ರದ ಮುಂದೆ ತನ್ನದೇ ಅದ ಬುದ್ಧಿವಂತಿಕೆ ಮತ್ತು ವರ್ಚಸ್ಸನ್ನೊಡ್ಡುವದೊಂದೇ. ಅವರ ಯಥಾರ್ಥತೆಯ ಕುರಿತು ಕ್ಷಣಕಾಲ ಅನುಮಾನಪಡುವನು ನಾನಲ್ಲ. ಆದರದು ಅಂದಿನಿಂದಿನುವರೆಗೂ ತಪ್ಪು ಹಾದಿಯನ್ನೇ ಹಿಡಿದಿದೆ. ದೇಶವನ್ನು ಭಿನ್ನಭಿನ್ನ ಗೊಳಿಸುವ---ಯುದ್ಧ ಕೃದನ್ನೆಳೆಯುವಾಗ ಕೇಂದ್ರದಲ್ಲಿ ಹೊಸಾಧಿಕಾರವೇನನ್ನೂ ಸೂಚಿಸದ--ಕ್ರಿಪ್ಸ್ ಸೂಚನೆಯನ್ನು ತನ್ನೊಬ್ಬನ ವಿನಹಾ ಇಡೀ ವರ್ಕಿಂಗ್ ಕಮಿಟಿ ಧಿಕ್ಕರಿಸಿರುವಾಗ ರಾಜಾಜೀ 1942ನೇ ಮೇ ಮತ್ತು ಜೂನ್ ತಿಂಗಳಲ್ಲಿ ಕ್ರಿಪ್ಸ್ ಸೂಚನೆಗಳನ್ನು ಸಮರ್ಥಿಸಿಯೂ ವರ್ಕಿಂಗ್ ಕಮಿಟಿ ನಿರ್ಧಾರಗಳನ್ನು ಖಂಡಿಸಿಯೂ ಪ್ರಾಂತ್ಯದಲ್ಲೆಲ್ಲಾ ಪ್ರಚಾರಹೊಡಿದ್ದರು. ಇತರ ಕಡೆಗಳಲ್ಲಿ ಯಾವುದು ಹೇಗಾದರೂ ಮದ್ರಾಸಿನಲ್ಲಿ ಕಾಂಗ್ರೆಸ್ ಮಂಡಲ ರಚಿಸಬೇಕೆಂಬ ೭ ರಾವ್ತೊಂದನ್ನು ಕಾರ್ಯಕ್ರಮ ಸೂಚಿಯಲ್ಲಿ ಸೇರಿಸದೇನೇ 1942ನೇ ಎಪ್ರಿಲಿನ

1000's SAVED

MARGARET'S

FITS CURE

Stops children's fits in 3 minutes.
Ask your chemist for a box.

Sole Agents :-
BRIGHTSTAR AGENCIES,
Hospital Rd., Udipi, S. K.

CANARA BANK LIMITED

(Incorporated in British India, liability of Members Limited.)
(ESTD. 1906 ಸ್ಥಾಪನೆ.)

ANNOUNCEMENT.

We have the pleasure to announce that Branches of the Bank have been opened at

SHOLAPUR, SHIMOGA, SECUNDERABAD and KALYAN (Bombay)

Our MADRAS Office has been opened on

12th November 1945 at 317, Lingi Chetty Street,

MADRAS.

ಬೇಕಾಗಿದ್ದಾರೆ

ಮೈಸೂರಿನ ಕಾಫಿ ಮತ್ತು ಟೀ ಎಸ್ಟೇಟುಗಳಿಗೆ ಕಂಟ್ರಾಕ್ಟರರೂ ಕೂಲಿಯಾಳುಗಳನ್ನು ಒದಗಿಸಿಕೊಡುವವರೂ ಬೇಕಾಗಿದ್ದಾರೆ. ಯೋಗ್ಯ ಜನರಿಗೆ ಉತ್ತಮ ಸವಲತ್ತುಗಳು ಕೊಡಲಾಗುವುದು.

ಇಂದೇ ಬರೆಯಿರಿ—

ಬಾಕ್ಸ್ ನಂಬ್ರ 5, c/o 'ನವಯುಗ'
ಉಡುಪಿ, (ದ. ಕ.)

ಸ್ಥ ಮಂಜಾನೆವರೆಗಾದರೂ ಕಾಯಲಾಯಿಯಲ್ಲಿ ಸೇರಿದ ಪಕ್ಷದಸಭೆಯು ಈ ನಿರ್ಧಾರವನ್ನು ರದ್ದುಪಡಿಸಿಕೊಂಡದ್ದಲ್ಲದೆ ಡಿ.ವರ್ಕಿಂಗ್ ಕಮಿಟಿ ನಿರ್ಣಯಗಳ ವಿರುದ್ಧ ಪ್ರಚಾರಕ್ಕೂ ನಿಷೇಧ ಹಾಕಿದ್ದುದು ನಿಜ ತಮಿಳುನಾಡು, ಆಂಧ್ರ ಮತ್ತು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ರಾಜಾಜಿಯ ಮೇಲೆ ಶಿಸ್ತು ಕ್ರಮ ಕೈಕೊಳ್ಳಬೇಕೆಂದು ಅಪೇಕ್ಷಿಸಿದ್ದುವು. ಅಗತ್ಯವೆಂದು ತೋರಿದರೆ ಅಂತಹ ಕಾರ್ಯಾಚರಣೆ ಕೈಕೊಳ್ಳಬಹುದೆಂದು ಶ್ರೀತ: ಕಾರ್ಯಕಾರೀ ಸಮಿತಿಯು 1942ನೇ ಜುಲಾಯಿಯ ವಾರ್ಧ ಸಭೆಯಲ್ಲಿ ತಮಿಳುನಾಡು ಪ್ರಾಂ. ಕಾಂ. ಕಮಿಟಿಗೆ ಆಧಿಕಾರ ಕೊಟ್ಟಿದ್ದಿತು. ಈ ಅವಧಿಯಲ್ಲಿ ತನ್ನ ಮೇಲೆ ನೋಟೀಸು ಜ್ಯಾರಿಯಾದಾಗಲೇ (ಅದಕ್ಕಿಂತ ಮೊದಲಲ್ಲ!) ಕಾಂಗ್ರೆಸ್ ನಿರ್ಧಾರದ ವಿರುದ್ಧ ಪ್ರಚಾರ ಮಾಡುವ ಸ್ವಾತಂತ್ರ್ಯಕ್ಕಾಗಿ ತಾನು ಎಸೆಂಬ್ಲಿ ಪಕ್ಷದ ನಾಯಕತ್ವಕ್ಕೂ, ಕಾಂಗ್ರೆಸಿನ ನಾಲ್ಕಾಣೆ ಸದಸ್ಯತ್ವಕ್ಕೂ ರಾಜಿ ಕೊಡುವದಿಗತ್ಯ ಮೆಂಬ ಬುದ್ಧಿ ರಾಜಾಜಿಯಲ್ಲಿ ಮೊಳೆಯಿತು!

ಪರಾಭವ ಮನೋವೃತ್ತಿಯ ಪ್ರಚಾರಕ

1942ನೇ ಆಗೋಸ್ತಿನಿಂದಾರಂಭಿಸಿ ಎರಡು ಮೂರು ತಿಂಗಳ ಹಿಂದಿನವರೆಗೂ ಅವರು ಕಾಂಗ್ರೆಸ್ ವಿರುದ್ಧವಾದ ತನ್ನ ಅಭಿಪ್ರಾಯಗಳನ್ನೇ ಪ್ರಚಾರ ಮಾಡುತ್ತಿದ್ದರು. ವಾಕಿಸ್ಥಾನವೀಯದಿದ್ದುದಕ್ಕಾಗಿ ಅವರು ನಡಿಸಿದ ಕಾಂಗ್ರೆಸಿನ ಅಪಪ್ರಚಾರವು ಸರ್ವ ಶ್ರುತವಿರುವದರಿಂದ ವಿವರ ಬೇಕಾಗಿಲ್ಲ. ಮುಸ್ಲಿಂ ಲೀಗಿನಂತಹ ಪಾಂಡವರಿಗೆ 5 ಗ್ರಾಮ ಕೊಡಲು ನಿರಾಕರಿಸಿದ್ದ ಕೌರವರೆಂದು ಕಾಂಗ್ರೆಸ್ಸನ್ನು ಅವರು ಹೋಲಿಸಿದ್ದುಂಟು. ಮಹಾಭಾರತದ ಆ ಕಥೆ ಬಲ್ಲವರಿಗೆ ಇದೆಂತಹ ಅಸಂಬದ್ಧ ಪ್ರಲಾಪನೆಂಬುದು ಸೊತ್ತಿದ್ದಲ್ಲದೇ ಆ ಪವಾಸದಲ್ಲಿದ್ದ ಮಹಾತ್ಮಾ ಗಾಂಧೀಜೀ ಇವರ ಪಾಕಿಸ್ತಾನ್ ಯೋಜನೆಗೆ ಸಮ್ಮತಿ ಸೂಚಿಸಿದ್ದರೆಂಬುದಾಗಲೀ,—ಜಿನ್ನಾ ಸಾಹೇಬರು ಅದನ್ನು ನಿರಾಕರಿಸಿದರೆಂಬ ಕಾರಣವಾಗಲೀ—ರಾಜಾಜಿಯಿಂದಾದ ಆ ನ್ಯಾಯಕ್ಕೆ ಪರಿಹಾರವಾಗಲಿಲ್ಲವು. ಮಹಾತ್ಮರು ಕೂಡಾ ತಪ್ಪಿಬೀಳದವರಲ್ಲ. ಲೀಗಿನ ಲಾಹೋರು ನಿರ್ಣಯದ ಅರ್ಥ ತಿಳಿದಿದ್ದೂ, ಜಿನ್ನಾ ಸಾಹೇಬರು ರಾಜಾಜೀ ಸೂಚನೆಗಳನ್ನು ಮುಂದಾಗಿ ಸ್ಪಷ್ಟ ಪಾಣಿಯಿಂದ ನಿರಾಕರಿಸಿದ್ದ ಮೇಲೂ ಆ ಮಾತುಕತೆಗಳನ್ನು ನಡೆಸಿದುದರಲ್ಲಿ ಹುರುಳಿಲ್ಲ. ಇದರ ಒಟ್ಟು ಪರಿಣಾಮವೆಂದರೆ ರಾಜಾಜಿಯು ಜಿನ್ನಾ ಸಾಹೇಬ್ ಮತ್ತು ಲೀಗನ್ನು ಮತಾಂತರಿಸುವ ಬದಲಿಗೆ, ಮಹಾತ್ಮರನ್ನು ತನ್ನ ಅಭಿಪ್ರಾಯಕ್ಕೆ ಸಮ್ಮತಿಸುಗುಣವಾಗಿ ಮತಾಂತರಿಸಲು ಸಮರ್ಥರಾದರೆಂಬುದನ್ನು ದೇಶದವರು ಪ್ರದರ್ಶಿಸಿದುದು ಮಾತ್ರ! ಇವರಿಬ್ಬರ ಈ ಕಾರ್ಯ ವಿಧಾನಕ್ಕೆ ಕಾರ್ಯಕಾರೀ ಸಮಿತಿಯ ಒಪ್ಪಿಗೆಯಿಲ್ಲವೆಂಬುದಕ್ಕೆ ವರ್ಕಿಂಗ್ ಕಮಿಟಿಯಾಗಲೀ ಎ. ಐ. ಸಿ. ಸಿ.ಯಾಗಲೀ ಅದನ್ನು ಗೀರಿಸಿಕೊಳ್ಳದಿದ್ದುದೇ ನಿದರ್ಶನ:

ಆಗೋಸ್ತು ಚಳವಳಿಯ ವಿರೋಧಿ

ಆಗೋಸ್ತು ಚಳವಳಿ, ಮತ್ತದು ದೇಶದಲ್ಲಿ ಪ್ರತಿಧ್ವನಿಸಿದ ರೀತಿಯ ಕುರಿತು ರಾಜಾಜಿ ಭಾಷಣ ಮತ್ತು ಲೇಖನಗಳ ಮೂಲಕ ತನ್ನ ಸ್ಪಷ್ಟ ವಿರೋಧ ಪ್ರದರ್ಶಿಸಿದ್ದರು; ಸ್ವಂತ ಅಭಿಪ್ರಾಯಗಳನ್ನು ಅಗ್ರಹ ಪೂರ್ವಕ ಮುಂದೊಡ್ಡಿದ್ದರು. ಅವುಗಳ ಸಾರಾಂಶ ಹೀಗೆ: (1)ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ಕೊಟ್ಟದ್ದು ತಪ್ಪು (2) ಕಾಂಗ್ರೆಸ್ ಕ್ರಿಪ್ಸ್ ಸೂಚನೆಗಳನ್ನು ನಿರಾಕರಿಸಿದುದು ತಪ್ಪು. (3)ಆಗೋಸ್ತು ನಿರ್ಧಾರವು ತಪ್ಪು ಮತ್ತು ದುರ್ಬೋಧೆಯಿಂದಾದುದು. (4) ಸರಕಾರವು ಮಾಡಿದ್ದಾನ್ನುದನ್ನೂ ಗಮನಿಸದೆ ಕಾಂಗ್ರೆಸು ಕೇಂದ್ರದಲ್ಲಿಯೂ ಪ್ರಾಂತ್ಯಗಳಲ್ಲಿಯೂ ಅಧಿಕಾರ ವಹಿಸಬೇಕು; ಬೇರೆ ಕಡೆಯಲ್ಲ ಲ್ಲವಾದರೆ ಕೊನೆಯ ಪಕ್ಷ ಮದ್ರಾಸಿನಲ್ಲಾದರೂ ವಹಿಸಬೇಕು. ನನ್ನ ಮಿತ್ರ ಶ್ರೀ. ಮುತ್ತುರಂಗ ಮುದಲಿಯಾರರು ಸುಮಾರು 2 ತಿಂಗಳ ಮೊದಲು ಇವೆಲ್ಲವನ್ನೂ ತನ್ನೊಂದು ಲೇಖನ ಮೂಲಕ ನಾಜೂಕಾಗಿ ವರ್ಣಿಸಿದಾಗ ರಾಜಾಜಿ ಮಾಡಿದಂತೆ ಈಗಲೂ ಇವನ್ನು ಅಲ್ಲಗಳೆಯುತ್ತಾರಾದರೆ, ಅವರ ಭಾಷಣಗಳ ಅಧ್ಯಾಯಾಧ್ಯಾಯ ಮತ್ತು ಅಂಶಗಳನ್ನೆತ್ತಿ ತೋರಿಸಿಯೇ ಇವುಗಳ ಪ್ರತಿಯೊಂದು ಶಬ್ದವನ್ನೂ ರುಜುಪಡಿಸಬಹುದು. ಇತ್ತೀಚೆಗೆ ಸರ್ದಾರ್ ವಲ್ಲಭಾಯಿ ಪಟೇಲರು ರಾಜಾಜಿಗೆ ಕೊಟ್ಟರುವ ಸರ್ಟಿಫಿಕೇಟಿನ್ನು ನಾನು ಓದಿದ್ದೇನೆ. ಆದರೆ 1942ನೇ ಆಗೋಸ್ತಿಗೆ ಸ್ವಲ್ಪ ಮೊದಲು ಸರ್ದಾರರಾಡಿದ್ದ ಮಾತುಗಳೂ ನನಗೆ ನೆನಪಿವೆ. "ಒಂದು ಸರ್. ಸ್ಟಾಫೋರ್ಡ್ ಕ್ರಿಪ್ಸರಿಂದ, ಪುತ್ತೊಂದು ರಾಜಾಜಿಯಿಂದ ಆಗಿರುವ ಎರಡು ಛಿದ್ರಗಳಿಂದಾಗಿ ಕಾಂಗ್ರೆಸು ತಲೆಯಿಡಿತಕ್ಕೊಳಗಾಗಿದೆ"—ಎಂದು ಆಗ ವಲ್ಲಭಾಯಿಗಳಂದಿದ್ದರು. ಸರ್ದಾರರ ಇತ್ತೀಚೆಗಿನ ಶಿಫಾರಸು ಸ್ನೇಹ ಸಂಬಂಧದ್ದೆನ್ನಬಹುದೆ? ಹಾಗಲ್ಲವಾದರೆ ವರ್ಕಿಂಗ್ ಕಮಿಟಿಯು ರಾಜಾಜಿಯನ್ನು ನೇರಾಗಿ ವರ್ಕಿಂಗ್ ಕಮಿಟಿಗೇನೇ ಸೇರಿಸಿಕೊಳ್ಳಬಾರದೇಕೆ ಎಂದು ನಾನು ವಿನಯಪೂರ್ವಕ ಪ್ರಶ್ನಿಸಲೇ?.

ಕೊನೆಗೆ ಬಣ್ಣ ಬದಲಾವಣೆ!

ಅಂತೂ, ಕಟ್ಟಕಡೆಗೆ ತನ್ನೆಲ್ಲ ಪ್ರಯತ್ನಗಳೂ ಹುಸಿಯಾಯಿಂಗಂತನ್ನ ಸಂಧಾನ ಯತ್ನಗಳಿಗೆ ಲೋರ್ಡ್ ಲಿನ್‌ಲಿತ್‌ಗೋ ಮತ್ತವರ ಉತ್ತರಾಧಿಕಾರಿಯಿಂಗ ಜಿಲ್ಲಾ ಬಾರದೆ ಹೋದಾಗ-ಮತ್ತು ಕಾಂಗ್ರೆಸು ಆ ದಬ್ಬಾಳಿಕೆಯ ಗಡಿದಾಟಿ ಬಂದ ಮೇಲೆ —ಸ್ವಪ್ರತಿಷ್ಠೆ ಮತ್ತು ರೇಂಕಾರ ಬಿಡಲರಿಯದ ರಾಜಾಜೀ ಫಕ್ಕನೇ ದಿಕ್ಕು ಬದಲಾಯಿಸಿ ನಿಂತು ಹೇಳಹತ್ತಿದರು:—(ಇದೂ ಸಾರ್ವಜನಿಕ ಭಾಷಣಗಳಲ್ಲೇ) 'ಸುತ್ತಿಸುತ್ತಿ ಕಟ್ಟಕಡೆಗೆ ಕಾಂಗ್ರೆಸು ತನ್ನ ಅಭಿಪ್ರಾಯವಿದ್ದಲ್ಲಿಗೇ ಬಂತು. ನನ್ನ ಪಾದಿ ಆದ್ಯಂತ ಸರಿ. ಕಾಂಗ್ರೆಸ್ ಧುರೀಣರೂ ರಾಷ್ಟ್ರವೂ ಇಷ್ಟೆಲ್ಲಾ ಒದ್ದಾಟ ಹೊಡಿಯವ ಆ 'ಕ್ವಿಟ್ ಇಂಡಿಯಾ' ನಿರ್ಧಾರವ ಲಾಹೋರು ಕಾಂಗ್ರೆಸಿನ ಸ್ವಾತಂತ್ರ್ಯನಿರ್ಣಯವೆಪ್ಪೋ ಅಪ್ಪೇ". ಸೋಲಿಗೀಡಾದ ಒಣ ಹೆಮ್ಮೆಗಾರನು 'ಆಡಿಗೆ ಬಿದ್ದರೂ ಮೂಗು ಮೇಲು' ಎಂದನೆಂಬ ಕನ್ನಡದಲ್ಲಿರುವ ಒಂದು ಗಾದೆ ಈ ಸಂದರ್ಭದಲ್ಲಿ ನೆನಪಾಗುತ್ತಿದೆ!

ಅಂತೂ, ಇದಿಷ್ಟು ದೇಶದಲ್ಲಿ ನಡೆದು ಹೋಯಿತು. ಈಗ ರಾಜಾಜಿ ಪ್ರದಕ್ಷಿಣೆ ತೆಗೆದು ಬಂದು ಹೇಳುತ್ತಿದ್ದಾರೆ:—"ಒಳ್ಳೇದು. ನನ್ನ ಅಭಿಪ್ರಾಯಕ್ಕೆ ಕಾಂಗ್ರೆಸ್ಸನ್ನು ಬಗ್ಗಿಸಿಕೊಳ್ಳಬೇಕೆಂದು ಪ್ರಯತ್ನಿಸಿದೆ. ನಾನು ಸೋತೆ. ಈಗ ವಾವಸು ಕರಕೊಳ್; ಮತ್ತು ಆರು ವರುಷಗಳಿಗೆ ಮೊದಲು ನಾನೆಲ್ಲಿದ್ದೆನೋ ಅಲ್ಲಿಯೇ ನನ್ನನ್ನಿಡಿ"! ಇದು ಹೇಗೆ ಸಾಧ್ಯವಿದೇಶದ ಮಿಲಿಯಾವಧಿ ಜನರು—ಅದರಲ್ಲೂ ಹೊರಗಡಿಯಲ್ಲಿ ರಾಜಾಜಿ ಸೋಲಿನ ಮನೋವೃತ್ತಿಯನ್ನು ಉಪದೇಶಿಸುತ್ತಿದ್ದಾಗ ಜೈಲಲ್ಲಿ ಕೊಳೆಯುತ್ತಿದ್ದ ನಮ್ಮಂಥವರು ಕೇವಲ ಯಂತ್ರಗಳಲ್ಲ. ಈ ವಿಷಯದಲ್ಲಿ ನಮ್ಮ ಸ್ವಾಭಿಪ್ರಾಯಗಳಿವೆ. ಆಗೋಸ್ತು ಚಳವಳಿ ಮತ್ತದರ ನಂತರದ ಘಟನೆಗಳು ರಾಷ್ಟ್ರವಲ್ಲಿ, ವಿಶೇಷತಃ ನಮ್ಮೆಲ್ಲರ ಮನಸ್ಸಿನಲ್ಲಿ ಒಂದು ಕ್ರಾಂತಿಯನ್ನೆಬ್ಬಿಸಿವೆ ಈ ಕಾಲವನ್ನು 1940 ಆಥವಾ 1939ಕ್ಕೆ ಹಿಂದೊಡುವದು ಎಂದಿಗೂ ಆಗದ ಮಾತು. ಆದ್ದರಿಂದ ಯಾರೇ ಇರಲಿ, ಅಂದು ರಾಜಾಜಿಗಿದ್ದ ಸ್ಥಾನವನ್ನೇ ಇಂದೂ ಕೊಡಬೇಕೆಂದು ವಾದಿಸುವದು ಜಾಣ್ಮೆಯಲ್ಲವೆಂದು ನನ್ನ ಅಭಿಪ್ರಾಯ.

ನಾಯಕತ್ವವು ಸಂತೆ ಸಾಮಾನಲ್ಲ!

ಹೀಗನ್ನುವಾಗ ರಾಜಾಜಿಯ ಅಸಾಧಾರಣ ಅನುಭವ, ಪ್ರತಿಭೆ, ಗತಕಾಲದ ಸೇ - - ನ ಮೂರು ವರುಷಗಳಲ್ಲಿ ಏನೇ ನ ಡೆದಿದ್ದರೂ)—ಇವನ್ನೆಲ್ಲಾ ಏಮಿ ಗ ಬಿಡಬೇಕೆಂದಾಗಲೀ, ಪರಿಪ್ರಶ್ನಿಸಬೇಕೆಂದಾಗಲೀ ನನ್ನ ಅಭಿಪ್ರಾಯವಲ್ಲ. ಒಂದು ಸರ್ವ ಸಮ್ಮತ ಒಪ್ಪಂದಕ್ಕಾಗಿ ಪ್ರಯತ್ನಿಸಿರೆಂದೂ ಸ್ವಧಾನಿತ್ವ ಅಥವಾ ನಾಯಕತ್ವದ ಭರವಸೆ ಯಾವುದನ್ನೂ ಕೊಡದೆ ಹೋಸ ಎಸೆಂಬ್ಲಿಯಲ್ಲಿ ರಾಜಾಜಿಗೂ ಒಂದು ಸ್ಥಾನ ದೊರೆಯುವಂತೆ ನೋಡಿರೆಂದೂ ತಮಿಳುನಾಡಿನ ನನ್ನ ಮಿತ್ರರು ಮತ್ತು ಸಹವ್ಯವಸಾಯಿಗಳನ್ನು ನಾನು ಬೇಡಿಕೊಳ್ಳುತ್ತೇನೆ. ಪಕ್ಷದ ಪ್ರಮುಖತ್ವವೆಂಬುದು ಚುನಾವಣೆ ಮುಗಿದ ಮೇಲೆ ಹೊಸ ಎಸೆಂಬ್ಲಿ ಸದಸ್ಯರು ತಾವಾಗಿ ನಿರ್ಧರಿಸಿಕೊಳ್ಳಬೇಕಾದ ವಿಷಯ. ಆದು, ಯಾರಿಗಾದರೂ ಮುಂದಾಗಿ ವಹಿಸಿಕೊಡಲಾಗುವ ಸಂತೇ ಸಾಮಾಗ್ರಿಯೇನೂ ಅಲ್ಲ ಚುನಾವಣೆಗೆ ಉಮೇದ್ವಾರಿಗಳನ್ನಾರಿಸುವ ಸಂದರ್ಭದಲ್ಲೇ ಇದನ್ನು ಅವರ ಮೇಲೆ ಹೇರುವಂತಹ ದುಃಕೃತ್ಯವನ್ನು ಛಡಾಯಿಸುವದು ಸಲ್ಲದು. ದೇಶದಲ್ಲಿ ದೊರೆಯಬಲ್ಲ ಯೋಗ್ಯರನ್ನೇ ಕಾಂಗ್ರೆಸಿನ ಪರವಾಗಿ ನಿಲ್ಲಿಸಬೇಕು. ಆ ಮೇಲೆ ಅಗ್ರಪಟ್ಟಕ್ಕಾರಿಸಲ್ಪಡುವ ಆ ವ್ಯಕ್ತಿ ಯಾವನೇ ಇರಲಿ-ಅಂತೂ ತನ್ನ ನಾಯಕನನ್ನು ಸದಸ್ಯರೇ ಆರಿಸಿಕೊಳ್ಳಲಿ ರಾಜಾಜಿಯೇ ಚುನಾಯಿಸಲ್ಪಟ್ಟಲ್ಲಿ ನಾವು ಅವರನ್ನು ಅಂಗೀಕರಿಸಿಕೊಳ್ಳುವೆವು. ಆದರೆ ಹಾಗಾಗದೆ ಹೋದಲ್ಲಿ ವ್ಯಕ್ತಿಶಃ ರಾಜಾಜಿ ಕೂಡಾ ವ್ಯಸನಪಡಬಾರದು. ಮಿಕ್ಕವರೊಂದಿಗೆ ಹಿಂಬದಿಯ ಸದಸ್ಯನಾಗಿ ನಿಂತು ಕೆಲಸ ಮಾಡಲು ಅವರೂ ಒಪ್ಪಬೇಕು. ಪಂಡಿತ ನೆಹರುಗಳಂತಹ ಕಾಂಗ್ರೆಸ್ ಅಧ್ಯಕ್ಷರುಗಳು ಕಾರ್ಯದರ್ಶಿಗಳಾಗಿ ಕೆಲಸಮಾಡಿದ ಕಾಲವಿರಲಿಲ್ಲವೆ? ತನಗೆ ಇಂತಹ ಸ್ಥಾನವೇ ದೊರೆಯತಕ್ಕದ್ದೆಂದು ಯಾರೊಬ್ಬನೂ ಹರ ಹಿಡಿಯುವದು ತರವಲ್ಲ. ತಮಿಳುನಾಡು ಪ್ರಮುಖರೂ ಕಾರ್ಯಕರ್ತರೂ ಇದೇ ಭಾವನೆಯಿಂದ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವರೆಂದೂ, ಕಳದ ಮೂರು ವರುಷಗಳ ಚರಿತ್ರೆಗೇನೇ ವಿಶೇಷತಃ ಅಂಟಿಕೊಳ್ಳದೆ, ರಾಜಾಜಿಯ ಗತಕಾಲದ ಅಮೂಲ್ಯ ಸೇವೆ ಮತ್ತು ಅನುಭವಗಳ ಸಹಾಯವನ್ನು ಈ ವಿಧಾನದಿಂದ ಪಡೆಯುವರೆಂದೂ ನಾನು ಆಶಿಸುತ್ತೇನೆ. ಹೇಗಿದ್ದರೂ ನಾವು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ನಮ್ಮ ನಮ್ಮೊಳಗಿನ ಜಗಳದಲ್ಲಿ ವ್ಯಯಿಸುವ ಬದಲಿಗೆ, ಆದಕ್ಕಿಂತ ದೊಡ್ಡ ಸಮಸ್ಯೆಯಾಗಿರುವ ಸ್ವರಾಜ್ಯ ಸಾಧನೆಗೆ ಹೆಚ್ಚು ಬೇಕಾಗಿದೆ ಎಂಬುದನ್ನು ನಾವಾರೂ ಮರೆಯಬಾರದು. ಈ ವಾದದೊಳಗೆ ನಾನೀ ರೀತಿ ಪ್ರವೇಶಿಸಿದುದನ್ನು ತಮಿಳು ನಾಡಿನ ಮಿತ್ರರು ಕ್ಷಮಿಸುವರೆಂದು ನಂಬುತ್ತೇನೆ; ಪ್ರಾಂತ್ಯವಲ್ಲಿರುವ ನಮ್ಮೆಲ್ಲರ ಭವಿಷ್ಯವೂ ಒಂದೆಡೆಯಲ್ಲೇ ಪೋಣಿಸಲ್ಪಟ್ಟಿರುವದರಿಂದ ನನ್ನೀ ಪ್ರವೇಶಕ್ಕೆ ಕ್ಷಮೆಯಿದೆ.

These enterprises of young men of Mangalore are worth your notice:

1 'The Badavara Bandhu'
2 The Badavara Bandhu Printing Press, Ltd.
3 Sri Narayan Guru Press
4 Sri Narayan Guru Bank Ltd
5 The Badavara Bandhu Orphanage Trust.
6 My Stores
7 The South Kanara Fish Industries, Ltd.
8 The Karnataka Theatres Ltd
9 Junasons, Ltd.
10 The Vijaya Stores, Ltd. etc. etc.

PATRONISE INDIAN INDUSTRY.

ಇಂದ್ರಭವನ ಕಾಫಿ ಹೊಟೆಲ್

ಬಲ್ಮಠ * * * * ಮಂಗಳೂರು.

ಹೊಸ ವ್ಯವಸ್ಥೆ—ಯೋಗ್ಯ ಬ್ರಾಹ್ಮಣರಿಂದ ತಿಂಡಿ ಪಾಕೀಯಗಳ ತಯಾರಿಕೆಗಳ — ವಿದ್ಯುದ್ದೀಪ, ರೇಡಿಯೋಗಳ ಆಧುನಿಕ ಸಲಕರಣೆ, ಉತ್ತಮ ಉಪಚಾರ.

ಟೀಪಾರ್ಟಿ ಮುಂತಾದವುಗಳ ಆರ್ಡರುಗಳು ಸ್ವೀಕರಿಸಲ್ಪಡುತ್ತವೆ.

ಬಿ. ಬಾಬು ಶೆಟ್ಟಿ, ಪ್ರೊಪ್ರೈಟರ್.

Indra Bhavan Coffee Hotel,
Balmatta Road, Mangalore.

ವಿಶೇಷ ಪ್ರಚಾರದಲ್ಲಿರುವ
ಕೆಲವು ಆಯುರ್ವೇದೀಯ
ಔಷಧಗಳು
— ದೊರೆಯುತ್ತವೆ —
ನವಭಾರತ ಪುಸ್ತಕ ಭಂಡಾರ,
: ಉಡುಪಿ :

ದೋಷ ನಿವಾರಣೆ ಶಕ್ತಿವರ್ಧನೆಯೊಡನೆ ಸಂಘಟಿತರಾಗೋಣ!

ಮೂಲ್ಕಿಯಲ್ಲಿ ಜರಗಿದ ಬಂಟರ ಯಾನೆ ನಾಡವರ ಸಂಘದ ೩೭ನೇ ಅಧಿವೇಶನದಲ್ಲಿ ವಕೀಲ್ ಶ್ರೀ. ಕೆ. ಜೆ. ಬಲ್ಲಾಳರಿತ್ತ ಅಧ್ಯಕ್ಷ ಭಾಷಣದ ಭಾಗ-

ನಾವಿಲ್ಲಿ ನಮ್ಮ ಸಂಘದ 37ನೇ ವಾರ್ಷಿಕಾಧಿವೇಶನದಲ್ಲಿ ನೆರೆದಿದ್ದೇವೆ. ಇದು ಪ್ರಾಮುಖ್ಯ ಸಂದರ್ಭ; ಮಹತ್ವಾದ ಸನ್ನಿವೇಶ. ಇಂತಹ ಸುಮುಹೂರ್ತದಲ್ಲಿ ಹಿಂದಿನ ಹಾಗೂ ಇಂದಿನ ಸ್ಥಿತಿಗತಿಯನ್ನು ವಿಮರ್ಶಿಸುವುದೂ, ಮುಂದಿನ ನಮ್ಮ ಕಾರ್ಯನಿಧಾನಗಳನ್ನು ಪರ್ಯಾಲೋಚಿಸುವುದೂ ಅಗತ್ಯವಿದೆ. ಆದ್ದರಿಂದ ಗತಕಾಲ ಮತ್ತು ಸದ್ಯ ಸ್ಥಿತಿಯ ಸ್ಥೂಲ ವಿಮರ್ಶೆಯನ್ನು ಮಾಡಿ ನಮ್ಮ ಭಾವೀ ಕಾರ್ಯಾಚರಣೆಗಳ ಕುರಿತು ಕೆಲವು ಸೂಚನೆಗಳನ್ನು ನಿಮ್ಮ ಪರ್ಯಾಲೋಚನೆಗಾಗಿ ಮುಂದಿಡಲು ಬಯಸುತ್ತೇನೆ.

ಬಂಟರ ಮತ್ತು ಅವರ ಕಾಯಿದೆಗಳ ಮೂಲವೆಲ್ಲಿ?

'ಬಂಟ' ಶಬ್ದಕ್ಕೆ ತುಳುವಿನಲ್ಲಿ ಶಕ್ತವಂತ ಅಥವಾ 'ಭಟ' ಎಂಬ ಅರ್ಥವಿದೆ. ಇದು ಅನ್ವರ್ಥನಾಮ. ಬಂಟರು ಮಲಬಾರಿನ ನಾಯರು ಮತ್ತು ತೆಲುಗು ರೆಡ್ಡಿ ಹಾಗೂ ನಾಯಿಡುಗಳಂತೆ ಮೂಲತಃ ಯೋಧ ವರ್ಗವಾಗಿ ಇದ್ದವರು. ದಕ್ಷಿಣ ಕನ್ನಡದ ಉತ್ತರ ಭಾಗಗಳಲ್ಲಿ 'ಬಂಟ' ಎನ್ನುವ ಬದಲಿಗೆ 'ನಾಡವ' ನಾಮವು ಬಳಕೆಯಲ್ಲಿದೆ ಇದು ಅರ್ಥವತ್ತಾಗಿದೆ. ಮಲಬಾರಿನಲ್ಲಿರುವಂತೆ 'ನಾಡು'ಗಳನ್ನಾಗಿ ರೂಪಿಸಿಕೊಂಡು ಅವರು ಸ್ಥಳಾಡಳಿತೆಗಳನ್ನು ಸಂಘಟನೆ ಮಾಡಿಕೊಂಡಿದ್ದರೆಂಬುದನ್ನು ಅದು ಸೂಚಿಸುತ್ತದೆ ಆದರೆ ಈಗ ಅಂತಹ ಸಂಸ್ಥೆಗಳ ಕುರುಹು ಕೆಲವು ಮಾತ್ರ ಉಳಿದಿವೆ.

ಬಂಟರ ಮೂಲವಾವುದು ಎಂಬುದು ಸುಸ್ಪಷ್ಟವಾಗುವುದಿಲ್ಲ. ಒಂದು ಕಾಲದಲ್ಲಿ ನಮ್ಮ ದಕ್ಷಿಣ ಕನ್ನಡದ ಬಹು ಭಾಗವು 'ತಳುವ' ನಾಮಧಾರಿಯಾಗಿತ್ತು. ಕೈಸ್ತ ಶಕದ ಆದಿ ಶತಮಾನದಲ್ಲಿ ಕೆಲವೊಮ್ಮೆ ಸ್ವತಂತ್ರರಾಗಿಯೂ, ಮಿಕ್ಕು ಕಾಲಗಳಲ್ಲಿ ಪಲ್ಲವರು, ಆದಿಕದಂಬರು, ಅದಿಚಾಲುಕ್ಯರು, ಕೊನೆಯ ಕದ[illegible] ಹೊಯ್ಸಳ ಬಲ್ಲಾಳರೇ ಮೊದಲಾದ ಅಧಿರಾಜರ ಆಶ್ರಿತರಾಗಿಯೂ ಇಲ್ಲಿ ತುಳುವರು ಆಳುತ್ತಿದ್ದರೆಂಬಲೂ ಅವರೊಳಗೆಪದೇ ಪದೇ ಯುದ್ಧಗಳು ನಡೆಯುತಿದ್ದುದೆಂತಲೂ. ಈ ಸಮರ ವಾತಾವರಣ ದೆಸೆಯಿಂದ ಜನತೆಯ ನಡುವೆ ಬಂಟರು ಯಾನೆ ಭಟರು ಎಂಬ ಹೆಸರಿನ ಮುಖ್ಯ ಒಂದು ವರ್ಗ ಉಂಟಾಯಿತೆಂತಲೂ ತಿಳಿದು ಬರುತ್ತದೆ. ಆದಿಕಾಲದ ದ್ರಾವಿಡ ವಂಶಜರಾದ ಈ ಸೈನಿಕ ಸಮಾಜವು, ಈ ಜಿಲ್ಲೆಯ ಉತ್ತರಗಡೆಯಿಂದ ಒಳ ಪ್ರವೇಶಿಸಿ ಇಲ್ಲಿಯೂ ಮಲಬಾರಿನಲ್ಲಿಯೂ ಬೆರಕೆಯಾಗಿ ಸೇರಿಹೋಗಿರಬೇಕು. ಹೀಗೆ ಮಿಶ್ರಗೊಂಡು ಈ ಜಿಲ್ಲೆಯಲ್ಲಿ ನೆಲೆನಿಂತವರು 'ಬಂಟ'ರೆಂದು ಹೆಸರಾದರು; ಮಲಬಾರಿನಲ್ಲಿ ಸೇರಿ ಹೋದವರು 'ನಾಯರ್'ರಾದರು. ಸಮಯ ಸಂದಂತೆ, ಶ್ಲಾಘ್ಯಿಯ ಪುರೋಹಿತ ವರ್ಗವಾದ ಬ್ರಾಹ್ಮಣರ ಪಾಲಿಗೆ ಸೇರದ ಭೂಮಿಗಳ ಮೂಲಕರ್ತೃತ್ವವು ಇವರ ವಶವಾಯಿತು.

ಇನ್ನು ಬಂಟರ ಆಳಿಯ ಸಂತಾನ ಕಾನೂನಿನ ಮಾತು; ಇದರ ಮೂಲವಾವುದು ಎಂಬುದು ಕೊಡಾ ಅಷ್ಟೇ ಅಸ್ಪಷ್ಟವಾಗಿದೆ. ಈ ಕುರಿತು ವಿವಿಧ ಹೇಳಿಕೆಗಳು ಪ್ರಚಾರದಲ್ಲಿವೆ. ಆ ಪೈಕಿ ಮುಖ್ಯವಾದೊಂದು ಹೇಳಿಕೆ ಹೀಗಿದೆ: ಒರ್ವ ಕದಂಬ ರಾಜನಾದ ಮಯೂರವರ್ಮನು ಈ ಜಿಲ್ಲೆಯೊಳಗೆ ಬ್ರಾಹ್ಮಣರನ್ನು ಕೊಂಡುಸುವ ಪೂರ್ವದಲ್ಲಿ ಇಲ್ಲಿ ದ್ರಾವಿಡ ಜನಾಂಗವಿದ್ದಿತು.

ಅವರೆಲ್ಲಾ ಇಲ್ಲಿಯ ಭೂಮಾಲಿಕರೋ ಬೇ ಸಾಯಗಾರರೋ ಆಗಿದ್ದರು. ಈ ಆದಿ ಭಾಗದ ದ್ರಾವಿಡ ಜನಾಂಗದಲ್ಲಿ ಬಹು ಪತಿತ್ವ ಪದ್ಧತಿಯಿತ್ತು. ಲಂತಹ ಸ್ಥಿತಿಯಲ್ಲಿ ಹೊರಗಿನಿಂದ ಬಂದ ಸೈನಿಕರು ಈ ಮೂಲನಿವಾಸಿ ಭೂಮಾಲಿಕ ಮತ್ತು ಬೇಸಾಯಗಾರ ಮಹಿಳೆಯರೊಡನೆ ಸಂಬಂಧ ಬೆ[illegible] ಇವರಿಂದ 'ಅಳಿಯ ಸಂತಾನ' ಕಾನೂನು ಉಂಟಾಯಿತು. ಮತ್ತೊಂದು ಮುಖ್ಯ ಹೇಳಿಕೆಯೆಂದರೆ ಭೂತಾಳ ಪಾಂಡ್ಯನೆಂಬವನು ತನ್ನ ಪ್ರಜೆಗಳಿಗಾಗಿ ಎ. ಡಿ. 78ರಲ್ಲಿ ಈ ಕಾನೂನನ್ನು ಜ್ಯಾರಿಗೆ ತಂದನೆಂಬುದು. ತನ್ನೊಂದು ಮಹತ್ಕಾರ್ಯಕ್ಕೆ ಮನಪ್ಯ ಬಲಿ ಬೇಕಾದಾಗ, ತನ್ನ ಹೆಂಡತಿಯು ಮಗನನ್ನು ಕೊಡಲೊಪ್ಪದೆ, ತಂಗಿಯೇ ತನ್ನ ಪುತ್ರನನ್ನಿತ್ತುದರಿಂದ ಭೂತಾಳಪಾಂಡ್ಯನು ಈ ಕಾನೂನನ್ನು ತಂದನೆಂದು ಪ್ರತೀತಿಯಿದೆ. ಈ ಕುರಿತು ಇನ್ನು ಕೆಲವರು ಬೇರೊಂದು ಕಥೆ ಹೇಳುತ್ತಾರೆ. ವಿಜಯ ನಗರದ ರಾಜರ ಪ್ರಭಾವ ಹೆಚ್ಚಿದ್ದ ಆ ಕಾಲದಲ್ಲಿ ತಳು ರಾಜರು ತಮ್ಮ ಮೇಲಧಿಕಾರೀ ರಾಜರಿಗೆ ಹಳೇ ರಿಕಾರ್ಡೆಂದು ನಮೂದಿಸಿ ಒಪ್ಪಿಸಿದ್ದ ಒಂದು ಭಿನ್ನವತ್ತಳೆಯೇ 'ಭೂತಾಳಪಾಂಡ್ಯನ ಕಟ್ಟಳೆ ಕಟ್ಟಳೆಗಳು' ಎಂದು ಇವರ ಅಂಬೋಣ. ತಮ್ಮ ಪ್ರಜೆಗಳಲ್ಲಿ ಪ್ರಚುರವಾಗಿದ್ದ ಸಂಪ್ರದಾಯ, ಪದ್ಧತಿಗಳಲ್ಲಿ ಅಧಿರಾಜರು ಕೈ ಹಾಕದಂತೆ ನೋಡುವದಕ್ಕಾಗಿಯೇ ಈ ಕಟ್ಟು ಕಥೆಯನ್ನೆವರು ಮುಂದೊಡ್ಡಿದರೆಂದೂ, ಭೂತಾಳಪಾಂಡ್ಯನ ಕಥೆಯು ಆರ್ಯನರಿಗೆ ವಿರುದ್ಧವಾದ ದ್ರಾವಿಡರ ಪ್ರಚಾರದೊಂದು ಮಾದರಿ ಹೊರತು ಬೇರೇನೂ ಅಲ್ಲವೆಂದೂ ಇವರು ಅಭಿಪ್ರಾಯ ಪಡುತ್ತಾರೆ

ಇವು ಹೇಗೂ ಇರಲಿ; ನಮ್ಮಕಾನೂನಿನ ಮೂಲವಾವುದೇ ಇರಲಿ; ನಮ್ಮ ಪಾಲಿಗೆ ಗತಕಾಲದ ಅವಿೋಘತೆಯಿದೆ; ನಮ್ಮ ಆಳಿಯ ಸಂತಾನ ಪದ್ಧತಿಯಲ್ಲಿ ಅಮೂಲ್ಯಾಂಶಗಳಿವೆ.

೦೦ ೦೦ ೦೦

ಆಳಿಯ ಸಂತಾನ ಎಂದರೆ ಸದಸ್ಯರೆಲ್ಲರದಾದ ಸಂಯುಕ್ತ ಸಂಸ್ಥೆಯೆನ್ನಬಹುದು. ಸರ್ವಸಮಾನರಾ ಹಿರಿಯರಿಂದಿಳಿದು ಬಂದ ಒಂದು ಸಂತಾನ—ಸರ್ವಸಮಾನತೆಯಲ್ಲಿ ಆಸ್ತಿಯ ಹಕ್ಕು ಪಡೆದಿರುವ ಒಂದು ಸಹವರ್ತೀ ಹಂಗಡ—ಒಂದೇ ಅಡಳಿತೆಯಲ್ಲಿ ಒಟ್ಟೊಟ್ಟಿಗೆ ಹಾಗೂ ಒಮ್ಮತದಿಂದ ಜೀವನ ಮತ್ತು ದುಡಿಮೆ ಸಾಗಿಸುವ, ಅದರ ಉತ್ಪತ್ತಿಯಿನ್ನು ಜತೆಯಾಗಿ ಅನುಭೋಗಿಸುವ ಒಂದು ಬಂಧುತ್ವ—ಹೀಗೆ ಸಂಬಂಧ, ಜೀವನ ಮತ್ತು ಹೃದಯಗಳ ಒಂದೆಡೆಯ ಕೇಂದ್ರೀಕರಣವೇ ಆಳಿಯ ಸಂತಾನ ಕುಟುಂಬ. ಇಲ್ಲಿ ಗಂಡಸು, ಹೆಂಗಸು ಮತ್ತು ಮಕ್ಕಳಿಗೆ ಸಮಾನ ಹಕ್ಕೆಜೆ. ಸರ್ವ ಸಂಗತಿಗಳಲ್ಲಿಯೂ ಏಕರೀತಿಯ ಅಧಿಕಾರವಿದೆ. ಮುದುಕ, ಮೂಕ, ಕಿವುಡ, ಕುರುಡ, ಕುಂಟ ಅಥವಾ ಮುರುಟ ಎಂಬ ಭೇದವಿಲ್ಲದೆ ಪ್ರತಿಯೊಬ್ಬ ಸದಸ್ಯನ ಜೀವನಾವಶ್ಯಕತೆಗಳನ್ನು ಅದು ಪೂರೈಸುತ್ತದೆ. ಅದು ತಂದೆತಾಯಿಗಳಲ್ಲದ ಮಕ್ಕಳಿಲ್ಲದ [illegible]ಪಾಲಿಗೆ ಅನಾಥಾಲಯ; ವಿಧವೆಗೆ ವಿಧವಾಶ್ರಮ; ರೋಗಿಗಳಿಗೆ ಆಪೆ ಆಸ್ಪತ್ರೆ; ಮತ್ತು [illegible]ಸರ್ವ ಸದಸ್ಯರ ಪಾಲಿಗೆ ಒಂದು ರಾಷ್ಟ್ರೀಯ ವಿಮಾಸಂಸ್ಥೆಯಾಗಿ ನಿಂತಿದೆ. ಈ ಅಡಳಿತೆಯಡಿಯಲ್ಲಿ, ಇದರ ಸಹಾಯ ಪಡೆದಾಗಲೀ ಪಡೆಯದಾಗಲೀ ಒರ್ವ ಗಂಡು ಯಾ ಣ್ಣು ತಂತಮ್ಮ ಸ್ವಂತ ನಿಧಿ ನಿರ್ಮಿಸಿಕೊಳ್ಳಬಹುದು. ಅದು ಬಂಧುಭಾವನವನ್ನು ಹುಟ್ಟಿಸಿ ಪ್ರಜ್ವಲಿಸುತ್ತದೆ. 'ಎಲ್ಲರಿಗಾಗಿ ಒಬ್ಬ; ಮತ್ತು ಒಬ್ಬನಿಗಾಗಿ ಎಲ್ಲರೂ' ಎಂಬ ಉಚ್ಚ ಸಹಕಾರೀ ತತ್ವವನ್ನು ಅದು ತನ್ನ ಸದಸ್ಯರ ಮುಂದಿಡುತ್ತದೆ. ಈ ಸಹೋದರತೆ ಮತ್ತು ಸಹಕಾರದ ಉತ್ಕೃಷ್ಟಾದರ್ಶದ ಸ್ಫೂರ್ತಿಯಿಂದಾಗಿ, ಸಂದರ್ಭ ದೊರೆತಾಗಲೆಲ್ಲಾ ಸಾಮೂಹಿಕವಾಗಿಯೂ, ಪ್ರತ್ಯೇಕವಾಗಿಯೂ, ಅರ್ಥಿಕಾನುಕೂಲತೆ ಪದೆಯುವ ಸೌಲಭ್ಯಗಳು ಎಲ್ಲಾ ಸದಸ್ಯರ ಪಾಲಿಗೂ ವಿಶೇಷವಾಗಿ ದೊರೆತಿವೆ.

ಬಂಟರ ಹಾಗೂ ಅವರ ಕಟ್ಟಳೆಯ ಸದ್ಯಸ್ಥಿತಿ

ಆದರೆ ಈ ದಿನ ನಮ್ಮ ಸ್ಥಿತಿ ಹೇಗಿದೆ? ಮತ್ತು ನಮ್ಮ ಆಳಿಯ ಸಂತಾನ ಕಾನೂನಿನ ಗತಿಯೇನಾಗಿದೆ? ಇಡಿಯ ಸಮಾಜದ ಒಕ್ಕಟ್ಟು ಒಡೆದು ಹೋಗಿದೆ. ಸಂಘಟನೆ ಸಡಿಲು ಬಿದ್ದಿದೆ. ಇನ್ನೂ ಬಹ್ಯಂತ ಅಸ್ತಿಪಾಸ್ತಿಗಳು ನಮ್ಮ ಸ್ವಾಧೀನದಲ್ಲೇ ಇದ್ದರೂ ಅವು ಅನುಕ್ರಮವಾಗಿ ಪರಕೀಯರ ಹಸ್ತಗತವಾಗುತ್ತಾ ಇವೆ. ಅಂದಿನ ನಮ್ಮ ವರ್ಚಸ್ಸೆಲ್ಲಾ ಇಂದು ಕ್ಷಮಿಸಿದೆ. ಅದರೊಂದಿಗೆ ನಮ್ಮದಾಗಿದ್ದ ಅನುಸಮ ಸ್ಥಾನ—ಅಗ್ರ ಪೀಠದ ಮಾನ—ಇವೆಲ್ಲವೂ ಕೈ ಬಿಟ್ಟಿವೆ. ನಮ್ಮ ಯೋಧ ಗಾಂಭೀರ್ಯ, ಸೋಲ್ಜರ್ ಸ್ಫೂರ್ತಿ ಆದೃಶ್ಯವಾಗಿಯದೆ ನಮ್ಮ ಸ್ವಾತಂತ್ರ್ಯ ಕಳೆದುಹೋಗಿಯದೆ. ಇಂದು ನಾವೊಂದು ಬಡಪಾಯಿಗಳ ಪಂಗಡವಾಗಿ ರೂಪ್ಪಟ್ಟಿದ್ದೇವೆ. ಸರ್ವ ಸಂಗತಿಗಳಲ್ಲೂ, ಪರಕೀಯರನ್ನಾಶ್ರಯಿಸುವ ದುಸ್ಥಿತಿಗಿಳಿದಿದ್ದೇವೆ. ನಮ್ಮ ಅವಿಭಕ್ತ ಕುಟುಂಬಗಳು ಹಿಂದಿನ ಅಮೂಲ್ಯಾಂಶಗಳನ್ನೆಲ್ಲಾ ಕಳಕೊಂಡು ನಾಮ ಮಾತ್ರ ಉಳಿದಿವೆ ಎಲ್ಲೆಲ್ಲಿಯೂ ಮನೆ ಜಗಳಗಳು, ಕುಟುಂಬ ಕಲಹಗಳು, ದ್ವೇಷಾಸೂಯೆಗಳೇ ಕಾಣುತ್ತಿವೆ. ನಮ್ಮ ವಿಕಮಾತ್ರ ಸ್ಥಿರೋದ್ಯೋಗವಾದ ಜೇಸಾಯವು ಅಲಕ್ಷಿಸಲ್ಪಟ್ಟಿದೆ; ನಮ್ಮ ಆಸ್ತಿ ಪಾಸ್ತಿಗಳು ಅಸಡ್ಡೆಗೊಳಗಾಗಿ ಬಂಜರು, ಆರೆ ಬಂಜರು ಬೀಳುತ್ತಿರುವುದನ್ನು ಕಾಣಬಹುದಾಗಿದೆ! ಇತರ ಯೋಗ್ಯ ಉದ್ಯೋಗಗಳಲ್ಲದ ದೆಸೆಯಿಂದಾಗಿ ನಮ್ಮ ಯುವಕರು ವರುಷದಿಂದ ವರುಷಕ್ಕೆ ನಿರುದ್ಯೋಗೀ ದಳದ ಸಂಖ್ಯೆ ಹೆಚ್ಚಿಸಿ ನರಳುತಿದ್ದಾರೆ. ನಮ್ಮ ಕಟ್ಟಳೆ ಕಾನೂನೆಂಬುದು ಅಸ್ವಾಭಾವಿಕ ಹಾಗೂ ಅಕ್ರಮಣಕಾರಿಯೆಂದು ತೋರಹತ್ತಿದೆ. ನಾವೀಗ ಅತಿ ವ್ಯಯಕಾರಿಯಾದ ಹಾಗೂ ಅನಾಹುತಕಾರಿಯಾದಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ಈಡಾಗಿರುತ್ತೇವೆ. ಒಟ್ಟಿನ ಮೇಲೆ 'ಒಬ್ಬನಿಗಾಗಿ ಎಲ್ಲರೂ; ಎಲ್ಲರಿಗಾಗಿ ಒಬ್ಬ' ಎಂಬ ತತ್ವದ ಬದಲಿಗೆ 'ಅವನವನ ತಲೆಗೆ ಅವನವನ ಕೈ; ಎಲ್ಲರ ಪಾಲಿಗೆ ದೇವರೇ ಗತಿ' ಎಂಬಂತಹ ಸ್ಥಿತಿಗೆ ನಾವೀಗ ಬಂದಿದ್ದೇವೆ!

ಸಂಘದ ಸದಸ್ಯತನ:—ನಮ್ಮ ಸಂಘವು ಕಳೆದ 37 ವರುಷಗಳಿಂದ ಕಾರ್ಯರಂಗದಲ್ಲಿದೆಯಾದರೂ ಅದರ ಸದಸ್ಯತ್ವ ದಲ್ಲಿರುವನೆಂದರೆ 46 ಮಂದಿ ಸ್ಥಾಪಕರು, 141 ಪೋಷಕರು, 525 ಮಂದಿ ಮೆಂಬರರು ಮಾತ್ರ! ಒಂದೂವರೆ ಲಕ್ಷಕ್ಕೂ ಮಿಕ್ಕಿ ಸಂಖ್ಯೆಯಿರುವ ನಮ್ಮ ಸಮಾಜದಲ್ಲಿ ಸಂಘದೊಳಗೆ ಸೇರಿರುವವರೆಂದರೆ ಇಷ್ಟೇ ಮುಂದಿ"! ನಮ್ಮ ಜನತೆಯ ಒಂದಂಶವನ್ನು ಕೂಡಾ ಈ ಸಂಘವು ಪ್ರತಿನಿಧಿಸಿಲ್ಲ ವೆಂಬುದು ನಿಜಕ್ಕೂ ಶೋಚನೀಯ. ಸದ್ಯ ಸ್ಥಿತಿಯಲ್ಲುಂತೂ, ಸಾರ್ವಜನಿಕರ ಸಂಬಂಧವಿಲ್ಲದೆ ಧನಾತ್ಮಕ ಒಂದು ಕೂಟವೆಂದೇ ಇದನ್ನು ಗಣಿಸಲಾಗದು

ಸಂಘವು ಮಾಡಿದ್ದೇನು?

ನಾವು ನಮ್ಮ ಉದ್ದೇಶಗಳಲ್ಲಿ ಒಂದ

ನ್ನು ಮಾತ್ರ ಕಾರ್ಯಾಂಗಕ್ಕೆಳಿಸಿದ್ದೇವೆ. ಅದೆಂದರೆ ಹೋಸ್ಟೆಲುಗಳ ಸ್ಥಾಪನೆ ಮತ್ತು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳ ಸಹಾಯ. ಇದಕ್ಕಾಗಿ ಒಂದು ಲಕ್ಷ ರೂ. ಮಿಕ್ಕಿದ ಹಣ ಸಂಗ್ರಹವಾಗಿದೆ. ಈ ನಿಧಿಯ ಬಹುಭಾಗವು ಸ್ಥಳ ಮತ್ತು ಕಟ್ಟಡಗಳಿಗಾಗಿಯೂ, ಅಲ್ಪಭಾಗವು ವಿದ್ಯಾರ್ಥಿ ವೇತನಗಳ ಹೆಂಚುವಿಕೆಗಾಗಿಯೂ ವ್ಯಯಿಸಲ್ಪಟ್ಟಿದೆ. ಇಷ್ಟಕ್ಕೇ ನಾವು ನಮ್ಮ ಕಾರ್ಯಭಾರವನ್ನು ನಿಲ್ಲಿಸಿಬಿಟ್ಟಿದ್ದೇವೆ. ಆಗತ್ಯ ಹಾಗೂ ಸಾಧ್ಯವಿದ್ದ ಸಂಘದ ಇತರ ಉದ್ದೇಶಗಳಿಗೂ ಕೈಹಾಕುವ ಪ್ರಯತ್ನ ನಡೆಯಲಿಲ್ಲ. ನಾವೀಗ ನಡೆಸುತ್ತಿರುವ ಹೋಸ್ಟೆಲುಗಳು ಕೂಡಾ ಅಸ್ಪೊಂದು ಯೋಗ್ಯ ರೀತಿಯಿಂದ ನಡೆಯುವುದಿಲ್ಲ. ಈಗಲಂತೂ ಬೇರೊಂದು ಸ್ಪಷ್ಟೆಯೆದ್ದಿದೆ. ಇಡೀ ಜಲ್ಲೆಯ ಅನುಕೂಲ ಕೇಂದ್ರಗಳಲ್ಲೆಲ್ಲಾ ವಿದ್ಯಾಭ್ಯಾಸಕ್ಕೆ ವಿಶೇಷ ಅವಕಾಶಗಳ ನಿರ್ಮಾಣವಾಗಿರುವ ಈ ಕಾಲದಲ್ಲಿ ಈ ಹೋಸ್ಟೆಲುಗಳನ್ನು ನಡಿಸುವುದು—ಕೊನೆಯ ಪಕ್ಷ ಈ ಹೋಸ್ಟೆಲುಗಳಿಗಾಗಿ ಇನ್ನೂ ವ್ಯಯಮಾಡುವುದು—ಅಗತ್ಯವೇ ಎಂಬ ಪ್ರಬಲ ಸಂದೇಹವೆದ್ದಿದೆ. ಇನ್ನು ಆ ವಿದ್ಯಾರ್ಥಿ ವೇತನಗಳ ಮಾತು. ಅವುಗಳ ವಿತರಣೆ ಮತ್ತು ಮರು ಸಂಗ್ರಹ, ಇವೆಡಂಬಂಲ್ಲಾ ನಾವು ವ್ಯಕ್ತಿ ದಾಕ್ಷಿಣ್ಯಕ್ಕೆ ಅಂಟಿ ಕೆಲಸಮಾಡುತಿದ್ದೇವೆ.

೦೦ ೦೦ ೦೦

ಮುಂದಿನ ನಮ್ಮ ಕಾರ್ಯ ವಿಧಾನಗಳು.

ವಿದ್ಯಾಭ್ಯಾಸ—ಸಮಾಜೋದ್ಧಾರದ ಯಾವ ಯೋಜನೆಯಲ್ಲಾದರೂ ವಿದ್ಯಾಭ್ಯಾಸಕ್ಕೆ ಪ್ರಥಮ ಸ್ಥಾನವಿದೆ. ನಾವಿದನ್ನು ಮನಗಂಡೇ ಹೋಸ್ಟೆಲುಗಳ ಮೂಲಕವೂ, ವಿದ್ಯಾವೇತನಗಳ ಮುಖಾಂತರವೂ ಸರ್ವ ಸೌಕರ್ಯಗಳನ್ನು ಒದಗಿಸಿದ್ದೇವೆ. ಪ್ರತಿಯೊಬ್ಬ ಬಂಟರ ಹುಡುಗ ಅಥವಾ ಹುಡುಗಿ ಎಸ್. ಎಸ್. ಎಲ್. ಸಿ.ವರೆಗಿನ ವಿದ್ಯಾಭ್ಯಾಸ ಹೊಂದುವಂತೆ ನೋಡುವದೇ ಈಗ ಸಂಘದ ಧೋರಣೆಯಾಗಿರಬೇಕು. ಆ ಮೇಲೆ ಒಂದಲ್ಲೊಂದು ಔದ್ಯೋಗಿಕ ಅಥವಾ ಇತರ ಮಾರ್ಗವನ್ನವಲಂಬಿಸುವಂತೆ ಅವರಿಗೆ ಸರ್ವ ವಿಧದ ಪ್ರೇರಣೆ ಕೊಡಬೇಕು. ಈ ಕಾಲದಲ್ಲಿ ಪ್ರತಿಯೊಬ್ಬನಿಗೂ ಸೇರಲನುಕೂಲವಾಗುವಂಥ ಅನುಕೂಲ ಕೇಂದ್ರಗಳಲ್ಲೆಲ್ಲಾ ಹೈಸ್ಕೂಲ್‌ಗಳಾಗುತ್ತಿರುವುದರಿಂದ ಎಲ್ಲರೂ ಎಸ್. ಎಸ್. ಎಲ್. ಸಿ ವರೆಗೆ ಕಲಿಯುವುದು ಕಷ್ಟವೇನೂ ಇಲ್ಲ. ಕೈಗಾರಿಕೆ ಇತ್ಯಾದಿ ಶಿಕ್ಷಣಗಳ ವೆಚ್ಚ ಕೊರುವ ಸ್ಥಿತಿಯಲ್ಲಿಲ್ಲದ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಂಘವು ನೆರವಾಗಬೇಕು. ಸಾಮಾನ್ಯವಾಗಿ ಎಸ್. ಎಸ್. ಎಲ್. ಸಿ. ಯ ಕೆಳ ತರಗತಿಯಲ್ಲಿರುವವರಿಗೂ, ಕಾನೂನು ಕಲಾ ಕಾಲೇಜುಗಳಲ್ಲಿ ಕಲಿಯುವವರಿಗೂ ವಿದ್ಯಾರ್ಥಿವೇತನವೀಯುವ ಪದ್ಧತಿ ಕ್ರಮವು ಮನ್ನಾ ಮಾಡಲ್ಪಡಬೇಕು. ಹುಡುಗ ಹುಡುಗಿಯರಿಗೆ ಶಿಕ್ಷಣವೀಯುವ ಜತೆಯಲ್ಲೇ ರಾತ್ರಿ ಶಾಲೆಗಳನ್ನೂ ತೆರೆದು ಪ್ರಾಯಸ್ಥರ ಶಿಕ್ಷಣದ ವಿಷಯವನ್ನು ಕೈಕೊಳ್ಳಬೇಕು.

ಬೇಸಾಯ:—ಸುಧಾರಿತ ರೀತಿಯ ಹಾಗೂ ತೀವ್ರ ಫಲಕಾರಿ ಬೇಸಾಯ ಕ್ರಮಗಳನ್ನು ವರ್ಗದಾರರಿಗೂ, ಸಾಗುವಳ್ಳಿದಾರರಿಗೂ ಕಲಿಸಬೇಕು. ಈ ಉದ್ದೇಶ ಸಾಧನೆಗಾಗಿ ಆಯಾಯ ಸ್ಥಳದ ದೊಡ್ಡ ವರ್ಗದಾರರಲ್ಲೊಬ್ಬನಿಂದ ಪ್ರತಿಯೊಂದು ಗ್ರಾಮ ಅಥವಾ ಗ್ರಾಮಗಳ ಗುಂಪಿಗೊಂದರಂತೆ ಪ್ರದರ್ಶನ ಸಾಗುವಳ್ಳೀ ಕ್ಷೇತ್ರವೊಂದನ್ನು ಮಾದರಿಗಾಗಿ ಮಾಡಿಸಬೇಕು. ಈ ಮಾದರೀ ಕ್ಷೇತ್ರವು ಪೂರ್ಣ ಸುಧಾರಿತ ಕ್ರಮದಲ್ಲಿದ್ದು, ಆತನ ಒಕ್ಕಲುಗಳು, ಸಣ್ಣ ವರ್ಗದಾರರು ಹಾಗೂ ಬೇಸಾಯಗಾರರು ಇದರಿಂದ ಪ್ರಯೋಜನ ಹೊಂದುವಂತಾಗಬೇಕು. ಹಳ್ಳಿಯೊಂದರಲ್ಲಿ ಜಘವಾ ಗ್ರಾಮ ಸಮುದಾಯವೊಂದರ ನಡುವೆ ಇಂತಹ ಮಾದರೀ ಕ್ಷೇತ್ರ ನಿರ್ಮಿಸುವ ಒಬ್ಬ ವರ್ಗದಾರನೂ ದೊರೆಯದೆ ಹೋದರೆ, ಸಂಘವು ತಾನಾಗಿ ಒಂದು ಸೊಸಾಯಿಟಿಯನ್ನು ತೆರೆದು ಅದರ ಮೂಲಕ ಈ ಮಾದರೀ ಪ್ರದರ್ಶನ ಕ್ಷೇತ್ರಗಳನ್ನು ನಡೆಸಬೇಕು.

ವ್ಯವಸಾಯ ಇಲಾಖೆಯ ಜ್ಯೂಂಟು ಡೈರೆಕ್ಟರರಾಗಿ ರಿಟಿಯರಾದ ನಮ್ಮ ರಾವ್ ಬಹದ್ದೂರ್ ಕೆ. ಟಿ. ಅಳ್ವರು ಸಂಘದ ಅಧ್ಯಕ್ಷರಾಗಿರುವುದರಿಂದ ಬೇಸಾಯದ ಕುರಿತು ಹೊಸ ಯೋಜನೆಯನ್ನು ಕಂಡು ಹಿಡಿದು-ಅದನ್ನು ಜಾರಿಗೆ ತರುವದು ಕಷ್ಟ ಸಾಧ್ಯವಾದ ಕೆಲಸವಲ್ಲ. ಈವಾರ ಮೂಲ್ಕಿ ಗ್ರಾಮಾಭಿವೃದ್ಧಿ ಕಮಿಟಿಯು ಮಾಡಿ ತೋರಿಸಿದ ಮಾದರಿ ನಮ್ಮ ಕಣ್ಣು ಮುಂದಿದೆ. ಇದಕ್ಕೆ ಸದ್ರಿ ಕಮಿಟಿಯವರಿಗೆ ಮುಖ್ಯತಃ ಅದರ ಕಾರ್ಯದರ್ಶಿ ಶ್ರೀ ಯಂ. ಆರ್. ಪೂಂಜರಿಗೆ ನನ್ನ ಧನ್ಯವಾದಗಳು.

ಉಪವೃತ್ತಿಗಳು—ಸದ್ಯಕ್ಕೆ ಬೇಸಾಯಗಾರರಿಗೆ ವರುಷದಲ್ಲಿ ನಾಲ್ಕು ಅಥವ ಆರು ತಿಂಗಳುಗಳಿಗಿಂತ ಹೆಚ್ಚಿಗೆಸಾಗುವಳ್ಳಿ ಕೆಲಸವಿರುವುದಿಲ್ಲ. ಉಳಿದ ತಿಂಗಳುಗಳಲ್ಲಿ ಏನೊಂದೂ ಉದ್ಯೋಗ ಅವರಿಗಿಲ್ಲ; ಇದರ ಪರಿಣಾಮನೇನಾಗಿದೆ ಎಂಬುದು ನಿಮಗೆಲ್ಲಾ ಗೊತ್ತಿದೆ. ಆದ್ದರಿಂದ ಸಾಗುವಳ್ಳಿದಾರರ ವಿರಾಮ ಕಾಲಗಳಿಗಾಗುವ ಉಪವೃತ್ತಿಗಾಗಿ ಕೆಲವು ಗುಡಿಸಲು ಹಾಗೂ ಮನೆ ಕೈಗಾರಿಕೆಗಳನ್ನು ಸಂಘವು ಕಂಡು ಹಿಡಿಯಬೇಕು. ಈ ವೃತ್ತಿಗಳು ಎಲ್ಲರಿಗೂ ಸಾಧ್ಯವಾಗುವಂತಹವೂ ದುಡಿಮೆಗೆ ಪಕ್ಕ ಪ್ರತಿಫಲವನ್ನು ಕೊಡುವಂತಹವೂ ಆಗಿರಬೇಕು.

ಮಾರಾಟದ ಅನುಕೂಲತೆ—ಜನರು ತಮ್ಮ ಭೂಮಿ, ಸಾಗುವಳ್ಳಿಯಿಂದಲೂ ಉಪವೃತ್ತಿಗಳಿಂದಲೂ ಅಧಿಕಾಧಿಕ ಬೆಳೆಸುವಂತೆ ಮಾತ್ರ ಸಂಘವು ನೋಡಿದರೆ ಸಾಲದು; ಅವರ ಉತ್ಪತ್ತಿಗೆ ಯೋಗ್ಯ ಬೆಲೆ ದೊರೆಯುವಂತೆಯೂ ಅದು ಸಹಾಯ ಮಾಡಬೇಕು. ಈ ಬಗ್ಗೆ ಆಗತ್ಯವುಳ್ಳ ಸೊಸಾಯಿಟಿಗಳನ್ನು ತೆರೆದು ಅವುಗಳ ಮೂಲಕ ರೈತರ ಉತ್ಪತ್ತಿಗಳಿಗೆ ವಿಶಾಲ ಮಾರ್ಕೆಟ್ ದೊರೆಯುವಂತೆಯೂ, ಮಧ್ಯವರ್ತಿಗಳಿಂದ ಆಗುತ್ತಿರುವ ಈಗಿನ ಸುಲಿಗೆ ನಿಲ್ಲುವಂತೆಯೂ ಸಾಧಿಸಬಹುದು.

ಉದ್ಯಮ ವ್ಯಾಪಾರ ಮತ್ತು ಕೈಗಾರಿಕೆ—ನಮ್ಮ ಜನರನ್ನು ಉದ್ಯಮ ಹಾಗೂ ವ್ಯಾಪಾರಗಳಲ್ಲಿ ಹೆಚ್ಚುವದು, ಅಂತೆಯೇ ಕೆಲವು ಯೋಗ್ಯ ಕೈಗಾರಿಕೋದ್ಯಮಗಳ ಪ್ರವರ್ತನೆ ಕೈಕೊಳ್ಳುವುದು. ಸಂಘವು ಈ ಕಾಲದಲ್ಲಿ ಆಗತ್ಯವಾಗಿ ಕೈಯಿಕ್ಕಬೇಕಾದ ಕರ್ತವ್ಯವಿದೆ.

ಪ್ರೊವಿಡೆಂಟ್ ಫಿವಾ ಉದ್ಯೋಗ—ಇದು ಪರಿಶ್ರಮ ವಹಿಸಲು ಯೋಗ್ಯವಾದ ಮತ್ತೊಂದು ಕಾರ್ಯ ವಿಭಾಗ. ಪ್ರೊವಿಡೆಂಟ್ ಫಂಡ್‌ಗಳಿಗೆ ನಮ್ಮ ಜನರಲ್ಲಿ ಮಿತ ವ್ಯಯವನ್ನು ಪ್ರಚಾರ ಮಾಡಬಲ್ಲುದು. ಹಾಗೆಯೆ ದೀರ್ಘ ಪಾವತಿಗೆ ೪ ಯೋಜನೆಗಳಿಗೊಂದು ಉತ್ತಮ ಭಂಡವಾಳವೂ ದೊರೆತಂತಾಗುವುದು.

ಸಂಘದ ನಿಬಂಧನೆಗಳಲ್ಲಾಗ ಬೇಕಾದ ತಿದ್ದುಪಡಿ

ಇನೆಲ್ಲಾ ಕಾರ್ಯಭಾರ ವಹಿಸಬೇಕಾದರೆ ನಮ್ಮ ಸಂಘವು ಸಾಕಷ್ಟು ಭಂಡವಾಳವುಳ್ಳ ಸಶಕ್ತ ಸಂಸ್ಥೆಯಾಗಿರಬೇಕು. ನಾನಿಷ್ಟರಲ್ಲೇ ಹೇಳಿರುವಂತೆ ಸದ್ಯ ನಮ್ಮ ಸಂಘವು, ಸದಸ್ಯತ್ವ ಮತ್ತು ಆರ್ಥಿಕ ಸ್ಥಿತಿ ಎರಡರಲ್ಲೂ ನಿದ್ರಾವಸ್ಥೆಯಲ್ಲಿದೆ. ಯಾವುದಾದರೊಂದು ವಿಷಯಕ್ಕಾಗಿ ನಮಗೆ ಹಣ ಬೇಕಾದಾಗಲೆಲ್ಲಾ ನಾವು ಅಂಗಲಾಚಿ ಬೇಡುವಪರ್ಯಾಗಿ ಹೊರಡುತ್ತೇವೆ. ಆದ್ದರಿಂದ ನಮ್ಮ ಸಂಘ ಮತ್ತು ಆದರ ಭಂಡಾರವನ್ನು ಬಲಗೊಳಿಸುವುದು ಆತ್ಯಗತ್ಯ. ಈ ಉದ್ದೇಶ ಸಾಧನೆಗಾಗಿ ಪ್ರಥಮತಃ ನಾವು ನಮ್ಮ ನಿಬಂಧನೆಗಳನ್ನೆ ಬದಲಾಯಿಸಬೇಕಾಗಿದೆ. ಸದ್ಯ ಸದಸ್ಯತನಕ್ಕೆಟ್ಟರುವ 2೫ ರೂಪಾಯಿಗಳನ್ನು ಸವಾಜದ ತೀರಾ ಬಡವನೊಬ್ಬನು ಕೂಡಾ ಸದಸ್ಯನಾಗಲು ಸಾಧ್ಯವಾಗುವಂತಹ ಮಟ್ಟಕ್ಕಿಳಿಸಬೇಕು. ಕೂಲಿಗಾರರಿಗೆ ವರ್ಷಕ್ಕೆ 0-1-0, ಜಾಲಗೇಣಿ ವಕ್ಕಲುಗಳ ಮಟ್ಟಿಗೆ ವಾರ್ಷಿಕ ವರ್ಗಣಿ 0-8-0 ಇಟ್ಟರೆ ಸಾಕು. ವರ್ಗದಾರರಲ್ಲಿ ಅವರು ತೆರುವ ತೀರ್ವೆಯ ಹೆಚ್ಚುಕಡಿಮೆಯನ್ನಾಧರಿಸಿ 1 ರೂಪ್ಯಾಯಿಂದ 5 ರೂ.ಗಳವರೆಗೆ ವಾರ್ಷಿಕ ವಂತಿಗೆ ವಿಧಿಸಬಹುದು. ಪ್ರತಿಯೊಬ್ಬ ಬಂಟರವ, ಕೊನೆಯಪಕ್ಷ ಆಡಳಿತೇದಾರನ ಮೂಲಕ ಪ್ರತಿಯೊಂದು ಕುಟುಂಬವಾದರೂ ಮೇಲ್ಗಡೆ ನಮೂದಿಸಿದ ವಾರ್ಷಿಕ ವರ್ಗಣಿ ತೆತ್ತು ಸಂಘದ ಸದಸ್ಯನಾಗುವಂತೆ ನಾವು ನೋಡತಕ್ಕದ್ದು.

ಸಂಘದ ಸರ್ವ ಕಾರ್ಯಕಲಾಪಗಳನ್ನು ಸಾಗಿಸಲು ಪ್ರತಿಯೊಂದು ಗ್ರಾಮದಲ್ಲಿ ಅಥವಾ ಗ್ರಾಮಗಳ ಸಮುದಾಯಕ್ಕೊಂದರಂತಾದರೂ ರಿಸಿಲ್ಪಟ್ಟ ಅಥವಾ ನೇಮಕಗೊಂಡ ಒಂದೊಂದು ಸಮಿತಿಯಿರಬೇಕು. ಈ ಸಮಿತಿಯು ಆಯಾ ಗ್ರಾಮ ಅಥವಾ ಗ್ರಾಮಗಳ ಸಂಘದ ಸದಸ್ಯರಿಂದ ಆರಿಸಲ್ಪಡಬೇಕು ಅಥವಾ ನೇಮಿಸಲ್ಪಡಬೇಕು. ಪ್ರತಿಯೊಂದು ತಾಲೂಕಿನ ಇವೆಲ್ಲಾ ಗ್ರಾಮ ಕಮಿಟಿಗಳು ಒಂದು ತಾಲೂಕು ಕಮಿಟಿಯನ್ನು ಚುನಾಯಿಸಿ ಅಥವಾ ನೇಮಿಸಿಕೊಳ್ಳತಕ್ಕದ್ದು. ಪ್ರತಿಯೊಂದು ತಾಲೂಕು ಕಮಿಟಿಯೂ ಜಿಲ್ಲಾ ಸಂಘದ ಕಾರ್ಯಕಾರೀ ಸಮಿತಿಗೆ ಇಬ್ಬರಂತೆ ಪ್ರತಿನಿಧಿಗಳನ್ನಾರಿಸಿ ಅಥವಾ ನೇಮಿಸಿ ಕಳುಹಿಸತಕ್ಕದ್ದು. ಹೀಗೆ ತಾಲೂಕು ಕಮಿಟಿಗಳಿಂದ ಚುನಾಯಿಸಲ್ಪಟ್ಟ ಅಥವಾ ನೇಮಕಗೊಂಡ ಸದಸ್ಯರೂ ಸಂಘದ ವಾರ್ಷಿಕ ಮಹಾಸಭೆಯು ಆರಿಸಿ ಕಳುಹಿಸಿದ ಇತರ ಮೂವರು ಸದಸ್ಯರೂ ಸೇರಿ ಜಿಲ್ಲಾ ಸಂಘದ ಕಾರ್ಯಕಾರೀ ಸಮಿತಿಯಾಗಬೇಕು. ಇವೆಲ್ಲಾ ಕಮಿಟಿಗಳ ಸದಸ್ಯರ ವೆಂಬರಿಕೆಯ ಅವಧಿ ಮೂರು ವರುಷಕ್ಕಿಂತ ಹೆಚ್ಚಾಗಿರಬಾರದು.

ಸಂಘದ ಕಾರ್ಯಕಾರೀ ಸಮಿತಿಯು ತನ್ನ ಕಾರ್ಯಗಳನ್ನು ತನ್ನ ಸದಸ್ಯರೊಳಗೆ

(ಅನೇ ಪುಟ ನೋಡಿರಿ)

ಶ್ರೀ. ಕೆ. ಬಿ. ಬಲ್ಲಾಳರ ಅಧ್ಯಕ್ಷ ಭಾಷಣ.



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಿಪು ಆಗಿಯೂ ಚಿಲ್ಲರೆಯಾಗಿಯೂ ಬೊರೆಯುತ್ತವೆ.

ಕಲ್ಯಂಜೆ ವ್ಯಾಸರಾಯ,
ರಥಬೀದಿ, ಉಡುಪಿ.

ಕಳೆದ ೧೬ ವರ್ಷಗಳಿಂದ ಜನತಾಸೇವೆಯನ್ನು ಸಲ್ಲಿಸುತ್ತಾ ಬಂದಿರುವ ಈ ಕನ್ನಡ ನಾಡಿನ ಪ್ರಾತಿನಿಧಿಕ ಮತ್ತು ಪ್ರಾಮುಖ್ಯ

ವಿಮಾ ಕಂಪೆನಿಯು

ನಿಮ್ಮೆಲ್ಲರ ಸಹಕಾರವನ್ನು ಕೋರುತ್ತದೆ.

Rao Bahadur **B. S. Sawkar**, B.A. L.L.B.,
Chairman.

A. S. Kini,
Managing Director.

ಯುನೈಟೆಡ್ ಕರ್ನಾಟಕ
ಇನ್ಶುರೆನ್ಸ ಕಂಪನಿ ಲಿಮಿಟೆಡ್, ಧಾರವಾಡ
THE UNITED KARNATAK INSURANCE Co. Ltd. DHARWAR

ಹೆಚ್ಚಿನ ಮಾಹಿತಿ ಬಗ್ಗೆ ಬರೆಯಿರಿ-
Organising Office:- **Court Road, UDIPI.**

The Canara Banking Corporation Limited.

((Incorporated in British India, with limited Liability.)

Estd: 1906.

Head Office: **UDIPI**, South Kanara.

ANNOUNCEMENT

A branch of the bank has been opened at JEW TOWN, MATTANCHERRY, COCHIN, on 7-11-1945.

ಉಡುಪಿ, ಗುರುವಾರ ೨೭–೧೨–'೪೫

ಸಾಲ ಮುಳುಗಿಸುವ ಸಂಚು-

ಇಂಗ್ಲಾಂಡಿಗೆ ಅಮೇರಿಕವು ಸಾಲ ಕೊಡುವ ಹೊಸ ಒಪ್ಪಂದವೊಂದು ಆವೆರಡು ರಾಷ್ಟ್ರಗಳೊಳಗಾಗಿರುವದರಿಂದ ಬ್ರಿಟನಿನ ಆರ್ಥಿಕ ಪರಾವಲಂಬನೆಯ ಮೇಲೆ ಬೆಳಕು ಬಿದ್ದಿದೆ. "ಯುದ್ಧಾನಂತರ ಬ್ರಿಟನು ಎರಡನೇ ಪಂಗ್ತಿಯ ರಾಷ್ಟ್ರವಾಗಿದೆ" ಎಂದ ಪಂಡಿತ ನೆಹೆರುಗಳ ಮಾತು ಬ್ರಿಟಿಷ್ ಸೋಲ್ಜರರನ್ನು ಕೂಡಾ ಕೆರಳಿಸಿ, ಅದನ್ನು ಪ್ರಕಟಿಸಿದ ಪತ್ರಿಕಾಲಯದೊಗೆ ದಾಂಡಿಯವಂತೆ ಮಾಡಿದ್ದಿತು. ಆದರೆ ಯುದ್ಧ ಗೆಲ್ಲಲು ಇಂಗ್ಲಾಂಡಿಗೆ ಅಮೇರಿಕದ ಸಹಾಯ ಬೇಕಾಗಿದ್ದಂತೆಯೇ ಯುದ್ಧೋತ್ತರ ಅಡಚಣೆಗಳ ನಿವಾರಣೆಗೂ ಅದರ ಸಾಲ ವಿನಹಾ ಗತಿಯಿರಲಿಲ್ಲ. ಇದು ವಸ್ತುಸ್ಥಿತಿ. ಹೀಗೆ ಬ್ರಿಟನಿನ ಪ್ರತಿಷ್ಠೆಯ ಮುಂದೆ ಪ್ರಶ್ನಾರ್ಥಕ ಚಿಹ್ನೆ ಬಿದ್ದರೂ ಬಾಳುವೆಯ ಮಟ್ಟಿಗೆ ಈ ಒಪ್ಪಂದವು ಅತ್ಯನುಕೂಲವಾಗಿದೆ. ತಾನು ಇಂಗ್ಲಾಂಡಿಗೆ ಕೊಟ್ಟಿದ್ದ ಅಗಾಧ 'ಲಡ-ಒತ್ತೆ'ಗಳನ್ನು ಅಮೇರಿಕವು ಉದಾರ ಬುದ್ಧಿಯಿಂದ ವಜಾಮಾಡಿದೆ. ಸ್ಟರ್ಲಿಂಗ್ (ಇಂಗ್ಲಿಷ್ ನಾಣ್ಯ) ಬಂದೋಬಸ್ತಿನ ಬ್ರಿಟಿಷ್ ಸಾಮ್ರಾಜ್ಯ ಮತ್ತು ಡೋಲರ್ (ಅಮೇರಿಕನ್ ನಾಣ್ಯ) ವಹಿವಾಟಿನ ಅಮೇರಿಕಗಳೊಳಗೆ ವ್ಯಾಪಾರ ದ್ವಾರ ತೆರೆಯಲ್ಪಟ್ಟಿದೆ. ಸಾಲತೆತ್ತ ರಾಷ್ಟ್ರವಾದ ಅಮೇರಿಕದ ವಹಿವಾಟಿಗೆ ಬ್ರಿಟಿಷ್ ಸಾಮ್ರಾಜ್ಯದ ಮಾರ್ಕೆಟುಗಳು ತೆರೆಯಲ್ಪಟ್ಟುದರಿಂದ ಅಮೇರಿಕವೇ ಅಂತರ್ರಾಷ್ಟ್ರೀಯ ವಹಿವಾಟುಗಳಲ್ಲಿ ಮೇಲ್ಗೈಯಾಗುವದು ಸ್ವಾಭಾವಿಕ. ಸ್ವರಕ್ಷಣೆಗಾಗಿ ಈ ಕರಾರು ಮಾಡಿಕೊಂಡ ಬ್ರಿಟನು ಅದಕ್ಕಾಗಿ ಮತ್ಸರ ಪಡುವಂತಿಲ್ಲ. ಆದರೆ ಈ ಒಪ್ಪಂದಾನುಸಾರ, ಅಮೇರಿಕನ್ ವಹಿವಾಟಿಗನುಕೂಲವಾಗಿ ಬ್ರಿಟಿನ ಸ್ಟರ್ಲಿಂಗುಗಳು ರೂಪಾಂತರಗೊಳ್ಳುವಾಗ, ಭಾರತಕ್ಕೆ ಸಂದಾಯವಾಗತಕ್ಕ ಸ್ಟರ್ಲಿಂಗ್ ಮೊತ್ತವನ್ನು ಕಡಿದುಕೊಳ್ಳುವ ದುರಭಿಲಾಷೆಯನ್ನು ಬ್ರಿಟಿಷ್ ಆರ್ಥಿಕ ಅಧಿಕಾರಿಗಳು ವ್ಯಕ್ತ ಪಡಿಸಿದ್ದಾರೆ. ಹಿಂದುಸ್ಥಾನದ ಸ್ಟರ್ಲಿಂಗ್ ಸಾಲವನ್ನು ಪೂರ್ತಿ ಜೀರ್ಣಿಸಿಕೊಳ್ಳುವ, ಅಥವಾ ಕಡಿತ ಮಾಡಿಕೊಳ್ಳುವ ಆಲೋಚನೆಯು ಈ ಮೊದಲೇ ಬ್ರಿಟಿಷರಲ್ಲಿ ನೊಳೆತಿದ್ದಿತು, ಆದಕ್ಕಾಗಿ ನೆವ ಹೋಧಗಳೂ ನಡೆದಿದ್ದುವು. ಯುದ್ಧ ವೆಚ್ಚದಲ್ಲಿ ಭಾರತವು ವಹಿಸಬೇಕಾದ ಪಾಲೆಂದು ಗಣಿಸಿ, ಅದರ ಸ್ಟರ್ಲಿಂಗ್ ಮೊತ್ತದೊಂದು ಅಂಶವನ್ನು ವಜಾ ಪಡಿಸಿಕೊಳ್ಳುವ ಕೊನೆಯ ನಿರ್ಧಾರಕ್ಕೀಗ ಬ್ರಿಟಿಷ್ ಅಧಿಕಾರಿಗಳು ಬಂದಂತಿದೆ. ಈ ಕುರಿತು ಇಲ್ಲಿಯ ಸರಕಾರದೊಡನೆ ಮಾತುಕತೆ ನಡೆಯಲಿದೆಯಂತೆ. ಯುದ್ಧಾವಧಿಯಲ್ಲಿ ಲಕ್ಷಾವಧಿ ಜನರಿಯನ್ನು ಬರಗಾಲಕ್ಕೆ ಬಲಿತೆತ್ತ ಹಿಂದುಸ್ಥಾನವು—ಅನ್ನಾಭಾವ ಮತ್ತು ಆರೆ ಹೊಟ್ಟೆಯಿಂದ ತಲ್ಲಣಿಸಿದ್ದ ರಾಷ್ಟ್ರವು—ಯುದ್ಧಾದಾಯಗಳಿಂದ ಆ ಸ್ಟರ್ಲಿಂಗ್ ಮೊತ್ತಗಳನ್ನು ಕೂಡಿಸಿರಲಿಲ್ಲ. ಬ್ರಿಟಿಷರು ನಡೆಯಿಸಿ, ಬ್ರಿಟಿಷ್ ಹಿತವೊಂದೇ ಸಾಧಿಸಲ್ಪಟ್ಟ ಈ ಯುದ್ಧದಲ್ಲಿ ಹಿಂದುಸ್ಥಾನವು ಮೇಲಿನ ಅನಾಹುತಗಳನ್ನನುಭವಿಸಿದ್ದಷ್ಟೇ ಅಲ್ಲ; ಎರಡು ಮಿಲಿಯಕ್ಕೂ ಮಿಕ್ಕಿದ ಭಾರತೀಯರನ್ನು ಸೈನಿಕರಾಗಿ ಹೋರಾಡಿಸಿದ್ದಿತು. ಹಿಂದುಸ್ಥಾನದಿಂದಾದ ಈ ಉಪಕಾರ ಸಾಲದೆಂದು ಅದರ ಸಾಲವನ್ನೂ ನುಂಗಿಕೊಳ್ಳುವ ಹುಂಚಿಕೆ ನ್ಯಾಯವೆ? ಈ ಕುರಿತು ಮಾತೇಕೆ-ಕಥೆಯೇಕೆ? ಆದೂ ಬ್ರಿಟಿಷ್ ಸಂಕಾರವು ಸದ್ಯದ ಭಾರತ ಸರಕಾರದೊಡನೆ ಪರ್ಯಾಲೋಚಿಸುವದೆಂದರೆ, ತಂದೆ ಮಗನಿಗೆ ಹೇಳಿಕೊಡುವದೆಂದೇ ಅರ್ಥ. ಬ್ರಿಟಿಷರಿಗೆ ಇದೊಂದು ನಾಟಕವಾಡಲೇ ಬೇಕಿದ್ದರೆ, ಭಾರತದಲ್ಲಿ ಕೇಂದ್ರ ಸರಕಾರದ ರಾಷ್ಟ್ರೀಯವಾಗುವ ವರೆಗಾದರೂ ಆ ಮಾತುಕತೆಯನ್ನು ಮುಂದುಳಿಸಬೇಕು. ಇಂದಿನ ವಾದವೆಲ್ಲವೂ ಸಾಲ ಸಂದಾಯಿಸಲಿಕ್ಕಿಲ್ಲದವನ ಹುಸಿ ನೆಪ ಮಾತ್ರವಾದ್ದರಿಂದ, ಎಚ್ಚತ್ತ ಭಾರತವು ನಂದಾಯಿಸಲಾಗಲು ಎಂದೂ ಒಪ್ಪಲಾರದು.

ದ. ಕ. ಬಂಟರ ಯಾನೆ ನಾಡವರ ಸಂಘದ ವಾರ್ಷಿಕಾಧಿವೇಶನ—

ಇದೇ ತಾ. 23ರಲ್ಲಿ ಮೂಲ್ಕಿಯಲ್ಲಿ ಜರಗಿ ಪ್ರಾಮುಖ್ಯ ನಿರ್ಧಾರಗಳನ್ನು ಮಾಡಿದೆ. ಅಧ್ಯಕ್ಷರ ಸೂಚನೆಯನ್ವಯ ಸಂಘವು ತನ್ನ ಸದಸ್ಯತ್ವದ ವಾರ್ಷಿಕ ವರ್ಗಣಿಯನ್ನು ಸಾಮಾನ್ಯರಿಗೂ ಸಾಧ್ಯವಾಗುವ ಮಟ್ಟಕ್ಕಿಳಿಸಿಕೊಂಡುದಕ್ಕೆ ಸರ್ವರ ಸ್ವಾಗತ ದೊರೆಯದಿರದು. ಶ್ರೀಮಂತ-ದರಿದ್ರ ವರ್ಗ ಭೇದವು ವಿಕ್ಕಿ ಹೆನ್ನತೆಗಳಿಗಿಂತ ದೊಡ್ಡದು. 'ರೂ. 25. ವಾರ್ಷಿಕ ವರ್ಗಣಿ' ಎಂದಾಗಲೇ 'ನೀವು ಹೊರಗೆ' ಎಂದು ಸಾಮಾನ್ಯರಿದಿರು ಕೈ ಬೀಸಿದಂತೆ! ಇಂದು ಆ ಬಹಿಷ್ಕಾರ ರದ್ದಾಗಿ ಸರ್ವರಿಗೂ ಸ್ವಾಗತ ದೊರೆತಿದೆ. 'ಧನಿಕ ಮಂಡಲ'ವನ್ನಿಸಿದ್ದ ಸಂಘವು 'ಸರ್ವರ ಸಂಸ್ಥೆ'ಯಾಗಲು ತನ್ನ ದ್ವಾರ ತೆರೆದಿದೆ. ಇನ್ನು ಹೆಜ್ಜೆ ಮುಂದಿಡಬೇಕಾದ ಹೊಣೆ ಸಮಾಜದ ಸಾರ್ವಜನಿಕರ ಮೇಲಿದೆ. ವ್ಯಕ್ತಿಯೊಬ್ಬ ಸ್ತ್ರೀ ಪುರುಷರೂ ಸಂಘದ ಸದಸ್ಯರಾಗಿ ಸೇರಿ, ಅದನ್ನು ಇಡೀ ಸಮಾಜದ ಕೇಂದ್ರ ಶಕ್ತಿಯಾಗುವಂತೆ ಸಂಘಟಿಸಿ, ಪ್ರಗತಿಶೀಲ ಮತ್ತು ಪ್ರವರ್ಧಮಾನ ಪಥ ಹಿಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಗತ್ಯ ಮತ್ತು ಕ್ಷಿಪ್ರವಾಗಿ ನಿವಾರಿಸಿಕೊಳ್ಳಬೇಕಾದುದು ಜಾತಿ ವೈಷಮ್ಯವನ್ನು ಹೊರತು ವೈಶಿಷ್ಟ್ಯವನ್ನಲ್ಲ. 'ರಾಷ್ಟ್ರಜನಾಂಗ' ಅಥವಾ 'ಮಾನವ ಜಗತ್ತಿನ' ಭಾವನೆಯು ಆಸ್ಪಿಯಂತಿದ್ದರೆ ಅದರೊಳಗೆ ಗದ್ದೆಗಳಂತೆ ಸಂಗಡ ವೈಶಿಷ್ಟ್ಯಗಳು ಬೇಕು; ಈ ರೀತಿ ಕ್ಷೇತ್ರವಾರಾಗಿ ಇಡೀ ಆಸ್ಪಿಯ ಬೇಸಾಯ ವಾಗಬೇಕು. ಪರತಂತ್ರ ರಾಷ್ಟ್ರದ ಸ್ವ ಗುಣಗಳನ್ನು ಪೋಷಿಸಿ ಪರಿಷಯಾತ್ಮಕ ಭಾಷಣ ಮಾಡಿದರು. ಅನಂತರ ನರದಿಸಾಹನ, ಸದಸ್ಯತನದ ಘೀಯನ್ನು ಒಂದು ರೂಪಾಯಿಗೆ ಇಳಿಸುವಿಕೆ, ಅಳಿಯ ಸಂತಾನದಲ್ಲಿ ಯಾವ ಯಾವ ಸುಧಾರಣೆಗಳಾಗಬೇಕೆಂಬುದ್ಗೆ ಅಭಿಪ್ರಾಯ ಸಂಗ್ರಹಿಸುವರೆ ಒಂದು ಸಮಿತಿಯ ನಿರ್ಮಾಣದ ನಿರ್ಣಯಗಳಾದುವು. ಈ ಸಮಿತಿಯವರು ಎಪ್ರಿಲ್ ತಿಂಗಳೊಳಗೆ ಅಭಿಪ್ರಾಯ ಸಂಗ್ರಹಿಸಬೇಕೆಂದೂ ಮೂರನೆಆದಿತ್ಯವಾರ ಜಿಲ್ಲೆಯ ಎಲ್ಲಾ ಅಳಿಯಸಂತಾನ ಕಟ್ಟುನಿಟ್ಟಾಜರಿಸುವವರನುಹಾಸಭೆಯನ್ನು ಕರೆಯಬೇಕೆಂದೂ ನಿರ್ಣಯಿಸಲಾಯಿತು. ಅನಂತರ ಅಧ್ಯಕ್ಷರ ಭಾಷಣ, (ಬೇರೊಂದೆಡೆ ಕೊಡಲಾಗಿದೆ) ಧನ್ಯವಾದಾರ್ಪಣೆಯೊಂದಿಗೆ ಸಾಹಾ ಸಭೆಯು ಮುಕ್ತಾಯವಾಯಿತು. ಸಾಯಂಕಾಲ ಈ ಅಧಿವೇಶನವು ಜಯಶೀಲವಾಗುವಲ್ಲಿ ಕಾರಣರಾದ ಸ್ವಾಗತ ಸಮಿತಿಯು ಮುಖ್ಯವಾಗಿ ಶ್ರೀ ಎಸ್. ಆರ್. ಪೂಜರು ಅಭಿನಂದನೀಯರು. ಮುಂದಿನ ವರುಷದ ವಾರ್ಷಿಕ ಅಧಿವೇಶನವನು ಕಾಸರಗೋಡಿಗೆ ಆಮಂತ್ರಿಸಲಾಗಿಯಿದೆ.

ಕಟಪಾಡಿಯಲ್ಲಿ ಮಾಮೂಲು ಪ್ರಕಾರ ಜರಗುವ ಕಂಬಳವು ತಾ 9–1 46ಕ್ಕೆ ಜರಗುವುದು. ಹಲಿಗೆಯನ್ನು ಗೆದ್ದ ಹೋರಿಗಳಿಗೆ ಚಿನ್ನದ ಪದಕವನ್ನೂ ಹಗ್ಗವನ್ನು ಗೆದ್ದ ಹೋರಿಗಳಿಗೆ ಬೆಳ್ಳಿ ಪದಕವನ್ನೂ ಇನಾಮು ಕೊಡಲಾಗುವುದು.

ನೋಟೀಸು

ಈ ಹಿರಿಯಡಕ ಮಹಕೋದಾರ ಶ್ರೀವೀರಭದ್ರ ದೇವಸ್ಥಾನದ

ಜೀರ್ಣೋದ್ಧಾರ ನಿಧಿ

ಯ ಸಲುವಾಗಿ ಟಿಕೇಟುಗಳ ಮೂಲಕ ತಾ. 23—1—46 ಕ್ಕೆ ಜರಗಿಸಬೇಕಾಗಿದ್ದ ಜೋಡಾಟವನ್ನು ಎಂಟರ್ಟೈನ್ ಮೆಂಟ್ ಟೀಕ್ಸಿನ ಕೊಂಪ್ರೆಯಿಂದಾಗಿ ರದ್ದು ಮಾಡಿಯಿದೆ.

ಅಂತೂ ತಾ. 6—2—46ಕ್ಕೆ ಪ್ರಚಂಡ

ಜೋಡಾಟ ಮಾಡಿಸುವದಾಗಿ

ನಿಶ್ಚಯಿಸಿರುತ್ತದೆ.

ಎಲ್ಲರಿಗೂ ಸುಸ್ವಾಗತವಿದೆ.

ಎ. ಎಂ. ನಾಗಣ್ಣ ಹೆಗ್ಡೆ,

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್; ಮೆನೇಜಿಂಗ್ ಟ್ರಸ್ಟಿ–

ಹಿರಿಯಡ್ಕ ಶ್ರೀ ವೀರಭದ್ರ ದೇವಸ್ಥಾನ, **ಹಿರಿಯಡ್ಕ, ದ. ಕನ್ನಡ.**

ಕೆನ್ಸಟ್ ಶಾನವಾಡ್, ಕೆವ್ಸನ್ ಸಿಡ್ನಾಲ್, ಲೆಫ್ಟಿನೆಂಟ್ ಥಿಲ್ಲೋನರ ಮೇಲಿನ ಕೆಂಪು ಕೋಟಿ ಮೊಕದ್ದಮೆಯಲ್ಲಿ ಆರೋಪಿಗಳ ಕಡೆಯಿಂದ ಇವೇ ತಾ. 17 ಮತ್ತು 18ರಲ್ಲಿ ಇಡೀ 10 ಘಂಟೆ ಶ್ರೀ. ಭುಲಾಭಾಯಿ ದೇಸಾಯಿಗಳು ಮಾಡಿದ ನಿವೇದನೆಯು ಅತ್ಯಮೋಘವಿದ್ದಿತು ದೇಸಾಯಿಗಳ ತರ್ಕ ಪ್ರೌಢಿಮೆ, ಇದಿರು ಪಕ್ಷದ ಅಸ್ತ್ರವಾರವನ್ನೇ ಅಲುಗಾಡಿಸಿಬಿಟ್ಟ ರಾಯಿದೇ ಕಲಿತನ, ತನ್ನ ಆಶ್ರಯದಲ್ಲಿರುವ ಆರೋಪಿಗಳಿಗೆ ಲೋಪದೋಷ ತಟ್ಟದಂತೆ ಅವರು ಸುತ್ತ ಕಟ್ಟಿದ ಅಸುಭದವಾದ ಕೋಟೆ-ಇವೆಲ್ಲಾ ಅಜೇಯವಿದ್ದುವು; ಅಸಾಮಾನ್ಯವಿದ್ದುವು. ಕೆಂಪು ಕೋಟಿ ವಿಚಾರಣೆಯಿಂದೇರುತ್ತಾ ಬಂದಿದ್ದ 'ಆಜಾದ್‌ಹಿಂದ್' ಕೀರ್ತಿಗೋಪುರಕ್ಕೆ ದೇಸಾಯಿಗಳ ವಾದವು ಸ್ವರ್ಣಕಳಶವಾಯಿತು.

ಸ್ವಾತಂತ್ರ್ಯ ಯುದ್ಧ ಹೂಡುವ ಹಕ್ಕಿದೆ.

ಅಂತರ್‌ರಾಷ್ಟ್ರೀಯ ಕಾಯಿದೆಯನ್ವಯ ಯುದ್ಧ ಘೋಷಣೆ ಅಪರಾಧವಲ್ಲ;ದಾಸ್ಯ ಜನಾಂಗವೊಂದು ಸುಸಂಘಟಿತವಾಗಿ ಸ್ವಂತ ಸರಕಾರ ರಚಿಸಿಕೊಳ್ಳುವದೂ ಸ್ವಾತಂತ್ರ್ಯಕ್ಕಾಗಿ ಯುದ್ಧ ಸಾರುವದೂ ಕಾನೂನು ಬದ್ಧವಾಗಿದೆ. ನಾಗರಿಕ ಯುದ್ಧ ನಿಯಮಗಳಿಗೆ ವಿರುದ್ಧವಾಗಿ ಅಪರಾಧಮಾಡಿದವರು ಮಾತ್ರ ಯುದ್ಧಾಪರಾಧಿಗಳು. ಆಜಾದ್‌ಹಿಂದ್ ಸರಕಾರವು ಒಂದು ಸರಕಾರ; ಏಲಿಯಾವಧಿ ಜನರ ಬೆಂಬಲ, ಸ್ಥಳ, ಸೇನೆ, ಬೇಂಕ್ ಇತ್ಯಾದಿಸರ್ವಾಂಗ; ಸಂಪೂರ್ಣವಾಗಿದ್ದ ಸರಕಾರ ಅದು ಭಾರತ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡಿದ್ದಿತು. ತೀರಾ ಸ್ವತಂತ್ರವಾಗಿತು ಜಾವಾನರ ಕೈಗೊಂಬೆಯಾಗಿರಲಿಲ್ಲ; ಅಪರಾಧಿಗಳು ಈಕ್ರಮಬದ್ಧ ಸರಕಾರದ ಆಜ್ಞಾಧಾರಿಗಳಾಗಿ ಎಲ್ಲವನ್ನೂ ಮಾಡಿದ್ದಾರಾದ್ದರಿಂದ ಅವರು ಅಪರಾಧವಲ್ಲವೆಂಬುದನ್ನು ದೇಸಾಯಿಗಳು ಹಲವುಅಂತರ್‌ರಾಷ್ಟ್ರೀಯ ಕಾನೂನುಗಳು, ನಿದರ್ಶನಗಳು ಮತ್ತು ಈ ವಿಚಾರಣೆಯಿಂದ ಸ್ಪಷ್ಟವಾದ ಅಂಶಗಳನ್ನೆತ್ತಿ ವಾದಿಸಿದರು. 'ಪಾರತಂತ್ರ್ಯ ರಾಷ್ಟ್ರಗಳ ಸ್ವಾತಂತ್ರ್ಯ ಯುದ್ಧವು ಬೇಕಾಯಿ ದೇಶೀರವೆಂದಾದರೆ ಯಾವೊಂದು ಪರಾಧೀನ ರಾಷ್ಟ್ರವೂ ಸ್ವಾತಂತ್ರ್ಯ ಹೊಂದುವದಸಾಧ್ಯ' ಎಂಬುದನ್ನು ಮನಮುಟ್ಟಿಸಿದರು ರಾಜಭಕ್ತಿ ಮತ್ತು ಬ್ರಿಟಿಷ್ ಹಿಂದೀ ಸೇನಾ ಸಂಬಂಧವನ್ನು ಬ್ರಿಟಿಷ್ ಅಧಿಕಾರಿಗಳೇ ಕಡಿದು ಹಾಕಿದ್ದರೆಂಬುದನ್ನು ಉಚಿತ ಪಡಿಸಿದರು. ಒತ್ತಾಯದಿಂದ ಸೇನೆಗೆ ಸೇರಿಸಿಕೊಳ್ಳುವ ಅಗತ್ಯ ಕೂಡಾ ಇರಲಿಲ್ಲವೆಂಬುದನ್ನು ಸಾದರಪಡಿಸಿ ಆರೋಪಿಗಳ ಮೇಲಿನ ಕೊಲೆಯ ಆರೋಪಗಳನ್ನು ಆ ಸಂಬಂಧದ ಸಾಕ್ಷ್ಯ ರುಜುವಾತುಗಳೇ ಹುಸಿಗೊಳಿಸಿವೆ ಎಂಬುದನ್ನು ಜಾನ್ಮೆಯಿಂದ ಚಿತ್ರಿಸಿ, ಈ ಮೊಕದ್ದಮೆಯೇ ಕಾಯಿದೇಬಾಹಿರವಿದೆಯೆಂಬುದನ್ನು ಸಕಾರಣವಾಗಿ ತೋರಿಸಿಕೊಟ್ಟರು.

ಎಡ್ವೊಕೇಟ್ ಜನರಲರ ಪ್ರತಿವಾದ

ಸರಕಾರೀ ವಕೀಲ ಸರ್. ನೋಶಿರ್ವಾನ್ ಪಿ. ಇಂಜಿನೀಯರರ ಪ್ರತಿವಾದ ತಾ. 22ರಲ್ಲಿ ನಡೆಯಿತು. ಅಂತರ್‌ರಾಷ್ಟ್ರೀಯ ಕಾನೂನಾವುದೂ ಈ ಕೋರ್ಟಿಗೆ ಸಂಬಂಧಿಸಿದ್ದಲ್ಲ 'ಆಜಾದ್‌ಹಿಂದ್' ಒಂದು ಸರಕಾರವಾಗಿ ಇಗಲಿಲ್ಲ ಹಿಂದೀ ಸೇನಾ [ಕಾನೂನಿನನ್ವಯ ಇದು ಶುದ್ಧ ದ್ರೋಹ. ಆಜಾದ್‌ಹಿಂದ್ ಸೇರುವಂತೆ ಜುಲುಮೆ ನಡೆದಿತ್ತೆಂಬುದನ್ನೂ, ಆರೋಪಿಗಳಿಗೆ ತಿಳುವಳಿಕೆಯಿದ್ದೇ ಕೊಲೆ ನಡೆದಿತ್ತೆಂಬುದನ್ನೂ ಸಾಕ್ಷ್ಯಗಳು ಮತ್ತು ದಾಖಲೆಗಳು ಸ್ಪಷ್ಟ ಪಡಿಸಿವೆ-ಎಂದು ಸರ್. ನೋಶಿರ್ವಾನರ ವಾದ. ಆರೋಪಿಗಳು ದೇಶಪ್ರೇಮೀ ಭೋರಣೆಗೂ, ಅಪರಾಧಗಳಿಗೆ ಸಂಬಂಧಿಸುವ ಕಾನೂನುಗಳಿಗೂ ಸಂಬಂಧವಿಲ್ಲವೆಂಬುದನ್ನವರು ಎತ್ತಿ ತೋರಿಸಿದರು. ದೇಶ ಪ್ರೇಮೀ ಭಾವನೆಯನ್ನು ಆಕ್ಷೇಪಿಸಿದೆ, ಶಿಕ್ಷೆ ವಿಧಿಸುವ ಸಂದರ್ಭದಲ್ಲಿ ಕೋರ್ಟು ಈ ವಿಷಯಕ್ಕೆ ಲಕ್ಷ್ಯ ಕೊಡಬಹುದೆಂದು ಎಡ್ವೊಕೇಟ್ ಜನರಲರ ನಿವೇದನೆ. "ಈ ಅಪರಾಧಗಳಿಗೆ ಕೋರ್ಟು ವಿಧಿಸಬಹುದಾದ ಅತೀ ಕಡಿಮೆ ಶಿಕ್ಷೆಯೆಂದರೆ ಜೀವಾವಧಿ ಸಜೆ; ತನ್ನ ವಿರುದ್ಧಂದಸಾಕ್ಷ್ಯಗಳ ದೆಸೆಯಿಂದ ಅದನ್ನು ತಗ್ಗಿಸಬಹುದೆಂದು ತೋರಿದರೆ ದೃಢೀಕರಣಾಧಿಕಾರಿಗಳ ಅವಗಾಹನೆಗೊಳಪಟ್ಟು ಹಾಗೆ ಮಾಡಬಹುದು." ಎಂದವರು ನಿವೇದಿಸಿಕೊಂಡರು. ಜಡ್ಜ್ ಎಡ್ವೊಕೇಟರ ಸಾರ ನಿವೇದನೆಗಾಗಿ ಕೋರ್ಟು ತಾ 29 ಕ್ಕೆ ಮುಂದುವರಿಯಿತು.

ಮೂರನೇ ಕೆಂಪು ಕೋಟೆ ಮೊಕದ್ದಮೆ

ಮೂರು ವರುಷ ದಾಟದ ಅಪರಾಧಗಳ ವಿಚಾರಣೆಗಧಿಕಾರ ಕೊಡುವ ಗವರ್ನರ್ ಜನರಲರ ಓರ್ಡಿನೆನ್ಸ್ ಏಂಥುವಲ್ಲವೆಂದು ಲಾಹೋರ್ ಹೈ ಕೋರ್ಟಿಗೆ, ಆಜಾದ್ ಹಿಂದ್ ಮೂರನೇ ಅಪರಾಧಿದಳ ಸುಬೇದಾರ್ ಸಿಂಗಾರಾ ಸಿಂಗ್ ಮತ್ತು ಜಮೇದಾರ್ ಘಾಟೇ ಖಾನರ ಪರವಾಗಿ ಆರ್ಜಿ ದಾಖಲಾಗಿತ್ತು. ಆ ಸಂಬಂಧ ಶ್ರೀ. ಭುಲಾಭಾಯಿಗಳು ಹಾಕಿದ ಇಂಜಕ್ಷನ್ ಆರ್ಜಿಗನುಗುಣವಾಗಿ ಫಿಲ್ಲಿಯ ಸಬ್ ಜಡ್ಜರು ಆ ವಿಚಾರಣೆಯನ್ನು ಜನವರಿ 3ರ ವರೆಗೆ ಮುಂದುವರಿಸಬೇಕೆಂದು ವಿಧಿಸಿದ್ದಾರೆ.

ಕೆಂಪುಕೋಟೆ ಮೊಕದ್ದಮೆಯಲ್ಲಿ

ದೇಸಾಯಿ-ನೋಶೀರ್ವಾನರ ವಾದ-ಪ್ರತಿವಾದ.

BANK WITH THE LARGEST CONNECTIONS ON THE WEST COAST.

OFFERS:-

EFFICIENT, PROMPT & COURTEOUS

SERVICE OF EVERY TYPE

OPEN AN ACCOUNT with

The Canara Industrial & Banking Syndicate Ltd

ESTD 1925

ಉಡುಪಿ

ಡಾ। ಗೋಪಾಲಕೃಷ್ಣರಾಯರ ಭಾಷಣ–ಅಖಿಲ ಭಾರತ ಆಯುರ್ವೇದ ಸಮ್ಮೇಳನದ ಸಲುವಾಗಿ ಉಡುಪಿಗೆ ಚಿತ್ತೈಸಿರುವ ಡಾ। ಗೋಪಾಲಕೃಷ್ಣರಾಯರ್, ಸಂಪಾದಕ 'ಆಳಿಯುಗ' ಧಾರವಾಡ, ಇವರು ತಾ 27ನೆ ಗುರುವಾರ ಸಂಜೆ 5½ ಗಂಟೆಗೆ ಉಡುಪಿ ಪತ್ರಿಕೋದ್ಯೋಗೀ ಸಂಘದ ಆಶ್ರಯದಲ್ಲಿ 'ಆಯುರ್ವೇದದ ಅಧಿಕಾರ' ವಿಷಯದಲ್ಲಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಭಾಷಣ ಮಾಡಲಿರುವರು. ಸರ್ವರಿಗೂ ಸುಸ್ವಾಗತ ವಿದೆ.

ಪ್ರಕಟಣೆ

ಕೊಲೆಕಾಡಿ ವಿದ್ಯಾಪ್ರಚಾರಿಣೀ ಪಾಠಶಾಲಾ-ಹಳೆ ವಿದ್ಯಾರ್ಥಿ ಸಂಘ.

॥ ಸಂಘೇ ಶಕ್ತಿಃ ಕಲೌಯುಗೇ ॥

ಸಹೋದರ ಸಹೋದರಿಯರೇ!

ನಾವು ಅದಿಮ ವಿದ್ಯೆಯನ್ನು ಪಡೆದ ನಮ್ಮ ಕೊಲೆಕಾಡಿ ವಿದ್ಯಾಪ್ರಚಾರಿಣೀ ಪಾಠಶಾಲೆಯಲ್ಲಿ ಹಳೆ ವಿದ್ಯಾರ್ಥಿ ಸಂಘವು -ಸ್ಥಾಪಕರು ರಕ್ಷಕರು, ಆಶ್ರಯದಾತರು, ಪೋಷಕರು, ಹಿತಚಿಂತಕರು, ಸದಸ್ಯರು ಎಂದೀ ಐದಾರು ತರಗತಿಯ ಮೆಂಬರರ ಶ್ರೇಣಿಯುದ್ದೈಕ್ಯವಾಗಿ—ಒಕ್ಕಟ್ಟು, ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಸಹಾಯ, ಪಾಠಶಾಲಾಭ್ಯುದಯ, ವಾರ್ಷಿತೋಷಕ, ಉಚಿತ ವಾಚನಾಲಯ ಹಾಗೂ ಪುಸ್ತಕ ಭಂಡಾರ, ಲೇಖನ ಪತ್ರಿಕೆಗಳು, ಆಟಗಳು ಮತ್ತು ದಿನಾಚರಣೆ ಎಂಬ ಹಲವಾರು ಸದುದ್ದೇಶಗಳನ್ನು ನೆರವೇರಿಸಲು ಸ್ಥಾಪನೆಯಾಗಿರುವುದು. ಆದಷ್ಟಯುಕ್ತ ಸ್ಥಳೀಯ, ಸರಸ್ವತೀಯ ಹಳೆ ವಿದ್ಯಾರ್ಥಿಗಳೂ ಮತ್ತು ವಿದ್ಯಾಭಿಮಾನಿಗಳೂ ಈಡಾ ಈ ಸುಘದಲ್ಲಿ ಸಹಭಾಗಿಗಳಾಗಿ, ಸಂಘದ ಯೋಜನೆಯೊಂದು ತರಗತಿಯ ಮೆಂಬರರಾಗಿ ಸೇರಿ, ಉದಾರ ಮನಸ್ಸಿನಿಂದ ಯಾವ ರೂಪದಲ್ಲಾದರೂ ಸಂಘಕ್ಕೆ ಸಹಾಯವನ್ನು ತೆತ್ತು, ಸಂಘದ ಏಳಿಗೆಯನ್ನು ಹಾರೈಸಬೇಕಾಗಿ ಕೋರುವ,

ಟಿ ಜಾಲಕೃಷ್ಣ ಶೆಟ್ಟಿ,
ಗೌರವ ಕಾರ್ಯದರ್ಶಿ.

ನೋಟೀಸು

ಮಂಗಳೂರು ಡಿ. ಮು. ಕೋರ್ಟ್‌ನಲ್ಲಿ.

S. C. 835/1938.
S. E. P. 371/1945.
S. E. A. 172/1945

ದಿ. ಕರ್ನಾಟಕ ಬೇಂಕ್ ಲಿಮಿಟೆಡ್, ಮಂಗಳೂರು. — ಅರ್ಜಿದಾರರ್.

ಮತ್ತು

1 ಬಿ. ಯಿದಿನೆ ಜ್ಯಾರಿ. 2. ನೀತಮ್ಮ —ರೆಸ್ಪೋಂಡೆಂಟರರು.

ಸದ್ರಿ 2ನೇ ರೆಸ್ಪೋಂಡೆಂಟಳು-ನೀತಮ್ಮ ಬದಲಿದೆ ನಾರ್ಣಪ್ಪಯ್ಯನವರ ವಿಧವೆ-ಮಂಗಳೂರು ತಾಲ್ಲು ಬೈಕಂಪಾಡಿ ಗ್ರಾಮಸ್ತರು. ಇವರಿಗೆ

ಮೇಲಿನ ವಾನೆಯಲ್ಲಿ 2ನೇ ಪ್ರತಿವಾದಿ ಹಾಲಿ ಮೃತಪಟ್ಟ ಬದಲಿದೆ ನಾರ್ಣಪ್ಪಯ್ಯನವರು ಪ. ಕ. ಸಬ್ ಕೋರ್ಟಿನ ಕ್ರಮ ಸಂ 18/42ನೇ ವಾನೆಯಲ್ಲಿ 3-3-43ಲ್ಲಾ ಕುಳ್ಯ ರಾಮಕೃಷ್ಣ ಹೆಬ್ಬಾರರ ಮೇಲೆ ಪಡಪಡಿತ್ತಿಯನ್ನು ಜಪ್ತಿ ಕರಿಸಬೇಕಾಗಿ ಸದ್ರಿ ನಾರ್ಣಪ್ಪಯ್ಯನ ವಾರೀಸುದಾರಳಾದ 2ನೇ ರೆಸ್ಪೋಂಡೆಂಟಳ ಮೇಲೆ ಮಾಡಿದ ಮೇಲಿನ S. E. P. 371/45ನೇ ಅಮ್ಲಜ್ಯಾರಿ ಮತ್ತು ಸದ್ರಿಯವಳನ್ನು 2ನೇ ಪ್ರತಿವಾದಿಯೂವ ಮೃತಪಟ್ಟರುವ ನಾರ್ಣಯ್ಯನವರ ವಾರೀಸುದಾರಳಾಗಿ ಕಕ್ಷಿಗೆ ಸೇರಿಸಬೇಕೆಂದು ಮಾಡಿರುವ S. E. A. 172/1945ನೇ ಅರ್ಜಿ ಕೂಡಾ ತಾ 8-1-1946ಕ್ಕೆ ಇಟ್ಟಿದೆ. ಸದ್ರಿಜಸ್ತಿಗೆ-ನ. ಅರ್ಜಿಗೆ ಅಕ್ಷೇಪವಿದ್ದಲ್ಲಿ 2ನೇ ರೆಸ್ಪೋಂಡೆಂಟಳು ಸ್ವತಹ-ಯಾ-ವಕೀಲರ ಮುಖಾಂತರ ಸದ್ರಿ 8-1-46ನೇ ದಿನ ಪೂರ್ವಾಹ್ನ 11ಘಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜೇಳಕೊಳ್ಳದಿದ್ದರೆ ಅವಳ ಗೈರ್ ಹಾಜ್ರಿಯಲ್ಲಿ ಸದ್ರಿ ಅರ್ಜಿಗಳು ತೀರ್ಪಾನಿಸಲ್ಪಡುವವು ಎಂತ ತಾ ಮೂಲಕ ತಿಳಿಸೋಣವಾಗಿಯಿದೆ.

ಮಂಗಳೂರು
22-12-45

K. R Achar
Vakil for Petitioner

150 ಪುಟಗಳು! ಬಣ್ಣಬಣ್ಣದ ಚಿತ್ರ!

ಕನ್ನಡ ಪತ್ರಿಕಾಪ್ರಪಂಚದಲ್ಲಿ ಪ್ರಥಮ ಪ್ರಯತ್ನ!

'ಅಂತರಂಗ'ದ

ಆಯುರ್ವೇದ ಸಮ್ಮೇಲನಾಂಕ

ಅಖಿಲಭಾರತ ಖ್ಯಾತಿಯ ಲೇಖಕ ವರ್ಗ!

ಕನ್ನಡಿಗರಿಗೆ ಈ ವರೆಗೆ ಯಾರೂ ಅರ್ಪಿಸದ ಹೊಸ ವರ್ಷದ ಹೊಸ ಮಾದರಿಯ ಕಾಣಿಕೆ.

ಪ್ರತಿ ಡಾಕ್ಟರ, ವೈದ್ಯರಷ್ಟೇ ಅಲ್ಲ-ಪ್ರತಿಯೊಬ್ಬ ಕನ್ನಡಿಗನೂ ಸಂಗ್ರಹಿಸತಕ್ಕ ಅತ್ಯಮೂಲ್ಯ ಸಂಚಿಕೆ.

150ಪುಟಗಳು! ಹಲವಾರು ಚಿತ್ರಗಳು!!

ಇಷ್ಟಿದ್ದರೂ ಬೆಲೆ ಬರೇ 1—0—0 ಮಾತ್ರ.

ಮ್ಯಾನೇಜರ್, 'ಅಂತರಂಗ' ವಾರಪತ್ರಿಕೆ, ಉಡುಪಿ, ದ.ಕ.

(ಇನೇ ಪುಟದಿಂದ ಮುಂದುವರಿದುದು.)

ವಿಭಾಗಿಸಿ ಹಾಕಿ ಕೊಡತಕ್ಕದ್ದು ಕಾರ್ಯಭಾರ ವಹಿಸಿದ ಸದಸ್ಯರ ಮೇಲೆಯೇ ಆಯಾಯ ಕಾರ್ಯಗಳ ಹೊಣೆಗಾರಿಕೆ ಬೀಳಬೇಕು. ಸಂಘವು ಕೈಕೊಳ್ಳುವ ವಿವಿಧ ಕಾರ್ಯ ಕಲಾಪಗಳಲ್ಲಿ, ಅಗತ್ಯ ನೆಂದು ಕಂಡರೆ ಕಾರ್ಯಕಾರೀ ಸಮಿತಿಗೆ ಸಹಾಯಕರಾಗಲು ತರಬೇತಾದ ಸಲಹೆಗಾರರನ್ನು ಸಂಘವು ನೇಮಿಸಿಕೊಳ್ಳಬಹುದು.

ತಾಲೂಕಿಗೊಬ್ಬನಂತೆ ಅಥವಾ ಕೊನೆಯಪಕ್ಷ ಜಿಲ್ಲೆಯ ದಿವಿಜನಿಗೊಬ್ಬನಂತಾದರೂ, ಸಂಬಳ ಪಡೆದು ಕೆಲಸಮಾಡುವ ಸಂಘಟನಾಕರ್ತನನ್ನು ನೇಮಿಸಬೇಕು. ಅಲ್ಲಲ್ಲಿಯ ಕಮಿಟಿಗಳನ್ನು ಸಂಘಟಿಸುವುದು, ಅವುಗಳಿಗೆ ನೆರವಾಗುವುದು ಹಾಗೂ ಮೇಲ್ನಡಿ ನೋಡುವುದು, ಪ್ರಚಾರ ಮೂಲಕ ಸಾರ್ವಜನಿಕರಲ್ಲಿ ಜ್ಞಾನ ಪ್ರಸರಿಸುವುದು ಮತ್ತು ಅವರ ನಡುವೆ ಹಬ್ಬಿರುವ ಧಾರ್ಮಿಕ, ಸಾಮಾಜಿಕವಾದ ಹಳೆತು ನಾರುವ ಕ್ರಮ ಸಂಪ್ರದಾಯಗಳನ್ನೂ, ಸಮಾಜವನ್ನು ಸಂಕಟಕ್ಕೆ ಗುರಿಪಡಿಸಿರವ ವರದಕ್ಷಿಣೆ ಮೈರೆ ಕಂಟಕಗಳನ್ನೂ ಸಮೂಲವಾಗಿ ಕಿತ್ತೊಗೆಯುವುದು ಇವೆಲ್ಲಾ ಈ ಸಂಘಟನಾಕರ್ತನ ಕಾರ್ಯಗಳಾಗಿರಬೇಕು.

ಪ್ರಚಾರ ಮೂಲಕ ಜನತೆಗೆ ಶಿಕ್ಷಣ ವೀಯುವಂತೆ ಅಥವಾ ಅವರ ಹಿತಸಂಬಂಧಗಳ ಸಾಧನೆಗಾಗಿ ಸಂಘಕ್ಕೆ ತನ್ನದೇ ಆದ ಒಂದು ದಿನ ಪತ್ರಿಕೆ ಅಥವಾ ವಾರ ಪತ್ರಿಕೆಯಿರಬೇಕು.

ಈ ವಿವಿಧ ಸಮಿತಿಗಳು ಕ್ರಮಬದ್ಧವಾಗಿ ಸಾಗಿಹೆತ್ತಿದರೆ ಅವುಗಳ ವಾರ್ಷಿಕ ವರ್ಗಣಿಯು ಸರ್ವಸಾಮಾನ್ಯ ವ್ಯವಸ್ಥೆಗೆ ಸಾಕಾಗುವುದು ನಿಶ್ಚಯವಲ್ಲ; ಸಂಘದ ನಿಧಿ ಬೆಳೆಯುವಷ್ಟು ಉಳಿತಾಯ ಕೂಡಾ ಜೊರೆಯುವುದು. ಉದ್ಯೋಗ ಅಥವಾ ಬೇರೆ ವಿಧಾನಗಳಿಂದ ಉಚ್ಚ ಸ್ಥಿತಿಯಲ್ಲಿರುವ ಧನಿಕರಿಂದ ಸಹಾಯ ಧನವನ್ನು ಸಂಗ್ರಹಿಸುವ ಮೂಲಕವೂ ಸಂಘದ ನಿಧಿಯನ್ನು ಹೆಚ್ಚಿಸಿಕ್ಕೊಳ್ಳಬಹುದು. ಆಲ್ಲದೆ ವಿಜಯಾ ಬ್ಯಾಂಕ್‌ನ್ನು ಬಲಗೊಳಿಸಿ ಆ ಮೂಲಕ ನಮ್ಮ ಜನರಿಗೆ ಆರ್ಥಿಕ ಸಹಾಯನೀಯಲು ಅದು ಸಮರ್ಥವಾಗುವಂತೆ ನಾಡಬಹುದು. ಸರ್ವ ಬೇಂಕಿಂಗ್ ವ್ಯವಹಾರಗಳನ್ನು ಸಾಗಿಸಬಲ್ಲ, ತರಬೇತಾದ ನೌಕರ ಮಂಡಲಿ ಆಲ್ಲಿರಬೇಕು. ವಿವಿಧ ಬೇಕಿಂಗ್ ಸಂಸ್ಥೆಗಳ ಕಾರ್ಯವಿಚಕ್ಷಣತೆಯನ್ನು ಅಭ್ಯಸಿಸಿ, ನಮ್ಮ ಬೇಂಕನ್ನು ಪ್ರಗತಿ ಪಥಪಿಡಿಸುವ ವಿಧಾನವನ್ನು ಸೂಚಿಸಲಿಕ್ಕಾಗಿ ಒಬ್ಬರನ್ನು ನಾವು ನೇಮಿಸಬೇಕು.



Approved firm by the Govt. of Mysore Certified by the Agent of the Govt. of Cyclone Indiau.

ಮೂಲ್ಕಿ ಅಧಿವೇಶನದಲ್ಲಿ
ಶ್ರೀ- ಬಲ್ಲಾಳರ ಅಧ್ಯಕ್ಷ ಭಾಷಣ-

ಇವೆಲ್ಲಾ ಕಾರ್ಯಕಲಾಪಗಳಿಗೆ ಸಾಕಷ್ಟು ನಿಧಿ ಬೇಕಾಗಿರುವಂತೆಯೇ ನಿಸ್ವಾರ್ಥಿ ಕಾರ್ಯಕರ್ತರೂ ಆಗತ್ಯವಾಗಿಬೇಕು. ಅಂಥವರಿಲ್ಲದೆ ಹೋದರೆ ನಮ್ಮೆಲ್ಲಾ ಯೋಜನೆಗಳು ಗಾಳಿಪಾಲಾಗುವುದೇ ಸಂ. ಆದ್ದರಿಂದ ಜಿಲ್ಲೆಯ ಸರ್ವಕಡೆಗಳಿಂದಲೂ, ಸಮಾಜ ಏಕತ್ಯಕ್ಕಾಗಿ ಸ್ವಾರ್ಥತ್ಯಾಗ ಮಾಡಲು ತಮ್ಮಂಥವರು ಬಹು ಸಂಖ್ಯೆಯಿಂದ ನಡುಬಗಿದು ಮುಂದೆ ಬನ್ನಿರಿಂದೂ, ಮೇಲ್ಗಡೆ ನಾನು ಸೂಚಿಸಿರುವ ಅಥವಾ ಸಂಘವು ಸ್ವೀಕರಿಸಿಕೊಳ್ಳುವ ಸೂಚನೆಗಳನ್ನು ಜಯಶೀಲವಾಗಿ ಮುಂದೊತ್ತಿರೆಂದೂ ನಾನು ತಮ್ಮನ್ನು ವಿಜ್ಞಾಪಿಸಿಕೊಳ್ಳಲೆ? ಆಗತ್ಯವಿದ್ದಲ್ಲಿ ಯಾವುದಾದರೊಂದು ಅಂಗೀಕೃತ ಸಂಸ್ಥೆಯಲ್ಲಿ ಯುವಕ ದಳವೊಂದಕ್ಕೆ ತರಬೇತಿಯನ್ನು ಕೊಡಿಸಬಹುದು.

ಅಳಿಯ ಸಂತಾನ ಕಾನೂನಿನ ಸುಧಾರಣೆ.

ಪ್ರತಿಯೊಬ್ಬನ ತಲೆಯಲ್ಲಿಯೂ ಸುತ್ತುತ್ತಿರುವ ಇನ್ನೊಂದು ಮುಖ್ಯ ಪ್ರಶ್ನೆಯುಳಿದಿದೆ. ಅದೆಂದರೆ ಅಳಿಯ ಸಂತಾನ ಕಟ್ಟಿನ ಕಾನೂನಿನ ಸುಧಾರಣೆ. ಮಡುವೆ, ಮೃತ್ಯುಪತ್ರವಿಲ್ಲದೆಯೇ ಸಂದವನ ವಾರೀಸು ಹಕ್ಕು, ಗಾರ್ಡಿಯನ್ ಶಿಪ್ ಇತ್ಯಾದಿಗಳ ಕುರಿತು ಬದಲಾವಣೆ ಆಗತ್ಯವೆಂಬ ಕುರಿತಾಗಲೀ, ಅದಿರಬೇಕಾದ ನಮೂನೆಯ ಕುರಿತಾಗಲೀ ಎರಡಭಿಪ್ರಾಯವಿರುವಂತೆ ಕಾಣುವುದಿಲ್ಲ. ಉಳಿದ ವಿಷಯಗಳಲ್ಲಿ ಸುಧಾರಣೆಯೇನೋ ಆಗಬೇಕೆಂಬ ಅಭಿಪ್ರಾಯ ಪ್ರತಿಯೊಬ್ಬನಲ್ಲೂ ಇದೆ. ಆದರೆ ಅತ್ಯಧಿಕ ಸಂಖ್ಯಾಕರಿಗೆ ವಿಶೇಷ ಸುಖದಾಯಿಯಾಗುವಂತೆ ಅದರ ರೀತಿ ಹೇಗಿರಬೇಕೆಂಬ ಕುರಿತು ನಾವೊಂದು ಒಮ್ಮತಕ್ಕೆ ಬಂದಿಲ್ಲ. ನಮ್ಮ ಅವಿಭಕ್ತ ಕುಟುಂಬ ಪದ್ಧತಿಯಲ್ಲಿರುವ ಅಮೂಲ್ಯತೆಯಂತೆಯೇ ಅದರಲ್ಲಿರುವ ಲೋಪ ದೋಷಗಳನ್ನು ನಾನು ಈ ಮೊದಲೇ ಪ್ರಸ್ತಾಪಿಸಿದ್ದೇನೆ. ನಮ್ಮ [illegible] ಮುರಿದುಕೊಂಡು, ಇವೆಲ್ಲಾ ದೋಷಪೂರ್ಣವಾಗಿರುವ ಇತರ ಕಾಯಿದೇ ಕಟ್ಟಳೆಗಳನ್ನು ಅಂಗೀಕರಿಸಿ ಕೊಳ್ಳುವದಕ್ಕಿಂತ, ಯೋಗ್ಯ ಸುಧಾರಣೆಗಳ ಮೂಲಕ ನಾವು ನಮ್ಮ ಪದ್ಧತಿಯನ್ನೇ ಶುದ್ಧೀಕರಿಸಿಕೊಂಡು, ಅದರಲ್ಲಿರುವ ಲೋಪ ದೋಷಗಳನ್ನು ತೊಡೆದು ಹಾಕಿ, ಆ ಮೂಲ್ಯತೆಯನ್ನು ಉಳಿಸಿಕೊಂಡರಾಯಿತೆಂದು ವ್ಯಕ್ತಿಶಃ ನನ್ನ ಅಭಿಪ್ರಾಯ. ಇದು ಶ್ರಮಾಸದ ಕಾರ್ಯವೆಂಬುದು ನಿಸ್ಸಂದೇಹ. ಆದರೂ ವ್ಯಕ್ತಿಗತವಾಗಿಯೂ ಸಾಮೂಹಿಕವಾಗಿಯೂ, ಇದು ಸರ್ವರಿಗೂ ಸಂಬಂಧಪಟ್ಟ ಸಂಗತಿಯಾಗಿರುವುದರಿಂದ ನಾವೀ ಪ್ರಶ್ನೆಯನ್ನು ಕೂಡಲೆ ಇತ್ಯರ್ಥಿಸಬೇಕಾಗಿದೆ; ನಮ್ಮ ತೇಜೋವಧೆ ಇನ್ನೂ ಆಗದಂತೆ ತಡೆಗಟ್ಟಬೇಕಾದರೆ ಸಾಧ್ಯವಿದ್ದಷ್ಟು ಬೇಗನೇ ಆ ನಿರ್ಧಾರವು ಕಾರ್ಯರೂಪಕ್ಕೆ ಇಳಿಯಲೇ ಬೇಕು.

ಹೊರ ಪ್ರಾಂತ್ಯಗಳಲ್ಲಿರುವ ನಮ್ಮವರಿಗೆ ಸಹಕಾರ ಮತ್ತು ಸಹಾಯ.

ಕೊನೆಯದಾಗಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಈ ಜಿಲ್ಲೆಯೊಂದೇ ನಮ್ಮ ಕಾರ್ಯ ಕಲಾಪಗಳ ಕ್ಷೇತ್ರವಾಗಿರಬಾರದು. ಬೊಂಬಾಯಿ; ತೀರ್ಥಹಳ್ಳಿ, ಮತ್ತಿತರ ಹರ ಪ್ರಾಂತ್ಯಗಳಲ್ಲಿ ನಮ್ಮ ಜನರು ಅಧಿಕ ಸಂಖ್ಯೆಯಲ್ಲಿ ಸೇರಿ ಹೋಗಿದ್ದಾರೆ. ಸಂಘದ ಸಹಾಯವೇನಾದರೂ ಬೇಕಾಬಾಗಲೆಲ್ಲಾ ನಾವವರಿಗೆ ನೆರವಾಗಬೇಕು; ಮತ್ತವರ ಸಹಕಾರವನ್ನು ಗಳಿಸಿಕೊಳ್ಳಬೇಕು.

ಜಾತಿ ಭೇದವು ನಿರ್ಮೂಲವಾಗಬೇಕೆಂಬ ಕೂಗು ಮೂಲೆ ಮೂಲೆಗಳಿಂದ ಕೇಳಿ ಬರುತ್ತಿರುವ ಈ ಕಾಲದಲ್ಲಿ ನಾವು ಜಾತ್ಯಭಿವೃದ್ಧಿಯ ಚಿಂತನೆಯಲ್ಲಿದ್ದೇವೆ ಎಂಬ ಮಾತು ಬರಬಹುದು. ಜಾತಿ ಪದ್ಧತಿಯೆಂಬುದು ಬಂದೆಲ್ಲೊಂದು ರೂಪದಿಂದ ಇಡೀ ಜಗತ್ತಿನಲ್ಲೇ ಆದಿಯಿಂದಲೂ ಬಾಳಿ ಬಂದಿದೆ; ಮುಂಗಕ್ಕೂ ಬಾಳಲಿದೆ. ಇಂಗ್ಲೆಂಡ್, ಅಮೇರಿಕಗಳಂತಹ ಮುಂದುವರಿದ ರಾಷ್ಟ್ರಗಳಲ್ಲಿ ಇಲ್ಲಿಗಿಂತ ಹೆಚ್ಚಲ್ಲವಾದರೂ ನಮ್ಮಲ್ಲಿರುವಷ್ಟೇ ಪ್ರಬಲವಾದ ವರ್ಗ ಯಾ ಪಂಗಡ ಭೇದಗಳು ಅನೇಕವಿವೆ ಎಂದು ತಿಳಿದುಬರುತ್ತದೆ. ಇಂತಹ ಪಕ್ಷ ಪಂಗಡಗಳ ತಾರತಮ್ಯವಿದ್ದರೂ ಅಲ್ಲಿಯ ಸರ್ವತೋಮುಖ ಅಭಿವೃದ್ಧಿಗೆ, ಅವುಗಳಿಂದೇನೂ ತೊಡಕಾಗಿಲ್ಲ. ಒಂದು ಸರಿಪಡಿಯ ಶಕ್ತಿಯು ಅದರಲ್ಲಿರುವ ಕೊಂಡಿಗಳ ಶಕ್ತಿಯನ್ನಾಧರಿಸಿರುವಂತೆಯೇ ಒಂದು ರಾಷ್ಟ್ರದ ಶಕ್ತಿಯು ಅಲ್ಲಿರುವ ವ್ಯಕ್ತಿಗಳ ಶಕ್ತಿಯನ್ನು ಆಧರಿಸಿದೆ. ರಾಷ್ಟ್ರೀಯ ಸಂಸ್ಥೆ ಅಥವಾ ರಾಷ್ಟ್ರೀಯ ಅಧಿಕಾರವು ಸರ್ವ ಸಾಮೂಹಿಕ ಪ್ರಗತಿ ಸೌಕರ್ಯಗಳನ್ನು ಒದಗಿಸಿಕೊಡಬಹುದು. ಆದರೆ ಅಂತಹ ಸೌಕರ್ಯಗಳನ್ನು ಸದುಪಯೋಗಿಸಿಕೊಂಡು ತಂತಮ್ಮ ಸ್ವಪ್ರಯತ್ನಗಳ ಮೂಲಕ ಯೋಗ್ಯತೆಗಳಿಸುವುದು ಆಯಾಯ ವ್ಯಕ್ತಿಗಳನ್ನೇ ಹೊಂದಿಕೊಂಡಿದೆ. ಇತರರ ಆಥವಾ ಒಂದು ರಾಷ್ಟ್ರದ ಇಲ್ಲವೇ ಒಂದು ರಾಷ್ಟ್ರೀಯಾಧಿಕಾರದ ಉದಾರಾಶ್ರಯದಿಂದಲೇ ವ್ಯಕ್ತಿಶಃ ತನ್ನ ಪುರೋಭಿವೃದ್ಧಿಯನ್ನೂ ಸಾಧಿಸಿಕೊಳ್ಳಬಹುದೆಂದು ಯಾರೊಬ್ಬನೂ ತನ್ನ ವಿಶಿಷ್ಟತೆಯನ್ನು ವಿಸರ್ಜಿಸಿಕೊಳ್ಳಲಾಗುವುದಿಲ್ಲ. ತನ್ನ ಪ್ರಗತಿ ಸಾಧನೆ ಮಾಡುವಾಗ, ಬೇರೆಯವರ ಆಥವಾ ರಾಷ್ಟ್ರದ ಹಿತಕ್ಕೆ ಧಕ್ಕೆ ಬೀಳದಂತೆ ನೋಡುವದೊಂದೇ ಇಲ್ಲಿ ಬೇಕಾದುದು. ಅರ್ಥಾತ್ ವಿಶಿಷ್ಟ ವ್ಯಕ್ತಿಗಳು ಆಥವಾ ವ್ಯಕ್ತಿಗಳ ಪಂಗಡಗಳು ಸೌಹಾರ್ದತೆಯಿಂದ ಮಿಲನಗೊಂಡು ಅಭಿವೃದ್ಧಿ ಪಡೆಯುವುದು ಆಗತ್ಯ. ಈ ರೀತಿ ಅಭಿವೃದ್ಧಿಗೆ ಪ್ರಯತ್ನ ಪಡುವುದು ನಿರಾಕ್ಷೇಪಕರದ್ದು. ತಮ್ಮ ಹಾಗೂ ತಮ್ಮ ರಾಷ್ಟ್ರದ ಅಭಿವೃದ್ಧಿಯಾಗಬೇಕಾದರೆ ಎಲ್ಲಾ ವ್ಯಕ್ತಿಗಳು ಹಾಗೂ ವ್ಯಕ್ತಿಗಳ ವಿಶಿಷ್ಟ ಪಂಗಡಗಳು ಈ ಸಹಾಭಿವೃದ್ಧಿಯನ್ನು ಸಾಧಿಸಿಕೊಳ್ಳುವದು ನ್ಯಾಯವಿದೆ; ಮಾತ್ರವಲ್ಲ, ಅದು ಅವುಗಳ ಜನ್ಮ ಸಿದ್ಧ ಹಕ್ಕು ಎನ್ನುತ್ತೇನೆ. ಮುಂದಿನ ಪ್ರಜಾಪ್ರಭುತ್ವವು ವಿಜಯಯುಗವಾಗಬೇಕಾದರೆ, ಅದರಲ್ಲಿ ಜನತೆಯು ತಮ್ಮ ಹಕ್ಕು ಬಾಧ್ಯತೆ ಹಾಗೂ ಹಿತ ಸಂಬಂಧಗಳ ಸುಖಾನುಭವ ಪಡೆಯಬೇಕಾದರೆ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವಿಶಿಷ್ಟ ಪಂಗಡಗಳು ಸರಿ ಸಮಾನವಾಗಿ ಮುಂದುವರಿಯಬೇಕು, ಅಥವಾ ಪುಷ್ಟೀಕರಣ ಹೊಂದಬೇಕು. ಹಾಗಾಗದೆ ಹೋದರೆ ಬಲಶಾಲಿಗಳ ಅಥವಾ ವಿಶೇಷ ಪ್ರಗತಿಗಾಮಿಗಳ ಅಧಿಕಾರಕ್ಕೆ ದುರ್ಬಲರು ಯಾನೆ ಹಿಂದುಳಿದವರು ಬಲಿಬಿದ್ದು ಮೂಲೆಗೊತ್ತಲ್ಪಡುವುದೇ ಸರಿ. ಈ ಎಲ್ಲಕಾರಣಗಳಿಂದ ನಾವು ಅಂತಹ ಯೋಚನಾ ಪ್ರವಾಹದಲ್ಲಿ ತೇಲಿಹೋಗದೆ, ಮಿಕ್ಕವರನ್ನು ಮಿಗಿಸದೆ ಹೋದರೂ ಅವರ ಸಮಾನತೆಗೆ ನಿಲ್ಲೋಣ. ಸರಕೀಯರ ಮೇಲೆ ದ್ವೇಷಾಸೂಯೆಯೇನೂ ಇಲ್ಲದೆ, ನಮ್ಮ ಅಭಿವೃದ್ಧಿಗೆ ತಕ್ಕುಂತಹ ಹೆಜ್ಜೆಗಳನ್ನು ನಿಶ್ಚಂಕೆಯಿಂದ ಧೃಢವಾಗಿ ಮುಂದಿಡುತ್ತಾ ಸಾಗುವಾ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು **29-11-1945**ರಿಂದ

ನವಯುಗ ಚಿತ್ರ

ಲಡಾಯಿ-ಕೇ-ಬಾದ್

ಕಾಹು ಮೋದಕ್, ಸ್ನೇಹಪ್ರಭಾ, ಡೆವಿಡ್.

ನಂತರ—

ಪ್ರದೀಪ್ ಚಿತ್ರ

ಪನ್ನಾದಾಸಿ

NOTICE

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. E. P. 653/1945.
S. C. No. 29/1945.

ವಾದಿ—ಡಿ. ಕೇಶವ ಕಾಮತ್ ಯಂಡ್ ಸನ್ಸ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ

ಪ್ರತಿವಾದಿ -K. Keshava Kamath c/o Messers Giri Products; Portugise Church Street; Girgaum Bombay.

ವಾದಿ ಬೇಂಕಿನವರು ಸದ್ರಿ ಡಿಕ್ರಿಯ ಬಗ್ಗೆ ಪ್ರತಿವಾದಿಯ ಬಾಬ್ತು ಚರಸೊತ್ತುಗಳನ್ನು ಜಪ್ತು ಮಾಡಿಸಿ ಏಲಂ ಮಾಡಿಸುವರೆ ಮೇಲ್ಕಂಡ ಅಮ್ಲಜಾರಿಯಲ್ಲಿ ಏಲಂ ಇಸ್ತಿಹಾರನ್ನು ದಾಖಲು ಮಾಡಿಯಾಗಿದೆ. ಸದ್ರಿ ಏಲಂ ಇಸ್ತಿಹಾರಿನ ಕರ್ತವ್ಯ ನಿರ್ಣಯದ ಬಗ್ಗೆ ತಾರೀಕು 15-1-1946ಕ್ಕೆ ಅಮ್ಲಜಾರಿಯನ್ನು ಇಟ್ಟಿರುತ್ತಾರೆ. ಆ ಲಗಿತು ಏನಾದರೂ ಆಕ್ಷೇಪವಿದ್ದರೆ ಸದ್ರಿ ತಾರೀಕಿನ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ನೂಡಿಕೊಳ್ಳುವಲ್ಲಿ ತಪ್ಪಿದರೆ ಏಕಸಕ್ಷನಾಗಿ ನಿಮ್ಮ ಸೈರಾ ವಾಜರಾತಿಯಲ್ಲಿ ತೀರ್ಮಾನಿಸಲಾಗುವುದೆಂಬ ಸಂಗತಿಯನ್ನು ಕೋರ್ಟಿನ ಹುಕುಂ ಪ್ರಕಾರ ಯಾ ಮೂಲಕ ಪ್ರತಿವಾದಿಗೆ ತಿಳಿಸೋಣಾಗುತ್ತದೆ.

K. Raghunath Shenai B A.
ವಾದಿಯ ಕಡೆ ಪ್ಲೀದರರು.
ಕುಂದಾಪುರ
25-12-1945

ಲೀಗಿನ ಆತ್ಮಹತ್ಯಾಧೋರಣೆಗೆ ಬಲಿಬೀಳಬೇಡಿ.

ಖಾನ್ ಅಬ್ದುಲ್ ಗಫರ್ ಖಾನರ ಕರುಳಿನಿಂದೆದ್ದ ಕರೆ!

ಗಡನಾಡಿನ ಗಾಂಧಿ ಖಾನ್ ಅಬ್ದುಲ್ ಗಫರ್ ಖಾನರು ತನ್ನೊಂದು ಸಂದೇಶದಲ್ಲಿ ಹೀಗಂದಿದ್ದಾರೆ:—

"ಏನೇ ಬಂದರೂ, ಇಡೀ ಪ್ರಪಂಚವೇ ನನ್ನನ್ನಿದಿರಿಸಿ ನಿಂತರೂ, ನನ್ನ ಮನಸ್ಸಾಕ್ಷಿ ಮತ್ತು ಯಥಾರ್ಥ ನಿರ್ಧಾರಗಳಿಗೆ ವಿರುದ್ಧವಾಗಿ ನಾನೆಂದಿಗೂ ವರ್ತಿಸಲಾರೆ. ಅಂತಹ ಕಾಲಬಂದರೆ ಒಬ್ಬಂಟಿಗನಾಗಿ ನನ್ನ ಗದ್ದೆಯುಳುತ್ತಾ ಇದ್ದುಬಿಡುವದಕ್ಕೂ ನಾನು ಸಿದ್ಧನೇ. ಯಾರಿಗೆ ಹೇಗನ್ನಿಸಿದರೂ, ನನ್ನ ನಿಶ್ಚಿತಾಭಿಪ್ರಾಯವೆಂದರೆ, ಮುಸ್ಲಿಂ ಲೀಗ್ ಎಂಬುದು ಮೂಲತಃ, ಮಾತೃಭೂಮಿಯ ದಾಸ್ಯವನ್ನಿಳಿಸಲು ಹೋರಾಡುತ್ತಿರುವ ಕಾಂಗ್ರೆಸ್ ಮತ್ತದರ ಸಹಯೋಗೀ ಸಂಸ್ಥೆಗಳ ಕಾರ್ಯವನ್ನು ಕೆಡಿಸುವದಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯಿಂದ ನಿರ್ಮಾಣಗೊಂಡಿರುವ ಸಂಸ್ಥೆ. ಲೀಗು ತನ್ನ ರಾಷ್ಟ್ರಘಾತಕ ಧೋರಣೆಯನ್ನು ಬದಲಾಯಿಸುವ ವರೆಗೆ—ಭಾರತದ ಮೂಲಭೂತ ಹಿತಸಂಬಂಧಗಳಿಗೆ ಧಕ್ಕೆ ಕೊಡುವ ತನ್ನ ದುಶ್ಚಟ್ಟಳಿಯನ್ನು ಬಿಟ್ಟುಬಿಡುವನಕ—ಭಾರತವನ್ನು ಬಿಡುವಂತೆ ಬ್ರಿಟಿಷ್ ಸರಕಾರಕ್ಕೆ ಬಹಿರಂಗವಾಗಿ ಧುರವೀಳ್ಯ ಕೊಡಲು ಅದು ಮುಂದೆ ಬರುವ ವರೆಗೆ— ಉಜ್ವಲ ಕ್ರಾಂತಿಕಾರೀ ಭಾವನೆಯ ಸ್ವಾತಂತ್ರ್ಯಪ್ರೇಮಿಯಾದ ಯಾವನೊಬ್ಬ ಭಾರತೀಯನೂ ಅದರ ಭತ್ರದಡಿಯಲ್ಲಿ ಸೇರಲಾರ. ಲೀಗನ್ನು ಸೇರಿ, ಇಸ್ಲಾಮಿನ ಸೇವೆ ಸಲ್ಲಿಸಬೇಕೆಂದು ಕೆಲವು ಲೀಗ್ ಪ್ರಮುಖರಿಂದ ನನಗೆ ಕರೆಬರುತ್ತಿದೆ. ಬ್ರಿಟಿಷ್ ಭೂರೆಗಳ ಮುಂದೆ ನಾವೂ ಡ್ರಿತೀಯ ಫಿಡ್ಲ್ ಬಾರಿಸಬೇಕೆಂದು ಅವರ ಬಯಕೆಯೆ? ಬ್ರಿಟಿಷರ ಅನುಕೂಲಕ್ಕಾಗಿ ನಾನು ಭಾರತವನ್ನು ವಿಭಾಗಿಸಬೇಕೆ? 'ಇಸ್ಲಾಂ ಗಂಡಾಂತರದಲ್ಲಿದೆ' ಎಂಬಸುಳ್ಳು ಬೊಬ್ಬೆಯನ್ನು ನಾನೂ ಹಾಕಬೇಕೆ? ನೇತಕ್ಕೆ ಸ್ವಾತಂತ್ರ್ಯ ದೊರೆಯುವ ಮೊದಲೇ ಕೆಲವು ಶರ್ತಗಳನ್ನೊಪ್ಪಿಕೊಳ್ಳಬೇಕೆಂದು ನಾನು ಕೇಳುವುದರಲ್ಲೇನಾದರೂ ಮುಠ್ಯಾದೆಯಿದೆಯೆ? ಕೊನೆಯದಾಗಿ ಅವರಂತೆ ನಾನೂ,ನನ್ನ ಬಂಧು ಭಾಂತೀಯರ ಹಿತಸಾಧನೆಗಾಗಿ ವಿಧಾಯಕ ಕಾರ್ಯವಾವುದನ್ನೂ ಮಾಡದೆ ಕೇವಲ ಪ್ರದರ್ಶನಾರ್ಥಿ ಮಡಿಯುತ್ತಾ ಹೋಗಬೇಕೆ? ಇಲ್ಲ; ಸಾವರ ಸಾವಿರ ಮಾತಿಗೂ ಇಲ್ಲ. ಇಂತಹ ಹೇಯ ಸ್ಥಿತಿಗಿಳಿಯುವ ಬದಲಿಗೆ ನಾನು ಸಾಯುವದೇ ವಾಸಿ. ನಾನು ಸೇವಾಜೀವಿ. ಕೆಲಸ ಬಿಟ್ಟಿರುವದೆಂದರೆ ನನಗೆ ಸಾವಿಗೆ ಸಮಾನ. ಒಬ್ಬ 'ಕ್ವಯೆಟ್—ಇ—ಅಝುಮಾ' ಆಗಬೇಕೆಂಬ ಮಹತ್ವಾಕಾಂಕ್ಷೆ ನನಗಿಲ್ಲ. ಭಾರತ ಸ್ವತಂತ್ರ್ಯನೆಂಬ ಫಲ ತಪ್ಪಸ್ಸಿಗೆ ನನ್ನನ್ನು ನಾನು ಆರ್ಪಿಸಿಕೊಂಡಿದ್ದೇನೆ. ಈ ಜೀವದ ಕೊನೆಯ ಶ್ವಾಸವನ್ನು ಅಲ್ಲಿದ್ದೇ ಎಳೆಯುತ್ತೇನೆ."

ಮುಸ್ಲಿಂ ಜನತೆಯನ್ನು ತಪ್ಪುಹಾದಿಗೆ ಳೆದ ಕೆಲವು ಸ್ವಾರ್ಥಿಗಳಿಂದಾಗಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯದಲ್ಲಿ ಪರಮಾವಧಿ ಪತನಕ್ಕೊಳಗಾದ ಆ ಮೂಕ, ಅನಕ್ಷರಜ್ಞ ಮಿಲಿಯಾವಧಿ ಮುಸಲ್ಮಾನರಿಗಾಗಿ, ತುಂಬಾ ಹೃದಯದಿಂದ ಮರುಕಪಡುತ್ತಾ ಖಾನ್ ಅಬ್ದುಲ್ ಗಫರ್ ಖಾನರಂದಿದ್ದಾರೆ. "ಮುಸ್ಲಿಂ ಲೀಗಿನ ಆತ್ಮಹತ್ಯಾ ಧೋರಣೆಯನ್ನು ಅನುಕರಿಸುವದರ ಪ್ರತಿಫಲವಾಗಿ ನಿಮ್ಮನ್ನೆಂತಹ ದುರದೃಷ್ಟವು ಕಾದಿದೆ ಎಂಬುದನ್ನು ನೋಡಿಕೊಳ್ಳಿರಂದು ನನ್ನ ಅನುಯಾಯೀ ಸಹೋದರರನ್ನು ಎಚ್ಚರಿಸುತ್ತೇನೆ ಬ್ರಿಟಿಷರ ಹಣ ಮತ್ತು ಪ್ರಚಾರದ ಸಹಾಯದಿಂದ, ಪ್ರಜ್ಞಾಶೂನ್ಯ ಮುಸಲ್ಮಾನರ ಮೇಲೆ ಇಂತಹ ವಂಚನೆ ನಡೆಯಹತ್ತಿರುವದು ಕೇವಲ ದುರದೃಷ್ಟವೇ ಸರಿ. ಹೇಗಿದ್ದರೂ ಇದು ಕ್ಷಣಿಕ ಕಾಶಲ್ಯ. ನುತಭ್ರಾಂತಿ ಮತ್ತು ಹಿಂದೂ ಮತದ ಮೇಲಿನ ದ್ವೇಷ ಪ್ರಚಾರವೊಂದನ್ನೇ ಅವಲಂಬಿಸಿರುವ-ಪ್ರತಿಗಾಮಿ ಮನೋವೃತ್ತಿಯನ್ನು ಆಧರಿಸಿರುವ—ನಾಮಮಾತ್ರ ವಿಧಾಯಕ ಕಾರ್ಯಕ್ರಮ ಕೂಡಾ ಇಲ್ಲದ—ಮುಸ್ಲಿಂ ಲೀಗಿನಂತಹ ಒಂದು ಸಂಸ್ಥೆಯು ನಿರೀಕ್ಷೆಗೆ ಮೊದಲೇ ನಿರ್ನಾಮ ಹೊಂದಲು ಬದ್ಧವಿದೆ."

ಅಖಿಲ ಕರ್ನಾಟಕದಲ್ಲಿ ಶಾಸ್ತ್ರೋಕ್ತ ಶುದ್ಧ ಪಂಚಾಂಗವೆಂದರೆ—

ಉಡುಪಿ ಪಂಚಾಂಗ

ವ್ಯಯ ಸಂ॥ 1946-'47.

ಸರ್ವ ಜನೋಪಯುಕ್ತ ಅನೇಕ ವಿಷಯಗಳಿಂದ ಕೂಡಿಕೊಂಡಿರುತ್ತದೆ. ಹೆಚ್ಚಿನ ವಿವರಗಳಿಗೆ

ಅತ್ತೂರು ವಾಸುದೇವ ಉಡುಪ
ಸಂಪಾದಕ
ಶ್ರೀ ರವಿಪ್ರಸಾದ ಜ್ಯೋತಿಷಾಲಯ
ಕೊಯಂಬುತ್ತೂರು

ದಿ ಮೂಲ್ಕಿ ಬ್ಯಾಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬ್ಯಾಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

—ಮಕ್ಕಳನ್ನು ಹಡೆಯುವುದು ಸಾಕು—

ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ಪೋಗಗೃಹಸ್ಥ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಸೂತ್ರೌಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಜಿಕ್ಕೆ:—ಹರವೀಪಲ್ಲೆ ಬಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟ ಚಾರ್ಜು ೧೫ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ವಿಡಂಬರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೊಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ, ಡಾವಣಗೇರಿ:—ಡಾವಣಗೇರಿ ಪ್ರೆಸ್ಸ. ಆರ್. ಎಲ್. ಕನವಲದಾಸ, ಕೆವಿಸ್ಟ್ಸ, ಹಾನೇಡ್ ಬ್ಯಾಡಗಿ.

Ayurveda Oushadalaya, GADAG CITY.

ಬಾಣಂತಿಯರಲ್ಲಾಗಲಿ ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಲೈಸಿ ತಯಾರಿಸಲ್ಪಟ್ಟ **ಅಮೋಘ ವಾವ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸ್ತನಿಕಾ ರಸಾಯನ

(ಇದು ರಜಿಸ್ತರು ಮಾಡಲ್ಪಟ್ಟಿದೆ.)

೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪ರವಿವಸಗಳಿಗೆ ಬರುವವು. ಆಂದರೆ ಕೇವಲ ೪ ರೂಪಾಯಿಗೇ ಒಂದು ಬಾಣಂತಿತನಕ್ಕೆ ಸಾಕಾಗುವದು. ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 **ಕೊಡಿಯಾಲಬೈಲು, ಮ.ಕ.**

ದಿನಕ್ಕೊಂದು ನಗೆ; ಆರೋಗ್ಯದ ಬಗೆ.

ನಗುವಿನೊಂದಿಗೆ ವಿಚಾರದ ಕಿಡಿಯೂ ಬೆಳಗಬೇಕೆ?

ಹಾಗಿದ್ದರೆ

ವಿಷ್ಣುವಿನ ದಶಾಪರಾಧಗಳು

ಅರ್ಥಾತ್ ದಶಾವತಾರಗಳು.

ಎಂಬ ದಶಾವತಾರಗಳ ಕುರಿತಾದ ವಿಡಂಬನ ಗ್ರಂಥವನ್ನೋದಿರಿ.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರರಾದ

ಶ್ರೀ. ಎಂ. ವಿ ಹೆಗ್ಡೆಯವರ ಕೃತಿ.

ಬೆಲೆ ೦—12—೦

ಪ್ರತಿಗಳಿಗೆ ಉದುಸಿಯ ತರಿಯರ ಪ್ರಕಟಚಕ್ಕಾಗಲಿ, ನವಭಾರತ ಪುಸ್ತಕ ಭಂಡಾರಕ್ಕಾಗಲಿ ಬರೆದು ತರಿಸಿಕೊಳ್ಳಬಹುದು.

ಮಂಗಳೂರು.

ಪ್ರಾಂತೀಯ ಅಸೆಂಬ್ಲಿಗೆ ಕಾಂಗ್ರೆಸ್ ಪಕ್ಷದಿಂದ ಉಮೇದ್ವಾರರಾಗಿ ನಿಲ್ಲಲು ಬಯಸುವವರು ಇದೇ ತಾ. ೩೫ರೊಳಗೆ ತಮ್ಮ ಅರ್ಜಿಯನ್ನು ಪ್ರಾಂತೀಯ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಗೆ ಕಳುಹಿಸಬೇಕೆತ್ತಲ್ಪೆ. ಇಪ್ಪರಲ್ಲಿ ಈ ಕೆಳಗಿನ ಮಹನೀಯರು ಪಾರ್ಲಿಮೆಂಟರಿ ಸಮಿತಿಗೆ ತಮ್ಮ ಅರ್ಜಿಗಳನ್ನು ಕಳುಹಿಸಿರುವರಾಗಿ ತಿಳಿಯುತ್ತೇವೆ:—ಶ್ರೀಗಳಾದ ಕೆ. ಆರ್. ಕಾರಂತ್, ಮೊಳಹಳ್ಳಿ ಶಿವರಾವ್ ಮತ್ತು ಎಂ. ಉಮೇಶರಾಯರು (ಪುತ್ತೂರು ಡಿವಿಜನ್) ಡಾ। ಯು. ಪಿ. [illegible]ಮಲ್ಯ ಮತ್ತು ಬಿ. ಪಾರ್ಮೋದರ ಬಾಳಿಗ (ಮಂಗಳೂರು ಡಿವಿಜನ್) ಎ. ಬಿ. ಶೆಟ್ಟಿ (ಕುಂದಾಪುರ ಡಿವಿಜನ್) ಕೆ. ಈಶ್ವರ (ಹರಿಜನ ಸ್ಥಾನಕ್ಕೆ)

ಕೆನರಾ ಚೇಂಬರ್ ಆಫ್ ಕಾಮರ್ಸ್ ಇದರ ವಾರ್ಷಿಕೋತ್ಸವವು ಇದೇ ತಾ ೧೧ರಂದು ಮೊನ್ನೆ ತಾನೆ ಕೇಂದ್ರನ್ಯಾಯವಿಧಾಯಕ ಸಭೆಗೆ ಆರಿಸಲ್ಪಟ್ಟಿರುವ ಶ್ರೀ। ಕರುಣಾಕರ ಮೆನೋನರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಎಲ್. ಐ. ಎಮ್ ವೈದ್ಯರ ಪ್ರಾಂತೀಯ ಸಮ್ಮೇಲನವು ಇದೇ ತಾ. ೨೬, ೨೭ರಂದು ಗಣಪತಿ ಹೈಸ್ಕೂಲಿನಲ್ಲಿ ಜರಗಲಿದೆ. ಶ್ರೀ। ಎ. ಕರುಣಾಕರ ಮೆನೋನ್, ಎಂ. ಎಲ್. ಎ. ಅವರು ಸಮ್ಮೇಲನದ ಸಾಮಾನ್ಯ ಅಧಿವೇಶನದ ಉದ್ಘಾಟನೆಯನ್ನು ನೆರವೇರಿಸುವರು. ವೈದ್ಯರತ್ನ ಕೆಪ್ಪಣ್ ಶ್ರೀನಿವಾಸ ಮೂರ್ತಿ ಅವರು ಸಮ್ಮೇಲನದ ವೈಜ್ಞಾನಿಕ ಅಧಿವೇಶನವನ್ನು ತೆರೆಯುವರು. ವಾ। ಸೂರ್ಯನಾರಾಯಣರಾವ್ ಮತ್ತು ಡಾ। ಪರಾಂಕುಶ ಇವರು ಸಾಮಾನ್ಯ ಮತ್ತು ವೈಜ್ಞಾನಿಕ ಸಮ್ಮೇಲನಗಳ ಅಧ್ಯಕ್ಷತೆಯನ್ನು ವಹಿಸುವರು.

ಜಿಲ್ಲಾ ಕಸ್ತೂರಿ ಬಾ ಸಮಿತಿಯ ಸಭೆ ಯು ತಾ. ೧೫ರಂದು ಶ್ರೀಮತಿ ರಾಧಾಬಾಯಿ ಶೂಟೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೈರಂಪಳ್ಳಿಯ ತಿಲಕಾಶ್ರಮವನ್ನು ಸಂದರ್ಶಿಸಿದ್ದ ಶ್ರೀನಾರಾಯಣರಾಯರು ತಮ್ಮ ವರದಿಯನ್ನೊಪ್ಪಿಸಿದ ಬಳಿಕ, ಅಲ್ಲಿ ಒಂದು ಶಿಕ್ಷಣ ಶಿಬಿರವನ್ನೂ ಆರೋಗ್ಯ ಕೇಂದ್ರವನ್ನೂ ತೆರೆಯಲು ಬೇಕಾದ ಬಜೆಟನ್ನು ತಯಾರಿಸಲು ಶ್ರೀ ನಾರಾಯಣ ರಾಯರನ್ನು ನಿಯೋಜಿಸಲಾಯಿತು.

ಜಾನುವಾರುಗಳ ಪ್ರದರ್ಶನ ಒಂದು ನಗರದ ಪಶು [illegible] ತಾ. ೧೫ರಂದು ನೆರವೇರಿತು. ನಗುವ ನಾನಾ ಭಾಗಗಳಿಂದ, ಎಮ್ಮೆ, ದನ, ಗಾಡಿಹೋರಿ, ಬೀಜದ ಹೋರಿ, ಉಳುವ ಎತ್ತು ಮತ್ತು ಸಿಟಿದ ಕೋಣ, ಕುದುರೆ ಆಡುಗಳು ಪ್ರದರ್ಶನದಲ್ಲಿ ಸೆರೆದಿದ್ದವು. ಕೊನೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಪಶುಪಾಲನೆಯ ಕುರಿತು ಭಾಷಣಗಳಾದುವು. ಉತ್ತಮ ಪಶುಗಳಿಗೆ ಬಹುಮಾನ ಹಂಚಲಾಯಿತು.

ಅ. ಭಾ. ಚೇಸು ವ್ಯವಸಾಯದ ಅಸೆಯ ಸಮ್ಮೇಲನ-ಕೆನರಾ ಹೈಸ್ಕೂಲಿನ ಬುವನೇಂದ್ರ [illegible]. ಭವನದಲ್ಲಿ ಇದೇ ತಾ. ೨೧-೨೨ರಲ್ಲಿ ಶ್ರೀ। ಕೆ. ಬಿ. ಜಿನರಾಜ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸ್ವಾಗತಾಧ್ಯಕ್ಷ ಶ್ರೀ। ಎಮ್ ಎನ್. ಭಿಡೆಯವರು ಸ್ವಾಗತ ಭಾಷಣ ಮಾಡಿದ ಮೇಲೆ ಊರು ಪರವೂರುಗಳ ಮಹನೀಯರು ಕಳುಹಿಸಿದ ಶುಭ ಸಂದೇಶಗಳನ್ನೋದಿದರು. ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್; ಸರ್. ಸಿ. ವಿ. ರಾಮನ್; ಸರ್. ಜೋಗೇಂದ್ರ ಸಿಂಗ್, ರಾಜಾಜಿ ಮೊದಲಾದವರು ಸಂದೇಶಗಳನ್ನು ಕಳುಹಿಸಿದ್ದರು. ಮದ್ರಾಸ್ ಸರಕಾರದ ಕೃಷಿ ಇಲಾಖೆಯ ಜೋಯಿಂಟ್ ಡೈರೆಕ್ಟರ್ ರಾವ್ ಬಹದ್ದೂರ್ ಎಸ್. ರಾಘವೇಂದ್ರರಾಯರು ಸಮ್ಮೇಲನದ ಉದ್ಘಾಟನೆಯನ್ನು ನೆರವೇರಿಸಿದರು. ಅಧ್ಯಕ್ಷರ, ಭಾಷಣಾನಂತರ ಮದ್ರಾಸ್ ಸರಕಾರದ ಎಟಮಾಲಜಿಸ್ಟ್, ಶ್ರೀ। ಎಂ. ಸಿ. ಚಿರಿಯನ್; ರಾವ್ ಬಹದ್ದೂರ್, ಕೆ. ಪಿ. ಅಳ್ವ; ಮಿಲಾಗ್ರಿಸ್ ಹೈಸ್ಕೂಲಿನ ಫಾದರ್ ಪಿಂಟೊ, ರಾಜಸ್ಥಾನದಸ್ಟೇಟ್ ಗಾರ್ಡನ್ ಸುಪರಿಂಟೆಂಡೆಂಟ್ ಸಿ. ಎನ್. ಶಿವಪುರಿ; ಮದ್ರಾಸಿನ ಇಂಜಿನಿಯರ್ ಪಿ. ಎನ್. ವೆಂಕಟರಾವ್; ಕೆ. ಶಿವರಾಮ ಕಾರಂತ; ಸಿಟೋನ್ ಸರಕಾರದ ಎಸಿಸ್ಟೆಂಟ್ ಎಟಮಾಲಜಿಸ್ಟ್ ಜಯರತ್ನಂ; ಪುಯಿ ಕೋಟಿಯ ದೇವಸೇನನ್ ಮೊದಲಾದವರು ಚೇಸು ವ್ಯವಸಾಯದ ವಿಷಯವಾದ ತಮ್ಮ ಅನುಭವಗಳನ್ನು ಸೊಗಸಾಗಿ ವಿವರಿಸಿದರು. ಮೊದಲ ದಿನ ಮಧ್ಯಾಹ್ನದ ನಂತರ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರರ್ ರಾವ್ ಬಹದ್ದೂರು ಎಂ. [illegible]ರಿಯಪ್ಪನವರು ಚೇಸು ಪ್ರದರ್ಶನವನ್ನು ತೆರೆದರು. ಸಂಜೆ ಆ ತಿಥಿಗಳಿಗೆ ಸತ್ಕಾರ ಕೂಟವಿತ್ತು. ಎರಡನೆಯ ದಿನ ಜನರಲ್ ಮೋಡಿ ಮಾಟಿಂಗ್, ರಕ್ಷಾ ಮತ್ತು ಇನಾಮು ಹಂಚೋಣ ಮೊದಲಾದ ಕಾರ್ಯಗಳು ನೆರವೇರಿದುವು. ಈ ಚೇಸು ವ್ಯವಸಾಯಗಾರರ ಸಮ್ಮೇಲನವನ್ನು ಇಷ್ಟು ಉತ್ತಮ ರೀತಿಯಲ್ಲಿ ಯಾವುದೆಮುಂದು ಕುಂದು ಕೊರತೆಗಳಿಲ್ಲದೆ ನೆರವೇರಿಸಿದ ಕಾರ್ಯದರ್ಶಿ ಶ್ರೀ। ಪೈಲೂರು ಲಕ್ಷ್ಮೀನಾರಾಯಣ ರಾಯರು ಅಭಿನಂದನೀಯರು.

ಸ್ಥಳೀಯ ಬಾರ್ ಎಸೋಸಿಯೇಶನ್ನಲ್ಲಿ ಶ್ರೀ। ವೆಂಕಟ್ರಾಯ ಬಾಳಿಗರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವು ಮಾನ್ಯವಾಯಿತು. ಜಿಲ್ಲಾ ಮತ್ತಿತರ ಕೋರ್ಟುಗಳೂ, ೨೨ ೧೭ರಂದು ಆರಂಭವಾಗಲಿರುವ ಮರುದಿನಕ್ಕೆ ಮುಂದುವರಿಸಲ್ಪಟ್ಟುವು.

ಉಡುಪಿ.

ವಿದಾಯ ಸತ್ಕಾರ-ಸ್ಥಳೀಯ ಬೋರ್ಡ್ ಹೈಸ್ಕೂಲಿನ ಅತ್ಯುತ್ಸಾಹೀ ಜನಪ್ರೀತ ಉಪಾಧ್ಯಾಯರಾದ ಶ್ರೀ. ಯು. ವೆಂಕಟ್ರಾವ್, ಬಿ.ಎ.ಎಲ್.ಟಿ. ಅವರು ಜನವರಿ ತಿಂಗಳಲ್ಲಿ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗಲಿರುವ ಕಾರಣ ಆ ಶಾಲೆಯ ಹೈಸ್ಕೂಲು ವಿದ್ಯಾರ್ಥಿಗಳು ವಿದಾಯ ಸತ್ಕಾರ ಕೂಟಗಳ ಸ್ನೇಹರ್ಪಡಿಸಿ ತಮ್ಮ ಗುರು ಭಕ್ತಿಯನ್ನು ಪ್ರದರ್ಶಿಸಿದರು. ಅಂತೆಯೇ ಅಧ್ಯಾಪಕ ವೃಂದದವರು ಸಹ ಡಿನ್ನರ್ ಪಾರ್ಟಿಯನ್ನೇರ್ಪಡಿಸಿ ಶ್ರೀ ರಾಯರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ಮಿಃ ಆರ್. ಫೆರ್ನಾಂಡೀಸ್, ಹೆಡ್ಮಾಸ್ಟರ್ ಮೊದಲಾದವರು ಶ್ರೀ ರಾಯರು ಶಾಲೆಗೆ ಹಾಗೂ ಜನತೆಗೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರು.

ಧೂಳು ಹಾರಾಟ- ನಗರವಾಸಿಗಳು ಸರಾಗವಾಗಿ ತಿರಿಗೆಯನ್ನು ಕೊಡುತ್ತಿರುವ ರಾದರೂ ಅವರ ಆರೋಗ್ಯ ಪಾಲನೆಯ ಕಡೆಗೆ ಮುನಿಸಿಪಾಲಿಟಿಯು ದಿವ್ಯ ದೃಷ್ಟಿ ಹರಿದಂತೆ ಕಾರ್ಯ ರೂಪದಲ್ಲಿ ಕಂಡು ಬರುವುದಿಲ್ಲ. ರಸ್ತೆಗಳಲ್ಲಿ ಬಸ್, ಲೋರಿಗಳ ಓಡ್ಯಾಟದಿಂದ ಧೂಳು ಹಾರುತ್ತಲೇ ಇರುವುದರಿಂದ ವಾರಿಗರು ಧೂಳನ್ನು ಸೇವನೆ ಮಾಡದೆ ನಿರ್ವಾಹವಿಲ್ಲ. ರಸ್ತೆಗಳಿಗೆ ನೀರು ಹಾಕುವ ಏರ್ಪಾಡು ಜರೂರು ಆಗಬೇಕು.

ಬೀಡಿ ಲೇಬರ್ ಯೂನಿಯನಿನ-ಮಾಸಿಕ ಸಭೆಯು ತಾ 20-12-45ರಲ್ಲಿ ಸಂಘದ ಕಾರ್ಯಾಲಯದಲ್ಲಿ ನೆರವಿತು. ಯೂನಿಯನಿಗೆ ಸೇರಿದವರೆಂದು 13 ಮಂದಿ ಕೆಲಸಗಾರರನ್ನು ಕಾಸರಗೋಡಿನ ಕೊಲ್ಲಂಪಾಡಿ ಅಬ್ದುಲ್ ಸಾಹೇಬ್ ಶೇಕ್ಕರ ಮೂಲಕವು ತೆಗೆದು ಹಾಕಿದುದನ್ನು ತೀವ್ರವಾಗಿ ಖಂಡಿಸಿ, ನಿರುದ್ಯೋಗಿ ಪುಜೂರರಿಗೆ ಸಹಾನುಭೂತಿ ಸೂಚಿಸಿ, ಅವರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಬೇಕೆಂದು ಒತ್ತಾಯಿಸುವ ಠರಾವಾಯಿತು. ಕಾಸರಗೋಡಿನ ನಾಗರಿಕರು ಈ ಕುರಿತು ಪ್ರಯತ್ನಿಸಬೇಕೆಂದು ಅವರನ್ನು ವಿನಂತಿಸಿಕೊಳ್ಳಲಾಗಿದೆ.

ಅಧ್ಯಾಪಕರ ಯೂನಿಯನ್ ಸಭೆ ತಾ. 23-12-45ನೇ ಆದರಾತ್ರಿ ಸರಸ್ವತಿ ಬಾಲಿಕಾ ಪಾಠಶಾಲೆಯಲ್ಲಿ ಉಡುಪಿ ತಾಲೂಕು ಎಯಿಡೆಡ್ ಎಲಿಮೆಂಟರಿಶಾಲಾ ಉಪಾಧ್ಯಾಯರಯೂನಿಯನಿನ ಸಭೆಯು ಜರಗಿತು. ಕಳೆದ ಮಹಾ ಸಭೆಯಲ್ಲಿ ಆದ ನಿರ್ಣಯಗಳಿಗೆ ಸರಕಾರದಉತ್ತರಬಾರದಿದ್ದುದಕ್ಕೆ ಸಭೆಯು ಸಂತಾಪವನ್ನು ಸೂಚಿಸಿತು. ಎಯಿಡೆಡ್ ಶಾಲಾ ಉಪಾಧ್ಯಾಯರಿಗೆ ಇತರರಂತೆ ತುಟ್ಟಿಭತ್ತೆ ಸಿಗಬೇಕು. VIII ನೇ ದರ್ಜೆಯ ವಿದ್ಯಾರ್ಥಿಗಳು ಇಂಗ್ಲಿಷ್ ಸಮೇತ ಪಬ್ಲಿಕ್ ಪರೀಕ್ಷೆಯಲ್ಲಿ ಪಾಸಾದರೆ ಅಂಥವರನ್ನು IV ಫೋರ್ಮ್‌ಗೆ ಸೇರಿಸಲೇಬೇಕೆಂದು ಸರಕಾರದ ಹುಕುಂ ಆಗಬೇಕು, ಇತ್ಯಾದಿ ಠರಾವುಗಳಾದುವು.

ಕಟ್ಟಾಡಿ-ಶ್ರೀ ಎಸ್. ವಿ. ಎಸ್. ಹೈಸ್ಕೂಲಿನ ನೂತನ ಕಟ್ಟಡದ ಪಂಕು ಸ್ಥಾಪನೆಯನ್ನು ಶ್ರೀ ಪಿ. ಜನಾರ್ದನ ನಾಯ್ಕರು ತಾ 21 ರಲ್ಲು ತಮ್ಮ ದಿವ್ಯ ಹಸ್ತದಿಂದ ನೆರವೇರಿಸಿದರು. ಈ ಸಮಾರಂಭದ ಸಲುವಾಗಿ ಶಾಲಾ ಮಕ್ಕಳಿಗೆ ಸಿಹಿ ತಿನಸು ಕೊಡಲಾಯಿತು.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli, Nileshwar and Surathkal South Canara.**

PROMPT ATTENTION, A FAIR DEAL and a SENSE of RESPONSIBILITY and RESPONSIVENESS are our guiding PRINCIPLES and the outstanding features of our UNIFORM SERVICE.

Every kind of upto-date Banking business facility is provided by this POPULAR and COSMOPOLITAN institution on sound lines and advantageous terms.

Please ascertain business particulars from any of our Offices at the above places.

Date 25th April 1945.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪ ದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೦ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:ಡಾವಣಗೇರಿ ಸೈನ್ಸ್. ಪತ್ರವ್ಯವಹಾರ ಮಾಡಬೇಕಾದ ವಿಳಾಸ ಬರೆಯಿರಿ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

ಮುಟ್ಟಾಗುವಿಕೆ

ಹಲವಾರಿಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಆಥವಾ ಇನ್ನಾವಕಾರಣವಿದ್ದರೂ— 'ಋತುಮಾರಿ ಮಾತ್ರೆಗಳು' ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬಲ ರೂ. ೨-೫ ಕೈಯಿಂದ ಕೇಳುಗಳಿಗೆ ರೂ. 5. 6ತಿಂಗಳ ಬರ್ತ್ ಕಂಟ್ರೋಲಿಗೆ ರೂ. 4|- (ವಿ. ಪಿ. 12 ಆಣೆ ಆಲಾಯಿದ.)

Mrs. P. DEVEE.

F. D. S. (A. E.) Tollygunge, Calcutta,

ಸ್ವಾತಿಸ್ಟ್: ಸಾ ಕೆಂಪೆ, ಮಂಗಳೂರು

NOTICE

IN THE COURT OF THE DT. MUNSIFF OF MANGALORE.

O. P. 39 of 1945.

Venkatraya & others —Petitioners,

Kalinga Rao & others —Respondents.

To

6 Narayana Rao, 7 Subrayasons of Padavu Annuraya- 9 Padmavathi, wife of Annuraya, all reside at Padavu village, Mangalore Taluq.

The above named plaintiff petitioners have made the above application praying that they may be permitted to sue in forma panaperies for the partition of the family properties and that the said petition stands posted to 29-12-'45 for your appearance Take notice that the said petition will be heard and decided on the said day.

Mangalore, 14-12-'45 } R. Y. S. Bhatt, Vakil for petitioners.

AGAINST DIABETES

all its dreadful results

Consult Specialists:

Dr. Alvas' Research Institute, FAJIR

S. KANARA.

ದ್ವಿಪಣ ಕನ್ನಡ

ಬಾರಕೂರು–ಸ್ಥಳೀಯ ಬೋ. ಹಾ. ಎ. ಹುಡುಗಿಯರ ಶಾಲಾ ರಕ್ಷಕರ ದಿನಾಚರಣೆಯು ಜಿಲ್ಲಾ ಜೋರ್ಡ್ ಅಧ್ಯಕ್ಷರಾದ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ತಾ. 15-12-45ರಂದು ಜರಗಿತು. ಕಾರ್ಯಕ್ರಮದಂತೆ ಮಕ್ಕಳ ಚಿಕ್ಕ ನಾಟಕ ಇತರ ಚುಟುಪಟಿಕೆಗಳಾದ ಬಳಿಕ ಸಭಿಕರ ಭಾಷಣದಲ್ಲಿ ಶ್ರೀ. ಡಾ! ಪಿ ಕೃಷ್ಣ ಬ್ಯಾರಿಯವರು:.....ಹಿಂದೊಮ್ಮೆ ಮಾನ್ಯ ಅಧ್ಯಕ್ಷರು ಬಾರಕೂರಿಗೆ ಬಂದಾಗ ಇಲ್ಲಿ ಗೊಂದು ಹ್ಯಾಸ್ಕೂಲು ಆಗತ್ಯವೆಂದೂ, ಇದು ಉತ್ತಮ ಕೇಂದ್ರವೆಂದೂ, ಊರವರು ಈ ಕಾರ್ಯಕ್ಕಾಗಿ ಮುಂದಾಗಬೇಕೆಂದೂ, ಬೀಜ ಮಾತ್ರ ಪರಿಸಿ ಹೋದುದನ್ನು ಅವರ ಗಮನಕ್ಕೆ ತಂದು, ಇಂದು ನಾವು ತಮ್ಮ ಸೂಚನೆಯಂತೆ ಹ್ಯಾಸ್ಕೂಲು ಆಗುವ ಬಗ್ಗೆ ಯತ್ನದಲ್ಲಿರುವುದಾಗಿಯೂ, ತಮಗೆ ಹ್ಯಾಸ್ಕೂಲಿನ ಮಂಜೂರಾತಿ ಸಿಗುವ ಬಗ್ಗೆಮಾನ್ಯ ಅಧ್ಯಕ್ಷರು ಪ್ರಯತ್ನಿಸುವುದಾಗಿ ಭರವಸೆ ಕೊಡಬೇಕೆಂದು ಊರವರ ಪರವಾಗಿ ಅವರನು ಕೇಳಿಕೊಂಡರು. ಅಧ್ಯಕ್ಷರು ತಮ್ಮ ಭಾಷಣ ಮದ್ರಾಸ್ ಎಸೆಂಬ್ಲಿ ಸಭೆಯಲ್ಲಿವ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 71/1945

1 ಕಿಟ್ಟಣ ಸೆಟ್ಟಿ–ತ್ಯಾಂಪಣ್ಣ ಸೆಟ್ಟಿ ಆಳಿಯ, ವ ಕಾಂಜಿಲ ಅತಪ್ಪ ಸೆಟ್ಟಿ ಅಂಡಿಕುಟುಂಬದ ಯಜಮಾನ ವ ಆಡಳ್ತೆದಾರ–ಉಪ್ಪಿನಂಗಡಿ ಕಸಬೆಯ ಕಾಂಜಿ, ಯೆಂಬಲ್ಲಿ ಪುತ್ತೂರು ತಾಲ್ಲ್ಯ; 2 ಸಂಕಮ್ಮ–ಮಂಜಕ್ಕಿಯ ಮಗಳು, 3 ಹೊಂನಮ್ಮ–ಸಂಕಂಮನ ಮಗಳು, 4 ಬಾಬು ಸೆಟ್ಟಿ–ಸಂಕಂಮನ ಮಗ, 5 ಶಿವ–ಸಂಕಯನ ಮಗ, 6 ಪೋನಪ್ಪ–ಸಂಮನ–ಮಗ–ಮೃನೆರ ಗಾರ್ಡಿಯಾನ ತಾಯಿ 2ನೇ ಆರ್ಜದಾರಳು, 7 ಸೀತು–ಹೊಂನಂಮನ ಮಗಳು–ಮೃನೆರು–ಗಾರ್ಡಿಯಾನ ತಾಯಿ 3ನೇ ಆರ್ಜದಾರಳು,—2ರಿಂದ 7ನೇ ವರೇಗಿನವರು ಉಪ್ಪಿನಂಗಡಿ ಕಸಬೆಯ ಕಾಂಜಿಲ ಎಂಬಲ್ಲಿರುವವರು, ಪುತ್ತೂರು ತಾಲ್ಲ್ಯ.

—ಆರ್ಜದಾರರು.

ಯೆದ್ರಿ

1 ಸೀತು–ಸಂಕಂಮನ ಮಗಳು ವ ಸಂಕಪ್ಪ ಸೆಟ್ಟಿ ಹೆಂಡ್ತಿ. ಉಳ್ಳಾಳ ಗ್ರಾಮದ ಉಳ್ಳಾಳ ಗುತ್ತಿನ ಮನೆ ಬಳಿ, ಮಂಗ್ಳೂರು ತಾಲ್ಲ್ಯ (ಭಾಗದ ಯಜಮಾನ್ರು); 2 ಲಕ್ಕಿ–ಲಕ್ಷ್ಮಿ–ಹೆಂಗ್ಸಿನ ಮಗಳು ನ [illegible] ಸೆಟ್ಟಿ ಹೆಂಡ್ತಿ. ಮಂಗ್ಳೂರು ತಹಸೀಲ್ ಜಸ್ಟು ಎಂಬಲ್ಲಿ. ಮಂಗ್ಳೂರು ತಾಲ್ಲ್ಯ (ಭಾಗದ ಯಜಮಾನ್ರು); 3ಸೋನು–ಸಂಕಂಮನ ಮಗಳು ವ ನಾರಾಯಣ ಕೀಲಾರ್ತೆ ಹೆಂಡ್ತಿ. ಆರ್ಯುವೇದ ಗ್ರಾಮ, ಮಂಗ್ಳೂರು ತಾಲ್ಲ್ಯ (ಭಾಗೆದ ಯಜಮಾನ್ರು)—ಎದ್ರಿರು.

ಸದ್ರಿ ಎದ್ರಿರಿಗೆ ಮತ್ತು ಸಮಸ್ತ ಜನರಿಗೆ ಯೀ ಮೂಲ್ಕ ತಿಳಿಯಪಡಿಸುವುದೇನಂದ್ರೆ,

ಮೇಲ್ಕಂಡ ಆರ್ಜಿಯಲ್ಲಿ ಆರ್ಜದಾರರು 1ನೇ ಆರ್ಜದಾರ ಕಿಟ್ಟಣ ಸೆಟ್ಟಿ ಹೆಸರಲ್ಲಿ ಮೃತ ಕಾಂಜಿಲ ಅತಪ್ಪ ಸೆಟ್ಟಿಗೆ ಬಹಾ ಸಾಲ ಮೂಲಗಳ ವಸೂಲಾತಿಗೆ ಸದ್ರಿ 1ನೇ ಆರ್ಜದಾರನಿಗೆ ಜನರಲ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಆರ್ಜದಾರರು ಮೂತಿದ ಮೇಲ್ಕಂಡ ಆರ್ಜಿಯು ತಾರೀಕು 17-1 1946ಕ್ಕೆ ತನ್ನಿಗೆ ಯಿರುವುದರಿಂದ ಆ ಕುರಿತು ನಿಮಗು ಆಕ್ಷೇಪಣೆಯಿದ್ರೆ ಸದ್ರಿ ತನ್ನ ವ್ಯಾದೆ ದಿವ್ಸ ಹಗಲು 10 ಗಂಟೆಗೆ ಈ ಕೋರ್ಟು ಮುಂದೆ ನೀವು ಸ್ವತಹಾ ಯಾ ವಕೀಲರಿ ವ್ತಾರಾ ಹಾಜ್ರಾಗಿ ಉತರಪರಿಸಿಕೊಳ್ಳಬಿದ್ರೆ, ನಿಮ್ಮನ್ನು ನಿಷಾಯಿ ಮಾಡಿ ಕೋರ್ಟಿನವರು ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು. ತಿಳಿದಿರಲಿ.

ಕೆ. ಯನ್. ಮಲ್ಯ,
ಆರ್ಜದಾರರ ವಕೀಲ.

ನೊಕ್ಕಾಂ: ಪುತ್ತೂರು.
ತಾ. 20-12-1945.

ವೆಳ್ಳಿ ಡಾ ಗಾರಿಯವರ ಕೀರ್ತಿಯ ತನ್ನ, ಪುರ್ಣ ಸಹಾಯ ಸಹಾನುಭೂತಿಯನ್ನು ವ್ಯಕ್ತ ಗೊಳಿಸಿ, ತಾನು ಆ ವಿಚಾರದಲ್ಲಿ ಶಕ್ತಿ ಮೀರಿ ಯತ್ನಿಸುವುದಾಗಿ ಖಂಡಿತಭರವಸೆಯಿತ್ತರು. ಧನ್ಯವಾದ ಸಮರ್ಪಣೆಯಾದ ಬಳಿಕ ಸಭಾ ತ್ಯವಾಯಿತು.

ಆಲಿಪೂರುಸುಬೋಧಿನಿ ಎಲಿಮೆಂಟರಿ ಶಾಲೆಯಲ್ಲಿ ತಾ. 31ರಲ್ಲು ಶ್ರೀ. ಕೆ. ಸಂಜೀವ ಭಟ್, M A L. T.ರವರ ಅಧ್ಯಕ್ಷತೆಯಲ್ಲಿ ಸುವರ್ಣೋತ್ಸವಪೂರ್ಣ ನೂತನ ಕಟ್ಟಿಡದ ಪ್ರವೇಶೋತ್ಸವವೂ ಜರಗುವುದು.

ತಿವಪುರ–ತಾ. 16-12-45ರಲ್ಲಿ ಇಲ್ಲಿಯ ಬೋ. ಎ. ಶಾಲೆಯಲ್ಲಿ ಗ್ರಾಮಸ್ವರಾಜ್ಯ ಸಭೆಯು ಶ್ರೀ.ಎಂ. ಪಾದಿ ರಾಜ ಕಲ್ಲುರಾಯ ಅಧ್ಯಕ್ಷತೆಯಲ್ಲಿ ಜರಗಿ ಶಾಲಾ ಕಮಿಟಿಯು ರಚನೆ ಮಕ್ಕಳ ವಿವಿಧ ವಿನೋದಾವಳಿ ರಾಮಾಯಣ ನಾಟಕ, ಸಭಿಕರ ಹಿತೋಕ್ತಿಗಳಾಪವು.

ಸುಬ್ರಹ್ಮಣ್ಯ–ಶ್ರೀಮಾನ್ ಬೆಳ್ಳಿ ಅನಂತರಾವು ಉಪಾಧ್ಯಾಯರ ಸೇವಾನಿವೃತ್ತಿ ಕಳೇರಿಗಳು ತಾ 13-12-45ರಲ್ಲಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವರಾಂದಲ್ಲಿಯೂ ತಾ. 16-12-45ರಲ್ಲು ಶ್ರೀ ಸುಬ್ರಹ್ಮಣ್ಯ ಮಠದಲ್ಲಿಯೂ ಉಭಯ ಶ್ರೀ ಶ್ರೀಪಾದಂಗಳವರ ನೇತೃತ್ವದಲ್ಲಿ ಸುಶ್ರಾವ್ಯವಾಗಿ ಜರಗಿದುವು.

ಹಾಲಾಡಿ–ಸ್ಥಳೀಯ ಎಚ್.ವಿ.ಯು. ನಾಟಕ ಸಂಘದವರು ಎಂದಿನಂತೆಈ ವರುಷವೂ ಇಲ್ಲಿಯ ಬೋರ್ಡುಎಲಿಮೆಂಟರಿ ಶಾಲೆಯ ಎದುರುಗಡೆಯ ಮೈದಾನದಲ್ಲಿ ನಾಟಕಗಳನ್ನು ಪ್ರದರ್ಶಿಸಲು ಪ್ರಾರಂಭಿಸಿದ್ದಾರೆ.

ಗಂಗೊಳ್ಳಿ–ಸರಸ್ವತಿ ವಿದ್ಯಾಲಯ ಹಾಯ್‌ಸ್ಕೂಲಿನ ಕಟ್ಟಡದ ಶಂಕು ಸ್ಥಾಪನೆಯ ಸಮಾರಂಭವು ತಾ 12-12-45ರಲ್ಲಿ ಜರಗಿತು. ಶಾಲೆಗೆ ದೊರಕಿಪ ಊರಿನ ನಡು ಇರುವ ಸ್ಥಳದ ಮೇಲೆ ದೊಡ್ಡ ಸಭೆ ಸೇರಿದ್ದಿತು. ಶ್ರೀ. ಎಚ್. ಲಕ್ಷ್ಮೀನಾರಾಯಣ ಕಾಮತರವರು ಶಾಲಾ ಸ್ಥಾಪನೆಯ ಕೆಲಸವನ್ನು ನೆರವೇರಿಸಿದರು. ಶಾಲಾ ಮೆನೆಜರರಾದ ಶ್ರೀ. ಜಿ. ಸುರೇಂದ್ರನಾಥ ನಾಯಕರವರು ನರದಿಯನ್ನು ನಿಜ ತರುನಾಯ ಡಾಕ್ಟರ ಶ್ರೀಕಂರ ಯ್ಯನವರೂ ನೇನ ಮೂರ್ತಿ ಕುಂದಾರಪುರ ಲಿಪ್ಪಳಿಟ್ಟಯ ಎಂ., ಶ್ರೀ [illegible] ಪರ್ಸೋತ್ತಮ ಪೈಯನರೂ, ಕುಂದಾಪುರ ತಾಲ್ಲೂರರಿರವರೆ ಶ್ರೀ. ಬಿ. ಗಣೇಶರಾವರೂ ಶಾಲೆಗೆ ಶ್ರೇಯಸ್ಸನ್ನೂ ಅಭಿವೃದ್ಧಿಯನ್ನೂ ಬಯಸಿ ಭಾಷಣಗಳನ್ನಿತ್ತರು. ಶಾಲಾ ಕೆರೆಸ್ಪೋಂಡೆಂಟರಾದ ಶ್ರೀ ಬೈಲೂರು ರಾಮರಾಯರು ಸುಮಾರು ಆರು ಎಕ್ರೆ ಸ್ಥಳವನ್ನು ಕೊಟ್ಟ ಶ್ರೀಗಳಾದ ಸಶ್ರೀ ಪಾಸುದೇವ ರಂಗಪ್ಪ ನಾಯಕರನ್ನೂ ಹಲಸನಾಡ ಸದಾನಿವಯ್ಯನವರನ್ನೂ, ಮತ್ತು ಗುಜ್ಜಾಡಿ ಜಾಲಕೃಷ್ಣ ನಾಯಕರನ್ನೂ ಮಾಡಿದ ಉಪಕಾರವನ್ನು ಸ್ಮರಿಸಿ ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಮದ್ಯಾಸು ಅಂಚೆವಾಹಕರ ಮತ್ತು ಕೆಳ ತರಗತಿಯ ಉದ್ಯೋಗಿಗಳ ಸಂಘ–ಇದರ ಒಂದು ಶಾಖೆಯು ಶ್ರೀ. ಕೈತಾನ್, ಎಲ್.ಟೋಬೊ, ಬಿ.ಎ.ಬಿ.ಎಲ್. ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಅಂಚೆವಾಹಕರ ಕಡೆಯಿಂದ, ಸಿ. ಇಸುಕ್ ಖಾನ್ ಸಾಹೇಬರು,ಆತಿಥಿಗಳನ್ನು ಸ್ವಾಗತಿಸಿದರು. ಶ್ರೀ. ಮಾಕಟ್ರಾವ್. ಬಾಗ್ಲೊಡ್ಡಿ ಸಿಂಟಾಯರ್ಡ್ ಸುಪರಿಂಟೆಂಡೆಂಟ್-ಇನ್-ಟೆಲಿಗ್ರಾಫ್ಸ್, ಎಸ್ ಮುಕುಂದ ರಾವ್, ಎಮ್.ಎ. ಎಲ್.ಟಿ. ಪಿ. ಕೆ ತೋಮಸ್, ಕಾರ್ಯದರ್ಶಿ ಅಂಚೆನಾಹಕರ ಸಂಘ ಕಲ್ಲಿಕೋಟೆ, ಇವರ ಭಾಷಣವಾಯಿತು. ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಕೈತಾನ್ ಎಲ್. ಟೋಬೊ ಅಧ್ಯಕ್ಷೆ, ಜಿ. ಸೋನಿಯ್ಯ, ಕಾರ್ಯದರ್ಶಿ, ಪೆನಿಯಲ್ ಜ್ಯಾಸ್- ಮತ್ತು ಕೆ. ಆಮ್ಮುತ ಉಪಕಾರ್ಯದರ್ಶಿಗಳು. ಪೋಟ್ಮಾಸ್ಟೇರ, ಖಜಾನ್ದಿ, ಅಲ್ಲದೆ, ಸಲಹಾ ಸಮಿತಿಗೆ ಎ. ಬಾಲು, ಎಸ್.ಡಿ. ಸೋಜ ಜೋನ್ ಜಾಸ್, ಮಿಚಾರ್ ಕೊರಗ ಸೆಟ್ಟಿ, ಪಿ. ಎಚ್. ಮಹಾಲಿಂಗ, ಇವರನ್ನು ಚುನಾಯಿಸಲ್ಪಟ್ಟರು. ಜಿಲ್ಲೆಯ ಎಲ್ಲಾ ಕಚೇರಿಗಳಿವೆಲ್ಲಾ, ಇಲಾಖೆಯ ಬಂಧುಗಳು ಆಗಮಿಸಿದ್ದರು. ಶ್ರೀ. ಕೆ. ಕೃಷ್ಣರಾಯರು ಸಂ [illegible] ರವಾಗಿ ಧನ್ಯವಾದಗಳನ್ನು ಅರ್ಪಿಸಿದರು ಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ, ಧಾರವಾಡ–ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ [illegible] ಸದಸ್ಯರಾಗಿ ಆರಿಸಲ್ಪಟ್ಟ ಪರ್ಸೋತ್ತಮ ಸೈಯನರೂ, ಕುಂದಾಪುರ ತಾಲ್ಲೂರರಿರವರೆ ಶ್ರೀ. ಬಿ. ಗಣೇಶರಾವರೂ ಶಾಲೆಗೆ ಶ್ರೇಯಸ್ಸನ್ನೂ ಅಭಿವೃದ್ಧಿಯನ್ನೂ ಬಯಸಿ ಭಾಷಣಗಳನ್ನಿತ್ತರು. ಶಾಲಾ ಕೆರೆಸ್ಪೋಂಡೆಂಟರಾದ ಶ್ರೀ ಬೈಲೂರು ರಾಮರಾಯರು ಸುಮಾರು ಆರು ಎಕ್ರೆ ಸ್ಥಳವನ್ನು ಕೊಟ್ಟ ಶ್ರೀಗಳಾದ ಸಶ್ರೀ ಪಾಸುದೇವ ರಂಗಪ್ಪ ನಾಯಕರನ್ನೂ ಹಲಸನಾಡ ಸದಾನಿವಯ್ಯನವರನ್ನೂ, ಮತ್ತು ಗುಜ್ಜಾಡಿ ಜಾಲಕೃಷ್ಣ ನಾಯಕರನ್ನೂ ಮಾಡಿದ ಉಪಕಾರವನ್ನು ಸ್ಮರಿಸಿ ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಪ್ರಥಮ ಮಹಾ ಅಧಿವೇಶನವು ಇದೇ ತಿಂಗಳ ತಾ. 30, 31ರಲ್ಲು ಧಾರವಾಡದಲ್ಲಿ ಜರಗುವುದು. ಅಖಿಲ ಕರ್ನಾಟಕದ ವಿದ್ಯಾರ್ಥಿಗಳು ಬಹು ಸಂಖ್ಯೆಯಿಂದ ಅಧಿವೇಶನದಲ್ಲಿ ಭಾಗ ವಹಿಸಬೇಕಾಗಿ ಸ್ವಾಗತ ಸಮಿತಿಯ ಕಾರ್ಯದರ್ಶಿಯರು ವಿನಂತಿಯಿವೆ. ಹೆಚ್ಚಿನ ಮಾಹಿತಿಯನ್ನು ಸ್ವಾಗತ ಸಮಿತಿಯು ಕಚೇರಿಯಿಂದ ಪಡೆಯಬಹುದು.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾನಸ್ಥೆ ಶರೀರದ ಉಷ್ಣತೆ ಧಾತು ಮೂಶ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವು ಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ- ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿ ಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ್ಯ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಮಹಾಮದನಕಾಮೇಶ್ವರೀ ಲೇಹ

(ಬಂಗಾರ, ಪುಗುಸು, ಕಸ್ತೂರಿ ಮಿಶ್ರಿತವಾದದ್ದು.)

ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ ಮೈನ್ನುನೋವು, ವಾಯು ಉಪದ್ರವ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಉಂಟುಮಾಡುವುದು

ರಾತ್ರಿ 1ರ 10-0-0, ½ ರಾತ್ರಿ 5-4-0, ¼ ರಾತ್ರಿ 2-12-0.

ಎಲ್ಲಾ ಸಮಸ್ತ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ಸಮಸ್ತ ಔಷಧಗಳೂ ದೊರೆಯುತ್ತವೆ. ಕ್ಷಾಲೆಕಂಗ್ರಿ ಬರದಿರಿ ರೋಗಕ್ಕೆ ತಕ್ಕಹಾಗೆ ಔಷಧ ಉಪಾಸಬಹುದು. (1) ಉಡುಪಿ ಎಜೆಂಟರು:—ನವಭಾರತ ಬುಕ್ ಡಿಪೊ, (2) ಬೊಂಬಾಯಿ ಏಜೆಂಟರು:- ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್183, ಸುತಾರಿಬಜಾರ್ ರೋಡ್, ಜೆ. ಎ. ಪಿ ರೈಲ್ವೆ ನರ್ಕ್ ಶೇಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ತ. ಎ. ಪಿ. ಮಾಡುಂಗಾ.

ಪ್ರಕಟಣೆ

ದ ಕ. ಜಿಲ್ಲಾ ಶಿವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ.

(ರಿಜಿಸ್ಟರ್ಡ್)

ಈ ಸಂಘಕ್ಕೆ, ನಾವು ಮುಂಬಯಿಯಲ್ಲಿ ಧನ ಸಂಗ್ರಹ ಸೂಮಾವಾಗಿ ಶ್ರೀಗಳಾದ ಶಿವ ಸೂಧನ ಶ್ಯಾನುಭೋಗರು, ಪಾಡೂರು ಕೃಷ್ಣ ಸೆಟ್ಟಿ, ಮುದುಂಬು ಉಜ್ಜಣ್ಣ ಸೆಟ್ಟಿ, ಸೂಡ ವೀರಪ್ಪ ಸೆಟ್ಟಿ, ಮರ್ಸೆ ಸೇಸ ಸೆಟ್ಟಿ, ಸಾಂತೂರು ರಾಜು ಸೆಟ್ಟಿ, ಕಲ್ತುಟ್ಟ ನಿಕಲ ಸೆಟ್ಟಿ, ಸುಜಲಬೆಟ್ಟು ಬೀಡು ಬಾಬ ಸೆಟ್ಟಿ, ನ್ಯಾರ್ಮದ ಪುನೆ ಬಾಸು ಸೆಟ್ಟಿ, ಕುತ್ಕಾರು ಮದನ ಸೆಟ್ಟಿ, ಕುತ್ಕಾರು ನಂದ್ಕಪ್ಪ ಸೆಟ್ಟಿ, ಅತ್ತೆ ನರ್ಸು ಸೆಟ್ಟಿ, ಕೆ. ಪಿ. ಮುದ್ದಣ್ಣ ಸೆಟ್ಟಿ ಮೊದಲಾದ ಮಹಾನೀಯರು ನನಗೆ ತೆನ್ಮತನಮನಧನವನ್ನಿತ್ತು ಸಹಾಯಮಾಡಿ, ನಮ್ಮ ಕೆಲಸವನ್ನು ಬಳ್ಳಿಯ ರೀತಿಯಾಗಿ ಸೆರೆನೇರಿಸಿಮಜಕ್ಕೆ, ನಾವು ಸಂಘದ ಪರವಾಗಿ ನಮ್ಮ ಹೃತ್ಪೂರ್ವಕ ಅಭಿವಂದನೆಯನ್ನು ಅರ್ಪಿಸುತ್ತೇವೆ. ಇವರಲ್ಲದೆ ಇತರ ಎಲ್ಲಾ ಮಹನೀಯರಿಗೂ ನಮ್ಮ ಧನ್ಯವಾದಗಳು.

ಇದೇ ರೀತಿಯಲ್ಲಿ ಪ್ರೋತ್ಸಾಹವಿತ್ತು, ವಿದ್ಯಾಸೇವೆಯನ್ನು ನಮ್ಮ ಕೈಯಿಂದ ಮಾಡಿಸಬೇಕಾಗಿ ವಿನಂತಿ.

ಕೆ. ಮುದ್ದು ಸೆಟ್ಟಿ,
President.
K. Yellappa Shetty,
Treasurer
K. Nagappa Shetty,
Member
B. N. Vidyavardhka Sangha,
(Regd) SHIRVA.

CHAMPAE'S
Snow & Castrex
(SoleDistributers for Unata.)
Prop: K. G. NAYAK,
Santhekatte, UDIPI, S. K.

Consult us when you deal in Properties or Shares, insure life or belongings
We will guide you to your advantage

The General Investment & Commercial Corporation, Ltd.,
Sri Ramakrishna Buildings,
UDIPI, S. I.
SHARE BROKERS : : : : FIRE & LIFE INSURANCE AGENTS.

PROPRIETORS OF:
(1) Manipal Textiles, (2) The Kanara Medical & Surgical Institute, (3) Bharat Mills, (4) Chittaranjan Bhavan, (5) Shilpakala Litho Press.

ನವರತ್ನಕ್ಕಿಂತ ಅಮೂಲ್ಯವಾದ ರತ್ನಗಳು
ಇವುಗಳ ಬೆಲೆ ಎಂದೆಂದಿಗೂ ಕಡಿಮೆಯಾಗತಕ್ಕದ್ದಲ್ಲ.
ಕೆಲವೇ ಪ್ರತಿಗಳು ಉಳಿದಿರುತ್ತವೆ.

1.	ನೀತಿಧರ್ಮ	...	...	0	6 0
2.	ಸಾಮುದ್ರಿಕ ಶಾಸ್ತ್ರ	....	...	0	8 0
3.	ಬಾಲ ರಾಮಾಯಣ	....	....	0	5 0
4.	ಸುಕನಾ ಚರಿತ್ರೆ	....	....	0	5 0
5.	ಕೊಳಲು ಕೃಷ್ಣ	....	....	0	8 0
6.	ಗುರುಪೀಠಗಳ ಅವನತಿ	....	....	0	8 0
7.	ಧೈವತಮತ ಖಂಡನೆ	....	....	0	6 0
8.	ಧರ್ಮಸಂಕಟ	....	....	0	4 0
9.	ಪೂರೂರವ	....	....	0	8 0
10.	ನಿಶ್ಚಯ ಜ್ಞಾನ	...	...	0	8 0
11.	ವಿದ್ಯಾರಣ್ಯ ಕಾವ್ಯಂ	....	....	1	0 0
12.	ಚಂದ್ರಗುಪ್ತ ಚಕ್ರವರ್ತಿ	....	....	1	0 0
13.	ಸ್ವದೇಶಿ	....	....	0	4 0
14.	ಹರಿಜನ ಸೇವೆ	....	....	0	4 0
15.	Gauthama the Buddha	....		0	8 0
16.	ಪ್ರಾರ್ಥನೆ	...	....	0	2 0
17.	ಹಿಂದೀ ಪಹಲಿ ಪೋತಿ	....	....	0	2 0
18.	ಹರಿಶ್ಚಂದ್ರ ಆಖ್ಯಾನ(ಸುಪ್ರಸಿದ್ಧ ಕೊಂಕಣಿ ಭಾಷಾ ಪುರಾಣಗ್ರಂಥ)			0	4 0

ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ ಭವನ, ಉಡುಪಿ.

ತುಳು ಪುಸ್ತಕಗಳು

ತುಳು ಸಾಹಿತ್ಯ1	....	....	1	0	0
ಕೃಷ್ಣರಾಜ ಪರ್ಸಂಗೊ	....	....	1	0	0
ತುಳುವಾಲ ಬಲಿಯೇಂದ್ರ	....	....	0	4	0
ಅಳಿಯ ಸಂತಾನದ ಕಟ್ಟುದ ಗುಟ್ಟು		..	0	8	0
ಕಾಸಿಗೆ	....	....	0	8	0
ತುಳು ವ್ಯಾಕರಣ	....	....	1	0	0
ಮದ್‌ಮಾಳತ್ತ್ ಮದ್‌ಮಾಯೆ		....	0	4	0
ಜನಮರ್ಲ್	....	....	0	12	0
ತುಳು ಪದ್ಯಮಾಲಿಕೆ	....	....	0	2	0
ಬಂಗಾರ್ದಂಗಿದ ಕತೆ	....	....	0	2	0
ಮಿತ್ಯ ನಾರಾಯಣ ಕತೆ	....	....	0	1	0
ಸತೀ ಕಮಲೆ	....	....	0	12	0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಪಿ. ಎ. ಪೈ. ಬ್ರದರ್ಸ್, ಉಡುಪಿ.

ಇತಿಹಾಸ-ಚರಿತ್ರೆಗಳು-ಕರ್ತವ್ಯದಲ್ಲಿ ತೊಡಗಿದ ಮಾನವನಲ್ಲಿ ಕರ್ತವ್ಯವನ್ನು ಪ್ರೇರೇಪಿಸಲು ಸಹಾಯವಾಗುತ್ತವೆ.

ಪ್ರತಿಯೊಬ್ಬ ಹಿಂದೀಯನೂ ಅವನಿಗಾಗಿ ದುಡಿವ ಏಕಮಾತ್ರ ಸಂಸ್ಥೆಯಾದ ಕಾಂಗ್ರೆಸ್ಸಿನ ಸಂಪೂರ್ಣ ಇತಿಹಾಸವನ್ನು ಅವಶ್ಯವಾಗಿ ಓದಲೇಬೇಕು.

ರಾಷ್ಟ್ರಸಭೆ ನಮಗೇಕೆ? ಅದು ಹೊತ್ತಿರುವ ಹೊಣೆಯಾವುದು? ಅದು ಜೀವಂತವಾಗಿರಲು ಪಟ್ಟ ಕಷ್ಟಗಳೇನು?

ಇವೆಲ್ಲವನ್ನು ತಿಳಿಯುವುದು ಬರಿಯ ಪುಸ್ತಕವನ್ನೋದುವುದರಿಂದ ಮಾತ್ರ ಸಾಧ್ಯ.

ರಾಷ್ಟ್ರ ಸಭೆಯ ಇತಿಹಾಸ

500ಕ್ಕೂ ಮಿಕ್ಕಿದ ಪುಟಗಳು. 50ಕ್ಕೂ ಮಿಕ್ಕಿದ ಜೀವನ ಚರಿತ್ರೆಗಳು. 50ಕ್ಕೂ ಮಿಕ್ಕಿದ ಭಾವಚಿತ್ರಗಳು.

ತ್ವರೆ ಮಾಡಿರಿ ಕೆಲವೇ ಪ್ರತಿಗಳುಳಿದಿವೆ.

ಬೆಲೆ: **2—8—0.** ದಪ್ಪವಾದ ಹೊದಿಕೆಯುಳ್ಳದ್ದು:

ಹಳಿಗನ್ನಡದ ತಿಳಿನುಡಿಯ ರಸಗಬ್ಬ
ಹಳಿಗನ್ನಡದ ಸುಂದರ ಕಾವ್ಯ
ಪೊಸ್ಸ ಮಹಾಕವಿ ರಚಿತ

ಶಾಂತಿ ಪುರಾಣ

ಕೆಲವೇ ಪ್ರತಿಗಳು ಉಳಿದಿವೆ.
ಬೇಕಾದವರು
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ
ಚಿತ್ತರಂಜನ ಭವನ, ಉಡುಪಿ.

ಬೆಲೆ: **3—0—0**
(ದಪ್ಪವಾದ ಹೊದಿಕೆಯುಳ್ಳದ್ದು.)

ಮೇಲಿನ ಪುಸ್ತಕಗಳು ದೊರೆಯುವ ಸ್ಥಳ:—

ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
ಪಿ. ಎ. ಪೈ ಬ್ರದರ್ಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.
ಹಿಂದುಸ್ಥಾನ್ ಪಬ್ಲಿಷಿಂಗ್ ಕಂಪೆನಿ,
ಚಿತ್ತರಂಜನ್ ಭವನ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.